ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೈದೇಹಿ ಮತ್ತು ಎಚ್. ನಾಗವೇಣಿ ಕರಾವಳಿಯ ಇಬ್ಬರು ಲೇಖಕಿಯರ ಕೃತಿಗಳ ತೌಲನಿಕ ಅಧ್ಯಯನ

ಸಂಶೋಧಕರು :

ಆಶಾ ಎನ್.ಜಿ.

ಕೋಂ. ಜಿ.ಪಿ. ರಾಘವೇಂದ್ರ

'ಹೇರಂಭ ನಿಲಯ'

ವಿಜಯನಗರ, ೧ನೇ ತಿರುವು,

ಸಾಗರ-೫೭೭೪೦೧

ಮಾರ್ಗದರ್ಶಕರು :

ಡಾ. ಎಲ್.ಸಿ. ಸುಮಿತ್ರಾ

ಪ್ರಾಂಶುಪಾಲರು

ಕನ್ನಡ ಪ್ರಾಧ್ಯಾಪಕರು

ತುಂಗಾ ಮಹಾವಿದ್ಯಾಲಯ

ತೀರ್ಥಹಳ್ಳಿ

ಅಧ್ಯಯನ ಕೇಂದ್ರ

ಕುವೆಂಪು ಅಧ್ಯಯನ ಕೇಂದ್ರ

ಕುಪ್ಪಳಿ, ತೀರ್ಥಹಳ್ಳಿ ತಾ., ಶಿವಮೊಗ್ಗ ಜಿಲ್ಲೆ.

ಕನ್ನಡ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ - ೨೦೧೫

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೈದೇಹಿ ಮತ್ತು ಎಚ್. ನಾಗವೇಣಿ ಕರಾವಳಿಯ ಇಬ್ಬರು ಲೇಖಕಿಯರ ಕೃತಿಗಳ ತೌಲನಿಕ ಅಧ್ಯಯನ

ಸಂಶೋಧಕರು :

ಆಶಾ ಎನ್.ಜಿ.

ಕೋಂ. ಜಿ.ಪಿ. ರಾಘವೇಂದ್ರ
'ಹೇರಂಭ ನಿಲಯ'
ವಿಜಯನಗರ, ೧ನೇ ತಿರುವು,
ಸಾಗರ-೫೭೭೪೦೧

ಮಾರ್ಗದರ್ಶಕರು :

ಡಾ. ಎಲ್.ಸಿ. ಸುಮಿತ್ರಾ

ಪ್ರಾಂಶುಪಾಲರು
ಕನ್ನಡ ಪ್ರಾಧ್ಯಾಪಕರು
ತುಂಗಾ ಮಹಾವಿದ್ಯಾಲಯ
ತೀರ್ಥಹಳ್ಳಿ

ಅಧ್ಯಯನ ಕೇಂದ್ರ

ಕುವೆಂಪು ಅಧ್ಯಯನ ಕೇಂದ್ರ

ಕುಪ್ಪಳಿ, ತೀರ್ಥಹಳ್ಳಿ ತಾ., ಶಿವಮೊಗ್ಗ ಜಿಲ್ಲೆ.

ಕನ್ನಡ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ - ೨೦೧೫

ಪ್ರಮಾಣ ಪತ್ರ

ಆಶಾ ಎನ್.ಜಿ. ಅವರು – *ವೈದೇಹಿ ಮತ್ತು ಎಚ್. ನಾಗವೇಣಿ ಕರಾವಳಿಯ ಇಬ್ಬರು ಲೇಖಕಿಯರ ಕೃತಿಗಳ ತೌಲನಿಕ ಅಧ್ಯಯನ* ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಕನ್ನಡದಲ್ಲಿ ಪಿಎಚ್.ಡಿ. ಪದವಿಗಾಗಿ ಮಹಾಪ್ರಬಂಧ ರಚಿಸಿದ್ದು, ಈ ಪ್ರಬಂಧವು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಡಾ. ಎಲ್.ಸಿ. ಸುಮಿತ್ರಾ
ಪ್ರಾಂಶುಪಾಲರು
ತುಂಗಾ ಮಹಾವಿದ್ಯಾಲಯ
ತೀರ್ಥಹಳ್ಳಿ -577432

ಘೋಷಣಾ ಪತ್ರ

ಆಶಾ ಎನ್.ಜಿ. ಎಂಬುವಳಾದ ನಾನು ***ವೈದೇಹಿ ಮತ್ತು ಎಚ್. ನಾಗವೇಣಿ ಕರಾವಳಿಯ ಇಬ್ಬರು ಲೇಖಕಿಯರ ಕೃತಿಗಳ ತೌಲನಿಕ ಅಧ್ಯಯನ*** ಎಂಬ ವಿಷಯದ ಕುರಿತು **ಡಾ. ಎಲ್.ಸಿ. ಸುಮಿತ್ರಾ,** ಪ್ರಾಂಶುಪಾಲರು, ಕನ್ನಡ ಪ್ರಾಧ್ಯಾಪಕರು, ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ, ಇವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಮಹಾಪ್ರಬಂಧವನ್ನು ರಚಿಸಿರುತ್ತೇನೆ. ಈ ಪ್ರಬಂಧವು ಬೇರೆ ಯಾವುದೇ ಪದವಿಗಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ :

ದಿನಾಂಕ :

ವಿಷಯಾನುಕ್ರಮಣಿಕೆ

ಅಧ್ಯಾಯ – ೧

ತೌಲನಿಕ ಅಧ್ಯಯನದ ಉದ್ದೇಶ, ವ್ಯಾಪ್ತಿ, ಪ್ರಸ್ತುತತೆ ಮತ್ತು ಪ್ರಯೋಜನಗಳು

ಪೀಠಿಕೆ :

ಸಾಹಿತ್ಯ ಕೃತಿಗಳು ಒಂದು ಸಮಾಜದ ಪ್ರತಿಬಿಂಬವಾಗಿರುತ್ತದೆ. ಸಾಮಾಜಿಕ ಜೀವನದ ಒಳನೋಟಗಳನ್ನು ಅವು ಧ್ವನಿಸುತ್ತವೆ. ಲೇಖಕರು ಸಮಾಜದಿಂದ ತಾವು ಅನುಭವಿಸಿದ ಜೀವನಾನುಭವಗಳನ್ನು ಸೂಕ್ಷ್ಮವಾದ ವಿಚಾರಗಳ ತುಡಿತದಿಂದ ಅವರವರ ಕೃತಿಗಳಲ್ಲಿ ವಿವಿಧ ಆಶಯಗಳನ್ನು ವ್ಯಕ್ತಪಡಿಸಿರುತ್ತಾರೆ. ಸಮಕಾಲೀನವಾಗಿ ಅವು ಉಂಟುಮಾಡಿದ ಪರಿಣಾಮಕತೆಯು ಅಧ್ಯಯನಕ್ಕೆ ವಿಷಯ ವಸ್ತುವಾಗಿರುತ್ತದೆ. ಆಯಾ ಕಾಲದಲ್ಲಿ ಬದುಕಿಬಾಳಿದ ಲೇಖಕರು ಅಂದಿನ ಜನಜೀವನದ ಆಶೋತ್ತರಗಳನ್ನು ಕೇಂದ್ರವಾಗಿಟ್ಟು ಸಂವೇದನಾಶೀಲ ಸಾಹಿತ್ಯ ಸೃಷ್ಟಿಯನ್ನು ಮಾಡಿದ್ದರಿಂದ ಸಾಹಿತ್ಯವು ಸಮಾಜದ ಧ್ವನಿಯಾಗಿದೆ.

ಪ್ರಸ್ತುತ ಈ ಅಧ್ಯಯನದ ಕೇಂದ್ರವಾಗಿರುವ ವೈದೇಹಿ ಮತ್ತು ಎಚ್. ನಾಗವೇಣಿಯವರ ಸಾಹಿತ್ಯ ಕೃತಿಗಳ ತೌಲನಿಕ ಅಧ್ಯಯನವು ಇಂಥ ಅನೇಕ ಲೇಖಕರ ಸಾಹಿತ್ಯ ಕೃತಿಗಳ ಅಧ್ಯಯನದಿಂದ ಪ್ರೇರಿತವಾಗಿದೆ. ಕನ್ನಡ ಸಾಹಿತ್ಯದಲ್ಲಿ ಮಹಿಳೆಯರು ಬಹಳ ಹಿಂದಿನಿಂದಲೂ ತಾವು ಬದುಕಿಬಾಳಿದ ಕಾಲದ ಆಶಯವನ್ನು ತಮ್ಮ ನುಡಿ, ಹಾಡು, ಬರಹ ಮುಂತಾದ ಸ್ವರೂಪದಲ್ಲಿ ಅಭಿವ್ಯಕ್ತಿಸಿದ್ದಾರೆ. ಇಂತಹ ಲೇಖಕಿಯರು ಜೀವಿಸಿದ ಕಾಲ, ಪ್ರದೇಶ ಮತ್ತು ಪ್ರೇರಣೆಗಳು ಬದಲಾಗಿದ್ದರು ಸಾಮಾಜಿಕ ಆಶಯಗಳಾಗಿ ವ್ಯಕ್ತಗೊಂಡ ಕಾಳಜಿಗಳು ಅವರ ಅಭಿವ್ಯಕ್ತಿಯ ನೆಲೆಗಳಾಗಿದ್ದವು. ವೈಯಕ್ತಿಕ ಬದುಕಿನಿಂದ ಆರಂಭಿಸಿ ಕುಟುಂಬ, ಸಮಾಜ, ಸಮುದಾಯದೊಂದಿಗೆ ವ್ಯಕ್ತಿ ಗುರುತಿಸಿಕೊಳ್ಳುವ ಮತ್ತು ಆಯಾಕಾಲದ ಸಾಮಾಜಿಕ ಸಮಸ್ಯೆಗಳಿಗೆ, ಮೌಲ್ಯಗಳಿಗೆ, ಆಶೋತ್ತರಗಳಿಗೆ ತನ್ನಂತೆ ಇತರರೂ ಸ್ಪಂದಿಸುವ ಸ್ಪಂದನೆಯನ್ನು ಸಮಷ್ಟಿಯಾಗಿ ಗ್ರಹಿಸಿ ಕೃತಿಯ ಆಶಯಗಳಾಗಿ ಚಿತ್ರಿಸಿದ್ದನ್ನು ನಾವು ಕಾಣುತ್ತೇವೆ.

ಸೃಜನಶೀಲ ಪ್ರತಿಭೆಯುಳ್ಳ ಒಬ್ಬ ವ್ಯಕ್ತಿ ಇಂಥ ಸ್ಪಂದನೆಗಳಿಗೆ ಸ್ಪಂದಿಸುವಾಗ ಸಹಜವಾಗಿಯೇ ಪುರುಷ, ಮಹಿಳೆ, ಬಡವ, ಶ್ರೀಮಂತ ಇಂಥ ಪ್ರಭಾವಗಳ ನೆಲೆಯಲ್ಲಿಯೇ ತನ್ನ ಜೀವನವನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕಂಡುಕೊಳ್ಳುತ್ತಾನೆ. ಈ ಅನಿವಾರ್ಯ ಸಂದರ್ಭದಲ್ಲಿಯೂ ತತ್ಕಾಲೀನ ಸಮಾಜದ ಸ್ಪಂದನೆಗಳಿಗೆ ಪ್ರತಿಕ್ರಿಯಿಸುವ ತುಡಿತ ಮತ್ತು ಮಾನವೀಯ ನೆಲೆಯಲ್ಲಿ ಸಾರ್ವಕಾಲಿಕವಾಗಬಲ್ಲ ಮೌಲ್ಯಗಳನ್ನು ಪ್ರತಿನಿಧಿಸುವ ಪ್ರಯತ್ನದಲ್ಲಿ ಲೇಖಕಿಯರ ಸಾಮಾಜಿಕ ಸಂವೇದನೆಗಳು ಸಮಕಾಲೀನಗೊಳ್ಳುತ್ತವೆ.

ಈ ನೆಲೆಯಲ್ಲಿ ಕರಾವಳಿ ಪ್ರದೇಶದ ಈ ಇರ್ವರು ಲೇಖಕಿಯರು ತಮ್ಮ ಸಾಹಿತ್ಯ ಕೃತಿಗಳಲ್ಲಿ ಸಾಮಾಜಿಕ ಸಂವೇದನೆ ಮತ್ತು ಆಶೋತ್ತರಗಳ ಕುರಿತು ಚಿತ್ರಿಸಿದ ಚಿತ್ರಣಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಅವರ ಕೃತಿಗಳಲ್ಲಿನ ಸಾಮ್ಯತೆ ಮತ್ತು ವೈಶಿಷ್ಟ್ಯತೆಯನ್ನು ಸಮಕಾಲೀನ ಸಂದರ್ಭದಲ್ಲಿ ವಿವೇಚಿಸುವುದು ಅಗತ್ಯವೆನಿಸುತ್ತದೆ.

ಆದ್ದರಿಂದ ಕರಾವಳಿಯ ಪ್ರಾದೇಶಿಕ ನೆಲೆಯಿಂದ ಸಾಹಿತ್ಯ ಕೃಷಿಯನ್ನು ನಡೆಸಿದ ವೈದೇಹಿ ಮತ್ತು ನಾಗವೇಣಿಯವರ ಸಾಹಿತ್ಯ ಕೃತಿಗಳ ತೌಲನಿಕ ಅಧ್ಯಯನವು ಪ್ರಾದೇಶಿಕ ನೆಲೆ ಮತ್ತು ಸಾಮಾಜಿಕತೆಗೆ ಸ್ಪಂದಿಸುವ ವೈಚಾರಿಕತೆಯನ್ನು ಕೃತಿಯಲ್ಲಿ ಅಳವಡಿಸಿಕೊಳ್ಳುವ ಸಾಧ್ಯತೆಯನ್ನು ಮೌಲ್ಯೀಕರಿಸುವ ಉದ್ದೇಶದಿಂದಲೇ ಈ ಅಧ್ಯಯನವು ತೊಡಗಿಕೊಂಡಿದೆ.

೧.೧. ತೌಲನಿಕ ಅಧ್ಯಯನದ ಉದ್ದೇಶ, ವ್ಯಾಪ್ತಿ, ಪ್ರಸ್ತುತತೆ ಮತ್ತು ಪ್ರಯೋಜನಗಳು

ತೌಲನಿಕ ಸಾಹಿತ್ಯದ ಪರಿಕಲ್ಪನೆಗಳು ಭಾರತೀಯ ಸಂದರ್ಭದಲ್ಲಿ ಬೆಳೆದು ಬಂದ ಬಗೆ ವಿಶಿಷ್ಟವಾಗಿದೆ. ಭಾರತೀಯ ಕಾವ್ಯ ಮೀಮಾಂಸೆಯ ತಿಳಿವಿನ ಜತೆಗೆ, ನಮ್ಮ ಇಂದಿನ ವಿಮರ್ಶೆಯ ನಿಲುವುಗಳನ್ನು ರೂಪಿಸಿರುವ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಒಂದು ಮುಖ್ಯ ಭಾಗವಾಗಿರುವ ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಪರಿಜ್ಞಾನವೂ ಅತ್ಯಂತ ಅಗತ್ಯವಾಗಿದೆ. ಜತೆಗೆ ಈ ಎರಡೂ ಕಾವ್ಯ ಮೀಮಾಂಸೆಯ ಗಾಢವಾದ ಅಧ್ಯಯನದಿಂದ ನಿಷ್ಪನ್ನಗೊಳ್ಳುವಂಥ ತೌಲನಿಕ ದೃಷ್ಟಿಕೋನವೊಂದು ಇನ್ನೂ ಮುಖ್ಯವಾದದ್ದು. ಕನ್ನಡದ ಪರಿಸರದಲ್ಲಿ ಸಾಹಿತ್ಯದ ತೌಲನಿಕ ಅಧ್ಯಯನದ ಪ್ರಯತ್ನಗಳು ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರಿಂದ ಪ್ರಾರಂಭವಾದರೂ ವಿಶ್ವವಿದ್ಯಾಲಯದ ಕನ್ನಡ ಪಠ್ಯಕ್ರಮದಲ್ಲಿ ಅದಕ್ಕೆ ಪ್ರವೇಶ ಹಾಗೂ ಸ್ಥಾನಮಾನ ದೊರೆತದ್ದು

ಕುವೆಂಪು ಅವರಿಂದ. ಅದರಲ್ಲಿಯೂ ಕಾವ್ಯ ಮೀಮಾಂಸೆಯ ತೌಲನಿಕ ಅಧ್ಯಯನ ಪ್ರಾರಂಭವಾದದ್ದು ಕುವೆಂಪು ಅವರಿಂದಲೇ. ಅವರು ತಮ್ಮ ಬೋಧನೆ ಹಾಗೂ ಬರಹಗಳ ಮೂಲಕ ('ತಪೋನಂದನ', 'ದ್ರೌಪದಿಯ ಶ್ರೀಮುಡಿ', ಇದ್ದಕ್ಕೂ ಮಿಗಿಲಾಗಿ 'ರಸೋವೈಸಃ' ಕೃತಿಯ ಮೂಲಕ) ತೌಲನಿಕ ಕಾವ್ಯ ಮೀಮಾಂಸೆಯ ಹೊಸ ಚಿಂತನ ಕ್ರಮಗಳನ್ನು ಹಾಕಿಕೊಟ್ಟರು. 'ಭಾರತೀಯ ಕಾವ್ಯಮೀಮಾಂಸೆ'ಯನ್ನು ಸಂಸ್ಕೃತ ಲಾಕ್ಷಣಿಕರ ಚಿಂತನೆಯ ಹಿನ್ನೆಲೆಯಲ್ಲಿ ಅತ್ಯಂತ ಸಮರ್ಥವಾಗಿ ನಿರೂಪಿಸಿರುವ ತೀ.ನಂ. ಶ್ರೀಕಂಠಯ್ಯನವರು ಭಾರತೀಯ ಚಿಂತನೆಗಳನ್ನು ತೌಲನಿಕವಾಗಿ ನೋಡುವ ಬಗೆಗೆ ಅಲ್ಲಲ್ಲಿ ಸೂಚನೆಗಳನ್ನು ಕೊಟ್ಟಿದ್ದಾರೆ. ಕೆ. ಕೃಷ್ಣಮೂರ್ತಿಯವರು ಸಂಸ್ಕೃತದ ಮುಖ್ಯ ಲಾಕ್ಷಣಿಕರ ಕೃತಿಗಳನ್ನು ಅತ್ಯಂತ ಶಾಸ್ತ್ರೀಯವಾಗಿ ಕನ್ನಡಕ್ಕೆ ಅನುವಾದಿಸಿ ವಿದ್ವತ್‌ಪೂರ್ಣವಾದ ಮುನ್ನುಡಿ, ಪಠ್ಯಗಳನ್ನು ಅರ್ಥೈಸಲು ಅಗತ್ಯವಿದ್ದ ಟಿಪ್ಪಣಿಗಳನ್ನು ಒದಗಿಸಿದ್ದಾರೆ. ವಿ.ಎಂ. ಇನಾಂದಾರ್ ಅವರು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಇತಿಹಾಸವನ್ನು ಸಾರವತ್ತಾಗಿ ಪರಿಚಯಿಸಿ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಮುಂದುವರೆದಿರುವ ಜಿ.ಎಸ್. ಶಿವರುದ್ರಪ್ಪ ಅವರು ತೌಲನಿಕ ಕಾವ್ಯ ಮೀಮಾಂಸೆಯ ಬಗೆಗೆ ಕೆಲಸ ಮಾಡಿ ಕಾವ್ಯತತ್ತ್ವ ಹಾಗೂ ಪರಿಕಲ್ಪನೆ ಮತ್ತಿತರ ಸಂಗತಿಗಳನ್ನು ತೌಲನಿಕವಾಗಿ ವಿವೇಚಿಸಿ ಸುಸಮರ್ಥವಾಗಿ ನಿರೂಪಿಸಿ, ಪೂರ್ವ ಹಾಗೂ ಪಶ್ಚಿಮದ ಚಿಂತನೆಗಳಲ್ಲಿರುವ ಸಾಮ್ಯ ಹಾಗೂ ವೈಶಿಷ್ಟ್ಯಗಳನ್ನು ಗುರುತಿಸುತ್ತ, ಈ ತೌಲನಿಕ ವಿಧಾನದಿಂದ ಹೊರಡುವ ಕೆಲವು ಹೊಸ ಅಥವಾ ಬೇರೆಯೇ ಆದ ವಿಚಾರಗಳನ್ನು ಪ್ರಸ್ತಾಪಿಸುವ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ.

ಕೆಲವು ಕೃತಿಗಳ ಕೆಲಅಂಶಗಳನ್ನೆತ್ತಿಕೊಂಡು ಅಥವಾ ಒಂದೊಂದು ಅಧ್ಯಾಯವನ್ನೆತ್ತಿಕೊಂಡು ಅವುಗಳನ್ನು ಅಧ್ಯಯನಕ್ಕೆ ಒಳಗುಮಾಡಿ ಅಥವಾ ಕೃತಿಗಳ ಸ್ವರೂಪ, ಬಂಧ, ಕಥಾವಿಧಾನ, ಜೀವನದರ್ಶನ, ವರ್ಣನೆ, ಮಹೋಪಮೆ, ಛಂದಸ್ಸು, ಪ್ರತಿಮಾವಿಧಾನ, ಪ್ರಕಾರ ಹೀಗೆ ಹಲಅಂಶಗಳನ್ನೆತ್ತಿಕೊಂಡು ತೌಲನಿಕ ಅಧ್ಯಯನ ನಡೆಸಬಹುದು. ಭಿನ್ನ ಕಾಲಘಟ್ಟದಲ್ಲಿ ರಚಿತರಾಗಿವಾಗಿರಬಹುದಾದ ಇಂಥ ಕೃತಿಗಳ ಅಧ್ಯಯನ ಮಾಡುವುದರಿಂದ ವಿಮರ್ಶಾ ಕ್ಷೇತ್ರಕ್ಕೆ ಮೌಲಿಕವಾದ ಸತ್ವದೊರೆಯುತ್ತದೆ ಮತ್ತು ಸಾಹಿತ್ಯಿಕ ಜಿಜ್ಞಾಸೆಗಳು ಇನ್ನಷ್ಟು ಕಸುವು ಪಡೆಯುತ್ತವೆ.

ಬೇರೆ ಬೇರೆ ಕೃತಿಗಳಲ್ಲಿರುವ ಆಶಯ, ರೀತಿ, ಆಕೃತಿ, ಛಂದಸ್ಸು, ವಾಕ್ಯ ರಚನೆ, ಸಾಹಿತ್ಯ ರಚನೆಯ ಸಂದರ್ಭ (ಭಕ್ತಿ ಸಾಹಿತ್ಯ, ಸಮರ ಸಾಹಿತ್ಯ, ನವೋದಯ – ನವ್ಯೋತ್ತರ ಸಾಹಿತ್ಯ, ಚಂಪೂ, ವಚನ, ರಗಳೆ, ಭಾವಗೀತೆಗಳ ರಚನೆ) ಒಬ್ಬ ಕವಿಯ ಮೇಲೆ ಅನ್ಯ ಭಾಷಾ ಕವಿಗಳ ಪ್ರಭಾವ (ಕುವೆಂಪು ಮೇಲೆ ವ್ಯಾಸ, ಪಂಪ, ರನ್ನ, ನಾಗಚಂದ್ರ, ಹೋಮರ್, ಡಾಂಟೆ, ಮಿಲ್ಟನ್,

ನಾರಾಯಣಪ್ಪ, ತುಳಸೀದಾಸ, ಶೆಲ್ಲಿ ಮತ್ತು ವರ್ಡ್ಸ್‌ವರ್ತ್, ರಿಚರ್ಡ್ಸ್, ಟಾಲ್‌ಸ್ಟಾಯ್, ಶೇಕ್ಸ್‌ಪಿಯರ್ ಮುಂತಾದವರ ಪ್ರಭಾವ) ಬಗೆಬಗೆಯ ಪಂಥಗಳು – ಹೀಗೆ ಹತ್ತು ಹಲವು ಪ್ರಭಾವ ಮತ್ತು ಪರಿಣಾಮವನ್ನು ಅನುಲಕ್ಷಿಸಿ ತೌಲನಿಕ ಅಧ್ಯಯನ ನಡೆಸಬಹುದು. ವಿಮರ್ಶೆಯ ಸಾಧ್ಯತೆಗಳನ್ನು ಹೆಚ್ಚಿಸುವ ಈ ವಿಧಾನದಿಂದ ಜಗತ್ತಿನ ಶ್ರೇಷ್ಟ ಸಾಹಿತ್ಯ ಮತ್ತು ಕವಿಗಳ ಪರಿಚಯವಾಗುತ್ತದೆ.

ಭಾರತೀಯ ಸಾಹಿತ್ಯಾಧ್ಯಯನದ ನೆಲೆ–ಬೆಲೆಗಳ ಲೆಕ್ಕಚಾರದಲ್ಲಿ ವಿಭಿನ್ನ ಮತ್ತು ವಿಶಿಷ್ಟ ಬಗೆಯ ಚಿಂತನೆಯಲ್ಲಿ ತೌಲನಿಕತೆಯು ಒಂದು. ಒಂದು ಕಡೆ ಸಾಂಪ್ರದಾಯಿಕ ಕ್ರಮಗಳನ್ನು ಮತ್ತೊಂದು ಕಡೆ ವೈಜ್ಞಾನಿಕ ಚಿಂತನಾ ಕ್ರಮಗಳನ್ನು ಒಟ್ಟಿಗೆ ಇಟ್ಟುಕೊಂಡು ಈ ಅಧ್ಯಯನ ನಡೆಯುತ್ತದೆ. ಭಾರತೀಯ ಸಂದರ್ಭದಲ್ಲಿ ವಿಶ್ಲೇಷಣಾತ್ಮಕ ಹಾಗೂ ಚಾರಿತ್ರಿಕ ಅಧ್ಯಯನಗಳು ಸಾಕಷ್ಟು ನಡೆದಿವೆ. ಆದರೆ ಕೃತಿ ಮತ್ತು ಕೃತಿಕಾರರ ಪರಸ್ಪರ ಚಿಂತನೆಯ ಸಾಮರಸ್ಯ ಮತ್ತು ಕೊಡುಕೊಳ್ಳುವಿಕೆಗಳ ಬಗೆಗೆ ವ್ಯಾಪಕವಾದ ಅಧ್ಯಯನಗಳಾಗಬೇಕಾದುದು ಸಮಕಾಲೀನ ತುರ್ತು. ಇಂಥ ಅಧ್ಯಯನಗಳಾಚೆಗಿನ ವೈರುಧ್ಯದ ಚಿಂತನೆಗಳನ್ನು ಪುನರ್‌ರಚಿಸಿಕೊಂಡು ವರ್ತಮಾನದ ಸಂದರ್ಭದಲ್ಲಿಟ್ಟು ನೋಡಿದಾಗ ಮಾತ್ರ ಅಧ್ಯಯನದ ನಿಜದ ನೆಲೆಯನ್ನು ಕಾಣಲು ಸಾಧ್ಯವಾದೀತು, ಈ ದೃಷ್ಟಿಯಿಂದ ವೈದೇಹಿ ಮತ್ತು ನಾಗವೇಣಿಯವರ ಕೃತಿಗಳನ್ನು ಹೋಲಿಸಿ ಅವುಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆಗಳನ್ನು ಗುರುತಿಸಿ ಅವರುಗಳ ಸಾಹಿತ್ಯದ ಜೊತೆಗಿನ ಇತರೆ ಅನಂತ ಸಾಧ್ಯತೆಗಳನ್ನು ಗುರುತಿಸುವುದು ನನ್ನ ಈ ಅಧ್ಯಯನದ ಉದ್ದೇಶವಾಗಿದೆ. ಇಬ್ಬರ ಕೃತಿಗಳನ್ನು ತುಲನೆ ಮತ್ತು ವಿಶ್ಲೇಷಣೆಗೆ ಒಳಪಡಿಸುವುದರಿಂದ ಕೃತಿಗಳ ವಿವರಣೆಯನ್ನು ಹೆಚ್ಚು ನಿಖರಗೊಳಿಸಬಹುದು ಮತ್ತು ಇಂಥ ಅಧ್ಯಯನದಿಂದ ಕೃತಿಯ ಸತ್ವವನ್ನು ಹೆಚ್ಚು ಹೆಚ್ಚಾಗಿ ಗ್ರಹಿಸಬಹುದಾಗಿದೆ. ಒಂದೊಂದು ಕಾರಣಕ್ಕೆ ಒಂದೊಂದು ಅರ್ಥದಲ್ಲಿ ಈ ಕೃತಿಗಳು ವಿಶಿಷ್ಟವಾದವುಗಳೇ ಆದರೂ ಯಾವುದು ಯಾವುದಕ್ಕಿಂತ ಹೆಚ್ಚು, ಯಾವಕಾರಣದಿಂದ ಹೆಚ್ಚು ಅಥವಾ ಮಹತ್ವದ್ದು ಎಂದು ನಿರ್ಣಯಕ್ಕೆ ಬರಲು ಅಧ್ಯಯನದ ಪ್ರಕ್ರಿಯೆ ಸಹಾಯಕವಾಗಬಲ್ಲದು.

ಸಮಕಾಲೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಈಗ ಬರೆಯುತ್ತಿರುವವರಲ್ಲಿ ವೈದೇಹಿ ಮತ್ತು ಎಚ್. ನಾಗವೇಣಿ ಪ್ರಮುಖರು. ಕರಾವಳಿ ಹಿನ್ನೆಲೆಯಿಂದ ಬಂದಂತಹ ಈ ಇಬ್ಬರು ಲೇಖಕಿಯರು ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ತಮ್ಮ ಬರೆವಣಿಗೆಯ ಅನನ್ಯತೆಯಿಂದ ಗಮನಾರ್ಹ ಸ್ಥಾನ ಗಳಿಸಿದ್ದಾರೆ. ಒಂದೇ "ಕಾಲ ಮತ್ತು ದೇಶ" ಇವರ ಬರೆವಣಿಗೆಯ ಹಿನ್ನೆಲೆಯಲ್ಲಿದ್ದರು ಇಬ್ಬರು ಬದುಕನ್ನು ಪರಿಭಾವಿಸುವ ಕ್ರಮ ಮತ್ತು ಬರೆವಣಿಗೆಯಲ್ಲಿ ಅದನ್ನು

ಅಭಿವ್ಯಕ್ತಿಸುವ ರೀತಿ ಭಿನ್ನವಾದುದು. ಈ ದೃಷ್ಟಿಯಿಂದ ಈ ಇಬ್ಬರು ಲೇಖಕಿಯರ ಬರಹಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸುವುದರಿಂದ ಇವರ ಕೃತಿಗಳ ಮತ್ತು ಸೃಜನಶೀಲತೆಯ ಕುರಿತು ಹೊಸ ಹೊಳಹುಗಳು ಮತ್ತು ಒಳ ನೋಟಗಳು ದೊರೆಯಬಹುದು.

ಈ ಅಧ್ಯಯನದಲ್ಲಿ ಈ ಇಬ್ಬರು ಲೇಖಕಿಯರ ಕೃತಿಗಳನ್ನು ಕೇಂದ್ರದಲ್ಲಿರಿಸಿಕೊಂಡು ಕೃತಿಯೊಂದರ ಕಾಲ-ದೇಶ-ಪರಿಸರಗಳ ಹಿನ್ನೆಲೆಯಲ್ಲಿ ಕೃತಿಯ ಕಾರಣ - ಪ್ರೇರಣೆ - ಪ್ರಭಾವಗಳನ್ನು ಹಾಗೂ ಸಾಮ್ಯ, ವೈಶಿಷ್ಟ್ಯಗಳನ್ನು ವಿವೇಚಿಸುವ ಪ್ರಯತ್ನ ಇಲ್ಲಿ ಮುಖ್ಯವಾಗುತ್ತದೆ. ಸಮಾನವಾದ ವಿಶಿಷ್ಟವಾದ ಪ್ರಾದೇಶಿಕ ಮತ್ತು ಪ್ರಾಕೃತಿಕ ಪರಿಸರದಲ್ಲಿ ಹುಟ್ಟಿ ತಮಗಾದ ಪ್ರಜ್ಞಾರೂಪದ ಅನುಭವಗಳನ್ನ, ಲೋಕಾನುಭವಗಳನ್ನ ವ್ಯವಸ್ಥೆಗೊಳಿಸುವ ಒಂದು ವಿಶೇಷ ಸಾಮರ್ಥ್ಯ ಈ ಇಬ್ಬರೂ ಲೇಖಕಿಯರಲ್ಲಿ ಇರುವ ಕಾರಣ ಸಾಹಿತ್ಯ ಲೋಕದಲ್ಲಿ ಇವರಿಗೆ ಬೇರೊಂದು ಅಸ್ತಿತ್ವವೇ ಪ್ರಾಪ್ತವಾಗಿದೆ.

ಈ ಇಬ್ಬರು ಲೇಖಕಿಯರು ತಮ್ಮ ಕೃತಿಗಳಿಗೆ ಆಯ್ದುಕೊಳ್ಳುವ ವಸ್ತು ಕಥೆಗಳಿಗೆ ಪೂರಕವಾಗಿದ್ದು, ಸಾಮಾಜಿಕ ಕಾಳಜಿಯುಳ್ಳವುಗಳಾಗಿವೆ. ಮುಖ್ಯವಾಗಿ ಇಲ್ಲಿ ಸ್ತ್ರೀಪರವಾದ ಅಭಿವ್ಯಕ್ತಿ ಇರುವುದನ್ನ ಗಮನಿಸಬಹುದಾಗಿದೆ. ವಸ್ತುವೊಂದನ್ನು ಗಮನಿಸುವುದು ಎಂದರೆ ಅದು ಅಲ್ಲಿದೆ ಎಂಬುದನ್ನು ಮಾತ್ರ ಗುರುತಿಸುವ ಕ್ರಿಯೆಯಲ್ಲ. ಅದೊಂದು ಸೃಜನಾತ್ಮಕ ಕ್ರಿಯೆ. ಕೃತಿಯೊಂದರ ಸಂದರ್ಭದಲ್ಲಿ ಅದೇ ವಸ್ತುವನ್ನು ಹೊಸದೊಂದು ರೀತಿಯಲ್ಲಿ ಅಸ್ತಿತ್ವಕ್ಕೆ ತಂದುಕೊಂಡು ಅದಕ್ಕೊಂದು ಹೊಸ ನಿಲುವನ್ನು ನೀಡುವ ಒಂದು ವಿಶೇಷ ಸಾಮರ್ಥ್ಯದಿಂದ ಇವರೀರ್ವರು ಹೊಸ ಅಭಿವ್ಯಕ್ತಿಯನ್ನೇ ಸಾಧಿಸಿದ್ದಾರೆ.

ಈ ಇಬ್ಬರು ಲೇಖಕಿಯರಿಗೆ ಕಡಲ ತೀರದ ಸಂಸ್ಕೃತಿಯ ಜೊತೆಗೆ ಸ್ವಾತಂತ್ರ್ಯ ಚಳುವಳಿ, ಗಾಂಧಿವಾದ, ಸಮಾಜ ಸುಧಾರಣೆ, ಸುಧಾರಣಾವಾದಿ ಚಳುವಳಿಗಳ ಪ್ರೇರಣೆ ಇರುವುದರಿಂದ ಇವರ ಕೃತಿಗಳಲ್ಲಿ ಧಾರ್ಮಿಕ ಮೂಢನಂಬಿಕೆಗಳ ಖಂಡನೆ, ಸಾಮಾಜಿಕ ಕಾಳಜಿ, ಸ್ತ್ರೀ ವಿಶಿಷ್ಟತೆಗಳ ಅನಾವರಣ, ಮಾನವೀಯ ಮೌಲ್ಯಗಳ ಪ್ರತಿಪಾದನೆ ಸಾಧ್ಯವಾಗಿದೆ. ಈ ದೃಷ್ಟಿಯಿಂದ ವೈದೇಹಿ ಮತ್ತು ಎಚ್. ನಾಗವೇಣಿ ಕರಾವಳಿಯ ಈ ಇಬ್ಬರು ಲೇಖಕಿಯರ ಕೃತಿಗಳ ತೌಲನಿಕ ಅಧ್ಯಯನ ಅಭ್ಯಾಸಯೋಗ್ಯ ವಿಚಾರವಾಗಿದೆ.

ಸಮಾನವಾದ ವಿಶಿಷ್ಟವಾದ ಪ್ರಾದೇಶಿಕ ಮತ್ತು ಪ್ರಾಕೃತಿಕ ಪರಿಸರದಲ್ಲಿ ಹುಟ್ಟಿದ ಇಬ್ಬರು ಲೇಖಕಿಯರು ತಮ್ಮ ಕೃತಿಗಳ ಮೂಲಕ ಅಭಿವ್ಯಕ್ತಿಗೊಂಡಿದ್ದು ಭಿನ್ನವಾಗಿ. ಸಮಕಾಲೀನ ಸಂದರ್ಭದಲ್ಲಿ ಪ್ರಸ್ತುತವೆನಿಸುವ ನಾಗವೇಣಿಯವರ ಗಾಂಧಿಬಂದ ಕಾದಂಬರಿ ವಾಸ್ತವವಾದಿ

ಕಾದಂಬರಿಯಾಗುವ ಮತ್ತು ಪ್ರಸ್ತುತದೊಂದಿಗೆ ಅನುಸಂದಾನಿಸುವ ಸಾಕಷ್ಟು ವಿವರಣೆಯನ್ನು ನೀಡಿದರೆ, ವೈದೇಹಿಯವರ ಅಸ್ಪೃಶ್ಯರು ಕಾದಂಬರಿ ಕೌಟುಂಬಿಕ ಚಿತ್ರಣಗಳನ್ನು ಕಟ್ಟಿಕೊಡುತ್ತದೆ. ಇವರ ಕೃತಿಗಳಲ್ಲಿ ವ್ಯಕ್ತವಾಗುವ ಜೀವನ ದರ್ಶನ ಸಮಗ್ರವಾಗಿ ಜೀವನಾನುಭವ ಹಾಗೂ ವೈವಿಧ್ಯತೆಗೆ ಕಾರಣವಾಗುತ್ತದೆ.

ಈ ಮೇಲಿನ ಸಂಗತಿಗಳನ್ನು ಪರಿಗಣಿಸಿದಾಗ ಇಬ್ಬರ ಕೃತಿಗಳ ತೌಲನಿಕತೆ ಒಂದು ಅಭ್ಯಾಸಯೋಗ್ಯ ವಿಷಯವಾಗುತ್ತದೆ. ಅಥವಾ ಒಂದೇ ಭಾಗದ ಇಬ್ಬರು ಲೇಖಕಿಯರ ಒಂದೇ ಭಾವನೆ ಹೇಗೆ ಭಿನ್ನ ಅಭಿವ್ಯಕ್ತಿ ಆಯಾಮವನ್ನು ಪಡೆದುಕೊಂಡಿದೆ ಎಂಬುದನ್ನು ತಿಳಿಯಬಹುದಾಗಿದೆ.

ತೌಲನಿಕ ಸಾಹಿತ್ಯವು ಸಮಗ್ರೀಕರಣ ಮತ್ತು ಸ್ಫೂರ್ತಿಯನ್ನು ಒತ್ತಿ ಹೇಳುತ್ತದೆಯಾದ್ದರಿಂದ ಈ ಇಬ್ಬರು ಲೇಖಕಿಯರ ಸಾಹಿತ್ಯ ರಚನೆಯ ನೆಲೆಗಳ ಬಗ್ಗೆ ಪ್ರಜ್ಞಾವಂತರಾಗಿರುವಂತೆ ಮಾಡುತ್ತದೆಯಲ್ಲದೆ ವಿಶ್ಲೇಷಣೆ, ಪಾತ್ರೀಕರಣ, ವ್ಯಾಖ್ಯಾನ, ನಿರೂಪಣಾ ಕ್ರಮ ಮತ್ತು ವಿವರಣೆಗಳ ಮೂಲಕ ಅದು ಮಾಡುವ ತೌಲನಿಕ ವಿವೇಚನೆ ನಿಜವಾದ ಅರ್ಥದಲ್ಲಿ ಐತಿಹಾಸಿಕ ಬೆಳವಣಿಗೆಯನ್ನು ಅಭ್ಯಾಸ ಮಾಡವುದಾಗಿದೆ. ಜೊತೆಗೆ ಈ ಕೃತಿಗಳ ಅಧ್ಯಯನಕ್ಕೆ ಅಗತ್ಯವಾಗಿ ಬೇಕಾದ ಇತಿಹಾಸ, ಸಿದ್ಧಾಂತ ಮತ್ತು ವಿಮರ್ಶೆಗಳನ್ನು ಈ ಅಧ್ಯಯನ ಒಳಗೊಂಡಿರುತ್ತದೆ.

ಅಧಿಕೃತ ಸಾಂಸ್ಕೃತಿಕ ಚಹರೆ, ಭಾಷಾ ಪ್ರಯೋಗಗಳಲ್ಲಿನ ವೈವಿಧ್ಯತೆ ಮತ್ತು ಆಯಾ ಕತೆಗೆ ಅನುಗುಣವಾದ ನಿರೂಪಣಾ ತಂತ್ರಗಳಿಂದಾಗಿ ವೈದೇಹಿ ಸ್ಥಳೀಯರಾಗುತ್ತಾರೆ. ಆಪ್ತವಾಗಿ ಸಂವಾದಿಸುತ್ತಲೇ ಜೀವನದ ಸಂಕೀರ್ಣ ಆಳಗಳನ್ನು ಸ್ಪರ್ಶಿಸುತ್ತಾರೆ. ವೈದೇಹಿಯವರ ಸಾಹಿತ್ಯ ಕೃತಿಗಳಲ್ಲಿ ಪಡೆದುಕೊಂಡ ಸೃಜನಶೀಲ ಪರಿವರ್ತನೆಗಳ ಪರಿಶೀಲನೆ ಅರ್ಥಪೂರ್ಣವಾದುದು. ಅವರ ಅನುಭವಗಳ ಸ್ಮೃತಿ ಪ್ರಪಂಚವು ಎಷ್ಟು ದಟ್ಟವಾದದ್ದು ಎಂಬುದಕ್ಕೆ ಅವರ 'ಜಾತ್ರೆ' ಪುಸ್ತಕ ಒಳ್ಳೆ ಉದಾಹರಣೆಯಾಗುತ್ತದೆ.

ಜಾತ್ರೆಯೆಂಬುದು ಪ್ರಾಯಶಃ ಪ್ರತಿಯೊಬ್ಬರ ಒಡಲಿನಲ್ಲಿಯೂ ಅಂತಸ್ಥವಾಗಿರುವ ನೆನಪು ನೇಸಲುಗಳು ಅಸಂಖ್ಯ ಟಿಸಿಲೊಡೆಯುತ್ತಾ ಹೋಗುವ ಒಂದು 'ಜಾತ್ರೆಸತ್ವ'ವಿರಬೇಕು. ಮಕ್ಕಳ ಎಳೆಯ ಜಗತ್ತನ್ನು ಜಾತ್ರೆ ಕೃತಿಯಲ್ಲಿ ವೈದೇಹಿ ಎಳೆ ಎಳೆಯಾಗಿ ಬಿಡಿಸಿಡುತ್ತಾರೆ. ಜಾತ್ರೆ – ಮೋಹಕ ಪರಿಮಳ, ಆನಂದ... ಈ ಜಾತ್ರೆ ಏನೆಲ್ಲ ಕಲಿಸುತ್ತದೆ. ಕೊನೆಗೆ ಇಡಿಯ ಬದುಕೇ ಒಂದು ಜಾತ್ರೆಯಂತೆನಿಸುತ್ತದೆ.

ತೌಲನಿಕ ಸಾಹಿತ್ಯ ಅಧ್ಯಯನಕ್ಕೆ ಹಲವು ಸಾಧ್ಯತೆಗಳಿವೆ. ಇಲ್ಲಿ ವಿಭಿನ್ನ ಸಂಸ್ಕೃತಿಗಳನ್ನು ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಕರಾವಳಿಯ ಪ್ರಾದೇಶಿಕ ಚಿತ್ರವೊಂದನ್ನು ಕಟ್ಟಿಕೊಡುವುದರ ಜೊತೆಗೆ ತುಳುನಾಡಿನ ಬಂಟರ ಸಂಸ್ಕೃತಿಯನ್ನು ಚಿತ್ರಿಸುವ ನಾಗವೇಣಿ ತಮ್ಮ ಕೃತಿಗಳಲ್ಲಿ ತುಳು ಕನ್ನಡವನ್ನು ಬಳಸುತ್ತಾರೆ. ತಾವು ಬಾಲ್ಯದಲ್ಲಿ ಕಂಡ ಕರಾವಳಿಯ ಅನುಭವದ ಜಗತ್ತನ್ನು ಕಟ್ಟಿಕೊಡುವಲ್ಲಿ ಅವರು ತೋರುವ ಲವಲವಿಕೆ, ಹಾಸ್ಯಪ್ರಜ್ಞೆ, ಕಥನ ಕುಶಲತೆ ವೈವಿಧ್ಯತೆಯಿಂದ ಕೂಡಿದೆ.

ಸ್ತ್ರೀಯಾತ್ಮಕ ನೆಲೆಯಲ್ಲಿ ಬದುಕನ್ನು ಗ್ರಹಿಸುವ ನಾಗವೇಣಿ ಈ ಅಂಶಗಳ ಜೊತೆಗೆ ಸಾಮಾಜಿಕ, ರಾಜಕೀಯ ಆಯಾಮಗಳತ್ತ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೆ. ದಲಿತ ಜನಾಂಗದ ಬದುಕು ಬವಣೆಗಳನ್ನು ಹತ್ತಿರದಿಂದ ಕಂಡ ಇವರು ತುಳುನಾಡಿನ ಸಮಾಜ ಜೀವನದ ಅನೇಕ ಅಪರಿಚಿತ ಮಜಲುಗಳನ್ನು ಗಮನಿಸುತ್ತಾರೆ. ಪ್ರಭುತ್ವದಡಿ ನಲುಗಿ ದನಿ ಎತ್ತಲಾರದೇ ಅಸಹಾಯಕರಾಗಿ ದನಿಯನ್ನು ಕಳೆದುಕೊಂಡ ಹೆಣ್ಣುಗಳ ಒಳದನಿಯನ್ನು ಪರಿಣಾಮಕಾರಿಯಾಗಿ ಗುರುತಿಸುತ್ತಾರೆ.

ಬಾಲ್ಯದ ಎಲ್ಲಾ ನೆನಪುಗಳು ಮರೆಯಾಗುತ್ತಿರುವ ಈ ಹೊತ್ತಿನಲ್ಲಿ ವಸುಂಧರೆಯ ಗ್ಯಾನ ಕೃತಿಯಲ್ಲಿನ ಕಥೆಗಳು ಮತ್ತೆ ಸಮೃದ್ಧವಾಗಿ ಆ ಎಲ್ಲಾ ನೆನಪುಗಳನ್ನು ಮರುಕಳಿಸುತ್ತದೆ. ಈ ನಡುವೆ ಎಲ್ಲವನ್ನು ಕಬಳಿಸಿ ವಿಸ್ಮೃತಿಯನ್ನುಂಟುಮಾಡುತ್ತಿರುವ ದಾಳಿಕೋರ ನವನಾಗರಿಕತೆಯ ಬಗ್ಗೆ ನಾಗವೇಣಿ ಬೇಸರ ಹಾಗೂ ವಿಷಾದಗಳನ್ನು ವ್ಯಕ್ತಪಡಿಸುತ್ತಾರೆ. 'ಬರಿದಾಗುತ್ತಿರುವ ನನ್ನ ಪ್ರೀತಿಯ ಕಡಲು' ಕತೆಯಲ್ಲಿ ಗಂಡಿನಾಸರೆ ಇಲ್ಲದ ಬಡ ಕುಟುಂಬಗಳಿಗೆ, ವಿಧವೆಯರಿಗೆ, ಗತಿಗೋತ್ರವಿಲ್ಲದ ಸ್ವಜಾತಿಯರಿಗೆ ಈ ಕಡಲೇ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ನೀಡುತ್ತದೆ ಎನ್ನುವುದು ನಾಗವೇಣಿಯವರ ಮಾತುಗಳಲ್ಲಿ ಸ್ಪಷ್ಟವಾಗುತ್ತದೆ. ಜಾತಿ-ಮತ ಭೇದವೆಣಿಸದೆ ಅಸಂಖ್ಯ ಕುಟುಂಬಗಳಿಗೆ ನೆಮ್ಮದಿಯ ಬದುಕು ಕಲ್ಪಿಸಿಕೊಟ್ಟಿದ್ದ ಕಡಲನ್ನೇ ಪ್ರಮುಖ ಅಸ್ತ್ರವನ್ನಾಗಿ ಬಳಸಿ ಕೋಮು ಜ್ವಾಲೆಯನ್ನು ಕಡಲ ಸೆರಗಿಗೇ ಹಚ್ಚಲಾದ ಕಡಲ ದಂಡೆಯ ದುರಂತವನ್ನು ಮರೆಯದೆ ನಾಗವೇಣಿ ದಾಖಲಿಸುತ್ತಾರೆ.

ವೈದೇಹಿ ಮತ್ತು ನಾಗವೇಣಿ ಇಬ್ಬರ ಕೃತಿಗಳಲ್ಲಿ ಬಳಸಲಾಗಿರುವ ಭಾಷೆಯು ಈ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ. ಮನುಷ್ಯನ ಸೃಜನಶೀಲ ಅಭಿವ್ಯಕ್ತಿಗೆ ಇರುವ ಹಲವಾರು ಸಾಧ್ಯತೆಗಳಂತೆಯೇ ಸಾಹಿತ್ಯವೂ ಒಂದು ಸಾಧ್ಯತೆ. ಜಗತ್ತಿನ ಎಲ್ಲಾ ಸಾಹಿತ್ಯವೂ ಎಲ್ಲಾ ಭಾಷೆಗಳು ತೌಲನಿಕ ಸಾಹಿತ್ಯದ ಅಧ್ಯಯನದ ವ್ಯಾಪ್ತಿಗೆ ಬರುವುದರಿಂದ ಅದಕ್ಕೊಂದು ಚೌಕಟ್ಟು ಇರುವುದಿಲ್ಲ.

ಒಂದು ಸೃಜನಶೀಲ ಮನಸ್ಸಿಗೆ ಆಗುವ ಪ್ರಭಾವ ಅವರ ಭಾಷೆಯಲ್ಲಷ್ಟೇ ಆಗುತ್ತದೆಂದು ತಿಳಿಯಬೇಕಿಲ್ಲ ಏಕೆಂದರೆ ತನ್ನ ದೇಶ ಭಾಷೆಗಿಂತ ಇತರೆ ದೇಶ ಭಾಷೆಯ ಪ್ರಭಾವವು ಸಾಧ್ಯವಾಗುವುದರಿಂದ ಈ ಬಗೆಯ ಅಧ್ಯಯನದಲ್ಲಿ ಸ್ವೀಕಾರವಾದ ಪ್ರಭಾವವೂ ಯಾವ ಸ್ವರೂಪವನ್ನು ಪಡೆಯಿತೆಂಬುದು ಮುಖ್ಯವಾಗುತ್ತದೆ. ಒಂದು ಕೃತಿಯ ಪ್ರಭಾವ ಮತ್ತೊಂದು ಕೃತಿಯ ಮೇಲೆ ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ಆಗಿರುತ್ತದೆ. ಒಂದು ಕೃತಿ ತನ್ನಷ್ಟಕ್ಕೆ ತಾನು ಪ್ರತ್ಯೇಕವಾಗಿರದೆ ತನ್ನ ಪ್ರಭಾವವನ್ನು ಇತರ ಕೃತಿಗಳ ಮೇಲೆ ಬೀರುತ್ತಲೇ ಇರುತ್ತದೆ. ಇದು ಕೇವಲ ಆಯಾ ಭಾಷಾ ಸಾಹಿತ್ಯಕ್ಕಷ್ಟೇ ಮೀಸಲಿರದೆ ಅನ್ಯಭಾಷಾ ಸಾಹಿತ್ಯದ ಮೇಲೂ ಆಗಬಹುದು. ಪ್ರಭಾವಿತ ಪ್ರತಿಭಾವಂತರು ತಮ್ಮದೇ ಆದ ಸ್ವತಂತ್ರ ಕೃತಿಯನ್ನು ರಚಿಸುತ್ತಾರೆ. ವೈದೇಹಿ ಮತ್ತು ನಾಗವೇಣಿ ಈ ಸ್ವೀಕಾರವನ್ನು ತಮ್ಮ ಪ್ರತಿಭೆಗೆ ಅನುಸಾರವಾಗಿ ಆ ಪ್ರಭಾವವನ್ನು ಹೇಗೆ ಪರಿವರ್ತಿಸಿಕೊಂಡಿದ್ದಾರೆ ಎಂಬುದು ಮಹತ್ವದ್ದಾಗುತ್ತದೆ. (ಆದ್ದರಿಂದ ಪ್ರಭಾವ (Influence)ವನ್ನು ಅನುಕರಣೆ (Imitation)ಯಿಂದ ಬೇರ್ಪಡಿಸುವುದು ಅಗತ್ಯ. ಇದನ್ನು ತೌಲನಿಕ ಅಧ್ಯಯನದಲ್ಲಿ ಸ್ವೀಕಾರ (Reception)ಎಂದು ವ್ಯಾಪಕ ಅರ್ಥದಲ್ಲಿ ಕರೆಯಲಾಗುತ್ತದೆ.)

ಇವರಿಬ್ಬರ ಕೃತಿಗಳ ತುಲನೆಯೊಂದಿಗೆ ವರ್ಣನೆ, ಪಾತ್ರಚಿತ್ರಣ, ವ್ಯಾಖ್ಯಾನ, ನಿರೂಪಣೆ, ಹೋಲಿಕೆ ಈ ಎಲ್ಲದರ ಜೊತೆಗೆ ಕೃತಿಗಳು ರಚನೆಯಾದ ಸಂದರ್ಭವನ್ನು ಗಮನದಲ್ಲಿರಿಸಿಕೊಂಡಿದ್ದೇನೆ. ಏಕೆಂದರೆ ೧೯೯೨ರಲ್ಲಿ ಪ್ರಕಟಗೊಂಡ ವೈದೇಹಿಯವರ ಅಸ್ಪೃಶ್ಯರು ಕಾದಂಬರಿ ಹಾಗೂ ೧೯೯೯ರಲ್ಲಿ ಪ್ರಕಟಗೊಂಡ ನಾಗವೇಣಿಯವರ ಗಾಂಧಿ ಬಂದ ಕಾದಂಬರಿ ಸಾಕಷ್ಟು ವೈವಿಧ್ಯತೆ ಮತ್ತು ವೈಶಿಷ್ಟ್ಯಗಳಿಂದ ಕೂಡಿವೆ. ಬರವಣಿಗೆಯ ಕಾಲ, ಸಂದರ್ಭ ಬೇರೆಯೆ ಆಗಿದ್ದರೂ ಅನೇಕ ಸಾಮ್ಯ ಮತ್ತು ವೈಷಮ್ಯಗಳಿವೆ.

ದಕ್ಷಿಣ ಕನ್ನಡ ಜಿಲ್ಲೆಗೆ ಗಾಂಧಿ ಆಗಮನದ ಪ್ರಭಾವ ಎರಡೂ ಕಾದಂಬರಿಯಲ್ಲೂ ಆಗಿದೆ. ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ 'ಗಾಂಧಿವಾದ' ಅಲ್ಲಿನ ಜನರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ್ದವು ಎಂಬುದಕ್ಕೆ 'ಅಸ್ಪೃಶ್ಯರು' ಮತ್ತು 'ಗಾಂಧಿಬಂದ' ಎರಡು ಕಾದಂಬರಿಗಳು ಸಾಕ್ಷಿಯಾಗುತ್ತವೆ. ತುಳುನಾಡಿನ ವಿವಿಧ ಸಾಂಪ್ರದಾಯಿಕ ಖಾದ್ಯಗಳ ಬಗ್ಗೆ ನಾಗವೇಣಿ, ವಸುಂಧರೆಯ ಗ್ಯಾನ ಕೃತಿಯಲ್ಲಿ ಸಾಕಷ್ಟು ವಿವರಣೆಗಳನ್ನು ನೀಡುತ್ತಾರೆ. ವೈದೇಹಿ 'ಮೇಜು ಮತ್ತು ಬಡಗಿ'ಯಲ್ಲಿ ಮುಂಡುಗನೋಲೆ ಕಡುಬು, ಮೀನು ಅಡಿಗೆ ಬಗ್ಗೆ ಕೂಡ ಪ್ರಸ್ತಾಪಿಸುತ್ತಾರೆ. ಇಬ್ಬರು ಸಾಹಿತ್ಯ ಕೃಷಿಯನ್ನು ಮಾಡಲು ತಮ್ಮನ್ನು ತೊಡಗಿಸಿಕೊಂಡಾಗ

ಬಹುಮುಖ್ಯವಾಗಿ ಸ್ತ್ರೀ ಸಂವೇದನೆಗಳ ಅಭಿವ್ಯಕ್ತಿಗೆ ಹೆಚ್ಚಿನ ಒಲವನ್ನು ತೋರಿರುವುದನ್ನು ಗಮನಿಸಬಹುದು. ಹೆಣ್ಣಿನ ಹೊರ-ಒಳನೋಟಗಳೇ ಸಾಹಿತ್ಯಕ್ಕೆ ಜೀವಂತಿಕೆಯನ್ನು ತುಂಬಿದರು. ವಸ್ತುವಿನ ಆಯ್ಕೆಯಲ್ಲಿ ಮತ್ತು ಆ ಕತೆಯನ್ನ ವಿಭಿನ್ನವಾಗಿ ಚಿತ್ರಿಸುವಲ್ಲಿ ಸಾಕಷ್ಟು ಭಿನ್ನತೆ ಹಾಗೂ ವೈವಿಧ್ಯತೆಗಳಿವೆ. ಈ ಎಲ್ಲಾವನ್ನು ಪ್ರಜ್ಞಾಪೂರ್ವಕವಾಗಿ ಪರಿಶೀಲಿಸಿ ಹೋಲಿಕೆ ವ್ಯತ್ಯಾಸಗಳ ಜೊತೆಗೆ ವಿಶ್ಲೇಷಣೆಗೆ ಆಗುಮಾಡುವುದು ಈ ಅಧ್ಯಯನದ ಮುಖ್ಯಧ್ಯೇಯ.

ಪ್ರಾದೇಶಿಕ ಸಾಹಿತ್ಯ ತೌಲನಿಕ ಅಧ್ಯಯನ ಕ್ರಮದಲ್ಲಿ ಮಹತ್ವದ ಭಾಗವಾಗಿರುತ್ತದೆ. ಯಾವುದೇ ಬರಹಗಾರ ಯಾವಾಗಲೂ ತಾನು ಹುಟ್ಟಿದ ಪರಿಸರಕ್ಕೆ ಒಂದಿಲ್ಲೊಂದು ಕಾರಣಕ್ಕಾಗಿ ಬದ್ಧರಾಗಿರುತ್ತಾರೆ. ಅಂತೆಯೇ ವೈದೇಹಿ ಮತ್ತು ನಾಗವೇಣಿಯವರು ಈ ಬಗೆಯ ಬದ್ಧತೆಯ ನೆಲೆಯಲ್ಲಿ ತಮ್ಮ ಪರಿಸರದ ಬದುಕನ್ನು ಅಭಿವ್ಯಕ್ತಿಸಿಕೊಂಡಿದ್ದಾರೆ. ಪ್ರತಿಯೊಂದು ಪ್ರದೇಶವು ತನ್ನದೇ ಆದ ಭಾಷೆ, ಸಾಂಸ್ಕೃತಿಕ ಹಿರಿಮೆ ಗರಿಮೆಗಳನ್ನು ಮೈಗೂಡಿಸಿಕೊಂಡಿರುತ್ತದೆ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆ ಅಲ್ಲಿನ ಜನಗಳ ಆಸಕ್ತಿ, ಆಶೋತ್ತರಗಳನ್ನು ಅವುಗಳಿಗೆ ಒತ್ತು ಕೊಡುವ ಪ್ರಾದೇಶಿಕ ಘಟನೆಗಳನ್ನು ಒಳಗೊಂಡು ಒಟ್ಟಾರೆಯಾಗಿ ರಾಷ್ಟ್ರೀಯ ಸಾಹಿತ್ಯದ ಭಾಗವಾಗಿ ಬೆಳೆದಿದೆ. ಭೌಗೋಳಿಕ ಮತ್ತು ಚಾರಿತ್ರಿಕ ಕಾರಣಗಳಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸಿಸುವ ಜನರ ರೀತಿ ನೀತಿಗಿಂತ ಭಿನ್ನವಾಗಿ ಉಡುಗೆ-ತೊಡುಗೆ, ಊಟೋಪಚಾರ, ರೂಢಿ ಸಂಪ್ರದಾಯಗಳು, ಆಡುಮಾತಿನ ಭಾಷೆ ಪ್ರತಿಕ್ರಿಯೆ, ಸಂವೇದನೆ ಮುಂತಾದ ವಿಷಯಗಳಲ್ಲಿ ವ್ಯತ್ಯಾಸವನ್ನು ಕಾಣಬಹುದಾಗಿದೆ. ಇದನ್ನ ಸಾಮಾನ್ಯ ಅರ್ಥದಲ್ಲಿ ಪ್ರಾದೇಶಿಕತೆ (Regionalism) ಎನ್ನುತ್ತೇವೆ. ಇಲ್ಲಿ ಸೃಷ್ಟಿಗೊಂಡ ಸಾಹಿತ್ಯ ಪ್ರಾದೇಶಿಕ ಸಾಹಿತ್ಯ. ಉದಾಹರಣೆಗೆ ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್'ನ ಸೇಟನ್‌ಗೂ ರಾಮಾಯಣದ ಹನುಮಂತನ ಸಮುದ್ರೋಲ್ಲಂಘನಕ್ಕೂ ಮತ್ತು ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'ನ ಹನುಮಂತನಿಗೂ ಹಲವು ಭಿನ್ನತೆಗಳಿವೆ. ಇವು ವಸ್ತುಸ್ಥಿತಿ ಸಂವೇದನೆಗಳ ನೆಲೆಯಲ್ಲಿ ಒಂದೇ ಆಗಿದ್ದರೂ ಹಲವು ವ್ಯತ್ಯಾಸಗಳಿರುತ್ತವೆ. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಗೂ 'ಆಲ್ಬರ್ಟ್ ಕಮೂನ' 'ದಿ ಪ್ಲೇಗ್' ಕಾದಂಬರಿಗೂ ಈ ಬಗೆಯ ಹೋಲಿಕೆಯಿದ್ದಂತೆಯೇ ಪ್ರೇಮ್‌ಚಂದರ ಕಥೆಗಳಿಗೂ, ಬೆಸಗರಹಳ್ಳಿ ರಾಮಣ್ಣನವರ ಕಥೆಗಳಿಗೂ ಸಾಮ್ಯವಿದ್ದಂತೆ ಕಂಡರೂ ಸಾಂಸ್ಕೃತಿಕವಾಗಿ ಭಿನ್ನನೆಲೆಗಳಿರುತ್ತವೆ. ಕನ್ನಡ ಸಾಹಿತ್ಯದ ಒಟ್ಟು ಬಲ ಪ್ರಾದೇಶಿಕ ಸಾಹಿತ್ಯವೆನಿಸಿಕೊಳ್ಳುತ್ತದೆ. ಇದು ರಾಷ್ಟ್ರೀಯ ಸಾಹಿತ್ಯದ ಒಂದು ಭಾಗವಾಗಿರುತ್ತದೆ.

ಇಬ್ಬರೂ ಲೇಖಕಿಯರ ಕೃತಿಗಳಲ್ಲಿ ಸಾಮ್ಯವಿದ್ದಂತೆ ಕಂಡರೂ ಸಾಂಸ್ಕೃತಿಕವಾಗಿ ಭಿನ್ನ ನೆಲೆಗಳಿವೆ. ಅನುಭವವೂ ಭಿನ್ನತೆಯಿಂದ ಕೂಡಿರುವುದರಿಂದ ಸಂಸ್ಕೃತಿಯು ನೀಡಿದ ಆಲೋಚನೆ ಅಭಿವ್ಯಕ್ತಿಗಳ ಜೊತೆಗೆ ವಸ್ತು ವೈವಿಧ್ಯವೂ ಬೇರೆಯೇ ಆಗಿದೆ. ಒಂದು ರಾಷ್ಟ್ರೀಯ ಸಮಸ್ಯೆ ಅಥವಾ ಅದರ ಒಂದು ಅಂಗ ಕೃತಿಯಲ್ಲಿ ಅಂತರ್ಗತವಾಗಿರುವುದರಿಂದ ಅದು ಆ ಮೂಲಕ ಒಂದು ರಾಷ್ಟ್ರೀಯ ಬದುಕಿನ ನೆಲೆಗಳನ್ನು ಹೇಳುತ್ತದೆ. ಇಲ್ಲಿ ಭಾವನಾತ್ಮಕ ನೆಲೆಗಿಂತ ಬದುಕಿನ ಸಾಧ್ಯತೆಗಳನ್ನು ವಿವರವಾಗಿ ಪರಿಶೀಲಿಸಲಾಗುತ್ತದೆ.

ವೈದೇಹಿ ಮತ್ತು ನಾಗವೇಣಿ ಈ ಇಬ್ಬರು ಲೇಖಕಿಯರ ಕೃತಿಗಳನ್ನು ಹೋಲಿಸಿ ಅಧ್ಯಯನ ನಡೆಸುವಾಗ ಹಲವು ಹೊಸ ಹೊಳಹುಗಳು ಈ ಲೇಖಕಿಯರ ಕೃತಿಗಳ ಅಧ್ಯಯನ ಮಾಡುವವರಿಗೆ ದೊರೆಯಬಹುದು ಎಂಬ ಭವಿಷ್ಯದ ಆಸೆಯೂ ಈ ಇಬ್ಬರು ಲೇಖಕಿಯರ ಕೃತಿಗಳ ಅಧ್ಯಯನವನ್ನು ತುಲನಾತ್ಮಕವಾಗಿ ನೋಡಲು ಕಾರಣವಾಯಿತು. ಆದರೆ ನಾಗವೇಣಿಯವರ ಮೂರು ಕಥಾಸಂಕಲನ, ಎರಡು ಪ್ರಬಂಧ ಸಂಕಲನ, ಒಂದು ಕಾದಂಬರಿಯ ಜೊತೆಗೆ ವೈದೇಹಿಯವರ ಆರು ಕಥಾಸಂಕಲನ, ಮೂರು ಕವನ ಸಂಕಲನ, ಒಂದು ಕಾದಂಬರಿ, ಮೂರು ಪ್ರಬಂಧ ಸಂಕಲನ, ಹದಿಮೂರು ಮಕ್ಕಳ ನಾಟಕಗಳು, ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು (೧೯೮೪) ಸೇಡಿಯಾಪು ನೆನಪುಗಳು (೧೯೯೬), ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ (೨೦೦೩) ಮುಂತಾದ ಕೆಲ ಪುಟಗಳು (೨೦೦೮), ಒಟ್ಟು ನಾಲ್ಕು ನೆನಪುಗಳ ಸಂಗ್ರಹ, ಭಾರತೀಯ ಮಹಿಳೆಯರ ಸ್ವಾತಂತ್ರ್ಯ, ಬೆಳ್ಳಿಯ ಸಂಕೋಲೆಗಳು, ಸಂಗೀತ ಸಂವಾದ (೧೯೯೯), ಸೂರ್ಯ ಕಿನ್ನರಿಯರು (೧೯೯೬) ಒಟ್ಟು ನಾಲ್ಕು ಅನುವಾದಗಳೊಂದಿಗಿನ ಎಲ್ಲಾ ಅಂಶಗಳೊಂದಿಗೆ ತೌಲನಿಕ ಅಧ್ಯಯನ ನಡೆಸುವುದು ತಾಂತ್ರಿಕ ದೃಷ್ಟಿಯಿಂದ ಅತಿ ವ್ಯಾಪ್ತಿಯ ವಿಚಾರವಾಗುತ್ತದೆ. ಆದ್ದರಿಂದ ಈ ಇಬ್ಬರೂ ಲೇಖಕಿಯರ ಕಾದಂಬರಿ, ಕಥೆ, ಪ್ರಬಂಧ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಅಂಶಗಳನ್ನು ಮಾತ್ರ ನನ್ನ ಅಧ್ಯಯನದ ಕೇಂದ್ರವನ್ನಾಗಿ ಮಾಡಿಕೊಂಡು, ಅನಿವಾರ್ಯ ಸಂದರ್ಭಗಳಲ್ಲಿ ಇಬ್ಬರು ಲೇಖಕಿಯರ ಇತರೆ ಕೃತಿಗಳ ಕೆಲವು ಸಂಗತಿಗಳನ್ನು ಗಮನಿಸಿದ್ದೇನೆ. ಇದು ನನ್ನ ಅಧ್ಯಯನದ ಮಿತಿಯೂ ಹೌದು.

ಈ ಇಬ್ಬರೂ ಮಹತ್ವದ ಲೇಖಕಿಯರ ಕೃತಿಗಳನ್ನು ತೌಲನಿಕವಾಗಿ ನೋಡುವುದರಿಂದ ಕೆಲವು ವೈಶಿಷ್ಟ್ಯಗಳನ್ನು ಕಂಡುಕೊಳ್ಳಬಹುದಾಗಿರುವುದರಿಂದ ಈ ವಸ್ತುವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲು ಕಾರಣವಾಗಿದೆ. ಒಂದೇ ಪ್ರಾಕೃತಿಕ ಪರಿಸರದಲ್ಲಿ ಹುಟ್ಟಿ, ಬೆಳೆದು ಆ ಪ್ರಾದೇಶಿಕತೆಯಿಂದಲೇ ವಿಭಿನ್ನವಾದ ಮಹತ್ವದ ಪ್ರೇರಣೆಯನ್ನು ಪಡೆದಿರುವ ಹಿನ್ನೆಲೆಯಲ್ಲಿ ಹೊಸ

ಒಳನೋಟಗಳನ್ನು ಅನ್ವೇಷಿಸುವುದು ಮತ್ತೊಂದು ಕಾರಣ. ಈ ಸಂಶೋಧನಾ ಪ್ರಬಂಧದ ಖಚಿತತೆಗಾಗಿ ಈ ಇಬ್ಬರೂ ಲೇಖಕಿಯರ ಪ್ರಾದೇಶಿಕತೆ, ಭಾಷೆ, ಅಭಿವ್ಯಕ್ತಿಯ ಸ್ವರೂಪ, ಬರವಣಿಗೆಯ ಸನ್ನಿವೇಶ ಮತ್ತು ಪರಿಸರ ಈ ಎಲ್ಲಾ ಅಂಶಗಳನ್ನು ನನ್ನ ಅಧ್ಯಯನದಲ್ಲಿ ಗಮನಿಸಿದ್ದೇನೆ.

ಭಾಷೆಯನ್ನು ತಮ್ಮ ಕೃತಿಗಳಲ್ಲಿ ದುಡಿಸಿಕೊಂಡ ರೀತಿ ತುಂಬಾ ವಿಶಿಷ್ಟವಾಗಿದೆ. ಭಾಷೆಯ ದೃಷ್ಟಿಯಿಂದ ವೈದೇಹಿ ಮತ್ತು ನಾಗವೇಣಿ ಬೇರೆ ಬೇರೆಯಾಗಿಯೇ ಗುರುತಿಸಿಕೊಳ್ಳುತ್ತಾರೆ. ವೈದೇಹಿ ತಮ್ಮ ಕೃತಿಗಳಲ್ಲಿ ಕುಂದಾಪುರ ಬಂಟವಾಳದ ಕನ್ನಡವನ್ನು ಬಳಸಿದರೆ, ನಾಗವೇಣಿ ತುಳುನಾಡಿನ ದಕ್ಷಿಣ ಕನ್ನಡದ ಆಡು ಭಾಷೆಯನ್ನೆ ಬಳಸುತ್ತಾರೆ. ವೈದೇಹಿ ಸಂಪ್ರದಾಯಸ್ತ ಬ್ರಾಹ್ಮಣ ಕುಟುಂಬದ ಹಿನ್ನೆಲೆಯುಳ್ಳವರು. ನಾಗವೇಣಿ ಭಂಟರ ಜನಾಂಗದ ತುಳು ಸಂಸ್ಕೃತಿಯ ಹಿನ್ನೆಲೆಯುಳ್ಳವರು. ಈ ಇಬ್ಬರು ಲೇಖಕಿಯರ ಕೃತಿಗಳಲ್ಲಿ ಮುಖ್ಯವಾಗಿ ಸ್ತ್ರೀಪರವಾದ ಅಭಿವ್ಯಕ್ತಿಯ ಸ್ವರೂಪವನ್ನು ಗಮನಿಸಬಹುದಾಗಿದೆ.

ಈ ಸಂಪ್ರಬಂಧದಲ್ಲಿ ನಾನು ವೈದೇಹಿ ಮತ್ತು ನಾಗವೇಣಿಯವರ ಕೃತಿಗಳಲ್ಲಿ ಕಂಡು ಬರುವ ನೈಸರ್ಗಿಕ ಸಂಪತ್ತು, ಜೀವವೈವಿಧ್ಯತೆ, ಕರಾವಳಿ ಜನರ ಬದುಕಿನಲ್ಲಿ ಮಹತ್ವದ ಪಾತ್ರವನ್ನು ಹೊಂದಿರುವಂತಹ ಕಡಲು, ಭಾಷೆ, ಜನಜೀವನ, ಸ್ತ್ರೀವಾದದ ಅಭಿವ್ಯಕ್ತಿ, ವಸ್ತು ವೈಶಿಷ್ಟ್ಯತೆ ಕುರಿತು ವಿಶ್ಲೇಷಣೆ ನಡೆಸಿದ್ದೇನೆ.

ಇಡೀ ದಕ್ಷಿಣ ಭಾರತದ ಜನಜೀವನ ಪಶ್ಚಿಮಘಟ್ಟಗಳನ್ನಾಧರಿಸಿದೆ. ಈ ಪ್ರದೇಶದ ಜನಜೀವನ ಮತ್ತು ಪರಿಸರ ಹೇಗಿತ್ತು ಎಂದು ತಿಳಿಯಲು ನಾವು ಕುವೆಂಪು ಮತ್ತು ಕಾರಂತರ ಕಾದಂಬರಿಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಯಾಕೆ ಈ ಇಬ್ಬರ ಕಾದಂಬರಿಗಳನ್ನೇ ಅಧ್ಯಯನ ಮಾಡಬೇಕು? ನಮ್ಮ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳಲ್ಲಿ ಪ್ರಕೃತಿ ವರ್ಣನೆಗಳನ್ನು ತಂದಿಲ್ಲವೆ ಎಂಬ ಪ್ರಶ್ನೆಗಳೇಳುವುದು ಸಹಜ. ನಮ್ಮ ಬಹಳಷ್ಟು ಸಂಸ್ಕೃತ ಕಾವ್ಯಗಳು ಅಷ್ಟಾದಶ ವರ್ಣನೆಗಳ ಸಲುವಾಗಿಯೇ ಪ್ರಕೃತಿಯನ್ನು ವರ್ಣಿಸಿರುವುದುಂಟು. ಕಾಳಿದಾಸನ 'ಋತು ಸಂಹಾರ', 'ಮೇಘದೂತ', ಬಾಣನ 'ಕಾದಂಬರಿ', 'ರಾಮಾಯಣ', 'ಮಹಾಭಾರತ' ಹೀಗೆ ಎಲ್ಲಾ ಮಹಾನ್ ಕಾವ್ಯಗಳಲ್ಲಿಯೂ ಪ್ರಕೃತಿ ವರ್ಣನೆ ಇದೆ. ಆದರೆ ಇಂತಹ ಪ್ರಕೃತಿಯನ್ನು ನಮ್ಮ ಹಿಂದಿನ ಕವಿಗಳು ಕೇವಲ ಬಹಿರಂಗದಲ್ಲಿ ಮಾತ್ರ ಕಂಡು, ಅಂತರಂಗವನ್ನು ಅರಿಯುವ ಗೋಜಿಗೆ ಹೋಗಲಿಲ್ಲ. ಕುವೆಂಪು ಮತ್ತು ಕಾರಂತರ ಕೃತಿಗಳಲ್ಲಿ ಈ ಪ್ರಕೃತಿ ಎಷ್ಟರಮಟ್ಟಿಗೆ ಜೀವತಾಳಿದೆ ಎಂದರೆ ನಿಸರ್ಗದ ಒಳಹೊಕ್ಕು, ಅದರ ವಿಸ್ಮಯಾನಂದಗಳನ್ನು ಗ್ರಹಿಸುವ ಮೂಲಕ

ಅದರ ಅಸ್ತಿತ್ವ, ಸಾರ್ವಭೌಮತೆಯನ್ನು ಗ್ರಹಿಸುವ ಮತ್ತು ಗುರುತಿಸುವ ಅನುಭಾವಿ ಬರಹಗಾರರಾಗಿ ಕಾಣಿಸಿಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ನಾಗವೇಣಿ ಈಗ ಕಾರಂತರಂತೆ ಕರಾವಳಿಯ ಪ್ರಾದೇಶಿಕ ಚಿತ್ರವೊಂದನ್ನು ಕಟ್ಟಿಕೊಡುತ್ತಾರೆ.

ಘಟ್ಟದ ಬುಡ ಕರಾವಳಿಯನ್ನು ಕಾರಂತರನ್ನು ಬಿಟ್ಟರೆ ನಾಗವೇಣಿ ಬಹು ಸಮರ್ಥವಾಗಿ ಚಿತ್ರಿಸಿಕೊಡುತ್ತಾರೆ. ನಾಗವೇಣಿ ತರುವ ಜೀವವೈವಿಧ್ಯಗಳಾಗಲಿ, ಸಸ್ಯ ವೈವಿಧ್ಯಗಳಾಗಲಿ ವೈದೇಹಿಯವರಲ್ಲಿ ಕಾಣಸಿಗುವುದಿಲ್ಲ. ವೈದೇಹಿ ಹುಟ್ಟಿ ಬೆಳೆದ ಕುಟುಂಬ ಊರು, ಅಲ್ಲಿನ ಜನ ಸಮುದಾಯ, ಪರಿಸರ ಸಂವೇದನೆ ದೊಡ್ಡ ಕುಟುಂಬದಲ್ಲಿ ಕಂಡ ಅನೇಕ ಬಗೆಯ ಬದುಕುಗಳು, ಮನೆ ಮುಂದಿನ ಧೂಪ, ದೇವದಾರು ಮರಗಳು, ಮನೆಯಂಗಳಕ್ಕೂ ದೂರದಿಂದ ಸಣ್ಣಗೆ ಕೇಳುತ್ತಿದ್ದ ಅರಬ್ಬಿ ಸಮುದ್ರದ ಮೊರೆತ, ಸ್ವತಂತ್ರ ಬಂದು ಹೆಚ್ಚು ವರ್ಷಗಳಾಗಿಲ್ಲದ ಕಾರಣ ದೇಶದ ಅಭಿವೃದ್ಧಿಯ ಕನಸು ಕಟ್ಟಿದ್ದ ಊರುಗಳು ನಿಧಾನವಾಗಿ ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದ ಕಾಲವನ್ನು ತಮ್ಮ ಕತೆಗೆ ವಸ್ತುವಾಗಿಸಿಕೊಳ್ಳುತ್ತಾರೆ ವೈದೇಹಿ.

ಕಡಲ ತಡಿಯ ಸಾಮಾನ್ಯ ಜನರ ಬದುಕಿನ ಪದರುಗಳನ್ನು ತೆರೆದಿಡುತ್ತಾ ಸಮಕಾಲೀನ ಸಾಮಾಜಿಕ ಬದುಕಿನ ಏರಿಳಿತಗಳನ್ನು ಬಹಳ ಸೂಕ್ಷ್ಮವಾಗಿ ಮೀಯುವ ಆಟ ಕೃತಿಯಲ್ಲಿ ಸೆರೆಹಿಡಿಯುವ ನಾಗವೇಣಿ ಮರೆಯಾಗುತ್ತಿರುವ ಕಪ್ಪೆ, ನರ್ತೆ, ಗುಬ್ಬಚ್ಚಿ, ತರತರದ ತರಕಾರಿಗಳು, ವೃಕ್ಷ ಜಾತಿಗಳ ನೆನಪುಗಳು ವಸುಂಧರೆಯ ಗ್ಯಾನ ಕೃತಿಗೆ ಪ್ರಾದೇಶಿಕ ವಿಶಿಷ್ಟತೆಯನ್ನು ಒದಗಿಸುತ್ತವೆ. “ಕಡಲು” ನಾಗವೇಣಿಯವರಲ್ಲಿ ಒಂದು ಅನಂತವಾದ, ಅಪಾರವಾದ ಜೀವನದ ಹಿನ್ನೆಲೆಯಾಗಿ ಬರುತ್ತದೆ. ಹಾಗಾಗಿ ಕಡಲ ತೀರದ ಸಂಸ್ಕೃತಿಯ ಜೊತೆಗೆ, ಸ್ವಾತಂತ್ರ್ಯ ಚಳುವಳಿ, ಗಾಂಧೀವಾದ, ಬಾಲ್ಯದ ನೆನಪುಗಳು, ಸಮಾಜ ಸುಧಾರಣೆಯೆಡೆಗೆ ಒಲವು, ಧಾರ್ಮಿಕ ಮೂಢನಂಬಿಕೆಗಳ ಖಂಡನೆ ಮುಂತಾದವುಗಳಿಂದ ಇವರ ಕೃತಿಗಳು ಸಮೃದ್ಧವಾಗಿವೆ. ಈ ಇಬ್ಬರು ಲೇಖಕರು ಹುಟ್ಟಿ ಬೆಳೆದ ನಿಸರ್ಗರಮ್ಯ ಪರಿಸರ, ವಿಶಿಷ್ಟವಾದ ಜೀವನ ವಿಧಾನ, ಅವರ ಬರವಣಿಗೆಯ ಮೇಲೆ ಮಾಡಿದ ಪ್ರಭಾವ ಈ ಇಬ್ಬರೂ ಸಮಕಾಲೀನ ಲೇಖಕಿಯರ ಕೃತಿಗಳಲ್ಲಿ

ಚಿತ್ರಿಸಿರುವ ಬಗೆಯನ್ನು ಪರಸ್ಪರ ಹೋಲಿಸಿ ಇಬ್ಬರ ವೈಶಿಷ್ಟ್ಯಗಳನ್ನು ಆ ಮೂಲಕ ಗುರುತಿಸಲು ಪ್ರಯತ್ನಿಸುವುದು ನನ್ನ ಈ ಸಂಶೋಧನಾ ಪ್ರಬಂಧದ ಪ್ರಧಾನ ಆಶಯವಾಗಿದೆ.

೧.೨ ವೈದೇಹಿ ಮತ್ತು ಎಚ್. ನಾಗವೇಣಿ ಕರಾವಳಿಯ ಇಬ್ಬರು ಲೇಖಕಿಯರ ತೌಲನಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಈವರೆಗೆ ನಡೆಸಿದ ಅಧ್ಯಯನದ ಸಮೀಕ್ಷೆ

ಪಿಎಚ್.ಡಿ. ಮಹಾಪ್ರಬಂಧಗಳು

*** ಕರಾವಳಿ ಲೇಖಕಿಯರ ಕಥೆಗಳಲ್ಲಿ ಅಭಿವ್ಯಕ್ತಗೊಂಡ ಸ್ತ್ರಿ ಸಂಸ್ಕೃತಿಯ ವಿಭಿನ್ನ ಆಯಾಮಗಳು**

ಸಂಶೋಧಕ – ಸುಲತಾ ವಿದ್ಯಾಧರ

ಮಾರ್ಗದರ್ಶಕ – ಶ್ರೀಧರ ಎಚ್.ಜಿ.

ಕನ್ನಡ ವಿಶ್ವವಿದ್ಯಾಲಯ ಹಂಪಿ, ಡಾ. ಹಾಮಾನಾ ಸಂಶೋಧನಾ ಕೇಂದ್ರ ಉಜಿರೆ.

ಸುಮಾರು ಒಂದು ಶತಮಾನದಷ್ಟು ಇತಿಹಾಸವಿರುವ ಕರಾವಳಿಯ ಮಹಿಳಾ ಸಾಹಿತ್ಯ ಬೇರೆ ಬೇರೆ ಪ್ರಕಾರಗಳಲ್ಲಿ ಬೆಳೆದು ಬಂದಿದೆ. ಕಥೆ, ಕಾದಂಬರಿ, ನಾಟಕ, ಕಾವ್ಯ, ವಿಮರ್ಶೆ, ಪ್ರಬಂಧ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಇವರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ದೊಡ್ಡದು ಎನ್ನಬಹುದು. ಆರಂಭದ ಲೇಖಕಿಯರ ಬರಹಗಳಲ್ಲಿ ಸಾಂಪ್ರದಾಯಿಕ ಮೌಲ್ಯಗಳ ಪ್ರತಿಪಾದನೆ ಕಂಡು ಬಂದರೂ ಪ್ರಗತಿಪರವಾಗಿ ಚಿಂತಿಸಿ ಸಮಾಜಮುಖಿ ನಿಲುವುಗಳನ್ನು ಅಭಿವ್ಯಕ್ತಿಸಿದ್ದನ್ನು ಗಮನಿಸಬಹುದು ಆದರೆ ಉಳಿದೆಲ್ಲ ಪ್ರಕಾರಗಳಿಗಿಂತ ಕಥಾ ಸಾಹಿತ್ಯವೇ ಕರಾವಳಿ ಲೇಖಕಿಯರ ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿತ್ತು ಎಂಬುದನಿಲ್ಲಿ ನೋಡಬಹುದಾಗಿದೆ.

ಕರಾವಳಿ ಮಹಿಳೆಯ ಸಾಂಸ್ಕೃತಿಕ ಬದುಕು, ಕರಾವಳಿ ಸಂಸ್ಕೃತಿಗೂ ಇತರ ಪ್ರಾದೇಶಿಕ ಸಂಸ್ಕೃತಿಗೂ ನಡುವೆ ಇರುವ ವ್ಯತ್ಯಾಸಗಳನ್ನು, ಕರಾವಳಿಯ ಪ್ರಾದೇಶಿಕ ಸಂಸ್ಕೃತಿಯ ಅನನ್ಯತೆ, ಪರಂಪರೆ ಮತ್ತು ಆಧುನಿಕತೆ ಎಂಬ ದ್ವಂದ್ವದ ನೆಲೆಯಲ್ಲಿ ಕರಾವಳಿ ಹೆಣ್ಣಿನ ಬದುಕು ಈ ವಿಚಾರವಾಗಿ ಇಲ್ಲಿ ಚರ್ಚಿಸಲಾಗಿದೆ.

೧೯೫೦ರ ನಂತರದ ಪ್ರಮುಖ ಲೇಖಕಿಯರಾದ ಗಂಗಾಪಾದೇಕಲ್, ಪ್ರೇಮಾಭಟ್, ಮಿತ್ರಾವೆಂಕಟ್ರಾಜ್, ವೈದೇಹಿ, ಸಾರಾ ಅಬೂಬಕ್ಕರ್ ಇವರ ಪ್ರಾತಿನಿಧಿಕ ಕಥೆಗಳನ್ನಷ್ಟೇ ಇಲ್ಲಿ ಆಯ್ಕೆ ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ.

*** ದಕ್ಷಿಣ ಕನ್ನಡ ಜಿಲ್ಲೆಯ ಕಾವ್ಯದ ವಿಭಿನ್ನ ನೆಲೆಗಳು**

ಸಂಶೋಧಕ – ಚೊಕ್ಕಾಡಿ ಸಂತೋಷ

ಮಾರ್ಗದರ್ಶಕ – ಕಾಳೇಗೌಡ ನಾಗವಾರ

೨೦೦೫ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಿತವಾಗಿದೆ.

ಪ್ರಸ್ತುತ ಅಧ್ಯಯನ ದಕ್ಷಿಣ ಕನ್ನಡದ ಕಾವ್ಯದ ವಿಭಿನ್ನ ನೆಲೆಗಟ್ಟನ್ನು ಚಿಂತನೆಯಲ್ಲಿ ಒಳಪಡಿಸಲಾಗಿದೆ. ದಕ್ಷಿಣ ಕನ್ನಡ ಕಾವ್ಯದ ವಿಶಿಷ್ಟತೆ, ದಕ್ಷಿಣ ಕನ್ನಡ ಕವಿಗಳ ಮನೋಧರ್ಮ ಮತ್ತು ಇವುಗಳಿಗೆ ಕಾರಣವಾದ ಹಿನ್ನೆಲೆಯನ್ನು ವಿವರಿಸಲಾಗಿದೆ. ಯಾವ ಅಂಶಗಳು ದಕ್ಷಿಣ ಕನ್ನಡ ಕಾವ್ಯ ವಿಭಿನ್ನವಾಗಿ ಬೆಳೆಯಲು ಕಾರಣವಾಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ದ.ಕ. ಕಾವ್ಯದ ಭಾಷಾ ಪ್ರಯೋಗದ ವಿಶಿಷ್ಟತೆ ಮತ್ತು ವೈವಿಧ್ಯಗಳ ಬಗ್ಗೆ ಚರ್ಚಿಸಲಾಗಿದೆ. ದಕ್ಷಿಣ ಕನ್ನಡದ ಸಾಂಸ್ಕೃತಿಕ ಅನನ್ಯತೆಯನ್ನು ತೋರಿಸುವ ಇಲ್ಲಿನ ಕೃತಿಗಳಲ್ಲಿ ಭಾಷೆ, ಸ್ವರೂಪ, ಸಾಂಕೇತಿಕತೆ, ಲಯ ಇವೆಲ್ಲವುಗಳ ಪ್ರಭಾವ ಯಾವ ರೀತಿ ಆಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಪ್ರಕೃತಿ ಮತ್ತು ದಕ್ಷಿಣ ಕನ್ನಡದ ಕವಿಗಳ ಅನನ್ಯವಾದ ಸಂಬಂಧ ಕುರಿತು ಚರ್ಚಿಸಲಾಗಿದೆ. ತನ್ಮೂಲಕ ದಕ್ಷಿಣ ಕನ್ನಡ ಕಾವ್ಯದ ಪ್ರಕೃತಿ ಕಲ್ಪನೆ ಉಳಿದ ಪ್ರದೇಶದ ಕವಿಗಳಿಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಹಾಗೂ ದಕ್ಷಿಣ ಕನ್ನಡ ಕಾವ್ಯದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ ಸಾಮಾಜಿಕ ಪ್ರಜ್ಞೆ ರೂಪಗೊಂಡಿರುವ ಬಗೆಯನ್ನು ಇಲ್ಲಿ ಶೋಧಿಸಲಾಗಿದೆ.

*** ಕರಾವಳಿ ಕರ್ನಾಟಕದ ಗೌಡಸಾರಸ್ವತ ಬ್ರಾಹ್ಮಣರ ಸಂಸ್ಕೃತಿ ಒಂದು ಅಧ್ಯಯನ**

ಸಂಶೋಧಕರು – ಬಿ.ವಿ. ಕುಸುಮಾ ರೈ

ಮಾರ್ಗದರ್ಶಕರು – ರಾಜೇಂದ್ರ ಡಿ.ಕೆ.

೨೦೦೭ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಿತವಾಗಿದೆ.

ಪ್ರಸ್ತುತ ಪ್ರಬಂಧದದಲ್ಲಿ ಗೌಡಸಾರಸ್ವತ ಬ್ರಾಹ್ಮಣರ ಮೂಲ ಅವರ ಹಿನ್ನೆಲೆ, ಕರ್ನಾಟಕದಲ್ಲಿ ಅವರ ಪ್ರಾಚೀನತೆ, ಅವರ ಕೊಂಕಣಿ ಭಾಷೆ, ಅವರಲ್ಲಿ ಕಂಡು ಬರುವ

ಪಂಗಡಗಳು, ಅವುಗಳ ಸಾಮ್ಯ-ವೈಷಮ್ಯ, ಅವರ ಆಚಾರ ವಿಚಾರಗಳು, ಸಂಪ್ರದಾಯ, ನಡಾವಳಿಗಳು, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಸಂಗತಿಗಳು ಮುಂತಾದವನ್ನು ತಲಸ್ಪರ್ಶಿಯಾಗಿ ವಿಶ್ಲೇಷಿಸಲಾಗಿದೆ. ಗೌಡಸಾರಸ್ವತ ಬ್ರಾಹ್ಮಣರ ಭೌಗೋಳಿಕ ಸಾಮಾಜಿಕ ಹಿನ್ನೆಲೆಗಳನ್ನು ಚರ್ಚಿಸುತ್ತಲೆ, ಅವರ ಧಾರ್ಮಿಕ ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳನ್ನು ವಿವರವಾಗಿ ನಿರೂಪಿಸಲಾಗಿದೆ. ಈ ಜನತೆಯ ಭಾಷಾ ಸಮಸ್ಯೆ, ಇವರಲ್ಲಿ ಕಂಡು ಬರುವ ಸಾಕ್ಷರತಾ ಪ್ರಮಾಣ, ಧಾರ್ಮಿಕ ವಿದ್ಯಾಭ್ಯಾಸದ ಕಡೆಗೆ ಈ ಜನತೆಗಿರುವ ಒಲವು ಇತ್ಯಾದಿಗಳನ್ನು ಸಾಹಿತ್ಯ ಕ್ಷೇತ್ರದ ಅವಲೋಕನದಲ್ಲಿ ಪರಿಗ್ರಹಿಸಲಾಗಿದೆ. ಲಲಿತಾ ಕಲಾ ಕ್ಷೇತ್ರದಲ್ಲೂ ಮಾಡಿರುವ ಸಾಧನೆ, ವಾಣಿಜ್ಯೋದ್ಯಮ ಕ್ಷೇತ್ರದಲ್ಲಿ ಯಶಸ್ಸನ್ನುಗಳಿಸಿದ ಕಾರಣಗಳು, ರಾಜಕೀಯ ಪ್ರಗತಿ ಇವೇ ಮೊದಲಾದವುಗಳನ್ನು ವಿಶಿಷ್ಟ ಅಂಶಗಳಾಗಿ ಅಧ್ಯಯನ ಮಾಡಲಾಗಿದೆ.

*** ಹೊಸಗನ್ನಡ ಕಾದಂಬರಿಗಳಲ್ಲಿ ಅಂತರ್ಜಾತೀಯ ಮತ್ತು ಮತೀಯ ವಿವಾಹ**

ಸಂಶೋಧಕರು – ರಘುನಾಥ ಎಚ್.ಎಸ್.

ಮಾರ್ಗದರ್ಶಕರು – ಶ್ರೀಕಂಠ ಕೂಡಿಗೆ

ಕುವೆಂಪು ವಿಶ್ವವಿದ್ಯಾಲಯದಿಂದ ಪ್ರಕಟಿತವಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ವಿವಾಹವು ಸಾಮಾಜಿಕ ವಿನ್ಯಾಸದ ಕ್ರಮವನ್ನು ವ್ಯತ್ಯಸ್ಥಗೊಳಿಸುವುದರೊಂದಿಗೆ, ಬದುಕಿನ ಸಾಂಸ್ಕೃತಿಕ ಚಲನೆಗೆ, ಸಂಘರ್ಷಕ್ಕೆ, ಸಾಮರಸ್ಯಕ್ಕೆ ಹಾಗೆಯೆ ಕೆಲವೊಮ್ಮೆ ವಿನಾಶಕ್ಕೂ ಕಾರಣವಾಗಿರುವ ವಾಸ್ತವಾಂಶಗಳನ್ನು ಚರ್ಚಿಸಲಾಗಿದೆ.

ಅಂತರ್ಜಾತೀಯ ಮತ್ತು ಮತೀಯ ವಿವಾಹಗಳ ಬಗ್ಗೆ ಕನ್ನಡ ಸಾಹಿತ್ಯದ ಒಟ್ಟಾರೆ ಪ್ರತಿಕ್ರಿಯೆ ಸಾಕಷ್ಟು ಕುತೂಹಲಕಾರಿಯಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನಿಜವಾದ ಅರ್ಥದಲ್ಲಿ ಅಂತರ್ಜಾತೀಯ ಮತ್ತು ಮತೀಯ ವಿವಾಹದ ಬಗೆಗಿನ ವಿವರಗಳು ಗೋಚರವಾಗುವುದು ಹೊಸಗನ್ನಡ ಸಾಹಿತ್ಯದಲ್ಲಿಯೇ ಆಗಿದೆ. ಕಳೆದ ಶತಮಾನದ ನೂರಾರು ಸಣ್ಣಕಥೆ, ಕಾದಂಬರಿಗಳಲ್ಲಿ ಅಂತರ್ಜಾತೀಯ ವಿವಾಹ ಕುರಿತು ಗಂಭೀರವಾದ ಪ್ರತಿಕ್ರಿಯೆಗಳು ವ್ಯಕ್ತಗೊಂಡಿದ್ದು, ವಿಶೇಷವಾಗಿ ಗದ್ಯಬರಹಗಳಲ್ಲಿ ಮಾತ್ರ ಈ ವಿವರಗಳು ಪ್ರಕಟಗೊಂಡಿವೆ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡದ ಕಾದಂಬರಿಕಾರರು ಅಂತರ್ಜಾತೀಯ ಮತ್ತು ಮತೀಯ ವಿವಾಹದ ಕುರಿತು ವ್ಯಕ್ತಪಡಿಸಿರುವ ನಿಲುವು, ಪ್ರತಿಕ್ರಿಯೆಯನ್ನು ಈ ಅಧ್ಯಯನದಲ್ಲಿ ಗಮನಿಸಲಾಗಿದ್ದು, ಆ ಮೂಲಕ ಭಾರತೀಯ ಸಮಾಜದಲ್ಲಿ ವಿವಾಹ ಪದ್ಧತಿ ಕುರಿತ ಸಾಮಾಜಿಕ ಚಲನೆಯ ಗತಿಯನ್ನು ಗುರುತಿಸಲಾಗಿದೆ.

*** ಕುವೆಂಪು ಮತ್ತು ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪ್ರಕೃತಿ**

ಸಂಶೋಧಕರು – ಸುಮಿತ್ರಾ ಎಲ್.ಸಿ.

ಮಾರ್ಗದರ್ಶಕರು – ಶ್ರೀಕಂಠ ಕೂಡಿಗೆ

ಕುವೆಂಪು ವಿಶ್ವವಿದ್ಯಾನಿಲಯದಿಂದ ಪ್ರಕಟಿತವಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ಕನ್ನಡದ ಇಬ್ಬರು ಪ್ರಮುಖ ಕಾದಂಬರಿಕಾರರಾದ ಕುವೆಂಪು ಮತ್ತು ಶಿವರಾಮ ಕಾರಂತರು ತಮ್ಮ ಕಾದಂಬರಿಗಳಲ್ಲಿ 'ಪ್ರಕೃತಿ'ಯನ್ನು ಪರಿಭಾವಿಸಿರುವುದನ್ನು ಕುರಿತು ತೌಲನಿಕ ಅಧ್ಯಯನ ನಡೆಸಲಾಗಿದೆ.

ಈ ಇಬ್ಬರು ಲೇಖಕರು ಹುಟ್ಟಿ ಬೆಳೆದ ನಿಸರ್ಗ ರಮ್ಯ ಪರಿಸರ, ವಿಶಿಷ್ಟವಾದ ಜೀವನ ವಿಧಾನ ಅವರ ಬರವಣಿಗೆಯ ಮೇಲೆ ಮಾಡಿದ ಪರಿಣಾಮಗಳನ್ನು, ಪ್ರಕೃತಿ ಮಾನವ ಪ್ರಕೃತಿಯ ಮೇಲೆ ಮಾಡಿದ ಪರಿಣಾಮವನ್ನು, ಬೀರುವ ಪ್ರಭಾವವನ್ನು ಕಾದಂಬರಿಕಾರರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿರುವ ಬಗೆಯನ್ನು ಪರಸ್ಪರ ಹೋಲಿಸಿ ಇಬ್ಬರ ವೈಶಿಷ್ಟ್ಯವನ್ನು ಆ ಮೂಲಕ ಗುರುತಿಸಲಾಗಿದೆ.

'ನಿಸರ್ಗವನ್ನು ಗೆದ್ದು ಬಾಳುವುದು ಹಿರಿಮೆ' ಎಂಬ ದರ್ಶನ ಕಾರಂತರದ್ದಾದರೆ, ನಿಸರ್ಗದೊಂದಿಗೆ ತಾದಾತ್ಮ್ಯ ಹೊಂದುವುದು ಕುವೆಂಪು ದರ್ಶನವಾಗಿದೆ. ಪ್ರಕೃತಿಯೊಂದಿಗೆ ಸೆಣಸಿ ಬಾಳುವುದು ಕಾರಂತರಲ್ಲಿ ರೇಜಿಗೆಯಾದರೆ ಕುವೆಂಪು ಅವರಲ್ಲಿ ಅದು ಸಹಜ ಜೀವನ ವ್ಯಾಪಾರ ಎಂದು ಅಭಿಪ್ರಾಯಪಡಲಾಗಿದೆ.

ಒಂದು ನಿರ್ದಿಷ್ಟ ಧೋರಣಾತ್ಮಕ ಮತ್ತು ವೈದಾನಿಕ ನಿಲುವಿನಲ್ಲಿ ಬರವಣಿಗೆಯನ್ನು ಮುನ್ನೆಡೆಸಿರುವುದನ್ನು ಈ ಅಧ್ಯಯನದಲ್ಲಿ ಗಮನಿಸಬಹುದಾಗಿದೆ.

*** ವೈದೇಹಿಯವರ ಸಾಹಿತ್ಯ ಒಂದು ಅಧ್ಯಯನ**

ಸಂಶೋಧಕರು – ಕೆ. ಸುರೇಖಾ

ಮಾರ್ಗದರ್ಶಕರು – ಕಾಳೇಗೌಡ ನಾಗವಾರ

೨೦೦೩ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ.

*** ಆಧುನಿಕ ಕನ್ನಡ ಮಹಿಳಾ ಕಥಾ ಸಾಹಿತ್ಯ**

ಸಂಶೋಧಕರು – ನಂದಕುಮಾರ್ ಸ್ವಾಮಿ

ಮಾರ್ಗದರ್ಶಕರು – ನರಹಳ್ಳಿ ಬಾಲಸುಬ್ರಮಣ್ಯಂ

೨೦೦೩ರಲ್ಲಿ ಬೆಂಗಳುರು ವಿಶ್ವವಿದ್ಯಾಲಯದಿಂದ ಪ್ರಕಟಿತವಾಗಿದೆ.

*** ಹೊಸಗನ್ನಡ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಸಮಸ್ಯೆ**

ಸಂಶೋಧಕರು – ವನಜಾಕ್ಷಮ್ಮ ಜಿ.

ಮಾರ್ಗದರ್ಶಕರು – ಪದ್ಮಪ್ರಸಾದ್

*** ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣಕಥೆಗಳ ಹುಟ್ಟು ಮತ್ತು ಬೆಳವಣಿಗೆ**

ಸಂಶೋಧಕರು – ಸಬೀಹಾ ಭೂಮಿಗೌಡರು

೧೯೯೨ರಲ್ಲಿ ಮಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿದೆ.

ಎಂ.ಫಿಲ್ ಮಹಾಪ್ರಬಂಧಗಳು

*** ವೈದೇಹಿಯವರ ಆಯ್ದ ಕಥೆಗಳು ಸ್ತ್ರೀವಾದಿ ನೋಟ**

ಸಂಶೋಧಕರು – ಸುಜಾತ ಎನ್.

ಮಾರ್ಗದರ್ಶಕರು – ಮಂಗಳಾ ಪ್ರಿಯದರ್ಶಿನಿ

ಕಾವ್ಯಮಂಡಲ, ಬೆಂಗಳೂರು

*** ನಾಗವೇಣಿಯವರ ಗಾಂಧಿಬಂದ ಕಾದಂಬರಿ ಸಾಂಸ್ಕೃತಿಕ ಒಳನೋಟಗಳು**

ಸಂಶೋಧಕರು – ಪಿ.ಸಿ. ದಮಯಂತಿ

ಮಾರ್ಗದರ್ಶಕರು – ಗಣನಾಥ ಎಕ್ಕಾರ

ಗೋವಿಂದಪೈ ಸಂಶೋಧಕರು ಕೇಂದ್ರ ಉಡುಪಿ

*** ವೈದೇಹಿಯವರ ಕಥೆಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಧ್ಯಯನ**

ಸಂಶೋಧಕರು – ಕೆ.ಆರ್. ಮಂಜುಳಾ

ಮಾರ್ಗದರ್ಶಕರು – ಕೆ.ಆರ್. ಗಣೇಶ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು

*** ವೈದೇಹಿಯವರ ಕಥೆಗಳಲ್ಲಿ ಸ್ತ್ರೀ ಸ್ವಾತಂತ್ರ್ಯದ ಕಲ್ಪನೆ**

ಸಂಶೋಧಕರು – ಲಾವಣ್ಯ ಎಸ್.ಪಿ.

ಮಾರ್ಗದರ್ಶಕರು – ಟಿ. ವೆಂಕಟೇಶಮೂರ್ತಿ

ಕಾವ್ಯಮಂಡಲ ಬೆಂಗಳೂರು

*** ಗಾಂಧಿಬಂದ ಕಾದಂಬರಿಯ ಒಂದು ಸಾಂಸ್ಕೃತಿಕ ಅಧ್ಯಯನ**

ಸಂಶೋಧಕರು – ವೀಣಾಕುಮಾರ್

ಮಾರ್ಗದರ್ಶಕರು – ವಿಜಯಾ ಸುಬ್ಬರಾಜ್

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು

*** ವೈದೇಹಿಯವರ ಸಾಹಿತ್ಯ ಮತ್ತು ಸ್ತ್ರೀ ಸಂಸ್ಕೃತಿ**

ಸಂಶೋಧಕರು – ಕುಸುಮ ಬಿ.ಎಂ.

ಮಾರ್ಗದರ್ಶಕರು – ಆರ್. ಲಕ್ಷ್ಮೀನಾರಾಯಣ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು

*** ವೈದೇಹಿಯವರ ಕಥಾ ಸಾಹಿತ್ಯ**

ಸಂಶೋಧಕರು – ಸುಜಾತ ಬಿ.

ಮಾರ್ಗದರ್ಶಕರು – ಪಿ. ಬೆಟ್ಟೇಗೌಡ

ಕರ್ನಾಟಕ ಸಂಘ (ರಿ.) ಮಂಡ್ಯ

*** ವೈದೇಹಿಯವರ ಕಥೆಗಳಲ್ಲಿ ಪ್ರಾದೇಶಿಕತೆ**

ಸಂಶೋಧಕರು – ಸಂದೇಶ

ಮಾರ್ಗದರ್ಶಕರು – ವತ್ಸಲ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳ್ಳಿ

*** ವೈದೇಹಿಯವರ ಸಣ್ಣ ಕಥೆಗಳಲ್ಲಿ ಸ್ತ್ರೀಲೋಕ**

ಸಂಶೋಧಕರು – ವಾಹಿನಿ ಎ.ಸಿ.

ಮಾರ್ಗದರ್ಶಕರು – ಪಿ.ಎನ್. ಮಯ್ಯ

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ, ಮಂಗಳೂರು

ಇತರೆ ಕೃತಿಗಳು, ಲೇಖನ ರೂಪದ ಬರಹಗಳು

- ಎಂ. ಮನೋರಮಾ ಭಟ್‌ರವರು ***'ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರು'*** ಎಂಬ ಪುಸ್ತಕವನ್ನು ೧೯೯೭ರಲ್ಲಿ ಸಂಪಾದಿಸಿದ್ದಾರೆ.
- ೧೯೯೯ರಲ್ಲಿ ಪ್ರಕಟವಾದ ***ಲೇಖ-ಲೋಕ೨***ರಲ್ಲಿ (ಕರ್ನಾಟಕ) ಲೇಖಕಿಯರ ಸಂಘ (ರಿ.), ಬೆಂಗಳೂರು) ಕರಾವಳಿಯ ಕಥೆಗಾರ್ತಿಯರಾದ ಪ್ರೇಮಾಭಟ್ ಹಾಗೂ ವೈದೇಹಿಯವರ ಜೀವನ – ಸಾಧನೆಗಳ ಕುರಿತಾದ ಮಾಹಿತಿಗಳಿವೆ.
- ಬಿ. ಜನಾರ್ಧನ ಭಟ್‌ರವರು ***'ದಕ್ಷಿಣ ಕನ್ನಡದ ಶತಮಾನದ ಕಥೆಗಳು'*** ಎಂಬ ಪುಸ್ತಕವನ್ನು ೨೦೦೩ರಲ್ಲಿ ಸಂಪಾದಿಸಿದ್ದಾರೆ.

- ಸುಲತಾ ವಿದ್ಯಾಧರ್ ಅವರ (೨೦೦೯) ***'ಶ್ರೀಮುಡಿ'*** ಎಂಬ ಕರಾವಳಿ ಲೇಖಕಿಯರ ವ್ಯಕ್ತಿಗತ ವಿವರಗಳುಳ್ಳ ಕೃತಿ ಪ್ರಕಟವಾಗಿದೆ.
- ಟಿ.ಪಿ. ಅಶೋಕ ಅವರು ***'ವೈದೇಹಿ ವಾಚಿಕೆ'*** (೨೦೦೯) ಎಂಬ ಕೃತಿಯನ್ನು ಪ್ರಕಟಿಸಿದ್ದು, ಇದರಲ್ಲಿ ವೈದೇಹಿ ಅವರ ಬರವಣಿಗೆಯ ಹಲವು ಆಸಕ್ತಿಗಳನ್ನು ಮತ್ತು ಮಾದರಿಗಳನ್ನು ಪರಿಚಯಿಸಿದ್ದಾರೆ.
- ಎಲ್.ಸಿ. ಸುಮಿತ್ರಾ ಅವರು ***'ನಿರುಕ್ತ'*** (೨೦೦೪) ಎಂಬ ವಿಮರ್ಶಾ ಕೃತಿಯನ್ನು ಪ್ರಕಟಿಸಿದ್ದು, ಇದರಲ್ಲಿ ಪ್ರಸ್ತುತ ಸಂದರ್ಭದಲ್ಲಿ ಲೇಖಕಿಯರ ಅಭಿವ್ಯಕ್ತಿ ಸಾರಾ ಅಬೂಬಕರ್ ಮತ್ತು ಎಚ್. ನಾಗವೇಣಿ ಕರಾವಳಿಯ ಇಬ್ಬರು ಲೇಖಕಿಯರು, ಮಲ್ಲಿನಾಥನ ಧ್ಯಾನ, ಒಂದು ಅವಲೋಕನ ಮುಂತಾದ ವಿಮರ್ಶಾ ಲೇಖನಗಳಿವೆ.
- ಎಲ್.ಸಿ. ಸುಮಿತ್ರಾ ಅವರು ***'ವಿಭಾವ'*** (೧೯೯೭) ಎಂಬ ವಿಮರ್ಶಾ ಕೃತಿಯನ್ನು ಪ್ರಕಟಿಸಿದ್ದು, ಇದರಲ್ಲಿ ಸ್ತ್ರೀ ವಿಶಿಷ್ಟ ಕಾಳಜಿಯ ವೈದೇಹಿಯವರ ಕಥೆಗಳು ಎಂಬ ಲೇಖನದಲ್ಲಿ ವೈದೇಹಿಯವರ 'ಭೂತ', 'ಹಕ್ಕಿಲ್ಲದವರು', 'ಅಕ್ಕು' ಮತ್ತು 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ' ಎಂಬ ಪ್ರಾತಿನಿಧಿಕ ಕಥೆಗಳನ್ನು ಮಾತ್ರ ವಿಶ್ಲೇಷಿಸಿದ್ದಾರೆ.

ಅಧ್ಯಾಯ – ೨

ಸಮಕಾಲೀನ ಕನ್ನಡ ಲೇಖಕಿಯರ ಸಾಹಿತ್ಯ

ವೈದೇಹಿ ಮತ್ತು ಎಚ್. ನಾಗವೇಣಿ ಇವರ ಸಾಹಿತ್ಯ ಕೃತಿ ಸಂದರ್ಭ ಮತ್ತು ಸಮಕಾಲೀನ ಕನ್ನಡ ಲೇಖಕಿಯರ ಸಾಹಿತ್ಯದ ಸ್ವರೂಪ :

ಮಹಿಳಾ ಸಾಹಿತ್ಯದ ಕುಸುರಿ ಕೆಲಸ ತಡವಾಗಿಯೇ ಆರಂಭವಾದರೂ ಕಾದಂಬರಿ ಮಾಧ್ಯಮದ ಮೂಲಕ ಅದು ಬೆಳೆದು ಬಂದಿದ್ದನ್ನು ಗಮನಿಸಬೇಕಾಗುತ್ತದೆ. ಹನ್ನೆರಡನೆಯ ಶತಮಾನದ ವಚನಕಾರ್ತಿಯರ ನಂತರ ಕಾಣಸಿಗುವ ಸಂಚಿಯ ಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮನಂಥ ಕವಿಯಿತ್ರಿಯರನ್ನ ಬಿಟ್ಟರೆ ಮಹಿಳಾ ಸಾಹಿತ್ಯ ಒಂದು ಪರಂಪರೆಯಾಗಿ ಸೃಷ್ಟಿಯಾಗುತ್ತಾ ಬಂದದ್ದು ಕಳೆದ ಶತಮಾನದ ಎರಡು ಮೂರನೆಯ ದಶಕದಿಂದ ಈಚೆಗೆ. ಶಿಕ್ಷಣದಂತಹ ಮೂಲಭೂತ ಸೌಲಭ್ಯದಿಂದ ವಂಚಿತಳಾಗಿ ಕೌಟುಂಬಿಕ ವಲಯಕ್ಕೆ ಮಾತ್ರ ಸೀಮಿತಳಾಗಿದ್ದ ಹೆಣ್ಣಿಗೆ ವಸಾಹತುಶಾಹಿ ಶಿಕ್ಷಣದ ಪ್ರಭಾವದಿಂದ ಅಕ್ಷರ ಸಂಸ್ಕೃತಿಯ ವಲಯಕ್ಕೆ ಬಂದದ್ದೆ ಮುಂದೆ ಅವಳ ಯಶಸ್ಸಿಗೆ ಕಾರಣವಾಯಿತು.

ಒಂದು ಕಾಲಘಟ್ಟದವರೆಗೆ ತಾನು ಬರೆದ ಬರಹಗಳನ್ನೆಲ್ಲ ಅಂದಿನ ಆ ಸಮಾಜದ ಮುಂದಿಡಲು ಹಿಂಜರಿದು ತನ್ನ ಹೆಸರನ್ನೆ ಬಚ್ಚಿಟ್ಟು ಅನಾಮಧೇಯಳಾಗಿ ಅಥವಾ ಯಾರದ್ದೋ ಹೆಸರಿನಲ್ಲಿ ಬರೆಯುತ್ತ ಬಂದ ಹೆಣ್ಣು ಸಾಹಿತ್ಯದ ಲೋಕದಲ್ಲಿ ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳುವುದಕ್ಕೆ ಇಲ್ಲವೇ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವುದಕ್ಕೆ ಎದುರಿಸಿದ ಸವಾಲುಗಳು ಸಾಕಷ್ಟು ಕಠಿಣವಾಗಿಯೇ ಇದ್ದವು. ಹೆಣ್ಣಿನ ಲೌಕಿಕ ವಿಚಾರಗಳಿಗೆ, ಮನಸ್ಸಿನ ಭಾವನೆಗಳಿಗೆ, ಕನಸುಗಳಿಗೆ, ಮಾನವ ಸಹಜ ನಡವಳಿಕೆಗಳಿಗೆ ಲಿಂಗದ ಬಣ್ಣ ಹಚ್ಚಿ ಗೋಳಿನ ಕತೆ ಎಂದು ಟೀಕಿಸಿ ನಕ್ಕು ನಿರ್ಲಕ್ಷಿಸಿದ್ದುಂಟು. ಅಂತ ಎಲ್ಲಾ ಅಡ್ಡಿ ಆತಂಕಗಳನ್ನು ಬಹುಸಮರ್ಥವಾಗಿ ಎದುರಿಸಿದ್ದೆ ಒಂದು ಸಾಧನೆ. ಇಂಥ ಸಾಧನೆಯ ಹಾದಿಯಲ್ಲಿ ಮೊದಲು ಕಾಣಸಿಗುವ ಹೆಸರು ನಂಜನಗೂಡಿನ ತಿರುಮಲಾಂಬಾ ಅವರದು.

ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲೇ ನಂಜನಗೂಡಿನ ತಿರುಮಲಾಂಬಾ ಮತ್ತು ಬೆಂಗಳೂರಿನ ಆರ್. ಕಲ್ಯಾಣಮ್ಮ ಬರೆಯಲು ತೊಡಗಿಸಿಕೊಂಡಿದ್ದರು. ಮಹಿಳೆಯರನ್ನೆ ಕೇಂದ್ರ ಪಾತ್ರವಾಗಿಸಿಕೊಂಡ ಇವರು ಸಮಾಜ ಸುಧಾರಣೆಯನ್ನೆ ಕಾದಂಬರಿಯ ಮುಖ್ಯ ಧ್ಯೇಯವಾಗಿಸಿಕೊಂಡಿದ್ದರು. ತಿರುಮಲಾಂಬಾ ಅವರು 'ಸುಶೀಲೆ' (೧೯೧೩), 'ಮಾತೃನಂದಿನಿ' ನಂತರ ಸುಮಾರು ಹನ್ನೆರಡಕ್ಕೂ ಹೆಚ್ಚಿನ ಕಾದಂಬರಿಗಳನ್ನು ಸುಮಾರು ಐವತ್ತರ ದಶಕದವರೆಗೂ

ಬರೆದರು. ತಿರುಮಲಾಂಬಾ ಕನ್ನಡದ ಮೊದಲ ಲೇಖಕಿ ಮತ್ತು 'ಸತೀ ಹಿತೈಷಿಣಿ ಗ್ರಂಥಮಾಲೆ' ನಡೆಸಿದ ಮೊದಲ ಪ್ರಕಾಶಕಿಯೂ ಹೌದು. 'ಸುಶೀಲೆ' ಕಾದಂಬರಿ ಪರಿಶೀಲಿಸಿ ನೋಡಿ ದಾಂಪತ್ಯವನ್ನು, ವಿದ್ಯಾವಂತ ಹೆಣ್ಣೊಬ್ಬಳು ಅನುಭವಿಸಬೇಕಾದ ಕಷ್ಟವನ್ನು ಕುರಿತದ್ದಾಗಿದೆ. 'ಮಾತೃನಂದಿನಿ'ಯಲ್ಲಿ ತಾತ್ಕಾಲೀನ ಸ್ತ್ರೀಯರ ಸಮಸ್ಯೆಗಳಾದ ಬಾಲ್ಯವಿವಾಹ, ವರದಕ್ಷಿಣೆ, ಸ್ತ್ರೀವಿದ್ಯಾಭ್ಯಾಸ ವಿರೋಧ, ಮದುವೆಯ ದುಂದುವೆಚ್ಚವನ್ನು ವಿರೋಧಿಸುವ ಗಟ್ಟಿ ಪಾತ್ರವಾಗಿ ನಂದಿನಿಯನ್ನು ತರುತ್ತಾರೆ.

ಆರ್. ಕಲ್ಯಾಣಮ್ಮ ಅವರ ರಚನೆಯ ಮೊದಲ ಕೃತಿಗಳೆಲ್ಲ ಈ ಹಿಂದಿನ ರೂಪಶೈಲಿಗಳನ್ನೆ ಹೋಲುವಂತವಾದರೂ ನಂತರದಲ್ಲಿ ಬಂದ ಸಾಹಿತ್ಯ ಕೃತಿಗಳಲ್ಲಿ ಸಂಸ್ಕೃತಿಯ ಅಭಿವ್ಯಕ್ತಿ ಹೆಚ್ಚು ವಿಕಾಸವಾಗಿದ್ದನ್ನು ಕಾಣಬಹುದಾಗಿದೆ. ಅಂದು ಪ್ರಚಲಿತದಲ್ಲಿದ್ದ ಸಾಮಾಜಿಕ ಸುಧಾರಣಾ ಚಳುವಳಿಗಳಿಂದ ಪ್ರಭಾವಿತರಾಗಿ ಮಹಿಳೆಯ ಮೇಲೆ ನಡೆಯುತ್ತಿದ್ದ ಸಾಂಪ್ರದಾಯಿಕ ಶೋಷಣೆಗಳನ್ನು ಖಂಡಿಸುತ್ತ ಮಹಿಳಾಪರ ಧ್ವನಿಎತ್ತುವ ಮೊದಲ ಪ್ರಯತ್ನ ಮಾಡಿದರು. ಇವರ 'ಪ್ರಿಯಂವದಾ', 'ನಿರ್ಭಾಗ್ಯವನಿತೆ' ಎರಡು ಸಾಮಾಜಿಕ ಕಾದಂಬರಿಗಳಾಗಿದ್ದು 'ನಿರ್ಮಲಾ', 'ಬ್ಯಾರಿಸ್ಟರ್ ರಾಮಚಂದ್ರನ್', 'ಇಪ್ಪತ್ತನೆಯ ಶತಮಾನದ ಅಳಿಯ', 'ಕಪ್ಪಲ್ಲ ಕಬ್ಬು' ನಾಟಕಗಳ ಮೂಲಕ ಸಾಮಾಜಿಕ ವಿಮರ್ಶೆಗೆ ತೊಡಗಿದಂತಿದೆ. ಕಲ್ಯಾಣಮ್ಮನವರು ತಮ್ಮ ಸಮಕಾಲೀನ ವಸ್ತುಗಳಾದ ವರದಕ್ಷಿಣೆ, ಬಾಲ್ಯವಿವಾಹ, ವಿಧವಾ ಸಮಸ್ಯೆಗಳಿಗೆ ಸ್ಪಂದಿಸಿ ಪ್ರಗತಿಪರ ಚಿಂತನೆಗಳನ್ನು ತಮ್ಮ ಕೃತಿಗಳಲ್ಲಿ ತಂದಿದ್ದಾರೆ.

ಇಪ್ಪತ್ತನೆ ಶತಮಾನದ ಮೂರನೇ ದಶಕದಲ್ಲೆ ಕಥಾಸಾಹಿತ್ಯದಲ್ಲಿ ತಮ್ಮ ಹೆಜ್ಜೆಗುರುತುಗಳನ್ನು ಮೂಡಿಸಿದ ಲೇಖಕಿಯರಲ್ಲಿ ಕೊಡಗಿನ ಗೌರಮ್ಮ, ಶ್ಯಾಮಲಾ ಬೆಳಗಾಂವಕರ್, ಸರಸ್ವತಿಬಾಯಿ ರಾಜೆವಾಡೆಯವರ ಹೆಸರುಗಳನ್ನು ಪ್ರಮುಖವಾಗಿ ಗುರುತಿಸಬಹುದಾಗಿದೆ.

ಎಳೆವಯಸ್ಸಿನ ಕೊಡಗಿನ ಗೌರಮ್ಮ ತಮ್ಮ ಸಾಹಿತ್ಯಾಭಿವ್ಯಕ್ತಿಗೆ ಸಣ್ಣಕತೆಗಳ ರೂಪವನ್ನು ಆರಿಸಿಕೊಂಡು ಚಾರಿತ್ರಿಕವಾಗಿ ಮತ್ತು ವ್ಯಕ್ತಿಗತ ಪ್ರತಿಭೆಯಿಂದಾಗಿ ಕನ್ನಡದ ಕಥಾಸಾಹಿತ್ಯದಲ್ಲಿ ಪ್ರಮುಖ ಸ್ಥಾನವನ್ನು ಪಡೆದವರಾಗಿದ್ದಾರೆ. ಲಿಂಗ ಅಸಮಾನತೆಯನ್ನು ಹೆಚ್ಚು ನಿಖರವಾಗಿ ಮತ್ತು ಕಲಾತ್ಮಕವಾಗಿ ಅಭಿವ್ಯಕ್ತಿಸಿದ ಲೇಖಕಿಯರಲ್ಲಿ ಗೌರಮ್ಮ ವಿಶಿಷ್ಟಸ್ಥಾನ ಪಡೆಯುತ್ತಾರೆ. ಇವರ ಮೊಟ್ಟಮೊದಲ ಕಥೆ 'ಪುನರ್ವಿವಾಹ', ಕತೆಗಾರ್ತಿ ತಮ್ಮ ಮೊದಲ ಪ್ರಯತ್ನದಲ್ಲೆ ಮರುಮದುವೆಯ ಪ್ರಸ್ತಾಪ ಮಾಡುತ್ತಾರೆ. 'ಅಪರಾಧಿ ಯಾರು?' ಕತೆಯಲ್ಲಿ ಲಿಂಗ

ಅಸಮಾನತೆಯ ಬಗ್ಗೆ ಹೇಳುತ್ತಾ ಸಮಾಜದ "ದ್ವಿಸ್ತರ ನೀತಿ"ಯನ್ನು ಪ್ರಶ್ನಿಸುತ್ತಾರೆ. 'ವಾಣಿಯ ಸಮಸ್ಯೆ'ಯಲ್ಲಿ ಸ್ತ್ರೀಪರವಾದ ನಿಲುವಿದೆ. 'ಅವಳ ಭಾಗ್ಯ', ಪ್ರಾಯಶ್ಚಿತ, 'ಅದೃಷ್ಟದ ಆಟ' ಇವರ ಇತರ ಕಥೆಗಳು.

ಉತ್ತರ ಕರ್ನಾಟಕದ ಮೊದಲ ಕತೆಗಾರ್ತಿಯೆಂಬ ಕೀರ್ತಿಗೆ ಪಾತ್ರರಾದ ಶ್ರೀಮತಿ ಶ್ಯಾಮಲದೇವಿ ಬೆಳಗಾವ್‌ಕರ್ ನವೋದಯ ಕಥಾಸಾಹಿತ್ಯ ಸಂದರ್ಭದಲ್ಲಿ ಅಪರೂಪದ ಹೆಸರಾಗಿ ನಿಲ್ಲುತ್ತಾರೆ. ಪ್ರಚಲಿತ ಸಾಮಾಜಿಕ ನಂಬಿಕೆ, ಮೌಲ್ಯಗಳನ್ನು ಹೆಚ್ಚು ಚಿಕಿತ್ಸಕ ದೃಷ್ಟಿಯಿಂದ ನೋಡಿದ ಮತ್ತು ಅದನ್ನು ಕಲಾತ್ಮಕವಾಗಿ ರೂಪಿಸಿದ ಹಿರಿಮೆ ಶ್ಯಾಮಲದೇವಿಯವರದು. ಶ್ಯಾಮಲ ಅವರ "ಕಂತಿಯ ದೇಶಾಂತರ" ಕತೆಯಲ್ಲಿ ಗಂಡನ ಕಾಟ ತಾಳಲಾರದೆ ಕಂತಿ ಅವನನ್ನು ಬಿಟ್ಟು ಹೋಗುತ್ತಾಳೆ. ತನ್ನ ದುಡಿಮೆಯಿಂದಲೇ ತನ್ನ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯ ಮತ್ತು ದುಡಿಮೆಯ ಮಹತ್ವದಿಂದಲೇ ವ್ಯಕ್ತಿತ್ವಕ್ಕೊಂದು ಅರ್ಥ ಬರುವುದು ಎಂಬ ನಂಬಿಕೆಯನ್ನು ಹಾಗೂ ಜೀವನ ಸಿದ್ಧಾಂತವನ್ನು ಶ್ಯಾಮಲ ಅವರ ಕತೆಗಳ ಮೂಲಕ ಚಿತ್ರಿಸುತ್ತಾರೆ.

ನವೋದಯ ಸಾಹಿತ್ಯದ ಮೊದಲ ಹಾಗೂ ಬಹುಮುಖ್ಯ ಕವಯಿತ್ರಿ ಬೆಳಗೆರೆ ಜಾನಕಮ್ಮ. ಇವರ ಕವಿತೆಗಳು ಪ್ರಾಮಾಣಿಕ ಅಭಿವ್ಯಕ್ತಿಯಿಂದಾಗಿ ಹೆಚ್ಚು ಆತ್ಮೀಯವಾಗುತ್ತದೆ. ಸ್ತ್ರೀ ಸಂವೇದನೆಯ ಮೊಟ್ಟಮೊದಲ ಎಳೆಗಳನ್ನು ಇವರ ಕಾವ್ಯಗಳಲ್ಲಿ ಗುರುತಿಸಬಹುದಾಗಿದೆ. ಹಲವಾರು ಭಕ್ತಿಗೀತೆಗಳನ್ನು ಜಾನಕಮ್ಮ ಬರೆದಿದ್ದರೂ ಸಾಮಾಜಿಕ ಅನ್ಯಾಯವನ್ನು ಕುರಿತು ಬರೆಯುವಾಗ ಅವರ ಲೇಖನಿ ಹರಿತವಾಗುತ್ತದೆ.

ಕಸಕಿಂತ ಕಡೆಯಾಯ್ತು
ಹೆಣ್ಣು ಜನ್ಮವು ನಿನಗೆ
ಈ ಭಾರ ಹೊರಿಸುವುದಕೆ (ಚಂಡ ಶಾಸನ)[1]

ಜಾನಕಮ್ಮ 'ತಮ್ಮ ಕವನಗಳಲ್ಲಿ ಬಳಸಿರುವ ಲಯಗಳು, ಬಂಧ, ರೂಪಕ ಶಕ್ತಿ ನವೋದಯ ಕಾಲದ ಶ್ರೇಷ್ಠ ಕವನಗಳಿಗೆ ಸರಿಸಾಟಿಯಾಗಿ ನಿಲ್ಲಬಲ್ಲವಾಗಿವೆ' ಎನ್ನುತ್ತಾರೆ ಕವಯಿತ್ರಿ ಸ. ಉಷಾ.[2]

ಲೇಖಕಿಯರ ಸಾಹಿತ್ಯವನ್ನು ನವೋದಯ, ನವ್ಯ, ದಲಿತ ಬಂಡಾಯ ಸ್ತ್ರೀವಾದಿ ಎಂದು ವಿಂಗಡಿಸುವ ಅಗತ್ಯವಿದ್ದಂತಿಲ್ಲ ಕಾರಣ ಏಕಕಾಲದಲ್ಲಿ ಎಲ್ಲಾ ಬಗೆಯ ಕೃತಿಗಳು ರಚನೆಯಾಗಿದ್ದವು. ಈಗಲೂ ಭಿನ್ನವಾಗಿ ಬರೆಯುವ ಲೇಖಕಿಯರು ಒಂದೇ ಕಾಲಘಟ್ಟದಲ್ಲಿ ಕಂಡು ಬರುತ್ತಾರೆ. ಅಧ್ಯಾಯದ ಮುಂದಿನ ಹಂತಗಳಲ್ಲಿ ಈ ಅಂಶವನ್ನು ಕಾಣಬಹುದಾಗಿದೆ.

ನವ್ಯ ಸಾಹಿತ್ಯ ಚಳುವಳಿ ನಿಜವಾಗಿಯೂ 'ನವ್ಯ'ವಾಗಿರಲಿಲ್ಲ ಮಹಿಳಾ ವಲಯಕ್ಕೆ ಅದೊಂದು ಮುಚ್ಚಿಟ್ಟ ವ್ಯವಸ್ಥೆಯೇ ಆಗಿತ್ತು. ಹಾಗಾಗಿ ಅಲ್ಲಿ ಮಹಿಳೆಯರು ಮತ್ತು ದಲಿತರ ಗಟ್ಟಿ ಧ್ವನಿ ಅಲ್ಲಿರಲಿಲ್ಲ. ಬಹುಶಃ ನವ್ಯ ಸಾಹಿತ್ಯದ ಅಬ್ಬರದ ಭರಾಟೆಗೆ ಹೆಣ್ಣು ಬರೆಯಲು ಅಂಜಿರಬೇಕು. ನವ್ಯದ ನಂತರದ ಬಂಡಾಯ ಸಾಹಿತ್ಯ ಚಳುವಳಿಯಲ್ಲಿ ಆದಂತೆ ಹೆಣ್ಣಿನ, ದಲಿತರ ಆತ್ಮವಿಶ್ವಾಸವನ್ನು ಹೆಚ್ಚಿಸುವ ಕಾರ್ಯ ಆಗಲಿಲ್ಲ. ಅಥವಾ ಮುಂಚಿನ ನವೋದಯ ಸಾಹಿತ್ಯದ ಸಂದರ್ಭದಲ್ಲಿದ್ದ ಪ್ರಶಾಂತತೆಯೂ ಇರಲಿಲ್ಲ. ಹಾಗಾಗಿ ೬೦-೭೦ರ ದಶಕದಲ್ಲಿ ತಮ್ಮ ಅನುಭವಗಳನ್ನು ತಾವು ಕಂಡದ್ದನ್ನು ಬರಹಕ್ಕಿಳಿಸಿದ ಲೇಖಕಿಯರು ಬಹಳ ಕಡಿಮೆ. ಇಂತಹ ದಿನಗಳಲ್ಲಿ ಕತೆಗಳನ್ನು ಬರೆದ ರಾಜಲಕ್ಷ್ಮಿ ಎನ್. ರಾವ್ ಮತ್ತು ವೀಣಾಶಾಂತೇಶ್ವರ ಅವರ ಅಭಿವ್ಯಕ್ತಿ ವಿಧಾನದ ಅಧ್ಯಯನ ಕುತೂಹಲ ಹುಟ್ಟಿಸುತ್ತದೆ.

ಕತೆಯ ತಂತ್ರ ಶೈಲಿಯಲ್ಲಿ ರಾಜಲಕ್ಷ್ಮಿಯವರ ಕತೆಗಳಿಗೆ ರಾಮಚಂದ್ರಶರ್ಮ ಹಾಗೂ ಅನಂತಮೂರ್ತಿಯವರ ಪ್ರಭಾವ ಬೀರಿದಂತೆನಿಸಿದರೂ, ರಾಜಲಕ್ಷ್ಮಿಯವರ ಸ್ವಂತಿಕೆಗೆ ಧಕ್ಕೆ ಬರುವುದಿಲ್ಲ. ವಸ್ತುವಿನ ನಿರ್ವಹಣೆಯಲ್ಲಿ ಇವರ ಕತೆಗಳಲ್ಲಿ ಬರುವ ಹೆಣ್ಣುಗಳ ಜೀವನ ಸರಳವಾದುದ್ದಲ್ಲ ಮತ್ತು ಜೀವನವೆನ್ನುವುದು ಮದುವೆಯೊಂದಿಗೆ ಮುಗಿದು ಹೋಗುವಂತದ್ದಲ್ಲ. ಅವರ ಚಡಪಡಿಕೆ, ದುಗುಡ ನಿರಂತರವಾದದ್ದು ಎಂಬುದಕ್ಕೆ ಅವರ "ಸಂಗಮ" ಕತೆ ಸಾಕ್ಷಿಯಾಗುತ್ತದೆ.

ರಾಜಲಕ್ಷ್ಮಿಯವರ ಸಂಗಮ, ವೈಶಾಖ ಶುದ್ಧ ಪೂರ್ಣಿಮ, ಕಲ್ಯಾಣಿ ಕತೆಗಳ ನಾಯಕಿಯರು ಸಾಂಪ್ರದಾಯಿಕ ಕುಟುಂಬದಿಂದ ಬಂದವರಾದರೂ ಸ್ವತಂತ್ರವಾಗಿ ಚಿಂತಿಸುವ ಹಪಾಹಪಿ ಇರುವ ಆಯ್ಕೆಯ ಸ್ವಾತಂತ್ರ್ಯ ಪಡೆದವರು. ಒಟ್ಟಾರೆ ನಿಜಕ್ಕೂ ಆಧುನಿಕ ಮನೋಧರ್ಮದ ಹೆಣ್ಣುಗಳನ್ನು ಇವರ ಕತೆಗಳಲ್ಲಿ ಕಾಣಬಹುದು.

ನವ್ಯ ಚಳುವಳಿಯ ಆರಂಭದಲ್ಲಿ ಬರೆದ ರಾಜಲಕ್ಷ್ಮಿ ಬರೆದದ್ದು ಬಹುಕಡಿಮೆ. ಆದರೆ ವೀಣಾ ಶಾಂತೇಶ್ವರ ನವ್ಯ ಚಳುವಳಿಯ ತಾರಕದ ದಿನಗಳಲ್ಲಿ ಬರೆದವರು. ಬಹುಶಃ ವೀಣಾ ನವ್ಯ ಪುರುಷ ಲೇಖಕರು ಸೃಷ್ಟಿಸಿದ ಹೆಣ್ಣಿನ ಪಾತ್ರಗಳಿಗೆ ತದ್ವಿರುದ್ಧವಾದ ಪಾತ್ರಗಳನ್ನು ಸೃಷ್ಟಿಸಬೇಕೆಂಬ ಹಠದಿಂದ ಬರೆದಂತೆ ಕಾಣುತ್ತದೆ. ಗಂಡು ಹೆಣ್ಣಿನ ನಡುವಣ ಸಂಬಂಧವನ್ನು ಅದರಿಂದ ಉಂಟಾಗುವ ಸಂಘರ್ಷವನ್ನು ವೀಣಾ ತಮ್ಮ ಕಾದಂಬರಿಯಲ್ಲಿ ನಿರ್ವಹಿಸಿರುವ ರೀತಿ ಕೂಡಾ ನಮ್ಮ ಪುರುಷ ಲೇಖಕರಿಗಿಂತ ಭಿನ್ನವಾಗಿದೆ. ಇವರ ಎರಡೂ ಕಾದಂಬರಿಗಳು ಗಂಡಿನ ಸೂಕ್ಷ್ಮವಾದ ನಾಜೂಕಾದ ಕಾರ್ಯವನ್ನು ಹೇಳುತ್ತವೆ. ಹಾಗೇ ಕುತೂಹಲದ ಸಂಗತಿ ಎಂದರೆ

'ವಿವಾಹದ' ಬಗ್ಗೆ ಅಪನಂಬಿಕೆ ವ್ಯಕ್ತಪಡಿಸುತ್ತವೆ. ವಿವಾಹ ಹೆಣ್ಣಿನ ವ್ಯಕ್ತಿತ್ವವನ್ನು ಆಕೆಯ ಆಯ್ಕೆಯ ಸ್ವಾತಂತ್ರ್ಯವನ್ನು ನಾಶಪಡಿಸುತ್ತವೆ ಎಂಬ ಭಾವನೆಯನ್ನು ಮೂಡಿಸುತ್ತವೆ.

ನಿರ್ಭೀತ ಅಭಿವ್ಯಕ್ತಿಯ ಕಥೆ, ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯ ಸಂವೇದನೆಯನ್ನು ವಿಸ್ತರಿಸಿದವರು ವೀಣಾಶಾಂತೇಶ್ವರ, ಕನ್ನಡ, ಇಂಗ್ಲೀಷ್, ಹಿಂದಿ, ಮರಾಠಿ ಸಾಹಿತ್ಯದ ಗಂಭೀರ ಓದುಗರಾಗಿರುವ ವೀಣಾ – ಅನುವಾದ, ಸಂಪಾದನೆ, ವಿಮರ್ಶಾ ಕ್ಷೇತ್ರಗಳಲ್ಲೂ ಕೆಲಸ ಮಾಡಿದವರು. ಜೊತೆಗೆ ತಮ್ಮ ಪ್ರೀತಿಯ ಶಿಕ್ಷಣ ಕ್ಷೇತ್ರದಲ್ಲಿ ನಲವತ್ತು ವರ್ಷಗಳಷ್ಟು ಸುದೀರ್ಘ ಕಾಲ ಇಂಗ್ಲೀಷ್ ಸಾಹಿತ್ಯ ಬೋಧಿಸಿದವರು. ಐದು ದಶಕಗಳಿಗೂ ಹೆಚ್ಚಿನ ಅವಧಿಯ ತಮ್ಮ ಬರವಣಿಗೆಯ ಬದುಕು ಸಾಗಿಸುತ್ತಿರುವ ವೀಣಾ ಕನ್ನಡದ ಅನನ್ಯ ಲೇಖಕಿ.

ಅರವತ್ತರ ದಶಕದಲ್ಲಿ ಧಾರವಾಡದಲ್ಲಿ ನವ್ಯದ ಗಾಳಿ ಬಲವಾಗಿ ಬೀಸುತಿತ್ತು. ಒಂದೆಡೆ ಶಂಬಾ, ಬೇಂದ್ರೆ ಸಾಕಷ್ಟು ಪ್ರಭಾವಶಾಲಿಗಳಾಗಿಯೇ ಇದ್ದರು. ಇನ್ನೊಂದೆಡೆ ಬಸವರಾಜ ಕಟ್ಟೀಮನೆಯವರೂ ಇದ್ದರು. ಆದರೆ ವೀಣಾ ಅವರನ್ನು ತೀವ್ರವಾಗಿ ಸೆಳೆದದ್ದು ನವ್ಯ ವಿಚಾರಧಾರೆ. ಜಿ.ಎಸ್. ಅಮೂರ, ಡಾ. ಶಂಕರ ಮೊಕಾಶಿ ಪುಣೇಕರ, ಡಾ. ಶಾಂತಿನಾಥ ದೇಸಾಯಿ ಅವರಂಥ ಲೇಖಕರು – ವಿಮರ್ಶಕರು ಜೊತೆಗೆ ಅಡಿಗರು, ಅನಂತಮೂರ್ತಿ, ಲಂಕೇಶ, ಸುಮತೇಂದ್ರ ನಾಡಿಗ ಮುಂತಾದವರ ಒಡನಾಟವಿತ್ತು.

ವೀಣಾ ಅವರ ತಂದೆ–ತಾಯಿ ಇಬ್ಬರಿಗೂ ಸ್ತ್ರೀ ಶಿಕ್ಷಣ, ಸ್ತ್ರೀ ಸ್ವಾತಂತ್ರ್ಯ, ಸಮಾನತೆ ಇತ್ಯಾದಿಗಳ ಬಗ್ಗೆ ಆಸಕ್ತಿ ಇದ್ದುದರಿಂದ ಇವರಿಗೆ ಚಿಕ್ಕಂದಿನಿಂದಲೇ ನಮ್ಮ ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಅನ್ಯಾಯ, ಶೋಷಣೆ, ದಬ್ಬಾಳಿಕೆ ಬಗ್ಗೆ ಆಕ್ರೋಶವಿತ್ತು. ಆಳವಾಗಿ ಬೇರೂರಿದ್ದ ಅನಿಷ್ಟ ಸಾಮಾಜಿಕ ಸಂಪ್ರದಾಯಗಳ ಬಗ್ಗೆ ವಿರೋಧವಿತ್ತು. ಸ್ತ್ರೀ ಶೋಷಣೆಯ ಬಗ್ಗೆ ಪ್ರತಿಭಟನೆಯ ಧ್ವನಿ ಇತ್ತು. ಅನೇಕ ವರ್ಷಗಳ ನಂತರ ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ, ಸ್ತ್ರೀವಾದಿ ವಿಮರ್ಶೆ ಇತ್ಯಾದಿ ಕುರಿತು ಗಂಭೀರ ಚಿಂತನೆ ಶುರುವಾಯಿತು.

ಮಹಿಳಾ ಸಾಹಿತ್ಯಕ್ಕೆ ಇಲ್ಲಿಯವರೆಗೂ ಪುರುಷ ವಿಮರ್ಶಕರಿಂದ ಅನ್ಯಾಯವಾಗಿದೆ ನಮ್ಮ ಸಾಹಿತ್ಯದ ಪುನರ್ವಿಮರ್ಶೆಯನ್ನು ಮಹಿಳಾಪರ ದೃಷ್ಟಿಯಿಂದ ನಾವೇ ಮಾಡಬೇಕು ಅಂದರೇನೇ ಮಹಿಳಾ ಸಾಹಿತ್ಯಕ್ಕೆ ನ್ಯಾಯ ದೊರಕುವುದು ಎಂಬ ಧೋರಣೆ ವೀಣಾ ಅವರದ್ದು.

ಕನ್ನಡದಲ್ಲಿ ಮಹಿಳಾ ಸಾಹಿತ್ಯವೆಂದರೆ ಜನಪ್ರಿಯ ಸಾಹಿತ್ಯವೆಂದು, ಅಡುಗೆ ಮನೆ ಸಾಹಿತ್ಯವೆಂದು ಸಾಮಾನ್ಯವಾಗಿ ವಿಮರ್ಶಕರು ಅವಗಣನೆ ಮಾಡುತ್ತಿದ್ದ ಕಾಲವೂ ಒಂದಿತ್ತು. ವೀಣಾ ಅವರ ಪ್ರಾರಂಭದ ಬರವಣಿಗೆಯಲ್ಲಿನ ಮುಕ್ತತೆಯನ್ನು ನಾಚಿಕೆಗೇಡುತನ ಅಂತಲೇ ಸಂಪ್ರದಾಯವಾದಿಗಳು ವಿಶ್ಲೇಷಿಸಿದ್ದರು.

"ದಕ್ಷ ಆಡಳಿತ, ಪ್ರಾಮಾಣಿಕತನದಿಂದ ಕಾಲೇಜಿನ ಪ್ರಿನ್ಸಿಪಾಲ್ ಆಗಿ ಕೆಲಸ ನಿರ್ವಹಿಸಿದ ವೀಣಾ ಕೆಲವು ಕಥೆಗಳನ್ನು 'ಗಂಡಸರು', 'ಶೋಷಣೆ ಬಂಡಾಯ ಇತ್ಯಾದಿ' ಎರಡು ಕಾದಂಬರಿಗಳನ್ನು ಹಲವು ಲೇಖನಗಳನ್ನು ಬರೆದಿದ್ದಾರೆ. ಖ್ಯಾತ ಕಲಾವಿದೆ ಯಮುನಾಮೂರ್ತಿಯವರು ಇವರ ಕತೆಗಳನ್ನು ರೇಡಿಯೋ ನಾಟಕಗಳನ್ನಾಗಿ ರೂಪಾಂತರಿಸಿದ್ದಾರೆ. ವೀಣಾ ಅವರಿಗೆ ನಿಜವಾದ ಖುಷಿ, ಸಂತೃಪ್ತಿ ನೀಡಿದ ಕೆಲಸ ಅನುವಾದದ್ದು, ಹಿಂದಿಯಿಂದ ಅಜ್ಞೇಯರ 'ನದೀ ಕೆ ದ್ವೀಪ' ಕನ್ನಡಕ್ಕೆ ಅನುವಾದಿಸಿದ್ದಾರೆ. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ ಹಾಗೂ ಮರಾಠಿಯ ಕವಿತಾ ಮಹಾಜನ ಅವರ ಭಿನ್ನ ಕಾದಂಬರಿಯನ್ನು ಅನುವಾದಿಸಿದ್ದಾರೆ. ನಿಜವಾದ ಶ್ರೇಷ್ಠ ಕೃತಿಗಳು ಅನುವಾದಗೊಂಡಾಗ ಅನುವಾದಕರಿಗೂ ಸೃಜನಶೀಲ ಪ್ರಕ್ರಿಯೆಯ ಒರಿಜಿನಲ್ ಅನುಭವವನ್ನು ತಂದು ಕೊಡುತ್ತವೆ ಎನ್ನುತ್ತಾರೆ ವೀಣಾ".[೩]

ಪ್ರಗತಿಶೀಲ ಸಾಹಿತ್ಯ ಚಳುವಳಿಯ ಒಂದು ಭಾಗವಾಗಿ ಗುರುತಿಸಲ್ಪಡದಿದ್ದರೂ ಆ ಅವಧಿಯಲ್ಲಿ ಬರೆಯತೊಡಗಿದ ಹಲವಾರು ಲೇಖಕಿಯರಲ್ಲಿ ತೀವ್ರ ರೀತಿಯಲ್ಲಿ ತಮ್ಮ ಸಾಮಾಜಿಕ ಪರಿಸ್ಥಿತಿಯ ಅರಿವು ಪ್ರಕಟಗೊಂಡಿದೆ. ಎರಡನೇ ಹಂತದಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬರೆದ ತ್ರಿವೇಣಿ, ಅನುಪಮ ನಿರಂಜನ, ಎಚ್.ವಿ. ಸಾವಿತ್ರಮ್ಮ, ಗೀತಾ ಕುಲಕರ್ಣಿ ಮೊದಲಾದವರು ಆಧುನಿಕ ವಿದ್ಯಾಭ್ಯಾಸವನ್ನು ಪಡೆದು ಸ್ವಂತಿಕೆಯನ್ನು ಬೆಳಸಿಕೊಂಡ ಲೇಖಕಿಯರು. ಸಾಧನೆಯತ್ತ ಮುಖಮಾಡಿದ ಸ್ತ್ರೀಯ ವ್ಯಕ್ತಿತ್ವದ ಭಿನ್ನ ಆಯಾಮಗಳನ್ನು ಚಿತ್ರಿಸುವ ಜೊತೆ ಜೊತೆಯಲ್ಲಿಯೇ ಸ್ತ್ರೀ-ಪುರುಷ ಸಂಬಂಧಗಳು ಪುರುಷ ಪ್ರಧಾನ ವ್ಯವಸ್ಥೆಯೊಳಗೆ ತಳೆಯುವ ವಿಷಮ ಸ್ವರೂಪಗಳತ್ತ ಹೆಚ್ಚಿನ ಜಾಗೃತಿಯನ್ನು ಪ್ರಕಟಿಸುತ್ತವೆ.

ಮೂವತ್ತನಾಲ್ಕು ವರ್ಷಗಳಲ್ಲಿ ಇಪ್ಪತ್ತು ಕಾದಂಬರಿಗಳನ್ನು, ಮೂರು ಕಥಾ ಸಂಕಲನಗಳನ್ನು ಬರೆದ ತ್ರಿವೇಣಿಯವರ ಬರಹಗಳಲ್ಲಿ ಹೆಣ್ಣಿನ ಸ್ವತಂತ್ರ, ವ್ಯಕ್ತಿತ್ವದ ಆಸೆ, ಆಕಾಂಕ್ಷೆ ಅವುಗಳ ಹತ್ತಿಕ್ಕುವಿಕೆಯಿಂದ ಬದುಕು ಮುರುಟುವ ಬಗೆಯ ಚಿಂತನೆಗಳು ಕಾಣಿಸುತ್ತವೆ. ತ್ರಿವೇಣಿ ಬರೆಯ ತೊಡಗಿದ ಕಾಲಕ್ಕೆ ಈ ವಸ್ತುಗಳೆಲ್ಲ ಹಳತಾಗಿಯೆ ಇತ್ತು. ಆದರೆ ಹಲವಾರು ಸಾಮಾಜಿಕ ಸಮಸ್ಯೆಗಳನ್ನು ವಸ್ತುವಾಗಿಸಿಕೊಂಡು ಚಿತ್ತಾಕರ್ಷಕ ರೀತಿಯಲ್ಲಿ ಸರಳ, ಚತುರ ಭಾಷೆಯಲ್ಲಿ ಕೊಂಚ ಸ್ತ್ರೀ ಪಕ್ಷಪಾತತೆಯನ್ನು ದಿಟ್ಟವಾಗಿಯೇ ಪ್ರಕಟಿಸುತ್ತಾ ಅವರು ಬರೆದದ್ದು ವಿಶೇಷವಾಗಿ

ಜನರ ಗಮನವನ್ನು ಸೆಳೆಯಿತು. ಹಾಗೆಯೇ ಇಂತಹ ನಿಲುವನ್ನು ತಳೆಯುವುದು ಅನಿವಾರ್ಯವೂ ಆಗಿತ್ತು.

ತ್ರಿವೇಣಿಯವರು ಬಹುಮಟ್ಟಿಗೆ ಚಿತ್ರಿಸಿರುವ ಸ್ತ್ರೀ ಸಮಸ್ಯೆಗಳ ಮಾನಸಿಕ ಸಹಾನುಭೂತಿಯ ಮೂಲಕ ಗ್ರಹಿತವಾದವು. ಸಾಂಸ್ಕೃತಿಕ ಪರಿಸರ ವ್ಯಕ್ತಿಯಲ್ಲಿ ಬಿತ್ತುವ ನಂಬಿಕೆಗಳು ಹೇಗೆ ತಲೆಮಾರಿನಿಂದ ತಲೆಮಾರಿಗೆ ರವಾನೆಯಾಗುತ್ತವೆ ಮತ್ತು ಹೀಗೆ ರವಾನಿಸುವ ಪ್ರಮುಖ ವಾಹಕಗಳು ಸ್ತ್ರೀಯರೆ ಆಗಿರುತ್ತಾರೆ ಎಂಬುದನ್ನು ತ್ರಿವೇಣಿ ಗುರುತಿಸುತ್ತಾರೆ. ಇವರ 'ಕೀಲುಗೊಂಬೆ' ಕಾದಂಬರಿಯಲ್ಲಿ ಬರುವ ಅಜ್ಜಿ ತಾಯಿ, ಮಗಳು ಇಂತಹ ಚಿತ್ರಣಗಳಿಗೆ ಮಾದರಿಯಾಗುತ್ತವೆ. ಹಾಗೆಯೇ ಇಂತಹ ನಿಲುವನ್ನು ತಳೆಯುವುದು ಅನಿವಾರ್ಯವೂ ಆಗಿತ್ತು.

ಸ್ತ್ರೀಯರ ಶಿಕ್ಷಣದ ಅವಶ್ಯಕತೆಯನ್ನು ಹೇಳುವ ತ್ರಿವೇಣಿ ಉದ್ಯೋಗದ ಅವಶ್ಯಕತೆ, ಅನಿವಾರ್ಯತೆಗಳನ್ನು ತೀವ್ರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ. ಈ ರೀತಿ ಸಮಕಾಲೀನ ಪ್ರಗತಿಶೀಲ ಲೇಖಕರ ಮನೋಭಾವವನ್ನು ಹೋಲುವಂತದ್ದಾಗಿದೆ. ಕುಟುಂಬದ ನೆಲೆ ಸಿಗದ ಹೆಣ್ಣಿನ ಹತಾಶೆಯ ಆಯ್ಕೆಯಾಗಿ ಉದ್ಯೋಗಸ್ಥ ಸ್ತ್ರೀಯನ್ನು ತರುವ ಇವರು ಮದುವೆಯನ್ನೆ ಸ್ತ್ರೀಯ ಮೊಟ್ಟಮೊದಲ ಆಯ್ಕೆಯಾಗಿಸುವ ಅಭಿವ್ಯಕ್ತಿಗಳಿವೆ. 'ಕಂಕಣ-ಮುಕ್ತಿ' ಕಾದಂಬರಿಯಲ್ಲಿ ಈ ಅಂಶಗಳನ್ನು ಕಾಣಬಹುದಾಗಿದೆ.

ಕಾಲೇಜು ಶಿಕ್ಷಣ ಮುಗಿಸಿ ಬಂದ ನಂತರ ನೌಕರಿ ಅಥವಾ ಮದುವೆ ಎರಡರಲ್ಲಿ ಯಾವುದಾದರೂ ಒಂದನ್ನು ಆಯ್ದುಕೊಳ್ಳಬೇಕಾದ ಆರು ಜನ ಯುವತಿಯರ ಸುತ್ತ ಕಥೆ ಹೆಣೆಯುತ್ತಾರೆ. ಹೆಣ್ಣಿನ ಜೀವನದ ಬಹುಮುಖ್ಯವಾದ ಘಟ್ಟ ಮದುವೆ. ಅವಳ ಬಾಳು ಸ್ವರ್ಗವೋ ನರಕವೋ ನಿಶ್ಚಿತವಾಗುವುದು ಮದುವೆಯ ನಂತರ. ಇದರ ವಿರುದ್ಧವಾಗಿ ಹೆಣ್ಣು ಬೆಳೆಯುವಂತೆ ಎಲ್ಲಿಯೂ ಧ್ವನಿ ಎತ್ತಿಲ್ಲ ಎನ್ನುವುದನ್ನು ಗಮನಿಸಬೇಕು. ಕುಟುಂಬದ ಚೌಕಟ್ಟು ಗಂಡು ಹೆಣ್ಣಿನ ಸಂಬಂಧಗಳ ವಿಶ್ಲೇಷಣೆ ಮುಖ್ಯ ನೆಲೆಯೊದಗಿಸುತ್ತದೆ. ಸ್ತ್ರೀಯ ಬದುಕಿನ ಎಲ್ಲಾ ಏರಿಳಿತಗಳನ್ನು ಕುಟುಂಬಕಷ್ಟೆ ಸೀಮಿತಗೊಳಿಸುವ ಇವರ ಕ್ರಮಕ್ಕೆ 'ಅಪಸ್ವರ-ಅಪಜಯ' ಕಾದಂಬರಿಗಳು ಸ್ಪಷ್ಟ ಮಾದರಿಗಳಾಗುತ್ತವೆ. ಇಲ್ಲಿ ಬರುವ ಮೀರ ಬುದ್ಧಿವಂತೆ. ಓದಿನ ಬಗ್ಗೆ ಎಷ್ಟೇ ಆಸಕ್ತಿ ಇದ್ದಾಗಲೂ ಹೆತ್ತವರಿಗಾಗಿ ಒಲ್ಲದ ಮದುವೆಗೆ ತನ್ನನ್ನು ತೆತ್ತುಕೊಳ್ಳುತ್ತಾಳೆ. ಮಗುವಿನ ಸಾವಿನಿಂದ ತಾಯಿಯೂ ಆಗಲಾರದ ಅನಿವಾರ್ಯತೆಯಲ್ಲಿ ಓದಿ ವೈದ್ಯಳಾಗುತ್ತಾಳೆ. ಗಂಡನಿಗೆ ತಾನೆ ತಂದ ಹೆಣ್ಣು ಇವಳಿಗೆ ಸವತಿಯಾಗಿ ಶಾಪವಾಗುತ್ತಾಳೆ. ದಾಂಪತ್ಯ ವೈಷಮ್ಯದ ಚಿತ್ರವಾಗಿ ಕಾದಂಬರಿ ಉಳಿಯುತ್ತದೆ.

'ಮೊದಲಹೆಜ್ಜೆ', 'ಸೋತು ಗೆದ್ದವಳು', 'ತಾವರೆಯ ಕೊಳ' ಕೃತಿಗಳಲ್ಲಿ ಸ್ತ್ರೀಯ ವಿವಾಹಪೂರ್ವ ಮತ್ತು ವಿವಾಹೇತರ ಸಂಬಂಧಗಳ ಚಿತ್ರಣಗಳನ್ನು ತರುತ್ತಾರೆ. ಆದರೆ ಪರಿಸ್ಥಿತಿಗಳ, ಮನಸ್ಥಿತಿಗಳ ಒತ್ತಡಗಳಿಂದ ವ್ಯಕ್ತಿಗಳು ಆ ದಾರಿಯತ್ತ ನಡೆದಾಗ ಸ್ತ್ರೀಯನ್ನು ಮಾತ್ರವೇ ಹೊಣೆಯಾಗಿಸಿ ನಿರ್ದಯವಾಗಿ ತಿರಸ್ಕರಿಸುವ ಸಾಂಪ್ರದಾಯಿಕ ದೃಷ್ಟಿಯನ್ನು ತ್ರಿವೇಣಿ ಖಂಡಿಸುತ್ತಾರೆ. ರಮಾ (ಹೂವು ಹಣ್ಣು) ಭಾರತಿ (ಸೋತುಗೆದ್ದವಳು) ರತ್ನ (ತಾವರೆಯಕೊಳ) ವನಜಾ (ಅವಳ ಮಗಳು) ಈ ಎಲ್ಲಾ ಕಾದಂಬರಿಗಳಲ್ಲಿ ಬರುವ ಇವರೆಲ್ಲರು ಪರಿಸ್ಥಿತಿಗಳು ಸನ್ನಿವೇಶಗಳು ತಂದೊಡ್ಡುವ ಒತ್ತಡಗಳು ವಿಭಿನ್ನವಾಗಿರುವುದನ್ನು ತ್ರಿವೇಣಿ ದಾಖಲಿಸುತ್ತಾರೆ. ತ್ರಿವೇಣಿ ಆಧುನಿಕ ವಿದ್ಯಾವಂತ ಹೆಣ್ಣಿನ ಚಿತ್ರವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಎಚ್.ವಿ. ಸಾವಿತ್ರಮ್ಮ ಸಣ್ಣಕಥೆಗಳನ್ನೆ ಬರೆದಿರುವುದಾದರೂ ಸಮಕಾಲೀನ ಸಾಮಾಜಿಕ ಬದುಕಿನ ವಸ್ತುಗಳಿಂದ ಮತ್ತು ಆ ವಸ್ತುವನ್ನು ನಿರ್ವಹಿಸುವ ಕ್ರಮದಿಂದ ಸ್ತ್ರೀಯ ನೆಲೆಯಿಂದ ಕೌಟುಂಬಿಕ ಸ್ಥಿತಿ ಮತ್ತು ಸ್ತ್ರೀ ಪುರುಷ ಸಂಬಂಧಗಳ ಪ್ರಚಲಿತ ಸ್ವರೂಪಗಳ ಸೂಕ್ಷ್ಮ ನೋಟಕ್ಕೆ ಅರಿವಾಗುತ್ತವೆ.

'ನಿರಾಶ್ರಿತ', 'ಪ್ರತೀಕ್ಷೆ', 'ಮರುಮದುವೆ' ಮತ್ತು 'ಲಕ್ಷ್ಮೀ' ಕಥಾಸಂಕಲನಗಳು, ನಿರಾಶ್ರಿತೆ, ದಮಯಂತಿ ಕತೆಗಳಲ್ಲಿ ಕೋಮುಗಲಭೆ ಮತ್ತು ಆ ದುಳ್ಳುರಿಯಲ್ಲಿ ಲಕ್ಷಾಂತರ ಕುಟುಂಬಗಳು ಭಸ್ಮವಾದವು. ಅಂಥ ಸ್ಥಿತಿಗೆ ಒಳಗಾಗಿ ದುರಾಕ್ರಮಣ, ಅತ್ಯಾಚಾರ, ಕುಟುಂಬದ ಭದ್ರ ಬದುಕು ಮತ್ತು ಸಮಾಜದ ಗೌರವನ್ನು ಕಳೆದುಕೊಂಡ ಹೆಣ್ಣುಗಳ ನೆಲೆಯಲ್ಲಿ ಸಮಸ್ಯೆಯನ್ನು ವಿವೇಚಿಸುವ ಯತ್ನ ಈ ಕತೆಗಳಲ್ಲಿದೆ.

"ಸಾವಿತ್ರಮ್ಮ ಅವರ ಕಥನ ಪ್ರಜ್ಞೆಯು ಪ್ರಜ್ಞಾಪೂರ್ವಕವಾಗಿ ಸ್ತ್ರೀವಾದಿ ಧೋರಣೆಯನ್ನು ಇಟ್ಟುಕೊಂಡದ್ದಲ್ಲ. ಜೀವನವನ್ನು ಸಹ್ಯವಾಗಿಸುವಂತಹ ಮೌಲ್ಯಗಳು ಯಾವುವು ಎಂಬುದೇ ಇವರ ಹುಡುಕಾಟವಾಗಿದೆ... ಸ್ತ್ರೀವಾದಿ ವಿಮರ್ಶೆಯ ದೃಷ್ಟಿಯಿಂದ ನೋಡಿದರೆ ಇವರಲ್ಲಿ ಗಂಡು-ಹೆಣ್ಣು ಪಾತ್ರಗಳ ಚಿತ್ರಣ, ಅವುಗಳ ಅಧಿಕಾರದ ತೇಲುಮೇಲಾಟ ಇವು ಕಪ್ಪು ಬಿಳುಪು ಚಿತ್ರಣದಿಂದ ದೂರ ಉಳಿದಿವೆ".

ಸಾವಿತ್ರಮ್ಮ ಸೃಷ್ಟಿಸಿರುವ ಸ್ತ್ರೀಯರು ಆತ್ಮವಿಶ್ವಾಸವುಳ್ಳ ಧೈರ್ಯಶಾಲಿಗಳು. 'ಒಂದು ಪ್ರಕರಣ' ಕಥೆಯ ವಿದೇಶಿ ತರುಣಿ ಗ್ರೇಸ್, 'ಸರಿದ ಬೆರಳು' ಕಥೆಯ ರೂಬಿ, 'ಪ್ರತೀಕ್ಷೆ' ಕಥೆಯ ಲಕ್ಷ್ಮಿ ಮುಂತಾದವರ ಮೂಲಕ ವಿಶಿಷ್ಟ ಚಿತ್ರಗಳನ್ನು ಸಾವಿತ್ರಮ್ಮ ಕಟ್ಟಿಕೊಡುತ್ತಾರೆ.

"ಪಿತೃಭಾಷಾ ರೂಪದಲ್ಲಿ ಹೊಸ ರೀತಿಯ ಸ್ತ್ರೀಯರ ಕಲ್ಪನೆ ತರಲು ಪ್ರಯತ್ನಿಸಿರುವ ಸಾವಿತ್ರಮ್ಮ ಅವರ ಪ್ರಯತ್ನ ಗಮನ ಯೋಗ್ಯವಾದದ್ದು".[9] ವಿಮರ್ಶಕಿ ಎಲ್.ಜಿ. ಮೀರಾ ಅವರ ಅಭಿಪ್ರಾಯ ಸಾವಿತ್ರಮ್ಮನವರ ಕಥೆಗಳ ಮಹತ್ವವನ್ನು ತಿಳಿಸುತ್ತದೆ.

ರಚನೆಗಳ ಸ್ವರೂಪ, ಭಾಷೆ ಮತ್ತು ಸಮಸ್ಯೆಯನ್ನು ನೋಡುವ ದೃಷ್ಟಿಯನ್ನು ನಿರ್ಧರಿಸುವಂತಹ ತಾತ್ವಿಕ ಸೂತ್ರ ಸಮಾಜವನ್ನು ಶೋಷಿತರು / ಶೋಷಕರೆಂಬ ಸ್ಥೂಲವಾದ ಗುಂಪುಗಳಾಗಿ ವಿಂಗಡಿಸುವ ರೀತಿಯನ್ನು ಪ್ರಗತಿಶೀಲದಲ್ಲಿ ಕಾಣಬಹುದಾಗಿದೆ. ಈ ತಾತ್ವಿಕ ಸೂತ್ರವನ್ನು ಅನುಪಮಾ ನಿರಂಜನ ಅವರು ತಮ್ಮ ಕಥೆಗಳು ಕಾದಂಬರಿಗಳೆರಡರಲ್ಲೂ ತುಂಬಾ ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಂಡದ್ದನ್ನು ಗಮನಿಸಬಹುದಾಗಿದೆ.

ಇವರ ಅನೇಕ ಸಣ್ಣ ಕತೆಗಳು ಕೆಲವು ಕಾದಂಬರಿಗಳು ಪ್ರಸಕ್ತ ವ್ಯವಸ್ಥೆಯಲ್ಲಿನ ವರ್ಗ, ಜಾತಿ, ಲಿಂಗಾಧರಿತ ವೈಷಮ್ಯಗಳನ್ನು ವಸ್ತುವಾಗಿಸಿಕೊಂಡಿವೆ. 'ಮಣ್ಣಿನ ದಿಬ್ಬ', 'ಒಂಟಿಹಾಯಿ', 'ಮಣ್ಣು', 'ಚಕ್ರಗಳು', 'ರೂವಾರಿಯ ಲಕ್ಷ್ಮಿ', 'ಆ ಮೂರು ಮನೆಗಳು' ಮೊದಲಾದ ಕೆಲವು ಕಥೆಗಳಲ್ಲಿ ಹಾಗೂ ಕಣಿವೆಗೆ ಬಂತು ಬೇಸಗೆ 'ನೂಲು ನೇಯ್ದ ಚಿತ್ರ', ನೇಕಾರರ ಜೀವನ ಚಿತ್ರಣವನ್ನ ತಿಳಿಸುವ 'ಎಳೆ', 'ಕೊಳಚೆ ಕೊಂಪೆಯ ದಾನಿಗಳು', 'ಮಾಧವಿ', 'ಘೋಷ', 'ಮುಕ್ತಿಚಿತ್ರ'ಗಳಂಥ ಕಾದಂಬರಿಗಳಲ್ಲಿ ಬಡವರ, ರೈತರ, ಕಾರ್ಮಿಕರ, ದಲಿತರ, ಕೂಲಿಕಾರರ ಅಪಮಾನಿತರ ಬದುಕನ್ನು ವಿಶ್ಲೇಷಿಸುತ್ತಾರೆ. ಜೊತೆಗೆ ಇಂಥವರನ್ನು ಒತ್ತರಿಸಿಕೊಂಡು ಬದುಕುತ್ತಿರುವ ಸಿರಿವಂತರು, ಮೇಲ್ಜಾತಿಯವರು, ಪುರೋಹಿತ ಹಾಗೂ ಬಂಡವಾಳಶಾಹಿಗಳು, ರಾಜಕೀಯ ವ್ಯವಸ್ಥೆ, ಪುರುಷ ಪ್ರಪಂಚವನ್ನು ಗುರುತಿಸುತ್ತಾರೆ. ವಸ್ತುವಿನ ದೃಷ್ಟಿಯಿಂದ ಹೊಸ ವಸ್ತುಗಳನ್ನು ಆಯ್ದುಕೊಂಡಿದ್ದಾರೆ.

ಈ ಅವಲಂಬಿತ ಸ್ಥಿತಿ, ಯಾವುದೇ ಸಾಮಾಜಿಕ ವ್ಯವಸ್ಥೆಗೂ ಅನಿವಾರ್ಯ. ಆದರೆ ಇದು ಶ್ರಮದ, ಫಲದ ಸಮಾನ ಹಂಚಿಕೆಯಾಗದೆ ಅಸಮಾನತೆ, ಕ್ರೌರ್ಯ, ದೌರ್ಜನ್ಯ, ಭ್ರಷ್ಟತನದ ವ್ಯವಸ್ಥೆಯಾಗಿದೆ. ಅದನ್ನು ಸರಿಪಡಿಸುವತ್ತ ಜನರು ಎಚ್ಚರವಾಗಬೇಕೆಂಬ ಧ್ವನಿ ಅನುಪಮಾ ಅವರ ರಚನೆಗಳಲ್ಲಿದೆ.

ಅನುಪಮ ಅವರು ತ್ರಿವೇಣಿಯವರ ಮಾದರಿಗಳನ್ನು ಇಟ್ಟುಕೊಂಡು ಬರೆದ ಸಂದರ್ಭದಲ್ಲಿ ನಾಯಕಿ ಪ್ರಧಾನವಾದ್ದರಿಂದ ಕುಟುಂಬ ವಿವಾಹದಂತ ಸಂಸ್ಥೆಗಳ ನೆಲೆಯಲ್ಲಿ ಪ್ರಚಲಿತವಿರುವ ಸ್ತ್ರೀ-ಪುರುಷ ಸಂಬಂಧಗಳ ಅಸಮಾನ ನೆಲೆಗಳನ್ನು ಗುರುತಿಸಿದ್ದಾರೆ. 'ಹಿಮದ ಹೂ', 'ಸ್ನೇಹಪಲ್ಲವಿ', 'ಋಣ', 'ಚಿತ್ತಮೋಹನ', 'ಸಂಕೋಲೆಯೊಳಗಿಂದ' ಮುಂತಾದ

ಕಾದಂಬರಿಗಳಲ್ಲಿ ಶಾಶ್ವತವೆನಿಸಿದ್ದ ಅಡುಗೆ ಮನೆಯ ಬಂಧನದಿಂದ ಹೊರಬರಲು ಯತ್ನಿಸುವ ಶಿಕ್ಷಣ, ಉದ್ಯೋಗಗಳತ್ತ ಹೊರಳುತ್ತಿರುವ ಮಧ್ಯಮವರ್ಗದ ಸ್ತ್ರೀಯರ ಆಕಾಂಕ್ಷೆಗಳನ್ನು ಕುರಿತು ಬರೆದರು. 'ಹಿಮದ ಹೂ' ಕಾದಂಬರಿಯಲ್ಲಿ ಉದ್ಯೋಗ ಕ್ಷೇತ್ರದ ಸಾಧನೆಯ ಮಹತ್ವಾಕಾಂಕ್ಷೆಗೂ, ಸಾಂಸಾರಿಕ ಬದುಕಿಗೂ ನ್ಯಾಯ ಸಲ್ಲಿಸಲೆತ್ನಿಸಿದಾಗ ಹುಟ್ಟುವ ದುಡಿಯುವ ಮಹಿಳೆಯ ದ್ವಂದ್ವಗಳನ್ನು ಚಿತ್ರಿಸಿದ್ದಾರೆ.

ಸಮಕಾಲೀನ ಸ್ತ್ರೀವಾದಿ ಸಿದ್ಧಾಂತದ ಪ್ರಬಲ ಘೋಷಣೆಯನ್ನು 'ಮಾಧವಿ', 'ಘೋಷ', 'ಮುಕ್ತಿಚಿತ್ರ', 'ಮೂಲಮುಖ' ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಅನುಪಮಾ ಅವರ ಮಾರ್ಗದಿಂದ ತುಂಬ ದೂರ ಉಳಿದ ಹೆಚ್.ವಿ. ಸಾವಿತ್ರಮ್ಮನವರು ಎಂಬತ್ತರ ದಶಕದಲ್ಲಿ ಮೊದಲ ಬಾರಿಗೆ ಕಾದಂಬರಿಯ ಪ್ರಕಾರಕ್ಕೆ ಕೈಹಾಕಿ ರಚಿಸಿದ 'ಸೀತೆ ರಾಮ ರಾವಣ', 'ವಿಮುಕ್ತಿ' ಕಾದಂಬರಿಯ ರಚನೆ ಸಾಂಸ್ಕೃತಿಕವಾಗಿ ಮಹತ್ವದ ಪ್ರಶ್ನೆಗಳನ್ನು ಎತ್ತಿರುವುದು ಗಮನಾರ್ಹ ಬೆಳವಣಿಗೆಯಾಗಿದೆ.

ಅನುಪಮಾ ನಿರಂಜನ ಅವರು ತಮ್ಮ 'ಮಾಧವಿ' ಕಾದಂಬರಿಯಲ್ಲಿ ಮಾಧವಿಯ ಮೂಲಕ ಸ್ತ್ರೀ ತನ್ನ ದೇಹ ಮನಸ್ಸಿನ ಮೇಲೆ ತಾನು ಕಳೆದುಕೊಂಡಿರುವ ಸ್ವಾತಂತ್ರದ ಬಗ್ಗೆ ಈ ರೀತಿಯಾಗಿ ಹೇಳುತ್ತಾರೆ **"ಹೌದು ತನ್ನ ತಂದೆ ಯಜ್ಞಗಳನ್ನು ಮಾಡಿದ್ದಾರೆ, ನಾನು ಅದನ್ನು ಮಾಡಲಿಲ್ಲ, ಆದರೆ ನಾನು ಯಜ್ಞಪಶುವೆಂದಷ್ಟೇ ಗೊತ್ತು ನನಗೆ"**[೫]

ಎಪತ್ತರ ದಶಕದಲ್ಲಿ ಬರೆದ ಲೇಖಕಿಯರ ಕಥಾಸಾಹಿತ್ಯವನ್ನು ಗಮನಿಸಿದರೆ ಲೇಖಕಿ ತನ್ನ ಅಸ್ಮಿತೆಯ ಹುಡುಕಾಟದಲ್ಲಿ ಗಟ್ಟಿಯಾಗಿ ತನ್ನತನ ಸ್ಥಾಪಿಸಿಕೊಳ್ಳುವ ಪ್ರಯತ್ನದಲ್ಲಿ ಅಭಿವ್ಯಕ್ತಿಗಿದ್ದ ತೊಡಕುಗಳನ್ನು ನಿಧಾನವಾಗಿ ನಿವಾರಿಸಿಕೊಂಡಿದ್ದನ್ನು ಗಮನಿಸುತ್ತೇವೆ. ಈ ಪ್ರಯತ್ನದಲ್ಲಿ ಲೇಖಕಿಯರು ಅಭಿವ್ಯಕ್ತಿಯ ಲಕ್ಷ್ಮಣ ರೇಖೆಗಳನ್ನು ದಾಟಿ ತಮ್ಮತನವನ್ನು ಸ್ಥಾಪಿಸಿದರು. ಆದರೆ ಈ ದಾರಿ ಸುಗಮವಾಗೇನೂ ಇರಲಿಲ್ಲ. ಈ ಸಂದರ್ಭದಲ್ಲಿ ಬಂದ ವೀಣಾಶಾಂತೇಶ್ವರ, ವೈದೇಹಿ, ನೇಮಿಚಂದ್ರ ಮೊದಲಾದ ಪ್ರಮುಖ ಲೇಖಕಿಯರ ಸಾಹಿತ್ಯವನ್ನು ೧೯೬೦ ರಿಂದ ೧೯೯೦ರವರೆಗೆ ಮೊದಲ ಹಂತದ ಕಥಾಸಾಹಿತ್ಯವೆಂದು ಪರಿಗಣಿಸಿದರೆ ೧೯೯೦ರ ನಂತರ ಇದುವರೆಗಿನ ಕಥಾಸಾಹಿತ್ಯವನ್ನು ಆಧುನಿಕ ಲೇಖಕಿಯರ ಕಥಾಸಾಹಿತ್ಯದ ಎರಡನೇ ಹಂತವೆಂದು ಗಮನಿಸಬಹುದು. (ಈ ಕಥಾಸಾಹಿತ್ಯದ ಸಂದರ್ಭದಲ್ಲೇ ಗಮನಾರ್ಹ ರೀತಿಯ ಕಾವ್ಯ ರಚನೆಯೂ ಲೇಖಕಿಯರಿಂದ ಆಗಿದೆ ಎಂಬುದನ್ನು ಗಮನಿಸಬೇಕು)[೬]

ಅಸ್ಮಿತೆಯ ಹುಡುಕಾಟದ ಎರಡನೇ ಹಂತದಲ್ಲಿ ಹೊಸ ತಲೆಮಾರಿನ ಲೇಖಕಿಯಾಗಿ ನೇಮಿಚಂದ್ರ ಕಾಣಿಸುತ್ತಾರೆ. ವೃತ್ತಿಯಿಂದ ಇಂಜನೀಯರ್ ಆಗಿದ್ದು ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್ ಕಾರ್ಖಾನೆಯ ಹೆಲಿಕಾಪ್ಟರ್ ಸಂಶೋಧನೆ ಮತ್ತು ವಿನ್ಯಾಸದ ವಿಭಾಗದಲ್ಲಿ ಡೆಪ್ಯೂಟಿ ಜನರಲ್ ಮ್ಯಾನೇಜರ್

ಆಗಿ ಕಾರ್ಯನಿರ್ವಹಿಸುತ್ತಿರುವ ನೇಮಿಚಂದ್ರ ಇದೇ ಕೆಲಸದಲ್ಲಿ ತೃಪ್ತಿಪಟ್ಟುಕೊಂಡವರು. ಟೆಕ್ನಿಕಲ್ ಹಾಗೂ ಮ್ಯಾನೇಜೇರಿಯಲ್ ಸವಾಲುಗಳನ್ನು ಎದುರಿಸುವ ವಿಜ್ಞಾನ, ತಂತ್ರಜ್ಞಾನದ ಮುಂಚೂಣಿಯಲ್ಲಿ ದುಡಿಯುವ ಈ ಅವಕಾಶದ ಬೆನ್ನಲ್ಲೆ ಒಬ್ಬ ಪ್ರಬುದ್ಧ ಲೇಖಕಿಯಾಗಿ ಕಾಣಿಸಿಕೊಳ್ಳುವಲ್ಲಿ ನೇಮಿಚಂದ್ರ ಯಶಸ್ವಿಯಾಗಿದ್ದಾರೆ.[2]

ಬರಹದಲ್ಲಿ ಚಂದ್ರ ಅವರದ್ದು ಬಹುಮುಖ ಆಸಕ್ತಿ. ಕತೆ, ಕಾದಂಬರಿ, ಮಹಿಳಾ ವಿಜ್ಞಾನಗಳ ಜೀವನ ಕಥನ, ಪ್ರವಾಸ ಕಥನಗಳು "ಬದುಕು ಬದಲಿಸಬಹುದು" ಈವರೆಗೆ ಒಟ್ಟಾಗಿ ಪ್ರಕಟವಾಗಿರುವುದು. 'ಒಂದು ಕನಸಿನ ಪ್ರಯಣ', 'ಪೆರುವಿನ ಪವಿತ್ರ ಕಣಿವೆಯಲ್ಲಿ' ಇವು ಪ್ರವಾಸ ಕಥನಗಳು, 'ಯಾದ್ ವಶೇಮ್' ಕಾದಂಬರಿ, 'ಮಹಿಳಾ ಅಧ್ಯಯನ', 'ನೊಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು', 'ದುಡಿವ ಹಾದಿಯಲಿ ಜೊತೆಯು', 'ಬೆಳಕು ತಂದ ಜೀವ', 'ಡಾ. ಈಡಾಸ್ಕಡರ್' ಇವು ಕೂಡ ಇವರ ಪ್ರಮುಖ ಕೃತಿಗಳು.

ಪುರುಷರ ಹಿಪಾಕ್ರಸಿಯನ್ನು ಅನಾವರಣಗೊಳಿಸುವ ನೇಮಿಚಂದ್ರ ಮಹಿಳೆಯರನ್ನು ಆತ್ಮಪರಿಶೀಲನೆಗೆ ತೊಡಗಿಸುತ್ತಾರೆ. ಆರೋಪಿತ ರೋಗಗ್ರಸ್ತ ಮೌಲ್ಯಗಳನ್ನು ಮೊಟ್ಟಮೊದಲು ಮಹಿಳೆಯರು ಮೀರುತ್ತಿದ್ದಾರೆ ಎಂಬುದಕ್ಕೆ ಚಂದ್ರ ಅವರ ಕಥೆಗಳ ನಾಯಕಿಯರು ಸಾಕ್ಷಿಯಾಗುತ್ತಾರೆ. 'ಕಪ್ಪು ಮೋಡ ಬೆಳ್ಳಿ ಅಂಚು', 'ನನ್ನದಲ್ಲದ ಬದುಕಿಗಾಗಿ' ಕತೆಗಳಲ್ಲಿ ಪುರುಷಾಧೀನತೆಯಿಲ್ಲದೆ ಮಹಿಳೆಯರು ಸ್ವತಂತ್ರವಾಗಿ ಬದುಕಬಲ್ಲೆವು ಎಂಬುದನ್ನು ತೋರಿಸಿಕೊಡುವ ಹಾಗೆ ಸಮಸ್ಯೆಗಳಿಗೆ ಸಾವಿನಲ್ಲಿಯೆ ಪರಿಹಾರ ಕಂಡುಕೊಳ್ಳುವ ಮಹಿಳೆಯರ ಮನಸ್ಸು ಬದಲಾಗುವುದಾಗಬೇಕು. ಮಧ್ಯಮ ವರ್ಗದ ಜನರೆ ಈ ಸಂಸ್ಕೃತಿಯನ್ನು ಹೆಚ್ಚು ಗಟ್ಟಿಗೊಳಿಸುವವರು ಮತ್ತು ಆರೋಪಿಸಿಕೊಳ್ಳುವವರು, ಸ್ವಾವಲಂಬಿ, ಆತ್ಮವಿಶ್ವಾಸದ ಇವರ ಕಥಾನಾಯಕಿಯರು ಸಮಾಜ ವಿಧಿಸಿದ ನಿಯಮಗಳಿಗಿಂತ ತಾವು ನಂಬಿದ ಆದರ್ಶವನ್ನು ಅನುಸರಿಸಿ ನಡೆಯುವವರು.

ಹೆಣ್ಣಿಗೆ ಜೈವಿಕ ಸೃಷ್ಟಿ ಶಕ್ತಿಯಷ್ಟೇ, ಬೌದ್ಧಿಕ ಸೃಜನಶೀಲತೆಯೂ ಮುಖ್ಯ ಎಂದು ಪ್ರತಿಪಾದಿಸುವ ಕತೆ 'ಹೊಸ ಹುಟ್ಟು'. 'ನೆನಪಿನಂಗಳದಲ್ಲಿ ನೂರು ಚಿತ್ತಾರ' ಕತೆಯಲ್ಲಿ ಹದಿವಯಸ್ಸಿನ ಮಗಳಿಗೆ ಬದುಕಿನ ವಾಸ್ತವತೆಯ ದರ್ಶನ ಮಾಡಿಸುವ ತಾಯಿ ತನ್ನ ಗತ ಬದುಕಿನ ಕುರಿತು ಹೇಳುತ್ತಾ "ಬೇಬಿ ಈ ಪ್ರೀತಿಯ ಯಾತ್ರೆ ಮದುವೆಯ ದಿಬ್ಬಣದೊಂದಿಗೆ ನಿಂತುಬಿಡುವುದಿಲ್ಲ" ಎಂದು ಹೇಳುತ್ತಾ ವಿವಾಹೋತ್ತರ ಪ್ರೀತಿಯ ಕಥೆಯನ್ನು ಹೇಳುತ್ತಾರೆ. ವಸ್ತು, ನಿರೂಪಣೆ, ಆಶಯಗಳ ದೃಷ್ಟಿಯಿಂದ ಬಹಳ ವಿಶಿಷ್ಟವಾದ ಕಥೆಯಿದು.

ನೇಮಿಚಂದ್ರ ಕತೆಗಳ ಕುರಿತು ವಿಮರ್ಶಕ ಟಿ.ಪಿ. ಅಶೋಕ ಅವರು ತಮ್ಮ ಸಾಹಿತ್ಯ ಸಂಬಂಧ ವಿಮರ್ಶಾ ಕೃತಿಯಲ್ಲಿ ಹೀಗೆ ಹೇಳುತ್ತಾರೆ (ಪು.ಸ. ೧೩೪) **"ನೇಮಿಚಂದ್ರ ಅವರ ಕಥೆಗಳಲ್ಲಿ ಮೊದಲಿಗೇ ಎದ್ದು ಕಾಣುವ ಒಂದು ಗುಣವೆಂದರೆ ಸ್ಥಿತಿಯ ಪರಿಶೀಲನೆಯಷ್ಟೇ ಸಾಧ್ಯತೆಯ ಅರ್ಥಪೂರ್ಣ ಸೂಚನೆಗಳು. ಈ ಸೂಚನೆಗಳು ಸರಳ ಆಶಾವಾದವಲ್ಲ, ತಾಳಿಕೆಯನ್ನು ನೇಮಿಚಂದ್ರ ಅವರ ಕಥೆಗಳು ಒಂದು ದೊಡ್ಡ ಮೌಲ್ಯವಾಗಿ ಬಿಂಬಿಸುವುದಿಲ್ಲ. ನವೋದಯದ ಬರಹಗಾರರಿಗಿಂತ ನೇಮಿಚಂದ್ರ ನಿರ್ಣಾಯಕವಾಗಿ ಭಿನ್ನರಾಗುವುದು ಇಲ್ಲಿ. ತಾಳ್ಮೆ, ಸಹನಶೀಲತೆಗಳಿಗೆ ಹೆಸರಾದ ಮಾಸ್ತಿ, ಕಾರಂತರ ಬಹಳಷ್ಟು ಸ್ತ್ರೀ ಪಾತ್ರಗಳಿಗಿಂತ ಭಿನ್ನವಾದ ಮಾದರಿಗಳನ್ನು ನೇಮಿಚಂದ್ರ ಸೃಷ್ಟಿಸಿದ್ದಾರೆ. ಹಾಗೆಂದು ಇವರ ಪಾತ್ರಗಳು ಸರಳ ಬಂಡಾಯದ ಮಾದರಿಗಳೂ ಅಲ್ಲ. ಅರಿವಿನ ಸ್ಫೋಟ ಅರ್ಥಪೂರ್ಣ ಕ್ರಿಯೆಯನ್ನು ಪ್ರಚೋದಿಸಿ ಹೆಣ್ಣು ತಾನೇ ಸ್ವತಃ ತೊಟ್ಟ ಅಥವಾ ತನಗೆ ತೊಡಿಸಿದ ಕವಚಗಳಿಂದ ನಿಧಾನವಾಗಿ ಹೊರಬಂದು ಹೊಸ ಮನುಷ್ಯಳಾಗುವ ಪ್ರಕ್ರಿಯೆ ನೇಮಿಚಂದ್ರ ಅವರ ಕಥೆಯನ್ನು ಕಟ್ಟುತ್ತದೆ."**[೮]

೧೯೭೫ರ ಅಂತರಾಷ್ಟ್ರೀಯ ಮಹಿಳಾ ವರ್ಷಾಚರಣೆಯ ನಂತರ ಬಂಡಾಯ ಸಿದ್ಧಾಂತ, ಸ್ತ್ರೀವಾದಿ ಚಿಂತನೆ ಪರಿಚಯಿಸಲ್ಪಟ್ಟು ಹಳೆಯ ಕವಿ ಕೃತಿಗಳು, ಸ್ತ್ರೀ ಕುರಿತ ಸಾಂಪ್ರದಾಯಿಕ ದೃಷ್ಟಿಕೋನದ ಮಿತಿಗಳನ್ನು ಸ್ತ್ರೀವಾದಿ ವಿಮರ್ಶೆ ಗುರುತಿಸಿತು. ಇದು ಮೂಡಿಸಿದ ಹೊಸ ಎಚ್ಚರದಿಂದಾಗಿ ಮಹಿಳಾ ಸಾಹಿತ್ಯ ತನ್ನ ಮೌಲಿಕತೆಯನ್ನು ಹೆಚ್ಚಿಸಿಕೊಳ್ಳುತ್ತ ಹೊಸ ಅರ್ಥ, ಆಯಾಮವನ್ನು ಪಡೆದುಕೊಂಡಿತು. ವಾಕ್ ಸ್ವಾತಂತ್ರ್ಯ ಅಭಿವ್ಯಕ್ತಿ ಸ್ವಾತಂತ್ರ್ಯದಂಥ ಸಂಗತಿಗಳಿಗೆ, ಹೊಸ ವಿಚಾರಧಾರೆಗಳಿಗೆ ಪ್ರಜ್ಞಾವಂತ ಮಹಿಳೆಯರ ಮನಸ್ಸುಗಳು ತೆರೆದುಕೊಂಡ ಹಿನ್ನೆಲೆಯಲ್ಲಿ ಹಲವು ಪ್ರಕಾರದ ಕೃತಿಗಳು ಜನ್ಮತಳೆದವು. ಆತ್ಮಚರಿತ್ರೆಗಳು, ಜೀವನ ಚರಿತ್ರೆಗಳು, ಪತ್ರಿಕೆಗಳು, ವಿಶೇಷ ಮಹಿಳಾ ಸಂಚಿಕೆಗಳು, ಇವೆಲ್ಲವುಗಳು ಹೊಸದಾಗಿ ಮೂಡಿದ ಸ್ತ್ರೀವಾದಿ ಅರಿವನ್ನು ದೃಢಪಡಿಸಿದವು. ಹೆಚ್ಚು ಆತ್ಮವಿಶ್ವಾಸದಿಂದ ಬರೆಯ ತೊಡಗಿದ ಲೇಖಕಿಯರಿಗೆ ಬದಲಾದ ಸಮಾಜಿಕ, ಕೌಟುಂಬಿಕ ಪರಿಸರ, ಉನ್ನತ ವಿದ್ಯಾಭ್ಯಾಸ ಅಭಿವ್ಯಕ್ತಿ ಸ್ವಾತಂತ್ರ್ಯಗಳಿಂದಾಗಿ ಲೇಖಕಿಯರು "ಸ್ತ್ರೀ" ವ್ಯಕ್ತಿತ್ವದ ಭಿನ್ನ ಆಯಾಮಗಳನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿಸಿದರು. ಕೆಳವರ್ಗಗಳಿಂದ ಬಂದ ಮಹಿಳೆಯರು ಬರವಣಿಗೆಯ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆ ಮೂಲಕ ಸಮಾಜದ ಅತ್ಯಂತ ನಿರ್ಲಕ್ಷಿತ ಘಟಕಗಳಾದ ದಲಿತ, ಮುಸ್ಲಿಂ ಜನಾಂಗದ ವಾಸ್ತವಿಕ ಚಿತ್ರಣ ಅನಾವರಣಗೊಂಡದ್ದು ಸಾಂಸ್ಕೃತಿಕ ಅರಿವಿನ ದಾಖಲೆಯೇ ಸರಿ.

ದಲಿತ ಬಂಡಾಯದ ಇನ್ನೊಂದು ಆಯಾಮ ಮುಸ್ಲಿಂ ಲೋಕದ ಮೌನ ಒಡೆದು ಒಳಗಿರುವುದೆಲ್ಲ ಅನಾವರಣಗೊಂಡದ್ದು ಎಂಬತ್ತರ ದಶಕದ ನಂತರ. ಅದುವರೆಗೆ ಕನ್ನಡ

ಸಾಹಿತ್ಯದಲ್ಲಿ ಕೇಳಿ ಬರದೇ ಇದ್ದ ಮುಸ್ಲಿಂ ಮತ್ತು ದಲಿತ ಹಿನ್ನೆಲೆಯ ಲೇಖಕಿಯರ ಗಟ್ಟಿ ದನಿಗಳು ಕೇಳಿಬಂದವು. ಮುಮ್ತಾಜ್‌ಬೇಗಂ ಕನ್ನಡದ ಮೊದಲ ಮುಸ್ಲಿಂ ಲೇಖಕಿ ಎಂದು ಗುರುತಿಸಲ್ಪಟ್ಟಿದ್ದಾರೆ. ಇವರ ಮೊದಲ ಕಥಾ ಸಂಕಲನ 'ಅವ್ಯಕ್ತ'. ಬೇಗಂ ಸಾಕಷ್ಟು ವಿದೇಶಿವಾಸದ ಅನುಭವವನ್ನು ಹೊಂದಿದ್ದರು.

೧೯೮೧ರಲ್ಲಿ 'ಚಂದ್ರಗಿರಿ ತೀರದಲ್ಲಿ' ಎಂಬ ಪ್ರಥಮ ಕಾದಂಬರಿಯನ್ನು ಪ್ರಕಟಿಸುವ ಮೂಲಕ ಸಾರಾ ಅಬೂಬಕ್ಕರ್ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಸಾರಾ ಮೊದಲ ಆಸಕ್ತಿ ಕಥನ ಸಾಹಿತ್ಯ ಉಳಿದಂತೆ ವಿಚಾರ ಸಾಹಿತ್ಯ ಪ್ರವಾಸ ಕಥನ, ಅನುವಾದ ಕ್ಷೇತ್ರದಲ್ಲೂ ಅವರು ಕೃತಿ ರಚಿಸಿದ್ದಾರೆ. ಚಂದ್ರಗಿರಿ ತೀರದಲ್ಲಿ, ಸಹನಾ, ವಜ್ರಗಳು, ಕದನ, ವಿರಾಮ, ಸುಳಿಯಲ್ಲಿ ಸಿಕ್ಕವರು, ಪ್ರವಾಹಸುಳಿ, ತಳ ಒಡೆದ ದೋಣಿಯಲ್ಲಿ ಪಂಜರ, ಹೀಗೆ ೮ ಕಾದಂಬರಿಗಳು, ಚಪ್ಪಲಿಗಳು, ಗಗನಸಖಿ ಮುಂತಾದ ಆರು ಕಥಾ ಸಂಗ್ರಹಗಳು ಇವರ ಸಾಹಿತ್ಯ ಕೃತಿಗಳು.

ಸಾರಾ ಅವರ ಬರವಣಿಗೆಯ ಮುಖ್ಯ ಕಾಳಜಿ ಸ್ವಸಮಾಜದ ಶುದ್ಧೀಕರಣ ತಮ್ಮ ಅನುಭವಜನ್ಯ ಸಾಹಿತ್ಯದ ಮೂಲಕ ಪುರುಷಕೇಂದ್ರಿತ ಸಮಾಜ, ಧರ್ಮ, ತತ್ವ ಹಾಗೂ ಆಚರಣೆಗಳ ಮಧ್ಯ ಸೃಷ್ಟಿಸಿಕೊಂಡ ವೈರುಧ್ಯಗಳ ಒಳಸುಳಿಯಲ್ಲಿ ಸಿಕ್ಕು ಕಾಲಾಂತರದಿಂದ ಶೋಷಣೆಗೆ ಒಳಗಾಗುತ್ತ ತಮ್ಮ ಅಸ್ತಿತ್ವವನ್ನೆ ಮರೆತು ಧ್ವನಿ ಕಳೆದುಕೊಂಡ ಮಹಿಳೆಯರ ಯಾತನಾಮಯ ಬದುಕಿನ ವಾಸ್ತವ ಚಿತ್ರಣವನ್ನು ಅನಾವರಣಗೊಳಿಸಿದ ಪ್ರಥಮ ಲೇಖಕಿ, ಸಾರಾ. ಅವರ ಕಥನ ಸಾಹಿತ್ಯದ ಕೇಂದ್ರ ಬಿಂದು ಮಹಿಳೆ ಸ್ವಸಮುದಾಯದ ತೀವ್ರತರ ಪ್ರತಿರೋಧಗಳನ್ನು ಎದುರಿಸಿಯೂ ಮುಸ್ಲಿಂ ಮಹಿಳೆಯರ ಸಮಸ್ಯೆ, ನಿರಕ್ಷರತೆ, ಬಾಲ್ಯವಿವಾಹ, ಪರ್ದಾ, ಬಹುಪತ್ನಿತ್ವ, ಬಹುಸಂತಾನ ಹಾಗೂ ತಲಾಕ್‌ಗಳನ್ನು ಪ್ರಶ್ನಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ ದಿಟ್ಟ ಲೇಖಕಿ ಸಾರಾ. ಇದರೊಂದಿಗೆ ಪ್ರಸ್ತುತ ಸಮಾಜದ ಹಿತಾಸಕ್ತಿಗೆ ಮಾರಕವಾಗಿರುವ ಮೌಲ್ಯರಹಿತ ಸ್ವಾರ್ಥ ರಾಜಕಾರಣ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಕೋಮುವಾದಗಳಂಥ ಜ್ವಲಂತ ಸಮಸ್ಯೆಗಳ ಪರಾಮರ್ಶೆಯನ್ನು ಮಾಡಿದ್ದಾರೆ.

ಚಿಕ್ಕಂದಿನಿಂದಲೆ ಮುಸ್ಲಿಂ ಮಹಿಳೆಯರ ಮೇಲೆ ನಡೆಯುವ ಜೀವವಿರೋಧಿ ಸಂಪ್ರದಾಯಗಳನ್ನು ಗಮನಿಸುತ್ತ ಬಂದಿದ್ದು ಅವುಗಳನ್ನು ಬಯಲಿಗೆಳೆಯುವುದಕ್ಕಾಗಿ ತಾವು ಲೇಖನಿ ಹಿಡಿದಿರುವುದಾಗಿ ಹೇಳಿರುವ ಸಾರಾ ತಮ್ಮ ಬಹುತೇಕ ಕತೆ, ಕಾದಂಬರಿಗಳಲ್ಲಿ ತಲಾಕ್, ಬಹುಪತ್ನಿತ್ವದಂಥ ಅಮಾನವೀಯ ಸಮಸ್ಯೆಗಳ ಬಗ್ಗೆ ಗಂಭೀರ ಚಿಂತನೆ ನಡೆಸಿದ್ದಾರೆ.

'ವಜ್ರಗಳ' ಹಾಗೆ ಹೆಣ್ಣು ಮಕ್ಕಳನ್ನು ಜೋಪಾನವಾಗಿಟ್ಟ ಇಸ್ಲಾಂಧರ್ಮದಲ್ಲಿ 'ಚಪ್ಪಲಿ'ಯ ಹಾಗೆ ಬಳಸಿ ಎಸೆದದ್ದರ ಬಗ್ಗೆ ಸಾಕಷ್ಟು ಪುರಾವೆಗಳನ್ನು ಒದಗಿಸುತ್ತಾರೆ. ಧರ್ಮ ಸಂಸ್ಕೃತಿಯ ಹೆಸರಿನಲ್ಲಿ ನಡೆದ ಮಹಿಳೆಯರ ಶೋಷಣೆಯನ್ನು ಸಾರಾ ಗಂಭೀರವಾಗಿಯೇ ಪರಿಗಣಿಸಿ ಬಂಡೆದ್ದು ಪ್ರತಿಭಟಿಸುತ್ತಾರೆ. ಆರಂಭದ ಕೃತಿಗಳಲ್ಲಿ ಪ್ರತಿಭಟನೆ ಅಸಹಾಯಕ ನೆಲೆಯಲ್ಲಿ ಮೂಕವೆನಿಸಿದರೂ ಮುಂದಿನ ಕೃತಿಗಳಲ್ಲಿ ಅಸಹಾಯಕತೆಯ ಪ್ರಶ್ನೆ ಪ್ರತಿಭಟನೆಯಾಗಿ ಸ್ಫೋಟಿಸುತ್ತದೆ. ಸಾರಾ ಅವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯಲ್ಲಿ ಹೆಣ್ಣನ್ನು ಧರ್ಮದ ಹೆಸರಿನಲ್ಲಿ ಹತ್ತಿಕ್ಕಿರುವುದನ್ನು ಹೇಳುತ್ತದೆ.

ಬಾನುಮುಸ್ತಾಕ್ ಕತೆಗಳ ಅಭಿವ್ಯಕ್ತಿಯ ರೀತಿ ಸಾರಾ ಅವರಿಗಿಂತ ಭಿನ್ನವಾದುದು. ೧೯೮೧ರಲ್ಲಿ ಲಂಕೇಶ ಪತ್ರಿಕೆಯ ವರದಿಗಾರರಾಗಿ ಬರಹಲೋಕವನ್ನು ಪ್ರವೇಶಿಸಿದ ಬಾನು ಅವರು ರೈತ, ದಲಿತ ಬಂಡಾಯ ಮತ್ತು ಸ್ತ್ರೀಪರ ಚಳುವಳಿಗಳ ಸಕ್ರಿಯ ಕಾರ್ಯಕರ್ತರು. ವೃತ್ತಿಯಿಂದ ನ್ಯಾಯವಾದಿಗಳು ಪ್ರವೃತ್ತಿಯಿಂದ ಲೇಖಕಿ, ಪತ್ರಕರ್ತೆ, ಸಾಮಾಜಿಕ ಕಾರ್ಯಕರ್ತೆ, ಸಾರ್ವಜನಿಕ ರಂಗದ ಸಕ್ರಿಯ ಸಂಪರ್ಕದಲ್ಲಿರುವ ಬಾನು ಅವರ ವಿಸ್ತೃತ ಲೋಕಾನುಭವ, ಸಾಮಾಜಿಕ ಮೀಮಾಂಸೆ ಮತ್ತು ಸ್ತ್ರೀಪರ ಕಾಳಜಿಗಳು ಅವರ ಕತೆ, ಕಾದಂಬರಿ, ಕವನಗಳ ಸ್ತ್ರೀಲೋಕವನ್ನು ವಿಭಿನ್ನವಾಗಿಸಿವೆ. ಈವರೆಗೆ ಪ್ರಕಟವಾಗಿರುವ ಅವರ ಕೃತಿಗಳು 'ಕುಬ್ರ ಕಾದಂಬರಿ', 'ಹೆಜ್ಜೆ ಮೂಡಿದ ಹಾದಿ', 'ಬೆಂಕಿ ಮಳೆ', 'ಎದೆಯ ಹಣತೆ', 'ಸಫೀರಾ ಕಥಾಸಂಕಲನ'ಗಳು ಬಾನು ಅವರ ಸಣ್ಣಕತೆ "ಹಸೀನಾ" ಗಿರೀಶ್ ಕಾಸರವಳ್ಳಿಯವರ ನಿರ್ದೇಶನದಲ್ಲಿ ಚಲನಚಿತ್ರವಾಗಿದೆ. ಅನೇಕ ಕತೆಗಳು ಮಲೆಯಾಳಂ, ಹಿಂದಿ ಭಾಷೆಗೆ ಅನುವಾದಗೊಂಡಿವೆ. 'ಬೆಂಕಿಮಳೆ' ಕತೆಯು ಉರ್ದು ಭಾಷೆಗೆ ಅನುವಾದಗೊಂಡಿದೆ.

'ನಮ್ಮೊಳಗೊಬ್ಬ ಝುರೀನಾ'ದಂತಹ ವಿಶಿಷ್ಟ ಕತೆಯ ಮೂಲಕ ಆಧುನಿಕ ವಿದ್ಯಾವಂತ ಮುಸ್ಲಿಂ ಹೆಣ್ಣೊಬ್ಬಳು ತನ್ನ ಮಿತಿಗಳನ್ನು ಮೀರುವ ಚಿತ್ರವೊಂದನ್ನು ಕಟ್ಟಿಕೊಡುತ್ತಾರೆ ಬಾನು. ೧೯೮೦ರ ದಶಕ ಕನ್ನಡದಲ್ಲಿ ಪ್ರಬಲ ದನಿಯಾಗಿ ಕೇಳಿಸಿಕೊಂಡ ದಲಿತ ಬಂಡಾಯ ಚಳುವಳಿಯ ಪ್ರತಿರೋಧದ ಸತ್ವವು ಕನ್ನಡ ಸಾಹಿತ್ಯಕ್ಕೆ ಶೋಷಿತ ಸಂವೇದನೆಯ ಅಗೋಚರ ಆಯಾಮಗಳನ್ನು ಪರಿಚಯಿಸಿದ ಮಹತ್ವದ ಸಂದರ್ಭದಲ್ಲಿ ಶೂದ್ರ ವರ್ಗದ ಪ್ರಬಲ ಪ್ರತಿಭಟನೆಯ ಸ್ತ್ರೀ ಧ್ವನಿಯನ್ನು ತಮ್ಮ ಕಾದಂಬರಿಗಳ ಮೂಲಕ ಕೇಳಿಸಿದವರು ಗೀತಾ ನಾಗಭೂಷಣ. ಗುಲ್ಬರ್ಗಾ ಕಡೆಯ ಭಾಷೆಯನ್ನು ಬಳಸಿ ಬರೆಯುವಾಗ ತೀವ್ರ ಪ್ರತಿಭಟನೆಯಿಂದ ನಿರ್ಭಿಡೆಯ ಭಾಷಾ ಶೈಲಿಯಿಂದ ತಮ್ಮ ಅನನ್ಯತೆಯನ್ನು ಸ್ಥಾಪಿಸಿಕೊಂಡವರು. ೧೯೬೦ರ ದಶಕದಲ್ಲಿ ಬರವಣಿಗೆ ಪ್ರಾರಂಭಿಸಿದರೂ ವಿಶೇಷ ಗಮನ ಸೆಳೆದದ್ದು ೮೦ರ ದಶಕದಲ್ಲಿ. ಗೀತಾ

ಅವರು ಈವರೆಗೆ ಪ್ರಕಟಿಸಿದ ಕತೆಗಳು ೫೦. ನಾಟಕಗಳು ೧೫, ಕಾದಂಬರಿಗಳು ೪೦. 'ಖೇಮಣ್ಣ' ಹೆಸರಿನ ಸಂಪಾದನಾ ಕೃತಿ, 'ದುರಗಮುರಗಿ' ಸಂಸ್ಕೃತಿಯನ್ನು ಕುರಿತು ರಚಿಸಿದ ಸಂಶೋಧನಾತ್ಮಕ ಪುಸ್ತಕ ಅವರ ಸಾಹಿತ್ಯಿಕ ಕ್ರಿಯಾಶೀಲತೆಯ ಫಲ. 'ಕ್ಯಾದಗಿ ಬನದಾಗ ಕತೆಯಾಗಿ ನಿಂತವರು' (೨೦೦೭) ಈವರೆಗಿನ ಸಮಗ್ರ ಕಥಾ ಸಂಕಲನ. 'ತಾವರೆಯ ಹೂವು' ಮೊದಲ ಕಾದಂಬರಿ. ಚಂದನದ ಚಿಗುರು, ಮರಳಿನ ಮನೆಗೆ, ಅವಾಂತರ, ಅಭಿಮಾನ, ನಿನ್ನ ನನ್ನ ನಡುವೆ, ಸಪ್ತವರ್ಣದ ಸ್ವಪ್ನ ಇತ್ಯಾದಿ ಅವರ ಮೊದಲ ಹಂತದ ಜನಪ್ರಿಯ ಮಾದರಿಯ ಕಾದಂಬರಿಗಳು.

ದಂಗೆ, ಹಸಿಮಾಂಸ ಮತ್ತು ಹದ್ದುಗಳು, ನೀಲಗಂಗಾ, ಮಾಪುರ ತಾಯಿಯ ಮಕ್ಕಳು, ಧುಮ್ಮಸ್ಸು, ಕಾಗೆ ಮುಟ್ಟಿತು, ಬದುಕು, ಕಾದಂಬರಿಗಳಲ್ಲೂ ದಲಿತ ಸಂಸ್ಕೃತಿ – ಸಂವೇದನೆಯ ವಿಭಿನ್ನ ಜಗತ್ತನ್ನು ಪರಿಚಯಿಸುವ ಅವರ ಕಾದಂಬರಿಗಳು ಈವರೆಗಿನ ಮಿತಿಗಳನ್ನು ಮೀರಿ ಕನ್ನಡ ಸಾಹಿತ್ಯ ಹಿಂದೆಂದೂ ಕಾಣಲಾಗದ ಹೊಸ ಅನುಭವ ಲೋಕವನ್ನು ಅನಾವರಣಗೊಳಿಸಿದವು. ಜಾತಿ ಪದ್ಧತಿಯ ಶೋಷಿತ ನೀತಿಯಿಂದಾಗಿ ಬದುಕಿನ ಅವಕಾಶಗಳನ್ನು ಕಳೆದುಕೊಂಡು ನರಳುವ ಶೋಷಿತ ಜನಾಂಗದ ಬರವಣಿಗೆಯನ್ನು ಹಸಿಮಾಂಸ ಮತ್ತು ಹದ್ದುಗಳು, ಮಾಪುರ ತಾಯಿಯ ಮಕ್ಕಳು ಇತ್ಯಾದಿ ಕಾದಂಬರಿಗಳ ಮೂಲಕ ಚಿಂತನೆಗೆ ಒಳಪಡಿಸುತ್ತಾರೆ. ಧುಮ್ಮಸು, ನೀಲಗಂಗಾ, ಚೈತ್ರದ ಹಾಡು, ದಂಗೆ ಇತ್ಯಾದಿ ಕಾದಂಬರಿಗಳ ಮೂಲಕ ದಲಿತ ಸ್ತ್ರೀಯರು, ಮೇಲ್ವರ್ಗದ ಪುರುಷರಿಂದ ಅನುಭವಿಸುವ ಲೈಂಗಿಕ ಶೋಷಣೆಯ ಕ್ರೂರ ಮುಖಗಳನ್ನು ಅನಾವರಣಗೊಳಿಸಿದ್ದಾರೆ.

'ಬದುಕು' ಗೀತಾ ನಾಗಭೂಷಣರ ಬೃಹತ್ ಕಾದಂಬರಿ. ಅವರೆ ಹೇಳುವಂತೆ 'ಇದು ನನ್ನ ಜಿಲ್ಲೆಯ ಖರೆ ಖರೇ ಜವಾರಿ ಕಥೆ' ಎಂದಿದ್ದಾರೆ. ಅವರ ಭಾಷೆ ಜವಾರಿ ಕಿಲಾರಿ ಅಲ್ಲ, ಬಯಲು ಸೀಮೆಯ ಜನಪದ ಬದುಕಿನ ಕಷ್ಟಸುಖಗಳ ಸರಮಾಲೆಯಾಗಿದೆ. ಸ್ತ್ರೀ ಶೋಷಣೆಯ ವಿರುದ್ಧದ ಗದ್ಯ ರೂಪದ ಹಾಡಿನ ಬದುಕು. 'ಮಲ್ಲಪ್ಪ'ನ ಇಡೀ ಬದುಕಿನ ಸುತ್ತ ತರಂಗಗಳನ್ನೆಬ್ಬಿಸುವ ಈ ಕಾದಂಬರಿ ಶುದ್ಧ ಗ್ರಾಮೀಣ ಬದುಕಿನ ಕೌಟುಂಬಿಕ ಬೆಳವಣಿಗೆಯನ್ನು ಸೂಚಿಸುತ್ತದೆ.

ಗ್ರಾಮಾಯಣವನ್ನು ಸ್ಮರಣೆಗೆ ತರುವ ಬದುಕು ಗ್ರಾಮಾಯಣಕ್ಕೆ ಬಹಳ ಸಮೀಪ, ಗ್ರಾಮಾಯಣ ಪಾದಳ್ಳಿಯೆನ್ನುವ ಒಂದು ಹಳ್ಳಿಯ ದುರಂತ ಕಥೆಯಾಗಿ ಕಾಣುತ್ತದೆ. ಕುಡಿತ, ಹಾದರಗಳಿಗೆ ಇಲ್ಲಿ ಬರಗಾಲವೇ ಇಲ್ಲ. ಗೀತಾ ಅವರ ಎಲ್ಲಾ ಕಾದಂಬರಿಗಳಲ್ಲಿ ವ್ಯಕ್ತಗೊಳ್ಳುವ

ಭಾಷೆ ಶುದ್ಧ ಮಣ್ಣಿನ ವಾಸನೆಯಿಂದ ಕೂಡಿದ್ದಾಗಿದೆ. ಭಾಷೆಗೆ ಮಡಿವಂತಿಕೆ ಸಲ್ಲದು ಅದು ಮಡಿವಂತಿಕೆ ಏನಾದರೂ ರೂಪಿಸಿಕೊಳ್ಳತ್ತ ಹೋದರೆ ಭಾವದ ಸಮರ್ಥ ಅಭಿವ್ಯಕ್ತಿಯಲ್ಲಿ ಅದು ಆಯತಪ್ಪಿ ಬೀಳುವ ಸಂಭವವೂ ಇರುತ್ತದೆ. ಹೀಗಾಗಿ ನಾಗಭೂಷಣರ ಭಾಷೆ ಗಟ್ಟಿಮುಟ್ಟಾದ ಭಾಷೆ.

ಪರಿಚಯಿಸಲೇ ಬೇಕಾದ ಮತ್ತೊಬ್ಬ ಲೇಖಕಿ ಸುಧಾಮೂರ್ತಿ. ಭಾರತಕ್ಕೆ ಇಡಿಯ ಕಾರ್ಪೋರೇಟ್ ಜಗತ್ತಿನಲ್ಲಿ ಪ್ರತಿಷ್ಠಿತ ಸ್ಥಾನಮಾನ ತಂದುಕೊಟ್ಟಿರುವ ಬಹುರಾಷ್ಟ್ರೀಯ ಐಟಿ ಕಂಪನಿ ಇನ್‌ಫೋಸಿಸ್‌ದ ಹಿಂದಿನ ಪ್ರೇರಕ ಶಕ್ತಿಯೂ ಅದರ ರೂವಾರಿಗಳಲ್ಲೊಬ್ಬರೂ ಆದ ಸುಧಾಮೂರ್ತಿ ಕನ್ನಡದ ಒಬ್ಬ ವಿಶಿಷ್ಟ ಲೇಖಕಿ. ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಲ್ಲಿ ವಿಶೇಷ ಪರಿಶ್ರಮಗೈದು, ಪ್ರಸಿದ್ಧ ಇನ್‌ಫೋಸಿಸ್ ಫೌಂಡೇಷನ್ನಿನ ಅಧ್ಯಕ್ಷೆಯಾಗಿ, ಸತತವಾಗಿ ಸಾಮಾಜಿಕ ಕಲ್ಯಾಣ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಇವರು ಕನ್ನಡದಲ್ಲಿ ಹಲವು ಒಳ್ಳೆಯ ಕಾದಂಬರಿಗಳನ್ನು, ಕತೆಗಳನ್ನು, ಲೇಖನಗಳನ್ನು ಬರೆದು ಜನಪ್ರಿಯತೆಯನ್ನು ಗಳಿಸಿದ್ದಾರೆ. ಭಾರತದ ಎಲ್ಲ ಭಾಷೆಗಳಲ್ಲಿ ಹಾಗೂ ಹಲವು ವಿದೇಶಿ ಭಾಷೆಗಳಲ್ಲಿ ಇವರ ಕಾದಂಬರಿಗಳು ಅನುವಾದಗೊಂಡಿವೆ. ಮೊದಲಲ್ಲಿ ಪ್ರಬಂಧಗಳನ್ನು, ಚಿಕ್ಕ ಕತೆಗಳನ್ನು ಬರೆಯುತ್ತಿದ್ದರು. ಅಮೇರಿಕೆಗೆ ಹೋಗಿ ಬಂದ ನಂತರ ಬರೆದ ಪ್ರವಾಸ ಕಥನವು ೧೯೭೮ರಲ್ಲಿ ಮನೋಹರ ಗ್ರಂಥಮಾಲೆಯಿಂದ ಪ್ರಕಟವಾಯಿತು. ಇದು ಸುಧಾ ಅವರ ಮೊದಲ ಪ್ರಕಟಿತ ಕೃತಿ. ಮುಂದೆ ೧೯೮೦ರಲ್ಲಿ ಇವರ ಮೊದಲ ಸೃಜನಶೀಲ ಕೃತಿ "ಅತಿರಿಕ್ತೆ" ಎಂಬ ಕಾದಂಬರಿ ಹೊರಬಂದಿತು. ಸುಧಾ ಅವರಿಗೆ ಕಾರ್ಪೋರೇಟ್ ಜಗತ್ತಿನ ನಿಕಟ ಸಂಪರ್ಕವಾಗಲಿ, ಅನುಭವವಾಗಲಿ ಅದಕ್ಕೊಂದು ಹಿನ್ನೆಲೆಯೂ ಇರದ ಅವರ ಆ ದಿನಗಳಲ್ಲಿ ಮುಂದೊಮ್ಮೆ ಹೀಗಾಗಬಹುದು ಅಂಥ ಭವಿಷ್ಯದ ಪರಿಸ್ಥಿತಿಯ ಬಗ್ಗೆ ಕಲ್ಪನೆ ಮಾಡಿ ಬರೆದ ಕಾದಂಬರಿ ಅತಿರಿಕ್ತೆ. ಇವರ ಇತರೆ ಕೃತಿಗಳಲ್ಲಿ ಪರಿಧಿ ಹಾಗೂ ಸಾಮಾನ್ಯರಲ್ಲಿ ಅಸಮಾನ್ಯರು ಪ್ರಮುಖವಾಗಿವೆ.

ಕನ್ನಡ ಕಥಾ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಧ್ವನಿ ಶ್ರೀಮತಿ ಬಿ.ಟಿ. ಲಲಿತಾ ನಾಯಕ್‌ರವರದ್ದು. ಚಿಕ್ಕಂದಿನಲ್ಲೇ ಬರೆದ 'ಚಂದ್ರ ಪರಭಾವ' ಎಂಬ ನಾಟಕ ಯಮಲೋಕದಲ್ಲಿಯ ಸನ್ನಿವೇಶವನ್ನು ಚಿತ್ರಿಸುವ ಇದು ಧಾರವಾಡ ಆಕಾಶವಾಣಿಯಲ್ಲಿ ರೇಡಿಯೋ ನಾಟಕವಾಗಿ ಪ್ರಸಾರವಾಯಿತು. ನಂತರದಲ್ಲಿ ಈ ನಾಟಕವನ್ನೊಳಗೊಂಡ ಸಂಕಲನ 'ಚಂದ್ರಪರಾಭವ' ಇವರ ಮೊದಲ ಸಾಹಿತ್ಯ ಕೃತಿಯಾಗಿ ೧೯೭೨ರಲ್ಲಿ ಪ್ರಕಟವಾಯಿತು.

೧೯೮೦ರಲ್ಲಿ 'ಲಂಕೇಶ್' ಪತ್ರಿಕೆಯಲ್ಲಿ ಲೇಖನ ಬರೆಯುವ ಮೂಲಕ ಇವರ ಗಂಭೀರ ಬರವಣಿಗೆ ಆರಂಭವಾಯಿತು. ದೀನದಲಿತರ ಮತ್ತು ಮಹಿಳೆಯರ ಮೇಲೆ ಎಲ್ಲಿಯೇ ಅನ್ಯಾಯ, ಅತ್ಯಾಚಾರ, ದೌರ್ಜನ್ಯಗಳು ನಡೆದಾಗ ಸ್ವತಃ ಅಲ್ಲಿ ಹೋಗಿ ನೋಡಿ, ಆ ಕುರಿತು ವರದಿ ಬರೆಯುತ್ತಿದ್ದರು. ಲಂಬಾಣಿ ಬುಡಕಟ್ಟಿನ ಕೆಳಮಧ್ಯಮ ವರ್ಗದಿಂದ ಬಂದಿದ್ದ ಲಲಿತಾರಿಗೆ ಬರವಣಿಗೆ ಆರಂಭದಲ್ಲಿ ಉಪಜೀವನಕ್ಕೆ ಮಾರ್ಗವಾಗಿ ತೆರೆದುಕೊಂಡಿತು. ಜೊತೆಗೆ ಲೇಖಕಿಯೆಂಬ ಅಸ್ಮಿತೆ ಖುಷಿ ನೀಡಿತು. ಸಾಹಿತ್ಯ ಲೋಕದಲ್ಲಿ ಇವರಿಗೊಂದು ನೆಲೆ ನೀಡಿದ 'ಗತಿ' ಕಾದಂಬರಿ ಲಂಬಾಣಿ ತಾಂಡದಲ್ಲಿಯ ಅನಕ್ಷರತೆ, ಮೌಢ್ಯಗಳನ್ನು ಅನಾವರಣಗೊಳಿಸುತ್ತ ಪುರುಷರ ದೌರ್ಜನ್ಯದಲ್ಲಿ ನರಳುವ ಹೆಣ್ಣುಮಕ್ಕಳ ಬದುಕಿನ ಧಾರುಣತೆಯನ್ನು ಚಿತ್ರಿಸುತ್ತದೆ.

'ಹಬ್ಬ ಮತ್ತು ಹುಲಿ' ಎಂಬ ಸಂಕಲನದ ಕಥೆಗಳಲ್ಲಿ ಸಾಂಪ್ರದಾಯಿಕ, ಮೂಢನಂಬಿಕೆಗಳ ಆಚರಣೆಯ ವಿರುದ್ಧ ಸ್ಪಷ್ಟ ಧ್ವನಿ ಕೇಳಿಬರುತ್ತದೆ. ಇವರ ಕಥೆಗಳು ತೆಲುಗು, ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿ ಅನುವಾದಗೊಂಡಿವೆ. 'ನಂ ರೂಪ್ಲಿ', 'ಇದೇ ಕೂಗು ಮತ್ತೆ ಮತ್ತೆ' ಎಂಬ ಕವನ ಸಂಕಲನಗಳು 'ಒಡಲ ಬೇಗೆ' ಎಂಬ ಆಯ್ದ ಕವನಗಳ ಸಂಕಲನ ಹಾಗೂ 'ಬಿದಿರು ಮಳೆ ಕಂಟಿಯಲ್ಲಿ' ಎಂಬ ಸಮಗ್ರ ಕವಿತಾ ಸಂಕಲನಗಳು ಪ್ರಕಟಗೊಂಡಿವೆ. 'ಭಟ್ಟರ ಕನಸು' ಎಂಬ ಮಕ್ಕಳ ಕಥಾಸಂಕಲನ, 'ದೇವದುರ್ಗ ತಾಲೂಕು ದರ್ಶನ' ಎಂಬ ಕ್ಷೇತ್ರ ಪರಿಚಯ ಕೃತಿ, 'ಕೈ ಹಿಡಿದು ನಡೆಸೆನ್ನನು' ಎಂಬ ಶತಾಯುಷಿಗಳ ಸಂದರ್ಶನ ಸಂಕಲನವೊಂದನ್ನು ಕೂಡ ಇವರು ಪ್ರಕಟಿಸಿದ್ದಾರೆ.

ರಾಮಕೃಷ್ಣ ಹೆಗಡೆಯವರ ಒತ್ತಾಸೆ, ದೇವೇಗೌಡ, ನಜೀರ್ ಸಾಬ್ ಇವರ ನಿರ್ದೇಶನ ಬೆಂಬಲದಿಂದ ರಾಜಕೀಯ ಪ್ರವೇಶಿಸಿದ ಲಲಿತಾ ಅವರು ವಿಧಾನ ಪರಿಷತ್ ಸದಸ್ಯೆ, ದೇವದುರ್ಗ ಕ್ಷೇತ್ರದ ಶಾಸಕಿ, ಸಚಿವೆಯೂ ಆಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಚಿವ ಸ್ಥಾನದ ಜವಾಬ್ದಾರಿಯನ್ನು ಒಟ್ಟಿಗೆ ನಿಭಾಯಿಸಿದ್ದಾರೆ.

ಚಲನಚಿತ್ರ ರಂಗದಲ್ಲಿಯೂ ಅವರ ಅಸ್ಥೆ ಕಂಡುಬರುತ್ತದೆ. 'ಝೂಡಿರೋ ಪಂಖೇರು' ಎಂಬ ಬಂಜಾರ ಭಾಷೆಯ ಚಲನಚಿತ್ರಕ್ಕೆ ಇವರು ಕಥೆ ಮತ್ತು ಸಂಭಾಷಣೆಯನ್ನು ಬರೆದದ್ದಲ್ಲದೆ ಅದರಲ್ಲಿ ಒಂದು ಪ್ರಮುಖ ಪಾತ್ರವೊಂದರಲ್ಲಿ ಕೂಡ ಅಭಿನಯಿಸಿದ್ದಾರೆ.

ವಿಜಯದಬ್ಬೆ ಕನ್ನಡ ಸಾಹಿತ್ಯ, ಸಾಮಾಜಿಕ, ಸಾಂಸ್ಕೃತಿಕ ಚಿಂತನೆಗಳಿಗೆ ಸ್ತ್ರೀವಾದಿ ಸಾಹಿತ್ಯ, ಸ್ತ್ರೀವಾದಿ ಚಳುವಳಿಎಗಳನ್ನು ಪರಿಚಯಿಸಿದವರು. ಡಾ. ಡಿ. ವಿಜಯ ಆನಂತರ

ವಿಜಯಾದಬ್ಬೆ ಆದದ್ದು, ಬೇಲೂರು ತಾಲ್ಲೂಕಿನ ಯಗಚೀ ನದಿ ದಡದ 'ದಬ್ಬೆ' ಎಂಬ ಹಳ್ಳಿಯಿಂದ ಮಾನಸ ಗಂಗೋತ್ರಿಗೆ ಅಧ್ಯಾಪಕಿಯಾಗಿ ಬಂದು ತಲುಪಿದ ಹಾದಿ ಕಠಿಣವಾದದ್ದೆ ಆಗಿತ್ತು.

ವಿಜಯ ಅವರ ವ್ಯಕ್ತಿತ್ವ ಸೃಜನಶೀಲವಾದುದು. ಇವರು 'ವಿದ್ಯಾರ್ಥಿ ಜನಪ್ರಿಯ' ಅಧ್ಯಾಪಕಿ. ಕ್ರಿಯಾಶೀಲ ವ್ಯಕ್ತಿಯಾಗಿದ್ದ ಇವರು ಸಮತಾ ಅಧ್ಯಯನ ಕೇಂದ್ರ, 'ಸಮತಾ ಸಂಘಟನೆ', ಶಕ್ತಿದಾಮದ ಕೆಲಸಗಳಿಂದ ಒಬ್ಬ 'activisit' ಆಗಿ ಬೆಳೆದವರು. ಓದು, ಪ್ರವಾಸ, ನೂರಾರು ಸ್ಥಳಗಳಲ್ಲಿ ಮಾಡಿದ ಸ್ತ್ರೀಪರ ಉಪನ್ಯಾಸಗಳಿಂದಾಗಿ ಕನ್ನಡದ ಲೇಖಕಿಯರಲ್ಲಿ ವಿಶಿಷ್ಟರೆಂದೆನಿಸಿಕೊಳ್ಳುತ್ತಾರೆ. ಇಪ್ಪತ್ತನೆಯ ಶತಮಾನದ ಕೊನೆಯ ಎರಡು ದಶಕಗಳ ಲೇಖಕಿಯರ ಬರಹಗಳನ್ನು ಗಮನಿಸಿದರೆ ವಿಜಯ ಅವರದು ಮುಖ್ಯ ಹೆಸರಾಗಿ ಕಾಣಿಸುತ್ತದೆ. ಕನ್ನಡದ ಸಂದರ್ಭದಲ್ಲಿ ಸ್ತ್ರೀವಾದಿ ವಿಮರ್ಶೆಯನ್ನು ಚಿಂತನೆಯನ್ನು ಕಟ್ಟಿ ಬೆಳೆಸಿದವರಲ್ಲಿ ವಿಜಯದಬ್ಬೆ ಮುಖ್ಯರು. 'ಮಹಿಳೆ-ಸಾಹಿತ್ಯ-ಸಮಾಜ', 'ನಾರಿ-ದಾರಿ-ದಿಗಂತ' ಇವರ ವಿಮರ್ಶಾ ಕೃತಿಗಳು. 'ಮೆರಿಮೆಕಲಿಯಾಡೆ ಭೆದೂನೆ' ಹಿತೈಷಿಣಿಯ ಹೆಜ್ಜೆಗಳು, ಶಾಮಲಾ ಸಂಚಯ ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಇವರ ಸೃಜನಶೀಲ ಸಾಹಿತ್ಯವೆಂದರೆ ಮೂರು ಕವನ ಸಂಗ್ರಹಗಳು ಮತ್ತು ಒಂದು ಪ್ರವಾಸ ಸಾಹಿತ್ಯ. ಇವರ ಮೊದಲ ಸಂಗ್ರಹ 'ಇರುತ್ತವೆ' ೧೯೭೫ರಲ್ಲಿ ಪ್ರಕಟವಾಯಿತು. ೧೯೮೫ರಲ್ಲಿ ಎರಡನೇ ಪುಸ್ತಕ 'ನೀರು ಲೋಹದ ಚಿಂತೆ ೧೯೯೫ರಲ್ಲಿ 'ತಿರುಗಿನಿಂತ ಪ್ರಶ್ನೆ' ಕವನ ಸಂಗ್ರಹ ಪ್ರಕಟವಾಯಿತು. ಈ ಮೂರನ್ನೂ ಸೇರಿಸಿ ೧೯೯೬ರಲ್ಲಿ 'ಇತಿಗೀತಿಕೆ' ಹೆಸರಿನಲ್ಲಿ ಪ್ರಕಟಿಸಿದರು.

ವಿಜಯಾದಬ್ಬೆಯವರು ಕಾವ್ಯ ರಚನೆಗೆ ಪ್ರಾರಂಭಿಸಿದ ಸಮಯದಲ್ಲಿ ೧೯೭೪-೭೫ರಲ್ಲಿ ಕಥೆ, ಕಾದಂಬರಿಗಳನ್ನು ಬರೆಯುವ ಲೇಖಕಿಯರು ಸಾಕಷ್ಟಿದ್ದರೂ ಕವಯತ್ರಿಯರು ವಿರಳರಾಗಿದ್ದರು. ವಿಜಯ ಈ ಮೂಲಕ 'ಸ್ತ್ರೀಪರ ಕಾಳಜಿ', 'ಸ್ತ್ರೀ ಅಸ್ಮಿತೆಗೆ' ದನಿಯಾದರು. ವೈವಿಧ್ಯಮಯವಾದ ವಸ್ತು ಭಿನ್ನ ಶೈಲಿಯ ನಿರೂಪಣೆಗಳು ವಿಜಯಾ ಅವರ ಕವನ ಸಂಕಲನಗಳ ವೈಶಿಷ್ಟ್ಯ. ಸಂಕೀರ್ಣವಾದ ಭಾಷೆ, ನಿರೂಪಣೆಯಲ್ಲಿ ಸಂಯಮ ಇವರ ಕಾವ್ಯದ ಮುಖ್ಯ ಲಕ್ಷಣ. ಮಾನವೀಯ ಸಂಬಂಧಗಳ ಶೋಧ, ಇತಿಹಾಸ, ಪುರಾಣದ ಪಾತ್ರಗಳು ಸನ್ನಿವೇಶಗಳ ಮೂಲಕ ವರ್ತಮಾನವನ್ನು ಅನುಸಂದಾನಿಸುವ ಪ್ರಯತ್ನ ವಿಜಯ ಅವರ ಕವಿತೆಗಳನ್ನು ವಾಸ್ತವದ ನೆಲೆಗಟ್ಟಿನಲ್ಲಿ ನಿಲ್ಲುವಂತೆ ಮಾಡುತ್ತವೆ.

"೨೦ನೇ ಶತಮಾನದ ಕೊನೆಯ ಘಟ್ಟದಲ್ಲಿ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಬರವಣಿಗೆಗೆ ಇಳಿದರು. ಹೊಸತಲೆಮಾರಿನಲ್ಲಿ ಮೊದಲು ಆಶಾದೇವಿ, ನಾಗವೇಣಿ, ಜಾಹ್ನವಿ ನಂತರ ವಿನಯ, ಮಮತಾ, ವೇದ, ಭಗವತಿ ಹೀಗೆ ಹಲವಾರು ಲೇಖಕಿಯರು ಬರೆಯುತ್ತಿರುವುದು ಕಾಣುತ್ತದೆ. ಇವರಿಗೂ ಹಿಂದಿನ ಲೇಖಕಿಯರಿಗೂ ಆಶಯದಲ್ಲಿ ದೊಡ್ಡ ಫರಕು ಕಾಣುವುದಿಲ್ಲ. ಹೆಚ್ಚುಕಡಿಮೆ ಎಲ್ಲರೂ ಸಮಾಜದಲ್ಲಿರುವ ಲಿಂಗತಾರತಮ್ಯದ ಬಗ್ಗೆ ಬರೆಯುತ್ತಿದ್ದಾರೆ. ಹಿಂದಿನ ತಲೆಮಾರಿನ ಲೇಖಕಿಯರಲ್ಲಿ ಇರುವ ಹಾಗೆಯೇ ಇವರಲ್ಲೂ ಕುದಿತವಿದೆ. ಜಾಗತೀಕರಣದಂತಹ ವಿಶಾಲ ಸಮಸ್ಯೆಗಳಿಗಿಂತ ಸ್ತ್ರೀತ್ವದ ಅಸ್ತಿತ್ವ ಹಾಗೂ ಅದರ ಅಭಿವ್ಯಕ್ತಿಯ ಪ್ರಶ್ನೆಗಳು ಇವರಿಗೆ ಹೆಚ್ಚು ಕಾಡುತ್ತಿವೆ. ಹಿಂದಿನ ತಲೆಮಾರಿಗೆ ಹೋಲಿಸಿದರೆ ಇವರು ಹೆಚ್ಚು ಆತ್ಮವಿಶ್ವಾಸದಿಂದ ಕೂಡಾ ಬರೆಯುವವರಾಗಿದ್ದಾರೆ. ನಾಗವೇಣಿ, ಸುನಂದ ಕಡಮೆ, ವಿನಯಾ ಹಾಗೂ ಜಾಹ್ನವಿ ಅವರು ಕಥನದಲ್ಲಿ ಮಾಡಿರುವ ಸಾಧನೆಯು ದೊಡ್ಡದಾಗಿದೆ. ತಾರಿಣಿ, ಆಶಾದೇವಿ, ವಿನಯ, ಸಬಿತಾ ಅಧ್ಯಾಪಕಿಯರಾದ ಕಾರಣದಿಂದಲೋ ಏನೋ, ಸಾಹಿತ್ಯ ವಿಮರ್ಶೆಯನ್ನು ಬರೆಯುತ್ತಿರುವರು. ಕನ್ನಡ ವಿಮರ್ಶೆ ಎಷ್ಟೇ ಉನ್ನತ ಹಂತವನ್ನು ತಲುಪಿರಲಿ, ಅದರ ಆಶಯದಲ್ಲಿ ಪುರುಷವಾದಿ ದೃಷ್ಟಿಕೋನವು ಸೂಕ್ತವಾಗಿದೆ. ಅದರ ಸೊಕ್ಕನ್ನು ಮುರಿಯಬೇಕೆಂದರೆ ಹೆಚ್ಚು ಹೆಚ್ಚು ಲೇಖಕಿಯರು ವಿಮರ್ಶೆಯಲ್ಲಿ ತೊಡಗುವ ಅಗತ್ಯವಿದೆ".[೯]

"ಲೇಖಕಿಯರು ತಮ್ಮ ಬರಹದಲ್ಲಿ ಶೋಧಿಸುತ್ತಿರುವ ಭಾಷೆಯು ಹಿರಿಯ ಲೇಖಕಿಯರು ಬಳಸುತ್ತಿದ್ದ ಅಸ್ಮಿತೆ ಶೋಧದ ಭಾಷೆಯೇ ಆಗಿದೆ. ಆದರೆ ಇದರಲ್ಲಿ ಹೊಸ ಹೊಸ ಆಯಾಮಗಳು ಕಾಣುತ್ತಿವೆ. ಇದು ಕೇವಲ ಸ್ತ್ರೀವಾದಿ ಚಿಂತನೆಗೆ ವಾಹಕವಾಗಿ ಸೀಮಿತಗೊಳ್ಳಲು ನಿರಾಕರಿಸುವ ಭಾಷೆಯಾಗಿದೆ. ನಾಗವೇಣಿ, ದು. ಸರಸ್ವತಿ, ವಿನಯಾ, ಸುನಂದಾ ಕಡಮೆ, ರೂಪಾ ಹಾಸನ, ಅಕ್ಷತಾ ಹಾಗೂ ತಾರಿಣಿ ಅವರಲ್ಲಿ ಇದನ್ನು ಕಾಣುತ್ತೇವೆ. ಅದರಲ್ಲೂ ಗದ್ಯಬರೆಹ ಮಾಡುವ ಲೇಖಕಿಯರಲ್ಲಿ ಹೊಸ ಭಾಷೆಯ ಪ್ರಯೋಗಗಳು ಮುಖ್ಯವಾಗಿವೆ. ಸುನಂದಾ ಕಡಮೆಯವರ ಕಥೆಗಳು ಇದನ್ನು ಸೂಕ್ಷ್ಮಸ್ತರಕ್ಕೆ ಒಯ್ಯುತ್ತಿವೆ. ಬರೆಹಗಾರರು ಹೊಸ ಭಾಷೆಯನ್ನು ಹುಟ್ಟಿಸಿಕೊಳ್ಳುವುದು ಎಂದರೆ ಹೊಸ ಜೀವನ ದರ್ಶನವನ್ನು ಕಂಡುಕೊಳ್ಳುವುದು ಮಾತ್ರವಲ್ಲ, ತನ್ನ ಸಮಾಜಕ್ಕೂ ತಾನು ಬದುಕುತ್ತಿರುವ ಬದುಕಿಗೂ ಹೆಚ್ಚು ಸಂಗತವಾಗಿಸಲು ಹೋರಾಟ ಮಾಡುವುದು ಕೂಡ ಆಗಿದೆ".[೧೦]

ಸಾಂಪ್ರದಾಯಿಕ ಕೌಟುಂಬಿಕ ಪರಿಸ್ಥಿತಿಗಳಿಂದ ಲೇಖಕಿಯರು ಬರೆದುದು ಎಂಬ ಕಾರಣದಿಂದ ಒಂದು ನಿರಾಕರಣೆ ಸರಿಯಲ್ಲ. ತಿರುಮಲಾಂಬಾ: ತ್ರಿವೇಣಿ : ಮುಂತಾದ ಲೇಖಕಿಯರು ತಮ್ಮ ಬರೆಹಗಳ ಒಳಗಡೆಗೆ ಸಾಂಪ್ರದಾಯಿಕ ಸಮಾಜದ ರೀತಿ ರಿವಾಜುಗಳಿಗೆ ಸೆಡ್ಡು ಹೊಡೆದು ಬರೆದರು ಮತ್ತು ಮಧ್ಯಮ ವರ್ಗದ ಲೇಖಕಿಯರು ಎದುರಿಸಿದ ಸಮಸ್ಯೆಗಳು 'ವಿದಾಯ' ಮತ್ತು 'ಹೊಸದರ ಆಗಮನ'ದ ಸೂಚನೆಯನ್ನು ನೀಡುತ್ತದೆ. ಇದೇ 'ವಿದಾಯ' ಮತ್ತು 'ಹೊಸದರ ಆಗಮನದ ಸ್ವರೂಪಗಳು ಲಲಿತಾನಾಯಕ್ : ಸಾರಾ ಅವರ ಕಡೆಗೆ ಬಂದಾಗ ಬೇರೆಯಾಗುತ್ತದೆ. ಕೆಳಜಾತಿಯ ಜೀವನ ಕ್ರಮದಲ್ಲಿ ತಲ್ಲಣಗಳ ವಿದಾಯವು ಲಲಿತಾನಾಯಕ : ಗೀತಾನಾಗಭೂಷಣ್ ಬರೆಹಗಳಲ್ಲಿ ಮುಖ್ಯವಾದರೆ, ಸಾರಾ

ಅವರ ಕಾದಂಬರಿಗಳಲ್ಲಿ ಅಂಥ ಧಾರ್ಮಿಕ ಸಂಪ್ರದಾಯಗಳ ವಿದಾಯವು ಪ್ರಮುಖ ಪ್ರಸ್ಥಾನಗಳಾಗಿವೆ. ಪ್ರಗತಿಪರ ದೃಷ್ಟಿಕೋನವು ಈ ರೀತಿಯ 'ವಿದಾಯ'ದ ಹಿಂದಿರುವ ಪ್ರಮುಖ ತಾತ್ತ್ವಿಕ ಕೇಂದ್ರಗಳಾಗಿವೆಯೆಂಬುದು ಗಮನಾರ್ಹ. ವೈಜ್ಞಾನಿಕತೆ ಮತ್ತು ಪ್ರಗತಿಪರ ದೃಷ್ಟಿಕೋನಗಳಿಗೆ ವಾಸ್ತವವಾಗಿ ಅನೇಕ ಭೇದಗಳಿವೆಯಾದರೂ ವಸಾಹತೋತ್ತರ ಸನ್ನಿವೇಶದಲ್ಲಿ 'ಪ್ರಗತಿ'ಯೆಂಬುದನ್ನು ಪ್ರತಿಯೊಬ್ಬ ಲೇಖಕರು: ಲೇಖಕಿಯರು ತಮಗೆ ಬೇಕಾದಂತೆ ನಿರ್ವಚಿಸುವ ಪ್ರಯತ್ನವನ್ನು ಮಾಡಿದ್ದಾರೆ. ಉದಾಹರಣೆಗೆ ಮತ-ಧರ್ಮಗಳ ನಿರಾಕರಣೆ : ಜಾತಿ ನಿರ್ಮೂಲನೆಯಂಥ ಅಂಶಗಳನ್ನು ನಾವು ಸುಲಭವಾಗಿ 'ಪ್ರಗತಿಪರ' ದೃಷ್ಟಿಕೋನವೆಂದು ಕರೆಯುತ್ತೇವೆ.[೧೧]

ಅಡಿಟಿಪ್ಪಣಿಗಳು

೧. ಸಂಪಾದಕರು ಬರಗೂರು ರಾಮಚಂದ್ರಪ್ಪ, ***ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ,*** ಪು.ಸ. ೧೦೧

೨. ***ಕನ್ನಡ ಸಾಹಿತ್ಯ ಸಂದರ್ಭ,*** ಕನ್ನಡ ಸಾಹಿತ್ಯ ಅಕಾಡೆಮಿ ಪ್ರಕಟಣೆ, ಪು.ಸ. ೨೩೦

೩. ಪ್ರಜಾವಾಣಿ, ***ಸಾಹಿತ್ಯ ಪುರಾವಣಿ,*** ಸಂಚಿಕೆ ೧೪, ಭಾನುವಾರ ೪ ಮಾರ್ಚ್ ೨೦೧೨

೪. ***ನಿರ್ದಿಗಂತ,*** ಸಂಪುಟ ೧, ವೀಣಾ ಶಾಂತೇಶ್ವರ ಅಭಿನಂದನಾ ಗ್ರಂಥ, ಪು.ಸ. ೩೩೬

೫. ಅನುಪಮ ನಿರಂಜನ, ***ಮಾಧವಿ,*** ಪು.ಸ. ೪೯

೬. ***ನಿರ್ದಿಗಂತ,*** ಸಂಪುಟ ೧, ಭಾಗ ೪, ಭಾರತೀಯ ಭಾಷೆಗಳಲ್ಲಿ ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ, ಪು.ಸ. ೩೩೩

೭. ***ನಿರ್ದಿಗಂತ,*** ಸಂಪುಟ ೨, ಡಾ. ಎಲ್.ಜಿ. ಮೀರಾ, ಸಂದರ್ಶನ, ಪು.ಸ. ೧೦೪

೮. ಟಿ.ಪಿ. ಅಶೋಕ, ***ಸಾಹಿತ್ಯ ಸಂಬಂಧ ವಿಮರ್ಶೆ,*** ಪು.ಸ. ೧೩೪

೯. ರಹಮತ್ ತರೀಕೆರೆ, ***ಹೊಸತಲೆಮಾರಿನ ತಲ್ಲಣ,*** ಪು.ಸ. ೧೬೧

೧೦. ಅದೇ, ಪು.ಸ. ೧೬೮

೧೧. ಕೇಶವ ಶರ್ಮ ಕೆ., ***ಸ್ತ್ರೀವಾದಿ ಆಖ್ಯಾನ,*** ಪು.ಸ. ೬೫

ಅಧ್ಯಾಯ – ೩

ವೈದೇಹಿ ಮತ್ತು ನಾಗವೇಣಿ ಅವರ ಕಥಾ ಸಾಹಿತ್ಯ

ವೈದೇಹಿ ಕಥೆಗಳನ್ನು ಬರೆಯಲು ಪ್ರಾರಂಭಿಸಿದ್ದು ೭೦ರ ದಶಕದ ಮಧ್ಯಭಾಗದಲ್ಲಿ. ಅದು ನವ್ಯ ಚಳುವಳಿಯ ವಿರುದ್ಧ ಅನೇಕ ಮುಖ್ಯ ಲೇಖಕರು ಬಂಡೇಳುತ್ತಿದ್ದ ಕಾಲ. ಅದು ಸಾಹಿತ್ಯ ಹೆಚ್ಚು ಸಮಾಜಮುಖಿಯಾಗಬೇಕೆಂಬ ಅಪೇಕ್ಷೆ ವ್ಯಕ್ತವಾಗುತ್ತಿದ್ದ ಕಾಲ. ಈ ಕಾಲದ ಮತ್ತೊಂದು ಮಹತ್ವದ ಬೆಳವಣಿಗೆಯೆಂದರೆ, ಅಧಿಕ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಬರೆಯಲಾರಂಭಿಸಿದ್ದು. ಕೊಡಗಿನ ಗೌರಮ್ಮ, ತ್ರಿವೇಣಿ, ವಾಣಿ, ಎಂ.ಕೆ. ಇಂದಿರಾ, ಅನುಪಮಾ ನಿರಂಜನರ ನಂತರ ಎಂಬತ್ತರ ದಶಕದಲ್ಲಿ ಮಹಿಳಾ ಸಾಹಿತ್ಯ ತನ್ನ ಸ್ವತಂತ್ರ ಅಸ್ತಿತ್ವ ಸ್ಥಾಪಿಸಿಕೊಳ್ಳುವಷ್ಟು ಗಟ್ಟಿಯಾಗಿ ಬೆಳೆಯಿತು. ಪ್ರತಿಭಾ, ನೇಮಿಚಂದ್ರ, ವೈದೇಹಿ, ಸರ್ವಮಂಗಳಾ, ವಿಜಯದಬ್ಬೆ ಮುಂತಾದವರು ಯಾವ ಪ್ರಕಾರದಲ್ಲೆ ಬರೆಯಲಿ ಇದು ಸಂವೇದನಾಶೀಲೆಯಾದ ಹೆಣ್ಣೊಬ್ಬಳ ಬರಹ ಎಂದು ಹೇಳಬಹುದಾದಷ್ಟು ಸ್ತ್ರೀ ವಿಶಿಷ್ಟ ಪ್ರಜ್ಞೆ ಇಲ್ಲಿ ಗಾಢವಾಗಿತ್ತು.

ಹಾಗೆ ನೋಡಿದರೆ ವೈದೇಹಿ ಬಂಡಾಯ ಚಳವಳಿಯಲ್ಲಾಗಲೀ ಸ್ತ್ರೀ ವಿಮೋಚನಾ ಚಳವಳಿಯಲ್ಲಾಗಲೀ ನೇರವಾಗಿ ತಮ್ಮನ್ನು ಗುರುತಿಸಿಕೊಂಡವರಲ್ಲ. ಒಂದು ದೃಷ್ಟಿಯಿಂದ ವೈದೇಹಿ ತಮ್ಮ ಸಮಕಾಲೀನರಾದ ವೀಣಾ ಶಾಂತೇಶ್ವರ, ಗೀತಾ ನಾಗಭೂಷಣ, ನೇಮಿಚಂದ್ರ ಇವರಿಗಿಂತ ದೂರದ ಕೊಡಗಿನ ಗೌರಮ್ಮ, ತ್ರಿವೇಣಿಯವರಿಗೆ ಹೆಚ್ಚು ಹತ್ತಿರದವರಾಗಿ ಕಾಣುತ್ತಾರೆ. ವ್ಯಂಗ್ಯ, ಸಿಟ್ಟು, ಸಿನಿಕತನ, ಪ್ರತಿಭಟನೆಗಳಿಗಿಂತ ಉತ್ಕಟ ಭಾವಶೀಲತೆ ವೈದೇಹಿಯವರ ಸ್ಪಂದನದ ಮುಖ್ಯಗುಣ. ಹಾಗೆಂದು ಸುಲಭವಾಗಿ ದ್ರವೀಕರಿಸುವಷ್ಟು ದುರ್ಬಲ ಮನಸು ಅಲ್ಲ. ವೈದೇಹಿಯವರು ಯಾವಾಗಲೂ ಮಾನವೀಯತೆ ಪರ. ವ್ಯವಸ್ಥೆಯ ಪರ ಅಲ್ಲ. ಮದುವೆ ಕುಟುಂಬಗಳಂಥ ವ್ಯವಸ್ಥೆಗಳನ್ನು ವೈದೇಹಿ ತುಂಬಾ ಸೂಕ್ಷ್ಮವಾಗಿ ಪರಿಶೀಲಿಸುತ್ತಾರೆ. ಅವರ ಭಾವಪೂರ್ಣತೆ ಎಷ್ಟು ತೀವ್ರವಾಗಿರುತ್ತದೆ ಎಂದರೆ, ಅವು ಪರ್ಯಾಯವಾಗಿ ಜೀವನ ವಿನ್ಯಾಸವೊಂದನ್ನು ಕಟ್ಟಿಕೊಡುವಷ್ಟು.

ವಸಾಹತೋತ್ತರ ಕಾಲದ ಬ್ರಾಹ್ಮಣ ಸಮಾಜದ ಬಿಕ್ಕಟ್ಟುಗಳು : ಅವುಗಳ ಸಂಕೀರ್ಣತೆ : ಕೌಟುಂಬಿಕ ತಲ್ಲಣಗಳ ರೂಪಗಳೇ ವೈದೇಹಿಯವರ ಕಥನದ ಮೂಲ ಜೀವಾಳಗಳಾಗಿವೆ. ವೈದೇಹಿ ತಮ್ಮ ಕಥನದೊಳಗಿನ ಕುಟುಂಬದ ಹೆಣ್ಣಿನ ಅನನ್ಯತೆಯನ್ನು ಬಿಂಬಿಸುವಾಗ ಅದಕ್ಕೊಂದು 'ಪ್ರಾದೇಶಿಕ' ಹಾಗೂ 'ಕಾಲ'ದ ಆವರಣವನ್ನು ಕೊಡುತ್ತಾರೆ. ಕುಂದಾಪುರದ

ಪರಿಸರ : ಸ್ವಾತಂತ್ರ್ಯ ಅನಂತರ ಕಾಲಘಟ್ಟದಲ್ಲಿ ಕುಟುಂಬದ ಛಿದ್ರೀಕರಣ ಮತ್ತು ಅವುಗಳಲ್ಲಿ ಸಿಕ್ಕು ನಲುಗುವ ಹೆಂಗಸರು ವೈದೇಹಿಯವರ ಕಥೆಗಳಲ್ಲಿ ಎದ್ದು ಕಾಣುವ ಅಂಶಗಳಾಗಿವೆ. ಆ ಅನನ್ಯತೆಗಳನ್ನು ನಾವು ಎಲ್ಲಾ ಹೆಂಗಸರಿಗೂ ಅನ್ವಯಿಸಲು ಬರುವುದಿಲ್ಲ. ಇವರ ಕಥೆಗಳಲ್ಲಿ ಒಂದು ವರ್ಗದ ಹೆಣ್ಣಿನ ಚಿತ್ರಣಗಳೇ ಹೆಚ್ಚಿದ್ದರು ಪ್ರತಿಯೊಂದು ಹೆಣ್ಣಿನ ಅಂತರಂಗವನ್ನು ತೆರೆದಿಡುವಾಗ ಪ್ರತಿಮಾತ್ಮಕ : ಭ್ರಮಾತ್ಮಕ : ಸಾಂಕೇತಿಕ ಮಾರ್ಗಗಳನ್ನು ಅಳವಡಿಸಿಕೊಳ್ಳುತ್ತಾರೆ. ಒಂದು ದೃಷ್ಟಿಯಿಂದ ನವ್ಯ ಕಾಲದ ತಾತ್ವಿಕತೆಯಿಂದ ಪ್ರೇರಿತವಾದ ಮನೋಭಾವವಿದ್ದರೂ ಅವರ ಕಥೆಗಳ ಪ್ರಮುಖ ಕಾಳಜಿ ವ್ಯಕ್ತಿಕೇಂದ್ರಿತವೇ ಆಗಿದೆ. ಆದ್ದರಿಂದ ಒಬ್ಬಳು ಹೆಣ್ಣು 'ಒಂದು ನಿರ್ದಿಷ್ಟ ಕಾಲ', 'ಒಂದು ನಿರ್ದಿಷ್ಟ ಪರಿಸರ' ಇವರ ಕಥೆಗಳಲ್ಲಿ ಎದ್ದು ಕಾಣುತ್ತವೆ.

ಕನ್ನಡದಲ್ಲಿ ವಾಸ್ತವತಾವಾದಕ್ಕೆ ಒಂದು ಪರಂಪರೆ ಇದೆ. ಅದು ಬೋಳಾರು ಬಾಬುರಾಯರು, ಗುಲ್ವಾಡಿ ವೆಂಕಟರಾಯರು ಮುಂತಾದವರಿಂದ ಹುಟ್ಟಿ ಕಾರಂತರ ಕಾದಂಬರಿಗಳ ಕಾಲಕ್ಕಾಗಲೆ ಹೆಮ್ಮರವಾಗಿ ಬೆಳೆದಿತ್ತು. ಅನೇಕ ಲೇಖಕರು ಇದೇ ನೆರಳಲ್ಲಿ ಬರೆದರು. ಆದರೆ ಸ್ತ್ರೀಯರು ಈ ವಾಸ್ತವತೆಯ ಹಾದಿಯನ್ನು ಆಯ್ಕೆ ಮಾಡಿಕೊಂಡು ಬರೆಯುವ ಪ್ರಯತ್ನ ಮಾಡಲಿಲ್ಲ. ಮುಂದೆ ಚಂಪಾವತಿ : ಸಾರಾ ಅಬೂಬಕ್ಕರ್ : ಎಚ್. ನಾಗವೇಣಿಯವರು ಈ ಹಾದಿಯನ್ನೆ ಆಯ್ಕೆ ಮಾಡಿಕೊಂಡರು. ಅದೇ ಅಭಿವ್ಯಕ್ತಿಯ ಮಾರ್ಗದಲ್ಲಿ ಹೆಣ್ತನದ ಅನುಭವವನ್ನು ವಿಶಿಷ್ಟವಾಗಿ, ಶಕ್ತವಾಗಿ ಮಂಡಿಸಿದರು. ಇಲ್ಲಿ ಮಂಡನೆಯ ಕ್ರಮ ; ವಸ್ತು ; ವಿಷಯಗಳೆಲ್ಲವೂ ವಸಾಹತೋತ್ತರ ಸಂದರ್ಭದ ಪ್ರಮುಖ ಸಂಗತಿಗಳನ್ನು ಒಳಗೊಂಡವು.

"ವಸಾಹತು ಸಂದರ್ಭದಲ್ಲಿ ಮಹಿಳೆಯರು ಎರಡು ರೀತಿಯ ಪ್ರಭುತ್ವದ ಪರಿಚಯಕ್ಕೆ ಗುರಿಯಾಗಬೇಕಾಯಿತು. ಒಂದು ಬ್ರಿಟೀಷ್ ಪ್ರಭುತ್ವ ಮತ್ತೊಂದು ಸ್ಥಳೀಯ ಪುರುಷ ಕೇಂದ್ರಿತ ಪ್ರಭುತ್ವ. ಇವು ಎರಡೂ ಪ್ರಭುತ್ವಗಳು ಮಹಿಳೆಯರ ದೃಷ್ಟಿಯಿಂದ ಕೇಡಿನವು. ವಸಾಹತೋತ್ತರ ಸಂದರ್ಭದಲ್ಲಿ ಮಹಿಳಾ ಸಮಸ್ಯೆ ತುಂಬಾ ಸಂಕೀರ್ಣವಾಯಿತು. ಮಹಿಳಾ ಸಮಸ್ಯೆಗೆ – ಜಾಗತೀಕರಣ, ಕೋಮುವಾದ, ಜಾತಿ, ಮಾರುಕಟ್ಟೆ, ಪ್ರಾದೇಶಿಕತೆ, ಕುಟುಂಬ ಎಲ್ಲವೂ ಮುಖ್ಯಕಾರಣಗಳಾದವು. ಮಹಿಳಾ ಅನನ್ಯತೆಯ ದೃಷ್ಟಿಯಿಂದ ಇವು ಪ್ರಮುಖ ಸಮಸ್ಯೆಗಳಾದವು. ಅಂದರೆ ತಿರುಮಲಾಂಬ ಅವರಿಗಿದ್ದ ಸಮಸ್ಯೆಗಳು ನಾಗವೇಣಿಯವರು ಎದುರಿಸಿದ ಸಮಸ್ಯೆಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ನಾಗವೇಣಿಯವರ ಕಥನ ಪ್ರಪಂಚ ವಸಾಹತು ಕಾಲ ಮತ್ತು ವಸಾಹತೋತ್ತರ ಕಾಲದ ಸಮಸ್ಯೆಗಳ ಬಗ್ಗೆ ಮಹಿಳಾವಾದಿ ಪ್ರತಿಕ್ರಿಯೆಗಳಾಗಿವೆ".[7] 'ಮೀಯುವ ಆಟ' ಕಥಾ ಸಂಕಲನದ ಕೆಲವು ಕಥೆಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಈಗಾಗಲೇ ಹೇಳಿರುವಂತೆ ವಸಾಹತೋತ್ತರ ಸಂದರ್ಭದಲ್ಲಿ ಎರಡು ರೀತಿಯ ಸಂಕಥನದ ಮಾದರಿಗಳನ್ನು ಗಮನಿಸಬಹುದು ಒಂದು ಹೆಣ್ಣಿನ ಅಸ್ತಿತ್ವ ವ್ಯಕ್ತಿ ಕೇಂದ್ರಿತವಾಗಿರುವುದು. ವೀಣಾ ಶಾಂತೇಶ್ವರ, ವೈದೇಹಿ ಮೊದಲಾದವರ ಕಥೆಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಇನ್ನೊಂದು ಪ್ರಾದೇಶಿಕ ಮತ್ತು ಸಾಮಾಜಿಕ ಕಥನದ ಮಾದರಿ. ಸಾರಾ ಅಬೂಬಕ್ಕರ್, ಬಾನು ಮಸ್ತಾಕ್, ನಾಗವೇಣಿ ಈ ಮಾರ್ಗದಲ್ಲಿ ಹೆಚ್ಚು ಪ್ರಸಿದ್ಧರಾಗಿದ್ದಾರೆ. ನಾಗವೇಣಿಯವರ ಕಥನ ಕ್ರಮವು ಪ್ರಾದೇಶಿಕವಾಗಿರುವುದು ಅವರ ಮಟ್ಟಿಗೆ ಸಹಜವಾದುದೆ ಆಗಿದೆ. ಅದು ಕೃತಕವಾದುದಲ್ಲ ಮತ್ತು ಉದ್ದೇಶಪೂರ್ವಕವಾದದ್ದು ಅಲ್ಲ.

ವೈದೇಹಿ ಮತ್ತು ನಾಗವೇಣಿಯವರ ಕಥೆಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಗಮನಿಸಬೇಕಾದ ಅಂಶವೆಂದರೆ ವಸಾಹತೋತ್ತರ ಸಂದರ್ಭದ ಅನುಭವಗಳು ಎಲ್ಲರಿಗೂ ಒಂದೇ ಅಲ್ಲ ಮತ್ತು ವಸಾಹತೋತ್ತರ ಅನುಭವವು ಪ್ರಾದೇಶಿಕವಾಗಿಯೂ ಭಿನ್ನಭಿನ್ನವಾಗುತ್ತದೆ ಎಂಬುದು.

ಸಮಾನವಾದ ವಿಶಿಷ್ಟವಾದ ಪ್ರಾದೇಶಿಕ ಮತ್ತು ಪ್ರಾಕೃತಿಕ ಪರಿಸರದಲ್ಲಿ ಹುಟ್ಟಿದ ಈ ಇಬ್ಬರು ಲೇಖಕಿಯರು ತಮ್ಮ ಕೃತಿಗಳ ಮೂಲಕ ಅಭಿವ್ಯಕ್ತಿಗೊಂಡಿದ್ದು ಭಿನ್ನವಾಗಿ. ಕಥೆಗಳಿಗೆ ಆಯ್ದುಕೊಳ್ಳುವ ವಸ್ತು, ವಿಶ್ಲೇಷಣೆ, ಪಾತ್ರೀಕರಣ ವ್ಯಾಖ್ಯಾನ ನಿರೂಪಣೆ ಮತ್ತು ವಿವರಣೆಗಳಲ್ಲಿ ಸಾಮ್ಯ ವೈರುಧ್ಯಗಳಿರುವಂತೆ ಸಾಂಸ್ಕೃತಿಕವಾಗಿ ಭಿನ್ನ ನೆಲೆಗಳು ಇವೆ. ಅನುಭವವೂ ಭಿನ್ನತೆಯಿಂದ ಕೂಡಿರುವುದರಿಂದ ಸಂಸ್ಕೃತಿಯು ನೀಡಿದ ಆಲೋಚನೆ ಅಭಿವ್ಯಕ್ತಿಗಳ ಜೊತೆಗೆ ವಸ್ತು ವೈವಿಧ್ಯವೂ ಬೇರೆಯೇ ಆಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ವೈದೇಹಿ ಮತ್ತು ನಾಗವೇಣಿಯವರ ಕಥೆಗಳನ್ನು ಅಧ್ಯಯನ ಮಾಡುವಾಗ ಅವುಗಳ ನಡುವಣ ಸಾದೃಶ್ಯ ಮತ್ತು ವೈದೃಶ್ಯಗಳು ಮೇಲ್ನೋಟಕ್ಕೆ ಅಷ್ಟಾಗಿ ಕಾಣುವುದಿಲ್ಲ. ಇದಕ್ಕೆ

- ಕಥೆಗಳನ್ನು ಚಿತ್ರಿಸಿರುವ ಕಾಲ ಇದಕ್ಕೆ ಕಾರಣವಿರಬಹುದು.
- ಒಂದು ಪೀಳಿಗೆಯ ಅಂತರ ಕಾರಣವಿರಬಹುದು.
- ವಸ್ತುವಿನ ಆಯ್ಕೆ ಕಾರಣವಾಗಿರಬಹುದು.
- ಎರಡು ದಶಕಗಳ ವಯಸ್ಸಿನ ಅಂತರ ಇದಕ್ಕೆ ಕಾರಣವಿರಬಹುದು ಎಂಬುದನ್ನು ಗಮನಿಸಬೇಕಾಗಿದೆ.

ವೈದೇಹಿಯವರ ಕಥೆಗಳ ವ್ಯಾಪ್ತಿ ದೊಡ್ಡದು. ಅಖಿಲ ಭಾರತೀಯ ವ್ಯಾಪ್ತಿ. ಭಾರತದ ಬೇರೆ ಬೇರೆ ಕಡೆ ಸಂಭವಿಸುವ ಯಾವುದೇ ಘಟನೆಗಳು, ಯಾವುದೇ ವಿದ್ಯಮಾನಕ್ಕೆ ಹೋಲಿಸಿ ಹೇಳುವುದು ಇವರಿಗೆ ಕರಗತವಾಗಿದೆ. ಉದಾಹರಣೆಗೆ ಕ್ರೌಂಚ ಪಕ್ಷಿಗಳು. ಹೊರಜಗತ್ತಿನ ವಿದ್ಯಮಾನಗಳು ತಮ್ಮ ಖಾಸಗಿ ಜಗತ್ತನ್ನು ಪ್ರಭಾವಿಸುವ ಕಥೆಗಳನ್ನು ವೈದೇಹಿಯವರ ಬರವಣಿಗೆಯಲ್ಲಿ ಕಾಣುತ್ತೇವೆ. ನಾಗವೇಣಿಯವರ ಕಥೆಗಳಲ್ಲಿ ಭೌಗೋಳಿಕ ವ್ಯಾಪ್ತಿ ಕಡಿಮೆಯಿದ್ದು, ಪ್ರಾದೇಶಿಕತೆ ಎನ್ನುವುದು ಎದ್ದು ಕಾಣುತ್ತದೆ ಹಾಗೂ ಇವರ ಕಥೆಗಳು ಹೊರಗಿನ ವಿದ್ಯಮಾನಕ್ಕೆ ಇನ್ನೂ ಅಷ್ಟಾಗಿ ಪ್ರವೇಶಿಸುವುದಿಲ್ಲ.

೩.೧ ಕಥೆಗಳಲ್ಲಿ ಲಿಂಗತಾರತಮ್ಯದ ಚಿತ್ರಣ

ವರ್ಗ ಜನಾಂಗಗಳಂತೆ ಲಿಂಗ ಪ್ರಭೇಧ ಕೂಡ ಸಾಮಾಜಿಕವಾಗಿ ಕಟ್ಟಲ್ಪಟ್ಟಿರುತ್ತದೆ. ಸ್ತ್ರೀ-ಪುರುಷರ ನಡುವಿನ ಜೀವಶಾಸ್ತ್ರೀಯ ನೆಲೆಯ ಲೈಂಗಿಕ ವ್ಯತ್ಯಾಸಗಳು ಲಿಂಗ ಎನಿಸಿದರೆ, ಸಾಮಾಜಿಕವಾಗಿ ಈ ಲಿಂಗಗಳ ಸುತ್ತ ರೂಪಗೊಂಡಿರುವ ಗುಣ, ಸ್ವಭಾವ, ಲಕ್ಷಣ, ಶಕ್ತಿ, ಸಾಮರ್ಥ್ಯಾದಿ ಭಿನ್ನತೆಗಳು ಲಿಂಗಪ್ರಭೇದವೆನಿಸುತ್ತದೆ. ಈ ವ್ಯತ್ಯಾಸಗಳು ಅನೇಕ ಸಮಾಜಗಳಲ್ಲಿ ಕ್ರಿಯಾ ನಿರತವಾಗಿದ್ದು ಹಲವು ಬಗೆಯ ಅಸಮಾನತೆ, ದಮನ ಮತ್ತು ಶೋಷಣೆಗೆ ಕಾರಣವಾಗಿರುತ್ತದೆ. 'ಸ್ತ್ರೀ' ಮತ್ತು 'ಪುರುಷತ್ವ' ಎಂಬ ಪರಿಕಲ್ಪನೆಗಳೆರಡೂ ಸಾಂಸ್ಕೃತಿಕವಾಗಿ ಕಟ್ಟಲ್ಪಟ್ಟ ಲಕ್ಷಣಗಳು.

ಚರಿತ್ರೆಯ ಯಾವುದೋ ಘಟ್ಟದಲ್ಲಾದ ಸ್ಥಾನಪಲ್ಲಟದಿಂದ ಪುರುಷನು ಮೇಲಿನ ಸ್ಥಾನವನ್ನು; ಸ್ತ್ರೀಯು ಕೆಳಗಿನ ಸ್ಥಾನವನ್ನು ಪಡೆಯುವಂತಾಯಿತು. ನಂತರ ಮದುವೆ, ಕುಟುಂಬ, ಆಸ್ತಿ, ಪದ್ಧತಿಗಳೆಲ್ಲ ಪುರುಷ ಹಿತಾಸಕ್ತಿಗಳನ್ನು ಸಾಧಿಸುವ ಸಂಸ್ಥೆಗಳಾದವು. ಅವುಗಳ ಅಡಿಯಲ್ಲಿ ಸ್ತ್ರೀಯರ ಲೈಂಗಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ತಾಯ್ತನದ ಆಯ್ಕೆಯ ಸಾಧ್ಯತೆಗಳೆಲ್ಲ ಗಂಡಿನಿಂದ ತೀರ್ಮಾನಿಸಲ್ಪಟ್ಟು ಹೆಣ್ಣು ಎನ್ನುವ ಕಾರಣದಿಂದ ಅವಳು ತೊಂದರೆಯನ್ನು ಅನುಭವಿಸುವಂತಾಯಿತು. ಇಲ್ಲವೇ, ತನಗಾಗುತ್ತಿರುವ ಯಾವೊಂದು ಹತಾಶೆಯನ್ನು ಹೇಳಿಕೊಳ್ಳಲಾಗದೆ, ಸಮಕಾಲೀನ ಮಿತಿಯ ಕಾರಣ ಸೇರಣೆಯು ಅನಿವಾರ್ಯವಾಯಿತು.

"ಗಂಡು-ಹೆಣ್ಣಿನ ಸಂಬಂಧದ ಪ್ರಶ್ನೆಯನ್ನು ಮಾನವೀಯ ಸಂಬಂಧದ ಪ್ರಶ್ನೆಯೆಂಬಂತೆ ಬಿಡಿಸಬೇಕು. ಗಂಡಲ್ಲಿ ಇಲ್ಲವಾದ ಲೈಂಗಿಕ ವ್ಯತ್ಯಾಸವು ಹೆಣ್ಣಿನಲ್ಲಿದೆಯೆಂದ ಮಾತ್ರಕ್ಕೆ ಹೆಣ್ಣನ್ನು ದುರ್ಬಲವೆಂದು ಕರೆದರೆ ಮಾನವೀಯ ಸಂಬಂಧಗಳ ಅರ್ಥವನ್ನು ಕಳೆದುಕೊಂಡಂತೆ. ಹೆಣ್ಣಿನ ಮೇಲೆ ಹೆಣ್ಣಾಗಿರುವ ಕಾರಣದಿಂದ ಅವಳ ಮೇಲೆ ಮಾನಸಿಕ ಒತ್ತಡವನ್ನು ಹೇರಲಾಗುತ್ತದೆ. ಬಾಲ್ಯದಿಂದಲೇ

ಹೆಣ್ಣೆಂಬ ಪ್ರಜ್ಞೆಯನ್ನು ಹೇರಲಾಗುತ್ತದೆ. ಇದರಿಂದ ಹೆಣ್ಣು ಕೀಳರಿಮೆಯಿಂದ ನರಳಬೇಕಾಗುತ್ತದೆ ಮತ್ತು ಹೆಣ್ಣನ್ನು ಹೆಣ್ಣಾಗಿರುವ ಕಾರಣಕ್ಕೆ ಶೋಷಣೆ ಮಾಡಲಾಗುತ್ತದೆ. ಇದರಿಂದ ಮಾನವೀಯ ಸಂಬಂಧಗಳು ಮಾನವೀಯ ಅಂತಃಕರಣವು ಕಳೆದುಕೊಂಡಂತಾಗುತ್ತದೆ. ಇದರ ಪರಿಣಾಮ ಮಾತ್ರ ದೊಡ್ಡದು. ಗಂಡು-ಹೆಣ್ಣಿನ ನಡುವೆ ತಾರತಮ್ಯ ಇದ್ದಾಗ ಅದು ಸಮಾಜದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ".[3]

- ಲಿಂಗತಾರತಮ್ಯ ಎಂದರೇನು? ಯಾವ ಕಾರಣಕ್ಕೆ ಅದನ್ನು ಹಾಗೆ ಕರೆಯಲಾಗುತ್ತದೆ? ಅದನ್ನು ರೂಢಿಸಿಕೊಳ್ಳಲು ಸಮಾಜ ಈಗಾಗಲೇ ನಿರ್ಮಿಸಿಕೊಂಡಿರುವ ಮಾನದಂಡ ಯಾವತರದ್ದು ಎಂಬುದು ಇಲ್ಲಿ ಮುಖ್ಯವಾಗುತ್ತದೆ.

- ಲಿಂಗ ತಾರತಮ್ಯಕ್ಕೆ ಮೂಲ ಕಾರಣ ಹೆಣ್ಣು ಮತ್ತು ಗಂಡು ಎಂಬ ದೇಹಸ್ಥಿತಿ. ಶ್ರಾವ ಎನ್ನುವಂಥದ್ದು ಎಲ್ಲಾ ದೇಹಕ್ಕೂ ಆಗಿದೆ. ಮುಟ್ಟು ಎನ್ನುವಂತದ್ದು ಸ್ತ್ರೀ ವಿಶಿಷ್ಟತೆ. ಹೆಣ್ಣು ಎನ್ನುವ ದೇಹ ಸ್ಥಿತಿಯಿಂದಾಗಿ ಮುಟ್ಟಿನ ದಿನಗಳನ್ನು ಅನುಭವಿಸುತ್ತಾಳೆ ಎನ್ನುವ ಕಾರಣಕ್ಕೆ ಅವಳನ್ನು ಪ್ರತ್ಯೇಕವಾಗಿ ಕಾಣತ್ತೆ.

- ಲಿಂಗತಾರತಮ್ಯ ಎನ್ನುವ ವಸ್ತು ಸಮಾನ. ಈ ವಸ್ತುವನ್ನು ಆಯ್ದುಕೊಂಡ ಈ ಇಬ್ಬರೂ ಲೇಖಕಿಯರು ಅದನ್ನು ನಿರ್ವಹಿಸುವ ರೀತಿಯಲ್ಲಿ ಒಂದು ವ್ಯತ್ಯಾಸ ಇದೆ.

ನಾಗವೇಣಿಯವರ ಕಥೆಗಳಲ್ಲಿ ಮುಖ್ಯವಾಗಿ ಲಿಂಗತಾರತಮ್ಯದ ಪ್ರಸ್ತಾಪ ದೇಹಾಕೃತಿಯ ನೆಲೆಯಲ್ಲಿ ನಡೆದರೆ, ವೈದೇಹಿಯವರ ಕಥೆಗಳಲ್ಲಿ ಲಿಂಗತಾರತಮ್ಯದ ನೆಲೆ ಎನ್ನುವುದು ಇನ್ನು ಬೇರೆ ಬೇರೆ ಕಾರಣಗಳಲ್ಲಿ ವ್ಯಕ್ತವಾಗಿವೆ. ಉದಾಹರಣೆಗೆ 'ಒಂದು ಅಪರಾಧ ತನಿಖೆ' ಕಥೆಯ ನಾಯಕಿ ಕುಸುಮ ಗಂಡನಮನೆ ಬಿಟ್ಟು ತವರುಮನೆ ಸೇರಿಕೊಂಡಿದ್ದಾಳೆ. ಗಂಡನನ್ನು ಬಿಟ್ಟು ಬಂದದಕ್ಕೆ ಯಾವ ಕಾರಣವನ್ನು ಇಲ್ಲಿ ನೀಡಿಲ್ಲ. ಕಾರಣ ಏನೂ ಇದ್ದಿರಬಹುದು. ಆದರೆ ಕುಸುಮನ ಗಂಡನನ್ನ ಬಿಟ್ಟು ತವರು ಸೇರಿದ್ದು ಈಗ ಘೋರ ಅಪರಾಧವಾಗಿದೆ. ಕುಸುಮನ ತಾಯಿ ಗೌರಕ್ಕ ಮಗಳ ಈ ಅವಸ್ಥೆ ಬಗ್ಗೆ ಸಾಕಷ್ಟು ತಲೆಕೆಡಿಸಿಕೊಂಡಿದ್ದಾಳೆ. ಮನೆಯ ಕೆಲಸದ ಹೆಂಗಸು ನಾಗಮ್ಮನ ಮಗಳು ಬಾಬಿ ಮನೆಗೆ ಬಂದಾಗ ನಾಗಮ್ಮನ ವಿಷಯ ಬರುತ್ತೆ. ಆಗ ಮಗಳ ಸ್ಥಿತಿಯನ್ನೇ ಮನಸ್ಸಿನಲ್ಲಿಟ್ಟುಕೊಂಡ ಗೌರಕ್ಕ 'ದಿಕ್ಕುಗೆಟ್ಟಿ ಅದು ಮನೆ ಸೇರಲಿಲ್ಲ. ಈಗಿನವರಾಗಿದ್ದಾರೆ ಮರುಕುತ್ತ ಹಗಲು ರಾತ್ರಿ ಒಂದು ಮಾಡುತ್ತಿದ್ದರು. ನೀ ಏನೇ ಹೇಳು ವಿದ್ಯೆ ಕಲಿಯದಿದ್ದಾಗ ಧೈರ್ಯ ಒಂದಿತ್ತು. ಈಗ ಅದೂ ಇಲ್ಲ-' ಎಂತ ಅಂಗಳದಲ್ಲಿ ಸೀತು ಸೆಗಣಿ

ಕರಡಿ ಗುಡಿಸುವಾಗ ಅಮ್ಮ ಕೆಳದನಿಯಲ್ಲಿ ಹೇಳುತ್ತಿದ್ದದ್ದು ಕಿವಿಯ ಮೇಲೆ ಬಿದ್ದಿತ್ತು. ಬಹುಶಃ ಅಮ್ಮನಿಗೆ ನಾನಲ್ಲೇ ಕೋಣೆಯ ಕಿಟಕಿ ಬದಿಯಲ್ಲಿ ಪುಸ್ತಕ ಹಿಡಿದು ಕುಳಿತದ್ದು ಗೊತ್ತಿಲ್ಲದಿರಬಹುದು. ಇನ್ನೊಮ್ಮೆ ಅದೇ ಮಾತನ್ನು ಬೇರೆ ರೀತಿಯಲ್ಲಿ ತಿರಿಸಿ ಹೇಳಿದ್ದಳು. **"ನೀರಿಲ್ಲದಲ್ಲಿ ನೀರು ಹುಟ್ಟಿಸಿಕೊಳ್ಳುವ ಛಾತಿಯಿತ್ತು ನಾಗಮ್ಮನಿಗೆ. ಸಾಧಾರಣದವರಾಗಿದ್ದಾರೆ ಚಂಯ್ಯೋ ಎಂತ ಅಪ್ಪನ ನೆರಳ ಹಿಂದೆ ಅಡಗಿಬಿಡುತ್ತಿರಲಿಲ್ಲವೆ?– ಆದರೆ ಹಾಗೆ ಅಡಗಲು ಅವರಮ್ಮ ಅಪ್ಪ ಇಬ್ಬರೂ ಇರಲಿಲ್ಲವೆಂತ ಬಹಳ ಹಿಂದೆ ಇದೇ ಅಮ್ಮ ಹೇಳಿದ್ದು ಅವಳಿಗೇ ನೆನವು ಹೋಗಿರಬೇಕು. ಈಗ, ನೆನಪು ಮಡಲು ಹೋದರೆ 'ಹಾಗಾದರೆ ನೆರಳು ಇರುವುದೇ ತಪ್ಪಾ? ಎಂತ ಹೇಳಿಬಿಟ್ಟಳು. ತಪ್ಪು ಮಾಡಿದರೆ ಸರೀ ನಾಲ್ಕು ಬಾರಿಸಿಕೊಳ್ಳುವ ಕಾಲದಲ್ಲಿಯೂ ಅಮ್ಮನಿಗೆ ಹೆದರದಿದ್ದ ನಾನು ಈಗ ಯಾಕೆ ದಿನ ಹೋದಂತೆ ಅವಳ ಮೌನಕ್ಕೂ ಹೆದರುತ್ತಿದ್ದೇನೆ; ಅವಳೊಡನೆ ಸಂವಾದಿಸುವ ನನ್ನ ಮೌನಕ್ಕೂ ಹೆದರುವಷ್ಟು ಆಗುತ್ತಿದ್ದೇನೆ?"**[31]

ಕುಸುಮ ಹೆಣ್ಣು ಎನ್ನುವ ಕಾರಣಕ್ಕೆ ಅವಳು ಗಂಡನನ್ನು ಬಿಟ್ಟು ಬಂದದ್ದು ಇಲ್ಲಿ ತಪ್ಪಾಗಿ ಕಾಣುತ್ತಿದೆ. ಈ ಕಥೆಯು ಬಾಬಿಯ ಗಂಡನ ಬಗ್ಗೆ ಪ್ರಸ್ತಾಪ ಬರುತ್ತೆ ಆದರೆ ಅವರು ಗಂಡಸು. ಹಾಗಾಗಿ ಅದ್ಯಾವುದು ದೊಡ್ಡ ಅಪರಾಧವಾಗಿ ಕಾಣಿಸುತ್ತಿಲ್ಲ. ಅವನಿಗೆ ಈ ಮೊದಲೆ ಮದುವೆಯಾಗಿದೆ ಹೆಂಡತಿಯನ್ನು ಬಿಟ್ಟು ಎರಡನೆ ಮದುವೆಯಾಗಿದ್ದಾನೆ, ಊರ ಹೆಣ್ಣು ಮಕ್ಕಳನ್ನು ಒಳ್ಳೆ ದೃಷ್ಟಿಯಿಂದ ಕೂಡ ನೋಡುವುದಿಲ್ಲ, ಊರು ತುಂಬ ಮೇವು ಬೇರೆ ಅಂಥವನನ್ನು ಗೌರಕ್ಕ ಗೌರವಿಸುತ್ತಾಳೆ. ಬಾಬಿ ಅವಳ ಗಂಡನ ಬಗ್ಗೆ ಮಾತಾಡಿದಾಗ ಅವಇವ ಅನ್ನಬೇಡ ಎಷ್ಟಾದರೂ ಗಂಡನಲ್ಲವೆ ಎಂದಿದ್ದರೂ. ಹೆಜ್ಜೆ ಹೆಜ್ಜೆಗೂ ಮಗಳು ಗಂಡನನ್ನು ಬಿಟ್ಟು ಬಂದಿದ್ದು ತಪ್ಪು ಎನಿಸುತ್ತಿದೆ. ಇಲ್ಲಿ ಗೌರಮ್ಮನಿಗೆ ಮಾತ್ರ ಹಾಗನಿಸುತ್ತಿಲ್ಲ ಸುತ್ತ ಸಮಾಜಕ್ಕೂ ಕೂಡ. ಯಾಕೆ? ಹಾಗಾಗ ಬೇಕು ಕುಸುಮನ ಮನಸಿನಾಳದ ಗೊಂದಲಗಳು ಏನಾಗಿರಬಹುದು ಅವಳು ತನ್ನ ಗಂಡನನ್ನು, ಗಂಡನ ಮನೆಯನ್ನು ಬಿಟ್ಟು ಬಿಡಬಹುದಾದಂತ ಪರಿಸ್ಥಿತಿ ಅವಳಿಗೇನಿತ್ತು ಎನ್ನುವುದನ್ನು ಯಾರು ಪ್ರಶ್ನಿಸುವುದಿಲ್ಲ ಉತ್ತರ ಸಿಗುವುದು ಇಲ್ಲ. ಆದರೂ ಕರಿಕೋಟು ಇಲ್ಲದೆಯೇ ಮನೆ ಕೆಲಸದವಳ ಮಗಳು ಬಾಬಿ ಪ್ರಶ್ನಿಸುತ್ತಾಳೆ ಎಂದರೆ ಕುಸುಮ ಗಂಡನನ್ನ ಬಿಟ್ಟು ಬಂದದ್ದು ಅದೆಷ್ಟು ದೊಡ್ಡ ಅಪರಾಧವಾಗಿರಬಹುದು. ಬಾಬಿ ಕುಸುಮಳನ್ನು ಕಟಕಟೆಯಲ್ಲಿ ನಿಲ್ಲಿಸಿಕೊಂಡಂತೆ ತನಿಕೆ ಆರಂಭಿಸುತ್ತಾಳೆ... **"ಅಲ್ಲ ಗಂಡನ್ನ ಬಿಟ್ಟು ಬಂದದ್ದು ಯಾಕೆ ಎಂತ? ಕುಡುಕನ, ಸೂಳೆಗಾರನ ಅಥವಾ ನಿಮಗೆ ಹೊಡೆಯುತ್ತಿದ್ದನ... 'ಕೇವಲ ಗಂಡನ್ನ ಬಿಟ್ಟು ಬಂದದ್ದಕ್ಕೇ ಇಷ್ಟು ಮಂಕಾದದ್ದ?... ಗಂಡನ ಮನೆಯವರೆಲ್ಲ ಹೇಗೆ?... ನಾವು ಒಳ್ಳೆಯವರಾದರೆ ಅವರೂ ಒಳ್ಳೆಯವರೇ ಏನೆನ್ನುತ್ತೀರಾ?... ಇಷ್ಟಕ್ಕೂ ಗಂಡನ ಮನೆಯಿಂದ ಓಡಿ ಬಂದದ್ದು ಯಾಕೆ ಎಂತ? ಅಷ್ಟು ಜನರಿಗೆ ನೀವೊಬ್ಬರು ಆಗಲಿಲ್ಲ ಎಂದರೆ ನಿಮ್ಮದೇ ತಪ್ಪಿರಬೇಕು... ನೀವು ಉತ್ತರವೇ ಕೊಡದಿದ್ದರೆ ನಮಗೆ ಹೇಗೆ**

ತಿಳಿಯಬೇಕು?' 'ಕೊನೆಯ ಪ್ರಶ್ನೆ, ನೀವೇ ಬಿಟ್ಟು ಬಂದಿರಾ?... ಅಥವಾ ನಿಮ್ಮ ಗಂಡನೇ ನಿಮ್ಮನ್ನ ಬಿಟ್ಟನಾ?... ಅಥವಾ ಅವರೆಲ್ಲ ಸೇರಿ ಓಡಿಸಿದರ...'[7]

ಇಂಥ ಯಾವ ಪ್ರಶ್ನೆಗಳಿಗೂ ಕುಸುಮ ಉತ್ತರಿಸಬೇಕಾಗಿಲ್ಲ. ಅವಳ ಉತ್ತರಕ್ಕಾಗಿ ಆ ಕಡೆಯಿಂದ ಒಂದು ನರಪಿಳ್ಳೆಯು ಕಾಯುತ್ತಿಲ್ಲ ಎಂದ ಮೇಲೆ ಉತ್ತರಿಸುವ ಅವಶ್ಯಕತೆಯಾದರೂ ಏನಿದೆ. ನ್ಯಾಯ ಒದಗಿಸಬೇಕಾಗಿದ್ದ ನ್ಯಾಯಪೀಠಕ್ಕೆ ಕತ್ತಲು ಆವರಿಸಿದಂತೆ, ಗೆದ್ದಲು ಹಿಡಿದಂತೆ ಕುಸುಮಗೆ ಅನಿಸುತ್ತದೆ. ಇಲ್ಲಿ ಅಪರಾಧದ ತನಿಖೆ ನಡೆದಿದೆಯೇ ಹೊರತು ನ್ಯಾಯಯುತವಾದ ತೀರ್ಪು ಸಿಗುವುದಿಲ್ಲ. ಇಲ್ಲಿ ಕುಸುಮ ಗಂಡ ಬಿಟ್ಟವಳಾದರೆ ಅಲ್ಲಿ ಕುಸುಮಳ ಗಂಡ ಹೆಂಡತಿ ಬಿಟ್ಟವನಲ್ಲವೆ ತಪ್ಪು ಇಬ್ಬರಲ್ಲೂ ಆಗಿರಬಹುದಲ್ಲವೆ ಆದರೆ ಯಾಕೆ ಈ ಸಮಾಜ ಕುಸುಮಳನ್ನು ಮಾತ್ರ ತಪ್ಪಿತಸ್ಥೆ ಎಂಬಂತೆ ನೋಡುತ್ತದೆ.

'ಅಕ್ಕು' ಎಂಬ ವಿಲಕ್ಷಣ ವ್ಯಕ್ತಿತ್ವದ ಸುತ್ತ ಹೆಣೆದ ಕುತೂಹಲಕಾರಿ ಕಥೆ 'ಅಕ್ಕು'. ವಿಷಮ ದಾಂಪತ್ಯದ, ವಿರಸ ಸಂಬಂಧಗಳ ಪರಿಣಾಮವಾಗಿ ಅರೆಹುಚ್ಚಿಯಂತಾದ ಅಕ್ಕು ಅರುಳುಮರುಳಂತೆ ವರ್ತಿಸುತ್ತಾಳೆ. ಅದಕ್ಕೆ ಸುತ್ತಲವರ ಪ್ರತಿಕ್ರಿಯೆ ಇದರ ಸುತ್ತ ಕತೆಯ ಘಟನೆಗಳು ಬೆಳೆಯುತ್ತ ಹೋಗುತ್ತವೆ.

ಅಕ್ಕುವಿನ ಜೀವನ ಚರಿತ್ರೆಯನ್ನು ಬಿಚ್ಚುವ ಪರಿಕ್ರಮದಲ್ಲೇ ಹೆಣ್ಣಿನ ನೋವು, ಅವಮಾನ, ಶೋಷಣೆಗಳೆಲ್ಲ ಭಿತ್ತರವಾಗುತ್ತವೆ. ಅಕ್ಕು ತನ್ನ ಅರಳು ಮರಳು ವರ್ತನೆಗಳ ಮೂಲಕ ಅವುಗಳನ್ನೆಲ್ಲ ಹೊರ ಹಾಕುತ್ತಾಳೆ. ಸಿರಿಯತ್ತೆಯ ಮದುವೆಯ ದಿಬ್ಬಣ ಬಂದಾಗ ಎಲ್ರೂ ಚಪ್ಪರದ ಹತ್ತಿರ ಹೋದಾಗ ಸಿರಿಯತ್ತೆಗೆ ಹೆದ್ರಿಕೆ ಆದಹಾಗೆ ಅನಿಸಿ ಅಕ್ಕುವನ್ನು ಕರೆಯುತ್ತಾಳೆ. ಆಗ ಅಕ್ಕು ಸಿರಿಯತ್ತೆಯನ್ನು ದುರುದುರು ನೋಡಿ **"ಅಷ್ಟ್ ಚಂದ ಯಾಕ್ ಮಾಡ್ಕಂಕ?' ಅಂತ್ಹೇಳಿ ಕೇಂಡ್ಲ್, ನಾ ಮಾತಾಡ್ಲಿಲ್ಲೆ. ಅವ್ಳ್ ಸ್ವರ ಸೀಳ್, ಬಿಟ್ಹಾಂಗಿದ್ದಿತ್ ಅವಳನ್ನೇ ಕಾಽಂತ ಕೂತೆ, 'ಇಲ್ಬಾ' ಅಂದ್ಲ್. 'ಯಾಕೆ?' ಎಂದೆ. 'ಬಾ ಅಂದ್ರ್ ಬರ್ಕ್' ಅಂದ್ಲ್. ನಂಗೆ ಯಾರನ್ನಾದ್ರಾ ಕರೀಕಂತ ಕಂಡ್ತ್ ಬೇಡ ಅಂತೆಳಿಯೂ ಕಂಡ್ತ್. 'ಅಕ್ಕೂ, ಹುಶಾರಿಲ್ಯ?'– ಎಂದೆ. ಉತ್ರ ಕೊಡ್ದೆ ಸೀದ ನುಗ್ಗಿ ಬಂದದ್ದೇ ನೆತ್ತೀವರೆಗೆ ಮುಡ್ದ್ ಹೂವನ್ನೇ ಕಣ್ಮುಚ್ಚಿ ತೆರ್‍ಯದ್ರೊಳ್ ಹರ್ದ್ ತೈಗ್ದ್ ಸಾಕಷ್ಟ ಚಂದ! ನಿನ್ ಚಂದ ಕಂಡ್ ಮದ್ವೆ, ಆಪಂವ ಖಂಡಿತ ಬಾಳ್ಸುದಿಲ್ಲೆ. ಗೋಡೆ ಮೇಲೆ ಬರ್ದಿಟ್ಕೋ ಸತ್ಯಕ್ಕೂ ಹೇಳ್ತೆ ಎನ್ನುತ್ತಾಳೆ ಅಕ್ಕು"**.[8]

ಅಕ್ಕುವಿನ ಇಂತ ವರ್ತನೆಗಳಿಂದ ಆಕೆಯನ್ನು ಅರೆಹುಚ್ಚಿ ಎಂದು ಕರೆಯಬಹುದೇನೊ– ತನ್ನ ಗಂಡ ಸಂಕಪ್ಪ ತನ್ನನ್ನು ಮದುವೆಯಾಗಿ ಬಿಟ್ಟು ಹೋಗಿದ್ದಿರ ಬಗ್ಗೆ ನೋವಿದೆ. ಗಂಡ, ಮಗು, ಸಂಸಾರದ ಬಗೆಗೆ ಅವಳಲ್ಲಿ ಉಂಟಾದ ಹತಾಶೆಯ ಭಾವನೆಗಳು ಅವಳನ್ನು ಹೀಗೆ

ಮಾಡಿಸುತ್ತಿವೆ. ಆಕೆಯ ಮನಸ್ಸಿನ ತುಡಿತಗಳು ಹೀಗಿರುವಾಗ ಗಂಡ ಮಗುವಿಗಾಗಿ ಹಂಬಲಿಸುತ್ತಿರುವ ಅವಳ ಹಂಬಲಿಕೆಗಳು ಅತಿರೇಕಕ್ಕೆ ಹೋದಾಗ ಅದೆಲ್ಲಾ ಹುಚ್ಚಾಟವಾಗಿ ಕಾಣಿಸುತ್ತದೆ. ಆಗೆಲ್ಲ ಅಕ್ಕುವನ್ನು ಸಮಾದಾನಿಸುವವರು ಯಾರು ಇಲ್ಲ. ಬದಲಾಗಿ ಅಜ್ಜಯ್ಯನ ಆದೇಶವಿದ್ದರೂ ಇಲ್ಲದಿದ್ದರೂ ಮುಖಮೂತಿ ನೋಡದೆ ಮೈಮೇಲೆ ಬಾಸುಂಡೆ ಬರೋ ರೀತಿ ವಾಸು ಚಿಕ್ಕಪ್ಪ ಹೊಡೆಯುತ್ತಾರೆ. ಆದ್ರೆ ಅಕ್ಕು ತನಗೆ ನೋವಾಗುತ್ತಿದೆ, ತಾನು ಸಾಯಬಹುದು ಎಂದು ಚಿರಾಡಿಕೊಂಡದ್ದಕ್ಕಿಂತ 'ಅಯ್ಯಯ್ಯೋ ನನ್ ಜೀವ ತೆಗೀತಾ ವಾಸು ಅಪ್ಪಯ್ಯಾ, ನಂಗೆ ಹೋಡೀತಾ. ನನ್ನ ಮಗೂನ ಕೊಲ್ತಾ ಕಾಣಿ ಅಪ್ಪಯ್ಯ' ಎಂದೆಲ್ಲಾ ಬೊಬ್ಬೆ ಹೊಡೆಯುತ್ತಾಳೆ. ಸಿರಿಯತ್ತೆ ಮದುವೆಯಾಗಿ ಹೋದ ದಿನ ಅಕ್ಕುವಿನದು ಗಲಾಟೆಯೇ ಗಲಾಟೆ, 'ನನ್ ಗಂಡ ಎಲ್ಲಿ ಸತ್ತ? ಈ ಕ್ಷಣ ತಂದು ಕೊಡಿ!' ಎಂಬ ಸೊಲ್ಲು ಬಿಟ್ಟರೆ ಬೇರೆ ಇಲ್ಲ. ಈ ಹೊತ್ತಲು ಕೂಡ ವಾಸು ಚಿಕ್ಕಪ್ಪ, ಭಾನು ಚಿಕ್ಕಿ, ಸತ್ಯಮಾಣಿ, ಯಕ್ಷಗಾನದ ಸ್ತ್ರೀವೇಷಧಾರಿ ತಮ್ಮಣ್ಣಯ್ಯ ಕೂಡ ಅಕ್ಕುವಿನ ಹಟವನ್ನು ತಮಾಷೆಯಾಗಿ ತೆಗೆದುಕೊಂಡು ನಗುತ್ತಾರೆ.

ವಾಸುಚಿಕ್ಕಪ್ಪಯ್ಯ 'ಆಗ ಕಾಣಲ್ಲಿ, ಓ ತಟ್ಟಿ ಚಡಿಯೊಳ್ಗೆ!– ಎಂದು ಇತ್ತಿನ ದಾತಿಲ್ಲದೆ ಮಲಗಿ ಗೊರೆಯುತ್ತಿದ್ದ ಅಡುಗೆಯ ಬಾಬು ಭಟ್ಟನನ್ನ ತೋರಿಸಿದ. ಭಾನು ಚಿಕ್ಕಿ ಒಂದು ಗೊಂಬೆ ತಂದು ಅವಳ ಎದುರು ಬಿಸಾಡಿ 'ನಿನ್ ಗಂಡ! ಯಾವಾಗ್ ಬಂದಿದ್ನೋ ಏನೋ ಒಬ್ರೂ ಕಂಡವ್ರಿಲ್ಲೆ. ಅಕ್ಕೂ, ಅಕ್ಕೂ ಅಂತೆಳಿ ಸೋರ್‍ಲ್ಲೊಳ್ಗೆ ಅರ್ಚ್‌ಕಂತಿದ್ದ. ಕರ್‍ಕಂಡ್ ಬಂದೆ – ಎಂದರು ಸತ್ಯ ಮಾಣಿ ಬಾಬು ಭಟ್ಟನನ್ನ ಬಡಿದು ಎಬ್ಬಿಸಿ ನೀನು ಅಕ್ಕು ಗಂಡ ಅಂಬ್ರ್'! ಎಂದು ನಕ್ಕಿತು. ತಮ್ಮಣ್ಣಯ್ಯ 'ಪ್ರಿಯೇ, ನಿನ್ನ ಗಂಡನೆಂಬುವ ನಾನು ಬಂದಿದ್ದೇನೆ ನನ್ನಿಂದೇನಾಗಬೇಕು– ಎಂದು ನಾಟಕೀಯವಾಗಿ ಹೇಳಿದ. ಇಂಥ ಹೊತ್ತಲ್ಲೆಲ್ಲ ತನ್ನ ಮನಸ್ಸಿನ ಮೇಲಿನ ಹಿಡಿತ ಕಳೆದು ಕೊಂಡ ಅಕ್ಕು ತನಗೆ ತೋಚಿದ್ದೆಲ್ಲವನ್ನು ಬಡಬಡಾಯಿಸುತ್ತಾಳೆ.

"ಏ ತಮ್ಮಣ್ಣಯ್ಯ, ಬಾಲ ಮಡ್ಚ್‌ಕಂಡ್ ಆಚೆಗ್ ಹೋಗ್, ನಿನ್ ಕೆಲ್ಸ ಕಾಣ್. ನನ್ ಸುದ್ದಿಗ್ ಬತ್ಯಾ? ನಿನ್ ಹೆಂಡ್ತಿ ಮೊನ್ನೆ ಯಾರೊಟ್ಟಿಗ್ ಚಾಂಚ್ಕಂಡ್ ಮುನ್ಕಂಡಿದ್ಲ್ ಅಂತೆಳಿ ಹೇಳುದಾ ಈಗ?' ಎಂದು ದೊಡ್ಡ ಸ್ವರದಲ್ಲಿ ಕತ್ತಿ ಬೀಸಿದಂತೆ ಹೇಳುತ್ತಾ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ಬಿಟ್ಟಳು".[6] ಆ ಕ್ಷಣಕ್ಕೆ ಎಲ್ಲರನ್ನು ಸುತ್ತವರೆದ ನಗು ತಮ್ಮಣ್ಣಯ್ಯನ ನಗುವನ್ನು ನಂದಿಸುತ್ತದೆ.

ಅಕ್ಕು, ಬಸುರಿ ಬಯಕೆಯ ಊಟ ಮತ್ತು ನಾಮಕರಣಕ್ಕೆ ಬಿಡದೆ ಹೋಗುವ ರೂಢಿ ಬೆಳೆಸಿಕೊಂಡಿದ್ದಾಳೆ. ಹಾಗೆ ಹೋದಾಗೆಲ್ಲ ಬಸುರಿಯ ಬಳಿಕುಳಿತವಳು ಆಚೀಚೆ ಅಲ್ಲಾಡುವುದಿಲ್ಲ. ನಾಮಕರಣಕ್ಕೆ ಹೋದರೆ ಮಗುವಿನ ತೊಟ್ಟಿಲು ತೂಗುತ್ತಾ ಕೂರುತ್ತಾಳೆ. ತೂಗುವುದನ್ನ

ಬಿಡುವುದು ವಾಪಾಸ್ಸು ಮನೆಗೆ ಬಂದಾಗಲೆ. ಎರಡು ಲಾಲಿ ಹಾಡಿದರೂ ಹಾಡಿದಳೇ. ಅದನ್ನು ಕೇಳಿದವರೆಲ್ಲ ನಕ್ಕು 'ಅಕ್ಕು, ನಿನ್ ಕೋಗಿಲೆ ಸ್ವರ ಕೇಂಬುಕೆ ಕಾಕಿ ಹಿಂಡೇ ಬಂದ್ ಕಂಡಿಯಾಗ್ ಕೂತಿತ್ತ್‌ಕಾಣ್!' ಎಂದು ಗೇಲಿ ಮಾಡಿ ನಗುತ್ತಾರೆ.

ಅಕ್ಕುವಿಗಾಗುವ ಇಂಥ ನೋವು, ಅವಮಾನ, ಶೋಷಣೆಗಳಿಗೆಲ್ಲ ಇಲ್ಲಿ ಅಕ್ಕುವನ್ನೆ ಗುರಿ ಮಾಡಲಾಗಿದೆಯೇ ಹೊರತು ಮತ್ಯಾರನ್ನು ಅಲ್ಲ. ಸ್ವತಃ ಇದಕೆಲ್ಲ ಕಾರಣನಾದ ಆಕೆಯ ಗಂಡ ಕೂಡ ತಪ್ಪಿತಸ್ಥನಾಗಿ ಕಾಣುವುದಿಲ್ಲ. ಅವನು ಗಂಡಸು ಎಂಬ ಕಾರಣಕ್ಕೆ ಅವ ಮಾಡಿದ್ದೆಲ್ಲ ತಪ್ಪಲ್ಲ. ಸ್ವಾಮಿಗಳ ಹಿಂದೆ ಹೋಗಿದ್ದ ಎನ್ನಲಾಗುವ ಅಕ್ಕುವಿನ ಗಂಡ ಬಂದಾಗ ಅಜ್ಜಯ್ಯ 'ಸಂಕಪ್ಪ ಆದದ್ ಆಯ್ತ್ ನಿನ್ನಿಂದ್ಲೇ ಆದ್ ಈ ಕರ್ಮನ್ನ ನೀನೆ ಅನುಭವಿಸ್ಕ್'. ಅವಳು ಇರಬೇಕಾದ್ದು ನಿನ್ನತ್ರ. ಎರಡು ದಿವಸ ಇದ್, ಕರ್ಕಂಡ್ ಹೋಗು ಎಂದಾಗ, ಅಕ್ಕು ಏನ್ ಇವನ ಜೊತೆ ಹೋಗೋದಾ ಇನ್ನ್ ಇವ್ನೊಟ್ಟಿಗೆ ಹ್ವೋಪ್ದ! ತನ್ನ ಹೆಣ ಕೂಡಾ ಹೋಗಲ್ಲ ಎನ್ನುವಂಥ ಮಾತಾಡುತ್ತಾಳೆ. ಅದಕ್ಕೆ ದೊಡ್ಡತ್ತೆ ಗಂಡ ಎಂಥವನೇ ಇರ್ಲಿ ಅವನನ್ನ ನಿಕೃಷ್ಟ ಮಾಡಿ ಮಾತಾಡಬಾರದು ಎನ್ನುತ್ತಾರೆ.

ಕಟ್ಟಿಕೊಂಡ ಹೆಂಡತಿಯನ್ನು ಬಾಳಿಸಲಾಗದೆ ಸ್ವಾಮಿಗಳ ಹಿಂದೆ ಓಡಿ ಹೋದವ ಊರಿನ ಹೆಣ್ಮಕ್ಕೆಲ್ಲ ಖರ್ಚದ್ ಮೇಲೆ ಬಂದ ಸಂಕಪ್ಪನ ಜೊತೆ ಬದುಕಲು ಹೇಳುವುದು ಎಷ್ಟರಮಟ್ಟಿಗೆ ಸರಿ. ಅಕ್ಕು ಅನುಭವಿಸಿದ ನೋವು, ಅವಮಾನ ಶೋಷಣೆಗಳಿಗೆಲ್ಲ ಅವಳು ಹೆಣ್ಣಾಗಿದ್ದೆ ಕಾರಣವಾದರೆ; ಸಹಜವಾಗಿ ಅವಳು ಬಯಸಿದ ತಾಯ್ತನ ಗಂಡ ಸಂಸಾರ ಯಾವುದು ತಪ್ಪಲ್ಲವಲ್ಲ. ಆದರೆ ಅಕ್ಕುವಿಗೆ ಸಿಕ್ಕಿದ್ದು ದೈಹಿಕ ಮಾನಸಿಕ ಹಿಂಸೆಗಳು ಮಾತ್ರವಲ್ಲದೆ ಅರೆಹುಚ್ಚಿ ಪಟ್ಟಬೇರೆ. ಅಕ್ಕುವಿನ ಸಂವೇದನೆಯ ಮೂಲಕ ನೋಡಿದಾಗ ಅವಳ ಸುತ್ತ ಇರುವ 'ಸ್ವಸ್ಥ' ಸಮಾಜದ ಅಮಾನವೀಯತೆ, ಅನಾಗರೀಕತೆಗಳು ಎಷ್ಟೆಂದು ಗೊತ್ತಾಗುತ್ತದೆ. ಅಕ್ಕುವಿನ ಅರೆಹುಚ್ಚುತನ ಲೇಖಕಿ ಈ ಹುಚ್ಚು ತನದ ಕುರಿತು ನೀಡಿದಂತಹ ಒಂದು ಪ್ರತಿಕ್ರಿಯೆಯೂ ಆಗಿದ್ದಿರಬಹುದು.

ಲಿಂಗತಾರತಮ್ಯದ ನೆಲೆಯಲ್ಲಿ ಗುರುತಿಸಬಹುದಾದ ವೈದೇಹಿಯವರ ಮತ್ತೊಂದು ಕಥೆ 'ಗೂಡಿನೊಳಗೆ ಒಂದು ಹಕ್ಕಿ' ಶೀರ್ಷಿಕೆಯಂತೆ ಇಲ್ಲಿರುವುದು ಗೂಡಿನೊಳಗಿನ ಹಕ್ಕಿಯೇ ಹೊರತು ಪಂಜರದೊಳಗಿನ ಹಕ್ಕಿ ಅಲ್ಲ. ಪಂಜರದೊಳಗಿರುವ ಹಕ್ಕಿಗಿಂತ ಗೂಡಿನೊಳಗಿರುವ ಹಕ್ಕಿ ಸ್ವತಂತ್ರ. ಮಾಲತಿ ತನ್ನ ಗಂಡನಲ್ಲಿ ಯಾವ ನಿರ್ಬಂದಗಳಿಲ್ಲದೆ ಮಾತಾಡುತ್ತಾಳೆ. ಈ ಕಥೆಯನ್ನು ಗ್ರಹಿಸಿದಾಗ, ಸಮಕಾಲೀನ ಸಮುದಾಯದಲ್ಲಿ ಬದಲಾಗುತ್ತಿರುವ ಮನೋಧೋರಣೆ

ಯಾವ ಬಗೆಯದು ಎಂಬುದನ್ನು ಗ್ರಹಿಸಲು ಸಾಧ್ಯವಿದೆ. ಜೊತೆಗೆ ಸ್ವಾತಂತ್ರ್ಯದ ಹಪಾಹಪಿಯನ್ನು ಕಾಣಬಹುದು.

"ಹೊರಗೆ ಬೀಗ ಹಾಕಿಸಿಕೊಂಡು ಒಳಗೆ ಒಬ್ಬಳೇ ಇರಬೇಕೆಂತ ಆಸೆ' ಎಂದಳು ಮಾಲತಿ, ಇದೆಂತ ಆಸೆ! ನಾನ್ಸೆನ್ಸ್! ಯಾಕೆ ಯಾವಾಗಲೂ ಸೆನ್ಸ್ ಇರಲೇ ಬೇಕ? ನಾನ್ಸೆನ್ಸ್ ಆಸೆಗಳೂ ಖುಶಿ ತರುತ್ತವೆ. ಅದೇನು? ಯಾಕೆ ಹಾಗೆ ಇರಬೇಕೆನ್ನುತ್ತಿ?' ಸುಮ್ಮನೆ ಯಾವಾಗಲೂ ಒಂದೇ ತರಹ ಇದ್ದು ಬೇಜಾರು'.

'ಹಾಗಾದರೆ ಒಂದು ದಿನ 'ಒಬ್ಬ ಗಂಡಸಿನೊಡನೆಯೇ ಇದ್ದು ಬೇಜಾರು ಎಂದು ಅಂದರೂ ಅಂದೆ ನೀನು...?'– ಆತ ನಗೆಗಣ್ಣಲ್ಲಿ ಅವಳನ್ನು ನೋಡಿದ.

'ಒಂದು ವೇಳೆ ಹಾಗೆಂದರೂ ಅದರಲ್ಲಿ ಯಾಕೆ ಆಶ್ಚರ್ಯಪಡಬೇಕು?' ಕನ್ನಡಿ ಎದುರು ಕ್ರಾಪು ತೀಡುತ್ತ ಅವ ಮತ್ತೆ ತುಂಟ ದನಿಯಲ್ಲಿ ಅಂದ. 'ನಿನ್ನೊಡನೆ ನಾನಾದ್ದಕ್ಕೆ ಬಾಳುತ್ತಿದ್ದೇನೆ' 'ಹೌದ! ಬಾಳಿ ಎಲ್ಲ ಆದ ಮೇಲೆ ಚಿನ್ನದ ಪದಕ ಕೊಡುತ್ತೇನೆ' 'ಆದರೆ ಚಿನ್ನದ ಪದಕ ಕೊಡುವ ಮುಂಚೆಯೇ ನೀನು ಹೋಗಿ ಬಿಟ್ಟರೆ?' 'ನಾನು ಕೊಡುವುದರೊಳಗೆ ನೀವೇ ಒಂದು ವೇಳೆ ಪೆಟ್ಟಿಗೆ ಕಟ್ಟದರೆ?'– ಮುಖ ಎತ್ತದೆ ಶರ್ಟಿಗೆ ಗುಂಡಿ ಹೊಲಿಯುತ್ತ ಕೇಳಿದಳು ಮಾಲತಿ".[2]

ಹೆಣ್ಣು ತಾನು ವಿಧವೆಯಾಗುವುದನ್ನು ಬಯಸದೆ ಮುತ್ತೈದೆಯಾಗಿಯೇ ಸಾಯಬೇಕೆಂದು ಕೊಂಡು ತನ್ನ ಗಂಡನೇನಾದರೂ ಸಾಯುವ ಕೆಡುವ ಮಾತಾಡಿದರೆ ಹೆಂಡತಿ ಬಾಯಿಗೆ ಕೈ ಅಡ್ಡ ಹಿಡಿದು ದೇವರಿಗೆ ತುಪ್ಪದ ದೀಪ ಹಚ್ಚುತ್ತಿದ್ದ ಕಾಲ ಒಂದಿತ್ತು, ಆದರೆ ಈಗ ಕಾಲ ಬದಲಾಗಿದೆ. ದೀಪ ಹಚ್ಚುವುದಾದರೆ ಇಬ್ಬರೂ ಹಚ್ಚಬೇಕೆಂಬ ಮಾಲತಿಯ ನಿರೀಕ್ಷೆಗಳಲ್ಲಿ ಬದಲಾದ ಹೆಣ್ಣಿನ ನಿರೀಕ್ಷೆಗಳು ವ್ಯಕ್ತವಾಗುತ್ತವೆ. ಲೇಖಕಿ, ಇಲ್ಲಿ ಮಾಲತಿಯನ್ನು ಪುರುಷ ವಿರೋಧಿ ನೆಲೆಯಲ್ಲಿ ಪ್ರತಿಪಾದಿಸುತ್ತಿಲ್ಲ. ಬದಲಾಗಿ ಸ್ತ್ರೀತ್ವವನ್ನು ಸ್ಥಾಪಿಸುತ್ತಲೆ ಲಿಂಗತಾರತಮ್ಯದ ನೆಲೆಗಳನ್ನು ಗುರುತಿಸುತ್ತಾರೆ. ಅದು ಸಣ್ಣ ಸಣ್ಣ ನಾನ್ಸೆನ್ಸ್ ಆಸೆಗಳ ಮೂಲಕ. ಈ ದಿನ ತಾನು ಸ್ವತಂತ್ರಳು ಎಂದು ಬೀಗ ಹಾಕಿ ಹೋದ ಬೆನ್ನಿಗೆ ಕಿಟಕಿ ಬಾಗಿಲು ಹಾಕಿ ಪರದೆ ಎಳೆದು ಹಗಲು ಸೃಷ್ಟಿಸಿದ ಕತ್ತಲಲ್ಲಿ ಮನೆಯ ಕೋಣೆ ಕೋಣೆಗಳನ್ನೆಲ್ಲ ತಿರುಗುವ ಮಾಲತಿ ಇವತ್ತು ಅಡುಗೆಯನ್ನು ಮಾಡದೆ ಸುಮ್ಮನೆ ಬಿದ್ದುಕೊಳ್ಳಬೇಕು ಎಂದು ಕೊಳ್ಳುತ್ತಾಳೆ. ಹೀಗೆ ಅಡುಗೆ ಮಾಡದೆ ಸುಮ್ಮನೆ ಬಿದ್ದುಕೊಳ್ಳಬೇಕು ಎನ್ನುವುದರ ಅರ್ಥ ಏನು? ಯಾವಾಗಲು ಗಂಡ ಮನೆಗೆ ಬರುವುದರೊಳೆ ಹೆಂಡತಿ ಅಡುಗೆ ಮಾಡಿಟ್ಟು ಕುಳಿತುಕೊಳ್ಳಬೇಕೆ? ಮಾಡದಿದ್ದರೆ ಏನಾಗುತ್ತೆ? ಎನ್ನುವ ಪ್ರಶ್ನೆಗಳು ಅವಳಲ್ಲಿ ಹುಟ್ಟಿರಬಹುದು.

ಯಾವತ್ತಿಂದಲೂ ಕೇಳದೇ ಇದ್ದ ರೆಕಾರ್ಡ್‌ಗಳನ್ನು ಹಾಕಿಕೊಂಡು ಕೇಳಬೇಕು ಎಂದುಕೊಳ್ಳುವುದು ಇಷ್ಟುದಿನ ಕೇಳಿ ಇಲ್ಲ ಅನ್ನುವುದಕ್ಕಿಂತ ಗಂಡ ಹಾಕಿದ ಅವನಿಗೆ ಇಷ್ಟವಾದ ಹಾಡುಗಳನ್ನೆ ಕೇಳಿರಬಹುದು ಅಥವಾ ಅವಳಿಗೆ ಹಾಡು ಕೇಳಲು ಸಮಯವೇ ಸಿಗದೆ ಹೋಗಿದ್ದಿರಬಹುದು. ಸಿಗರೇಟ್ ಬಾಯಿಗಿಟ್ಟು ಸೇದುತ್ತಿರುವಂತೆ ನಟಿಸಿದಳು. ತಮಾಷೆ ಎನಿಸಿ ತಾನೆಕೆ ನಟಿಸಬೇಕು ಎಂದು ಹಚ್ಚಿ ಒಂದು ದಂ ಒಳಗೆ ಎಳೆದಳು ಹೊಗೆಯನ್ನು ಕೆಮ್ಮು ಅಟ್ಟಿಸಿಕೊಂಡು ಬಂತು. ಕಾಲೇಜಿನ ದಿನಗಳನ್ನು ನೆನೆದು ಜೋರಾಗಿ ಶಿಳ್ಳೆ ಹೊಡೆಯಬೇಕೆಂದುಕೊಂಡಳು. ಅದು ಆಗಲಿಲ್ಲ. ಒಮ್ಮೆ ಕಾರಿಡಾರಿನಲ್ಲಿ ಶಿಳ್ಳು ಹೊಡೆದು ಪ್ರಿನ್ಸಿಪಾಲರು ಆಫೀಸ್ ರೂಮಿಗೆ ಕರೆದು ಹುಡುಗಿಯರ ಕಾಲೇಜು – ಹುಡುಗರ ಕಾಲೇಜು, ಕಂಬೈಂಡ್ ಕಾಲೇಜುಗಳ ವ್ಯತ್ಯಾಸ ಕುರಿತು ಅರ್ಧ ಗಂಟೆ ಲೆಕ್ಚರ್ ಕೊಟ್ಟಿದ್ದಲ್ಲದೆ ನೀನು ಹೆಣ್ಣು. ಅದರಲ್ಲಿಯೂ ಭಾರತದಲ್ಲಿ ಹುಟ್ಟಿದವಳು ಎಂದು ಪುನಃ ಪುನಃ ಹೇಳಿದ್ದು ನೆನಪಾಯಿತು. ಹಾಗೆಂದು ಇವತ್ತೂ ಮಾಲತಿಗೆ ಅಂಥ ಅವಕಾಶ ಸಿಗಲ್ಲ. ಗಂಡ ಬೀಗ ಹಾಕಿಕೊಂಡು ಹೋಗುವ ಮೊದಲೆ ಹೇಳಿ ಹೋಗಿದ್ದಾನೆ. 'ನೀನು ಒಳಗಿರುವುದು ಯಾರಿಗೂ ಗೊತ್ತಾಗಬಾರದು. ಒಂದು ಶಬ್ದವೂ ಆಗಬಾರದು. ಹಾಗೇನಾದರೂ ಅಕ್ಕಪಕ್ಕದವರಿಗೆ ತಿಳಿದರೆ ಹೆಂಡತಿಯನ್ನು ಮನೆಯಲ್ಲಿ ಕೂಡಿ ಹಾಕಿದ್ದಾನೆ ಎಂದು ಕೊಂಡರೆ ತನ್ನ ಮರ್ಯಾದೆ ಉಳಿಯುವುದಿಲ್ಲ ಎಂದು ಮೊದಲೇ ಹೇಳಿದ್ದಾನೆ. ಗಂಡನ ಆ ಒಂದು ಎಚ್ಚರಿಕೆಯ ಧ್ವನಿಯೇ ಸಾಕು ಬೀಗ ಹಾಕಿದ ಮನೆಯೊಳಗೆ ಸ್ವತಂತ್ರಳಾಗಿರುವ ಹೆಂಡತಿಯನ್ನು ಬಂಧಿಸುವುದಕ್ಕೆ.

ಹೀಗೆ ಬೀಗ ಹಾಕಿ ಹೋದದ್ದು ಸೊಸೈಟಿಗೆ ತಿಳಿದರೆ ಸೊಸೈಟಿ ನನ್ನ ಬಗ್ಗೆ ಏನಾದರೂ ಹೇಳಿದರೆ ಎಂಬ ಭಯ ಮಾಲತಿಯ ಗಂಡನದು. ಆದರೆ ಮಾಲತಿಗೆ ಮೈಮೇಲೆ ಬಟ್ಟೆ ಹಾಕದ ಬಚ್ಚಲಿಗೆ ಬಾಗಿಲು ಹಾಕದ ಮುಗ್ಧ ಬಾಲ್ಯದ ದಿನಗಳನ್ನು ನೆನೆದು ಅಂತೆಯೇ ಸ್ನಾನ ಮಾಡಬೇಕೆಂದು ಕೊಳ್ಳುತ್ತಾಳೆ. ನೀರು ಸುರಿಯುವ ತೊಟ್ಟಿಕ್ಕುವ ಶಬ್ದವೂ ಪಕ್ಕದ ಮನೆಯ ಹರಿಣಳ ಕಿವಿಗೆನಾದರು ಬಿದ್ದರೆ ಅವಳು ಮೊದಲು ಬಲು ಸೂಕ್ಷ್ಮ ಎಂಬುದನ್ನ ನೆನೆದು 'ಥತ್ ಅವ ಹೋಗುವ ಮುಂಚೆಯೇ ತಾನು ಸ್ನಾನ ಮಾಡಬೇಕಿತ್ತು' ಎಂದು ಕೊಳ್ಳುತ್ತಾಳೆ ಮೈ ಒರೆಸಿಕೊಳ್ಳುತ್ತಾ ಇಡೀ ಮನೆ ತುಂಬ ಓಡಾಡಿದ ಮಾಲತಿಗೆ ಇಡೀ ಜೀವನವೆಲ್ಲ ಹೀಗೆ ಇದ್ದರೆ ಬಹುಶಃ ಇದು ತನಗೆ ಖಂಡಿತಾ ಬೋರಾಗಬಹುದು ಎನಿಸುತ್ತದೆ.

ಹಾಗೆಯೇ ಯಾವ ಡ್ರೆಸ್ ತೊಡಲಿ? ಯಾಕೆ ತೊಡಬೇಕು? ಪ್ಯಾಂಟು ಷರ್ಟು ಹಾಕಿ ನೋಡಿದಳು, ಕಳಚಿ ಬಿಸಾಡಿದಳು. ಉದ್ದಗನ್ನಡಿಯಲ್ಲಿ ತನ್ನನ್ನು ತಾನೆ ನೋಡಿಕೊಂಡು ಸೂಳೆಯಂತೆ, ಕ್ಯಾಬರೆ ನರ್ತಕಿಯಂತೆ ಅನಿಸಿ ಸೀರೆಯುಟ್ಟು ತಲೆಬಾಚಿ ಹಣೆಗಿಟ್ಟು ಕೊಳ್ಳುತ್ತಾಳೆ.

ಮಾಲತಿ ಹೀಗೆ ತಾನು ಕಳೆಯುತ್ತಿರುವ ಒಂದೊಂದು ಕ್ಷಣಗಳೂ ಸ್ವಂತವಲ್ಲ ಬಾಡಿಗೆಯವು ಎನಿಸಿದಾಗ ಈ ಕ್ಷಣಗಳಿಗೆ ತಾನು ಕೊಡುತ್ತಿರುವ ಬಾಡಿಗೆ ತನ್ನನ್ನೆ ದಿವಾಳಿ ಮಾಡುತ್ತಿವೆ ಎನಿಸಿದಾಗ ಮತ್ತೆ ಯೋಚಿಸುತ್ತಾಲೆ. ಹರಿಣಿ, ಮುದುಕಿ ಅವಳ ಪುಳ್ಳಿ ಹುಡುಗ ಯಾರ ಅಡಚಣೆಯೂ ಇಲ್ಲವಾದರೂ ಮಾಲತಿ ಇಷ್ಟು ಬೇಗ ತನ್ನ ಸ್ವತಂತ್ರ ಗಳಿಗೆಗಳನ್ನು ಕತ್ತರಿಸಿಕೊಂಡದ್ದು ಯಾಕೆ ಎಂಬುದಕ್ಕೆ ಉತ್ತರ ಹುಡುಕಿಕೊಳ್ಳಬೇಕಿದೆ.

ಅನಿರ್ಬಂಧತೆಯಲ್ಲಿ ಎಷ್ಟು ಖುಷಿ ಇದೆ ಎಂಬುದನ್ನು ಸ್ವತಃ ಅನುಭವಿಸಬೇಕು ಎಂದು ಕೊಳ್ಳುವ ಮಾಲತಿಗೆ ಅದು ಸಾಧ್ಯವಾಗುವುದಿಲ್ಲ. ಈ ರೀತಿಯ ನಿರ್ಬಂಧಗಳು ಹೆಣ್ಣಿಗಷ್ಟೇ ಯಾಕೆ? ಗಂಡಿಗೆ ಸಾಧ್ಯವಾಗುವ ಇಂಥ ನಾನ್ಸೆನ್ಸ್ ಆಸೆಗಳು ಹೆಣ್ಣಿನಲ್ಲಿ ಯಾಕೆ ಸೆನ್ಸ್ ಆಗಿಬಿಡುತ್ತವೆ ಎನ್ನುವಲ್ಲಿ ಲಿಂಗತಾರತಮ್ಯದ ನೆಲೆಗಳನ್ನು ಗುರುತಿಸಬಹುದಾಗಿದೆ. ರೂಢಿಗತ ಪ್ರತಿಮೆಗಳಿಗಿಂತ ತೀರ ಭಿನ್ನವಾದ ಆದರೆ ಎಲ್ಲು ಅಸಹಜವೆನಿಸದ, ಆರೋಪಿತ ಎಂದೆನಿಸದ ಹೆಣ್ಣಿನ ಪ್ರತಿಮೆಯೊಂದು ದೃಢವಾಗಿ ಈ ಕಥೆಯಲ್ಲಿ ಬಂದು ನಿಲ್ಲುತ್ತದೆ. ಬದುಕಿನ ಏಕಾಕಿತನ ವ್ಯಕ್ತಿಯ ಒಂಟಿತನದ ತಾತ್ತ್ವಿಕ ಪ್ರಶ್ನೆಗಳನ್ನು ಸ್ತ್ರೀ ವಿಶಿಷ್ಟ ಸಂವೇದನೆಯಲ್ಲಿ ಕೆದಕಿ ನೋಡುತ್ತದೆ. ಪುರುಷ ವಿರೋಧಿಯಾಗದೆ ಸ್ತ್ರೀತ್ವವನ್ನು ಸ್ಥಾಪಿಸುವ ವಿಶಿಷ್ಟವಾದ ಕಥೆಯಾಗಿದೆ.

'ಸೌಗಂಧಿಯ ಸ್ವಗತಗಳು' ಕಥೆಯ ಸೌಗಂಧಿ ಒಳ್ಳೆಯ ಹುಡುಗಿ. ಒಳ್ಳೆಯ ಮೈಕಟ್ಟಿನ ಹುಡುಗಿ, ಮೃದುಭಾಷಿಣಿ, ಒಳ್ಳೆಯ ಕೆಲಸ, ಮದುವೆಯೊಂದು ಇಲ್ಲ ಎಂಬುದೊಂದು ಬಿಟ್ಟರೆ, ಮತ್ತೇನೂ ಚಿಂತೆ ಇಲ್ಲ... ಇಷ್ಟಲ್ಲದೆ ಸೌಗಂಧಿಯ ಬಗ್ಗೆ ಹೇಳವುದಕ್ಕೆ ಇನ್ನೂ ಇದೆ. ತಂದೆ, ಇದ್ದ ಒಬ್ಬಂಟಿ ಮಗಳ ರಕ್ಷಣೆಗೆ ನಿಂತ ಯೋಧನಂತೆ ವರ್ತಿಸಿದರೆ ತಾಯಿ, ತಂದೆಗೆ ಸರಿಯಾಗಿಯೇ ಇದ್ದಾರೆ. ಇದು ಸೌಗಂಧಿಗೆ ಇರುಸುಮುರಸನ್ನ ಉಂಟು ಮಾಡಿದೆ. ಹಾಗಾಗಿ ಸೌಗಂಧಿ ಇಂಥ ಊರು ಮನೆಯ ಚೌಕಟ್ಟುಗಳಿಂದ ಆಚೆ ಬರುವುದಕ್ಕಾಗಿ ಬೇರೆ ಊರಿಗೆ ವರ್ಗ ಮಾಡಿಸಿಕೊಳ್ಳುತ್ತಾಳೆ.

ಬಸ್ಸಿಗೆ ಕಳಿಸಲು ಬಂದಿದ್ದ ತಂದೆ ಕಂಡಕ್ಟರ್‌ನೊಂದಿಗೆ ಬಹಳ ವಿನಯದಿಂದ **"ನಮ್ಮ ಹುಡುಗಿ ಒಬ್ಬಳೇ ಹೊರಟಿದ್ದಾಳೆ. ದಯವಿಟ್ಟು ಯಾರಾದರೂ ಹೆಂಗಸರನ್ನೇ ಅವಳ ಪಕ್ಕ ಕೂರಿಸಿ ಎಜಸ್ಟ್ ಮಾಡಿ. ದೊಡ್ಡ ಉಪಕಾರವಾಗುತ್ತದೆ ಎಂದಿದ್ದರು. ಸಾಲದಕ್ಕೆ ಮತ್ತೆ ಕಿಟಕಿಯ ಹತ್ತಿರ ಬಂದು ಸೌಗಂಧಿ 'ನೀನೇನೂ ಹೆದರಬೇಡ ಕಂಡಕ್ಟರ್ ಒಳ್ಳೆಯವ ಹೆಂಗಸರನ್ನೇ ಕೂಡಿಸುತ್ತಾನೆ'"** ಎನ್ನುತ್ತಾರೆ.

ಹೆದರಿಕೆ ಯಾರಿಗೆ? ಯಾಕೆ? ಸೌಗಂಧಿ ಒಬ್ಬಳೆ ಹೊರಟದ್ದಕ್ಕೆ ಹೆಣ್ಣು ಮಗಳು ಎನ್ನುವ ಕಾರಣಕ್ಕೆ ಆ ಕಾಣದ ಊರಲ್ಲಿ ಒಬ್ಬಳೆ ಇರಬೇಕಲ್ಲ ಇರುತ್ತಾಳಲ್ಲ ಎಂದು ಅಪ್ಪನಿಗೆ

ಹೆದರಿಕೆಯಾಗುತ್ತಿದೆ. ಮತ್ತಿನ್ನೇನು? ಮಗಳು ಕೆಲಸದ ನಿಮಿತ್ತ ವರ್ಗಾವಣೆಯಾದ ಆ ಊರಿಗೆ ಹೋಗುವ ಮೊದಲೆ 'ವಿಧವೆ ಹೆಂಗಸಿನ ಮನೆಯೊಂದನ್ನು ಹುಡುಕಿ ಬಾಡಿಗೆಗೆ ಗೊತ್ತು ಮಾಡಿಯಾಗಿತ್ತು. ಮನೆ ನೋಡಲಿಕ್ಕೆ ಹೋದಾಗಲೇ ಮನೆ ಒಡತಿಯ ಎದುರಿಗೆ ಇತಿಹಾಸ ಬಿಚ್ಚಿ ಬಂದಿದ್ಯಾಕೆ.

ಇವಳ ತಂಗಿಯರಿಬ್ಬರಿಗೂ ಮದುವೆಯಾಗಿದೆ. ಇವಳದೊಂದು ಆಗಲಿಲ್ಲ ಎಂದಾಗಲೇ ಮನೆಯೊಡತಿಯ ಮುಖದಲ್ಲಿ ಕರುಣೆಯ ಗೆರೆಗಳು ಮೂಡಿದ್ದವು. ಸೌಗಂಧಿಯನ್ನೇನೂ ಯಾವುದರಲ್ಲಿಯೂ ತೆಗೆದುಹಾಕುವಂತಿಲ್ಲ. ಆದರೂ ಮಹೂರ್ತ ಕೂಡಿಬಂದಿಲ್ಲ ಅಷ್ಟೇ. ಕಡೆಗೆ ನಾನೇ ನಮ್ಮದೇ ಜಾತಿಗೀತಿ ನೋಡಿಕೊಂಡು ಒಂದು ಒಳ್ಳೆಯ ಕೆಲಸದಲ್ಲಿದ್ದವನನ್ನು ಲವ್ ಆದರೂ ಮಾಡು ಮಾರಾಯ್ತಿ. ನಾನು ಅಡ್ಡಿ ಮಾಡುವುದಿಲ್ಲ. ರಾಜಾರೋಷವಾಗಿ ಮದುವೆ ಮಾಡಿಕೊಡುತ್ತೇನೆ ಅಂದ ತಂದೆಯ ಮಾತಿಗೆ ಮನೆ ಒಡತಿಗೂ ನಗು ಬರುತ್ತದೆ. ಆದರೆ ಸೌಗಂಧಿಗೆ ನಗು ಬರುವುದಿಲ್ಲ. ಹೇಗೆ ಸಾಧ್ಯವಾಗುತ್ತೆ ಅಷ್ಟಕ್ಕೂ ಅವಳಪ್ಪ ಹೇಳಿದಂತೆ ಲವ್ ಮಾಡಿ ಮದುವೆ ಮಾಡಿಕೊಳ್ಳುವ ಮನಸ್ಥಿತಿಯವಳಾಗಿದ್ದರೆ ಯಾವಾಗಲೋ ಸೌಗಂಧಿಯ ಮದುವೆಯಾಗಿರುತ್ತಿತ್ತು. ಇವಳಿಂದ ಅದು ಸಾಧ್ಯವಿಲ್ಲ. ಅದರಲ್ಲೂ ಅವರಪ್ಪ ಹೇಳಿದಂತೆ ತಮ್ಮದೇ ಜಾತಿಗೀತಿ ನೋಡಿಕೊಂಡು ಲವ್ ಮಾಡೋದಕ್ಕೆ ಸಾಧ್ಯನಾ? ಸೌಗಂಧಿಯ ತಂದೆ ಮಾತುಗಳಲ್ಲಿ ಮುಖ್ಯವಾಗಿ ಸ್ವಾರ್ಥವೇ ಎದ್ದು ಕಾಣುತ್ತದೆ.

ಮನೆಯಾಕೆ ಒಳ್ಳೆಯ ಹೆಂಗಸು ಎನ್ನುವುದಕ್ಕಿಂತ ಅವಳು ವಿಧವೆ ಎನ್ನುವುದು ಸೌಗಂಧಿಯ ತಂದೆಗೆ ಒಳ್ಳೆಯ ಅಂಶವಾಗಿ ಕಾಣಿಸುತ್ತಿದೆ. ಮಗಳು ಒಬ್ಬಂಟಿಯಾಗಿ ಅವರ ಮನೆಯಲ್ಲಿ ಬಾಡಿಗೆಗೆ ಇರುವುದರಿಂದ ಯಾವ ಆತಂಕವು ಇಲ್ಲ. ಸಾಲದಕ್ಕೆ ಮಗಳ ಜೊತೆ ರಾತ್ರಿ ಮಲಗಲು ಒಂದು ಹೆಂಗಸನ್ನು ಗೊತ್ತು ಮಾಡಿ ಅವಳಿಗೆ ತಿಂಗಳಿಗೆ ಇಂತಿಷ್ಟು ಅಂತ ಕೊಟ್ಟಾರಾಯಿತು ಎಂದು ಮಾತಾಡಿದ್ದರೆ. ಮಗಳ ಮನಸ್ಸು ಮರದ ಕೊರಡೋ ಎಂಬಂತೆ ತಂದೆ ಮಾತಾಡುವುದು ಯಾಕೆ. ಗಂಡು ಮಗನಾಗಿದ್ದರೆ, ಮದುವೆಯಾಗದಿದ್ದರೆ, ಕೆಲಸದ ನಿಮಿತ್ತ ಬೇರೆ ಊರಿಗೆ ಹೋಗಬೇಕಾಗಿದ್ದರೆ, ಬಾಡಿಗೆ ಮನೆಯಲ್ಲಿ ಒಬ್ಬನೆ ಇರಬೇಕಾಗಿದ್ದರೆ ಅಪ್ಪ ಹೀಗೆಯೇ ನಡೆದುಕೊಳ್ಳುತ್ತಿದ್ದರೆ ಎನ್ನುವ ಪ್ರಶ್ನೆಗಳು ಸಹಜವಾಗಿಯೇ ಮೂಡುತ್ತವೆ. ಮನೆ ಬಾಡಿಗೆಗೆ ಗೊತ್ತು ಮಾಡಿ ಬಂದ ಅಪ್ಪ, ಅಮ್ಮನೆದುರಿಗೆ ಮಾತಾಡುವ ರೀತಿಯೆ ಹಾಗೆ. ಎಲ್ಲಿ ತಮ್ಮ ಮಗಳು ತಾನಿಲ್ಲದಿದ್ದರೆ ಕೆಟ್ಟೇ ಹೋಗುತ್ತಾಳೋ ಅಥವಾ ಊರಿಗೆ ಊರೇ ಅವಳಿಗೆ ಬಸುರು ಮಾಡಲು ಹೊಂಚುತ್ತಿರುತ್ತದೆ ಎಂಬಂತೆ ಮಾತಾಡುತ್ತಾರೆ. ನಮ್ಮ ಸೌಗಂಧಿಯೇ ಗಂಡಸರ ನೆರಳನ್ನು ಹತ್ತಿರ ಸೇರಿಸದವಳು. ಅಷ್ಟು ನಿಯತ್ತಿನ ಹುಡುಗಿಯಾದ್ದರಿಂದ ನನಗೆ ಇಷ್ಟು ಧೈರ್ಯ. ಇಲ್ಲವಾದರೆ

ನಾನೆಲ್ಲಿ ಕಳಿಸುತ್ತಿದ್ದೆ? ಎನ್ನುತ್ತಾರೆ. ಇಂಥ ಎಲ್ಲರ ಮಧ್ಯೆ ಸೌಗಂಧಿ ಇದ್ದಳು. ಇಲ್ಲಿದ್ದು ತನ್ನ ಸ್ವರದ ಗುರುತನ್ನು ತಾನೇ ಮರೆಯುವುದಕ್ಕಿಂತ ಮುಂಚೆ ದೂರದೂರಿನಲ್ಲಿ ಒಬ್ಬಂಟಿಯಾಗಿ ಇರಬೇಕೆಂಬಂಥ ಒಂದು ಪುಟ್ಟ ಆಸೆಯನ್ನು ಸಾಕಿಕೊಳ್ಳುತ್ತಾಳೆ ಸೌಗಂಧಿ.

ಆದರೆ ತಂಗಿಯ ಬಾಣಂತನ ಮುಗಿಸಿ ಸೌಗಂಧಿಯ ಜೊತೆಯಲ್ಲಿಯೇ ಇರಲು ಬರುವ ತಾಯಿ ಅದಕ್ಕೂ ತಣ್ಣೀರೆರಚುತ್ತಾರೆ. ಒಳಗೊಳಗೆ ಸೌಗಂಧಿಯ ಸ್ವಗತಗಳು ಹೆಚ್ಚಾಗುತ್ತಾ ಹೋಗುತ್ತವೆ. ಕಡೇ ಪಕ್ಷ ತನಗೆ ಕನಸುಗಳಾದರೂ ಇರಲಿ ಎಂದು ಬಯಸುತ್ತಾಳೆ. ಕನಸುಗಳಲ್ಲಿ ಸಂಭಾವಿತತನ ಬಿಟ್ಟು ಹಾಲಿನವನೂ ಹಣಕುತ್ತಾನೆ. ಮತ್ತೆ ಎಲ್ಲೋ ಕಂಡ ಆ ಕಂಡಕ್ಟರನೂ, ತನ್ನ ಪಕ್ಕದಲ್ಲಿ ಕುಳಿತುಕೊಳ್ಳದೆ ಹೋದ ಕ್ರಾಪಿನವನೂ... ಮತ್ತೆ ಯಾರು ಯಾರೆಲ್ಲ; ಹೇಗೆಲ್ಲ ವಿವರಿಸಲಿ?... ಆಫೀಸಿನ ಕೆಲ ಕಣ್ಣುಗಳು ಅವು ನಿನಗೂ ಗೊತ್ತಲ್ಲ ಎಂದು ಆಫೀಸಿನ ಅಂಜಲಿ ಜೊತೆ ಮಾತಾಡುತ್ತಾಳೆ. ಆಫೀಸಿನ ಅಂಜಲಿಯ ಕಣ್ಣುಗಳಲ್ಲಿ ಎಂತಹ ಧೈರ್ಯ, ಆತ್ಮವಿಶ್ವಾಸ! ಮದುವೆಯೆಂಬುದು ಅನಿವಾರ್ಯವಲ್ಲ ಸೌಗಂಧೀ ಎಂದೆಲ್ಲ ಅವಳು ದೃಢವಾಗಿ ತಿಳಿತಿಳಿಯಾಗಿ ಹೇಳುತ್ತಾಳೆ. ಗಂಡಿಲ್ಲದೆ ಬದುಕಲು ಸಾಧ್ಯವಿಲ್ಲವೇ? ಖಂಡಿತ ಸಾಧ್ಯವಿದೆ ಅಂತೆಲ್ಲ ಸೌಗಂಧಿಗೂ ಅನಿಸುತ್ತದೆ. ಆದರೆ ಮರುಕ್ಷಣ ಹೆಣ್ತನಗಳು ಬಾಯಾರಿದಾಗ ಸೋಲುತ್ತಾಳೆ. ತಂದೆ ಹುಡುಕಿಕೊಟ್ಟ ಬಾಡಿಗೆ ಮನೆಯಲ್ಲಿ, ಬಾಡಿಗೆ ಮನೆಯ ಯಜಮಾನಿ ರಾತ್ರಿ ಮಲಗಲು ಗೊತ್ತುಮಾಡಿದ ಹೆಂಗಸಿನೊಂದಿಗೆ, ಅಪ್ಪನ ಮಾತಿನಂತೆ ತಂಗಿಯ ಬಾಣಂತನ ಮುಗಿಸಿ ಬಂದ ತಾಯಿಯ ಜೊತೆ ಕನಸುಗಳಿಗೆ ಸೀರೆ ಅಡ್ಡ ಸರಿಸಿ ಬದುಕನ್ನು ಬಂಧನದಲ್ಲಿ ಕಳೆಯುವಂತೆ ಕಾಣುವ ಸೌಗಂಧಿ ಈ ಲಿಂಗತಾರತಮ್ಯದ ವಿರುದ್ಧ ಒಳಗೊಳಗೆ ಪ್ರತಿಭಟಿಸುತ್ತಾಳೆ.

'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥೆ ಲಿಂಗತಾರತಮ್ಯದ ನೆಲೆಯಲ್ಲಿ ಗುರುತಿಸಿಕೊಂಡ ಮತ್ತೊಂದು ಕಥೆ. ಇದು ವಾಗತ್ತೆ ಮೊಮ್ಮಗಳ ಮದುವೆ ಸಂಭ್ರಮದ ಸುತ್ತ ಹೆಣೆದ ಕಥೆಯಾಗಿದೆ. ವಾಗತ್ತೆಯಂತೆಯೇ ಹಣೆಗೆ ಬೊಟ್ಟಿಲ್ಲದ, ಕರಿಮಣಿಯಿಲ್ಲದ, ಬೋಳು ತಲೆಯ ಮೇಲೆ ಹಾಸಿದ ಕೆಂಪು ಸೆರಗಿನ ಯಾವ ಉಪಚಾರವಿಲ್ಲದೆ ಸುಕ್ಕುಗಟ್ಟಿ ನಿವೃತ್ತರಾದ, ಮಂಟಪಕ್ಕೆ ಇನ್ನು ಆಜೀವಪರ್ಯಂತ ರಂಗೋಲಿ ಬರೆಯಬಾರದ, ಮಂಟಪದ ಬಳಿ ಸುಳಿಯಲೂ ಕೂಡದ, ಗಂಡಸರ ಕಣ್ಣಿಗೆ ಬೀಳದ ಜಾಗದಲ್ಲಿ ಕುಳಿತು ಮದುವೆ ಕಾಣಬೇಕಾದ ಮುತ್ತತ್ತೆ, ಕಾಟಜ್ಜಿ, ಹೆಬ್ಬಾಗಿಲಜ್ಜಿ, ಸರಸಜ್ಜಿ ಮುಂತಾದವರು ಕುಳಿತಿದ್ದಾರೆ. ಕುಳಿತಲ್ಲೇ ಒನಪು, ವೈನ, ಆಚಾರ, ಕ್ರಮ, ರೀತಿನೀತಿ ಹೇಳುತ್ತಿದ್ದಾರೆ. ಅವರುಟ್ಟಿರುವುದೆಲ್ಲ ಹೆಚ್ಚು ಕಡಿಮೆ ಒಂದೇ ಬಣ್ಣದ ಸೀರೆಯಾದರೂ, ಸೀರೆಯ ನೂಲಿನಲ್ಲಿ ವ್ಯತ್ಯಾಸವಿದೆ. ಸುಮಾರು ಎಂಭತ್ತು ನಂಬರಿನ ನೂಲಿನಿಂದ ಹಿಡಿದು ಬಹಳ ಮೆತ್ತಗಿನ ಸೀರೆಯುಟ್ಟವರೂ ಇದ್ದಾರೆ. ರೇಷ್ಮೆ ಸೀರೆಯನ್ನೂ ಉಟ್ಟವರಿದ್ದಾರೆ. ರೇಷ್ಮೆಯಲ್ಲಿ

ಹೆಬ್ಬೆಟ್ಟಗಲದ ಕಿರುಬೆಟ್ಟಗಲದ ಜರಿ ಅಂಚಿನ ವ್ಯತ್ಯಾಸದಲ್ಲೇ ಅಂತಸ್ತುಗಳ ಹೆಚ್ಚು ಕಡಿಮೆ ಸೂಚಿಸುವವರೂ ಇದ್ದಾರೆ. ಇಷ್ಟರಲ್ಲಿ ಕಾಟಜ್ಜಿ ಉಟ್ಟ ಸೀರೆ ಮಾತ್ರ ನಲ್ವತ್ತು ನಂಬರಿನ ನೂಲಿದು.

ಉಟ್ಟ ಸೀರೆ ಎಷ್ಟೇ ನಂಬರಿನದಾಗಿರಲಿ, ಎಷ್ಟಗಲದ ಜರಿ ಅಂಚಿನ ರೇಷ್ಮೆ ಸೀರೆಯಾಗಿರಲಿ, ಎಷ್ಟೇ ಹತ್ತಿರದ ಸಂಬಂಧಿಯಾಗಿದ್ದರೂ ಕೂಡ ಪಾಪ ಈ ಬೋಳು ತಲೆಯ ಕೆಂಪು ಸೆರಗಿನ ಅಜ್ಜಿಯರಿಗೆ ಮಂಟಪದ ಬಳಿ ಸುಳಿಯಲು ಕೂಡ ಅವಕಾಶವಿಲ್ಲ, ಗಂಡಸರ ಕಣ್ಣಿಗೆ ಬೀಳದ ಜಾಗದಲ್ಲೆ ಕುಳಿತು ಮದುವೆ ಕಾಣಬೇಕಾದ ಸ್ಥಿತಿ ಇವರುಗಳದ್ದು. ಈ ಪುರುಷ ಸಮಾಜ ಗಂಡ ಸತ್ತ ಹೆಣ್ಣಿಗೆ ವಿಧವೆಯ ಪಟ್ಟ ಕಟ್ಟಿ, ತಲೆಬೋಳಿಸಿ, ವಿಕಾರಗೊಳಿಸಿ ಸಂಪ್ರದಾಯದ ಹೆಸರಿನಲ್ಲಿ ಅಸಹಾಯಕ ಹೆಣ್ಣನ್ನು ಅದುಮಿಟ್ಟು ಅವಳ ಬಯಕೆ, ಭಾವನೆಗಳಿಗೆಲ್ಲ ಬರೆಹಾಕಿದರು. ಎಲ್ಲಾ ಗೊತ್ತಿದ್ದರು ವಿರೋಧಿಸದೆ ಸರಿ ಎಂದು ಒಪ್ಪಿಕೊಂಡದ್ದನ್ನ ಕಥೆ ಅಲ್ಲಲ್ಲಿ ಅನಾವರಣಗೊಳಿಸುತ್ತದೆ.

ವಾಗತ್ತೆಯ ಮೊಮ್ಮಗಳ ಮದುವೆಯಲ್ಲಿ ಬರೀ ಸುಬ್ಬಿಯ ಮದುವೆಯ ಸುದ್ದಿ. ಸುಬ್ಬಿಯನ್ನು ಮಂಟಪಕ್ಕೆ ತರಬೇಕಾದರೆ ಸೋದರಮಾವ, ಮದುಮಗಳನ್ನು ಎತ್ತಿಕೊಂಡು ಬಂದ, ದಿಬ್ಬಣ ಬರುವವರೆಗೂ ಸುಬ್ಬಿಗೆ ನಿದ್ದೆ, ಮದುಮಗನನ್ನ ಆನೆಯ ಮೇಲೆ ಕರೆತರಲಾಯಿತು. 'ಸ್ವಲ್ಪ ಚಿನ್ನವನ್ನೇ ಆಕೆಗೆ ಕೊಟ್ಟಿದ್ದು! ಆ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಚಿನ್ನವೆಲ್ಲಿ ಹಾಕುತ್ತಿದ್ದರು? ಸೊಂಟಕ್ಕೊಂದು ಪಟ್ಟಿಹಾಕಿ ಬಿಟ್ಟರೆ ಭಾರೀ ಆಯಿತು – ಎಂಬ ಮಾತಿಗೆ 'ಗಂಡನ ಮನೆಯಲ್ಲಿ ಗೇಯಲಿಕ್ಕೆ ಸೊಂಟಕ್ಕೊಂದು ಪಟ್ಟಿಬೇಕೇ ಬೇಕಿತ್ತಲ್ಲ' ಎಂದರು ರಾಮಕ್ಕನೆಂಬುವವರು. ಆದರೆ ಸುಬ್ಬಕ್ಕನ ವಿಷಯ ಹಾಗಲ್ಲ. ದೊಡ್ಡವರ ಮನೆಗೆ ಕೊಡುವುದೆಂದು ಅವಳ ಅಪ್ಪ ರಾಶಿ ಚಿನ್ನವನ್ನು ಹಾಕಿದರು. ಗಂಡನ ಮನೆಯಲ್ಲಿಯೂ ಆಕೆ ಸುಖವನ್ನೇ ಕಂಡಳು. ವಾಗತ್ತೆ ಯಾರ್‍ಯಾರಿಗೆಲ್ಲ ಊನ ಹೆಕ್ಕುವವರು, ಸುಬ್ಬಕ್ಕನ ವಿಷಯಕ್ಕೆ ಮಾತೆತ್ತುವುದಿಲ್ಲ! 'ಇಷ್ಟಕ್ಕೂ ಆ ತಮ್ಮಣ್ಣಯ್ಯ ಬಂದಿಲ್ಲವೇ ಮದುವೆ ಮನೆಗೆ? ವಾಗತ್ತೆ ಕೇಳಿದರು. 'ಸುಬ್ಬೀ, ತಮ್ಮಣ್ಣಯ್ಯ ಬರಲಿಲ್ಲವೇ ಇನ್ನು? ಬರುತ್ತಾನೆ ಹೌದಲ್ಲ?

"ಏನೋ ಈ ಗಂಡಸರ ವಿಚಾರ ಹೇಗೆಂತ ಹೇಳುವುದು? ಅವರದು ನಿಮಗೆ ಗೊತ್ತಲ್ಲ? ಹೆಂಗಸರ ಹತ್ತಿರ ಹೇಳಿ ಒಂದೇ ಒಂದು ಕೆಲಸ ಮಾಡಿದ್ದೆಂತ ಉಂಟಾ ಇವತ್ತಿಗೆ?'– ಸುಬ್ಬಕ್ಕನ ಸ್ವರದಲ್ಲಿ ನೋವಿದೆಯನ್ನುವಂತಿಲ್ಲ. ಅದು ಬೀಗಿದಂತೆ ಕಂಡದ್ದು ಅದರೊಳಗೆ ಪೊಗರು ಹೊಕ್ಕಿಕೊಂಡದ್ದರಿಂದಲೂ ಇರಬಹುದು......"

ಅಷ್ಟರವರೆಗೆ ಒಂದು ಬದಿಯಲ್ಲಿ ಕುಳಿತಿದ್ದ ತಮ್ಮಣ್ಣಯ್ಯನ ತಂಗಿಯ ಮಗಳು ತಡೆಯದೆ 'ಅರರೆ! ಮದುವೆ ಮನೆಗೆ ಬರುತ್ತೇನೆ ಅಥವಾ ಇಲ್ಲ ಎನ್ನಲೂ ಆಗುವುದಿಲ್ಲವಂತಾ ಮಾವಯ್ಯನಿಗೆ? ಇದು ಯಾವ ದೊಡ್ಡ ಕೆಲಸ? ಅದನ್ನು ಹೆಂಗಸರ ಹತ್ತಿರ ಹೇಳಿದರೆ ಏನಾಗುತ್ತದೆಯಂತೆ ಎಂದೇ ಬಿಟ್ಟಳು.'

ವಾಗತ್ತೆ, **"ಹೆಣೇ, ಏನೆಂತ ತಿಳಿದಿದ್ದೀ? ಮುಂಚಿನ ಕಾಲದ ಗಂಡಸರೇ ಹೀಗೆ. ಹೆಂಗಸರನ್ನು ಎಲ್ಲಿ ಇಡಬೇಕೋ ಅಲ್ಲೇ ಇಟ್ಟಿದ್ದಕ್ಕೆ ಬಚಾವಾದರು. ಆಸ್ತಿ, ಮನೆ ಚಿನ್ನ ಬಣ್ಣ ಮಾಡಿದರು. ಈಗಿನವರಂತೆ ಹೆಂಡತಿ ಕೂತದ್ದೇ ಚಂದ, ನಿಂತದ್ದೇ ಚಂದ ಎಂದಿದ್ದರೆ ಗಂಡಸಾದವು ಕವುಂಚಿಯೇ ಹೋಗುವುದಲ್ಲವೆ? ನಮ್ಮ ತಮ್ಮಣ್ಣಯ್ಯನಂತಹ ಗಂಡಸು ಇಷ್ಟು ರಾಷ್ಟ್ರದೊಳಗೆ ಸಿಗಲಿಕ್ಕಿಲ್ಲ"**[೧೦] ಎಂದು ಸ್ವಲ್ಪ ಬಿಗಿಯಾಗಿಯೇ ಮಾತಾಡಿಬಿಟ್ಟರು ವಾಗತ್ತೆ.

ಕೆಲವು ಬೋಳು ತಲೆಯ ಸಂಪ್ರದಾಯಸ್ತ ಮನಸ್ಸುಗಳೇ ತಮ್ಮಷ್ಟಕ್ಕೆ ತಾವೇ ಎಲ್ಲವನ್ನು ಒಪ್ಪಿಕೊಂಡಂತೆ ಗಂಡಸರ ಹದ್ದುಬಸ್ತಿನಲ್ಲೆ ಇರಬೇಕೆಂದುಕೊಂಡು ಯಾವುದನ್ನು ಪ್ರಶ್ನಿಸದೆ ತಮ್ಮ ಜುಟ್ಟನ್ನು ಅವರ ಕೈಗಿಟ್ಟುಕೊಂಡು ಬದುಕು ಸವೆಸುವವರಿದ್ದಾರೆ. ಇದನ್ನೆ ತಮ್ಮ ಮಗಳಿಗೂ ಮೊಮ್ಮಗಳಿಗೂ ತಲೆತಲಾಂತರದಿಂದ ಬಳುವಳಿಯಾಗಿ ಕೊಡುತ್ತಾ ಬಂದಿದ್ದಾರೆ. ಲಿಂಗ ಅಸಮಾನತೆಗೆ ಯಾವಾಗಲೂ ಗಂಡು ಮಾತ್ರ ಕಾರಣನಾಗುವುದಿಲ್ಲ. ಅದನ್ನ ಪ್ರಶ್ನಿಸದೆ ಅನುಸರಿಸಿಕೊಂಡು ಬರುವ ಹೆಣ್ಣೂ ಕಾರಣಳಾಗಿರುತ್ತಾಳೆ ಎನ್ನುವುದಕ್ಕೆ ಈ ಕಥೆ ಸಾಕ್ಷಿಯಾಗುತ್ತದೆ. ಸಮಾಜಶಾಸ್ತ್ರವನ್ನು ಓದಿಕೊಂಡಿರುವ ತಮ್ಮಣ್ಣಯ್ಯನ ತಂಗಿಯ ಮಗಳು ಕೇಳಿದ ಪ್ರಶ್ನೆಯಲ್ಲಿ ಯಾವ ತಪ್ಪುಗಳು ಕಾಣಿಸುವುದಿಲ್ಲ. ಆದರೆ ಶ್ರೀಮಂತ ಸುಬ್ಬಿಯನ್ನು ಹೊಗಳಿ ತಾರಕಕ್ಕೆ ಏರಿಸುತ್ತಿರುವ ವಾಗತ್ತೆ, ವಾಗತ್ತೆಯಂತ ಹಿರಿಯ ಬೋಳು ತಲೆಗಳಿಗೆ ಅದು ತಪ್ಪಾಗಿ ಕಾಣಿಸುತ್ತದೆ. ತಮ್ಮಣ್ಣಯ್ಯ ಮಾಡಿದ್ದೆ ಸರಿ ಎನ್ನುವ ವಾಗತ್ತೆಗೆ ಪುರುಷ ಸಮಾಜ ಮಾಡಿದ ಅನ್ಯಾಯದ ಅರಿವಿಲ್ಲ, ತಾನು ಆ ಮದುವೆ ಮಂಟಪದ ಬಳಿ ಸುಳಿಯದಿರುವುದಕ್ಕೆ, ತಲೆ ಬೋಳಿಸಿಕೊಂಡದ್ದಕ್ಕೆ, ಒಂದೇ ಬಣ್ಣದ ನೂಲಿನ ಸೀರೆಯುಟ್ಟದಕ್ಕೆ ಸಾಯುವತನಕ ನೀರು ಗಂಜಿ ಉಣ್ಣುತ್ತಿರುವುದಕ್ಕೆ ಈ ಗಂಡು ಸಂಕುಲವೇ ಕಾರಣ ಎಂಬ ಅರಿವಿಲ್ಲ. ಮೂಢ ನಂಬಿಕೆಗಳನ್ನೆಲ್ಲ ಯಥಾವತ್ತಾಗಿ ತಾವೇ ನಡೆಸಿಕೊಂಡು ಬಂದಿದ್ದರು ಈ ಬಗೆಯ ಯಾತನೆಗಳನ್ನೆಲ್ಲ ಹೆಣ್ಣಿಗಾಗಿ ಮಾತ್ರ ರೂಢಿಮಾಡಿಕೊಟ್ಟವರ್ಯಾರು? ಗಂಡಿನ ದಬ್ಬಾಳಿಕೆಯನ್ನೆಲ್ಲ, ಮನೆತನವನ್ನ ನಡೆಸಿಕೊಂಡು ಹೋಗುವ ಜವಾಬ್ದಾರಿ ಎಂದು ಕೊಂಡರೆ, ತನ್ನ ಬಾಳು ತಲೆಯ ಮೇಲೆ ತಾನೆ ಮತ್ತೊಮ್ಮೆ ಕತ್ತಿ ಎಳೆದುಕೊಂಡಂತಾಗುತ್ತದೆ ಅಷ್ಟೆ. ಆಧುನಿಕ ಮನಸ್ಸಿನ ಹುಡುಗಿಯಲ್ಲಿ ಎದ್ದಿರುವ ಪ್ರಶ್ನೆಗಳು

ವಾಗತ್ತೆಯಂತ ಬೋಳು ಮನಸುಗಳ ಕಿವಿಮೇಲೆ ಅರ್ಥವಾಗುವ ರೀತಿಯಲ್ಲಿ ಬೀಳುವವರೆಗೆ ಅಸಮಾನತೆಗೆಳಲ್ಲಾ ಬದಲಾಗುವುದಿಲ್ಲ.

ತನ್ನದೆ ಆದ ವಿಶಿಷ್ಟತೆಗಳಿಂದ ಲಿಂಗ ಅಸಮಾನತೆಯ ನೆಲೆಗಳನ್ನು ಗುರುತಿಸುವ ಮತ್ತೊಂದು ಕಥೆ 'ಮರೆವು'. ಇಲ್ಲಿ ಮರೆವು ಎನ್ನುವುದು ಬರಿ ಮರೆತು ಹೋಗುವ ಅಥವಾ ನೆನಪು ಕಳೆದುಕೊಳ್ಳುವಂಥದ್ದು ಮಾತ್ರವಲ್ಲ. ಇಲ್ಲಿ ಬರುವ ಅಜ್ಜ ಅಜ್ಜಿಗೆ ವಯಸ್ಸಿನ ಮರೆವು. ಅರವತ್ತಕ್ಕೆ ಅರಳು ಮರಳು ಅಂತಾರಲ್ಲ ಹಾಗೆ. ಅಂತೆಯೇ ಇವರು ಸ್ತ್ರೀ-ಪುರುಷರು ಎಂಬಲ್ಲಿ ಮರೆವು ಉಂಟಾಗಿದೆ. ಗಂಡ ಹೆಂಡತಿ ಎನ್ನುವಲ್ಲಿ ಮರೆವಿದೆ. ಒಟ್ಟಾರೆಯಾಗಿ ನಮ್ಮನ್ನೆ ಕಲ್ಪನೆಯಾಚೆಗೆ ಕರೆದುಕೊಂಡು ಹೋಗುವ ವಾಸ್ತವವನ್ನೇ ಮರೆಸುವ ಮರೆವಿದೆ.

"ಅಷ್ಟು ವರ್ಷ ಒಟ್ಟಿಗೆ ಬದುಕಿದ್ದಕ್ಕೋ ಏನೋ ಗಂಡನಾದವ 'ಗಂಡಸು' ಅಂತ ರೊಮ್ಯಾಂಟಿಕ್ ಅರ್ಥದಲ್ಲಿ ಅನಿಸುವುದೇ ಇಲ್ಲವಲ್ಲ?... ಅವರ ಕಾಲಿಗೆ ಎಣ್ಣೆ ತಿಕ್ಕುತ್ತ ಕುಳಿತಿದ್ದೆ ಅವತ್ತೊಂದು ದಿನ 'ಅಲ್ಲ ... ಗಂಡಸರು ಇದ್ದರೆ ಆ ಬದಿಗೇ ಸುಳಿಯುತ್ತಿರಲಿಲ್ಲ ನಾನು. ಅಷ್ಟು ನಾಚಿಕೆಯವಳು. ಈಗ ಅದೆಲ್ಲ ಏನಾಯಿತು? ಇಡೀ ಮನೆಯಲ್ಲಿ ಗಂಡಸೊಬ್ಬನೊಡನೆ ಏಕಾಕಿ ಬದುಕುತ್ತಿದ್ದೇನೆ ಎಂಬುದು ಏನೋ ವಿಶೇಷ ಅನಿಸುತ್ತಲೇ ಇಲ್ಲ...! ಹೀಗೆ ಕಾಲುಬುಡದವರೆಗೂ ಎಣ್ಣೆ ತಿಕ್ಕುವುದು – ಎಣ್ಣೆ ಹಚ್ಚುವ ಕ್ರಿಯೆ ಮಾತ್ರ ಎಂಬುದು ಬಿಟ್ಟು – ಎಲ್ಲಿಯೂ ಏನೂ ಅನಿಸುವುದೇ ಇಲ್ಲ! ಬದಲು ಸ್ನೇಹಿತನೊಂದಿಗೆ ಇದ್ದೇನೆ ಅನಿಸುತ್ತದೆ!' – ಆತ ಅವರು ಏನಂದರು?

'ಹ್ಞಾಂ!... ನೀನು ಹೇಳಿದೆ ಅಂತೇನೂ ಹೇಳುವುದಲ್ಲ ನನಗೂ ಹಾಗೇ ಅನಿಸುತ್ತೆ ಕಣೇ... ಒಂದು ಕಾಲದಲ್ಲಿ ಸೀರೆ ತುದಿ ಕಂಡರೆ ಝುಮ್ಮು ನಡುಗುತ್ತಿದ್ದೆ... ಈಗ! ಇದೆಲ್ಲ ಹೀಗೆಯೇ? ಒಟ್ಟಿಗೆ ಬದುಕಿ ಬದುಕಿ ಕಡೆಗೆ ಹೆಣ್ಣು ಗಂಡು ಎಂಬ ಮಾಯೆಯೇ ಪರಸ್ಪರರಲ್ಲಿ ಮಾಯವಾಗಿ ಕೇವಲ ಜೀವಿಗಳಾಗಿ ಬಿಡುತ್ತೇವೆಯೇ?"[10]

ಇಳಿವಯಸ್ಸಿನಲ್ಲಿರುವ ಅಜ್ಜ ಅಜ್ಜಿ ಯವ್ವನಾವಸ್ಥೆಯನ್ನು ನೆನಪಿಗೆ ತಂದುಕೊಳ್ಳುತ್ತಾ ತಮ್ಮ ಮದುವೆಯ ಹೊಸತನ್ನು ನೆನಪಿಸಿಕೊಳ್ಳುತ್ತಾರೆ. ಇಲ್ಲಿ ಗಂಡ-ಹೆಂಡತಿ ಎನ್ನುವುದಕ್ಕಿಂತ ಸ್ನೇಹಿತರಾಗಿ ಸಲುಗೆಯಿಂದ ಮಾತಾಡುತ್ತಾರೆ. ಸ್ನೇಹದ ಎಲ್ಲ ಎಲ್ಲೆಗಳನ್ನು ಮೀರಿ ನಿಂತು ಪ್ರಕೃತಿಯೊಳಗಿನ ಜೀವಿಗಳಾಗ ಬಯಸುತ್ತಾರೆ. ಈ ಜೀವಿಗಳು ತಾನು ಗಂಡು-ಹೆಣ್ಣು, ಗಂಡ-ಹೆಂಡತಿ, ವಯಸ್ಸು, ಸ್ನೇಹ ಸಂಬಂಧಗಳಾಚೆಗಿನ ಬದುಕನ್ನು ಅನುಭವಿಸುವುದು ಈ ಜೀವಿಗಳ ನಡುವೆ ಹೆಣ್ಣು ಗಂಡ ಎಂಬ ಮಾಯೆ ಮಾಯವಾದಾಗ ಮಾತ್ರ ಬಹುಶಃ ಹೀಗಾಗುತ್ತೆ.

ಹೆಣ್ಣು ಗಂಡು ಎಂಬುದು ಮಾಯೆಯಲ್ಲ. ತುದಿಮೊದಲುಗಳಿಲ್ಲದ ನಡುವಿನಲ್ಲಿ ಬಂದು ಹೋಗುವ ಮೋಹಕ ಬಣ್ಣದ ಪ್ರಪಂಚ.

ವಯಸ್ಸಾದಂತೆ ಮಗುವಿನಂತಾಗುವ ಮಗುವಿನ ಮನಸ್ಸನ್ನು ಹೊಂದುವಂತೆ, ಮಗುವಾಗಿದ್ದಾಗ ಮನೆಯ ಯಜಮಾನನಂತೆ ಅಜ್ಜ-ಅಜ್ಜಿಯಂತೆ ಅಭಿನಯಿಸುವಲ್ಲಿ ಮಗುವಿನ ಮುಗ್ಧತೆ ಅಡಗಿರುತ್ತದೆ. ಗಂಡು ಹೆಣ್ಣಾಗುವ ಹೆಣ್ಣು ಗಂಡಾಗುವ ಮನಸ್ಥಿತಿ ಇಳಿ ವಯಸ್ಸಿನಲ್ಲಿ ಮಾತ್ರ ಸಾಧ್ಯವಾಗುವಂತದ್ದು. ಚಿಕ್ಕಮಕ್ಕಳಿರುವಾಗ ಹೆಣ್ಣು ಮಗುವಿಗೆ ಗಂಡುಡುಗೆ ಗಂಡು ಮಗುವಿಗೆ ಹೆಣ್ಣುಡುಗೆ ತೊಡಿಸಿ ನೋಡುವ ಖುಷಿ ಇದೆಯಲ್ಲ ಅದು ಖಂಡಿತ ಮಾಯೆಯಲ್ಲ ತೀರ ಸಹಜವಾದದ್ದು.

"ಪ್ರಕೃತಿ ಸಹಜವಾದ ಲಿಂಗಭೇದವು ಸಾಮಾಜಿಕ ಅಸಮಾನತೆಗೆ ದಾರಿ ಮಾಡಿಕೊಟ್ಟಿರುವ ಸಾಮಾಜಿಕ ನಡಾವಳಿಗಳನ್ನು ವೈದೇಹಿಯವರ ಕಥೆಗಳು ಸೂಕ್ಷ್ಮವಾಗಿ ಪರಿಶೀಲಿಸುತ್ತವೆ. ಸ್ತ್ರೀ ವಿರೋಧೀ ನಿಲುವಿಗೆ ಪುರುಷವಿರೋಧೀ ನಿಲುವು ಸರಳ ಪರಿಹಾರವೆಂದು ವೈದೇಹಿ ನಂಬುವುದಿಲ್ಲ. ಸ್ತ್ರೀ-ಪುರುಷ ಸಂಬಂಧಗಳು ಅಸಮಾನ ನೆಲೆಯಲ್ಲಿರುವುದಕ್ಕೆ ಕಾರಣ ಅವರಿಬ್ಬರೂ ಪರಂಪರಗತವಾಗಿ ಮಾಡಿಕೊಂಡು ಬಂದಿರುವ ಕೆಲಸಗಳೇ ಎಂದರೆ ಅವನ್ನು ಬದಲು ಮಾಡಿಕೊಂಡಾಗ ಎಲ್ಲ ಕೆಲಸಗಳೂ ಸಮಾನ ಪ್ರಾಮುಖ್ಯ ಪಡೆದು ಸಂಬಂಧಗಳೂ ಸಮಾನವಾಗಬಹುದೆಂದು ವೈದೇಹಿ ಹಲವು ಬಾರಿ ಸೂಚಿಸಿದ್ದಾರೆ. ಗೃಹಕೃತ್ಯದ ಕೆಲಸಗಳು ಹೆಣ್ಣಿನವು; ಆಕೆ ಹೊಸ್ತಿಲು ದಾಟಬಾರದು. ದಾಟಿ 'ಗಂಡುಬೀರಿ'ಯಾಗಬಾರದು; ಮನೆಯ ಹೊರಗಿನ ಕೆಲಸಗಳಿಗೆ ಗಂಡೇ ಜವಾಬ್ದಾರ; ಅವನು ಅಡಿಗೆಮನೆ ಪ್ರವೇಶಿಸಿ 'ಹೆಣ್ಣಿಗ'ನಾಗಬಾರದು- ಎಂಬ ಮೀಸಲಾತಿ ತತ್ತ್ವಗಳನ್ನು ವೈದೇಹಿ ವಿರೋಧಿಸುತ್ತಾರೆ. ಎಲ್ಲರೂ ಎಲ್ಲ ಕೆಲಸಗಳನ್ನೂ ಸಮಾನ ಶ್ರದ್ಧೆ ಗೌರವಗಳಿಂದ ಮಾಡುವುದು ಸಾಧ್ಯವಾದಾಗ ಲಿಂಗ ಅಸಮಾನತೆ ಕ್ರಮೇಣ ಕಡಿಮೆಯಾಗಬಹುದು ಎಂಬುದು ಲೇಖಕಿಯ ಆಶಯವಾಗಿದೆ. ಈ ದೃಷ್ಟಿಯಿಂದ ಅವರ 'ಮರೆವು' ಎಂಬ ಕಥೆ ತಿಳಿಹಾಸ್ಯದ ಲವಲವಿಕೆಯ ಧಾಟಿಯಲ್ಲೇ ಮಂಡಿಸುವ ಸತ್ಯ ಗಹನವಾದದ್ದು. ಹಲವು ವರ್ಷಗಳ ದಾಂಪತ್ಯವನ್ನು ಅನುಭವಿಸಿ, ಮಕ್ಕಳು, ಮೊಮ್ಮಕ್ಕಳು ಪಡೆದ ಇಬ್ಬರು ಪಕ್ವಜೀವಿಗಳು ತಮ್ಮ ಜೀವನದ ಇಳಿಗಾಲದಲ್ಲಿ ಸೂಚಿಸುವ ದರ್ಶನ ಮೌಲಿಕವಾದದ್ದು".[೨]

ನಾಗವೇಣಿಯವರ ಕಥೆಗಳಲ್ಲಿ ಲಿಂಗತಾರತಮ್ಯದ ಪ್ರಸ್ತಾಪ ದೇಹಾಕೃತಿಯ ನೆಲೆಯಲ್ಲಿ ನಡೆಯುತ್ತದೆ. ಪುರುಷ ಪ್ರಧಾನ ಸಮಾಜ ಎನ್ನುವುದು ಯಾವಾಗಲೂ ಸಮಾಜದಲ್ಲಿರುವ ಬಲಿಷ್ಟ ವರ್ಗಗಳು ದುರ್ಬಲ ವರ್ಗಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಕೆಲವು ಮೌಲ್ಯಗಳನ್ನು ಸೃಷ್ಟಿಸಿಕೊಳ್ಳುತ್ತವೆ. ಗಂಡು ಹೆಣ್ಣು ಎಂಬ ಪ್ರಕೃತಿಯ ಎರಡು ಭಿನ್ನಾಕೃತಿಗಳಲ್ಲಿ ಶ್ರೇಷ್ಠ ಕನಿಷ್ಟ ಎನ್ನುವುದನ್ನು ನಿರ್ಮಿಸುತ್ತಾರೆ. ಆಗ ಹೆಣ್ಣನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಾಧ್ಯವಾಯಿತು.

ಸ್ತ್ರೀಯೆಂದರೆ ದೇಹದ ರಚನಾಶಾಸ್ತ್ರದ ಪ್ರಕಾರ ಯಾರಿಗೆ ಸ್ತನಗಳಿವೆಯೊ, ಋತು ಸ್ರಾವವನ್ನು ಅನುಭವಿಸುತ್ತಾಳೋ, ಗರ್ಭವಿದೆಯೋ ಅವಳು ಸ್ತ್ರೀ. ಈ ಬಗೆಯ ಸರಳ ತಿಳುವಳಿಕೆಯಿಂದಲೇ ಅವಳನ್ನು ವರ್ಗೀಕರಣ ಮಾಡಿ ಅದೇ ಸತ್ಯವೆಂಬಂತೆ ಮನದಟ್ಟು ಮಾಡಿ ಸ್ತ್ರೀಯನ್ನು ಗುಲಾಮ ವರ್ಗಕ್ಕೆ ತಳ್ಳಿ ಅವಳನ್ನು ಶೋಷಣೆಗೆ ಒಳಪಡಿಸಲಾಗಿದೆ. ಇಲ್ಲಿ ಮುಖ್ಯವಾಗಿ ಲಿಂಗ ಅಸಮಾನತೆಯನ್ನು ಕಾಣಬಹುದು. ನಾಗವೇಣಿಯವರ ಕಥೆಗಳಲ್ಲಿ ಈ ಬಗೆಯ ದೇಹಾಕೃತಿಯ ನೆಲೆಯಲ್ಲಿ ಶೋಷಣೆಗೆ ಒಳಗಾದ ಲಿಂಗತಾರತಮ್ಯಕ್ಕೆ ಒಳಗಾದ ಕಥೆಗಳನ್ನು ಗಮನಿಸಬಹುದು.

ನಾಗವೇಣಿಯವರ 'ನಾಕನೇ ನೀರು' ಕಥೆಯನ್ನು ಲಿಂಗತಾರತಮ್ಯದ ನೆಲೆಯಲ್ಲಿ ನೋಡಬಹುದಾಗಿದೆ. ಈ ಕಥೆಯಲ್ಲಿ ಮಡಿಮೈಲಿಗೆಯ ಹೆಸರಿನಲ್ಲಿ ಕಿನ್ನಿ ಗಂಡನಿಂದ ಶೋಷಣೆಗೆ ಒಳಗಾಗುತ್ತಾಳೆ. ವಿಶ್ವಕರ್ಮ ಪುರಾಣಕ್ಕೆ ಅನ್ವಯವಾಗುವ ಶಾಸ್ತ್ರ ವಿಧಿಗಳನ್ನು ಪೂರೈಸಿಯೇ ಭೂತದ ಕೆಲಸ ಆರಂಭಿಸಬೇಕೆನ್ನುವುದನ್ನ ಅಜ್ಜ ಜನಾರ್ಧನಾಚಾರಿಯೇ ಶಿವಪ್ಪನಿಗೆ ಬೋಧಿಸಿ ತರಬೇತುಗೊಳಿಸಿದ್ದ. ಅದರಂತೆ ಮಡಿಶಾಸ್ತ್ರ, ವಿಧಿ-ವಿಧಾನಗಳ ವಿಚಾರದಲ್ಲಿ ಅಪ್ಪ ಹಾಕಿದ ಗೆರೆಯನ್ನು ದಾಟುವವನಲ್ಲ, ದಾಟುವ ಧೈರ್ಯವು ಇಲ್ಲದ ಶಿವಪ್ಪ ಮೂರು ನೀರಾದ ಹೆಂಡತಿಯನ್ನ ರಾತ್ರಿ ಹೋಗಿ ಮುಟ್ಟುತ್ತಾನೆ. ಇವೆಲ್ಲ ಗಂಡಿಗೆ ಬೇಕಾದಾಗ ಬೇಕಾಗುವಂತೆ ಬದಲಾಗುವ ವಿಧಿ-ವಿಧಾನ ಆಚಾರಗಳು.

ಕಿನ್ನಿ ತನ್ನಪ್ಪನ ಮನೆಯಲ್ಲಿ ನಡೆಯುವ ಒತ್ತೆಕೋಲಕ್ಕೆ ನಾಲ್ಕು ದಿನ ಮುಂಚೆಯೇ ಹೋಗಲು ತನ್ನ ಗಂಡನ ಒಪ್ಪಿಗೆ ಪಡೆಯುವ ಆತುರದಲ್ಲಿ ಮುಟ್ಟಿನ ನಾಕನೇ ನೀರನ್ನು ಮಿಂದವಳೇ ಗಂಡನನ್ನು ಹುಡುಕುತ್ತಾ ಮಡಿಕೋಣೆಗೆ ಹೋಗುತ್ತಾಳೆ. ಕಣ್ಣೆವೆ ಮುಚ್ಚಿ ತೆರೆಯುವುದರೊಳಗೆ ಶಿವಪ್ಪ ಕುತ್ತಿಗೆ ಹಿಡಿದು ಅಮುಕಿ ಹೊರದಬ್ಬುತ್ತಾನೆ. ಮಡಿಕೋಣೆಗೆ ತಾನು ಬಂದಿದ್ದರ ಬಗ್ಗೆ ಕಿನ್ನಿ ವಿವರಣೆ ನೀಡುವುದರೊಳಗೆ ಕೆನ್ನೆಗೂ ಬಾರಿಸಿದ್ದ. ಕಿನ್ನಿಗೆ ತನ್ನ ಗಂಡ ತನ್ನನ್ನ ಹೊರದಬ್ಬಿದ್ಯಾರೆ, ಕೆನ್ನೆಗೆ ಬಾರಿಸಿದ್ಯಾಕೆ ಎಂಬುದು ತಕ್ಷಣ ಅರಿವಾಗುವುದರೊಳಗೆ ಇದೆಲ್ಲವು ಸಂಭವಿಸಿ ಹೋಗುತ್ತದೆ.

"ತಾನು ಮಡಿ ಮನೆಗೆ ಹೋಗಬೇಕಾದರೆ ಐದು ನೀರು ಮುಗಿಯಬೇಕಂತೆ. ಅಷ್ಟೊಂದು ಮಡಿಸುದ್ಧವಿದ್ದವರು ಮೂರು ನೀರಾದವಳನ್ನ ರಾತ್ರಿ ಬಂದು ಮುಟ್ಟಬಹುದಾ? ಆಗ ಮಡಿಸುದ್ದವೆಲ್ಲಾ ಯಾವ ಗಟ್ಟಹತ್ತಿತ್ತು? ಆ ಮಡಿ ಕೆಡುವುದಿಲ್ಲವಾ...? ತನ್ನನ್ನು ತಟ್ಟಿ ಮುಟ್ಟಿ ತಾನು ಅರೆದು, ತುರಿದು, ಮಾಡಿಕೊಟ್ಟದ್ದನೆಲ್ಲಾ ತಿಂದು ಬಿಟ್ಟು ಮೀಯದೆ ಮಡಿ ಕೋಣೆಗೆ ನುಗ್ಗಿ ಗಣಪತಿಗೆ ಊದುಬತ್ತಿ ಹಚ್ಚಿದರೆ ಮಡಿ ಕೆಡುವುದಿಲ್ಲವಾ? ಅದೆಂಥಾ ಮೂರ್ಕಾಸಿನ ಸುದ್ದಾಚಾರ? ಅದು ಭೂತಕ್ಕೆ ಮೈಲಿಗೆಯಲ್ಲವಾ..."?[೧೩]

ಮುಟ್ಟಿನ ನಾಕನೇ ನೀರನ್ನ ಮಿಂದು ಮಡಿಕೋಣೆಗೆ ಬಂದ ಹೆಂಡತಿಯನ್ನು ಕುತ್ತಿಗೆ ಹಿಡಿದು ಅಮುಕಿ ಕೆನ್ನೆಗೆ ಬಾರಿಸಿ ಐದು ನೀರು ಮುಗಿದ ಮೇಲೆ ಮಡಿಕೋಣೆಗೆ ಬರುವಂತೆ ಎಚ್ಚರಿಸಿದ. ಸರಿ ಆದರೆ ಮೂರನೇ ನೀರಾದವಳನ್ನು ಮುಟ್ಟಿ ತಟ್ಟಿ ಅವಳು ಮಾಡಿದ್ದನ್ನೆಲ್ಲ ತಿಂದು ಮೀಯದೆಯೇ ಮಡಿ ಕೋಣೆಗೆ ಹೋಗಿ ಗಣಪತಿಗೆ ಊದುಬತ್ತಿ ಹಚ್ಚಿದ್ದು ತಪ್ಪಲ್ಲವಾ ಹೆಣ್ಣಿನ ಸಣ್ಣ ಅಪರಾಧದೆದುರು ಗಂಡಿನ ದೊಡ್ಡ ಅಪಗಾಧಗಳು ಮುಚ್ಚಿ ಹೋಗುತ್ತವೆ. ಪುರುಷ ಪ್ರಧಾನ ಸಮಾಜದ ಇಬ್ಬಗೆಯ ನೀತಿಯನ್ನು ಇಲ್ಲಿ ಕಾಣಬಹುದು. ತನ್ನ ಗಂಡ ರಕ್ಕಸನಂತೆ. ನಿಷ್ಕರುಣೆಯಿಂದ ವರ್ತಿಸಿದ ರೀತಿಯನ್ನು ಕಿನ್ನಿಯ ಮನಸ್ಸು ಇನ್ನು ತರ್ಕಿಸುತ್ತಿರುವಾಗಲೆ ಮತ್ತೊಂದು ಆಪಾದನೆಗೆ ಕೂಡ ಗುರಿಯಾಗುತ್ತಾಳೆ.

ಶಿವಪ್ಪನ ತಾಯಿ ರುಕುಮಾಚಾರ್ತಿ ಮೈರ ಹುಂಜನಿಂದಾಗಿ ಬಾಗಿಲ ದಾರಂದಕ್ಕೆ ಎಡವಿ ಬಿದ್ದು ಅವಳ ಕಾಲಿಗೂ ಸೊಂಟಕ್ಕೂ ಸಂಬಂಧ ತಪ್ಪಿ ಹೋದಂತಾಗುತ್ತದೆ. ಅನುಕಂಪದಿಂದ ಮಾಮಿಯನ್ನು ರಾಜು ಪಂಡಿತನಲ್ಲಿಗೆ ಕರೆದೊಯ್ಯೋಣವೇ ಎಂದು ಹೇಳಲು ಬಂದ ಕಿನ್ನಿಯ ಕೆನ್ನೆಗೆ ಬಾರಿಸಿದ ಗಂಡ ರಕ್ಕಸನಂತೆ ಕಾಣುತ್ತಾನೆ. ಬಿದ್ದ ತಾಯಿಯ ಕಾಲು ನೀವತೊಡಗಿದ್ದ ಆತನ ಸಿಟ್ಟಿನಲ್ಲಿ ದೈವದ ಮುಗ, ನಾಕನೇ ನೀರು, ಮುಟ್ಟಿನ ಮೈಲಿಗೆ, ಭೂತದ ಏತು, ಮೈಲಿಗೆ ಶುದ್ಧಿ ಮುಂತಾದ ವಿಚಾರಗಳೆಲ್ಲ ಒಂದಕ್ಕೊಂದು ಹೆಣೆದುಕೊಂಡು ಬಿಟ್ಟಿದ್ದವು. ತನ್ನ ತಾಯಿಯ ಈ ಸ್ಥಿತಿಗೆ ಕಿನ್ನಿ ಮಡಿ ಕೋಣೆಗೆ ಬಂದದ್ದೆ ಕಾರಣವೆಂಬಂತೆ. ಮನೆಯ ಶುದ್ಧೀಕರಣಕ್ಕಾಗಿ ತಂತ್ರಿಗಳನ್ನು ಕರೆತರಲು ಹೋಗುತ್ತಾನೆ. ಮಗ ತನ್ನನ್ನೀಗಲೆ ರಾಜು ಪಂಡಿತನಲ್ಲಿಗೆ ಕರೆದೊಯ್ಯಬಾರದಾಗಿತ್ತೆ ಎಂಬಂತೆ ಮಗನ ಬೆನ್ನನ್ನೆ ದಿಟ್ಟಿಸುತ್ತಿದ್ದ ರುಕುಮಾಚಾರ್ತಿ ಕಿನ್ನಿಯತ್ತ ದೃಷ್ಟಿ ಹರಿಸಿದರೆ ಗಂಡನ ಕೋಪಕ್ಕೆ ನಿಷ್ಕರುಣೆಯ ವರ್ತನೆಗೆ ಬಲಿಯಾದವಳಂತೆ ಮಂಡಿಯೊಳಗೆ ಮುಖ ಮುಚ್ಚಿಕೊಂಡು ಅಳುತ್ತಿರುತ್ತಾಳೆ. ಹೀಗೆ ಕಿನ್ನಿಯ ಅಳುವಿಗೆ ಅವಳ ಗಂಡನ ವರ್ತನೆಗಳೇ ನೇರವಾಗಿ ಇಲ್ಲಿ ಕಾರಣವಾಗಿರುವುದು ಕಥೆಯಲ್ಲಿ ಸ್ಪಷ್ಟವಾಗುತ್ತದೆ.

ಮುಟ್ಟು ಎನ್ನುವಂತದ್ದು ಸ್ತ್ರೀ ವಿಶಿಷ್ಟತೆ. ಹೆಣ್ಣು ಎನ್ನುವ ದೇಹಸ್ಥಿತಿಯಿಂದಾಗಿ ಮುಟ್ಟಿನ ದಿನಗಳನ್ನು ಅನುಭವಿಸುತ್ತಾಳೆ. ಶ್ರಾವ ಎನ್ನುವುದು ಗಂಡು ಹೆಣ್ಣು ಎರಡು ದೇಹಾಕೃತಿಗೂ ಇದ್ದದ್ದೆ. ಮುಟ್ಟು, ಬಸಿರು, ಹೆರಿಗೆ ಇವು ಸ್ತ್ರೀಗೆ ಮಾತ್ರ ವಿಶಿಷ್ಟವಾದವುಗಳು. ಈ ದಿನಗಳನ್ನು ಅನುಭವಿಸುವ ಹೆಣ್ಣು ದೈಹಿಕವಾಗಿ ಒಂದಷ್ಟು ನೋವನ್ನು ಅನುಭವಿಸುತ್ತಾಳೆ. ಈ ಹೊತ್ತಲ್ಲಿ ಮಡಿ ಮೈಲಿಗೆಯ ಹೆಸರಿನಲ್ಲಿ ಮಾನಸಿಕವಾಗಿ ಒಂದಷ್ಟು ನೋವನ್ನು ನೀಡಲಾಗುತ್ತದೆ. ಈ ಬಗೆಯ ನೋವನ್ನು ನೀಡುವಲ್ಲಿ ಗಂಡಿಗಿಂತ ಹೆಣ್ಣಿನ ಪಾಲೆ ಹೆಚ್ಚು. ಕಾರಣ ಹಿಂದಿನಿಂದಲೂ ಹೆಣ್ಣಿನ ಮೇಲೆ ದಬ್ಬಾಳಿಕೆ ನಡೆಸಿಕೊಂಡು ಬಂದ ಪುರುಷ ಸಮಾಜ ಹೆಣ್ಣು ಹೀಗೆ ಇರಬೇಕು ಎಂಬ

ಒಂದಷ್ಟು ಕಟ್ಟುಪಾಡುಗಳನ್ನ ಮಾಡಿಟ್ಟಿದೆ ಮತ್ತು ಅದನ್ನ ಮುಂದುವರೆಸಿಕೊಂಡು ಹೋಗಲು ಅವಳಿಗೆ ಹೇಳಿದೆ ಹಾಗಾಗಿಯೆ ಇಂತಹ ಕಟ್ಟುಪಾಡುಗಳಲ್ಲಿ ಯಾವ ತಕರಾರನ್ನು ಎತ್ತದೆ ಅಜ್ಜಿಯಿಂದ ಅಮ್ಮನಿಗೆ ಅಮ್ಮನಿಂದ ಮಗಳಿಗೆ, ಮಗಳಿಂದ ಮೊಮ್ಮಗಳಿಗೆ ಚಾಚುತಪ್ಪದೆ ರವಾನೆಯಾಗುತ್ತವೆ.

ಈ ಕಥೆಯಲ್ಲಿ ರುಕುಮಾಚಾರ್ತಿ ತನ್ನ ಮಗ ಸೊಸೆಗೆ ಮುಖ ಮೂತಿ ನೋಡದೆ ಬಾರಿಸಿದಷ್ಟೆ ಅಲ್ಲ, ಕಾಲಿಡಿದು ನೆಲಕ್ಕೆ ಬಡಿದು ತಲೆಯ ಬೊಂಡು ಹಾರಿಸಿ, ಸಿಗಿದು ಬಾಗಿಲಿಗೆ ಚೋರಣ ಕಟ್ಟಿದ್ರೆ... ಅದು ತಪ್ಪಲ್ಲ ಅಂತ ಚಿತ್ತುರ್ಲಿ ರಾಮನ ಹೆಂಡತಿ ಸರಸುವಿನಲ್ಲಿ ಹೇಳಿಕೊಂಡಿದ್ದಳು. **"ಮದುವೆ ಆದಂದಿನಿಂದ ನಿನ್ನೆ ಮೊದಲಬಾರಿಗೆ ಮಗ ಮೂಗು ಮೂತಿ ನೋಡದೆ ಬಾರಿಸಿದ್ದು, ರುಕುಮಾಚಾರ್ತಿಗೆ ಒಂದು ಕುಡಿಕೆ ನೊರೆ ಕಳ್ಳು ಕುಡಿದಷ್ಟು ತೃಪ್ತಿ ಸಂತಸ ತಂದಿದ್ದರೂ ಸೊಸೆಯ ಕಣ್ಣಿನಿಂದ ಧಾರಾಕಾರವಾಗಿ ಕಣ್ಣೀರು ಸುರಿಯುತ್ತಿದ್ದನ್ನು ಕಂಡು ಮನಸ್ಸು ಒಂದು ಕ್ಷಣ ಚುರುಕ್ಕೆನ್ನಿದೆಯೂ ಇರಲಿಲ್ಲ. ಇಂಥಾ ಸಣ್ಣಪುಟ್ಟ ಜಗಳ ಅವರಿಬ್ಬರ ನಡುವೆ ಆಗಾಗ್ಗೆ ನಡೆಯುತ್ತಿದ್ದರೇನೆ ಒಳ್ಳೆಯದು ಅಂಥ ಒಂದು ಕ್ಷಣ ರುಕುಮಾಚಾರ್ತಿಗೆ ಅನಿಸಿದ್ದರು, ಮತ್ತೊಂದು ಕ್ಷಣ ಈಗಲೇ ಪಂಚಾತಿಕೆ ಮಾಡಿ ರಾಜಿ ಮಾಡಿಸಬೇಕು ಎಂದೂ ಅನ್ನಿಸುತ್ತಿತ್ತು".**[೧೪]

ಆ ಗಂಡ ಹೆಂಡಿರ ನಡುವಿದ್ದ ವಿಚಿತ್ರ ಪ್ರೀತಿಯನ್ನು ಸೂಕ್ಷ್ಮವಾಗಿ ಬಗೆಯ ತೊಡಗಿ ಆಳವಾದ ತರ್ಕ ನಡೆಸಿದ ಅತ್ತೆಗೆ ನಿನ್ನೆಯ ರಂಪಾಟದಲ್ಲಿ ಮಗನದೇ ಪರಮಪಾಲು ತಪ್ಪಿದೆ ಎಂದು ತೀರ್ಮಾನಿಸಿದ್ದಾಳೆ. ಆದರೂ ತನ್ನ ಮಗ ಹೆಂಡ್ತಿದಾಸನಾಗಿ ಅವ್ಳ ರವಿಕೆ ಹಿಡ್ದು ನೇತಾಡುವವ... ಈ ಸೀಮೆಯಲ್ಲೇ ಬೇರಾರಿಗೂ ಅವ್ಳಂತಾ ಹೆಂಡ್ತಿ ಇಲ್ಲಾ... ಭಾರಿ ಸೊಬಗೆ ಅನ್ನುವಂತೆ ತಲೆಗೇರಿಸಿಕೊಂಡು ಬಂದಿದ್ದಕ್ಕೆ ಅವ್ಳು ಮಾಡಿದ್ದು ನೂರಕ್ಕೆ ನೂರು ವಾಸಿ ಸರಿಯೇ. ಕಾಲಿಗೆ ಹಾಕುವುದನ್ನು ಕಾಲಿಗೆ ಹಾಕಿದರೇ ಚಂದ. ತಲೆಯಲ್ಲಿಟ್ಟರೆ ಅದೊಂದು ಚಂದವಾ...? ಎಂದುಕೊಳ್ಳುತ್ತಾಳೆ.

ಶಿವಪ್ಪನ ಮಡಿಶಾಸ್ತ್ರಕ್ಕಿಂತ ಅವನಪ್ಪ ಹೆಚ್ಚು ಮಡಿಶುದ್ಧವಿದ್ದವ. ಸ್ವತಃ ಸೀನಾಚಾರಿ ತನ್ನ ರುಕುಮಾಚಾರ್ತಿ ಮುಟ್ಟಾದಾಗಲೆಲ್ಲಾ ಮಡಿಕೋಣೆಗೆ ಬೇಡಾ... ಮನೆ ಚಾವಡಿಗೂ ಹೊಕ್ಕಿಸಿಕೊಂಡವನಲ್ಲ. ರುಕುಮಾಚಾರ್ತಿ ಗಂಡ ಸೀನಾಚಾರಿ ಬದುಕಿದ್ದಾಗಿನ ತನ್ನ ದಿನಗಳನ್ನ ನೆನೆದು ಮಗ ಸೊಸೆಯನ್ನ ದೂಷಿಸುತ್ತಾಳೆ. ಆಗಿದ್ದ ಯಾವ ಮಡಿ ಮೈಲಿಗೆಗಳು ಈಗ ನಡೆಯುತ್ತಿಲ್ಲ. ಅದಕ್ಕೆಲ್ಲ ತನ್ನ ಮಗ ಹೆಂಡತಿಯ ದಾಸನಾಗಿರುವುದೇ ಕಾರಣ. ತನ್ನ ಹಾಗೆ ಸೊಸೆಯನ್ನು ಐದು ನೀರಾಗುವವರೆಗೆ ಮನೆಯೊಳಗೆ ಕರೆದುಕೊಳ್ಳದಿದ್ದರೆ ಎಲ್ಲ ಸರಿ

ಹೋಗುತ್ತಿತ್ತೆಂಬಂತೆ ಯೋಚಿಸುವುದನ್ನು ಗಮನಿಸಬಹುದಾಗಿದೆ. ಆದರೆ ಈಗ ಎಲ್ಲಾ ಬದಲಾಗಿದೆ. ಸೀನಾಚಾರಿಯ ಕಾಲಕ್ಕೆ ಐದು ದಿನಗಳ ಕಾಲ ಮನೆಯ ಚಾವಾಡಿಯನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಶಿವಪ್ಪನ ಕಾಲಕ್ಕೆ ಮಡಿ ಮೈಲಿಗೆ ಎನ್ನುವಂಥದ್ದು ಭೂತದ ಮುಗದ ಕೋಣೆಗೆ ಮಾತ್ರ ಮೀಸಲಾಗಿದೆ. ಈ ಮುಟ್ಟಿನ ಬಗೆಗಿನ ಮಡಿ ಮೈಲಿಗೆಗಳು ವಿಧಿವಿಧಾನಗಳು ಕಾಲಕ್ಕೆ ತಕ್ಕ ಹಾಗೆ ಬದಲಾಗುವುದನ್ನು 'ಬಳಿಕಾಗೆ' ಕಥೆಯಲ್ಲಿಯೂ ಗಮನಿಸಬಹುದಾಗಿದೆ.

ಸೂಜಿಕೆರೆ ಸುಬ್ರಾಯ ಭಟ್ಟರ ಮೊಮ್ಮಗ ರಾಮುವಿಗೆ 'ಬಿಳಿಕಾಗೆ'ಯನ್ನು ಕಾಣುವ ಕುತೂಹಲ. ಅಮ್ಮನನ್ನು ತಿಂಗಳಿಗೊಮ್ಮೆ ಕಡಲಿನಿಂದ ಹಾರಿ ಬಂದು ಮುಟ್ಟುವುದು. ಆ ದಿನ ಅಮ್ಮ ತಲೆಸ್ನಾನ ಮಾಡಿ ಮನೆಯಿಂದ ಹೊರಬಂದು, ನಾಲ್ಕು ದಿನ ಅಂಗಳದಲ್ಲಿರುವ ಮುಟ್ಟಿನ ಕೋಣೆಯಲ್ಲಿರುವುದು, ಯಾರನ್ನೂ ಮುಟ್ಟದಿರುವುದು, ತಾನು ಪ್ರತಿತಿಂಗಳು ಆ ಕಾಗೆಗಾಗಿ ಕಾಯುವುದು, ಅದು ತನಗೆ ಮಾತ್ರ ಕಾಣಿಸದೆ ಅಮ್ಮ, ಅಪ್ಪ, ಅಜ್ಜನಿಗೆ ಕಾಣಿಸುವುದು ಈ ಬಗ್ಗೆ ರಾಮುವಿಗೆ ಕುತೂಹಲ ಕಾಡುತ್ತಿದೆ. ಈ ಕುತೂಹಲಕ್ಕೆ ಸ್ವತಃ ಸುಬ್ರಾಯರೇ ಕಾರಣ. "ರಾಮು ಶಾಲೆಗೆ ಹೋಗಲು ಆರಂಭಿಸಿದ ಮೇಲೆ ಅಮ್ಮನನ್ನ ಮುಟ್ಟಾದರೆ ಮುಟ್ಟಬಾರದು, ಅಮ್ಮನಿರುವ ಮುಟ್ಟಿನ ಕೋಣೆಗೆ ಕಾಲಿಡಲೇಬಾರದು" ಎಂದು ಕಟ್ಟಾಜ್ಞೆ ಮಾಡಿದ್ದರು ಸುಬ್ರಾಯಭಟ್ಟರು. ರಾಮು ಆ ದಿನ ತಕ್ಷಣ ಅಜ್ಜನನ್ನು ಕೇಳಿದ್ದ ಪ್ರಶ್ನೆ- ಮುಟ್ಟಾಂದ್ರೆ ಏನಜ್ಜ. ಮುಟ್ಟಾಗೋದು ಹೇಗೆಂತ?'

"ನಿವೃತ್ತ ಮಾಸ್ತ್ರಾಗಿದ್ದ ಸುಬ್ರಾಯ ಭಟ್ಟರಿಗೆ ಶಾಲೆಯಲ್ಲಿ ಮಕ್ಕಳಿಂದ ಇಂತಹ ಇರಿಸುಮುರಿಸು ಪ್ರಶ್ನೆಗಳನ್ನು ಹೇಳಿ ಅಭ್ಯಾಸವಿದ್ದುದರಿಂದ ವಿಚಲಿತರಾಗದೆ 'ಬಳಿಕಾಗೆ' ಮುಟ್ಟಿದರೆ ಮುಟ್ಟಾಗುತ್ತೆ'-ಅಂದಾಗ ರಾಮು ಅವರತ್ತ ಮತ್ತೊಂದು ಪ್ರಶ್ನೆ ಎಸೆದಿದ್ದ. 'ಅದು ಅಮ್ಮನ್ನ ಮುಟ್ಟಿದರೆ ನಾವ್ಯಾಕೆ ಅಮ್ಮನನ್ನು ಮುಟ್ಟಬಾರದು?' ಬಳಿ ಕಾಗೆಯನ್ನ ಮುಟ್ಟಿಸ್ಕೊಂಡ ಮೇಲೆ ಅಮ್ಮನಿಗೆ ಮೈಯೆಲ್ಲಾ ಒಂಥರಾ ನೋವು ಬರುತ್ತೆ ಎಂದು ಅಜ್ಜನೆಂದರೆ 'ಎಷ್ಟು ದಿನ ನೋವು ಬರುತ್ತೆ? ಎನ್ನುವ ಮತ್ತೊಂದು ಪ್ರಶ್ನೆ. 'ಐದಾರು ದಿನ – ಎಂದಿದ್ದರು. ಸುಬ್ರಾಯ ಭಟ್ಟರು ಅಮ್ಮನನ್ನು ಮುಟ್ಟಿದ ಬಳಿಕಾಗೆ ಮತ್ತೆಲ್ಲಿಗೆ ಓಡಿ ಹೋಗುತ್ತೆ'- ಎಂಬ ಇನ್ನೊಂದು ಪ್ರಶ್ನೆಗೆ 'ಕಡಲ ಬದಿಗೆ' ಎಂದೂ ಉತ್ತರಿಸಿದ್ದರು".[78]

ಸುಬ್ರಾಯ ಭಟ್ರ ಅವರ ಅಪ್ಪನ ಕಾಲದಿಂದಲೂ ಉಳಿಸಿ ಬೆಳೆಸಿಕೊಂಡು ಬಂದಿರುವ ನಂಬಿಕೆ ವಿಚಾರಗಳನ್ನು ಏಳು ವರ್ಷದ ರಾಮು ಉಲ್ಟಾಪಲ್ಟಾ ಮಾಡುತ್ತಿದ್ದಾನೆ. ಮುಟ್ಟು ಎಂದರೇನು? ಬಿಳಿಕಾಗೆ ಅಮ್ಮನನ್ನೆ ಯಾಕೆ ಮುಟ್ಟುತ್ತೆ? ಅಪ್ಪ ಅಮ್ಮ ಅಜ್ಜನಿಗೆ ಕಾಣುವ ಅದು ತನಗೆ ಮಾತ್ರ ಯಾಕೆ ಕಾಣುತ್ತಿಲ್ಲ? ತನ್ನನ್ನು ಸೇರಿಸಿಕೊಳ್ಳದ ಮುಟ್ಟಿನ ಕೋಣೆಗೆ ಅಮ್ಮ ರಾತ್ರಿ

ಅಪ್ಪನನ್ನ ಯಾಕೆ ಸೇರಿಸಿಕೊಳ್ಳುತ್ತಾಳೆ? ಅಮ್ಮನಿಗೆ ಕಾಡುವ ಬಿಳಿಕಾಗೆ ಮಮ್ಮದೆಯ ಅಮ್ಮನನ್ನ ಯಾಕೆ ಕಾಡುವುದಿಲ್ಲ ಅವರಮ್ಮನಿಗ್ಯಾಕೆ ಮುಟ್ಟಿನ ಕೋಣೆ ಇಲ್ಲ ಇಂತಹ ನೂರಾರು ಪ್ರಶ್ನೆಗಳನ್ನು ತನ್ನ ತಲೆಯಲ್ಲಿ ತುಂಬಿಕೊಂಡ ರಾಮು ತನ್ನ ಸ್ನೇಹಿತರಾದ ಮಮ್ಮದೆ, ಪಕೀರನೊಂದಿಗೆ ಸೇರಿ ಕಡಲ ಕಡೆಯಿಂದ ಬರುವ ಬಿಳಿಕಾಗೆಯ ಹುಡುಕಾಟಕ್ಕೆ ತೊಡಗುತ್ತಾನೆ.

ಮೊಮ್ಮಗನ ಮುಗ್ಧತೆಯಿಂದ ಹೊರಬರುವ ಹೊಸ ವಿಚಾರಗಳನ್ನು ಎಪ್ಪತ್ತೆರಡರ ಇಳಿವಯಸ್ಸಿನ ಸುಬ್ರಾಯ ಭಟ್ಟರಿಗೆ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ. ದೇವರ ಕೋಣೆಯಲ್ಲಿ ಮಲಗಿದ ಸುಬ್ರಾಯ ಭಟ್ಟರಿಗೆ ಮೊಮ್ಮಗ ಕಿರುಚಿದ್ದರಿಂದ ಅವನತ್ತ ಬರಲು ಹವಣಿಸಿದಾಗ ಕೈಗಳನ್ನು ಕದಲಿಸಲಾಗದೆ ಎರಡೂ ಕಾಲುಗಳು ಕೊರಡಿನಂತಾದಾಗ ಅಸ್ಪಷ್ಟವಾಗಿ ಮಗ ಕೇಶವನನ್ನ ಕೂಗಿ ಕರೆಯುತ್ತಾರೆ. ಮಗ ಬಂದು ನೋಡಿದಾಗ ತಂದೆ ಎದ್ದೇಳಲು ಒದ್ದಾಟ ನಡೆಸುತ್ತಿರುವುದನ್ನು ಕಂಡು ಸುಭದ್ರೆಯನ್ನು ಕೂಗಿ ಕರೆಯುತ್ತಾರೆ. ದೇವರ ಕೋಣೆಗೆ ಬಂದ ಅಮ್ಮನನ್ನು ಕಂಡ ರಾಮುವಿಗೆ ಅಜ್ಜನ ಪರದಾಟಕ್ಕಿಂತ ಅಮ್ಮ ಮುಟ್ಟಾದವಳು ದೇವರ ಕೋಣೆಗೆ ಯಾಕೆ ಬಂದಳು ಸಾಲದಕ್ಕೆ ಅಜ್ಜನನ್ನ ಅಪ್ಪನನ್ನ ಮುಟ್ಟಿಸಿಕೊಳ್ಳುತ್ತಿದ್ದಾಳಲ್ಲ ಎಂದು ತಟ್ಟನೆ ಅಮ್ಮಾ ಅಜ್ಜನನ್ನು ಮುಟ್ಟಬ್ಯಾಡ ನಿಂಗೆ ಮುಟ್ಟಲ್ವಾ ಎಂದು ಕಿರಿಚಿಯೇ ಬಿಟ್ಟಿದ್ದ. ಆದರೆ ಅಪ್ಪ ಅಮ್ಮ ಇಬ್ಬರು ರಾಮುವನ್ನು ದುರುಗಟ್ಟಿ ನೋಡಿದರು. ಕಥೆಯ ಮುಂದುವರಿಕೆಯ ಪ್ರತಿ ಹಂತದಲ್ಲೂ ಆ ಪೋರನ ಕುತೂಹಲ ಹೆಚ್ಚುತ್ತಲೆ ಹೋಗುತ್ತದೆ. ಮುಟ್ಟಿನ ಮನೆಯಲ್ಲಿ ನಾಲ್ಕು ದಿನವಿರ ಬೇಕಾಗಿದ್ದ ಅಮ್ಮ ಹೊಸಿಲು ದಾಟಿ ಒಳಬಂದಿದ್ದು, ಬಂದವಳು ಅಜ್ಜನನ್ನು ಮುಟ್ಟಿದ್ದು, ರಾತ್ರಿ ಇಡಿ ಅಲ್ಲಿಯೇ ಇದ್ದು ಅಜ್ಜನ ಕಾಲಿಗೆ ಬಿಸಿನೀರಿನ ಶಾಖ ಕೊಟ್ಟದ್ದು ಎಲ್ಲವನ್ನು ರಾಮು ರಾತ್ರಿಪೂರ ಎಚ್ಚರದಿಂದಲೇ ಗಮನಿಸುತ್ತಿದ್ದ. ರಾಮುವಿನ ಬಗೆಹರಿಯಲಾಗದ ಕುತೂಹಲಗಳು ಕೊನೆಗೂ ಒಂದಲ್ಲ ಒಂದು ರೀತಿಯಲ್ಲಿ ರಹಸ್ಯವಾಗಿಯೇ ಉಳಿಯುತ್ತವೆ.

ಅಜ್ಜ ಭಟ್ರು ಈಗಿಲ್ಲ, ಸತ್ತು ಹಲವು ತಿಂಗಳು ಕಳೆದಿವೆ. ಅಜ್ಜ ಸತ್ತ ಮೇಲೆ ಒಂದೇ ಒಂದು ದಿನವು ಬಿಳಿಕಾಗೆ ಹಾರಿ ಬಂದು ಅಮ್ಮನನ್ನು ಮುಟ್ಟಿಲ್ಲ. ಮುಟ್ಟಿನ ಮನೆ ದಿಢೀರನೆ ಅಡಿಕೆ, ತೆಂಗಿನ ಕಾಯಿಗಳ ಉಗ್ರಾಣವಾಗಿದೆ.

ಸಂಪ್ರದಾಯಸ್ಥ ಮನಸ್ಸಿನ ಸುಬ್ರಾಯ ಭಟ್ರು ಬದುಕಿರುವಷ್ಟು ದಿನವು ಮುಟ್ಟು, ಮುಟ್ಟಿನ ಕೋಣೆ, ಮಡಿ ಮೈಲಿಗೆ ಎಲ್ಲವು ಇದ್ದವು. ಸುಬ್ರಾಯರಿಗೆ ಜನಿವಾರದಷ್ಟೆ ಮುಖ್ಯ ಮಡಿಯನ್ನ ಕಾಯ್ದುಕೊಳ್ಳುವುದು. ಎಲ್ಲಿ ಮೊಮ್ಮಗ ಹಡಬೆ ಸೂದ್ರ ಮಕ್ಕಳ ಜತೆ ಸೇರಿ ಎಲ್ಲಿ ಹಾಳಾಗುತ್ತಾನೋ ಎಂಬ ಭಯ ಇದೆ. ಸೊಸೆಯ ಮುಟ್ಟಿನ ಸುದ್ದಿ ತಿಳಿದಾಗ ಸಂಜೆಯ ಕಾಫಿ ತಿಂಡಿ ತಾವೆ

ಮಾಡಿಕೊಳ್ಳುತ್ತಾರೆ. ನೂಲಹುಣ್ಣಿಮೆಯ ದಿನ ಜಾರಿಗೆಗದ್ದೆಯ ಭತ್ತದ ಪೈರಿಗೆ ಸೀಮಂತ ಮಾಡುವರಾರು. ಸುಬ್ರಾಯರ ಹೆಂಡತಿ ಶಾರದಮ್ಮನ ನಂತರ ಸೊಸೆ ನಾಲ್ಕು ವರ್ಷಗಳಿಂದ ಸರಿಯಾಗಿಯೇ ತನ್ನ ಕರ್ತವ್ಯವನ್ನು ನಿರ್ವಹಿಸಿಕೊಂಡು ಬರುತ್ತಿದ್ದಳು. ಈಗ ನೂಲ ಹುಣ್ಣಿಮೆಗೆ ನಾಲ್ಕು ದಿನವಿರಬೇಕಾದರೆ ಮನೆಯ ಮುತ್ತೈದೆ ಮೈಲಿಗೆಯಾಗಿ ಮೂಲೆ ಸೇರಿದ್ದು ಸುಬ್ರಾಯ ಭಟ್ಟರನ್ನು ಅಧೀರಗೊಳಿಸುತ್ತದೆ. ಕಾರಣ ಸುಬ್ರಾಯ ಭಟ್ಟರ ಸೂಚಿಕೆರೆ ಮನೆತನದಲ್ಲಿ ಹಲವು ತಲೆಮಾರುಗಳಿಂದ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸಿಕೊಂಡು ಬಂದಿದ್ದರು. ಆದರೆ ಅವರ ನಂತರ ಮುಟ್ಟಿನಕೋಣೆ ತೆಂಗು ಅಡಿಕೆಯ ಕೋಣೆಯಾದಂತೆ ಈ ಸಂಪ್ರದಾಯಗಳು ಮೂಲೆಗುಂಪಾಗುವ ಸಾಧ್ಯತೆಗಳು ಇವೆ.

ನಾಗವೇಣಿಯವರ 'ಮೀಯುವ ಆಟ' ಸಂಕಲನದ 'ಒಡವೆ' ಕಥೆ ಲಿಂಗತಾರತಮ್ಯದ ನೆಲೆಯಲ್ಲಿ ಗುರುತಿಸಬಹುದಾದ ಮತ್ತೊಂದು ಕಥೆ. ಕಥೆಗಾರ್ತಿ ಹಿಂದೆ ಗುರುತಿಸಿದ ನಾಕನೇ ನೀರು ಸಂಕಲನದ 'ನಾಕನೇ ನೀರು', 'ಬಿಳಿಕಾಗೆ' ಕಥೆಗಳಿಗಿಂತ ತೀರಾ ಭಿನ್ನವಾಗಿ ಒಡವೆ ಕಥೆಯನ್ನು ಪರಿಚಯಿಸುತ್ತಾರೆ. ಇಲ್ಲಿ ದಾರು ಸ್ತ್ರೀ ಸಹಜವಾದ ಹೆಣ್ತನವನ್ನು ಅನುಭವಿಸುವುದಿಲ್ಲ. ಅವರ ಭಾಷೆಯಲ್ಲೆ ಹೇಳಬೇಕೆಂದರೆ ಪುಷ್ಪವತಿಯಾಗುವುದಿಲ್ಲ. ಪೇಟೆಯ ಧರ್ಮಾಸ್ಪತ್ರೆಯ ವೈದ್ಯರು ದಾರುವನ್ನು ತಪಾಸಣೆ ಮಾಡಿ ಇವಳಿಗೆ ಗರ್ಭಚೀಲವೇ ಇಲ್ಲ ಅದಕ್ಕೆ ಪುಷ್ಪಾವತಿಯಾಗಲಿಲ್ಲ ಎಂದರೆ ಬೊಗ್ಗು ಪಂಡಿತ ನಾಡಿ ಹಿಡಿದು ನಾಲಿಗೆ ಬಿಗಿ ಹಿಡಿದು ರೋಗದ ವಿಚಾರ ಹೇಳದೆ ಎಲ್ಲ ನರನಾಡಿ ಅಲ್ಲಿ ಇಲ್ಲಿ ಮುಟ್ಟಿ ತಡವಿ ನೋಡಿ 'ಈಕೆ ಶಿಖಂಡಿ' ಮಾರಾಯ್ರ ಎನ್ನುತ್ತಾರೆ. ಶವಸಂಸ್ಕಾರ ಮುಗಿಸಿ ಹಿಂದಿರುಗಿದವರ ಮನಸ್ಥಿತಿಯಲ್ಲಿ ದುಃಖಿತ ವೆಂಕಪ್ಪಯ್ಯಗಳು ಮೌನವಾಗಿದ್ದರೆ ಪಿಜಿನ ಮೂಲ್ಯ ಎಂಬ ಆಳು 'ಶೆಟ್ಟರು ಮಗಳು ಶಿಖಂಡಿ'ಯಂತೆ ಎಂಬುದನ್ನು ಊರಿಡೀ ಸಾರಿ ಬರುತ್ತಾನೆ. ಈ ವಿಚಾರವನ್ನು ಊರಿಡಿ ಸಾರಲೇಬೇಕೆಂಬ ಉದ್ದೇಶ ಪಿಜಿನನದಲ್ಲದಿದ್ದರೂ ಯಾರಿಗೂ ತಿಳಿಯದ ಗೂಢವಾದ, ಗಹನವಾದ ವಿಚಾರವೊಂದು ತನಗೆ ಶೆಟ್ಟರಿಗೆ ಮಾತ್ರ ತಿಳಿದಿದೆ ಎಂಬಂತೆ ಅದನ್ನ ತಾನೆ ಮೊದಲು ಎಲ್ಲರಿಗೂ ತಿಳಿಸುತ್ತಿರುವಂತೆ ದಡ್ಡತನದ ಮುಗ್ಧತೆಯಿಂದ ಊರಿಡೀ ಸಾರಿ ಬರುತ್ತಾನೆ.

ದೇಹಕ್ಕೆ ಗರ್ಭಚೀಲ ಒಂದು ಅಂಗ ಅಷ್ಟೆ ಆದರೆ ಅದೇ ದೇಹವಲ್ಲ. ಪ್ರತಿಯೊಬ್ಬರು ದಾರುವನ್ನು ಕೀಳಾಗಿ ಕಾಣುತ್ತಾರೆ. ಬಹುಶಃ ಅವಳು ಹೆಣ್ಣಾದುದ್ದೆ ಅದಕ್ಕೆ ಮುಖ್ಯಕಾರಣವಿರಬಹುದು. ಅಡುಗೆ ಮನೆಯೊಳಗೆ ತನ್ನನ್ನೆ ತಾನು ಬಂಧಿಸಿಕೊಂಡ ದಾರು ಹೊರಜಗತ್ತಿನಿಂದ ದೂರ ಉಳಿದು ಬೆಂಕಿ ಉರಿಸಿ ನಂದಿಸುವ ಕಾಯಕದಲ್ಲೆ ಮುಂದೆ ಹತ್ತು ವಸಂತ ಕಳೆಯುತ್ತಾಳೆ.

ಎಂಕಪ್ಪ ರೈಗಳ ಮೂರು ಗಂಡು ಸಂತಾನದ ನಂತರ ಅದೃಷ್ಟದ ಬೊಟ್ಟಾಗಿ ಹುಟ್ಟಿದ ದಾರು ಮನೆಯ ಬೆಳಕಂತೆ ಅಪ್ಪ-ಅಣ್ಣಂದಿರ ಹೆಗಲ ಮೇಲೆ ಕೂತೇ ಬೆಳೆದವಳು. ಬೆಚ್ಚಗಿನ ಪ್ರೀತಿಯನ್ನು ಅನುಭವಿಸುತ್ತ ಬಾಳೆಯ ದಿಂಡಿನಂತೆ. ಚೆಲುವಿಗೆ ನಯ, ವಿನಯ, ನಾಜೂಕು, ನಾಚಿಕೆಯೂ ಎಷ್ಟು ಬೇಕೋ ಅಷ್ಟು ಸೇರಿಕೊಂಡು ಅದೃಷ್ಟದ ಚೀಲದಂತಿದ್ದ ದಾರು ಈಗ ಗರ್ಭಚೀಲವಿಲ್ಲದ್ದಕ್ಕೆ ಶಿಖಂಡಿ ಪಟ್ಟ ಹೊತ್ತು ನಲುಗಿ ಹೋಗಿದ್ದಾಳೆ. ಕಂಡ ಕಂಡವರ ಕಣ್ಣು ಬಾಯಿಗೆ ಸಿಕ್ಕಿ ದಾರು ಯಮಯಾತನೆ ಅನುಭವಿಸುತ್ತಿದ್ದಾಳೆ. ನಾಲ್ಕು ವರ್ಷದಲ್ಲಿ ಅಣ್ಣಂದಿರಿಗೂ ಮದುವೆಯಾಗಿ ನಂತರ ನಿಧಾನಕ್ಕೆ ಅತ್ತಿಗೆಯರ ಯಜಮಾನಿಕೆಯೂ ಆರಂಭವಾಗಿದೆ.

ರೈಗಳ ಮಗಳು ದಾರು ಶಿಖಂಡಿಯಂತೆ ಎಂಬ ಸುದ್ದಿ ಬಾಯಿಂದ ಬಾಯಿಗೆ ಹರಡುತ್ತಿದ್ದಂತೆ ಕುತೂಹಲ ತಡೆಯಲಾಗದ ಹಲವು ವಿಕೃತ ಮನಸ್ಸುಗಳು ಅದು ಇದು ನೆಪ ಮಾಡಿಕೊಂಡು ರೈಗಳ ಅಂಗಳದಲ್ಲಿ ಲಿಂಗಭೇದವಿಲ್ಲದೆ ಅಡ್ಡಾಡಿ ದಾರುವಿನ ಎದೆ, ಮೂಗು, ಮೂಗುತಿಯನ್ನು ಕುತೂಹಲದ ಕಣ್ಣಿಳಿಂದ ಇರಿದು ನೋಡಿ ಶಿಖಂಡಿತನ ಇರುವುದು ಎಲ್ಲಿ... ಹೇಗೆ? ಎಂಬುದನ್ನು ಚರ್ಚಿಸತೊಡಗಿದ್ದವು.

"ನೋಡುವುದಕ್ಕೆ ಥೇಟ್ ಹೆಂಗ್ಸಿನ ಹಾಗೆಯೇ ಇದ್ದಾಳಲ್ಲ... ಮೀಸೆಗೀಸೆ ಯಾವುದೂ ಇಲ್ಲ. ಎದೆನೂ ಸರಿಯಾಗಿಯೇ ಇದೆ...? ಮತ್ತ್ಯಾವುದು ಇಲ್ಲ...! ಅದುವೆ ಇಲ್ಲಾಂತ ಕಾಣೆಸುತ್ತೆ...' ಇನ್ನು ಕೆಲವರು ದಾರು ಅಂಬೆಗಾಲಿಕ್ಕುತ್ತಿರುವ ಬಾಲ್ಯದ ಚಿತ್ರವನ್ನು ಮತ್ತೆ ಚಿತ್ತಕ್ಕೆತ್ತಿ ತಂದು ಆಗ ಮಗುವಿಗೆ ಇರಬೇಕಾದ ಕಡೆ ಎಲ್ಲ ಅವಯವಗಳಿದ್ದವೇ ಎಂಬುದನ್ನು ನೆನಪಿಸಿಕೊಳ್ಳ ತೊಡಗಿದ್ದರು".[6] ಕುತೂಹಲದ ಬೊಟ್ಟಾದ, ವ್ಯಂಗ್ಯದ ತುತ್ತಾದ, ಕುಹಕದ ವಸ್ತುವಾದ ದಾರುವಿಗೆ ಒಂದು ಮನಸ್ಸಿದೆ ಎಂದು ಆ ಸಮಾಜಕ್ಕೆ ಯಾಕೆ ಅರ್ಥವಾಗಲ್ಲ. ಲಿಂಗಭೇದವಿಲ್ಲದೆ ಹೆಣ್ಣುಗಂಡಿನಾದಿಯಾಗಿ ಎಲ್ಲರಿಂದಲೂ ದಾರು ಮಾನಸಿಕ ಹಿಂಸೆಯನ್ನು ಅನುಭವಿಸುತ್ತಾಳೆ.

ಕುಹಕದ ಒಡಕು ಬಾಯಿಗಳನ್ನು ಎದುರಿಸಲು ಸ್ವತಃ ಎಂಕಪ್ಪರೈಗಳಿಂದಲೇ ಸಾಧ್ಯವಾಗಲಿಲ್ಲ, ಆದರೆ ಸ್ವಲ್ಪಮಟ್ಟಿಗಾದರೂ ಊರವರ ಬಾಯಿ ಮುಚ್ಚಿಸಿದ್ದು ಅತ್ತೆ ಸೂರಕ್ಕೆಯೇ.

'ದಾರುವಿಗೆ ಮದುವೆ ಗೊತ್ತಾದೊಡನೆ ಪಿಜಿನ ಮೂಲ್ಯನ ಹೆಂಡತಿ ಪೀಂಚಲು ಮಡಲು (ತೆಂಗಿನ ಗರಿ) ಹೆಣೆಯುವ ನೆಪ ಹೇಳಿ ಸೂರಕ್ಕೆಯ ಅಂಗಳಕ್ಕೆ ಕಾಲಿಟ್ಟವಳು. ದಾರುವಿನ 'ಹೆಣ್ತನ'ದ ಬಗ್ಗೆ ರಂಗುರಂಗಿನ ಕಥಾಮಾಲೆ ಕಟ್ಟಿ ಹೇಳಲು ಪ್ರಯತ್ನಿಸಿದ್ದಳು. ಆದರೆ ಸೂರಕ್ಕೆ ಮೊದಲು ನಿಂಗೆ ಇರುವುದನ್ನು ಸರಿಯಿಟ್ಕೊಳ್ಳೆ... ಮತ್ತೆ ಬೇರೆ ಹೆಣ್ಮಕ್ಕಳ ಬಗ್ಗೆ ನ್ಯಾಕರೆ' ಯಾಕೆ ಅಂದಿದ್ದಳು.

ದಾರುವಿನ ಪರವಾಗಿ ಮಾತಾಡುತ್ತಿರುವ ಸೂರಕ್ಕೆಯಲ್ಲೂ ಒಂದು ಸ್ವಾರ್ಥ ಇದೆ. ಇದ್ದಕ್ಕಿದಂತೆ ಸೂರಕ್ಕೆ ದಾರುವನ್ನು ಸೊಸೆಯಾಗಿ ಒಪ್ಪಿಕೊಂಡಿರುವುದಕ್ಕೆ ಕಾರಣವೇನು? ಎಲ್ಲದಕ್ಕೂ ಒಂದು ಲೆಕ್ಕಾಚಾರವಿರಲೇ ಬೇಕಲ್ಲ.

ಮಗನಿಗೆ ಖಾದಿ ಪ್ರಚಾರದ ಹುಚ್ಚು. ಮನೆಯಲ್ಲಿ ವಿಧವೆ ತಾಯಿಯೊಬ್ಬಳನ್ನೇ ಬಿಟ್ಟು ಊರಿಡೀ ಅಲೆದಾಟ ಆತನದ್ದು. 'ಕಬ್ಬಿಣದ ಮಣ್ಣು ಕಬ್ಬಿಣಕ್ಕೇ ಕೇಡು' ಎಂದು ಬಲ್ಲ ಸೂರಕ್ಕೆ ಎಲ್ಲ ಸರಿ ಇರುವಾಕೆಯನ್ನು ಇವ ಮದುವೆ ಮಾಡಿಕೊಂಡರೂ ನೆಟ್ಟಗೆ ಸಂಸಾರ ಮಾಡುವವನಲ್ಲ. ಬಂದ ಹೆಣ್ಣಿಗೂ ದುಃಖ. ಅದಕ್ಕೇ ದಾರುವನ್ನು ಮಗ ಮದುವೆ ಮಾಡಿಕೊಳ್ಳುವ ವಿಚಾರದಲ್ಲಿ ಸೂರಕ್ಕೆ ಅಪಸ್ವರ ಎತ್ತಲಿಲ್ಲ.

ದಾರುವಿಗೆ ದೇಶಪ್ರೇಮಿ ಮಾರಪ್ಪನ ಆಸರೆ ಸಿಕ್ಕಿತ್ತು ನಿಜ. ಆದರೆ ಮಾರಪ್ಪ ಈ ವಯಸ್ಸಿನಲ್ಲಿ ಹೆಣ್ತಿ ಜೊತೆ ಬಾಳುವೆ ಎಂಥದ್ದು ಆಕೆಗೊಂದು ಗಂಡದಿಕ್ಕು ಬೇಕಿತ್ತು. ಪಾಪಪುಣ್ಯ ನೋಡಿ ಮದ್ವೆಯಾದೆ ಎಂದು ದಾರುವನ್ನು ಕಡೆಗಣ್ಣಿನಿಂದಲೂ ದಿಟ್ಟಿಸದೆ ದೇಶಸೇವೆಯ ಕೆಲಸದಲ್ಲಿ ಮುಳುಗಿ ಹೋಗುತ್ತಾನೆ. ಗಾಂಧಿ ಶಿವರಾತ್ರಿಯ ಸಮಯಕ್ಕೆ ಪೇಟೆಗೆ ಬರಲಿದ್ದಾರೆ ಎಂಬ ಸುದ್ದಿಯೊಂದಿಗೆ ಮನೆಗೆ ಬಂದ ಮಾರಪ್ಪ ದಾರುವನ್ನು ಕರೆದು ಮೈಮೇಲಿನ ಒಡವೆಯನ್ನು ಕಳಚಿಕೊಡುವಂತೆ ಕೇಳುತ್ತಾನೆ. ದಾರು ಸಹಜವಾಗಿಯೇ ಯಾಕೆ? ಎಂದು ಕೇಳಬೇಕೆಂದು ಕೊಳ್ಳುವಷ್ಟರಲ್ಲೇ ಅತ್ತೆ ನಡುವೆ ಬಾಯಿ ಹಾಕಿದ್ದರಿಂದ ಸುಮ್ಮನಿದ್ದಳು. ಆದರೆ ಸುಮ್ಮನಿದ್ದ ದಾರುವಿನ ಮೇಲೆ ಮಾರಪ್ಪನ ಪಿತ್ತ ನೆತ್ತಿಗೇರಿಸಿಕೊಂಡವನಂತೆ – 'ಹತ್ ಬಿಕನಾಸಿ ಶಿಖಂಡಿ ನಿಂಗೆ ಈ ಒಡವೆ ಬೇರೆ ಕೇಡು. ಒಬ್ಬ ಹೆಣ್ಣಿಗೆ ಇರಬೇಕಾದ ಒಡವೆ ನಿನಗಿದ್ಯೇನೆ...?' ಈ ಚಿನ್ನದ ಒಡವೆ ಕಟ್ಟಿಕೊಂಡು ನೀನೇನು ಮಾಡ್ತೀಯನೆ? ಅದನ್ನು ಗಾಂಧಿಗಾದ್ರೂ ಕೊಟ್ಟು ಪುಣ್ಯ ಕಟ್ಟಿಕೋ ಎಂದು ಕಿರುಚುತ್ತಾನೆ.

ಊರವರ ಲೇವಡಿ ಮಾತುಗಳಿಗೆ ಬೆಲೆ ಕೊಡದೆ 'ದಾರು'ವನ್ನು ಮದುವೆಯಾಗಿ ಅವಳ ಬದುಕಿಗೊಂದು ಬೆಳಕಾಗಿ ಬಂದ ಮಾರಪ್ಪ ಈಗ ಆಕೆಯ ಹೆಣ್ತನವನ್ನು ಅವಮಾನಿಸುವಂತ ಮಾತುಗಳನ್ನಾಡಿದ್ದ. ಊರವರು ದಾರುವಿಗೆ ಶಿಖಂಡಿ ಪಟ್ಟ ನೀಡಿ ಆಕೆಯನ್ನು ಶಾಶ್ವತವಾಗಿ ಕತ್ತಲ ಬದುಕಿಗೆ ತಳ್ಳಿದ ಮೇಲೆ ಆಕೆ ತನ್ನ ಒಡಲಲ್ಲಿ ನಿರಂತರವಾಗಿ ಹುಟ್ಟುತ್ತಿದ್ದ ಪ್ರೀತಿ ಕಾಮಗಳ ಶಮನಕ್ಕೆ ಯಾವ ದಾರಿಯು ಕಾಣದೆ ದೇಹದ ಸತ್ವವನ್ನು ಒಪ್ಪಿಕೊಂಡು ಮನಸ್ಸನ್ನು ಕೊರಡಾಗಿಸಿಕೊಂಡಿದ್ದಳು. ಮಾರಪ್ಪನ ಕೈಹಿಡಿದ ನಂತರ ಆತನ ಸಾಮೀಪ್ಯಕ್ಕೆ, ಪ್ರೀತಿಯ

ಮಾತಿಗೆ, ಕೊಂಡಾಟಕ್ಕೆ ಹಂಬಲಿಸಿದ್ದಳು. ಆದರೆ ಮಾರಪ್ಪ ಅವಳ ಮನಸ್ಸಿನ ಭಾವನೆಗಳಿಗೆ ಯಾವತ್ತು ಸ್ಪಂದಿಸಲಿಲ್ಲ.

ಹೆಣ್ಣಿನ ಹೆಣ್ತನದ ಕುರಿತು ಗಂಡನಾಡುವ ವ್ಯಂಗ್ಯದ ಮಾತುಗಳು ದಾರುವನ್ನು ಇಡಿಯಾಗಿ ಇರಿಯುವಂತೆನಿಸಿದೆ. ಆ ಇರಿತ ಅವಳಲ್ಲಿ ಹುಟ್ಟಿಕೊಳ್ಳುವ ನೂರಾರು ಪ್ರಶ್ನೆಗಳಿಗೆ ಕಾರಣವಾಗಿವೆ. 'ಹೆಣ್ಣಿಗೆ ಹೆಣ್ತನವೇ ಅವಳ ದೇಹದ ಒಡವೆ' ಸರಿ. ಆದರೆ ಗಂಡಿಗ್ಯಾವುದು? ತನ್ನ ಗಂಡನಿಗಿದೆಯೇ ಯಾವುದೇ ಗಂಡಿಗಿರಬಹುದಾದ ಒಡವೆ? ಕಥೆಯೊಳಗೆ ಲೇಖಕಿ ಎತ್ತಿರುವ ಇಂಥ ಪ್ರಶ್ನೆಗಳು ಈ ಸಮಾಜದಲ್ಲಿ ಸ್ತ್ರೀ-ಪುರುಷರ ನಡುವೆ ಅಸಮವಾಗಿ ಹಂಚಿಕೆಯಾಗಿರುವ ವ್ಯವಸ್ಥೆಯ ಸೂಕ್ಷ್ಮತೆಗಳು ವ್ಯಕ್ತವಾಗುತ್ತವೆ. ಗಂಡಿಗೆ ಗಂಡುತನಗಳು ಇಲ್ಲದಿದ್ದರು ನಡೆಯುತ್ತೆ ಆದರೆ ಹೆಣ್ಣಿಗೆ ಹೆಣ್ತನಗಳು ಬೇಕೇ ಬೇಕು ಎನ್ನುವಂತೆ ವರ್ತಿಸುತ್ತದೆ. ಹೆಣ್ಣಿನಲ್ಲಿ ಹೆಣ್ತನಗಳು ಒಮ್ಮೊಮ್ಮೆ ಇಲ್ಲವಾಗಿ ಒಂದು ಹೆಣ್ಣು ದೇಹವನ್ನು ಬಾದಿಸಿದ್ದರೆ ಅದು ಪ್ರಕೃತಿ ಸಹಜವೆಂಬಂತೆ ಯಾರೂ ಒಪ್ಪಿಕೊಳ್ಳುವುದಿಲ್ಲ. ಪ್ರಕೃತಿಯ ಯಾವ ಪ್ರಾಣಿಯನ್ನು ಕಾಡಿಸದ ಇಂಥದೊಂದು ಕ್ರೌರ್ಯ ಮನುಷ್ಯ ಪ್ರಾಣಿಯನ್ನು ಅದ್ಯಾಕೆ ಕಾಡುತ್ತದೆಯೋ ತಿಳಿದಿಲ್ಲ. ಒಟ್ಟಿನಲ್ಲಿ ದಾರುವಂತು ಈ ವೇದನೆಯನ್ನು ಯಾವುದೋ ಜನ್ಮದ ಕರ್ಮವೆಂಬಂತೆ ಅನುಭವಿಸುತ್ತಾಳೆ. ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಯಲ್ಲಿಯೂ ಈ ದಾರು – ಮಾರಪ್ಪನ ಪ್ರಸ್ತಾಪ ಬರುತ್ತದೆ. ಆದರೆ ಎರಡು ಪಾತ್ರಗಳು ಕಥೆ ಮತ್ತು ಕಾದಂಬರಿಯ ಎರಡು ಬಗೆಯಲ್ಲಿಯೂ ಕಾಣಿಸಿಕೊಂಡರು ಅವು ಪಡೆದುಕೊಂಡಿರುವ ಅಭಿವ್ಯಕ್ತಿಯ ಮುಖಗಳು ತುಂಬಾ ಭಿನ್ನವಾದವು ಎಂಬುದು ಗಮನಾರ್ಹ ಸಂಗತಿ.

ಹಾಗಾದರೆ ಈ ಹೆಣ್ಣಿನ ಅಂತರಂಗದ ನೋವನ್ನು, ಮನಸ್ಸು ದೇಹದ ಹಪಾಹಪಿಕೆಯನ್ನು, ಒಟ್ಟಾರೆ ಆಕೆಯ ಜೀವದ ನೈಸರ್ಗಿಕ ಒತ್ತಡ, ಬಯಕೆಗಳನ್ನು ಅರ್ಥೈಸಿಕೊಂಡವರಾರು? ಯೌವ್ವನದ ಭಾವನೆಗಳನ್ನು ಮನಸ್ಸಿನ ತುಮುಲ ತಳಮಳವನ್ನು ಹೆಣ್ಣೊಬ್ಬಳು ಮುಕ್ತವಾಗಿ ಯಾರೊಡನೆ ಹೇಗೆ ಬಿಚ್ಚಿಡಲಾದೀತು? ತಂದೆಯೆಲ್ಲೋ? ತಾಯಿಯಲ್ಲೋ? ಒಡಹುಟ್ಟಿದವರಲ್ಲೋ? ಅಥವಾ ಕಟ್ಟಿಕೊಂಡ ಗಂಡನಲ್ಲೋ?

ಯಾರು ಇಲ್ಲ, ಹೌದು ದಾರುವನ್ನು ಅರ್ಥೈಸಿಕೊಂಡವರು ಯಾರು ಇಲ್ಲ. ಒಂದಲ್ಲ ಒಂದು ರೀತಿಯಲ್ಲಿ ಎಲ್ಲರಿಂದಲೂ ದಾರು ನೋವನ್ನೆ ಅನುಭವಿಸಿದಳು. ಎಲ್ಲರೂ ಅವಳ ಹೆಣ್ತನವನ್ನೆ ಚುಚ್ಚಿಕೊಂಕಿನ ಮಾತಾಡಿದವರೆ.

ದಾರುವಿನ ಮದುವೆಯಾದಾಗ, ಮನೆಯೊಳಗೆ ಕೊಳತು ನಾರುತ್ತಿದ್ದ ಹೆಣವನೆತ್ತಿ ಒಮ್ಮೆ ಹೊರಗಿಟ್ಟಂತಾಯ್ತು ಎಂಬಂತೆ ಎಂಕಪ್ಪ ರೈಗಳ ತಾಯಿ ಕಿಂಞಕ್ಕೆ ದೀರ್ಘವಾದ ನಿಟ್ಟುಸಿರು ಬಿಟ್ಟಿದ್ದರು. ಅದು ಮನೆಯ ಮಾರಿ ಹೋಯ್ತು! ಎದೆ ಬಾರ ಕಳಚಿತು ಎಂಬ ನಿಟ್ಟುಸಿರಲ್ಲ, ಊರವರಿಂದ ಶಿಖಂಡಿ ಪಟ್ಟ ಹೊತ್ತು ಅದೆಷ್ಟೋ ಸಂವತ್ಸರಗಳನ್ನು ಅಡುಗೆ ಮನೆಯ ಒಲೆ ಮುಂದೆ ಕೂತೇ ಕಳೆದಿದ್ದ ದಾರುವಿಗೆ ಗಂಡೊಂದರ ಆಸರೆ ಸಿಕ್ಕಿತಲ್ಲ ಎಂಬ ನೆಮ್ಮದಿಯ ಉಸಿರದು.

'ನಾಕನೇ ನೀರು' ಕಥಾಸಂಕಲನದ 'ಪಂಜುರ್ಲಿ ಮತ್ತು ಗರ್ಭಪಾತ' ಕಥೆಯನ್ನು ಲಿಂಗತಾರತಮ್ಯದ ನೆಲೆಯಲ್ಲಿ ಗುರುತಿಸಬಹುದಾಗಿದೆ.

ಮುನ್ನೂರು ಮುಡಿಯ ಆಸ್ತಿಗೆ ಒಡೆಯರಾದ ಶೆಟ್ಟರ ಒಬ್ಬಳೆ ಮಗಳು ಸೋನಕ್ಕನಿಗೆ ಐದು ಬಾರಿ ಗರ್ಭಪಾತವಾಗಿದೆ. ತನ್ನ ಆಸ್ತಿ ಬೇರ್‍ಯಾರಿಗೂ ಸೋರಿಹೋಗಬಾರದೆಂದು ಶೆಟ್ಟರು ತನ್ನ ತಂಗಿಯ ಮಗ ವಿಶ್ವನಾಥನಿಗೆ ಸೋನಕ್ಕನನ್ನು ಕೊಟ್ಟು ಸೋದರಿಕೆಯನ್ನು ಬಲಪಡಿಸಿಕೊಂಡಿದ್ದಾರೆ. ಆದರೆ ಅದೇ ಮಗಳ ಬದುಕಿಗೆ ಕಗ್ಗಂಟಾಗಿ ಪರಿಣಮಿಸಿದೆ. 'ಇವನಿಗೆ ಮಗಳನ್ನ ಕೊಟ್ಟು ಮದುವೆ ಮಾಡಿಕೊಡುವುದಕ್ಕಿಂತ ಕಲ್ಲುಕಟ್ಟಿ ಬಾವಿಗೆ ಹಾಕಬಾರದಿತ್ತ. ಆ ಚಾಂಡಾಲ ಸೂಳೆಮಗನಿಗೆ ಯಾಕೆ ಕಟ್ಟಬೇಕಾಗಿತ್ತು ಅಂತ ಸಂಬಂಧಿಕರು, ಊರವರು ಮಾತನಾಡಿಕೊಳ್ಳುವಷ್ಟು ಸರ್ವಗುಣ ಸಂಪನ್ನ ವಿಶ್ವನಾಥ.

ಪಂಜುರ್ಲಿ ಮತ್ತು ಗರ್ಭಪಾತಕ್ಕೆ ಎಲ್ಲಿಂದೆಲ್ಲಿಯ ಸಂಬಂಧವೊ ಗೊತ್ತಿಲ್ಲ. ಆದರೆ ನಂಬಿಕೆಗಳು ಇಲ್ಲಿ ಕೆಲಸ ಮಾಡಿಸುತ್ತವೆ. ಇಲ್ಲಿ ಸೋನಕ್ಕ ತುಂಬಾ ಅಸಹಾಯಕಳಾಗಿ ಕಾಣಿಸಿಕೊಳ್ಳುತ್ತಾಳೆ. ಒರಟುತನ, ಕ್ರೌರ್ಯ, ದುಂದುಗಾರಿಕೆ, ದುಡುಕು ಎಲ್ಲದಕ್ಕೂ ಹೆಸರಾದ ವಿಶ್ವನಾಥ ಸೋನಕ್ಕನ ಕರಿಮಣಿಯೊಂದನ್ನು ಬಿಟ್ಟು ಮಿಕ್ಕುಳಿದ ಎಪ್ಪತ್ತೈದು ತೊಲ ಚಿನ್ನವನ್ನ ಈಗಾಗಲೇ ಜುಜಾಟಕ್ಕೆ ಇಟ್ಟಿದ್ದರಿಂದ ಆ ಆಭರಣಗಳೆಲ್ಲ ಯಾರ್‍ಯಾರದೋ ಹೆಂಡತಿಯರ ಮೈಮೇಲಿದೆ. ಕೋಳಿ ಅಂಕದಲ್ಲಿ ಜೂಜುಕಟ್ಟಲು ಸೋನಕ್ಕನ ಸೊಂಟದ ಚಿನ್ನದ ಉಡಿದಾರವನ್ನು ಕಳಚಿಕೊಂಡು ಹೋಗಿದ್ದಾನೆ. ಅಪ್ಪನಿಗೆ ಹೇಳಿದರೆ ಧರ್ಮಸ್ಥಳದ ಆಣೆಯಾಗಿ ಈ ಮನೆಯ ಹೊಸ್ತಿಲು ದಾಟುವುದಿಲ್ಲ ಎಂದು ಹೆದರಿಸಿ ಬಾಯಿ ಮುಚ್ಚಿಸಿದ್ದಾನೆ.

ಸೋನಕ್ಕಳೂ ಇತ್ತೀಚೆಗೆ ನಿರ್ಲಿಪ್ತಳಾಗಿದ್ದಾಳೆ. ಚಿನ್ನ ಆಸ್ತಿ ಯಾರಿಗಾಗಿ? ಯಾವ ಮಕ್ಕಳಿಗೆ, ಮರಿಗಳಿಗೆ? ತನ್ನ ಈ ಸ್ಥಿತಿಗೆ ತನ್ನ ಅಪ್ಪನೇ ಪರೋಕ್ಷ ಕಾರಣ ಎನ್ನುವ ಭಾವನೆ,

ನೋವು ಸೋನಕ್ಕನಲ್ಲಿದೆ. ಆದರೆ ಆಕೆಗೆ ಅಪ್ಪನ ಮೇಲೂ ಸಿಟ್ಟು ಬರುತ್ತಿಲ್ಲ. ಆಕೆಯ ಆತ್ಮಬಲವೇ ಕುಗ್ಗಿದಂತಾಗಿ ತನ್ನ ಹಣೆ ಬರಹವೇ ಅಷ್ಟು ಎಂದು ತನ್ನನ್ನೇ ತಾನು ನಿಂದಿಸಿಕೊಳ್ಳುತ್ತಿದ್ದಳು.

ಮಾನಸಿಕ ಒತ್ತಡಗಳು, ದೈಹಿಕ ಆಯಾಸ, ದುಶ್ಚಟಗಳ ಗಂಡ ಎಲ್ಲವು ಇಲ್ಲಿ ಸೋನಕ್ಕ ಮತ್ತೆ ಮತ್ತೆ ಗರ್ಭಪಾತಕ್ಕೆ ಒಳಗಾಗಲೂ ಕಾರಣವಾಗಿದೆ. ಇಲ್ಲಿಯೂ ಅಷ್ಟೇ ವಿಶ್ವನಾಥನ ದುಶ್ಚಟಗಳನ್ನಾಗಲಿ ಅವನ ಅಸಭ್ಯವರ್ತನೆಗಳನ್ನಾಗಲೀ ಯಾರೂ ಪ್ರಶ್ನಿಸುವುದಿಲ್ಲ. ಆದರೆ ಮತ್ತೆ ಮತ್ತೆ ಎಸಗುತ್ತಿರುವ ಸೋನಕ್ಕನ ಗರ್ಭಪಾತಕ್ಕೆ ಪಂಜುರ್ಲಿಯನ್ನೇ ಹೊಣೆಯಾಗಿಸಿದ್ದಾರೆ. ಶೆಟ್ಟರು ತನ್ನ ಮುನ್ನೂರು ಮುಡಿಯ ಆಸ್ತಿಯನ್ನ ಉಳಿಸಿಕೊಳ್ಳಲು ಹೋಗಿ ಮಗಳ ಜೀವನವನ್ನು ಹಾಳು ಮಾಡಿದಂತಾಗಿದೆ. ವಿಶ್ವನಾಥನ ವಿಚಾರಗಳೆಲ್ಲ ಗೊತ್ತಿದ್ದಾಗಲೂ ವಿಚಾರ ಮಾಡದೆ ಮಗಳನ್ನ ಕೊಟ್ಟು ಮದುವೆ ಮಾಡುತ್ತಾನೆ. ಮಗಳು ಗರ್ಭಪಾತಕ್ಕೆ ಒಳಗಾದಗಲೂ ಅಳಿಯನನ್ನು ದೂಷಿಸದೆ ಪಂಜುರ್ಲಿ ಭೂತಕ್ಕೆ ನಡೆದುಕೊಂಡು ಹರಕೆ ಪೂಜೆ ಸಲ್ಲಿಸುತ್ತಾನೆ. ಒಟ್ಟಿನಲ್ಲಿ ಇಲ್ಲಿಯೂ ಪುರುಷಾಧಿಕಾರವೇ ನಡೆದದ್ದನ್ನು ಕಥೆ ನಿರೂಪಿಸುತ್ತದೆ.

'ಸಿರಿ ತೋರಿದ ದಾರಿ' ಕಥೆಯಲ್ಲಿಯೂ ಅಷ್ಟೆ ಸಿರಿ ಸತ್ಯದ ಹೆಣ್ಣು ಮಗಳಾಗಿದ್ದರು ಗಂಡನಿಂದ ಶೋಷಣೆಗೆ ಒಳಗಾಗುತ್ತಾಳೆ. ಆದರೆ ಈ ಮೇಲೆ ಗಮನಿಸಿದ ಎಲ್ಲಾ ಕಥೆಗಳ ನಾಯಕಿಯರಿಗಿಂತಲೂ ಭಿನ್ನವಾಗಿ ಸಿರಿ ಕಾಣಿಸುತ್ತಾಳೆ. ಸಿರಿ ಇಲ್ಲಿ ಗಂಡನ ದೌರ್ಜನ್ಯವನ್ನು ಪ್ರತಿಭಟಿಸುತ್ತಾಳೆ. ಈ ಎಲ್ಲಾ ಪಾತ್ರಗಳಿಗೂ ಮಾದರಿಯಾಗಬಲ್ಲ ಪಾತ್ರವಾಗಿ ಸಿರಿ ಪಾತ್ರ ಸೃಷ್ಟಿಯಾಗಿದೆ.

ಸತ್ಯನಾಪುರದ ಅಜ್ಜಯ್ಯನ ದೂರದ ಸಂಬಂಧಿ ಸಂಕರಾಳ್ವ ಅರಮನೆಯ ಸುಖ ದುಃಖಕ್ಕೆ ಎಂದು ಒದಗಿ ಬಾರದವ. ಅಜ್ಜಯ್ಯ ಸತ್ತ ನಾಕೇ ದಿನಕ್ಕೆ ಆಸ್ತಿಗೆಲ್ಲ ತಾನೇ ವಾರಸುದಾರ ಎಂದು ಹಕ್ಕು ಮಂಡಿಸಿ ಸಿರಿಯನ್ನ ನ್ಯಾಯಕೂಟಕ್ಕೆ ಕರೆಯುತ್ತಾರೆ. ಸಾಲದ್ದಕ್ಕೆ ಸಂಕರಾಳ್ವ ತನ್ನ ಚತುರೋಪಾಯದಿಂದ ಸತ್ಯನಾಪುರದ ಜಾತಿ ಮಂದಿಯನ್ನು ಮಾತ್ರವಲ್ಲದೆ ಊರಿಗೆ ನ್ಯಾಯ ಹೇಳುವ ಪತ್ತೇರಿ ಕೂಟದ ಹತ್ತು ಮಂದಿಯನ್ನು ಹಣಕೊಟ್ಟು ಕೊಂಡುಕೊಳ್ಳುತ್ತಾನೆ. ಆ ಸಭೆಗೆ ಸರಿಯ ಗಂಡ ಕಾಂತು ಪೂಂಜನನ್ನು ಕರೆಸಿಕೊಂಡು ತನ್ನ ಬಲಮಗ್ಗುಲಲ್ಲೆ ಕೂರಿಸಿಕೊಳ್ಳುತ್ತಾನೆ. ಇಷ್ಟೆಲ್ಲಾ ಆದ ಮೇಲೆ ನ್ಯಾಯ ತೀರ್ಮಾನ ಹೇಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಊರಿನ ನ್ಯಾಯ ಕೂಟಕ್ಕೆ ಹೆಣ್ಣುಮಕ್ಕಳು 'ಹೋಗುವುದು ಆ ಊರಿನ ಪದ್ಧತಿಯಾಗಿರಲಿಲ್ಲ' ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಊರಿನ ಹತ್ತು ಸಮಸ್ತರು ಹೆಣ್ಣಿಗಿರುವ ಆರ್ಥಿಕ ಹಾಗೂ ನೈತಿಕ ಚೌಕಟ್ಟಿನ ಬಗ್ಗೆ ಸಿರಿಗೆ ತಿಳಿಯ ಹೇಳುತ್ತಾರೆ. ಈ ಬಗೆಯ ಆರ್ಥಿಕ ಹಾಗೂ ನೈತಿಕ ಚೌಕಟ್ಟುಗಳು

ಯಾಕೆ ಹೆಣ್ಣಿಗೆ ಮಾತ್ರ ಅನ್ವಯವಾಗಬೇಕು ಸಮಾಜದ ಒಳಿತಿಗಾಗಿ ಕಟ್ಟುಪಾಡುಗಳ ಪಾಲನೆಗಳೆಲ್ಲವು ಗಂಡು ಹೆಣ್ಣು ಯಾವುದೇ ಲಿಂಗಪಕ್ಷಪಾತವಿಲ್ಲದೆ ಅನುಸರಿಸಬೇಕಾಗುತ್ತದೆ. ಆದರೆ ಈ ಹಿಂದಿನಿಂದಲೂ ರೂಢಿಯಲ್ಲಿರುವ ಪಾಲನೆಗಳೆಲ್ಲವು ಹೆಣ್ಣಿಗಾಗಿ ಮಾತ್ರವೇ ಇದೆಯೇನೋ ಎಂಬಂತೆ ಗಂಡು ವರ್ತಿಸಿರುವುದನ್ನು ಈ ಕಥೆಯಲ್ಲಿ ಗಮನಿಸಬಹುದಾಗಿದೆ.

ಆ ತೀರ್ಮಾನದ ಪ್ರಕಾರ 'ಸತ್ಯನಾಪುರದ ಅರಮನೆಯ ಗಡಿಯನ್ನು (ಯಜಮಾನಿಕೆ) ಗಂಡೊಬ್ಬನಿಗೆ ಕೊಡಬೇಕಾದುದು ನ್ಯಾಯ. ಆದ್ದರಿಂದ ಅರಮನೆಯ ಗಡಿ ಸಂಕರಾಳ್ವನಿಗೆ; ಅಡುಗೆ ಮನೆಯ ಪಟ್ಟ ನಿನಗೆ' ಎಂದು ಪತ್ತೇರಿ ಕೂಟ ನ್ಯಾಯ ಹೇಳಿದಾಗ ಗಂಡ ಕಾಂತುಪುಂಜನೇ ಎಂದು ನಿಂತು ಅದನ್ನು ಸಮರ್ಥಿಸಿದ್ದ. ಪತ್ತೇರಿ ಕೂಟದ ನ್ಯಾಯ, ನ್ಯಾಯ ಸಮ್ಮತವಾಗಿರಲಿಲ್ಲ. ಇಡಿಯ ಗಂಡು ಸಂಕುಲ ಜೊತೆಗೆ ಕೈಹಿಡಿದ ಗಂಡನೂ ಹೆಣ್ಣೊಬ್ಬಳಿಗೆ ಮಾಡಿದ ಅನ್ಯಾಯವೂ ಇದಾಗಿದೆ.

ಅಜ್ಜಯ್ಯ ಸತ್ಯಾನಪುರದ ಅರಮನೆಯ ಐಸಿರಿ ಸಿರಿಯನ್ನು ಉಸಿರಂತೆ ಜೋಪಾನ ಮಾಡಿ ವಾತ್ಸಲ್ಯದ ತೊರೆಯನ್ನೇ ಹರಿಸಿದ್ದರು. ಸಮಾಜದ ಕಟ್ಟುಪಾಡಿನಂತೆ ಮೈನೆರೆಯುವ ಮುನ್ನವೇ ಮದುವೆ ಮಾಡಿಕೊಟ್ಟಿದ್ದರು. ಸಿರಿಯ ಗಂಡ ಕಾಂತುಪುಂಜ ಕಪಟಿ ಹೆಣ್ಣು ಹೊನ್ನಿನ ವ್ಯಾಮೋಹವುಳ್ಳವನಾಗಿದ್ದ. ಹೆಂಡತಿಯ ಮೇಲೆ ಎಳ್ಳಿನಷ್ಟೂ ಆಸಕ್ತಿ ಇಲ್ಲದೆ ಸಿರಿಯ ಬಯಕೆ ಶಾಸ್ತ್ರದ ಪ್ರಸ್ತಾಪವೆತ್ತಿದಾಗ 'ಬಯಕೆ ಹಾಕದಿದ್ದರೆ ಹೆರಿಗೆ ಆಗುವುದಿಲ್ಲವೇನು! ಎಷ್ಟು ದಿನ ಹೊಟ್ಟೆಯಲ್ಲಿಟ್ಟುಕೊಳ್ಳುತ್ತಾಳೆ ನೋಡುವಾ...' ಎನ್ನುವಂತ ಕ್ರೂರ ಮನಸ್ಥಿತಿ ಅವನದ್ದು. ಬಯಕೆಯ ಸೀರೆ ತೆಗೆಯುವ ಮಾತೆತ್ತಿದರೆ ನೇರ ಅಟ್ಟವೇರಿ ಕುಳಿತು ವೀಳ್ಯಾಮೆಲ್ಲುತ್ತ ಈಕೆಗೆ ಸೀರೆ ಕೊಡುವ ಬದಲು ತನ್ನ ಸೂಳೆಸಿದ್ದುವಿಗೆ ಸೀರೆ ಕೊಟ್ಟರೆ ಆಕೆಯ ಆದರವೇ ಬೇರೆ ಎಂದು ಮನಸ್ಸಲ್ಲೇ ಮಂಡಿಗೆ ಸವಿಯುತ್ತಾನೆ.

ಮಗುವಿನ ಜನನದ ನಲವತ್ತನೇ ದಿನದಲ್ಲಿ ಬಾಣಂತಿಯ 'ತಿಂಗಳು' ಕಳೆಯುವ ಶಾಸ್ತ್ರ. ಆ ಶಾಸ್ತ್ರಕ್ಕೆ ಸಂಪ್ರದಾಯದಂತೆ ಬಸರೂರಿನ ಅತ್ತೆ ಮನೆಗೆ ಹೇಳಿ ಕಳಿಸಿದರೆ ಕಾಂತುಪೂಂಜ 'ಅದು ತನಗೆ ಹುಟ್ಟಿದ ಮಗುವೇ ಅಲ್ಲ'ವೆಂಬಂತೆ ಓಲೆ ಕೊಂಡೊಯ್ದುವರನ್ನು ಬೈದಟ್ಟುತ್ತಾನೆ. ಅಜ್ಜಯ್ಯ ಸತ್ತಗಲೂ ಅಂತ್ಯಸಂಸ್ಕಾರಕ್ಕೂ ಬರುವುದಿಲ್ಲ. ಆದರೆ ಸಿರಿ ಅಳುಕುವುದಿಲ್ಲ. ಅಜ್ಜಯ್ಯನ ಅಂತ್ಯ ಸಂಸ್ಕಾರದ ಎಲ್ಲಾ ಕಾರ್ಯಗಳನ್ನು ತಾನೇ ಮಾಡುತ್ತಾಳೆ.

ಲಿಂಗ ಅಸಮಾನತೆಗಳು ಎಷ್ಟೇ ಇದ್ದಾಗಲೂ ಗಂಡಸರಿಂದ ಎಷ್ಟೇ ಶೋಷಣೆಗೆ ಒಳಗಾದರೂ ಸಿರಿ ಪ್ರತಿಭಟಿಸುವುದು ಮತ್ತು ಗಂಡಿನಷ್ಟೇ ಜವಾಬ್ದಾರಿಯನ್ನು ನಿರ್ವಹಿಸುವುದನ್ನು ಕಥಾ ಸಂದರ್ಭದಲ್ಲಿ ಅವಲೋಕಿಸಬಹುದು.

ಸಂಕರಾಳ್ವ ಹೂಡಿದ ಪತ್ತೇರಿಕೂಟದ ನ್ಯಾಯ. ನ್ಯಾಯಸಮ್ಮತವಾಗಿಲ್ಲದಿದ್ದಾಗ ಇಡಿಯ ಗಂಡು ಸಂಕುಲ, ಜೊತೆ ಕೈಹಿಡಿದ ಗಂಡನೂ ಅನ್ಯಾಯವೆಸಗಿದಾಗ ಸಿರಿ ತಲ್ಲಣಗೊಳ್ಳುತ್ತಾಳೆ. ತಲ್ಲಣದ ಗಳಿಗೆಯಲ್ಲೇ ವ್ಯಕ್ತಿ ನಿಜವಾಗುತ್ತಾನೆ ಎನ್ನುವಂತೆ ಸರಿ ಅದೇ ನ್ಯಾಯಕೂಟದಲ್ಲಿ ತನ್ನ ಗಂಡ ಕಾಂತಪೂಂಜನಲ್ಲಿ ವಿಚ್ಛೇದನ ಕೇಳುತ್ತಾಳೆ. ಆದರೆ ಕಾಂತುಪೂಂಜ 'ಅದೆಲ್ಲ ಏನಿದ್ದರೂ ಬಸರೂರ ಅರಮನೆಯಲ್ಲಿ ಇತ್ಯರ್ಥವಾಗಲಿ' ಎಂದಾಗ ಸೀಮಂತಕ್ಕೆ ತಂದಿದ್ದ ಸೂಳೆಸಿದ್ದು ಉಟ್ಟುಬಿಟ್ಟಿದ್ದ ಮಡಿ ಕೆಟ್ಟ ಸೀರೆಯನ್ನ ಸಿಂಬಿ ಸುತ್ತಿ ದಾರುವಿನ ತಲೆಯಲ್ಲಿಟ್ಟು ತೊಟ್ಟಿಲು ಹೊರಿಸಿ ಸತ್ಯನಾಪುರದ ಅರಮನೆ ಎದುರು ನಿಂತು 'ಈ ಮನೆ ಬಂಜರು ಬೀಳಲಿ, ಅರಮನೆ ಸುಟ್ಟು ಬೂದಿಯಾಗಲಿ ಸಂಕರಾಳ್ವನಂಥ ಸಮಯ ಸಾಧಕರಿಗೆ ಈ ಪುಣ್ಯ ಭೂಮಿಯಲ್ಲಿ ಎಂದು ನೆಲೆ ಸಿಕ್ಕದಿರಲೆಂದು' ಶಾಪವಿಟ್ಟು ಬಸರೂರ ಅರಮನೆಗೆ ಹೋಗುತ್ತಾಳೆ. ಅಲ್ಲಿ, ಹೆತ್ತ ಮಗುವನ್ನು ಹೊತ್ತು ಬಂದ ಸಿರಿಯನ್ನು ಅವಮಾನಿಸ ಬೇಕೆಂದೇ ಕಾದಿದ್ದ ಗಂಡ ಬಂದ ಕಾರಣವೇನೆಂದು ಕೇಳುತ್ತಾನೆ. ಕೆಂಡ ಕಾರುವ ಮನಸ್ಥಿತಿಯ ಸಿರಿ ಅವನ ಪ್ರಶ್ನೆಗೆ ಸರಿಯಾಗಿ 'ಲಜ್ಜೆಗೆಟ್ಟ ನಿನ್ನ ಮುಖವನ್ನು ನೋಡಬಂದಿದ್ದಲ್ಲ, ಮದುವೆಯ ನಂಟನ್ನು ಬಿಡಿಸಿಕೊಳ್ಳಲು ಬಂದಿರುವೆ ಬರ (ವಿಚ್ಛೇದನ) ಕೊಡು' ಎನ್ನುತ್ತಾಳೆ.

'ಛೀ, ಹುಣಿಯಿಲ್ಲದ ಗದ್ದೆಯಂತಿರುವ ಒಂಟಿ ಸೊಕ್ಕಿನ ಹೆಣ್ಣೇ..., ಬರ ಕೊಡಬೇಕಾದರೆ ನಿನ್ನ ತವರಿನಿಂದ ಗಂಡು ಕುಡಿಯೊಂದನ್ನು ಕರೆದು ತಾ... ಎಂದು ಹೀಯಾಳಿಸುತ್ತಾನೆ. ಅಜ್ಜಯ್ಯನನ್ನು ಬಿಟ್ಟರೆ ಸಿರಿಯ ತವರಲ್ಲಿ ಯಾರು ಇಲ್ಲ. ಈಗ ಅಜ್ಜಯ್ಯನೂ ಇಲ್ಲ ಆದರೆ ಸಿರಿ ಧೃತಿಗೆಡುವ ಹೆಣ್ಣಲ್ಲ 'ಈ ನನ್ನ ಕರುಳ ಕುಡಿಯೇ ನನ್ನನ್ನು ಕಾಪಾಡುವ ಗಂಡು ಕುಡಿ...' ಎಂದು ಮಗುವನ್ನೆತ್ತಿ ತೋರಿಸಿ ವಿಚ್ಛೇಧನ ಕೇಳುತ್ತಾಳೆ. 'ಬರ' ಕೊಡಲು ನಾನಾ ಅಡ್ಡಿಗಳನ್ನು ಒಡ್ಡಿದರು ಭಯಪಡದ ಸಿರಿ ಬಸರೂರ ಅರಮನೆಯ ಮೆಟ್ಟಿಲು ಹತ್ತಿ, ಬಾಗಿಲು ದಾರಂದಕ್ಕೆ ತನ್ನ ಕೈಗಳನ್ನಪ್ಪಳಿಸಿ ಕೈ ಬಳೆಗಳನ್ನು ಒಡೆದು, ಮೂಗುತಿ ಕಿತ್ತು ಅವನ ಮೂತಿಗೆಸೆದು ಕರಿಮಣಿ ತುಂಡರಿಸಿ ಚಾವಡಿಗೆಸೆದು, 'ಇನ್ನು ಮುಂದಾದರೂ ಯಾವುದೇ ಹೆಣ್ಣಿಗೆ ಇಂತಹ ಹೀನ, ದುಷ್ಟ ಗಂಡನೊಡನೆ ಬಾಳುವ ಗೋಳು ತಪ್ಪಬೇಕು. ಹೆಣ್ಣಿಗೂ ಎರಡನೆ ಮದುವೆಯಾಗುವ ಕಟ್ಟು ಬರಬೇಕು' ಎಂದು ಅಲ್ಲಿಂದ ಮಾಬುಳ ನದಿಯತ್ತ ಬಂದು 'ತನಗೆ ಒದಗಿ ಬಂದ ದೇಶಾಂತರ ಸ್ಥಿತಿ ಈ ಬಸರೂರಿನ ಅರಮನೆ ಮಂದಿಗೂ ಒದಗಿ ಬರಲಿ... ಇಲ್ಲಿನ ಸಿರಿವಂತಿಕೆ ಇಂಗಿ ಹೋಗಿ

ಅರಮನೆಯಿಡೀ ದುರ್ಭಿಕ್ಷೆ ಕಾಡಲಿ ; ವಿಷಯ ಲಂಪಟ ಗಂಡ ಭಿಕ್ಷೆ ಬೇಡಿಕೊಂಡು ನನ್ನಂತೇ ದೇಶಾಂತರ ಹೋಗುವಂತಾಗಲಿ' ಎಂದು ಶಪಿಸಿದಳು. ನದಿ ದಾಟಿ ನಿಟ್ಟುಸಿರು ಬಿಟ್ಟು ತನ್ನ ವಿವಾಹದ ನಂಟು ಮುರಿದುಬಿತ್ತೆಂದು ನಿರಾಳತೆಯ ನಿಟ್ಟುಸಿರು ಬಿಟ್ಟಳು. ವಿಚ್ಛೇದಿತ ಸಿರಿ ಎದೆಗುಂದಲಿಲ್ಲ, ಅಳುಕಲಿಲ್ಲ, ಅಳಲಿಲ್ಲ. ಕಾಲಂತರದಲ್ಲಿ ಕಥೆ ನೆಡೆದು ಕೊಟ್ರಾಡಿಯ ಕೊಡ್ಸರಾಳ್ವ ಎಂಬ ಸಂಭಾವಿತ ಜಮೀನ್ದಾರನನ್ನು ಮರು ಮದುವೆ ಮಾಡಿಕೊಳ್ಳುತ್ತಾಳೆ. ಈ ಸಿರಿ ಸಂಘರ್ಷದ ಸಿರಿ. ಅಲಕ್ಷಿತ ಸಮುದಾಯಕ್ಕೆ ಒಂದು ಹೊಸ ಮಾದರಿ ವ್ಯವಸ್ಥೆಯನ್ನು ನಿರ್ಮಿಸಿದ ಸಿರಿಯ ಪರಿ, ಸ್ತ್ರೀ ಸಮುದಾಯಕ್ಕೆ ಹೊಸ ಮೌಲ್ಯಗಳನ್ನು ಕಟ್ಟಿಕೊಡುತ್ತದೆ. ಸಮಾಜದ ಸ್ಥಾಪಿತ ವ್ಯವಸ್ಥೆಗಳನ್ನು ಧಿಕ್ಕರಿಸಿ ಸುಭದ್ರವಾದ ಹೊಸ ಬದುಕನ್ನು ರೂಪಿಸುವ ಮಾದರಿಯಾಗುತ್ತವೆ.

೩.೨. ಸಾಮಾಜಿಕ ಕಾಳಜಿಯುಳ್ಳ ಕಥೆಗಳು

ಒಬ್ಬ ಲೇಖಕ ಅಥವಾ ಲೇಖಕಿ ತನ್ನ ಸಮಕಾಲೀನ ಸಮಾಜವನ್ನು ಚಿತ್ರಿಸುವಾಗ ಆ ಸಮಾಜದ ಬಗ್ಗೆ ಅವನ ನಿಲುವುಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವ್ಯಕ್ತವಾಗುತ್ತವೆ. ಅಂಥ ನಿಲುವುಗಳು ಈ ಇಬ್ಬರು ಲೇಖಕಿಯರಲ್ಲಿ ಹೇಗೆ ವ್ಯಕ್ತವಾಗಿವೆ ಹಾಗೂ ತಮ್ಮ ಕಥೆಗಳಲ್ಲಿ ಯಾವ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾರೆ ಯಾವ ಮೌಲ್ಯಗಳನ್ನು ಟೀಕೆ ಮಾಡುತ್ತಾರೆ ಎನ್ನುವುದನ್ನು ಅಧ್ಯಯನದ ಈ ಭಾಗದಲ್ಲಿ ಗಮನಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

"ನಾಗವೇಣಿಯವರು ವಿವರಿಸುವ ಸಮಾಜ ಒಂದು ವಿಧಾನದಲ್ಲಿ ಹಾಜರಾಗಿದೆ. ಅದನ್ನು "ಪಠ್ಯದಲ್ಲಿ ಹಾಜರಾದ ಸಮಾಜ"ವೆಂದು ನಾವು ಕರೆಯಬಹುದು. ಆದರೆ ಮಾನವ ಜಗತ್ತಿನಲ್ಲಿ ಸಮಾಜಕ್ಕೆ ಬೇರೆ ಮುಖಗಳೂ ಇರಬಹುದು. ಅದಕ್ಕೆ ದೊಡ್ಡ ಚರಿತ್ರೆಯೂ ಇದೆ. ಹಾಗೆ ನೋಡುವುದಿದ್ದರೆ ಸಮಾಜವೆನ್ನುವುದು ಲೇಖಕರಿಗೆ ಅವರವರ ಆಯ್ಕೆಗೆ ಸಂಬಂಧಿಸಿಕೊಂಡು ರೂಪುಗೊಳ್ಳುತ್ತವೆ. ಸಮಾಜವೂ ಆಯ್ಕೆಯ ಪ್ರಕ್ರಿಯೆಗೆ ಗುರಿಯಾಗುತ್ತದೆ. "ಆಯ್ಕೆ"ಯು ನಾಗವೇಣಿಯವರಿಗೆ ತೀರಾ ವೈಯಕ್ತಿಕವಲ್ಲ. ಅದಕ್ಕೆ ಬಹಿರ್ಮುಖತೆಯಿದೆ. ಗಂಡು ಹೆಣ್ಣಿನ ಸಂಬಂಧ ಪಠ್ಯದ ಹೊರಗೆ ಬೇರೆ ಬೇರೆ ರೀತಿಯಿರಬಹುದು. ಕಥೆಗಾರ್ತಿಯಾಗಿ ನಾಗವೇಣಿಯವರು ಅದನ್ನು ನಿರ್ದಿಷ್ಟ ಸಂಯೋಜನೆಗೆ ಗುರಿಪಡಿಸಿದ್ದಾರೆ. ಅದು ಗಮನಾರ್ಹ ಕೂಡಾ. ಅವರ ಕೆಲವು ಕಥೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಮಾಜವಿದೆ. ಆದರೆ ಅವರ ಕಥೆಗಳ ಆಚೆಗು ದಕ್ಷಿಣ ಕನ್ನಡ ಜಿಲ್ಲೆಯಿದೆ. ದಕ್ಷಿಣ ಕನ್ನಡ ಜಿಲ್ಲೆ ವಸಾಹತೋತ್ತರ ಸಂದರ್ಭದಲ್ಲಿ ಬದಲಾಗುತ್ತಲೇ ಬಂದಿದೆ. ಇದು ಎಲ್ಲಾ ಜಿಲ್ಲೆಯ ಎಲ್ಲಾ ಊರುಗಳ ಕಥೆಯೂ ಹೌದು. ನಾಗವೇಣಿಯವರ ಕಥೆಗಳು ಬದಲಾಗುತ್ತಿರುವ ದಕ್ಷಿಣಕನ್ನಡ ಜಿಲ್ಲೆಯ ವಸಾಹತೋತ್ತರ ಕಾಲದ ಸಮಸ್ಯೆಯ ಕುರಿತು ಹೇಳುತ್ತದೆ. ಇದನ್ನು ಇನ್ನೊಂದು ದಿಕ್ಕಿನಿಂದ ನೋಡಿದರೆ ಇವೆಲ್ಲವೂ ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಚರಿತ್ರೆಯ ನಿರೂಪಣೆಗಳಾಗಿವೆ. ಬದಲಾಗುತ್ತಿರುವ ಸಮಾಜ ಅಲ್ಲಿನ ಸಂಬಂಧಗಳು ನಾಗವೇಣಿಯವರಿಗೆ ಮುಖ್ಯ".[೧೭]

ಬದಲಾಗುತ್ತಿರುವ ಸನ್ನಿವೇಶ ಮತ್ತು ಸ್ಥಳಗಳಲ್ಲಿ ಮನುಷ್ಯರ ಸ್ಥಾನಮಾನವೇನು ಎಂಬುದನ್ನು ನಾಗವೇಣಿಯವರ ಕಥೆಗಳಲ್ಲಿ ಕಾಣಬಹುದಾಗಿದೆ. ಬಹುಪಾಲು ಇವರ ಕಥೆಗಳಲ್ಲಿ ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯವಾದ ಏಕಕೇಂದ್ರಿತ ಚಿಂತನೆಗಳ ವಿರುದ್ಧ ಬಂದ ಕಥೆಗಳಾಗಿವೆ. ವ್ಯಕ್ತಿ, ಕುಟುಂಬ, ಪರಿಸರ, ಜಾತಿ, ಲಿಂಗ ಮುಂತಾದವು ಮುಖ್ಯ ಮಾದರಿಯಲ್ಲಿ ಬರುತ್ತವೆ. ಗ್ರಾಮೀಣ ಪರಿಸರದ ಜಾತಿ ಮತ್ತು ವರ್ಗಗಳ ಪ್ರಶ್ನೆಯನ್ನು ಎತ್ತಿಕೊಳ್ಳುತ್ತಲೆ ಅಲ್ಲಿರುವ ಲಿಂಗ ತಾರತಮ್ಯದ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಾರೆ.

'ಸೇವಂತಿ ಓಲೆ' ಕಥೆಯ ಸೇವಂತಿ ಮೂಲ್ಯ ಜನಾಂಗಕ್ಕೆ ಸೇರಿದ ಸೀಸು ಮೂಲ್ಯನ ಮಗಳು, ತ್ಯಾಂಪಣ್ಣ ಶೆಟ್ಟರ ಮಗ ಗಂಗಯ್ಯ ಮೆಟ್ರಿಕ್ ಕಲಿತು ಕಿನ್ನಿಮೂಲ್ಕಿಗೆ ಹೋಗಿ ಆಯುರ್ವೇದದ ವೈದ್ಯನಾಗಿ ಮರಳಿ ಬಂದು ಕಲಿಕೆಯನ್ನು ವೃತ್ತಿಯಾಗಿ ಮುಂದುವರಿಸದೆ ಬರಿ ಹವ್ಯಾಸವಾಗಿ ಮುಂದುವರಿಸಿದ್ದಾನೆ. ಇಲ್ಲಿ ಮೂಲ್ಯ ಜಾತಿಯ ಸೇವಂತಿಗೂ ಶೆಟ್ಟರ ಜಾತಿಯ ಗಂಗಯ್ಯನಿಗೂ ಪ್ರೇಮವಾಗುತ್ತದೆ. ಜಾತಿಯ ಸಮಸ್ಯೆಯ ಜೊತೆಗೆ ವರದಕ್ಷಿಣೆ ಸಮಸ್ಯೆಯನ್ನು ಈ ಕಥೆಯಲ್ಲಿ ಗಮನಿಸಬಹುದು. ಇವರಿಬ್ಬರ ಪ್ರೀತಿಯಾಟದ ಗುಸುಗುಸು ತ್ಯಾಂಪಣ್ಣ ಶೆಟ್ಟರ ಮಡದಿ ಕೂಸಕ್ಕೆಯವರ ಕಿವಿಗೆ ಎಂದು ತಲುಪಿತೊ ಅಂದೇ ಗಂಡನಿಗೂ ಹೇಳಿ ತಕ್ಷಣವೇ ಕಿನ್ನಿಮೂಲ್ಕಿಯ ತನ್ನ ನಾದಿನಿಯ ಮಗಳನ್ನು ತಂದು ಮನೆ ತುಂಬಿಸಿಕೊಳ್ಳುವಂತೆ ಸಲಹೆ ನೀಡಿದ್ದಳು.

ಈ ಜಾತಿಯಲ್ಲೆ ಹಾಗೆ, ಹುಡುಗನ ಎತ್ತರಕ್ಕಿಷ್ಟು, ತೂಕಕ್ಕಿಷ್ಟು, ಆಸ್ತಿಗಿಷ್ಟು, ಅಂತಸ್ತಿಗಿಷ್ಟೊಂತ ವರದಕ್ಷಿಣೆ ನೀಡುವ ಸಂಪ್ರದಾಯವಿದೆ. ತ್ಯಾಂಪಣ್ಣಶೆಟ್ಟರ ಮಗಳು ಸಿರ್ದೇವಿಯ ಎಡಕಣ್ಣು ಸ್ವಲ್ಪ ಕೋಚು, ನೋಡುವುದಕ್ಕೆ ಸ್ವಲ್ಪ ಗಿಡ್ಡ, ಅಡ್ಡ ಬೇರೆ ಬೆಳೆದಿದ್ದಾಳೆ. ನೋಡಿದ ಹುಡುಗ ಒಂದೇ ದಿಟ್ಟಿಗೆ ಖಂಡಿತಾ ಒಪ್ಪುವುದಿಲ್ಲ ಹಾಗಾಗಿ ಬದಿ (ವರದಕ್ಷಿಣೆ) ಸ್ವಲ್ಪ ಗಟ್ಟಿಯಾಗಿಯೆ ಕೊಡಬೇಕಾಗುತ್ತದೆ. ನಮ್ಮ ಗಂಗಯ್ಯ ಶೆಟ್ಟಿಗೇನಾದರೂ ಹೆಣ್ಣು ಹುಡುಕ ಹೊರಟರೆ ಕಣ್ಣು ಮುಚ್ಚಿ ಬರಾಬರಿ ಐವತ್ತು ಸಾವಿರವಾದರೂ ವರದಕ್ಷಿಣೆ ಬಂದು ಅವರ ಕಾಲಿಗಡ್ಡ ಬೀಳುತ್ತದೆ. ಇವನ ಬದಿ ತೆಗೆದುಕೊಂಡು ಮಗಳಿಗೆ ಕೊಡುವುದು ಎಂದು ಆಸೆಪಟ್ಟಿದ್ದ. ಆದರೆ ಮಗ ಬೇರೆ ಜಾತಿಯವಳನ್ನ ಪ್ರೀತಿಸುತ್ತಿರುವುದರಿಂದ ವರದಕ್ಷಿಣೆ ಕಾದು ಕೂರುವ ಬದಲು ಮನೆತನದ ಮರ್ಯಾದೆ ಉಳಿಸಿಕೊಳ್ಳಲು ಜಾತಿ ಹುಡುಗಿಯನ್ನೊಂದು ಮನೆ ತುಂಬಿಸಿಕೊಳ್ಳುವ ಹವಣಿಕೆಯಲ್ಲಿ "ಪಗರ್ ಸಾಟೆ ನಂಟಸ್ತ"ನ ಮಾಡಿಕೊಳ್ಳುತ್ತಾರೆ. ಅಂದರೆ ಒಂದೇ ಮನೆಯಿಂದ ಹೆಣ್ಣುಗಂಡು ತರುವುದು, ಹೆಣ್ಣು-ಗಂಡು ಕೊಡುವುದು, ಕಿನ್ನಿಮುಲ್ಕಿಯಲ್ಲಿರುವ ತಂಗಿಯ ಮಗಳು ವನಮಾಲಳನ್ನು ಗಂಗಯ್ಯನಿಗೆ ತರುವುದು, ಆಕೆಯ ಮಗ ಶೇಖರನಿಗೆ ತಮ್ಮ ಸಿರ್ದೇವಿಯನ್ನು

ಕೊಡುವುದು ಎಂದು ತೀರ್ಮಾನಿಸಿಯೇ ಬಿಟ್ಟ. ಜಾತಿಯ ಬಿಗಿ ಹಿಡಿತದ ಸ್ವರೂಪವು ಇದರಲ್ಲಿ ಮುಖ್ಯವಾಗಿದೆ. ಗಂಗಯ್ಯ ಪರಿಸ್ಥಿತಿಯ ಒತ್ತಡಕ್ಕೆ ಬಲಿಯಾದಾಗ ಸೇವಂತಿ ಗಂಗಯ್ಯರ ಪ್ರೇಮ ಸಂಬಂಧಕ್ಕೆ ಬಾದೆಯುಂಟಾಗುತ್ತದೆ. ಕಥೆಯ ಕೊನೆಯಲ್ಲಿ ಜಾತಿಯನ್ನು ಹೊಳೆಗೆ ಬಿಸಾಕುವಂತೆ ಸೇವಂತಿ ಗಂಗಯ್ಯ ಮಾಡಿಸಿಕೊಟ್ಟ ಓಲೆಯನ್ನು ನೀರಿಗೆ ಬಿಸಾಕುತ್ತಾಳೆ. ಜಾತೀಯತೆಯನ್ನು ವಿರೋಧಿಸುವ ಮನಸ್ಸೊಂದನ್ನು ಇಲ್ಲಿ ಗಮನಿಸಬಹುದಾಗಿದೆ.

'ಒಡವೆ' ಕಥೆಯಲ್ಲಿ ಮತ್ತೊಂದು ವಿವಾಹದ ಮತ್ತೊಂದು ಸ್ವರೂಪವನ್ನು ಕಾಣಬಹುದು. ಅಳಿಯ ಸಂತಾನಕಟ್ಟು ಪದ್ಧತಿ ಸಾಮಾಜಿಕ ಪರಿವರ್ತನೆಗೆ ಗುರಿಯಾಗಿರುವುದನ್ನು ಗಮನಿಸಬಹುದಾಗಿದೆ.

ಎಂಕಪ್ಪ ರೈಗಳಿಗೆ ಮೂರು ಗಂಡು ಸಂತಾನದ ನಂತರ ಅದೃಷ್ಟದ ಬೊಟ್ಟಾಗಿ ಹುಟ್ಟಿದ ದಾರುವಿಗೆ ಗರ್ಭಚೀಲವೇ ಇಲ್ಲದ ಕಾರಣ ಅವಳು ಪುಷ್ಪಾವತಿಯಾಗುವುದಿಲ್ಲ. ಆಕೆಗೊಂದು ಗಂಡು ದಿಕ್ಕು ಬೇಕೆಂದು ಪಾಪಪುಣ್ಯ ನೋಡಿ ಸ್ವತಂತ್ರ್ಯದ ಹುಟ್ಟು, ಖಾದಿಯ ಹುಚ್ಚು ಹಿಡಿಸಿಕೊಂಡ ಮಾರಪ್ಪ ಮದುವೆಯಾಗುತ್ತಾನೆ.

ಸೂರಕ್ಕೆ ದಾರುವನ್ನು ಸೊಸೆಯಾಗಿ ತರಲು ಒಪ್ಪಿಕೊಂಡಿದ್ದರು. ಹಾಗೆ ಒಪ್ಪಿಕೊಳ್ಳಬೇಕಾದರೂ ಆಕೆಯಲ್ಲಿ ಇನ್ನೊಂದು ಲೆಕ್ಕಾಚಾರವಿತ್ತು. **"ಕಬ್ಬಿಣದ ಮಣ್ಣು ಕಬ್ಬಿಣಕ್ಕೆ ಕೇಡು' ಎಂದು ಬಲ್ಲಳು ಆ ತಾಯಿ, ಎಲ್ಲವೂ ಸರಿ ಇರುವಾಕೆಯನ್ನು ಕಟ್ಟಿಕೊಂಡರೂ ಇವ ನೆಟ್ಟಗೆ ಮನೆಯಲ್ಲಿದ್ದು ಸಂಸಾರ ಮಾಡುವವನಲ್ಲ, ಬಂದ ಹೆಣ್ಣಿಗೂ ದುಃಖ ಅದಕ್ಕೇ ದಾರುವನ್ನು ಮನೆತುಂಬಿಸಿಕೊಳ್ಳುವ ಮಗನ ಮಾತಿನ ಬಗ್ಗೆ ಆಕೆ ಅಪಸ್ವರ ಎತ್ತಲಿಲ್ಲ. ಕಬ್ಬಿಣಕ್ಕೆ ಹಿಡಿಯುವುದೇ ಹಿತ್ತಾಳೆ ಬೆಸುಗೆ ಎಂದು ಸೂರಕ್ಕೆ ಬಲ್ಲಳು. ಜೊತೆಗೆ ಶೆಟ್ಟರು ಬೆನ್ನಲ್ಲೇ ಕಳುಹಿಸಿಕೊಡಲಿರುವ ಆಸ್ತಿ, ಹಣ, ಒಡವೆಗಳೆಲ್ಲ ಆಕೆಯ ಬಾಯಿಗೆ ಬೀಗ ಜಡಿದವು. ಯಾವ ಹಿತ್ತಾಳೆ ಮಾತುಗಳಿಗೂ ಆಕೆ ಕಿವಿಕೊಡಲಿಲ್ಲ".**[೧೮]

ದಾರು ಮಾರಪ್ಪನ ಮಡದಿಯಾಗಿ ಬಂದ ಮೇಲೆ, ಅರಸನ ಅಂಕೆಯಲ್ಲಿ ಭೂತದ ಕಾಟವಿಲ್ಲ – ಎಂಬಂತೆ ದಾರು ತೆಗೆದೆದ್ದು ದಾರು ಬಿಟ್ಟದ್ದು. ಆಕೆ ಅತ್ತೆ ಮನೆಯಲ್ಲಿ ಅಡುಗೆಮನೆ ಕಡೆ ತಲೆ ಹಾಕಿಯೂ ಮಲಗಲಿಲ್ಲ. ಗಂಡನ ಎಂಟು ಮುಡಿ ಗದ್ದೆಯ ಜತೆಗೆ ಅಪ್ಪ ಎಂಕಪ್ಪರೈಗಳು ಸ್ವ–ಇಚ್ಛೆಯಿಂದ ಅಳಿಯನಿಗೆ ಕೊಡುಗೆಯಾಗಿ ಕೊಟ್ಟ ನಾಕು ಮುಡಿ ಗದ್ದೆ ತೋಟಗಳ ಮೇಲ್ವಿಚಾರಣೆ ಎಲ್ಲ ದಾರುವಿನದ್ದಾಯಿತು. ಆಕೆಯದು ಅಳಿಯಕಟ್ಟು ಸಂತಾನವಾದರೂ ತವರುಮನೆಯಲ್ಲಿ ಆಕೆ ಮತ್ತೆ ಕಾರುಬಾರು ನಡೆಸಲು ಇಚ್ಛಿಸಲಿಲ್ಲ. ಆ

ಮನೆಯ ನೆನಪನ್ನೇ ಮರೆತಳು ಅಥವಾ ಮರೆತಂತೆ ನಟಿಸಿದಳು ಹಾಗೆ ಸ್ವಲ್ಪ ಬದಲಾವಣೆಯೊಂದಿಗೆ ಬದುಕಿದಳು.

ಅಳಿಯ ಸಂತಾನ ಕಟ್ಟಿನಲ್ಲಿ ಆಸ್ತಿಯೆಲ್ಲ ಮಗಳಿಗೆ ಸಂಬಂಧಿಸಿದ್ದು, ಹಿರಿಯ ಮಗಳಿಗೆ ಹೆಚ್ಚಿನ ಹಕ್ಕು, ಹೆಣ್ಣುಮಕ್ಕಳ ಆಡಳಿತ ಕಾಲ ಅದು. ಅಳಿಯಕಟ್ಟಿನ ಅರಸಿಯರಂತೆ ಬಾಳಿದ್ದರು ಆದ್ರೆ ಈ ಕಥೆಯಲ್ಲಿ ದಾರು ಹಾಗೆ ನಡೆದುಕೊಳ್ಳದೆ ಇರುವುದು ಅಳಿಯ ಸಂತಾನಕಟ್ಟು ಕೂಡ ಸಾಮಾಜಿಕ ಪರಿವರ್ತನೆಗೆ ಗುರಿಯಾಗಿದ್ದನ್ನು ಗಮನಿಸಬಹುದು.

ನಾಗವೇಣಿಯವರ 'ಧಣಿಗಳ ಬೆಳ್ಳಿಲೋಟ' ಕಥೆ ಯಜಮಾನ ಪರಂಪರೆಯ ವಿರುದ್ಧ ಸಂಘರ್ಷದ ರೂಪಕವಾಗಿ ಕಾಣಿಸಿಕೊಳ್ಳುತ್ತದೆ. ಈ ಕಥೆಯಲ್ಲಿ ಮಾಡದ ತಪ್ಪಿಗೆ ಕಳ್ಳತನದ ಅಪವಾದ ಹೊತ್ತುಕೊಂಡು, ದುಡಿತಕ್ಕೆ ಪಡಿಯಿಲ್ಲದ ಒಂಭತ್ತು ತಿಂಗಳು ಚಿನ್ನಮ್ಮನ ಕುಟುಂಬ ಅವಮಾನದ ಬೇಗುದಿಯಲ್ಲಿ ಬೇಯುತ್ತದೆ. ಹೊಳೆಯಂಚಿನ ಮಣ್ಣು ಕುಸಿದು ಪಾತ್ರೆಗಳ ಜೊತೆ ಬೆಳ್ಳಿ ಲೋಟವು ನೀರಿಗೆ ಬೀಳುತ್ತದೆ. ಅಸಹಾಯಕನಾದ ಕುದುಪ ಧಣಿಗಳ ಅಂಗಳಕ್ಕೆ ಬಂದು ಸತ್ಯ ಹೇಳಿದರು ಧಣಿಯ ಆರ್ಭಟ ಹೆಚ್ಚಾಗುತ್ತೆ. "ಕುದುಪ ಧಣಿಗಳ ಕೈಕಾಲು ಹಿಡಿದು ನಡೆದ ನಿಜಸ್ಥಿತಿ ವಿವರಿಸಿದರೂ ಅವರು ಒಪ್ಪಲೊಲ್ಲರು ಧಣಿಯವರು ಎಂದಾದರೂ ಒಕ್ಕಲ ಮಕ್ಕಳನ್ನು ನಂಬಿದ್ದುಂಟೆ?" 'ಇದೆಲ್ಲ ಸಾಕು ಮಾರಾಯ, ಯಾವಾತ್ತೂ ನಮ್ಮ ಮುಸುರೆ ಪಾತ್ರೆಗಳನ್ನ ನುಂಗದ ಹೊಳೆ ಇವತ್ತು ನನ್ನಪ್ಪ ಮದುವೆಯಲ್ಲಿ ಕೊಟ್ಟ ಬೆಳ್ಳಿಲೋಟವನ್ನು ನುಂಗಿತನಾ' ಎಂದು ಧಣಿಪತ್ನಿಯು ಚೀರಿಕೊಳ್ಳುತ್ತಾಳೆ. ಎಷ್ಟು ಹೇಳಿದರು ಕೇಳದೆ ಧಣಿಗಳು ಗುಡ್ಡನ ಬಾಯಿ ಬಿಡಿಸಲು ಆತನ ಮೈ ಮೇಲಿನ ಚರ್ಮಸುಲಿಯುವಂತೆ ಅಂಗಳದ ಹೊಂಗಾರೆ ಮರಕ್ಕೆ ಕಟ್ಟಿ ತೆಂಗಿನ ಕೊತ್ತಳಿಗೆಯಲ್ಲಿ ಹೊಡೆಯುತ್ತಾರೆ. ತನ್ನ ಕರುಳ ಕುಡಿಯ ಚೀರಾಟ ನರಳಾಟ ನೋಡಲಾಗದೆ ಕೋಡ್ದಬ್ಬು ದೈವದ ಆಣೆ ಇಟ್ಟು ಬೆಳ್ಳಿಲೋಟದ ಹಣವನ್ನು ವರ್ಷಾನುಗಟ್ಟಲೆ ನಿಮ್ಮಲ್ಲಿ ಪಡಿಯಿಲ್ಲದೆ ದುಡಿದು ತೀರಿಸುವುದಾಗಿ ಹೇಳುತ್ತಾಳೆ.

ಇಲ್ಲಿ ಧಣಿಯವರಿಗೆ ದರ್ಪದಿಂದ ಯಜಮಾನಿಕೆ ಮಾಡುವುದೊಂದನ್ನ ಬಿಟ್ಟರೆ ಬೇರೇನು ಗೊತ್ತಿಲ್ಲ ಅನಿಸುತ್ತದೆ. ಕುದುಪ ಮೂಳೆ ಮುರಿದು ಹೋಗುವಂತಹ ಹೂಳೆತ್ತುವ ಕೆಲಸ ಮಾಡುತ್ತ ಸುಸ್ತಾದ ಕುಡುಪ ಅಲ್ಲೆ ನೀರೊಳಗೆ ಕುಸಿದು ಕೂತರೆ ದರ್ಪದ ಧಣಿ ಸಿಟ್ಟಿನಿಂದ ಪಿತ್ತವೇರಿಸಿಕೊಂಡವನಂತೆ 'ಎದ್ದೇಳೋ ಮೂರ್ಕಾಸಿನವನೆ... ಪಡಿ ಅಳೆಯುವಾಗ ಪಾವಕ್ಕಿ ಕಮ್ಮಿ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು? ಎಂದು ಸಿಡುಕುತ್ತಾನೆ.

ಯಜಮಾನ ಪರಂಪರೆಯ ಇಂಥ ಮನುಷ್ಯರಿಗೆ ಬದುಕಿನ ಮೌಲ್ಯಗಳು ಬೇಕಾಗಿಲ್ಲ ಧಣಿಯವರಿಗೆ ತನ್ನ ಬೆಳ್ಳಿಲೋಟ ಮಾತ್ರ ಮುಖ್ಯ. ಕಳ್ಳತನದ ಆಪಾದನೆಯ ಮೇಲೆ ಪಡಿಯಿಲ್ಲದೆ ದುಡಿಯುತ್ತಿರುವ ಕುದುಪನ ಕುಟುಂಬದ ದುಡಿತ ಮಾತ್ರ ಮುಖ್ಯ. ಆದ್ರೆ ಚಿನ್ನಮ್ಮನಿಗೆ ಜೀವನ ಮೌಲ್ಯಗಳು ಮುಖ್ಯ. ಕಳ್ಳತನದ ಅಪವಾದದಿಂದ ನೋವು ಅವಮಾನದ ಜೊತೆಗೆ ಪರಿತಪಿಸುತ್ತಾಳೆ. ಲೋಟ ಸಿಕ್ಕಾಗ ಬೆಳ್ಳಿಗೆ ಮಣ್ಣಿಗಿಂತಲೂ ಬುರ್ನಾನು ಬುದ್ಧಿ ಎಂದು, ಮುರ್ರಾಕಿಸಿನದು ಎಂದು ನೀರಿಗೆಸೆಯುತ್ತಾಳೆ. ಚಿನ್ನಮ್ಮನಿಗೆ ಜೀವನ ಮೌಲ್ಯಗಳ ಜೊತೆಗೆ ಪ್ರತಿಭಟನೆಯು ಮುಖ್ಯ. ಲೇಖಕಿಗೆ ಸಾಮಾಜಿಕ ಮೌಲ್ಯಗಳು ಮುಖ್ಯ. ವಸಾಹತೋತ್ತರ ಸಂದರ್ಭದ ಪ್ರಮುಖ ಚಾರಿತ್ರಿಕ ಆಯ್ಕೆಗಳು ಮೀಯುವ ಆಟ ಸಂಕಲನದ ಕೆಲವು ಕಥೆಗಳಲ್ಲಿ ಈ ದೃಷ್ಟಿಯಿಂದ ಸಾಮಾಜಿಕತೆಯ ಬೇರುಗಳಿರುವುದನ್ನು ಗಮನಿಸಬಹುದಾಗಿದೆ. ಬದಲಾಗುತ್ತಿರುವ ಸನ್ನಿವೇಶಗಳು ಮನುಷ್ಯನ ಸ್ಥಾನವೇನು ಎಂಬುದನ್ನು ಹುಡುಕಿಕೊಡುತ್ತವೆ ಎಂಬುದನ್ನು ಈ ಕಥೆಯಲ್ಲಿ ಗಮನಿಸಬಹುದಾದ ಅಂಶವಾಗಿದೆ. ನಿರ್ದಿಷ್ಟ ಕಾಲದ ಪರಿವರ್ತನೆಯ ವ್ಯಾಖ್ಯಾನಗಳು ಕೊನೆಯಲ್ಲಿ ಮಾನವೀಯತೆಯ ಮೌಲ್ಯವನ್ನು ಮರೆಯುವುದನ್ನು ಇಲ್ಲಿನ ಕಥೆಗಳಲ್ಲಿರುವುದನ್ನು ಗುರುತಿಸಬಹುದಾಗಿದೆ.

ಸಾಮಾಜಿಕ ಕಾಳಜಿಯನ್ನ ಗುರುತಿಸಬಹುದಾದ ನಾಗವೇಣಿಯವ ಕಥೆಗಳಲ್ಲಿ 'ಇನಾಮು' ಕಥೆಯು ಒಂದು. ಇನಾಮು ಯಾರಿಗೆ ಬೇಕಿಲ್ಲ ಹೇಳಿ? ಆದರೆ ಈ ಕಥೆಯಲ್ಲಿ ಬರುವ ಕಾಸಿಂ ಬೊಗ್ಗುರನ ಕುಟುಂಬಕ್ಕೆ ಬೇಕಾಗಿಲ್ಲ. ಕಾರಣ ಬಡತನ, ಕಾಸಿಂಬೊಗ್ಗರ ಮತ್ತು ತುಂಗಳ ಮಗ ಗಂಗಯ್ಯ ಈಗ ಎರಡೂವರೆ ವರ್ಷದಲ್ಲಿ ಅದಕ್ಕೆ ಇದಕ್ಕೆ ಅಂತ ಇನಾಮು ತೆಗೆದುಕೊಳ್ಳುತ್ತಲೆ ಇದ್ದಾನೆ. ಈ ಬಾರಿಯು ಕಡೇ ಖೆಡ್ಡಸದ ದಿವಸ ಗಂಗಯ್ಯನಿಗೆ ಎರಡನೇ ಕ್ಲಾಸಿನಲ್ಲಿ ಕಲಿಕೆಬರಿಕೆಯಲ್ಲಿ ಮುಂದಿದ್ದಾನೆ ಅಂತ ನಾಲ್ಕು ಇನಾಮುಗಳುಂಟು.

ರಂಗಯ್ಯ ಮಾಸ್ತ್ರು ಕೊಡುವ ಇನಾಮುಗಳು ನೀತಿ ಕತೆಯ ಪುಸ್ತಕಗಳು ತುಂಗನಿಗೆ ಮೂರು ಕಾಸಿಗೂ ಬೇಡದ ಬೂಕಗಳು. ಕಷ್ಟ ಸುಖಕ್ಕೆ ಬಾರದ ಈ ಬೂಕಗಳು ಯಾವ ಕರ್ಮಕ್ಕೆ? ಇದರ ಬದಲು ನಾಕು ಕಾಸಾದ್ರೂ ಕೊಡಬಾರದ ಎಂದು ಗೊಣಗುತ್ತಾಳೆ. ಮಗ ಇನಾಮು ತರುವುದು ತುಂಗನಿಗೂ ಖುಷಿಯ ವಿಚಾರವೇ ಆದರೆ ಆಕೆಯನ್ನು ಕಾಡುತ್ತಿರುವುದು ಬಡತನ ದಾರಿದ್ರ್ಯಗಳು. ಬಡವರ ಗುಡಿಸಲಿಗೆ ಇನಾಮು ಅದರಲ್ಲೂ ಈ ತರಹದ ಇನಾಮುಗಳು ಹೇಳಿದ್ದೆ ಅಲ್ಲ ಎನ್ನುವ ಅಭಿಪ್ರಾಯ ತುಂಗನದು.

ಗಂಗಯ್ಯನ ಮುಂದಿನ ಭವಿಷ್ಯವನ್ನು ಒಳ್ಳೆಯ ರೀತಿಯಲ್ಲಿ ರೂಪಿಸುವುದಕ್ಕೆ ನೆರವಾಗಬಹುದಾದ ನೀತಿಕತೆಯ ಪುಸ್ತಕಗಳನ್ನು ಜೋಪಾನವಾಗಿಡಲು ಸಾಧ್ಯವಾಗದಂತೆ ದಾರಿದ್ರ್ಯ ಬಡತನ ಈ ಕುಟುಂಬವನ್ನು ಕಾಡುತ್ತಿದೆ. ಆದರೆ ರಂಗಯ್ಯ ಮಾಸ್ತ್ರ ಇಂಥ ಸಂಕಷ್ಟಗಳ ಬಗ್ಗೆ ಅರಿವು ಮೂಡುವುದಕ್ಕೆ ಮತ್ತು ಅದರಿಂದ ಪಾರಾಗಲು ಬೇಕಾಗಬಹುದಾದ ಶಿಕ್ಷಣವನ್ನು ನೀಡುವುದರ ಜೊತೆಗೆ ಗಂಗಯ್ಯನಂತ ಪ್ರತಿಭಾವಂತ ಮಕ್ಕಳನ್ನು ಉತ್ತೇಜಿಸುವುದಕ್ಕಾಗಿ ಇನಾಮು ನೀಡುತ್ತಾನೆ. ಆದರೆ ಹುಸೇನ್‌ಬ್ಯಾರಿ ಅಂಗಡಿಗೆ ಮಾರಿದರು ಪುಡಿಗಾಸು ಸಿಗದ ಈ ಇನಾಮು ತನ್ನ ಮಗನಿಗೆ ಕೊಡುವುದೇ ಬೇಡ ಎನ್ನುತ್ತಾಳೆ.

“ನಿನ್ನ ಇನಾಮನ್ನು ನಿನ್ನಾ... ಮಾಸ್ಟನಿಗೆ ಅವನಪ್ಪನ ಮನೆಯಲ್ಲಿಟ್ಟು ಜಾಗ್ರತೆ ಮಾಡ್ಲಿಕ್ಕೆ ಹೇಳಾ..., ನನ್ನ ಸೋರುವ ಗುಡಿಸಲ ಸೆಗಣಿ ನೆಲದಲ್ಲಿ ಒಂದು ಮಳೆ ಬಂದರೆ ನೀರ ಪಸೆ ಏಳುತ್ತೆ... ನಾಲ್ಕು ಬಿಸಿಲು ಬಿದ್ದರೆ ಗೆದ್ದಲ ಹಿಂಡು ಕಾಡುತ್ತೆ... ನಿನ್ನ ಇನಾಮು ಗುಡ್ಡೆ ಹಾಕುವುದಕ್ಕೆ ನನ್ನ ಗುಡಿಸಲಲ್ಲಿ ಜಾಗ ಇಲ್ಲ... ಬೇಕಿದ್ದರೆ, ನಿನ್ನ ಅಪ್ಪನ ಎದೆಗೂಡಿಗೆ ಬಿಗಿಯುವಾ ಆ ಇನಾಮಿನ ಗಂಟನ್ನ... ಎಂದು ಮಾಸ್ತ್ರ ಮಾತಿಗೆ ತಕ್ಕಂತೆ ತಾಳ ಹಾಕುತ್ತಿದ್ದ ಗಂಡನನ್ನು ತದಕಿ ಮಗನನ್ನ ಉದ್ದೇಶಿಸಿ ಬೈಯುತ್ತಿದ್ದಳು ತುಂಗ. ಮಗ ಇನಾಮು ತಂದಾಗಲೆಲ್ಲಾ’.[೧೯] ಈ ಕಥೆ ಬಡತನ, ದಾರಿದ್ರ್ಯಗಳು ಮಾತ್ರವಲ್ಲದೆ ಮುಗ್ಧತೆ, ಅರಿವಿಲ್ಲದ ದಡ್ಡತನದ ಜೊತೆಗೆ ಶಿಕ್ಷಣದ ಅವಶ್ಯಕತೆಯನ್ನು ಹೇಳುತ್ತದೆ.

ಈ ಸಮಾಜವನ್ನು ಕಿತ್ತು ತಿನ್ನುತ್ತಿರುವ ಬಡತನ ದಾರಿದ್ರ್ಯಗಳು ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತಿವೆ. ಇಲ್ಲಿ ತುಂಗನಿಗೂ ತನ್ನ ಮಗ ತರುವ ಇನಾಮಿನ ಬಗ್ಗೆ ಖುಷಿ ಇದೆ. ಆದರೆ ಪುಸ್ತಕದ ರೂಪದ್ದು ಬೇಡವಾಗಿದೆ. ಮೇಷ್ಟ್ರಿಗೆ ಶಿಕ್ಷಣದ ಮಹತ್ವವನ್ನು ಹೇಳುವ ಜೊತೆಗೆ ಬಡನತ ದಾರಿದ್ರ್ಯಕ್ಕೆ ಕಾರಣವನ್ನು ಅವರೇ ಹುಡುಕಿಕೊಂಡು ಪರಿಹಾರವನ್ನು ಹುಡುಕಿಕೊಳ್ಳುವುದಕ್ಕೆ ಸಹಾಯಕವಾಗುವ ನೀತಿಕತೆಗಳ ಮಹತ್ವ ತುಂಬಾ ಮುಖ್ಯವಾಗಿ ಕಾಣಿಸುತ್ತದೆ.

ಶಿಕ್ಷಣದ ಮಹತ್ವದ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ಗುರುತಿಸಬಹುದಾದ ಮತ್ತೊಂದು ಕಥೆ ‘ಕೊಡೆ ಇಲ್ಲಾ ಶಿವರಾಯ’. ಶಿವರಾಯ ಮಾಸ್ತ್ರ ಕಣಿವೇಪುರ ಶಾಲೆ ಇರುವುದು ಕೆಲೆಂಜಿ ಗುಡ್ಡದ ಮೇಲೆ. ಈ ಗುಡ್ಡವೆಂದರೆ ಎಲ್ಲಾ ಗುಡ್ಡದ ಹಾಗಲ್ಲ; ಗುಡ್ಡದ ತುದಿಯ ವಿಸ್ತೀರ್ಣವೇ ಎಷ್ಟೋ ಎಕರೆ ವಿಶಾಲವುಳ್ಳದ್ದು. ಈ ತುದಿಯಲ್ಲೇ ಇರುವುದು ಕಣಿವೆಪುರ ಕಿರಿಯ ಪ್ರಾಥಮಿಕ ಶಾಲೆ. ಪ್ರಕೃತಿಯೊಂದಿಗೆ ಮಾತನಾಡುವ ಕಲೆಯನ್ನು ಮಕ್ಕಳಿಗೆ ಕಲಿಸಿದವರು ಶಿವರಾಯ ಮೇಸ್ಟ್ರೇ.

ವಾರಕ್ಕೆರಡು ದಿನ ಮಕ್ಕಳನ್ನು ಶಾಲೆಯ ಸುತ್ತಲ ಕಾಡಲೆಯಲು ಬಿಟ್ಟು ಅಲೆದು ಬಂದ ಮಕ್ಕಳಲ್ಲಿ ಏನೆಲ್ಲ ಕಂಡಿರಿ? ಎಂದು ಪ್ರಶ್ನಿಸುವ ಜವಾಬ್ದಾರಿ ಮಾಸ್ತ್ರದ್ದು.

ಶಿವರಾಯ ಮಾಸ್ತ್ರ ಕಣಿವೆಪುರ ಶಾಲೆ ಏಕೋಪಾಧ್ಯಾಯ ಶಾಲೆಯಾದ್ರೂ ತುಂಬಾ ಒಳ್ಳೆಯ ಶಿಕ್ಷಣವನ್ನು ನೀಡುತ್ತಿದ್ದರು. ಅವರ ಬೋಧನಾ ಕ್ರಮವೇ ಹಾಗೆ ವಾರದಲ್ಲಿ ಎರಡು ದಿನ ತಪ್ಪಿದರೆ ಮೂರು ದಿನ ತರಗತಿಯೊಳಗೆ ಒಣಪಾಠ, ಮಗ್ಗಿ, ಲೆಕ್ಕ, ಉಕ್ತಲೇಖನ, ಓದಾಟ... ಇತ್ಯಾದಿ. ಉಳಿದ ದಿನಗಳಲ್ಲಿ ಗುಡ್ಡದಲ್ಲಿ ಗಿಡಮರಗಳ ನೆರಳಲ್ಲಿ ಕಥನ ಕವನ, ಹಾಡುಗಳು ಹೀಗೆ. ಈ ಬಗ್ಗೆ ಯಾರದೇ ವಿರೋಧವಿದ್ದರೂ ಮಾಸ್ತ್ರು ಮಾತ್ರ ತಮ್ಮ ಪಠ್ಯ ಕ್ರಮದಲ್ಲಿ ಏನು ವ್ಯತ್ಯಾಸ ಮಾಡುವವರಲ್ಲ.

ಮುಖ್ಯವಾಗಿ ಈ ಕಥೆಯಲ್ಲಿ ಅಲ್ಲಿನ ಮಕ್ಕಳ ಆಟ, ಪಾಠ, ಗುಡ್ಡಬೆಟ್ಟ, ನದಿ ಹಳ್ಳ, ಮಳೆ, ಪರಿಸರ ಚಿತ್ರಣ ಅದರೊಡನೆ ಬೆರೆತು ಕಲಿಯುವ ಮಕ್ಕಳು ಆಗಾಗ ಶಾಲೆಗೆ ಭೇಟಿ ಕೊಡುವ ಇನ್ಸ್‌ಪೆಕ್ಟರ್ರು, ಮಕ್ಕಳ ಆಟಪಾಠದ ಜೊತೆಗೆ ಮಾಸ್ತ್ರು ತೆಗೆದುಕೊಳ್ಳಬೇಕಾದ ಜವಾಬ್ದಾರಿ, ಹೊಲೆಯರ ಅಥವಾ ಕೆಳಜಾತಿಯ ಮಕ್ಕಳಿಗೆ ತಲುಪಬೇಕಾದ ವಿದ್ಯಾರ್ಥಿ ವೇತನ ಹಾಗೂ ಅದು ದುರುಪಯೋಗ ಆಗದಂತೆ ಆಯಾ ಮಕ್ಕಳಿಗೆ ತಲುಪಲೇ ಬೇಕಾದ ಎಚ್ಚರಿಕೆ ಎಲ್ಲವನ್ನು ತೇಳು ಹಾಸ್ಯದ ಮೂಲಕ ದಾಖಲಿಸುತ್ತಾರೆ. ಶಿಕ್ಷಣದ ಮಹತ್ವದ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ಅರಿಯುವುದು ಅಷ್ಟೇ ಮಹತ್ವದ ವಿಚಾರ ಎಂಬುದು ಕೊಡೆ ಇಲ್ಲಾ ಶಿವರಾಯ ಕಥೆಯಲ್ಲಿ ತಿಳಿದು ಬರುತ್ತದೆ.

'ಬೆಲ್ಲ' ಕಥೆಯ ಮೂಲಕ ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸುವ ಜೊತೆಗೆ ಇಂತಹ ವಿವಾಹಗಳಿಂದ ಸಂಪ್ರದಾಯಿಕ ಕುಟುಂಬದ ಸದಸ್ಯರನ್ನು ಉಭಯ ಸಂಕಟಕ್ಕೆ ಈಡು ಮಾಡಬಹುದಾದ ಚಿತ್ರಣಗಳನ್ನು ಕಥೆ ಹೇಳುತ್ತದೆ.

ಜೋಯಿಸರ ಮಗಳು ವಸಂತಿ ಮತ್ತು ಹೊಲೆ ಮಾದಿಗನಾದ ಘಟ್ಟದ ಮಾಕಾಳಿ ಮಾಸ್ತ್ರು ಇಬ್ಬರು ಓಡಿ ಹೋಗಿ ಮದುವೆಯಾಗುತ್ತಾರೆ. ಹಾಗೆ ಅವನು ಊರು ಬಿಟ್ಟು ಹೋಗುವ ಮೊದಲು ಅಪ್ಪಣ್ಣನ ಮನೆಯಲ್ಲಿ ಬೆಲ್ಲದ ಗಂಟನ್ನು, ವಾಂಟೆ ರಾಮನ ಮನೆಯಲ್ಲಿ ಉಪ್ಪಿನಕಾಯಿ ಜಾಡಿಯನ್ನು ಇಟ್ಟು ಹೋಗಿರುತ್ತಾನೆ. ಸಾಕಷ್ಟು ದಿನಗಳು ಕಳೆದರು ಮಾಕಾಳಿ ಮಾಸ್ತ್ರು ಬರದೆ ಇದ್ದಾಗ ಸಿಟ್ಟಿನಿಂದ ಅಪ್ಪಣ್ಣನ ಹೆಂಡತಿ ಚಿನ್ನಮ್ಮ, ವಾಂಟೆ ರಾಮನ ಹೆಂಡತಿ ರುಕುಮಿ ಕ್ರಮವಾಗಿ ಬೆಲ್ಲ ಮತ್ತು ಉಪ್ಪಿನಕಾಯಿಯನ್ನು ಅಡುಗೆ ಮನೆಯಲ್ಲಿ ಬಳಸಿದ್ದರು. ಅದನ್ನು ತಿಂದು ಭೂತದಕೋಣೆ ಹೊಕ್ಕಿದ್ದರಿಂದ ಮೈಲಿಗೆಯಾಗಿದೆ ಹಾಗಾಗಿಯೇ ತಮ್ಮ ಹೆಂಡತಿಯರು ದೆವ್ವ

ಹಿಡಿದವರ ಹಾಗೆ ನಡೆದುಕೊಳ್ಳುತ್ತಿದ್ದಾರೆ ಇದು ಭೂತದ ಏತಲ್ಲದೆ ಮತ್ತೇನಲ್ಲ ಎಂದುಕೊಳ್ಳುತ್ತಾರೆ.

ಹಾಗಾಗಿ ಜೋಯಿಸ್ರಲ್ಲಿ ಒಳ್ಳೆದಿನ ಕೇಳಿ ಅವರ ಭಾವಮೈದುನ ನಾರ್ಣತಂತ್ರಿಗಳನ್ನು ಮನೆಗೆ ಕರೆಯಿಸಿ ಭೂತದ ಶುದ್ಧ ಮಾಡಿಸುವುದಕ್ಕೆ ಹೋಗುತ್ತಾರೆ. ಆಗಲೇ ವಸಂತಿ ಮತ್ತು ಮಾಕಾಳಿ ಮಾಸ್ಟ್ರು ಓಡಿ ಹೋಗಿದ್ದು ತಿಳಿಯುತ್ತದೆ. ಭೂತದ ಶುದ್ಧಿಗೆ ದಿನ ಕೇಳಲು ಹೋದ ಅಪ್ಪಣ್ಣ ಹಾಗೂ ವಾಂಟೆರಾಮ **"ಇದೀಗ ಜೋಯಿಸರ ಇಡಿಯ ಕುಲವೇ ಅಶುದ್ಧದಲ್ಲಿ ಮುಳುಗಿರುವಾಗ ತನ್ನ ಭೂತ ಶುದ್ಧದ ಬಗ್ಗೆ ಜೋಯಿಸರು ತಾನೇ ಏನು ಮಾಡಿಯಾರು? ಎಂದು ಅಪ್ಪಣ್ಣ ಮರಳಿ ಮನೆಯತ್ತ ನಡೆದಿದ್ದ".**[೨೦]

ಈ ಸಮಾಜದಲ್ಲಿನ ಮೇಲು ಕೀಳೆಂಬ ಜಾತಿಯತೆಯನ್ನ ತೊಡೆದು ಹಾಕಬೇಕು. ಆ ನಿಟ್ಟಿನಲ್ಲಿ ಅಂತರ್ಜಾತಿಯ ವಿವಾಹಗಳು ನಡೆದು ಜಾತಿ ಜಾತಿಗಳೊಳಗಿನ ಅಂತರವನ್ನು ಕಡಿಮೆ ಮಾಡಬೇಕು. ಸಮಾಜದ ಸ್ವಾಸ್ಥ್ಯ ಕದಡದಂತಿರಲು ಅಂತ ಮನಸ್ಸುಗಳನ್ನು ಶುದ್ಧಿ ಮಾಡುವ ಕೆಲಸ ನಡೆಯಬೇಕೆಂಬ ಅಭಿಪ್ರಾಯವನ್ನು ನಾಗವೇಣಿ ಇಲ್ಲಿ ವ್ಯಕ್ತಪಡಿಸುತ್ತಾರೆ.

ಜೀವ ದೊಡ್ಡದು. ಬದುಕು ಅದಕ್ಕಿಂತ ಬಲುದೊಡ್ಡದು... ಸಂಪ್ರದಾಯ ಅದಕ್ಕಿಂತಲೂ ದೊಡ್ಡದೇನಲ್ಲ ಎಂಬ ಕಟು ವಾಸ್ತವ ಸತ್ಯವನ್ನು ಹೇಳುವ 'ತಾಯ್ತನ' ಕಥೆ ಸಾಮಾಜಿಕ ಕಾಳಜಿಯುಳ್ಳದ್ದಾಗಿದೆ.

ಒಂದು ಕಡೆ ಮ್ಯೊದಿನ್‌ಬ್ಯಾರಿಯವರ ಶವದ ಯಾತ್ರೆ ಸಿದ್ಧವಾಗಿದೆ. ಮತ್ತೊಂದು ಕಡೆ ತುಕ್ರಮೈಲಿಯ ಗುಡಿಸಲಲ್ಲಿ ತುಂಬು ಬಸುರಿ ಸುಂದರಿಗೆ ಹೆರಿಗೆ ನೋವು ಕಾಣಿಸಿಕೊಂಡಿದೆ. ಆ ಕೇರಿಯಲ್ಲಿರುವ ಪ್ರಸೂತಿ ಪ್ರವೀಣೆ ಪದೆತಿ (ಸೂಲಗಿತ್ತಿ) ಎಂದರೆ ಐಸಂಬ್ಯಾರಿ ಒಬ್ಬರೇ. ನಂಬಿಕೊಂಡು ಬಂದಿರುವ ಧರ್ಮ – ಕರ್ಮದ ಕಟ್ಟುಪಾಡು ಏನಾದರೂ ಇರಲಿ, ಪ್ರಾಣ ಉಳಿಸುವ ಪುಣ್ಯದ ಕೆಲಸಕ್ಕೆ ಮನುಷ್ಯತ್ವದ ವಿಚಾರಕ್ಕೆ ಮಾತ್ರ ಎಂದೆಂದೂ ಆ ಕಟ್ಟುಪಾಡುಗಳು ಅಡ್ಡಬರದಂತೆ ನೋಡಿಕೊಂಡ ಜೀವ ಐಸಂಬ್ಯಾರಿಯವರದು. ಮ್ಯೊದಿನ್‌ಬ್ಯಾರಿಯವರು ಈ ವಿಚಾರದಲ್ಲಂತೂ ಮಡದಿಯ ಪರ ವಹಿಸಿದವರು ಐಸಂಬ್ಯಾರಿ ಇದ್ದತ್ ವಿಧಿಯಲ್ಲಿರುವಾಗಲೇ ತುಕ್ರಭಂಡಾರಿ, ಸುಂದರಿಯ ಹೆರಿಗೆ ನೋವಿನ ಸುದ್ಧಿ ತಿಳಿಸಿದ್ದ ತಾನು ಇಲ್ಲಿ ಗೋಳಾಡಿದರೆ ಅಲ್ಲಿ ಸಾಯುತ್ತಿರುವ ತಾಯಿ ಮಗುವನ್ನು ಬದುಕಿಸಗುವುದಿಲ್ಲ ಎಂಬ ಸತ್ಯದ ಅರಿವು ಐಸಮ್ಮನವರಿಗಿದೆ. ಇಲ್ಲಿ ಐಸಮ್ಮನ ವೈಯಕ್ತಿಕ ಸಮಸ್ಯೆಗಳು ಏನೇ ಇದ್ದಾಗಲೂ, ತನ್ನ ಧರ್ಮದ ಕಟ್ಟುಪಾಡುಗಳು

ಎಷ್ಟೇ ಇದ್ದು ಜಾತಿ ಜಾತಿಗಳೊಳಗೆ ಎಷ್ಟೇ ಗಲಭೆಗಳು ನಡೆಯುತ್ತಿದ್ದರು ತನ್ನ ಗಂಡನ ಶವದ ಯಾತ್ರೆಯೇ ಹೊರಟಿದ್ದರು–

"ಎಲ್ಲರಿಗೂ ನ್ಯಾಯ ಕಟ್ಟು ಅಂತಾ ಒಂದಿರುತ್ತದೆ. ಅದು ಸಾಂಪ್ರದಾಯಿಕ ಹಾಗೂ ಶಿಸ್ತಿನ ಬದುಕಿನ ಒಡವೆಗಳೂ ಹೌದು! ಇದೀಗ ತಾನು ಕಟ್ಟುಪಾಡು ಎಂದು ಕುಳಿತರೆ ತನ್ನಿಂದ ಎಂದೆಂದೂ ಸೃಷ್ಟಿಸಲಾಗದ ಜೀವಗಳೆರಡನ್ನು ನಿರ್ಜೀವಗೊಳಿಸಿದಂತಾಗುತ್ತದೆ. ಸಂಪ್ರದಾಯದ ಕಟ್ಟನ್ನು ಎದುರಿಗಿಟ್ಟುಕೊಂಡು ಮತ್ತೊಂದು ಜೀವವನ್ನು ಮರುಟಿಸುವುದು ಅಮಾನವೀಯವೂ ಹೌದು. ಮನಸ್ಸಿನ ವಿಕಾರವೂ ಹೌದು ಎಂದು ಆ ದುಃಖಿತ ಮನಸ್ಸಿಗೆ ತೋಚಿದೊಡನೆ ಆಕೆ ಹೆರಿಗೆ ಮನೆಗೆ ಹೊರಡಲು ಅನುವಾದರು."[೨೧] ಈ ಮೂಲಕ ಸಾಮಾಜಿಕ ಕಾಳಜಿಯನ್ನ ಕಥೆ ಹೇಳುತ್ತದೆ.

"ಎಂಭತ್ತರ ದಶಕದ ಕನ್ನಡ ಕಥಾ ಸಾಹಿತ್ಯವನ್ನು ಗಮನಿಸಿದರೆ ಎದ್ದು ಕಾಣುವ ಹೆಸರು ವೈದೇಹಿಯವರದು. ಕನ್ನಡದ ಸಣ್ಣ ಕಥೆಗೆ ಅದುವರೆಗೂ ಇಲ್ಲದಿದ್ದ ಒಂದು ಹೊಸದನಿ ವೈದೇಹಿಯವರ ಮೂಲಕ ಹರಿದುಬಂದಿತು. ಅವರ ಕಥೆಗಳಿಗೆ ಹಲವು ವೈಶಿಷ್ಟ್ಯಗಳಿವೆ. ಮೊದಲನೆಯದು ತಾವು ಆಯ್ದುಕೊಂಡ ಕಥಾವಸ್ತುವಿನ ಹಿನ್ನೆಲೆಯಲ್ಲಿರುವ ಲೇಖಕಿಯ ಸಾಮಾಜಿಕ ಕಾಳಜಿ ಮತ್ತು ಬದುಕನ್ನು ನೋಡುವಲ್ಲಿ ವೈದೇಹಿಯವರಿಗೇ ವಿಶಿಷ್ಟವಾಗಿರುವ ಒಂದು ಸ್ತ್ರೀ ದೃಷ್ಟಿಕೋನ ಈ ಕಥೆಗಳಲ್ಲಿ ಕಾಣುವುದು. ಎರಡನೆಯದು ವೈದೇಹಿ ತಮ್ಮ ಕಥೆಗಳಲ್ಲಿ ಬಳಸುವ ಕುಂದಾಪುರದ ಕನ್ನಡ ಆಡುನುಡಿ ಮತ್ತು ಬಂಟವಾಳ ಪ್ರದೇಶದ ಕನ್ನಡ ಬೇರೆ ಯಾವ ಲೇಖಕರಲ್ಲೂ ಇಷ್ಟು ಸಮರ್ಥವಾಗಿ ಕಲೆಗಾರಿಕೆಯಿಂದ ಕೂಡಿ ಬಳಕೆಯಾಗಿಲ್ಲ ಎನ್ನವುದು.

ಇವರ ಕಥೆಗಳಲ್ಲಿ ದಕ್ಷಿಣ ಕನ್ನಡ ಪರಿಸರವನ್ನು ಹಿನ್ನೆಲೆಯಾಗುಳ್ಳ, ಲೇಖಕಿಯ ಬಾಲ್ಯದ ಅನುಭವಗಳು ವಸ್ತುವಾಗಿರುವ ಕಥೆಗಳು ಒಂದು ಗುಂಪಾದರೆ, ಆಧುನಿಕ ಸ್ತ್ರೀವಾದಿ ಪ್ರಜ್ಞೆಯಿಂದ ಕೂಡಿರುವ ಹೆಣ್ಣಿನ ಸುತ್ತ ಹೆಣೆಯಲಾಗಿರುವ ಕಥೆಗಳದ್ದು ಇನ್ನೊಂದು".[೨೨]

ವೈದೇಹಿಯವರ ಸಾಮಾಜಿಕ ಕಾಳಜಿಯುಳ್ಳ ಕಥೆಗಳಲ್ಲಿ 'ಚಂದಲೆ' ಕಥೆಯು ಬಹುಮುಖ್ಯವಾದ ಕಥೆಯಾಗಿದೆ. ವೇಶ್ಯೆ ಎಂದು ಕರೆಸಿಕೊಳ್ಳುವ ಹೆಣ್ಣನ್ನು ಸೂಳೆ, ನಿತ್ಯಸುಮಂಗಲೆ, ವೇಶ್ಯೆ ಎಂದೆಲ್ಲಾ ಈ ಸಮಾಜ ಕರೆಯುತ್ತೆ ಸೂಳೆ ಬಾಂಚ್, ಎನ್ನುವ ಪದಗಳು ದೊಡ್ಡ ಬೈಗುಳದ ಪದಗಳಾಗಿಯು ಈ ಸಮಾಜದಲ್ಲಿ ಬಳಕೆಯಾಗಿವೆ. ಈ ಪದಗಳನ್ನು ಸಾಹಿತ್ಯದ ಅನೇಕ ಸಂದರ್ಭಗಳಲ್ಲಿ ಬಳಸಿಕೊಳ್ಳಲಾಗಿದೆ. ವೈದೇಹಿ ತಮ್ಮ ಚಂದಲೆ ಎನ್ನುವ ಕಥೆಯಲ್ಲಿ ಹೇಗೆ ಬಳಸಿಕೊಂಡಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

'ಚಂದಲೆ' ಹದಿನಾರು ವರ್ಷಕ್ಕೇ ಗೆಜ್ಜೆ ಕಟ್ಟಿಸಿಕೊಂಡು ಸೂಳೆ ಎನ್ನುವ ಪಟ್ಟಿ ಹೊತ್ತುಕೊಂಡವಳು. ಚಂದಲೆಯನ್ನು ಸೂಳೆ ಮಾಡಿದ್ದು ಇದೇ ಸಮಾಜ. ಲೇಖಕಿ ಈ ಕಥೆಯಲ್ಲಿ 'ಶಿಷ್ಟ' ಸಮಾಜದ ಬೀನ ಮತ್ತು ವೇಶ್ಯೆಯೊಬ್ಬಳ ಮಗಳು ಚಂದಲೆಯನ್ನು ಮುಖಾಮುಖಿಯಾಗಿಸಿ ಲೈಂಗಿಕ ಸಂಬಂಧಗಳ, ಮೌಲ್ಯಗಳ ಶೋಧನೆ ನಡೆಸುತ್ತಾರೆ. ನಿರೂಪಣೆ ಓರ್ವ ಗೃಹಿಣಿಯ ಪ್ರಜ್ಞೆಯಲ್ಲಿದ್ದರೆ ಚಂದಲೆಯ ಜೀವನಕ್ರಮ ಹಾಗೂ ಬೀನಾಳ ದಿಟ್ಟತನ ಗೃಹಿಣಿ ಪ್ರಜ್ಞೆಯ ರಮಿಯನ್ನು ತಬ್ಬಿಬ್ಬುಗೊಳಿಸುತ್ತದೆ.

ಚಂದಲೆಯ ಜೀವನಕ್ರಮವಂತೂ ಹೇಗೊ ಈ ಸಮಾಜದಲ್ಲಿ ಸ್ಥಾಪಿತವಾಗಿರುವಂತದು. ಎಳೆಯ ವಯಸ್ಸಿಗೆ ಗೆಜ್ಜೆ ಕಟ್ಟುವ ಪದ್ಧತಿಯನ್ನು ಒಂದು ಸಂಪ್ರದಾಯದಂತೆ ನಡೆಸಿಕೊಂಡು ಬರುತ್ತಿರುವ ಆ ಕುಟುಂಬ, ಈ ಸಮಾಜ, ಹುರಿಮೀಸೆಯವನು, ಮನೆಬಾಡಿಗೆಯವನು ಎಲ್ಲರು ಚಂದಲೆ ಎಂಬ ವೇಶ್ಯೆಯ ಸೃಷ್ಟಿಗೆ ಕಾರಣರಾಗುತ್ತಾರೆ.

ಹೆಣ್ಣಿನ ಎರಡು ಅವಸ್ಥೆಗಳನ್ನು ಮಾತ್ರ ಅರ್ಥ ಮಾಡಿಕೊಂಡಿರುವ ರಮಿಗೆ ಗೃಹಿಣಿ ಅಥವಾ ವೇಶ್ಯೆ ಮಾತ್ರ ಗೋಚರಿಸುತ್ತಾರೆ. ಹೀಗಿರುವಾಗ 'ಶಿಷ್ಟ' ಸಮಾಜದಲ್ಲಿ ಬಾಳಬೇಕಾದ ಬೀನಾಳ ದಿಟ್ಟತನ, ಧೈರ್ಯಗಳು ನಿರೂಪಕಿಯಲ್ಲಿ ಕಂಪನಗಳನ್ನು ಎಬ್ಬಿಸುತ್ತವೆ. ಈ ಬೀನ ಇನ್ನೂ ಸ್ಕರ್ಟ್ ತೊಡುವ ಎಳೆಯ ಮುಖದ ಸ್ಕೂಲ್ ವಿದ್ಯಾರ್ಥಿನಿ. ಹದಿನಾರು ತುಂಬಿದ ಹುಡುಗಿ ಒಮ್ಮೆ ಹೇಳುತ್ತಾಳೆ 'ಆಂಟಿ, ನನ್ನ ನಿಜವಾದ ಇಷ್ಟ ಕೇಳುತ್ತೀರಾ?... ಸೂಳೆಯಂತಿರಬೇಕು ಆಂಟಿ. ಏನು ಮಜ ಆಗ ಅಲ್ವಾ?...' ಈ ಬೀನ ಸ್ಕರ್ಟ್ ಹಾಕುತ್ತಾಳೆ, ಪಗಾರ ಹತ್ತಿ ಹಾರಿ ಓಡುತ್ತಾಳೆ, ಪ್ರಕಾಶ, ಸತೀಶನ ಜೊತೆ ಮಾತಾಡುತ್ತಾಳೆ, ಟ್ಯೂಷನ್ ಮಾಸ್ತ್ರ ಜೊತೆ ಹೋಟೆಲ್ಲಿಗೆ ಹೋಗುತ್ತಾಳೆ, ಸಿನಿಮಾ ನೋಡುತ್ತಾಳೆ. ಪಟಪಟಂತ ತನಗನಿಸಿದ್ದನ್ನು ಹೇಳಿಬಿಡುತ್ತಾಳೆ. ಸಂಪ್ರದಾಯಸ್ಥ ಮನಸ್ಸಿನ ನಿರೂಪಕಿಗೆ ಬೀನಳನ್ನು ಒಪ್ಪಿಕೊಳ್ಳುವುದು, ಅರ್ಥೈಸಿಕೊಳ್ಳುವುದು ಕಷ್ಟವಾಗುತ್ತದೆ.

ಚಂದಲೆಯ ಆ ಗೆಜ್ಜೆಕಟ್ಟುವ ಸಂಪ್ರದಾಯ, ನಿರೂಪಕಿ ಹೇಳುವ ಶಿಷ್ಟ ಸಮಾಜದ ಸಂಪ್ರದಾಯ ಎರಡು ಈ ಸಮಾಜದಲ್ಲೇ ಇರುವಂಥದ್ದು. ಹೆಣ್ಣು ಎನ್ನುವ ಕಾರಣಕ್ಕೆ ಚಂದಲೆಯನ್ನು ಸೂಳೆ ಎಂದು ಕರೆಯಲಾಗುತ್ತದೆ. ಅಂತೆಯೇ ಹೆಣ್ಣು ಎನ್ನುವ ಕಾರಣಕ್ಕಾಗಿಯೇ ಬೀನ ಆಂಟಿ ನನ್ನ ನಿಜವಾದ ಇಷ್ಟ ಸೂಳೆಯಂತಿರುವುದು ಎಂದದ್ದನ್ನು ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗುತ್ತೆ. ಬೀನ **"ಯಾಕೆ ತಪ್ಪಾ? ನನಗನಿಸಿದ್ದನ್ನು ನಾನು ಹೇಳಿದೆ. ಮನಸ್ಸಲ್ಲೆ ಇಟ್ಟುಕೊಳ್ಳಬೇಕಿತ್ತಾ? 'ತಪ್ಪು ಸರಿ ಎನ್ನಲು ನಾನು ಯಾರು? ಒಂದು ರೀತಿಯಲ್ಲಿ ನಮಗನಿಸಿದನ್ನು ಮಾಡಲಿಕ್ಕೆ ಯಾರದೇನು ಅಡ್ಡಿ?**

ಆದರೆ ನೋಡು ನಾವು ಕಾಡಿನಲ್ಲಿರುವವರಲ್ಲ. ನಮ್ಮನ್ನು ನೋಡಿ ಕಲಿಯುವ, ಬೆಳೆಯುವ ಸಮಾಜದ ಮಧ್ಯೆ ನಾವಿದ್ದೇವೆ ಎಂದಾಗ ಸ್ವಲ್ಪ ಜವಾಬ್ದಾರಿಯೂ ನಮಗಿದೆ ಅಂದ ಹಾಗಾಗಲಿಲ್ಲ? ಜವಾಬ್ದಾರಿ ಇದ್ದ ಮೇಲೆ..."[೨೩] ಎಂದು ಮಾತು ಮುಗಿಸುತ್ತಾಳೆ. ಜವಾಬ್ದಾರಿ ಇದ್ದ ಮೇಲೆ ಸೂಳೆಯಂತಿರಬೇಕು ಎಂದು ಬಯಸುವುದು ತಪ್ಪು ಎಂಬಂತೆ ಹೇಳಲಾಗಿದೆ. ಬೀನಾಳ ಮದುವೆಗೂ ಮುಂಚೆ ಬೀನಳ ಮುಖದಲ್ಲಿ, ವರ್ತನೆಯಲ್ಲಿ ಚಂದಲೆಯನ್ನು ಹುಡುಕುತ್ತಿದ್ದ ನಿರೂಪಕಿ ಬೀನಾಳ ಮದುವೆಯಾಗಿ ಅವಳು ತಾಯಿಯಾದಾಗ : 'ಬೀನ ಹೆತ್ತಿದ್ದಾಳೆ ಹೆಣ್ಣುಮಗು. ಹಾಸಿಗೆಯ ಮೇಲೆ ಕಣ್ಣುಮುಚ್ಚಿ ಬೀನ, ರಮಿ ಕರೆದದ್ದು ಕೇಳಿ ಕಣ್ಣು ತೆರೆದಳು. ಅರೆ! ಅಲ್ಲಿ ಚಂದಲೆ ಇಲ್ಲ! 'ತಾಯಿಯಾದೆಯ ಹುಡುಗಿ'– ಎಂದಳು ರಮಿ. 'ಆಂಟಿ, ಹೇಗಿದೆ ಮಗು? ಪೂರ ಅವಳ ಅಪ್ಪನಂತೆಯೇ ಅಲ್ವಾ?'– ಚೊಚ್ಚಿಲು ಹೆತ್ತು ಮಲಗಿದ ಎಲ್ಲ ಹುಡುಗಿಯರ ಸ್ವರ ಒಂದಾಗಿ ಕೇಳಿದಂತಿತ್ತು.

ರಮಿ ಅವಳನ್ನೇ ನೋಡಿದಳು. ಇದು ಬೀನ ಅಲ್ಲ! ಆಂಟಿ, ಮಗು ಹೇಗಿದೆ ಹೇಳಲಿಲ್ಲ ನೀವು'. ಇಷ್ಟು ಬೇಗ ಏನು ಹೇಳಲಿ ಬೀನ, ಸ್ವಲ್ಪದಿನ ಹೋಗಬೇಕು ಕ್ಷೀಣವಾಗಿ ನಕ್ಕಳು ಬೀನ. ಈ ನಗೆಯಲ್ಲಿಯೂ ಅವಳಿಲ್ಲ. ಗಮನಿಸಬೇಕಾದ ಸಂಗತಿಯೆಂದರೆ ಬೀನಳ ವಯಸ್ಸಿನಲ್ಲಿ ರಮಿಗೂ ಚಂದಲೆಯ ಬದುಕೆಂದರೆ ಒಂದು ಕುತೂಹಲ. ರಮಿ ತನ್ನ ಬಾಲ್ಯದಲ್ಲೂ ಬೀನಳನ್ನು ಕಾಣುತ್ತಾಳೆ :

"ಒಬ್ಬರಾದ ಮೇಲೆ ಒಬ್ಬರು, ಒಬ್ಬರೇ ಚಂದಲೆಗೆ. ತನಗೆ ಕುತೂಹಲ. ಅವರೆಲ್ಲ ಅವಳ ಬಳಿ ಏನು ಮಾಡುತ್ತಾರೆ? ಎಂತಹ ನಗು ಕುಶಾಲು ತಮಾಷೆ ಒಬ್ಬೊಬ್ಬರು ಬಂದಾಗಲೂ ಚಂದಲೆಗೆ ಯಾವಾಗ ಕಂಡರೂ ಗಮ್ಮತ್ತು ತನಗೋ ಪಾಠ ಪಾಠ. ಮತ್ತೆಂತದೂ ಇಲ್ಲ. ಆಗ ತನ್ನ ವಯಸ್ಸೆಷ್ಟು?.... ಮಾಸ್ಟರು ಬರೆಸಿದ ಎಸ್ಸೆ ಬಾಯಿ ಪಾಠ ಹೊಡೆಯುತ್ತಿದ್ದದ್ದು ನೆನಪಿದೆ. ನಿಮ್ಮನ್ನು ಕಂಡರೆ ಹೇಳುವ ಅನಿಸಿತು ಎಂದಳು ಬೀನ. ನೀವೂ ಹಾಗೆ ಹೇಳುತ್ತೀರ ಆಂಟಿ? ಎಂದಳು".[೨೪]

ಬೀನಳ ಮೂಲಕ ತನ್ನನ್ನು ತಾನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾಳೆ ರಮಿ. ರಮಿ ಈಗ ತನ್ನ ನಡುವಯಸ್ಸಿನಲ್ಲಿ ಹೇಗೆ ವರ್ತಿಸುತ್ತಿದ್ದಾಳೋ ಹಾಗೆ ತಾನು ಬಾಲಕಿಯಾಗಿದ್ದಾಗ ತನ್ನ ಅಮ್ಮ ವರ್ತಿಸುತ್ತಿದ್ದಳು. ಬೀನಳ ಪರಿಸ್ಥಿತಿ ಕೂಡಾ ಇದಕ್ಕಿಂತ ಭಿನ್ನವಲ್ಲ ಎಂಬ ಸೂಚನೆ ಕಥೆಯ ಕೊನೆಯ ಭಾಗದಲ್ಲಿದೆ. 'ಸುಶಿಕ್ಷಿತ', 'ಶಿಷ್ಟ' ಮಧ್ಯಮವರ್ಗದ ಲೈಂಗಿಕ ಕುತೂಹಲಗಳು, ಲೈಂಗಿಕ ಸಂಕೋಚಗಳು, ಅತಿರಂಜಿತ ಕಲ್ಪನೆಗಳು ಉಪಶಮನ ಹೊಂದಿ ಹೆಣ್ಣಿನ ಅಂತರಂಗ ಬಹಿರಂಗಗಳೆರಡನ್ನೂ ತೆಕ್ಕೆಗೆ ತೆಗೆದುಕೊಳ್ಳುತ್ತದೆ.

ವೈದೇಹಿಯವರ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆಯ ವಿಶೇಷವೆಂದರೆ ಹೊಸತಿನ ಆಗಮನದ ಪರಿಣಾಮಗಳನ್ನು ಮಹಿಳೆಯರ ದೃಷ್ಟಿಯಿಂದ ದಾಖಲಿಸಿರುವುದು. ಅದು ಬೈತಲೆಯಂತೆ ಒಂದೇ ರಸ್ತೆಯಲ್ಲಿರುವ ಊರು. ಒಂದು ಊರೆನಿಸಿಕೊಳ್ಳಲು ಏನೆಲ್ಲ ಬೇಕೋ ಅದೆಲ್ಲ ಇದೆ. ಊರಿಗೊಂದು ಬಯಲಿದೆ ಅಲ್ಲಿಗೆ ಸಂಜೆ ಹೊತ್ತು ಗಂಡಸರು ವಾಕಿಂಗ್ ಹೋಗುತ್ತಾರೆ. ಕುಳಿತು ಮಾತಾಡುತ್ತಾರೆ. ಶಾಲೆಯ ಮಾಸ್ಟರ್ ಒಬ್ಬರು ಒಬ್ಬ ಹುಡುಗಿಯನ್ನು ಹಾಳು ಮಾಡಲು ಪ್ರಯತ್ನಿಸಿದ್ದನು ಅದೆಷ್ಟೋ ಸಾರಿ ಚರ್ಚಿಸಿದ್ದಾರೆ. ಆದರೆ ಈ ಊರಲ್ಲಿ ಹೆಂಗಸರು ಬಯಲಿಗೆ ಹೋಗುವ ಕಟ್ಟಳೆ ಇಲ್ಲ. ಬಯಲಿಗೆಂದೇನು ಅವರು ತಾವಾಗಿ ರಸ್ತೆಗೆ ಇಳಿದದ್ದಿರಲಿಲ್ಲ, ಮನೆಯಾಯಿತು ತಾವಾಯಿತು.

'ಸಂಜೆ ಹೊತ್ತಿನಲ್ಲಿ ಮಕ್ಕಳನ್ನು ಆಟಕ್ಕೆ ಕಳಿಸಿ ತಲೆ ಬಾಚಿಕೊಂಡು, ಹಣೆಗಿಟ್ಟುಕೊಂಡು, ಸಂಜೆಮಲ್ಲಿಗೆ ದಂಡೆಯನ್ನೋ, ಸುರುಳಿ ಹೂವಿನ ದಂಡೆಯನ್ನೋ ಮುಡಿಗೇರಿಸಿಕೊಂಡು ಸ್ವಲ್ಪ ಸುಧಾರಿಸಿಕೊಂಡಿರುತ್ತಿದ್ದರು. ಅಥವಾ ನಾಳೆಯ ಕಡುಬಿಗೆ ಕೊಟ್ಟೆ ಸೆಡುತ್ತಲೋ, ಅಕ್ಕಿ-ಉದ್ದು ಅರೆಯುತ್ತಲೋ, ಹೂಕಟ್ಟುತ್ತಲೋ ಇರುತ್ತಿದ್ದರು. ಸೂರ್ಯಕಂತಿದೊಡನೆ ದೇವರಿಗೆ ದೀಪ ಹಚ್ಚಿ ತಾಳ ತಟ್ಟುತ್ತಾ ಭಜನೆ ಮಾಡುತ್ತಿದ್ದರು.

ಅವರು ಹೆಚ್ಚಾಗಿ ಒಂದೋ ಬಾಣಂತಿ, ಇಲ್ಲವೋ ಬಸುರಿ, ಇಲ್ಲವೇ ಮುಟ್ಟು ಅಥವಾ ಎಲ್ಲವನ್ನು ಮುಗಿಸಿ ಕುಳಿತವರಾಗಿರುತ್ತಿದ್ದರು. ಒಟ್ಟಿಗೆ ಬಾಳುತ್ತಿದ್ದ ಆ ಮನೆಗಳಲ್ಲಿ ಮನೆಯ ಒಂದಲ್ಲ ಒಂದು ಮೂಲೆಯಲ್ಲಿ ಒಂದಲ್ಲ ಒಂದು ಜನ ಕಣ್ಣೊರಸಿಕೊಳ್ಳುತ್ತ ನಿಲ್ಲುವುದೂ ಸಾಮಾನ್ಯವಾಗಿತ್ತು'.

ಗಂಡಸರು ಬಯಲಿಗೆ ಹೋಗುವಂತೆ ಯಾವುದೋ ಮಾತುಗಳನ್ನ, ಸುದ್ದಿಗಳನ್ನ ಚರ್ಚಿಸುತ್ತಿದ್ದಂತೆ ಹೆಂಗಸರಿಗೆ ಅವಕಾಶವಿರಲಿಲ್ಲ. ಊರಿಗೆ ನಾಟಕದ ಕಂಪನಿ, ಸರ್ಕಸ್ಸು ಬಂದರೆ ಗಂಡಸರು ಹೋಗಿ ಬರುತ್ತಿದ್ದರು. ಹೆಂಗಸರು ನಾಟಕವನ್ನಾದರೂ ನೋಡಿದ್ದಾರು. 'ಸರ್ಕಸ್ಸು-ಗಿರ್ಕಸ್ಸು ಹೆಂಗಸರಿಗೆ ಹೇಳಿಸಿದ್ದೇ?' ಎಂದು ಗದರಿಸಿಬಿಟ್ಟರೆ ಹಾಗೆ ಗದರಿಸಿದ ಗಂಡಸಿನ ದನಿಯಡಿ ಮುದುರಿಕುಳಿತುಕೊಳ್ಳುತ್ತಿದ್ದರು. ವಿಶೇಷ ಚಟುವಟಿಕೆಗಳಾವುದೂ ಇಲ್ಲದ ಆ ಊರು ರೂಢಿಗತವಾಗಿ ಪುರುಷಲೋಕ ಮತ್ತು ಸ್ತ್ರೀಲೋಕಗಳಾಗಿ ವಿಭಜಿತಗೊಂಡಿತ್ತು ಮತ್ತು ಅದು ಸಹಜವೆಂಬಂತೆ ಜೀವನ ಸಾಗಿತ್ತು. ಪುರುಷರ ಮತ್ತು ಮಹಿಳೆಯರ ದೈನಿಕಗಳಲ್ಲಿನ ವ್ಯತ್ಯಾಸಗಳನ್ನು ಕಥೆಯು ಹಲವು ಸಾಮಾನ್ಯ ಆದರೆ ಸ್ವಾರಸ್ಯಕರ ವಿವರಗಳಲ್ಲಿ ದಾಖಲಿಸುತ್ತದೆ.

ಪ್ರತಿ ಆರು ತಿಂಗಳಿಗೊಮ್ಮೆ ಟೆಂಟ್ ಸಿನಿಮಾಗಳು ಬಂದ ಮೇಲೆ ಹೆಂಗಸರ ಸ್ಥಿತಿ ಸ್ವಲ್ಪ ಸುಧಾರಿಸುವಂತಾಯಿತು. ಯಾಕೆಂದರೆ ಆ ಸಿನಿಮಾ ನೋಡಲು ಹೆಂಗಸರು ಹೋಗುತ್ತಿದ್ದರು. ಹಾಗೆ ಹೋಗುತ್ತಿದ್ದದ್ದು ಗಂಡಸರನ್ನು ಅವಲಂಬಿಸಿಯೇ, ತಾವಾಗಿಯೇ ಹೋಗುವುದನ್ನು ಸ್ವತಃ ಹೆಂಗಸರೇ ಒಪ್ಪುತ್ತಿರಲಿಲ್ಲ. ಗಂಡಸರೇ ಅವರನ್ನು ಕರೆದುಕೊಂಡು ಹೋಗಿ ಟಿಕೆಟ್ ತೆಗೆಸಿಕೊಟ್ಟು, ಹೆಂಗಸರ ಗೇಟಿನ ಬಳಿ ಆ ಟಿಕೆಟ್‌ಗಳನ್ನು ಹರಿಸಿ, ಮುಚ್ಚಟೆಯಾಗಿ ಕೂರಿಸಿ ಸಿನಿಮಾ ಮುಗಿದ ಮೇಲೆ ವಾಪಾಸ್ಸು ಕರೆದುಕೊಂಡು ಬರುತ್ತಿದ್ದಕ್ಕಿಂತ ಕೊರಗ-ಕೂಸಾ ಹೆಂಗಸರ ಸ್ಥಿತಿ ಸುಧಾರಿಸಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಆದರೆ ಹೇಳುವುದು ಕಷ್ಟ ಏಕೆಂದರೆ ಮೇಲ್ಜಾತಿ ವರ್ಗದ ಹೆಣ್ಣು ಮಕ್ಕಳಿಗೆ ಗಂಡಸಿನ ಅನುಮತಿ ಇಲ್ಲದೆ ಆಸರೆ ಇಲ್ಲದೆ ಹೋಗುವಂತಿರಲಿಲ್ಲ. ಹೋಗುವ ಅವಕಾಶ ಸಿಕ್ಕರು ಸ್ವತಃ ಹೆಂಗಸರೇ ಒಪ್ಪುತ್ತಿರಲಿಲ್ಲ. ಹಾಗೆಂದು ಸ್ವತಃ ಯಾರ ಎಗ್ಗಿಲ್ಲದೆ ಬಂದು ಕೂತು ಸಿನಿಮಾ ನೋಡುತ್ತ ಬಿಸಾತಿಲ್ಲದೆ ನಕ್ಕು – ಅತ್ತು ಎದ್ದು ಹೋಗುತ್ತಿದ್ದ ಕೊರಗ-ಕೂಸಾಳು ಹೆಂಗಸರನ್ನು ಕುರಿತು, ಅವೇ? ಲಂಗು ಲಗಾಮು ಇಲ್ಲದವು!' ಎಂಬೊಂದು ಸಸಾರದ ಮಾತು ಆಡುತ್ತಿದ್ದರು. ಕೆಳಜಾತಿಯ ಹೆಂಗಸರು ಮಧ್ಯಮವರ್ಗದ, ಮೇಲುಜಾತಿಯ ಹೆಂಗಸರಿಗಿಂತ ಸಾಮಾಜಿಕವಾಗಿಯೂ, ಆರ್ಥಿಕವಾಗಿ ಹೆಚ್ಚು 'ಸ್ವತಂತ್ರ'ರೆಂಬ ಸತ್ಯವನ್ನು ಹೇಳುತ್ತದೆ. ಲೇಖಕಿ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರ ಆರ್ಥಿಕ ಸ್ಥಿತಿಯ ಬಗ್ಗೆ ಒಳನೋಟಗಳನ್ನು ಬೀರುತ್ತಾರೆ. ಹೆಣ್ಣು ಹೇಗಿದ್ದರೂ ಈ ಸಮಾಜ ಹೆಣ್ಣು ಗಂಡು ಎಂದು ಭೇದ ಮಾಡಿ ನೋಡುತ್ತದೆ. ಅಳುಮುಂಜಿಯಂತೆ ಅಡಿಗೆಮನೆ ಮೂಲೆ ಹಿಡಿದು ಕೂತರು ಕಷ್ಟ. ಯಾರದೇ ಎಗ್ಗಿಲ್ಲದೆ ಹೊರ ಹೊರಟರು ಕಷ್ಟ. ಆದರೂ ಕ್ರಮೇಣ ಹೆಂಗಸರ ಸ್ಥಿತಿ ಸುಧಾರಿಸುತ್ತಾ ಹೋದದನ್ನು ಕಥೆ ನಿರೂಪಿಸುತ್ತದೆ. ಊರು ತುಸುವಾದರೂ ಅದುರಿದ್ದು ಮತ್ತು ಹೆಂಗಳೆಯರು ಸ್ವಂತ ಕಾಲುಗಳಿಂದ ಹೆಜ್ಜೆಯಿಡಲಾರಂಭಿಸಿದ್ದು ಊರ ನಡುವಿನ ಧೂಪದ ಮರಕ್ಕೆ ಕೊಡಲಿಪೆಟ್ಟು ಬಿದ್ದ ಮೇಲೆಯೇ. ಒಂದರ್ಥದಲ್ಲಿ ಲಿಲ್ಲೀಬಾಯಿಯಿಂದಲೇ ಊರು ಅದುರಿದ್ದು ಎಂದರೆ ತಪ್ಪಾಗಲಿಕ್ಕಿಲ್ಲ ಅನಿಸುತ್ತೆ. ಟಾಕೀಸ್ ಓಪನ್ ಆದಾಗಿನಿಂದ ಹೆಂಗಸರ ಕಡೆ ಗೇಟ್ ಕೀಪರ್ ಕೆಲಸ ಲಿಲ್ಲೀಬಾಯಿಗೆ ಸಿಕ್ಕಿತು.

"ಟಾಕೀಸೆಂದರೇನು!

ಟಾಕೀಸಿನಲ್ಲಿ ಲಿಲ್ಲಿ ಎಂದರೇನು!

ಗೇಟಿಗೆ ಹೋದರೆ ಅಲ್ಲಿರುವುದು ಈ ಲಿಲ್ಲೀಬಾಯಿ! ಹೆಂಗಸರಿಗೆಲ್ಲ ಇದು ಒಂದು ತರಹ ರೋಮಾಂಚನವನ್ನೇ ತಂದಿತ್ತು. ಪ್ರೇಕ್ಷಕಿಯರ ಸಂಖ್ಯೆಯನ್ನು ಅವಳಿಗರಿವಲ್ಲದಂತೆಯೇ ಜಾಸ್ತಿ

ಮಾಡಿದ ಲಿಲ್ಲೀಬಾಯಿ ಎರಡು ಟಿಕೆಟಿಗೆ ನಾಲ್ಕು ಜನರನ್ನು ಬಿಡಲು ಹಾಗೂ ಒಬ್ಬರ ನಂತರ ಒಬ್ಬರನ್ನು ಬೇಗ ಬೇಗ ನೂಕಿ ಬಿಡುವುದನ್ನು ಕಲಿತಿದ್ದಾಳೆ. ಅಷ್ಟೇ ಅಲ್ಲ ಆ ಇಬ್ಬರಿಗೆ ಕೊಡಬೇಕಾದ ಟಿಕೆಟಿನ ಅರ್ಧ ಹಣವನ್ನು ಸಿನಿಮಾ ಶುರುವಾದ ಮೇಲೆ ಅವರು ಕುಳಿತಲ್ಲಿಗೇ ಬಂದು ಕತ್ತಲಲ್ಲಿ ಬಳಚಿ ಕೀಸಿಕೊಂಡು ಹೋಗುತ್ತಾಳೆ. ಇದು ತೀರಾ ಅನಿರೀಕ್ಷಿತವಾಗಿದ್ದರೂ ಹೆಂಗಸರ ಮನೋಲೋಕದಲ್ಲೊಂದು ಸಣ್ಣ ಆಂದೋಲನವನ್ನೇ ಮಾಡಿತು.

ಈಗ ಲಿಲ್ಲಿ ಮಗ್ಗದ ಸೀರೆಗೆ ಬದಲಾಗಿ ವಾಯಲ್ ಸೀರೆ ಉಡುತ್ತಿದ್ದಾಳೆ. ಸ್ಟೀಲಿನ ಎರಡು ಪಾತ್ರೆಗಳನ್ನು ಕೊಂಡಿದ್ದಾಳೆ. ಕಿವಿಯಲ್ಲಿ ಒಂದು ಜೊತೆ ಕುಡುಕುಗಳು ಬಂದಿವೆ, ಮೀನು ಪೇಟೆಗೆ ಹೋಗುವುದು ಮಾಮೂಲಾಗಿದೆ. **'ಒಗೆಯುವ ಕಲ್ಲು ಸರಿ ಇಲ್ಲವೆಂದು ಕಷ್ಟಪಡುತ್ತಿದ್ದವಳು ಮನೆ ಹಿಂಬದಿಯಲ್ಲಿ ಮೊಣಕಾಲೆತ್ತರಕ್ಕೆ ಒಗೆಯುವ ಕಲ್ಲನ್ನು ಹಾಕಿಸಿಕೊಂಡು ಒತ್ತಿನಲ್ಲಿ ಎರಡು ಬಾಳೆ ಕುರಲಿಗಳನ್ನು ನೆಟ್ಟಳು. ಕಲ್ಲುಹಾಕಿಸಿದ ದಿನ ಎದುರು ಸಿಕ್ಕವರೊಡನೆ 'ಏನೇ ಆಗಲಿ, ಒಂದು ಒಗೆಯುವ ಕಲ್ಲು ಹಾಕಿಸಿಕೊಂಡೆ'–ಎಂದು ಸುಖಿಸಿದಳು. ಒಮ್ಮೆ ಸೀರೆ ಕೊಳ್ಳುವಾಗ ವಾಟಮರೆ 'ಏನು ಲಿಲ್ಲಿ, ದೆಸೆ ವಕ್ಕಿದ ಹಾಗೆ ಕಾಣುತ್ತದೆ. ಹೀಗೇ ನಡೆದರೆ ಮನೆಕಟ್ಟಿಸುತ್ತೀಯಾ ಏನು'– ಎಂದು ವಾರೆಯಾಗಿ ನಕ್ಕನಂತೆ. ಅದು ಅವಳ ನೆತ್ತಿಗೇ ಏರಿ, 'ಹೋಗ, ನೀನು ಹೇಗೆ ದುಡ್ಡು ಮಾಡಿದೆ ಅಂದ ನನಗೆ ಗೊತ್ತಿಲ್ಲವೆ? ಈಗ ಜವಳಿ ಅಂಗಡಿ ಇಟ್ಟು ಮೆರೆಯುತ್ತಾನೆ. ನನ್ನಂಥ ಬಡವೆ ಎರಡು ಬಾಳೆ ಕುರಲಿ ನೆಟ್ಟು ಸುಖ ಪಡುವುದನ್ನೂ ಕಾಣಲಿಕ್ಕಾಗುವುದಿಲ್ಲ ನಿನ್ನ ಕೈಯಿಂದ, ಸುಳ್ಳೆ?'– ಎಂದಾಗ ಆತ ಕಪಾಳ ಮುಟ್ಟಿ ಕೊಂಡನಂತೆ. 'ಹಾಗಾದರೆ ಆ ಬೇವರ್ಸಿ ನನಗೆ ದುಡ್ಡು ಮಾಡಲಿಕ್ಕೆ ಬರುವುದಿಲ್ಲ ಅಂತ ಮಾಡಿಕೊಂಡನೆ?– ಎಂದು ಒಮ್ಮೆ ಕೇಳಿಕೊಂಡರೆ, ಇನ್ನೊಮ್ಮೆ 'ಇಷ್ಟಕ್ಕೂ ಕಿರಿಬೆಟ್ಟು ಹಿಗ್ಗಿದರೆ ಎಷ್ಟು ಹಿಗ್ಗೀತು? ನಾನು ದುಡ್ಡು ಮಾಡಿದರೂ ಎಷ್ಟು ಮಾಡಿಯೇನು? ಇವನ ಹಾಗೆ ಯಾರ ಯಾರದೋ ಮನೆ ಪೂರ್ತಿ ಬಡಿಗುಡಿ ಮಾಡಲು ನನ್ನಿಂದ ಆದೀತೇ! ಆದರೂ ಅವನನ್ನು ಕೇಳುವವರಿಲ್ಲ. ನನ್ನನ್ನು ಕೇಳುವವರಿದ್ದಾರೆ ಎಂದರೆ!'– ಎಂದು ಚಿಂತಿಸುವಳು".**[೨೫]

ಲಿಲ್ಲಿಯ ಯೋಚನೆ ಸರಿಯಾಗಿಯೇ ಇದೆ. ಇಡೀ ಊರನ್ನೇ ಧೂಳಿಪಟ ಮಾಡುವ ಗಂಡಸರಿದ್ದಾರೆ. ಆದರೆ ಅದು ಅಷ್ಟು ದೊಡ್ಡ ಸುದ್ದಿಯಾಗಲಿಕ್ಕಿಲ್ಲ. ಇಲ್ಲಿ ಲಿಲ್ಲಿ ದೊಡ್ಡ ಸಂಚಲನವನ್ನೇ ಉಂಟು ಮಾಡಿದಂತೂ ಸತ್ಯ. ಮುಂದೆ ಗುಲಾಬಿ ತೀರಿಕೊಂಡ ನಂತರ ಮಗ ಚಂದ್ರಪ್ಪ ಟಾಕೀಸನ್ನು ಮಾರಿದ ಅಷ್ಟರೊಳಗೆ ಗಟ್ಟಿಯಾಗಿ ಬೇರೂರಿ ನರ್ಸಿಂಗ್ ಹೋಂ ಕಟ್ಟಿಸುತ್ತಿದ್ದ. ಡಾಕ್ಟರನಿಗೆ ಗುಲಾಬಿಯ ಹೆಸರಲ್ಲಿ ಒಂದು ಸ್ಪೆಷಲ್ ರೂಂ ಇರಲಿ ಎಂದು ಅವಳ ಸೇವೆಯಾಗಿ ಅದಕ್ಕೆ ಬೇಕಾದಲ್ಲಿ ದುಡ್ಡು ಕೊಟ್ಟು ಹೊರಟುಹೋದ. 'ಗುಲಾಬಿ ಟಾಕೀಸ್' ಹೆಸರು ಬದಲಾಯಿತು. ಆದರೆ ಅದು ಊರಿನಲ್ಲಿ ಎಬ್ಬಿಸಿದ ಅಗೋಚರವಾದ ಅಲೆಮಾತ್ರ ಶಾಂತವಾಗಿ

ನಿಂತಿತು. ಲಿಲ್ಲೀಬಾಯಿ ಹೊಸ ಮ್ಯಾನೇಜ್‌ಮೆಂಟಿನಲ್ಲಿ ತನಗೆ ಕರೆ ಬರುತ್ತದೆ ಎಂದು ಕಾದಳು. ಹಳಬರನ್ನೇ ನೇಮಿಸಿಕೊಳ್ಳುತ್ತಾರೆ ಎಂಬ ವದಂತಿ ಕೂಡ ಇತ್ತು. ಸ್ವತಃ ತಾನೆ ಹೋಗಿ ನಾಲ್ಕು ಸಲ ಸಂಬಂಧಪಟ್ಟವರಿಗೆ ನಮಸ್ಕಾರ ಹೇಳಿ ಮುಖ ತೋರ್ಸಿಸಿಯೂ ಬಂದಿದ್ದಳು. ಆದರೆ ಹೆಂಗಸರ ಕಡೆ ಹೆಂಗಸು ಗೇಟ್ ಕೀಪರ್ ಏಕೆ? ಅವರವರು ಒಳಗೊಳಗೇ ಮಸಲತ್ತು ಮಾಡುವುದು ಬ್ರಹ್ಮನಿಗೂ ತಿಳಿಯುವುದಿಲ್ಲ' ಅಂತೆಲ್ಲ, ಗಂಡಸರಿಗೆ ಮಸಲತ್ತು ಮಾಡಲಿಕ್ಕೇ ಬರುವುದಿಲ್ಲ ಎಂಬಂತೆ, ಚರ್ಚೆಯಾಗಿ ಲಿಲ್ಲಿಯ ಜಾಗದಲ್ಲಿ ಶೀನ ಎಂಬವ ನೇಮಕಗೊಂಡ.

ಗುಲಾಬಿ ಟಾಕೀಸ್ ಆಗಮನದಿಂದ ಹೆಂಗಸರ ಉಡುಗೆ ತೊಡುಗೆ, ಪ್ರಸಾಧನ, ಅಲಂಕಾರಗಳಲ್ಲಿ ಗಮನಾರ್ಹ ಬದಲಾವಣೆ ಕಾಣಲಾರಂಭಿಸಿತು. ಮುಖ್ಯವಾದ ಬದಲಾವಣೆ ಎಂದರೆ 'ಗಂಡಸರೆದುರು ಹೆರುವುದೇ' ಎಂದು ಮುಜುಗರ ಪಟ್ಟುಕೊಳ್ಳುತ್ತಿದ್ದ ಹೆಂಗಸರು ಹೆರಿಗೆಗಾಗಿ ಆಸ್ಪತ್ರೆಗೆ ಹೋಗಬೇಕಾದ ಹೊಸ ಪರಿಸ್ಥಿತಿಗೆ ನಿಧಾನವಾಗಿ ಒಗ್ಗಿಕೊಳ್ಳುತ್ತಾರೆ. ಕುಟುಂಬ ಯೋಜನೆಯ ಪ್ರಯೋಜನವನ್ನೂ ಪಡೆಯಲಾರಂಭಿಸುತ್ತಾರೆ. ಎಲ್ಲಕ್ಕಿಂತ ಮುಖ್ಯ ಬದಲಾವಣೆ ಎಂದರೆ ಊರಿನ ಹೆಂಗಸರಿಗೆ ಮುಂಚಿನಷ್ಟು ಭೀತಿಯೂ ಇಲ್ಲ. ಮುಂಚಿನಷ್ಟು ಖಾಲಿ ಕೈಯೂ ಇಲ್ಲ. ಸಂಜೆ ಸಿನಿಮಾಕ್ಕೆ ಹೋಗುತ್ತೇವೆ ಎಂದು ದೃಢವಾಗಿ ಹೇಳಿ ಹೋಗುವಷ್ಟು ಧೈರ್ಯ ಶಾಲಿಗಳಾಗಿದ್ದಾರೆ. ಈ ಎಲ್ಲಾ ಬದಲಾವಣೆಗಳು ಕರಾವಳಿ ಪ್ರದೇಶಕ್ಕೆ ಆಧುನಿಕತೆಯ ಆಗಮನವಾದುದ್ದನ್ನು ಸೂಚಿಸುತ್ತವೆ.

'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ತೀರಾ ಅಪರೂಪದ ಕಥೆ. ಶಕುಂತಲೆಯ ಕಥೆಯನ್ನು ಹಲವು ಲೇಖಕರು ಬರೆದಿದ್ದಾರೆ. ಪ್ರತಿಯೊಬ್ಬ ಲೇಖಕರೂ ತಮ್ಮದೇ ಆದ ಪಠ್ಯಾಂತರಗಳನ್ನು ಮಾಡಿಕೊಂಡಿದ್ದಾರೆ. ಲೇಖಕರ ಲೋಕ ದೃಷ್ಟಿಗೆ ಸಾಪೇಕ್ಷವಾಗಿ ಕಥೆಯೂ ಬದಲಾಗುತ್ತ ಬಂದಿದೆ. ಸಾಹಿತ್ಯ ಚರಿತ್ರೆಯಲ್ಲಿ ಇದೇನೂ ಅಸಾಧ್ಯವಲ್ಲ; ಅಸಹಜವೂ ಅಲ್ಲ, ಆದರೂ ವೈದೇಹಿಯವರ ಈ ಕಥೆ ಸಮಕಾಲೀನ ಕನ್ನಡ ಕಥಾ ಸಾಹಿತ್ಯದಲ್ಲಿ ಅಪೂರ್ವವಾಗಿ ಕಾಣಿಸುತ್ತದೆ. ಏಕೆಂದರೆ ಇಲ್ಲಿ ವೈದೇಹಿಯವರ ಶಕುಂತಲೆ ಆವೇಶದ ಏರುದನಿಯಲಿ ಸಿಟ್ಟಿನಲ್ಲಿ ಹೂಂಕರಿಸುವುದಿಲ್ಲ. ಕಣ್ಣೀರು ಸುರಿಸುವುದಿಲ್ಲ, ಸಿನಿಕತನದಲ್ಲಿ ಮುಳುಗಿ ಹೋಗುವುದಿಲ್ಲ ಇಲ್ಲಿ ಶಕುಂತಲೆ ಪ್ರಬುದ್ಧಳಾಗಿದ್ದಾಳೆ. ಬೌದ್ಧಿಕ ಎಚ್ಚರವನ್ನು ಕಾಯ್ದುಕೊಳ್ಳುತ್ತಲೆ ಭಾವನೆಗಳನ್ನು ಜೀವಂತವಾಗಿಟ್ಟುಕೊಂಡಿದ್ದಾಳೆ. ಹಾಗಾಗಿ ಬುದ್ಧಿ ಭಾವಗಳ ಸಮತೋಲನ ಸಾಧ್ಯವಾಗಿದೆ.

ವೈದೇಹಿಯವರ ಶಕುಂತಲೆ ದುಷ್ಯಂತನಿಗಾಗಿ ಅಳುತ್ತಿಲ್ಲ ಮಗುವಿಗಾಗಿ ತಾಯ್ತನದ ಸುಖಕ್ಕಾಗಿ ಹಂಬಲಿಸುತ್ತಾಳೆ. ಇಲ್ಲಿ ಜೀವನದ ಸತ್ಯಗಳನ್ನು ಹೇಳಿಕೊಳ್ಳುವಾಗ ತನ್ನ ಮನಸ್ಸಿನಲ್ಲಿ

ಯಾವ ಕಹಿಯನ್ನೂ ಉಳಿಸಿಕೊಂಡಿಲ್ಲ. ಕಥೆ ಹಾಗೆ ಇದೇ ಬದಲಾಗಿಲ್ಲ ಇಲ್ಲಿಯು ದುಷ್ಯಂತ ಶಕುಂತಲೆಯನ್ನು ಗುರುತಿಸುವುದಿಲ್ಲ 'ಉಂಗುರ ತೋರಿಸಬಾರದೇ' ಎನ್ನುತ್ತಾಳೆ ಗೌತಮಿ. ವೈದೇಹಿ ಅವರ ಶಕುಂತಲೆ ಉಂಗುರವನ್ನು ಕಳೆದುಕೊಂಡಿರುವುದಿಲ್ಲ. ಅವಳು ಅದನ್ನು ದುಷ್ಯಂತನಿಗೆ ತೋರಿಸುವುದಿಲ್ಲ ಅಷ್ಟೆ. ಶಕುಂತಲೆ ಹೇಳುತ್ತಾಳೆ "ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇನು ನಾನು? ತೋರಿಸುವುದಿಲ್ಲವೆಂದರೂ ಉದ್ಧಟತನವಾಗುತ್ತದೆ. ಅದು ಕಳೆದು ಹೋಯಿತೆಂದೇ ದುಃಖ ನಟಿಸಿದೆ. ಮರೆವಿನ ನಟನೆಗೆ ಉಂಗರ ಎಂದಾದರೂ ಔಷಧಿಯಾಗುವುದೆಂತ ಇದೆಯೆ?' ಇಲ್ಲಿ ಶಕುಂತಲೆ ಏನನ್ನು ಸಾಧಿಸಬಯಸುತ್ತಿಲ್ಲ, ಏನನ್ನು ಸ್ಥಾಪಿಸಲು ಬಯಸುತ್ತಿಲ್ಲ. ಎಲ್ಲವೂ ಮುಗಿದು ಹೋದ ಮೇಲೆ ತನ್ನ ಜೀವನದ ಸಂಧ್ಯಾ ಕಾಲದಲ್ಲಿ 'ಈಕೆ ಯಾರು? ಪ್ರೇಮಿಯೇ, ವಿರಹಿಣಿಯೇ, ತಪಸ್ವಿನಿಯೇ? ಅಥವಾ ಈ ಎಲ್ಲದರ ಪರಿಪಾಕವೇ? ಅಥವಾ ಎಲ್ಲವೂ ಆಗಿ ಎಲ್ಲವನ್ನು ಕಳೆದು ಚೊಕ್ಕವಾದ ತಾಜಾ ಪ್ರಕೃತಿಯೇ ಎಂದು ಅನ್ನಿಸುವಂಥ ನೆಲೆಯಲ್ಲಿ ನಿಂತು ಕಥೆ ಹೇಳುತ್ತಾಳೆ. ಮಾರೀಚನ ಆಶ್ರಮಕ್ಕೆ ಬಂದು ಮಗನನ್ನು ಪಡೆದಿದ್ದಾಳೆ. ಮಗ ದೊಡ್ಡವನಾಗಿ ಅಪ್ಪನೊಡನೆ ರಾಜಧಾನಿಗೆ ಹೊರಟಿದ್ದಾನೆ.

ದುಷ್ಯಂತ ಶಕುಂತಲೆಯರ ಮರುಭೇಟಿ 'ಬಾ' ಎಂದ ರಾಗ ತುಂಬಿ, ಅದೇ ದುಷ್ಯಂತ! ಹೋಗಲೇ ನಾನು? ಹೋಗಬೇಕೆ? ಮಾರೀಚರು ಮೌನಧಾರಣೆ ಮಾಡಿದರು, ನಿರ್ಧಾರ ಶಕುಂತಲೆಯದಾಗಿತ್ತು. ಅವಳಿಗಾತ ಅನಿವಾರ್ಯವೆಂದ ಮಾತ್ರಕ್ಕೆ ಅವಳು ಆತನಿಗೆ ಅನಿವಾರ್ಯವಾಗಬೇಕಿಲ್ಲವೆಂಬ ಸತ್ಯದಂಚಿನಲಿ ನಿಂತು ಚಿಂತಿಸಿದಳು. ಪರಸ್ಪರ ಅನಿವಾರ್ಯವಾಗುವವರೆಗೆ ಕೂಡುವುದು ತಪ್ಪು ಎನಿಸಿತು. ... ಆಕೆ ಹೋಗಲಿಲ್ಲ... 'ಭರತನನ್ನಪ್ಪಿಕೊಂಡು ಹೊರಟೇ ಹೋದ ದುಷ್ಯಂತ. ಸದಾ ಸುಖಿ? ಆತನ ದ್ವಂದ್ವಗಳಲ್ಲಿ ಕಾವ್ಯಕ್ಕೆ, ಜಗತ್ತಿಗೆ ಮಹಾರಾಜನ ಮನಸ್ಸು ಈ ಪರಿಯೆಂದು ಸಮರ್ಥಿಸಲಿಕ್ಕೆ, ಅಧ್ಯಯನಕ್ಕೆ ಹೊರತು ಸತ್ಯ ಕಾಯಲಿಕ್ಕಲ್ಲ. ಸತ್ಯವನ್ನು ಕಾಯಬೇಕಾಗಿಯೂ ಇಲ್ಲ? ಶಕುಂತಲೆ ಕೂಗಿ ಹೇಳುತ್ತಾಳೆ 'ನನಗೆಂದೂ ನಿನ್ನ ನಲ್ಲೆಯರ ಮೇಲೆ ಮಾತ್ಸರ್ಯವಿಲ್ಲಾ...' ಎಂದು.

'ತನಗೆ ತಾನೇ ಗುರುವಾದಳು, ಶಿಷ್ಯೆಯಾದಳು, ಮಗು ಸರ್ವದಮನ ಜನಿಸಿದ. ಶಮನವಾಯಿತೇ ನೋವು? ಕಳೆಯಬೇಕು ಎಂದೊಡನೆ ಯಾವುದೂ ಕಳೆಯುವುದಿಲ್ಲ. ಕಡಿಮೆಯಾದೀತು ಸುಪ್ತತಲಕ್ಕೆ ಇಳಿದೀತು, ಕಾಲ ಸಂದಂತೆ, ಸುಪ್ತತಲಕ್ಕೆ ಇಳಿಯಿತು ಎಂದುಕೊಂಡಿದ್ದೆ. ಆದರೆ ತಳಕ್ಕಿಳಿದ ನೋವು ಮತ್ತೆ ಕದಡಿ ಮೇಲೆ ಬಂತು. ಬೆಳದಿಂಗಳನ್ನ ಕೂಡಿ ಬಂತು. ದುಷ್ಯಂತ ಬಂದಿದ್ದ. ಇಲ್ಲಿ ವೈದೇಹಿ ಶಕುಂತಲೆಯನ್ನು ಆದರ್ಶೀಕರಿಸುವುದಿಲ್ಲ. 'ಸಹಜವನ್ನು ಸಹಜವಾಗಿ ಸ್ವೀಕರಿಸುವ ಅಭ್ಯಾಸವೇ ಇಲ್ಲದ ಲೋಕದ ಮಾತು ಲೋಕಕ್ಕಿರಲಿ

ನನಗೆ ಬೇಡ' ಎಂದು ಶಕುಂತಲೆ ಒಂದು ಘಟ್ಟದಲ್ಲಿ ನುಡಿಯುತ್ತಾಳೆ. ಅವಳು ನೋಯದೆ ಬೇಯದೆ ಪ್ರಬುದ್ಧಳಾದದ್ದಲ್ಲ; ಪ್ರಬುದ್ಧತೆ ಎನ್ನುವುದು ಎಲ್ಲವನ್ನು ಕಳಚಿಕೊಂಡು ಸ್ಥಿತಿಯೂ ಅಲ್ಲ. ಬದಲಾಗಿ ಹೆಣ್ಣು ಬದಲಾಗಬೇಕಾದ, ಗಟ್ಟಿಗೊಳ್ಳಬೇಕಾದ ವಾಸ್ತವತೆಯನ್ನು ಈ ಕಥೆ ನಿರೂಪಿಸುತ್ತದೆ.

'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥೆಯಲ್ಲಿ ಮದುವೆ ಮನೆಯೊಂದರ ಸ್ವಾರಸ್ಯಪೂರ್ಣ ನಿರೂಪಣೆ ಇದೆ. ಈ ಕಥೆಯ ಮೂಲಕ ವೈದೇಹಿ ಕಣ್ಮರೆಯಾಗುತ್ತಿರುವ ಒಂದು ಸಂಸ್ಕೃತಿಯ ಚಿತ್ರವನ್ನು ಕೊಡುತ್ತಾರೆ. ಹಳೆಯ ಕಾಲದವರ ನಂಬಿಕೆಗಳು ಆಧುನಿಕರ ಆಸೆ ಕನಸುಗಳು ಒಮ್ಮೊಮ್ಮೆ ಮುಖಾಮುಖಿಯಾಗುವುದನ್ನು ಕಾಣಬಹುದಾಗಿದೆ.

ಮದುವೆ ಮನೆಯ ಗದ್ದಲ, ಜಗಳ, ಸೀರೆಯ ಸರಬರಗಳ ನಡುವೆ ಕಾಲ ಬದಲಾಗುತ್ತಿರುವ ಸೂಕ್ಷ್ಮ ಚಿತ್ರಗಳು ಮನದಟ್ಟಾಗುತ್ತವೆ. ಹಲವು ಪೀಳಿಗೆಗಳ ಗಂಡುಹೆಣ್ಣುಗಳು ಸೇರಿರುವ ಈ ಮದುವೆ ಮನೆಯಲ್ಲಿ ಹಲವು ಮೌಲ್ಯಗಳು, ನಂಬಿಕೆಗಳು ಅವುಗಳ ಸ್ಥಿತ್ಯಂತರ ಅವಸ್ಥೆಯಲ್ಲಿ ಕಾಣಿಸುತ್ತದೆ.

'ಅಲಂಕಾರ ಮಾಡಿಕೊಳ್ಳುವ ಹೆಂಗಳೆಯರಿಂದ ತುಸು ದೂರದ ಮೂಲೆಯಲ್ಲಿ ಕುಳಿತ ಬೋಳು ತಲೆಯ ಮುದುಕಿಯರಿಗೆಲ್ಲ ಕೋಣೆಗೆ ಬರುವವರು ಹೋಗುವವರು ಚೆನ್ನಾಗಿ ಕಾಣುತ್ತಿದ್ದಾರೆ. ರಾಮರಾಯರ ಮಗಳು ತೋಳಿಲ್ಲದ ರವಿಕೆಯಲ್ಲಿ ಬಂದದ್ದು ಹೆಬ್ಬಾಗಿಲಜ್ಜಿಗೆ ನರಕ್ ನರಕ್ ಎನಿಸಿದೆ'. ಆದರೆ ಇವರೆಲ್ಲರ ಮಾತಿಗೆ ಕ್ಯಾರೆ ಇಲ್ಲವೆಂಬಂತಿರುವ ಅವಳನ್ನು ಇತರ ಹುಡುಗಿಯರು ಮತ್ತೆ ಮತ್ತೆ ನೋಡುತ್ತಿದ್ದಾರೆ. ಮತ್ತೆ ಯಾರೋ ಒಬ್ಬಳು ತುಟಿಗೆ ಕೆಂಪು ಬಳಿದುಕೊಂಡು, ನೆತ್ತಿಯ ಮೇಲೆ ತುರುಬು ಕಟ್ಟಿಕೊಂಡು ಓಡಾಡುತ್ತಿದ್ದಾಳೆ. ಪ್ರತಿಯೊಬ್ಬರು ಕನ್ನಡಿಯ ಮುಂದೆ ಮೈಮರೆತ ರೀತಿ ಹಳೆಯದರ ನೆನಪನ್ನು ಹಳೆಯವರಿಗೆ ಕೆದಕಿ ಕೊಡುವಂತಿದೆ. ತಮ್ಮ ಕಾಲದ ಮದುವೆಯ ಅಪ್ಪಟ ಪರಿಮಳವನ್ನು ಎಳೆದು ತರುವಂತಿದೆ. ಅವರೆಲ್ಲರೂ ಸಾಮೂಹಿಕ ನಿರ್ಧಾರಕ್ಕೆ ಬಂದಿದ್ದಾರೆ. 'ಇನ್ನು ಬದುಕಿದರೆ ಕಷ್ಟವೇ' ಮತ್ತು ಈಗಿನ ಅಬ್ಬೆಯರಿಗೆ ಬುದ್ಧಿ ಇಲ್ಲ ಜುಟ್ಟು ಬಗ್ಗಿಸಿ ಬುದ್ಧಿ ಕಲಿಸುವುದು ಬಿಟ್ಟು ಹೀಗೆ ಓಡಾಡಲು ಬಿಟ್ಟಿದ್ದಾರೆ ಎಂಬಂತೆ ಮಾತಾಡಿಕೊಳ್ಳುತ್ತಾರೆ.

ರಾತ್ರೋ ರಾತ್ರಿ ಸಂಭವಿಸುವ ವಿದ್ಯಮಾನವಲ್ಲ ಈ ಬದಲಾವಣೆ. ಅಪ್ಪ ಅಮ್ಮ ನೋಡಿದವರನ್ನು ತಲೆ ಬಗ್ಗಿಸಿಕೊಂಡು ಮದುವೆಯಾದರೆ ಅಜ್ಜಿಯರಿಗೆ ಅಚ್ಚುಮೆಚ್ಚು 'ಅಡ್ಡಿಲ್ಲ ಹೆಣ್ಣಿಗೆ ಒಳ್ಳೆಯ ಭಯ ಭಕ್ತಿ ಕಲಿಸಿದ್ದಿ ಈಗಿನವರ ಹಾಗೆ ಧಿಮಿಧಿಮಿ ಇಲ್ಲ. ನಾಳೆ ಗಂಡನೊಟ್ಟಿಗೆ

ಸಾಭೀತಿಯಿಂದ ಬಾಳೀತು' ಎಂದು ಹಾರೈಸಿಯಾರು ಈ ಅಜ್ಜಿಯರು. ಹೊಸ ಮನೋಧರ್ಮದ ಹುಡುಗಿಯರೂ ಇದ್ದಾರೆ, ಅಪ್ಪ ಅಮ್ಮ ಹೇಳಿದ್ದಕ್ಕೆ ತಲೆಯಾಡಿಸುವ ಹುಡುಗಿಯರೂ ಇದ್ದಾರೆ.

ವಾಸುದೇವನ ಮಗನ ಮಗಳು ವಾರಿಜಳನ್ನ ನೇರಳೆ ತೋಟದ ಭೀಮರಾಯರು ತಮ್ಮ ಮನೆಗೆ ತಕ್ಕವಳೆಂದು ಹೇಳಿದರಂತೆ. ಹುಡುಗನೂ ನೋಡಿ ಒಪ್ಪಿದ್ದಾನೆ ವಾಗಜ್ಜೀ. ಜಾತಕ ಕೂಡಿತೆಂದರೆ ಈ ಶ್ರಾವಣದಲ್ಲಿಯೇ ಮದುವೆ ಎಬ್ಬಿಸಿ ಬಿಡುತ್ತೇನೆ ಎಂದು ಕಾಲು ಮುಟ್ಟಿ ನಮಸ್ಕರಿಸಿದನು. 'ಅವನ ಮಗಳೂ ಬುಡ್ಡೆಂತ ಕಾಲಿಗಡ್ಡ ಬಿತ್ತು. ವಿಷಯ ತಿಳಿದಿದ್ದರೂ ಅದರ ಮುಖದಲ್ಲಿ ಸಂತೋಷದ ಕಳೆಯಿಲ್ಲವೇಕೆ?'

"ತಾಯಿಯೊಂದಿಗೆ ಹೋಗದೆ ತನ್ನ ಓರಗೆಯವರೊಂದಿಗೆ ಮದುವೆ ಮನೆಯಲ್ಲಿ ಇನ್ನೂ ಉಳಿದುಕೊಂಡಿದ್ದ ಲತಾ ಈಗ ಕಂಬಕ್ಕೊರಗಿ ಬರೆಯುತ್ತಾ ಕುಳಿತಿದ್ದ ಸಮಾಜಶಾಸ್ತ್ರಜ್ಞೆಯ ಬಳಿ ನಿಧಾನವಾಗಿ ಬಂದಳು. ತನ್ನ ತಾಯಿಯೂ ಅವಳ ತಾಯಿಯೂ ಜಗಳವಾಡಿದ ಬಿಸಿಯ ಝಳವೇ ಇಲ್ಲದ ಒದ್ದೆ ಸ್ವರದಲ್ಲಿ ಹೇಳುತ್ತಾಳೆ. 'ಅಲ್ಲ, ಹುಡುಗ ಒಪ್ಪಿದ ಮೇಲೆ, ಹುಡುಗಿಗೂ ಒಪ್ಪಿಗೆಯೇ ಎಂದು ವಿಚಾರಿಸಿ, ಆಕೆ ಒಪ್ಪಿದಳೆಂದಾದರೆ ಸ್ವಸ್ಥ ಮದುವೆ ಮಾಡುವುದು ಬಿಟ್ಟು, ಭೀಮರಾಯರಿಗೆ ಮತ್ತು ಆ ವಾಸುದೇವರಾಯರ ಮಗನಿಗೆ ಜಾತಕದ ಸುದ್ದಿಯೇಕೆ?'– ಇನ್ನು ಹೆಚ್ಚಿಗೆ ಹೇಳಬೇಕೆಂದುಕೊಂಡರೂ ಹೇಳಲಾಗದೆ ನುಂಗಿ ಕಷ್ಟಪಟ್ಟು ಕೇಳಿದ ಇದೊಂದೇ ಪ್ರಶ್ನೆ ಲತಾಳ ಸ್ವಂತ ಪ್ರಶ್ನೆಯೇ ಸ್ವಗತವೂ ಎಂಬಂತೆ ಇತ್ತು.

ಸಮಾಜಶಾಸ್ತ್ರಜ್ಞೆ ಒಮ್ಮೆ ಮುಖವೆತ್ತಿ ನೋಡಿದಳು. ಲತಾಳ ಕನಸುಗಣ್ಣುಗಳನ್ನೇ ದಿಟ್ಟಿಸಿದಳು. ತನ್ನದೇ ಆದ ಹಲವು ಪ್ರಶ್ನೆಗಳ ಜೊತೆಯಲ್ಲಿ ಅವಳ ಈ ಪ್ರಶ್ನೆಯನ್ನು ಗುರುತಿಸಿಕೊಂಡಳು".[೨೬]

ಹೆಣ್ಣು ಮಕ್ಕಳ ಮನಸ್ಸಿನ ಇಂಗಿತಗಳು, ಆಸೆ, ಕನಸುಗಳು ಕೇವಲ ಮದುವೆಗೆ ಸಂಬಂಧಿಸಿದುದಷ್ಟೇ ಅಲ್ಲ ಎಂಬುದು ಗೊತ್ತಿರುವುದೆ. ಮದುವೆ ಎಂಬ ಸಾಮಾಜಿಕ ಸಂಸ್ಥೆ ನಮ್ಮ ಸಂಸ್ಕೃತಿಯಲ್ಲಿ ಇನ್ನೂ ತನ್ನ ಆಳವಾದ ಪ್ರಭಾವವನ್ನು ಉಳಿಸಿಕೊಂಡಿರುವುದರಿಂದ ಅದರ ಸಂದರ್ಭದಲ್ಲೇ ನಮ್ಮ ಬಹಳಷ್ಟು ಸಾಹಿತ್ಯ ಕೃತಿಗಳು ಜೀವನ ಶೋಧನೆಯ ಪ್ರಯತ್ನ ಮಾಡುತ್ತವೆ ಎಂಬುದು ಗಮನಿಸಬೇಕಾದ ಅಂಶ. ಮದುವೆ ಎಂಬುದು ಒಟ್ಟೊಟ್ಟಿಗೇ ಒಂದು ಕೌಟುಂಬಿಕ ಮತ್ತು ಸಾಮಾಜಿಕ ಉತ್ಸವವಾದ್ದರಿಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ನಡಾವಳಿಗಳ ಸೂಕ್ಷ್ಮವಾದ ಪರಿಶೀಲನೆಗೂ ಈ ಸಂದರ್ಭ ಒದಗಿಬರುತ್ತದೆ.

ಸಾಮಾಜಿಕ ಸ್ಥಿತಿ ಬದಲಾದಂತೆ ಹೆಣ್ಣಿನ ಈ ಹಿಂದೆ ಇದ್ದ ಸ್ಥಿತಿಯಲ್ಲಿಯೂ ಬದಲಾವಣೆಯಾಗುತ್ತದೆ ಇದೇ ವಿಚಾರ ವೈದೇಹಿಯವರ 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ಕಥೆಯಲ್ಲಿ ಗುರುತಿಸಬಹುದಾಗಿದೆ. ಪೀಳಿಗೆಗಳ ಸಂಘರ್ಷದ ಒಂದು ಕುತೂಹಲಕಾರಿ ಮಾದರಿ

ಈ ಕಥೆಯಲ್ಲಿದೆ. ಪುಟ್ಟಮತ್ತೆ ಹೆಣ್ಣು ಎನ್ನುವ ಕಾರಣಕ್ಕೆ ಸಾಕಷ್ಟು ಕಷ್ಟಪಟ್ಟಿದ್ದಾಳೆ. ಕಷ್ಟಗಳು ಯಾವಾಗಲೂ ಕಷ್ಟಪಡುವವರಿಗೇ ಬರಬೇಕೆ. ಮದುವೆಯ ಸಂಸಾರದ ಸುಖವನ್ನು ಪುಟ್ಟಮ್ಮತೆ ಯಾತನಮಯವಾಗಿ ಅನುಭವಿಸಿದ್ದಾಳೆ. ಪುಟ್ಟಮ್ಮತ್ತೆಯ ವೃದ್ಧ ಸ್ತ್ರೀ ಪಾತ್ರ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ತಗ್ಗಿಬಗ್ಗಿ ಬದುಕುವ ಕೌಶಲ್ಯ ಅವಳಿಗೆ ಕರಗತವಾಗಿದೆ. ತಾಯಿಯನ್ನು ಕಳೆದುಕೊಂಡ ಮೊಮ್ಮಗಳು ಕಮಲಾವತಿಯೇ ಅವಳಿಗೆ ಸರ್ವಸ್ವ. ತನ್ನ ತಂದೆಯ ಸಾವಿನ ಸುದ್ದಿ ತಿಳಿದಾಗಲೂ 'ಥತ್, ಪುರುಷಮೃಗ' ಎಂದು ಅಜ್ಜಿ ಹೇಳುತ್ತಿದ್ದಾಳೆ ಅಂದರೆ ಅದೆಂತ ವಿಲಕ್ಷಣ ಪ್ರಪಂಚದಲ್ಲಿ ಬದುಕಿ ಬಂದವಳಿರಬೇಕು ಪುಟ್ಟಮತ್ತೆ, ಮೊಮ್ಮಗಳನ್ನು ಚೆನ್ನಾಗಿ ಸಾಕುವುದೊಂದೆ ಅವಳ ಜೀವನದ ಗುರಿಯಾಗಿದೆ. ಕಮಲಾವತಿ ವಯಸ್ಸಿಗೆ ಬಂದಾಗ, ಪುಟ್ಟಮ್ಮತ್ತೆ ತನ್ನ ಪ್ರಾಯ ದಕ್ಷಿಣೆಯ ದುಡ್ಡಿನಲ್ಲಿ ಕಳೆದಿರಬಹುದು, ಆದರೆ ಮೊಮ್ಮಗಳ ಪ್ರಾಯ ಹಾಗೆ ಕಳೆಯುವುದಕ್ಕಾಗುವುದಿಲ್ಲ ಎಂಬುದು ಅಜ್ಜಿಗೂ ಗೊತ್ತಾಗಿದೆ. ಕಮಲಾವತಿ ತನ್ನ ಸುತ್ತಲು ಏನಾಗುತ್ತಿದೆಯೆಂದು ಸೂಕ್ಷ್ಮವಾಗಿ ಗಮನಿಸುವಷ್ಟೆ ತೀವ್ರವಾಗಿ ಪ್ರತಿಕ್ರಿಯಿಸುತ್ತಾಳೆ. ಯಾರಿಗೂ ಯಾವುದಕ್ಕೂ ತಲೆಕೆಡಿಸಿಕೊಳ್ಳದ ದಿಟ್ಟ ವ್ಯಕ್ತಿತ್ವ ಅವಳದು. ತನ್ನ ಅಜ್ಜಿಯನ್ನು ಎಲ್ಲರೂ ಬೇಕಾಬಿಟ್ಟಿಯಾಗಿ ದುಡಿಸಿಕೊಳ್ಳುತ್ತಿರುವ ಸಂಗತಿ ಅವಳಿಗೆ ತಿಳಿಯದ ವಿಷಯವೇನಲ್ಲ. ಅಜ್ಜಿಯದು ತಾಳ್ಮೆಯಿಂದ ಬಾಗುವ ವ್ಯಕ್ತಿತ್ವವಾದರೆ ಮೊಮ್ಮಗಳದ್ದು ಧೈರ್ಯವಾಗಿ ಎದುರಿಸುವ ಗುಣ. ಕಮಲಾವತಿ ಸಿನಿಮಾ ಮಾತ್ರ ನೋಡುತ್ತಿಲ್ಲ ತನ್ನ ಕೈಲು ಒಂದು ಕೆಲಸವಿದ್ದು ತನ್ನ ಕಾಲ ಮೇಲೆ ನಿಂತುಕೊಳ್ಳುವಂತಾಗಿದ್ದರೆ ತನ್ನ ಅಜ್ಜಿಯನ್ನು ಈ ಕಷ್ಟದ ಬದುಕಿಂದ ಬಿಡಿಸಿ ಅಜ್ಜಿಯ ಮೇಲೆ ತನಗೂ ಎಷ್ಟು ಪ್ರೀತಿಯಿದೆ ಎಂದು ತೋರಿಸುತ್ತಿದ್ದೆ ಎಂದು ಕೊಳ್ಳುತ್ತಾಳೆ.

ಮೊಮ್ಮಗಳ ಆಶೋತ್ತರಗಳು ಅಜ್ಜಿಗೆ ಅರ್ಥವಾಗುವುದಿಲ್ಲ. 'ಐದು ಮೈಲಿ ದೂರದ ಊರಿನಲ್ಲಿ ರೆಡಿಮೇಡ್ ಬಟ್ಟೆ ಹೊಲಿಯುವಲ್ಲಿ ಕಮಲಾವತಿ ಸೇರಿಕೊಳ್ಳುತ್ತಾಳೆ. ಇದು ಅಜ್ಜಿಗೆ ಇಷ್ಟವಿಲ್ಲ. ಊರಿನಲ್ಲೂ ಪುಕಾರು ಏಳುತ್ತದೆ. ಆಗಬಹುದಾಗಿದ್ದ ಮದುವೆಯೂ ಕಮಲಾವತಿಗೆ ತಪ್ಪಿಹೋಗುತ್ತದೆ. ಕಮಲಾವತಿ ನಡತೆಗೆಟ್ಟವಳೆ? 'ಒಂದು ದಿನ ಯಾರೋ ಸೆರಗು ಹಿಡಿದನೆಂದು ಅವನ ಕಣ್ಣಿಗಷ್ಟು ಹೊಯಿಗೆ ಚೊಗೆದು ಮುಂಡಗುನ ಓಲೆಯ ಬೇಲಿಯ ಮೇಲೆ ದೂಡಿ ಹಾಕಿ ಬಂದಳು.' 'ಯಾಕೆ ಮರ್ಯಾದೆ ಹೋಪುಕೆ ಬಿಡ್ಲಕಿತ್ತಲೆ'- ಎಂದು ಪುಟ್ಟಮ್ಮತ್ತೆ ಹೇಳಿದರೆ 'ಎಂಥವರಿಂದ ಅದು ಹೋಯ್ಕ್ ಅಂತೆಳಿ ನಂಗೊತ್ತಿತ್' ಎಂದಳು. ಅವತ್ತು ರಾತ್ರಿಯಿಡೀ ಮಲಗಿದಲ್ಲೇ ಉರುಳಿದಳು, ನರಳಿದಳು. ಒಂದು ಗಳಿಗೆ ಕಣ್ಣು ಮುಚ್ಚಲಿಲ್ಲ. ನಿದ್ದೆ ಬಂದಂತೆ ಮಲಗಿದ್ದ ಪುಟ್ಟಮ್ಮತ್ತೆ ಇದೆಲ್ಲವನ್ನು ನೋಡುತ್ತ 'ಉಡಾಫು ಕಡಿಮೆ ಆಯ್ಕಾದರೆ ದೇವರು ಮದ್ದು ಅರೀದೆ ಇರ್ತನಾ' ಎಂದಳು.

ವ್ಯಕ್ತಿತ್ವದ ವೈಯಕ್ತಿಕ ಗಟ್ಟಿತನಗಳು ಎಷ್ಟೇ ಗಟ್ಟಿಯಾಗಿದ್ದರೂ ಬಹಿರಂಗದಲ್ಲಿ ಆಗುವ ಬದಲಾವಣೆಗಳು ವ್ಯಕ್ತಿಗಳ ಅಂತರಂಗದ ಮೇಲೆ ಉಂಟುಮಾಡುವ ಪರಿಣಾಮಗಳ ಬಗ್ಗೆ ಲೇಖಕಿ ಮರೆಮಾಚುವುದಿಲ್ಲ. ಅಂದರೆ ಸಾಮಾಜಿಕ ಸ್ಥಿತಿ ಬದಲಾಗುತ್ತಿದ್ದಂತೆ ಹೆಣ್ಣಿನ ಈ ಹಿಂದಿನ ಸ್ಥಿತಿಯೂ ಬದಲಾಗುವ ಸತ್ಯಕ್ಕೆ ಅವರ ಕಥೆಗಳು ಬೆನ್ನು ತೋರಿಸಿಲ್ಲ. ಮನೆಯೊಳಗೆ ಇರುವ ಹೆಣ್ಣುಮಕ್ಕಳಿಗೂ ಮನೆಯ ಹೊರಗಡೆ ಕಾಲಿಡುವ ಅವಕಾಶವುಳ್ಳ ಹೆಣ್ಣು ಮಕ್ಕಳಿಗೂ ಇರುವ ಸಾಧ್ಯತೆಗಳ ವ್ಯತ್ಯಾಸದ ಸ್ವರೂಪವನ್ನು ವೈದೇಹಿ ಕಥೆಗಳು ಈಗಾಗಲೇ ಗಮನಿಸಿವೆ. ಪುಟ್ಟಮ್ಮತ್ತೆ ಎಷ್ಟೇ ಗಟ್ಟಿಗಿತ್ತಿ ಹೆಂಗಸಾಗಿದ್ದರೂ ಭವಿಷ್ಯವಿರುವುದು, ಭವಿಷ್ಯವನ್ನು ಎದುರಿಸುವ ಹೊಣೆ ಇರುವುದು ಕಮಲಾವತಿಗೇ. ಹೆಣ್ಣಿನ ಸ್ಥಿತಿಯ ಸ್ವರೂಪವನ್ನು ಗುಣಾತ್ಮಕವಾಗಿ ಬದಲಾಯಿಸುವ ಸಾಧ್ಯತೆ ಶಿಕ್ಷಣ ಮತ್ತು ಹೊಸ ಹೊಸ ಉದ್ಯೋಗವಕಾಶಕ್ಕಿದೆ. ಸಾಮಾಜಿಕ ಜೀವನದಲ್ಲೇ ಬದಲಾವಣೆಯಾದಾಗ ವ್ಯಕ್ತಿಯು ಪಾರಂಪರಿಕ ಸ್ಥಿತಿ ಅದೇ ರೀತಿ ಮುಂದುವರಿಯಲು ಸಾಧ್ಯವಿಲ್ಲ. ಎಲ್ಲಾ ಬದಲಾವಣೆಗಳು ಗುಣಾತ್ಮಕವಾಗಿಯೇ ಇರುತ್ತವೆಂದು ಹೇಳಲಾಗದಿದ್ದರೂ ಸ್ಥಿರ ಸಮಾಜ ಚಲಿಸಲು ಪ್ರಾರಂಭಿಸುವುದಂತೂ ನಿಜ ಎಂಬ ನಿಲುವು ಈ ಕಥೆಯಲ್ಲಿ ವ್ಯಕ್ತವಾಗುತ್ತದೆ.

ಸಾಮಾಜಿಕ ಬದಲಾವಣೆಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಿರುವ ಸ್ವಅರಿವನ್ನು ವಿಮೋಚನೆಯ ಹಲವು ಸಾಧ್ಯತೆಗಳಲ್ಲಿ ಪರಿವರ್ತಿಸಿಕೊಳ್ಳಲು ಹೆಣಗಾಡುತ್ತಿರುವ ಸ್ತ್ರೀ ಚಿತ್ರವೊಂದು 'ಒಂದು ಕಳ್ಳ ವೃತ್ತಾಂತ' ಕಥೆಯಲ್ಲಿ ದಾಖಲಾಗಿದೆ.

ವೈದೇಹಿ ತಮ್ಮ ಕಥೆಗಳಲ್ಲಿ ಮನುಷ್ಯನ ನಡವಳಿಕೆಗಳನ್ನು ಸರಳವಾದ ನೈತಿಕ ನೆಲೆಗಳಲ್ಲಿ ಗ್ರಹಿಸದೆ ಒಟ್ಟು ಸಂದರ್ಭಕ್ಕೆ ಹೆಚ್ಚಿನ ಮಹತ್ವ ನೀಡುತ್ತಾರೆ. ಮನಸ್ಸನ್ನು ಕಲಕಿ ಬಿಡುವ ಭೀಕರ ಬಡತನ ಮತ್ತು ಅದರ ಪರಿಣಾಮಗಳ ಸ್ವರೂಪವನ್ನು ವಿನೋದದ ಲಘುದಾಟಿಯಲ್ಲಿ ಕಥೆಯನ್ನು ಚಿತ್ರಿಸಿದ್ದಾರೆ. ಲೇಖಕಿ ಇಲ್ಲಿ ಕಳ್ಳತನವನ್ನು ಎತ್ತಿ ಹಿಡಿಯುತ್ತಿಲ್ಲ ಆದರೆ ಕಳ್ಳತನದ ಪ್ರಶ್ನೆಯನ್ನು ಬದುಕಿನ ಅನಂತ ಸಂದರ್ಭಗಳಲ್ಲಿ ಇಟ್ಟು ನೋಡುತ್ತಾರೆ.

ಕಥೆಯ ಮೊದಲ ವಾಕ್ಯವೇ ಧ್ವನಿ ಪೂರ್ಣವಾಗಿದೆ ಹಾಗೂ ಬಚ್ಚಮ್ಮನ ಬಡತನವನ್ನು ಸೂಚಿಸುತ್ತದೆ. "**ಬಚ್ಚಮ್ಮನಿಗೆ ಕದಿಯುವ ಅಭ್ಯಾಸವೇನೂ ಹುಟ್ಟಿನಿಂದ ಬಂದದ್ದಲ್ಲ. ಎಲ್ಲ ಸಣ್ಣ ದೊಡ್ಡ ಕಳ್ಳರ ಹಾಗೆಯೇ ಆಕೆ ಒಂದು ಮುಗ್ಧ ಮಗುವಾಗಿಯೇ ಜನಿಸಿ ಪ್ರಪಂಚಕ್ಕೆ ಕಣ್ಣು ಬಿಟ್ಟವಳು. ಆದರೆ ಅವಳು ಕಣ್ಣುಬಿಟ್ಟ ಪ್ರಪಂಚದಲ್ಲಿ ಎಲ್ಲದಕ್ಕೂ ತತ್ವಾರವೇ ಇತ್ತು. ಬಹಳ ಕಷ್ಟದಿಂದ ಅವಳ ಅಪ್ಪ ಅಮ್ಮ ಅವಳನ್ನು ದೊಡ್ಡದು ಮಾಡಿದರು. ಒಳ್ಳೆಯ ಒಂದು ಊಟ ಮತ್ತು ತಿಂಡಿಗಾಗಿ ಯಾರಾದಾದರೂ ಉಳ್ಳವರ ಮನೆಯಲ್ಲಿ**

ಊಟ ಏಳುವುದನ್ನೇ ಅವರು ಕಾಯಬೇಕಾಗಿತ್ತು. ಇಷ್ಟಿದ್ದರೂ ಬಚ್ಚಮ್ಮನ ಬಾಯಿ ರುಚಿ ಮಸುಕಾಗುವಂಥದಾಗಿರಲಿಲ್ಲ. ಬದಲು ಬಚ್ಚಮ್ಮ ತಾನು ನಾಳೆ ಮದುವೆಯಾಗಿ ಹೋಗುವ ಬದುಕಿನಲ್ಲಿ ಬೇಕಾದ ಹಾಗೆ ಉಂಡುಟ್ಟು ತಿರುಗುವೆ ಎಂಬ ಆಸೆ ತೊಟ್ಟಿದ್ದಳು. ಆ ಆಸೆಯ ಬಲದಿಂದ ತವರಿನ ದಿನಗಳನ್ನು ಈಸಿದ್ದಳು. ಅವಳ ಹೆತ್ತವರಿಗೂ ತಮಗಿಂತ ಮೇಲಿನ ಒಂದು ಮನೆಗೆ ಅವಳನ್ನು ಸೇರಿಸಬೇಕೆಂಬ ಹಂಬಲವಿತ್ತು".[೨೭]

ಆದರೆ ಗಂಡನ ಮನೆ ಇನ್ನೂ ಘೋರ. ಬಚ್ಚಮ್ಮನಿಗಾದರೋ ಚೆನ್ನಾಗಿ ಉಂಡುಟ್ಟು ಬದುಕುವ ಆಸೆ; 'ಬಚ್ಚಿ ಚಿಂತಿಸಿದಳು ನಿತ್ಯವಲ್ಲದಿದ್ದಾರೆ ಹೋಗಲಿ ಯಾವಾಗಾದರೊಮ್ಮೆಯಾದರೂ ಬಾಯಿಗೆ ಬೇಕಾದ್ದು ಮಾಡಿಕೊಂಡು ಉಣದಿದ್ದರೆ ಅದು ಬದುಕಿದ ಹಾಗೆಯೇ? ಊರವರು ಹತ್ತು ಹಲವು ರೀತಿಯಲ್ಲಿ ಅದೂ ಇದೂ ಮಾಡಿ ತಿಂದು ತಣಿಯುವಾಗ ತಾವು ಅರ್ಧ ರೀತಿಯಲ್ಲಾದರೂ ತಣಿಯದಿದ್ದರೆ? ತಿನ್ನುವ ಪ್ರಾಯದಲ್ಲಿ ತಿನ್ನಬೇಕು. ಹೇರಳವಲ್ಲವಾದರೂ ಎಲ್ಲಾದರೊಮ್ಮೆ ಒಂದು ಚೂರು ಬಂಗಾರ ಮಾಡಿಸಬೇಕು. ಆಗ ಬದುಕಲು ಉಮೇದು ಹುಟ್ಟೀತು'. ಈ ಉಮೇದಿನ ಬಚ್ಚಿ ಏಕಾಏಕಿ ಕಂಡವರ ಮನೆಗೆ ಕನ್ನ ಹಾಕಲು ಹೋದವಳಲ್ಲ. ಕರೆದವರ ಮನೆಗೆ ಒಳಗೆಲಸಕ್ಕೆ ಹೋಗಲಾರಂಭಿಸುತ್ತಾಳೆ. ಅವರಾದರೂ ಇವಳ ಕೆಲಸ ನೋಡಿ ಆದರಿಸುವವರೇನಲ್ಲ. ಆಚೀಚೆ ನೋಡಿ ಬಚ್ಚಮ್ಮ ಎರಡು ದ್ರಾಕ್ಷಿ ಗೋಬೀಜ ಕದಿಯುತ್ತಾಳೆ. ಹಬ್ಬದ ದಿನ ಗಂಡ, ಮಕ್ಕಳಿಗೆ ಪಾಯಸ ಮಾಡಿ ಹಾಕುತ್ತಾಳೆ. ಅವಳ ಗಂಡ ಈ ಪಾಯಸವನ್ನು ಗಡದ್ದಾಗಿ ಹೊಡೆದು ಹಾಗೆಲ್ಲ ಕದಿಯಬಾರದೆಂದು ಹೆಂಡತಿಗೆ ಬುದ್ಧಿವಾದ ಹೇಳುವುದನ್ನು ಕಥೆ ದಾಖಲಿಸುತ್ತದೆ.

ಕಾಮತರ ಅಂಗಡಿಯಲ್ಲಿ ಕೆಲಸ ಮಾಡುವ ವಾಚಣ್ಣ ಮನೆ ಮಗನಂತೆ ದುಡಿಯುತ್ತಾನೆ. ಆದರೆ ತನ್ನ ಮನಗೆ ಬೇಕಾದ ಅಂಗಡಿ ಸಾಮಾನು ಕದ್ದು ತರುವುದಿರಲಿ ಕೇಳಿಯೂ ತರುವುದಿಲ್ಲ. ಕ್ರಿಯಾಶೀಲತೆ ಇಲ್ಲದ, ಕನಸುಗಳಿಲ್ಲದ ಅಲ್ಪತೃಪ್ತ ವಾಚಣ್ಣ, ಕಾಮತರ ಅಂಗಡಿಗೇ ಇನ್ನಷ್ಟು ಜೋತು ಬಿದ್ದರೆ ಮಗ ಮಂಜುನಾಥ ಮಹತ್ವಾಕಾಂಕ್ಷೆಯುಳ್ಳವನು. ಹೊಸ ಸಾಧ್ಯತೆಗಳನ್ನು ಆರಿಸಿಕೊಂಡು ಮನೆಬಿಟ್ಟು ನಡೆಯುತ್ತಾನೆ. 'ಹಾಗಾದರೆ ತಾವು ಸಾಯುವವರೆಗೂ ಹೀಗೆ ಅಂತ ಆಯಿತೆ? ತಮ್ಮ ದೆಸೆ ತಿರುಗುವುದೆಂತ ಇಲ್ಲವೆ? ಮನಸ್ಸು ಮಾಡಬೇಕು ಅಮ್ಮ – ಎಂದು ತಾಯಿಯೆದುರು ಮನಸ್ಸಿನ ಶಕ್ತಿಯ ಕುರಿತು ಭಾಷಣ ಹೊಡೆಯುವ, ಅಪ್ಪ ಮನಸ್ಸು ಮಾಡಿದ್ದರೆ ಇಷ್ಟೊತ್ತಿಗೆ ತಮ್ಮದೂ ಒಂದು ಅಂಗಡಿ ಅಂತ ಇರುತ್ತಿತ್ತು. ಅವರು ಸತ್ಯದ ಹೆಸರಿನಲ್ಲಿ ತಮ್ಮನ್ನೆಲ್ಲ ಬಳಲಿಸಿದ್ದಲ್ಲವೆ? ಪೂರ್ತಿ ಸತ್ಯಕ್ಕೆ ಹೋಗಿದ್ದರೆ ಕಾಮತರು ಅಂಗಡಿ ಬಾಗಿಲು ಹಾಕಬೇಕಿತ್ತು.

ಅದು ಇನ್ನು ಭರ್ಜರಿಯಾಗಿ ನಡೆಯುತ್ತಿದೆ ಯಾಕೆ? ಈ ಸೂಕ್ಷ್ಮ ಅಪ್ಪನಿಗೆ ತಿಳಿದಿಲ್ಲ ಅಂತೀಯಾ? ಎನ್ನುವುದು ಮಂಜುನಾಥನ ಅಭಿಪ್ರಾಯ.

ಕಥೆಗೆ ಒಂದು ತಿರುವು ಸಿಕ್ಕುವುದೇ ಯಜ್ಞೇಶನ ಮದುವೆಯ ಆರತಕ್ಷತೆಯ ಪ್ರಸಂಗದಲ್ಲಿ. ಇಲ್ಲಿ ತನ್ನ ತಾಯಿಗಾದ ಅವಮಾನ ಮಂಜುನಾಥನ ನಿರ್ಧಾರಗಳನ್ನು ಗಟ್ಟಿಗೊಳಿಸುತ್ತದೆ. ಆ ಮಧ್ಯರಾತ್ರಿ ಬಚ್ಚಮ್ಮನಿಗೆ ನಿದ್ದೆ ಹತ್ತುತ್ತಿಲ್ಲ. ಮದುವೆಮನೆಯಲ್ಲಿ ಮಗ ಮಂಜುನಾಥ ಹೋಟೇಲಿಡುತ್ತೇನೆ ಎನ್ನುತ್ತಿದ್ದಾನೆ. 'ನಡುಗಿದಳು ಬಚ್ಚಮ್ಮ ನಿಶ್ಚಂತೆಯೆಂಬುದೇ ಹಾರಿಹೋಯಿತು' ಕಥೆ ಕೊನೆ ಮಾರ್ಮಿಕವಾಗಿದೆ; 'ಮಂಜುನಾಥನನ್ನು ಎಬ್ಬಿಸಿ ಕೇಳಬೇಕೆಂದು ಮೂರು ಮೂರು ಬಾರಿ ಏಳಲು ಹೋದರೂ ಮತ್ತೆ ಅದೇ ಯೋಚನೆ. ಕೊನೆಗೆ ತಡೆಯದೆ ಮೆಲ್ಲನೆದ್ದಳು. ಮಂಜುನಾಥನ ಬಳಿ ಕುಳಿತು ಪಿಸುವಾಗಿ 'ಮಣೀ' ಎಂದಳು. 'ಯೇನಮ್ಮ' ಎಂದು ನಿದ್ದೆಯ ಚರ್ಯೆ ಸಹ ಇಲ್ಲದ ಸ್ವರದಲ್ಲಿ ಕೇಳುತ್ತ ತಟಕ್ಕನೆ ಎದ್ದು ಕುಳಿತ ಮಂಜುನಾಥ 'ಮಣಿ, ಯಂತದೋ ಯಾವುದು ಸರಿ, ಯಾವುದು ತಪ್ಪು ಅಂತ್ಲೇ ನಂಗೆ ತಿಳಿತ್ತಿಲ್ಲೆ. ಬೆಳ್ಳಿ ಪಾತ್ರೆ ಇಲ್ಲೆ ಇಲ್ಲೆ ಇಲ್ಲ ಅಂತಿದ್ರೂ. ನೀನು ಕಂಡ್ರೆ ಹೋದವ್ನೆ ಕಾಗ್ದ ಬರೀತೆ ಅಂತೆ...! ಯಂತದೇ ಇರ್‍ಲಿ ಗಣಪತಿನ್ನ ನೆನೆಸ್ಕೋ, ಹೋಪುದಿತ್ತಾ? ಈ ಕೂಡ್ಲೆ ಮನೆ ಬಿಟ್ ಹೋಗ್... ದೇವ್ರಿದ್ದ' ಎಂದಳು. ಸಫಲವಾಗುವ ಒಳದಾರಿಗಳನ್ನು ಕಂಡುಕೊಳ್ಳುವ ಸಶಕ್ತ ಪಾತ್ರವಾಗಿ ಬಚ್ಚಮ್ಮ ಮತ್ತು ಮಗ ಮಂಜುನಾಥ ಇಬ್ಬರೂ ಕಾಣಿಸುತ್ತಾರೆ.

ಸಣ್ಣಕಥೆಯ ಸೀಮಿತ ಪರಿಧಿಯನ್ನು ದಾಟಿ, ಹಲವು ಹತ್ತು ಘಟನೆಗಳನ್ನು ಒಂದು ಸಾಮಾನ್ಯ ಸೂತ್ರದ ನೆರವಿನಿಂದ ಪೋಣಿಸಿ ಒಂದು ಕಾದಂಬರಿಯ ಅನುಭವವನ್ನೇ ಕೊಡುವ "ಅಲ್ಲಲ್ಲಿನ ಲೋಕದವರು" ಕಥೆ ದೈನಂದಿನ ಬದುಕಿನ ವಿವರಗಳನ್ನು ದಟ್ಟವಾಗಿ, ಸಾಂದ್ರವಾಗಿ ಆ ಪರಿಸರದ ಭಾಷೆಯಲ್ಲೇ ಸೆರೆ ಹಿಡಿದಿರುವ ಲೇಖಕಿ ಒಂದು ಪುಟ್ಟ ವಿಶ್ವವನ್ನೇ ಅಲ್ಲಿ ಸೃಷ್ಟಿಸಿಬಿಟ್ಟಿದ್ದಾರೆ. ಈ ಕಥೆ ವೈದೇಹಿಯವರ ವಿಶಿಷ್ಟ ರಚನೆಗಳಲ್ಲಿ ಒಂದಾಗಿದೆ.

ಇಲ್ಲಿ ಲಕ್ಷ್ಮೀದೇವಮ್ಮ ಈ ಕಥೆಯಲ್ಲಿ ಬರುವ ಉಳಿದ ಸ್ತ್ರೀಪಾತ್ರಗಳಿಗಿಂತ ತುಸು ಅನುಕೂಲಸ್ಥೆ. ಕೆಲಸಗಾರರನ್ನು ಇಟ್ಟುಕೊಳ್ಳುವಷ್ಟು ಮಟ್ಟಿಗೆ ಸ್ಥಿತಿವಂತೆ. ಇಷ್ಟು ಶ್ರೀಮಂತಿಕೆ ಆಕೆಗಿದ್ದರು ಗಂಡ ಮಗನಿಗೆ ತಗ್ಗಿ ನಡೆಯಬೇಕಾದ ಪರಿಸ್ಥಿತಿ. ತನ್ನ ಹೆಂಡತಿಯನ್ನು ಒಂದು ಮಾತು ಕೇಳಬೇಕು; ಅವಳ ಅನುಕೂಲ, ಅನಾನುಕೂಲಗಳೇನು ಎಂಬುದನ್ನು ಯೋಚಿಸದ ಗಂಡ ಗುಂಡಕ್ಕ ಎಂಬ ಮಧ್ಯ ವಯಸ್ಸಿನ ವಿಧವೆಯನ್ನು ಮನೆಗೆ ಕರೆತಂದು ಮನೆಯಲ್ಲಿ ಆಶ್ರಯ ನೀಡುತ್ತಾನೆ.

ಈ ಗುಂಡಕ್ಕನಿಂದೇನು ಲಕ್ಷ್ಮೀದೇವಮ್ಮನಿಗೆ ಸುಖವಿಲ್ಲ. ದಬ್ಬೆ ಕೈಕಾಲುಗಳ ಗುಂಡಕ್ಕ ಉಗುರು ನೀರಿಗೆ ಹಾಕುವವರಲ್ಲ ಅಂದರೆ ಒಂದು ಕೆಲಸ ಮಾಡುವವಳಲ್ಲ. ಸತ್ತ ಮೇಲೆ ತನ್ನ ಆಸ್ತಿ ತಿನ್ನುವವರು ಯಾರು? ಲಕ್ಷ್ಮೀದೇವಿಯೇ ಅಲ್ಲವೆ? ಈಗ ಮಾಡಿ ಹಾಕಲಿ ಎಂದು ತನ್ನನ್ನು ನೋಡಲೆಂದೇ ಬರುವ ಅಂದಿಗರ ಬಳಿ ಹೇಳುವರು'. ಮಗ ರಾಮದೇವ ಲಕ್ಷ್ಮೀದೇವಮ್ಮನಿಗೆ ಮತ್ತೊಂದು ತಲೆನೋವು. 'ಅವರಿಗೆ ಗಂಡ ಒಂದು ಸಮಸ್ಯೆಯಲ್ಲ, ಮಗ ರಾಮದೇವರದೇ ಸಮಸ್ಯೆ. ಆತ ಎಂತಹ ಗಂಡಸು ಎಂದರೆ ಅಡುಗೆ ಮನೆಯೊಳಗಿನಿಂದ ಒಂದು ಲೋಟ ನೀರನ್ನೂ ತಾನಾಗಿ ಬಂದು ತೆಗೆದುಕೊಳ್ಳುವವನಲ್ಲ. ಏನಿದ್ದರೂ ಎಷ್ಟೇ ಹುಷಾರಿಲ್ಲದಿದ್ದರೂ ತಾಯಿಯೇ ಎದ್ದು ಬಂದು ಕೊಡಬೇಕು.'

ಗುಂಡಕ್ಕನದು ಮತ್ತೊಂದು ಕಥೆ ; 'ಬಾಲವಿಧವೆಯಾದ ಗುಂಡಕ್ಕ ಆಯುಷ್ಯವನ್ನು ಎಲ್ಲ ವಿಧವೆಯರಂತೆ ಕಳೆದವರೂ ಅಲ್ಲ. ಹಾಗಾದರೆ ಮತ್ತೆ ಹೇಗೆ ಕಳೆದರು ಎಂಬ ಪ್ರಶ್ನೆಗೆ ನೂರು ಉತ್ತರ ಬಂದೀತು. ಒಬ್ಬೊಬ್ಬರು ಒಂದೊಂದು ರೀತಿ ಹೇಳುವಾಗ ಯಾವುದು ಸತ್ಯ ಯಾವುದು ಸುಳ್ಳು ಎಂಬ ನಿಷ್ಕರ್ಷೆ ಮಾಡಿ ಹೇಳುವುದು ಆ ಯಮಧರ್ಮನಿಗೂ ಕಷ್ಟವೆನಿಸಿತು. ಅದೇನೇ ಇರಲಿ, ಹೇಳುವ ಮಾತುಗಳಲ್ಲಿ ಒಂದು– 'ಗುಂಡಕ್ಕ ಸಾಯುವುದು ಹುಳವಾಗಿಯೇ' ಎಂಬುದು. 'ಗುಂಡಕ್ಕ ತಲೆ ಬಗ್ಗಿಸುದ್ ಯಾರಿಗೆ? ಕ್ಷೌರದವನಿಗೆ ಮಾತ್ರ' ಎಂಬ ಕುಶಾಲು ನಗೆ ಎಬ್ಬಿಸುವ ಮಾತು ಇನ್ನೊಂದು. ಗುಂಡಕ್ಕನ ಬಗೆಗಿನ ಇಂಥ ಮಾತುಗಳು ಹುಟ್ಟಿದ್ದು ಮತ್ತು ಬದುಕುತ್ತಿರುವುದು ಹೆಂಗಸರ ಬಾಯಲ್ಲಿಯೇ. ಇದರ ಮೂಲದಲ್ಲಿ ಗಂಡಸರ ಕೈವಾಡವಿದ್ದರೂ ಇರಬಹುದು ಆದರೆ ಮೂಲ ಹುಡುಕಲು ಬಿಡುವು ಯಾರಿಗೂ ಇಲ್ಲ. ಒಟ್ಟಿನಲ್ಲಿ ಈಗಂತೂ ಇವಳ ಜೀವವು ಲಕ್ಷ್ಮೀದೇವಮ್ಮನ ಜೀವನದೊಂದಿಗೆ ಆಕಸ್ಮಿಕವಾಗಿ ಎಂಬಂತೆ ಹೆಣೆದುಕೊಂಡಿದೆ.

ಲಕ್ಷ್ಮೀದೇವಮ್ಮನ ಮನೆ ಕೆಲಸದ ಹೆಂಗಸು 'ಮಂಜಿ'. ಇವಳಿಗೆ ಮಗಳಿದ್ದಾಳೆ, ಮಗನಿದ್ದಾನೆ, ಮುದಿ ಅಬ್ಬೆಯೂ ಇದೆ. ಅವರ ಯೋಗಕ್ಷೇಮ ಬಿಟ್ಟರೆ ಮಂಜಿಗೆ ಮತ್ತೇನಿಲ್ಲ. ಬೆಳ್ಳಿಯಲ್ಲಿ ಕಟ್ಟಿದ ಕರಿಮಣಿ ತೊಡುವ ಮಂಜಿಗೆ ಗಂಡನಿಲ್ಲ. ಇವಳನ್ನು ಬಸುರು ಮಾಡಿದವ ಇವಳ ಜೊತೆ ಇಲ್ಲ. 'ಪರ್ಪಂಚದಾಗೆ ಇಂಥ ಕಥೆ ಎಷ್ಟ್ ಬೇಕು ನಿಮ್ಗೆ? ನಂದೇ ಮೊದ್ಲೆ ಅಥವಾ ನಂದೇ ಕಡೀದಾ? ಹಾಗೆಂತ ಮನೆ ಓಣಿಯಿಂದ ಮೇಲೆ ಬರುವಾಗ ಒಮ್ಮೊಮ್ಮೆ 'ಆ ಮನುಷ್ಯ' ಸಿಗುವುದುಂಟು. ನಾ ಮುಖ ಎತ್ತಿಕಾಂಬ ಪಂಚಾತಿಕೆ ಇಲ್ಲೆ. ಇನ್ ನಂಗೆ ಗಂಡ್‌ಸ್ರ ವಾಸ್ನಿ ಇಲ್ಲೆ ಅಮ್ಮ ಥೈಥ್ ಕೊಳ್ಕ್‌ಜಾತಿ' ಎನ್ನುತ್ತಾಳೆ ಮಂಜಿ.

ಉಕ್ಕಿನ ತೋಳುಗಳಿದ್ದೂ ದುಡಿಯಲು ಇಳಿಯದವನನ್ನು ಯಾವ ವರ್ಗಕ್ಕೆ ಸೇರಿಸುವುದು? ಅವನು 'ಶ್ರೀಮಂತನೆ? ಅಲ್ಲ, ಬಡವನೇ? ಅದೂ ಅಲ್ಲ, ನಡುಮಧ್ಯದವನೂ ಅಲ್ಲ. ಕೈಕಾಲು ಎಲ್ಲ ಇದ್ದೂ ಏನಿಲ್ಲದವನಂತೆ ಇರುವ ನಾರಾಯಣ ಗಳಿಸಿಕೊಂಡಿದ್ದೆಂದರೆ ಅಡ್ಡ ಹೆಸರನ್ನು ಮಾತ್ರ. 'ಬಳುವಟೆ ನಾರಾಯಣ' ಎಂದು. ಹಡೆ ಸ್ವಭಾವದವ ಅವರಿವರ ಮನೆಗೆ ಬಿಟ್ಟಿಗೆ ಹೋಗುವ, ಯಾರಿಂದಲೂ ಯಾವ ಗೌರವ ಮರ್ಯಾದೆಯನ್ನು ಪಡೆಯದೆ, ಮೂರು ಕಾಸಿನ ಸಂಪಾದನೆಯೂ ಇಲ್ಲದೆ ಜವಾಬ್ದಾರಿ ಏನೆಂದೇ ತಿಳಿಯದ ನಾರಾಯಣನ ಹೆಂಡತಿಯಾಗಿ ಆ ಊರಿಗೆ ಸೊಸೆಯಾಗಿ ಬಂದವಳೆ ಮಾಂಕಾಳಿಯಮ್ಮ. ಜಾಣೆ ಮಾಂಕಾಳಿಗೆ ಮದುವೆಯಾದ ಹೊಸದರಲ್ಲಿಯೇ ಮಾಂಕಾಳಿಯಮ್ಮನಿಗೆ ತನ್ನ ಸ್ಥಾನ ಏನೆಂಬುದು ಗೊತ್ತಾಗಿದೆ. ಜಾಣೆಯಾದರೇನು? ಎಷ್ಟು ಚೆಂದವಾಗಿ ಹಾಡಿದರೇನು? ಅಟ್ಟರೇನು? ಹೂಕಟ್ಟಿದರೇನು? ಇದ್ದುದರಲ್ಲಿಯೇ ಗಂಜಿಯೋ ನೀರೋ ಮುಚ್ಚಟೆಯಾಗಿ ಬದುಕುವ ಕಲೆಯಲ್ಲಿ ಪಳಗಿದ್ದರೇನು? ಅವಳು ಪುಟಿಯುವ ಉಲ್ಲಾಸವೇ ಆಗಿದ್ದರು ಬಳವಟೆ ನಾರಾಯಣನ ಹೆಂಡತಿ ಎಂದೇ ಗುರುತಿಸಲ್ಪಡುವವಳು. ಅವಳು ಏನೇ ಆಗಿದ್ದರೂ ನಾರಾಯಣನಿಗೆ ಸಿಗುವ ಮಾರ್ಯಾದೆಗಿಂತ ಅವಳಿಗೆ ಒಂದು ಮುಷ್ಟಿ ಕಮ್ಮಿ ಮರ್ಯಾದೆ ಸಿಕ್ಕೀತೇ ಹೊರತು ಹೆಚ್ಚಲ್ಲ. ನೂರು, ಸಾವಿರ ಮುಡಿ ಹುಟ್ಟುವಳಿಗಳ ಒಡತಿಯರು ಕೆಲವರು ಇವಳಿಗಿಂತ ಕಿರಿಯರಾದರೂ ಮಾಂಕಾಳಿಯಮ್ಮನನ್ನು ಏಕವಚನದಲ್ಲಿಯೂ, ಕೊನೆಗೆ ನಪುಂಸಕ ಲಿಂಗದಲ್ಲಿಯೂ 'ಆ ಮಾಂಕಾಳಿ ಬಂತು', 'ಮಾಂಕಾಳಿ ಹೋಯ್ತು', 'ಮಾಂಕಾಳಿ ಎಲ್ಲಿ ಸತ್ತಿದೆ?' ಹೀಗೆ ಹೇಳಬಹುದು. ಅನಿವಾರ್ಯವಾಗಿ ಜೀವನ ನಿರ್ವಹಣೆಗಾಗಿ ಲಕ್ಷ್ಮೀದೇವಮ್ಮನ ಮನೆಗೆಲಸಕ್ಕೆ ಸೇರಿಕೊಳ್ಳುತ್ತಾಳೆ. ಮಂಜಿ 'ಕೆಳಜಾತಿ'ಯವಳಾದ್ದರಿಂದ ಅವಳಿಗೆ ಹೊರಗೆಲಸ ಮಾಂಕಾಳಿಯಮ್ಮ ಬ್ರಾಹ್ಮಣಳಾದ್ದರಿಂದ ಅವಳಿಗೆ ಒಳಕೆಲಸ. ಈ ನಾಲ್ವರು ಹೆಂಗಸರು ತಮ್ಮ ತಮ್ಮ ಜೀವನದ ಯಾವುದೋ ಘಟ್ಟದಲ್ಲಿ ಯಾವಯಾವುದೋ ಕಾರಣಗಳಿಂದ ಪರಸ್ಪರ ಸಂಬಂಧ ಕಟ್ಟಿಕೊಂಡಿದ್ದಾರೆ. ಒಬ್ಬೊಬ್ಬರದು ಒಂದೊಂದು ಪ್ರತ್ಯೇಕ ಕಥೆಯಾಗಿ ಬೆಳೆಯುವಷ್ಟು ಅನುಭವ ಸಾಮಾಗ್ರಿ ಅವರ ಜೀವನ ಸಂದರ್ಭಗಳಲ್ಲಿವೆ. ಆದ್ದರಿಂದ ವೈದೇಹಿಯವರ ಈ ರಚನೆ ಒಂದು ಕಾದಂಬರಿಯ ಅನುಭವವನ್ನೇ ಕಟ್ಟಿಕೊಡುತ್ತದೆ.

ಲಕ್ಷ್ಮೀದೇವಮ್ಮ, ಗುಂಡಕ್ಕ ಮತ್ತು ಮಾಂಕಾಳಮ್ಮನ ಮೂಲಕ ಒಂದೇ ಜಾತಿಯ ಒಳಗಿರುವ ವರ್ಗ ಅಂತರಗಳನ್ನು ಹೇಳುತ್ತದೆ. ಅಂತೆಯೇ ಲಕ್ಷ್ಮೀದೇವಮ್ಮ ಮತ್ತು ಮಂಜಿಯ ಮೂಲಕ ಬೇರೆ ಬೇರೆ ಜಾತಿಗಳ ನಡುವೆ ಇರುವ ಅಂತರಗಳನ್ನು ಹೇಳುತ್ತದೆ. ಗಂಡು ಲೋಕ ಮತ್ತು ಹೆಣ್ಣು ಲೋಕಗಳ ನಡುವಣ ಅಂತರವನ್ನು ಕಥೆ ಸೂಕ್ಷ್ಮವಾಗಿ ಅನಾವರಣಗೊಳಿಸಿದೆ.

ಇಲ್ಲಿನ ನಾಲ್ಕೂ ಜನ ಹೆಂಗಸರೂ ಬೇರೆ ಬೇರೆ ರೀತಿಗಳಿಂದ ಗಂಡಸರ ಅನಾದರಕ್ಕೆ ಒಳಗಾದವರು. ಬಹುಮುಖ್ಯವಾಗಿ ಈ ನಾಲ್ಕು ಪಾತ್ರಗಳ ಮೂಲಕವೇ ಕಥೆಯ ಓಟವಿರುವುದಾದರೂ ಈ ಹೆಂಗಸರ ಯೋಗ್ಯತೆ, ಪ್ರತಿಭೆ ಮತ್ತು ಶ್ರಮಗಳನ್ನು ಅಳೆಯುವುದು 'ಗಂಡು ಬಲ'ದ ಮಾನದಂಡದಲ್ಲಿಯೇ ಎಂಬುದು ಕುತೂಹಲಕಾರಿಯಾಗಿದೆ. 'ಗಂಡಸ್ರನ್ ನನ್ನೆದ್ರ್ ನಿವಾಳ್ಸಿ' ಎನ್ನುವ ಮಂಜಿಯೇ ತಾನು 'ಗಂಡಿಗೆ ಗಂಡೇ' ಎಂದು ಘೋಷಿಸಿಕೊಳ್ಳುತ್ತಾಳೆ. 'ಮಂಜಿ ಒಬ್ಳ್ ಬಂದ್ಳ್ ಅಂದ್ರೆ ಗಂಡ್ ಬಲ ಬಂದ್ಹಾಂಗೆ' ಎಂದು ಲಕ್ಷ್ಮೀದೇವಮ್ಮ ಮೆಚ್ಚುಗೆ ವ್ಯಕ್ತಪಡಿಸಿದರೂ ಮಂಜಿಗೆ ಗಂಡಸರಷ್ಟು ಮಜೂರಿಯೇನೂ ಕೊಡುವುದಿಲ್ಲ. ಮಜೂರಿ ಇರಲಿ, ದಕ್ಷಿಣೆಯ ವಿಚಾರದಲ್ಲೂ ಗಂಡಸರಿಗೇ ದೊಡ್ಡಪಾಲು. ಕಾಡಮ್ಮನ ಮಗನ ಚವಲದಲ್ಲಿ ಆಢ್ಯ ಗಂಡಸರಿಗೆ ಎರಡು ರೂಪಾಯಿ, ಆಢ್ಯ ಹೆಂಗಸರಿಗೆ ಒಂದು ರೂಪಾಯಿ, ಸಾಧಾರಣ ಮಟ್ಟಿನ ಗಂಡಸರಿಗೆ ಒಂದು ರೂಪಾಯಿ, ಹೆಂಗಸರಿಗೆ ಎಂಟಾಣೆ ದಕ್ಷಿಣೆ ನೀಡಲಾಗುತ್ತದೆ. ಇನ್ನು ತೀರಾ ಕೆಳವರ್ಗದ ಗಂಡಸರಿಗೆ ನಾಲ್ಕಾಣೆ ಮತ್ತು ಹೆಂಗಸರಿಗೆ ಎರಡಾಣೆ ಎಂದು ಮೊದಲೇ ನಿಗದಿಯಾಗಿತ್ತು ಎಂದು ಕಥೆ ದಾಖಲಿಸುತ್ತದೆ. ಪ್ರತಿನಿತ್ಯದ ಎಲ್ಲ ವ್ಯವಹಾರದಲ್ಲೂ ಆ ಸಮಾಜದ 'ವರ್ಗಗುಣ' ಅಭಿವ್ಯಕ್ತವಾಗುವಲ್ಲಿಯೇ ವೈದೇಹಿಯವರ ಕಥೆಯ ಮಹತ್ವ ಇದೆ.

ಈ ಮೂಲಕ ಮನುಷ್ಯನ ದೈನಂದಿನ ನಡಾವಳಿಗಳ ಮೂಲಕ ಜಾತಿ, ವರ್ಗ, ಲಿಂಗಗುಣಗಳನ್ನು ಹೊಂದಿರುವ ಸಮುದಾಯದ ಸಂಕೀರ್ಣ ಚಿತ್ರವನ್ನು ಬಿಡಿಸಿಬಿಡುತ್ತದೆ. ಈ ವಿಚಾರಗಳನ್ನು ಕೇವಲ ವರದಿ ಎಂಬಂತೆ ಮಂಡಿಸದೆ ಸಂಭಾಷಣೆಯಲ್ಲಿ ಧ್ವನಿಪೂರ್ಣವಾಗಿ ಅಭಿನಯದಲ್ಲಿ ಅಭಿವ್ಯಕ್ತಗೊಂಡಿದೆ. ಉದಾಹರಣೆಗೆ ಚವಲದ ಮನೆಯಲ್ಲಿ ಬಳವಟೆ ನಾರಾಯಣನ ಹೆಂಡತಿ ಮಾಂಕಾಳೆಯಮ್ಮನಿಗೆ ಅವಳ ಅಂತಸ್ಥಿಗೆತಕ್ಕಂತೆ ಎರಡಾಣೆ ದಕ್ಷಿಣೆ ಕೊಡಲಾಯಿತು ಎಂದು ಹೇಳುವುದಿಲ್ಲ ಬದಲಾಗಿ **'ಅವಳ ತೊಡೆಯ ಮೇಲೆ ದೊಡ್ಡಸ್ತಿಕೆಯೊಂದು ಪಿಚಕ್ಕನೆ ಉಗುಳಿದಂತೆ ಎರಡಾಣೆ ಪಾವಲಿಯೊಂದು ಬಿತ್ತು'** ಎಂದು ನಿರೂಪಿಸುತ್ತಾರೆ. ಭಾಷೆಯಲ್ಲೆ ಮೈದಾಳಿ ಬರೆಯುವುದು ವೈದೇಹಿ ಕಥನದ ಪ್ರಧಾನ ಲಕ್ಷಣಗಳಲ್ಲಿ ಒಂದು.

ಸಾಮಾಜಿಕ ಬದುಕಿನ ಒಂದು ಮೂಲಭೂತ ಲಕ್ಷಣವೇ ಆದ ಅವಲಂಬನೆಯ ವೈರುಧ್ಯ ವಿರೋಧಾಭಾಸಗಳನ್ನು ಕಥೆ ಬಯಲಿಗೆಳೆಯುತ್ತದೆ. ಲಕ್ಷ್ಮೀದೇವಮ್ಮ ಅಥವಾ ಅವಳ ಜಾತಿ ವರ್ಗದವರು ತಮ್ಮ ಕೈಲಾಗುವುದಿಲ್ಲ ಎಂದು ಆಶ್ರಯಿಸುವುದು ಮತ್ತು ಅವಲಂಬಿಸುವುದು ಮಂಜಿ, ಮಾಂಕಾಳಿಯಮ್ಮನಂಥವರನ್ನು ಆದರೆ ಲಕ್ಷ್ಮೀದೇವಮ್ಮನ ಪರಾವಲಂಬನೆಯನ್ನು ಹೇಳದೆ, ಇವರನ್ನ ಕೆಲಸಕ್ಕಿಟ್ಟುಕೊಂಡಿದ್ದು ಲಕ್ಷ್ಮೀದೇವಮ್ಮನವರ 'ಔದಾರ್ಯ'ವೆಂಬಂತೆ ಬಿಂಬಿಸುತ್ತದೆ.

ಬ್ರಾಹ್ಮಣರಿಂದ ಕೀಳಾಗಿ ನೋಡಲ್ಪಟ್ಟರೂ ಕೆಲವೊಮ್ಮೆ ಅವಮಾನಕ್ಕೊಳಗಾದರೂ ಮಂಜಿಗೆ 'ಬಿರಾಮಣರ' ಹಾಗೆಯೇ ಇರಬೇಕೆಂದು ಆಸೆಪಡುವಲ್ಲಿ ಆ ಸಮಾಜದ ಜಾತಿ ವರ್ಗದ ಇಕ್ಕಟ್ಟುಗಳು ತುಸು ಭಿನ್ನ ರೀತಿಯಲ್ಲಿ ವ್ಯಕ್ತವಾಗುತ್ತವೆ. ಬಾಹ್ಯದಲ್ಲಿ ಬ್ರಾಹ್ಮಣರನ್ನು ಎಷ್ಟೇ ಅನುಸರಿಸ ಹೋದರೂ 'ಅಪ್ಪಂಥ ಬಿರಾಮಣರ ಮನೆಯಲ್ಲಿ ಕೆಲಸ ಮಾಡಬೇಕು' ಎಂಬದು ಮಂಜಿಯ ಜೀವನದ ಆಸೆಗಳಲ್ಲಿ ಒಂದಾಗಿದೆ. ಗಂಡಸರ ಹಾಗಿರಬೇಕು, ಬ್ರಾಹ್ಮಣರ ಹಾಗಿರಬೇಕು ಎಂಬ ಮಂಜಿಯ ಆಸೆಗಳು ಟೀಕೆಗೆ ಒಳಗಾಗುವುದು ಇಬ್ಬರು ಹೆಂಗಸರಿಂದಲೇ. 'ಗಂಡ್ಸ್ ಅನ್ಲಕ್ಕಿತ್ತಲೆ, ಕೈಗ್ಗಿಮ್ಯಾಲೆ ಇಪ್ಪದನ್ನ್ ಯಂತ ಮಾಡ್ತ್ರಿ?' ಎಂದು ಗೌರಿ ವಾರೆನಗುತ್ತಾಳೆ. 'ಮಂಜಿ ಗುಲಗಂಜಿ, ನಿಂಗೆ ಬ್ರಾಂಬ್ರ ಜಾತಿ ಯಂತಕ್ಕಾ? ಒಂದು ಮೀನಾ, ಕೋಳಿಯಾ, ಮಾಂಸದಾ? ಬರೀ ಚಪ್ಪೆ ಜಾತಿ. ಹೌದನಾ ಈಗ ನೀನ್ ಯಂತಂತೆಲ್ಲ ಆದೆ! ಬ್ರಾಂಬ್ರ ಜಾತಿ ಯಾಳ್ಗ್ ಹುಟ್ಕಂದಿದ್ರೆ ನಿನ್ನ ಬದೂಕೂಕೆ ಬಿಡ್‌ತಿದ್ವಾ? ಉಸಿರಿದ್ದ ಹಾಂಗೇ ಸ್ಯಾಯುತ್ತಿದ್ದೋ' ಎಂದು ಬ್ರಾಹ್ಮಣ ವಿಧವೆ ಗುಂಡಕ್ಕ ಹೇಳುತ್ತಾರೆ. ಮಂಜಿ ಬ್ರಾಹ್ಮಣರಿಂದ ಅನಾಧಾರಕ್ಕೆ ಒಳಗಾದರೂ ಬ್ರಾಹ್ಮಣರ ಜಾತಿಯ ಮಾಂಕಾಳಿಯಮ್ಮನಿಗೆ ಬದುಕುವ ದಾರಿ ತೋರಿಸುವುದು ಮಂಜಿಯೆ.

ಗುಂಡಕ್ಕನ ಗಂಡ ಸತ್ತ ಸ್ಥಿತಿಗೂ ತನಗೆ ಗಂಡನಿರುವ ಸ್ಥಿತಿಗೂ ಏನಾದರೂ ವ್ಯತ್ಯಾಸವುಂಟೇ ಎಂದುಕೊಳ್ಳುವ ಮಂಕಾಳಿಯಮ್ಮನಿಗೆ ತನ್ನ ಗಂಡನನ್ನು ಸಹಿಸಿಕೊಳ್ಳುವುದಕ್ಕೆ 'ಸಾಮಾಜಿಕ ಮರ್ಯಾದೆ'ಯಂಥ ಕಾರಣಗಳು ಇವೆ. ತಾನು ಗಂಡನನ್ನು ಸಸಾರ ಮಾಡಿದರೆ ಲೋಕದ ಕಣ್ಣಿನಲ್ಲಿ ಅವನು ಇನ್ನಷ್ಟು ಸಸಾರವಾಗುತ್ತಾನೆಂಬ ಎಚ್ಚರವೂ ಇದೆ. ತನ್ನ ಮತ್ತು ಮಂಜಿಯ ನಡುವೆ ಜಾತಿಯ ಅಂತರವಿದೆ ಎಂದು ಅವಳಿಗೆ ಗೊತ್ತು. ಆದರೆ 'ತನ್ನವರಿ'ಗಿಂತ ಮಂಜಿಯೊಡನೆಯೇ ಅವಳಿಗೆ ಸಲಿಗೆ. ತನ್ನ ಮಗಳ ಹೋಟೆಲ್ ವ್ಯಾಪಾರ ಕುದುರಿಸಿಕೊಂಡು ಇನ್ನಷ್ಟು ವೃದ್ಧಿಯಾಗಿ ಇನ್ನಷ್ಟು ಕೆಲಸಗಾರರ ಅಗತ್ಯ ಬಿದ್ದಾಗ ಮಂಜಿ 'ಅಳಿಯನ್ ಹೋಟೆಲಿಗೆ ಕೆಲ್ಸ ಮಾಡುದ್ ಮರ್ಯಾದೆಗೆ ಹಗುರ' ಎಂದು ಸ್ವಾಭಿಮಾನ ತೋರುತ್ತಾಳೆ. ಬ್ರಾಹ್ಮಣರನ್ನು ತಾವು ಕೆಲಸಕ್ಕೆ ಇಟ್ಟುಕೊಳ್ಳಬೇಕು ಎಂಬ ಮಂಜಿಯ ಆಸೆ ಫಲಿಸುವ ಈ ಅವಕಾಶವನ್ನು ಬಿಡಲು ಅವಳು ತಯಾರಿಲ್ಲ. ಮಾಂಕಾಳಿಯಮ್ಮನನ್ನು ಪುಸಲಾಯಿಸಿ, ಒತ್ತಾಯಿಸಿ ತನ್ನ ಮಗಳ ಹೋಟೆಲಿನಲ್ಲಿ ಉದ್ದು ಅಕ್ಕಿ ಅರೆಯಲು ನಿಯೋಜಿಸುತ್ತಾಳೆ.

ಮಾಂಕಾಳಮ್ಮ ಉದ್ದು ಅಕ್ಕಿ ಅರೆಯಲು ಒಪ್ಪಿಕೊಂಡಿದ್ದು ಅವಳ ಗಂಡ ಬಳುವಟೆ ನಾರಾಯಣನಿಗೆ ಖುಷಿಕೊಡುತ್ತದೆ. ಆದರೆ ಲಕ್ಷ್ಮೀದೇವಮ್ಮನ ಮಗ ರಾಮದೇವರ ಪ್ರತಿಕ್ರಿಯೆ ಉಗ್ರವಾಗಿರುತ್ತದೆ ಇದು ಲಕ್ಷ್ಮೀದೇವಮ್ಮನಿಗೆ ಅಚ್ಚರಿ ಹುಟ್ಟಿಸುತ್ತದೆ. 'ಮಂಜಿ ಅಳಿಯನ್ ಹೋಟ್ಲಿಗೆ

ಅರೆಯಕೆ ಹೋಪಷ್ಟ್ ಆಯ್ತಾ ಇವ್‌ಳಿಗೆ? ಕಡಿಮೆಯಾದ್ರೆ ನಾವಿಲ್ಯ ಇಲ್ಲಿ? ಏನಾದ್ರೂ ವ್ಯವಸ್ಥೆ ಮಾಡತ್ತಿಲ್ಯ? ಥತ್ ಇದ್ ನಂಗೆ ಸಮಕಾಂತಿಲ್ಲೆ ಎಂದ. ಇವನ ಈ ಮಾತಿನ ಅರ್ಥವೇನು? ಎಂಬುದು ಲಕ್ಷ್ಮೀದೇವಮ್ಮನಿಗೆ ನಿಗೂಢವಾಗಿಯೇ ಉಳಿದುಕೊಳ್ಳುತ್ತದೆ. ಆದರೆ ಮಾಂಕಾಳಿಯಮ್ಮ ಮತ್ತು ರಾಮದೇವರ ಸಂಬಂಧದ ಸ್ವರೂಪವೇನು ಎಂಬ ಪ್ರಶ್ನೆಯನ್ನು ಕಥೆ ಮುಕ್ತವಾಗಿಯೇ ಇಡುತ್ತದೆ. ಒಂದೊಂದು ಜಾತಿ–ವರ್ಗ ಲಿಂಗಗಳ ನಡುವಣ ಸಂಬಂಧ ತೀರ ಗೋಜಲು ಮತ್ತು ಮೇಲ್ನೋಟಕ್ಕೆ ಸರಳವೂ, ಗ್ರಾಹ್ಯವೂ ಆಗಿರುವ ಲೋಕಗಳ ಸಂಬಂಧಿಗಳ ರಹಸ್ಯಮಯತೆಯತ್ತ ಗಮನ ಸೆಳೆಯುತ್ತದೆ.

೩.೩ ಪ್ರತಿಭಟನೆಯ ಕಥೆಗಳು

ಮನುಷ್ಯ ತನಗೆ ಯಾವುದೇ ರೀತಿಯ ಅನ್ಯಾಯ ಆದಾಗ ಸಿಡಿದೇಳುತ್ತಾನೆ. ತನ್ನ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ಬಂದಾಗ ಹೋರಾಡಲು ಅಣಿಯಾಗುತ್ತಾನೆ. ತನ್ನ ಅಸ್ತಿತ್ವದ ಉಳಿವಿಗಾಗಿ, ಸಾಮಾಜಿಕ ಸ್ಥಾನಮಾನಗಳನ್ನು ಪಡೆದುಕೊಳ್ಳುವುದಕ್ಕಾಗಿ ಪ್ರತಿಭಟಿಸುತ್ತಾನೆ.

ಜಾತಿಪದ್ಧತಿ, ಅಸ್ಪೃಶ್ಯತೆಯ ಆಚರಣೆಗಳು ಮತ್ತು ಜೀತಪದ್ಧತಿಗಳು, ಭೂಹೀನ ಕೃಷಿಕರ, ಕೆಳಜಾತಿಯವರ, ಮಹಿಳೆಯರ ಜೀವನವನ್ನು ಅಧೋಗತಿಗೆ ತಳ್ಳಿದ್ದವು. ಜಾಗೀರ್‌ದಾರ್, ಜಮೀನ್ದಾರ್ ಜೋಡಿದಾರಿಕೆ ಪದ್ಧತಿಗಳು ಸಹ ಇವರುಗಳ ಶೋಷಣೆಗೆ ಕಾರಣವಾಗಿದ್ದವು. ಹಸಿವು ಮತ್ತು ಅವಮಾನ, ಅಸಹಾಯಕತೆ ಮತ್ತು ಪ್ರತಿರೋಧ ಎಷ್ಟೋ ಜನರ ದಿನನಿತ್ಯದ ವಸ್ತುಸ್ಥಿತಿಯಾಗಿದೆ. ಶೋಷಣೆ ಎನ್ನುವಂತದ್ದು ಯಾರ್‍ಯಾರಿಗೆ ಯಾವ್ಯಾವ ರೂಪದಲ್ಲಿ ಯಾವಾಗ ಆಗುತ್ತದೆಯೋ ಗೊತ್ತಿಲ್ಲ. ಆ ಕಾರಣಕ್ಕೆ ಶೋಷಣೆಯ ಕರಾಳ ಮುಖಗಳನ್ನು ಅನಾವರಣಗೊಳಿಸಬೇಕಾದ ಅನಿವಾರ್ಯತೆಯಲ್ಲಿದ್ದೇವೆ.

ಜಾತಿ ಮತ್ತು ದುಡಿಮೆಯ ಗಾಣದಲ್ಲಿ ಸಿಕ್ಕಿರುವ ಹೆಣ್ಣಿನ ದೇಹವನ್ನು ಸದ್ದಿಲ್ಲದೆ ಶೋಷಣೆಗೆ ಒಳಪಡಿಸಲಾಗಿದೆ. ಆಗೆಲ್ಲ ಹೆಣ್ಣು ಬಾಯಿ ತೆರೆದು ಮಾತಾಡಿದ್ದೆ ಕಡಿಮೆ. ಈ ಸಮಾಜದಲ್ಲಿ ಜಾತಿ, ವರ್ಗಗಳು ಸಾಮಾಜಿಕ ಸಮಸ್ಯೆಗಳಾದಂತೆ ಲಿಂಗನೆಲೆಯ ಸಮಸ್ಯೆಯು ಇದೆ. ಇಲ್ಲಿ ಬಲಿಷ್ಠತೆಗೆ ನಿರಂತರವಾಗಿ ಮೇಲ್ ಸ್ಥಾನವೇ ಸಿಕ್ಕಿದೆ. ದುರ್ಬಲರು ಬಲಿಷ್ಠರ ಕಾಲ್‌ತುಳಿತಕ್ಕೆ ಸಿಲುಕಿ ನಲುಗಿ ಹೋಗಿದ್ದಾರೆ. ಬಡತನ, ಅಸಹಾಯಕತೆ, ಕೆಳವರ್ಗ, ಲಿಂಗ ಅಸಮಾನತೆ ಇವೆಲ್ಲವನ್ನು ಒಟ್ಟಿಗೆ ಅನುಭವಿಸಿದ ಎಷ್ಟೋ ಜೀವಗಳು ಈ ಭೂಮಿಯ ಮೇಲೆ ಆಗಿ ಹೋಗಿವೆ. ಗಂಡಾಗಿ ಹುಟ್ಟುವುದೇ ಆಳಲು ಇರುವ ಹಕ್ಕೆಂದು ಕೊಂಡಿರುವ ಸಾಮಾಜಿಕ, ಕೌಟುಂಬಿಕ ನೆಲೆಯಲ್ಲಿ ಹೆಣ್ಣನ್ನು ಈ ನಾಗರಿಕ ಸಮಾಜ ಕೀಳಾಗಿ ಕಂಡಿದೆ. ಖಾಸಗಿ ಆಸ್ತಿಯಂತೆ

ಹೆಣ್ಣನ್ನು ಪರಿಗಣಿಸಿರುವ ಸಮಾಜದಲ್ಲಿ ಹೆಣ್ಣು ನಿರಂತರವಾಗಿ ಗಂಡಿನ ಕಣ್ಗಾವಲ್ಲಿಯೇ ಇರಬೇಕಾದ ಎಷ್ಟೋ ಪರಿಸ್ಥಿತಿಗಳಿವೆ.

ಹೆಣ್ಣು ಒಡವೆಯಾದರೆ ಗಂಡು ಒಡೆಯನಾದ. ಹೆಣ್ಣು ಗುಲಾಮಳಾದರೆ ಗಂಡು ಯಜಮಾನನಾದ. ಹೆಣ್ಣು ಭೋಗದ ವಸ್ತುವಾದರೆ, ಗಂಡು ಭೋಗ ಪ್ರಿಯನಾದ. ಹೆಣ್ಣು ಆಳಾದರೆ–ಗಂಡು ಆಳುವ ದೊರೆಯಾದ. ಕ್ರಮೇಣ ಜಾತಿ, ವರ್ಗ, ಲಿಂಗ ಅಸಮಾನತೆಗೆ ವಾಸ್ತವ ಸತ್ಯದ ಅರಿವಾದಾಗ ಪ್ರತಿಭಟನೆಯ ರೂಪದಲ್ಲಿ ಕ್ರೌರ್ಯದ ಮುಖಗಳಲ್ಲಿ ಅನಾವರಣಗೊಂಡವು. ಮೇಲ್ವರ್ಗದ ಮಹಿಳೆ ಆರ್ಥಿಕವಾಗಿ ನೆಮ್ಮದಿಯಾಗಿದ್ದಾಳೆ. ಕೆಳವರ್ಗದ ಮಹಿಳೆ ಸಾಂಸ್ಕೃತಿಕವಾಗಿ ನೆಮ್ಮದಿಯಾಗಿದ್ದಾಳೆ. ಉಳಿದಂತೆ ಇಬ್ಬರು ದೌರ್ಜನ್ಯಕ್ಕೆ ಬಲಿಯಾಗಿದ್ದಾರೆ. ಈ ನಡುವೆ ಅನಕ್ಷರತೆ, ಅಜ್ಞಾನ, ಬಡತನ, ಮೂಢನಂಬಿಕೆಯ ಬಿಡಿಸಲಾಗದ ಬಲೆಯೊಳಗೆ ಸಿಲುಕಿರುವವರು ಇದ್ದಾರೆ. ಧರ್ಮದ ಹೆಸರಿನಲ್ಲಿ ದೇವರ ಹೆಸರಿನಲ್ಲಿ ಒಂದಷ್ಟು ಜನ ಶೋಷಣೆಗೊಳಗಾಗಿದ್ದಾರೆ. ಆ ಮನಸ್ಸುಗಳೆಲ್ಲ ಜಾಗೃತಗೊಂಡು ಪ್ರತಿಭಟಿಸಬೇಕಿದೆ. ಶೋಷಣೆಗೆ, ದೌರ್ಜನ್ಯಕ್ಕೆ, ಕ್ರೌರ್ಯಕ್ಕೆ ಬಲಿಯಾದ ಇಂಥ ಎಷ್ಟೋ ಮನಸ್ಸುಗಳು ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ಯಥಾವತ್ತಾಗಿ ಕೆಲವೊಮ್ಮೆ ಹೊಸರೂಪದಲ್ಲಿ ಸಾಹಿತ್ಯಕ್ಕೆ ವಸ್ತುಗಳಾಗಿವೆ.

ಈ ಅಧ್ಯಯನದ ಸಂದರ್ಭದಲ್ಲಿ ವೈದೇಹಿ ಮತ್ತು ನಾಗವೇಣಿಯವರು ತಮ್ಮ ಕಥೆಗಳ ವಸ್ತುವಿನ ಆಯ್ಕೆಯಲ್ಲಿ ಬಂದು ಹೋದ ಅಮಾಯಕ ಜೀವಗಳ ಜಾಗೃತ ಮನಸ್ಸುಗಳು ಅನ್ಯಾಯವನ್ನು ಪ್ರತಿಭಟಿಸಿದ ಬಗೆಯನ್ನು ಪ್ರತಿಭಟನೆಯ ಕಥೆಗಳು ಎಂಬ ಶೀರ್ಷಿಕೆಯಡಿಯಲ್ಲಿ ಚರ್ಚಿಸಿದ್ದೇನೆ.

ವೈದೇಹಿ ಅವರ ಅಕ್ಕು, ಅಮ್ಮಚ್ಚಿ ಎಂಬ ನೆನಪು ವಾಣಿಮಾಯಿ, ಹಕ್ಕಿಲ್ಲದವರು, ಚಿಪ್ಪು, ಚಿಕ್ಕನ ಸತ್ಯಾಗ್ರಹ, ಶಕುಂತಲೆಯೊಂದಿಗೆ ಕಳೆದ ಅಪರಾಹ್ನ ಮುಂತಾದ ಅನೇಕ ಕಥೆಗಳಲ್ಲಿ ಹೆಣ್ಣು ವಿವಿಧ ಆಕೃತಿಗಳಲ್ಲಿ ಭಾವಸ್ಥಿತಿಯಲ್ಲಿ, ಸಂವೇದನೆಗಳಲ್ಲಿ, ಬಹುಧ್ವನಿಗಳಲ್ಲಿ ಪ್ರತಿಭಟಿಸುತ್ತಾಳೆ. ನಾಗವೇಣಿಯವರಲ್ಲಿ ಈ ಪ್ರತಿಭಟನೆ ಎನ್ನುವಂತದ್ದು ಜಾತಿ, ಲಿಂಗ, ವರ್ಗ ನೆಲೆಯಲ್ಲಿ ಬಿತ್ತರವಾಗುತ್ತದೆ. ದಾನ, ಧಣಿಗಳ ಬೆಳ್ಳಿಲೋಟ, ಸೇವಂತಿ ಓಲೆ, ಒಡವೆ, ಸೀಮಂತ, ಬಗ್ಗುಂಡಿ ಪ್ರಸಂಗ, ಕಸಬರಿಕೆ ಕಥೆಗಳಲ್ಲಿ ಒಂದೊಂದು ಬಗೆಯ ಪ್ರತಿಭಟನೆಗಳಿವೆ.

ಹೆಣ್ಣು ಹೆಣ್ಣಾದ್ದರಿಂದಲೇ ಹಿಂಸೆಗೊಳಗಾಗುತ್ತಾಳೆ. ಹೆಣ್ಣಾಂದ್ದರಿಂದಲೇ ಕೆಲವು ರೀತಿಯ ಮುಜುಗರ, ನಿರ್ಬಂಧನೆಗಳಿಗೆ ಒಳಗಾಗಬೇಕಾಗುತ್ತದೆ. ಕೆಲವು ಬಗೆಯ ಶಿಕ್ಷೆಗಳಲ್ಲಿ ಲೈಂಗಿಕ ಆಕ್ರಮಣಗಳು ಅಂತಸ್ಥವಾಗಿರುತ್ತವೆ. ಇನ್ನು ಆ ಹೆಣ್ಣು ಬಡವಿಯೋ, ನತದೃಷ್ಟಳೋ, ಅನಾಥಳೋ, ಆದರಂತೂ ಅವಳ ಪಾಡು ಮತ್ತಷ್ಟು ಶೋಚನೀಯವಾಗುತ್ತದೆ. ಹೀಗೆ ಶೋಷಣೆಗೆ, ಅನಾದರಕ್ಕೆ, ಹಿಂಸೆಗೆ ಒಳಾಗುವ ಮಹಿಳೆಯರು ತಮ್ಮ ಪ್ರತಿಭಟನೆಯನ್ನು ಒಂದಲ್ಲ

ಒಂದು ರೀತಿಯಲ್ಲಿ ದಾಖಲಿಸುವುದು ಮತ್ತು ಅಭಿವ್ಯಕ್ತಿಸುವುದು ವೈದೇಹಿ ಅವರ ಅನೇಕ ಕಥೆಗಳಲ್ಲಿ ವ್ಯಕ್ತವಾಗುತ್ತದೆ. ಉದಾಹರಣೆಗೆ 'ಅಕ್ಕು'.

'ಅಕ್ಕು' ಕಥೆಯ 'ಅಕ್ಕು'ವಿನದು ಗಂಡಸುತನದ ಗಡಸು ಪಾತ್ರ. ಅವಳ ಕೈಯಲ್ಲಿ ಯಾವಾಗಲೂ ಒಂದು ಟುವಾಲು ಇರುತ್ತೆ ಅವಳರ್ಥದಲ್ಲಿ ಟುವಾಲು ಎಂದರೆ ಕರವಸ್ತ್ರ. ಒಟ್ಟಿನಲ್ಲಿ ಅಕ್ಕುವೆಂದರೆ ಆ ಟುವಾಲು ಸಮೇತವೇ ಎನ್ನುವಂತಿರುವಳು. ಸಾಮಾನ್ಯವಾಗಿ ಟುವಾಲು ಎನ್ನುವ ವಸ್ತ್ರವೇ ಗಂಡಸರು ಬಳಸುವಂತದ್ದು. ಅಕ್ಕುವು ಬಳಸುತ್ತಾಳೆ. ಹಾಗೆಂದು ಇದು ಗಂಡಿನ ಅಥವಾ ಬಲದ ಸಂಕೇತವಲ್ಲ. ಈ ಕಥೆಯಲ್ಲಿ ಅಕ್ಕುವಿನ ಪಾತ್ರ ಗಂಡು ಪಾತ್ರಕ್ಕಿಂತ ಹೆಚ್ಚು ಶಕ್ತಿಯುತವಾಗಿ ಕಾಣಿಸಿಕೊಳ್ಳುತ್ತದೆ. ಪುರುಷರನ್ನು ಮುಖ್ಯವಾಗಿ ಗಂಡನನ್ನು ಕುರಿತ ವ್ಯಂಗ್ಯದ ಅಸೀಮಾ ತಿರಸ್ಕಾರದ ಎಳೆಯೊಂದನ್ನು ಈ ಕಥೆಯಲ್ಲಿ ಗುರುತಿಸಬಹುದು. ಗಂಡನೊಂದಿಗೆ ಬಾಳದಿರುವ ಅಕ್ಕು ತಾಯ್ತನದ ಅನುಭವವನ್ನು ಪಡೆಯದೆ ಆ ಮಗುವಿಗಾಗಿ ಮತ್ತು ತಾಯಿ ಅನುಭವಿಸುವಷ್ಟೇ ತೀವ್ರವಾಗಿ ಆಪ್ತವಾಗಿ ಅವಳು ಮಗುವಿನ ಬದುಕಿಗೆ ಸ್ಪಂದಿಸಲು ಹಂಬಲಿಸುವಂತವಳು.

ಅಕ್ಕು ಅಸ್ವಸ್ಥಳು. ಅವಳ ಈ ಅಸ್ವಸ್ಥತೆಗೆ ವೈಯಕ್ತಿಕ ಬದುಕಿನ ದುರಂತದ ಜೊತೆಗೆ ಅಕ್ಕು ಬದುಕುತ್ತಿರುವ ಸಮುದಾಯದ ಕ್ರೌರ್ಯವು ಕಾರಣವಾಗಿರುವುದನ್ನು ಕಥೆ ಸೂಚಿಸುತ್ತದೆ. ಸಮಾಜದ ಕ್ರೌರ್ಯದೆದುರು ಅವಳು ಹುಚ್ಚಿಯಂತೆ ಪ್ರತಿಕ್ರಿಯಿಸುತ್ತಾಳೆ. ಅಕ್ಕುವಿಗೆ 'ಹುಚ್ಚು' ಎಂದು ಅನಿಸಿದ್ದಾದಲ್ಲಿ ಅವಳ ವ್ಯಕ್ತಿತ್ವವೇ ಬೇರೆಯಾಗಿ ಕಾಣಿಸುತ್ತದೆ. ಗಂಡನಿಗೆ ಬೇಡವಾಗಿ ತವರಿನಲ್ಲೇ ಉಳಿದಿರುವ ಅಕ್ಕು ತನ್ನ ಮನೆಯವರ ಅನಾದರ–ತಿರಸ್ಕಾರಗಳಿಗೆ ಬಲಿಯಾಗಿದ್ದಾಳೆ. ತೀವ್ರವಾಗಿ ನೊಂದ ಹೆಣ್ಣುಮನಸ್ಸೊಂದು ತನ್ನ ಸ್ಥಿಮಿತತೆ ಕಳೆದುಕೊಂಡಾಗ ಅವಳ ಉಗ್ರವಾದ ಪ್ರತಿಕ್ರಿಯೆಗಳೂ ಹುಚ್ಚಿನ ರೂಪದಲ್ಲಿ ಪ್ರಕಟಗೊಳ್ಳುತ್ತವೆ. ಈ ಪಾತ್ರದ ಮತ್ತೊಂದು ಸಾಧ್ಯತೆಯನ್ನು ಇಲ್ಲಿ ಗಮನಿಸಬಹುದಾಗಿದೆ. ಅಕ್ಕುವಿನ ಹುಚ್ಚು ಅವಳ ಮಾನಸಿಕ ಅಸ್ವಸ್ಥತೆಯ ಒಂದು ಸಹಜ ತಾತ್ಕಾಲಿಕ ಸ್ಥಿತಿಯಾಗಿರುವಂತೆ ಅವಳು ತನ್ನೆದುರಿನ ಸಮಾಜವನ್ನು, ಕುಟುಂಬವನ್ನು ಎದುರಿಸಲು ಪ್ರಜ್ಞಾಪೂರ್ವಕವಾಗಿ ಸೃಷ್ಟಿಸಿಕೊಂಡ ಮುಖವಾಡವು ಆಗಿರಬಹುದು. ಅವಳನ್ನು ಎಲ್ಲರೂ ಮಾನಸಿಕ ಅಸ್ವಸ್ಥೆ ಎಂದುಕೊಂಡದ್ದಕ್ಕೋ ಏನೋ ಮನುಷ್ಯ ಸ್ವಭಾವದ ಮತ್ತು ಸಂಬಂಧಗಳ ಅನೇಕ ರಹಸ್ಯಗಳು ಅವಳಿಗೆ ಮಾತ್ರ ಕಾಣಿಸುತ್ತವೆ. ತನ್ನನ್ನು ಶಿಕ್ಷಿಸುವ ಅನೇಕರ ಬದುಕಿನ ಅಡ್ಡದಾರಿಗಳು ಅವಳಿಗೆ ತಿಳಿದಿವೆ. ಅದು ಅವಳ ಮೇಲಿನ ದೌರ್ಜನ್ಯಕ್ಕೆ ಕಾರಣವಾಗಿರಬಹುದು. ಗಂಡ ಮತ್ತು ಗಂಡಸರ ವಿಚಾರದಲ್ಲಿ ಅಕ್ಕು ತುಸು ಹೆಚ್ಚಾಗಿಯೇ ಒರಟು ಒರಟಾಗಿ ಕಾಣಿಸಿಕೊಳ್ಳುತ್ತಾಳೆ.

ಅಕ್ಕುವಿಗೆ ದೊಡ್ಡ ಕುಂಕುಮವಿದೆ. ಆದರೆ ಗಂಡನಿಲ್ಲ. ಕತ್ತಿನಲ್ಲಿ ಕರಿಮಣಿಯಿದೆ. ಕರಿಮಣಿಯನ್ನು ನಾಗಂದಿಗೆಯ ಮೂಲೆಯಲ್ಲಿಟ್ಟು ಸವಾರಿ ಹೊರಡುವ ರಿವಾಜು ಅಕ್ಕುವಿನದು. ಅಕ್ಕು ನಿನ್ ಗಂಡ ಎಲ್ಲಿ? ಎಂದು ಕೇಳಿದರೆ ಕೇಳಿದವರ ಗ್ರಹಚಾರವನ್ನೇ ಬಿಡಿಸುವುದಿದೆ. ಆದ್ರೆ ಎಲ್ಲ ಸಲವು ಅಲ್ಲ. ವೈದೇಹಿ ಅಕ್ಕುವಿನ ಪಾತ್ರ ಸೃಷ್ಟಿಯನ್ನ ತುಂಬ ಅದ್ಭುತವಾಗಿ ಮೂಡಿಸಿದ್ದಾರೆ. ಅಕ್ಕು ಈ ಕಥೆಯುದ್ದಕ್ಕೂ ಎಲ್ಲಿಯೂ ಪುರುಷ ಪಾತ್ರಗಳೊಂದಿಗೆ ರಾಜಿ ಮಾಡಿಕೊಳ್ಳದೆ ಪ್ರತಿಭಟಿಸುತ್ತಾಳೆ. ಅಜ್ಜಯ್ಯ, ವಾಸುಚಿಕ್ಕಪ್ಪ, ತಮ್ಮಣ್ಣಯ್ಯ, ಗಂಡ ಸಂಕಪ್ಪ ಎಲ್ಲರನ್ನೂ ವಿರೋಧಿಸುವಂತೆ ಎದುರಿಸುತ್ತಾಳೆ. ವಾಸುಚಿಕ್ಕಪ್ಪನಂತೂ ಅದೆಷ್ಟು ಬಾರಿ ಅಕ್ಕುವಿನ ಮೈಮೇಲೆ ಬಾಸುಂಡೆ ಬರಿಸಿದ್ದಾನೋ, ಅವಳಿಗೆ ಅಪ್ಪ, ಅಣ್ಣ, ಗಂಡ ಎಂಬ ಸಂಬಂಧಗಳಲ್ಲಿ ಯಾವುದೇ ಬೇಧವಿಲ್ಲ. ಎಲ್ಲರನ್ನು ಕ್ರೌರ್ಯದ ಮತ್ತೊಂದು ಮುಖವೆಂಬಂತೆ ನೋಡುತ್ತಾಳೆ. ಇಲ್ಲಿ ಬರುವ ಎಲ್ಲಾ ಪುರುಷ ಪಾತ್ರಗಳು ಒಂದಲ್ಲ ಒಂದು ರೀತಿಯಲ್ಲಿ ಅಕ್ಕುವನ್ನು ದಂಡಿಸಿದವುಗಳೇ. ಸರಿತಪ್ಪುಗಳ ಒಳಿತು ಕೆಡುಕುಗಳ ಜ್ಞಾನವಿಲ್ಲದೆ ತನಗನಿಸಿದ್ದನ್ನು ಅನಿಸಿದಂತೆ ಆ ಕ್ಷಣದಲ್ಲಿ ಯಾರ ಎದುರಿಗಾದರೂ ಹೇಳಿ ಬಿಡುವ ಧೈರ್ಯಸ್ಥೆ. ಎಲ್ಲರೆದುರಿಗೆ ತಾನೇನು ಕಡಿಮೆ ಇಲ್ಲ ಎನ್ನುವಂತೆ ತೋರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ.

ಪ್ರತಿಭಟನೆಯ ನೆಲೆಯಲ್ಲಿ ಗುರುತಿಸಬಹುದಾದ ಕಥೆ ಅವಲಂಬಿತರು. ಈ ಕಥೆಯಲ್ಲಿ ಕೆಲಸದ ಹುಡುಗಿ 'ಅಹಲ್ಯ' ತನ್ನ ಒಡತಿ ಶಾರದಾಳಿಂದ ಹಲವು ಬಗೆಯ ವಂಚನೆಗೆ ಒಳಗಾಗುತ್ತಾಳೆ. ಶಾರದೆ ಅಹಲ್ಯೆಯನ್ನು ಮಗುವಾಡಿಸುವುದಕ್ಕಂತ ಕರೆಸಿಕೊಂಡಿದ್ದಾಳೆ. ತಿಂಗಳಿಗೆ ಹತ್ತು ರೂಪಾಯಿ ವರ್ಷಕ್ಕೆ ಒಂದು ಜೊತೆ ಬಟ್ಟೆ, ಇರುವುದು ಮೈನೆರೆಯುವವರೆಗೆ ಮಾತ್ರ, ಆಮೇಲೆ ಬೇಡ ಅಂತ. ಆದರೆ ಈಗ ಮಗುವಾಡಿಸುವ ಕೆಲಸದ ಹುಡುಗಿ ಮನೆ ಕೆಲಸದವಳು ಆಗಿದ್ದಾಳೆ. ಅಡಿಗೆ ಮಡಿ, ಮನೆ ಗುಡಿಸಿ ಒರೆಸುವುದು ಎಲ್ಲಾ ಮಾಡಬೇಕು. ಮಗುವನ್ನು ಆಡಿಸುವುದು ಮಾತ್ರವಲ್ಲ, ಮಗುವಿನ ಎಲ್ಲಾ ಕೆಲಸವನ್ನು, ಜೊತೆಗೆ ರಾತ್ರಿಯೂ ತಾನೇ ಮಲಗಿಸಿಕೊಳ್ಳಬೇಕು. ಅವಳ ಮಾತಲ್ಲೇ ಹೇಳಬೇಕೆಂದರೆ 'ಮಾಣಿ ಹೆಚ್ಚು ಹಟ ಮಾಡುವುದಿಲ್ಲ ನಾಲ್ಕೈದು ಸಲ ಏಳುತ್ತದೆ ಅಷ್ಟೆ. ಮೊನ್ನೆ ಗೊತ್ತುಂಟ ಸುಸಿಲಕ್ಕ, ಅದರ ಹೊದಿಕೆ ಆಚೀಚೆ ಆಗಿತ್ತೋ ಏನೋ, ಉಚ್ಚೆ ತೊಟ್ಟಿಲಿಂದ ಹೊರಗೆ ಹಾರಿ ನನ್ನ ಕಣ್ಣು ಮುಖದ ಮೇಲೆಲ್ಲ ಅಯೋ ರಾಮಾ... ಹುಡುಗಿ ಬಿದ್ದು ಬಿದ್ದು ನಕ್ಕಿತು'. ಎಷ್ಟೊಂದು ಮುಗ್ಧತೆ ಅಹಲ್ಯೆಯದು.

ಶಾರದೆ, ಶಾರದೆಯ ಗಂಡ ಫ್ಯಾನು ಹಾಕಿ ಮಲಗಿಕೊಳ್ಳುತ್ತಾರೆ. ಮಗುವಿಗೆ ನುಸಿ ಪರದೆ ಕಟ್ಟುತ್ತಾರೆ. ಸಾಲದಕ್ಕೆ ತಿಂದಿದ್ದು, ಕುಡಿದಿದ್ದು, ಕಂಡಂತೆ ಹಂಗಿಸುತ್ತಾಳೆ. ಅಹಲ್ಯ ಶಾರದಳ ವಿರುದ್ಧ ನೇರವಾಗಿ ಬಂದೇಳಲಾರಳು ನಿಜ. ಆದರೆ ತನ್ನ ಪಾಡನ್ನು ಅವಳು ಈ ಕಥೆಯ ನಿರೂಪಕಿ ನೆರೆಮನೆಯ ಸುಶೀಲಳ ಮುಂದೆ ತೋಡಿಕೊಳ್ಳುವಾಗ ಅವಳ ದನಿಯಲ್ಲಿ ದೈನ್ಯ ಕೇಳಿಸುವುದಿಲ್ಲ.

ಶಾರದೆ ಆಫೀಸಿಗೆ ಹೋದಾಗ ಯಜಮಾನಿಯ ಪೌಡರನ್ನು ಮುಖಕ್ಕೆ ಬಳಿದುಕೊಂಡು ಒಪ್ಪವಾಗಿ ಬಾಚಿ ಕುಳಿತು ಕೊಳ್ಳುವ ಅಹಲ್ಯ ಶಾರದೆ ಬರುವುದರೊಳಗೆ ಜಡೆ ಕಟ್ಟಿಕೊಂಡು ಮುಖ ತೊಳೆದುಕೊಂಡಿರುತ್ತಾಳೆ.

ಸುಶೀಲಳ ಮುಂದೆ ಹೇಳುತ್ತಾಳೆ **"ಸರಿಯಾಗಿ ನೋಡಿದರೆ ಶಾರದಾಕ್ಕನಿಗಿಂತ ನಾನು ಸಾಪಿಲ್ಲವ? ಯಾರಾದರೂ, ಅವರ ಗಂಡನಿಗಿಂತ ಚಂದದವರು, ನನ್ನನ್ನು ಮದುವೆಯಾದರು. ನಾನು ಅವರನ್ನು ಕರೆದುಕೊಂಡೇ ಒಮ್ಮೆ ಇವರ ಮನೆಗೆ ಬಂದು ಕಾಫಿ ಕುಡಿದು ಹೋದೇನು. ದೇವರು ಕಣ್ಣು ಬಿಟ್ಟರೆ ಎಷ್ಟು ಹೊತ್ತು'. ಈ ಮಾತುಗಳು ನಿರೂಪಕಿಯ ಮೇಲೆ ಮಾಡುವ ಪರಿಣಾಮದಲ್ಲಿ ಲೇಖಕಿಯ ದೃಷ್ಟಿಕೋನವೂ ಸೂಚಿತವಾಗುವಂತಿದೆ. ಹುಡುಗಿಯ ಮುಖದಲ್ಲಿ ಪ್ರಾರ್ಥನೆಯೋ, ಛಲವೋ, ವಿಶ್ವಾಸವೋ, ಎಂಥದೋ ಸ್ಪಷ್ಟ ತಿಳಿಯುತ್ತಿರಲಿಲ್ಲ. ಯಾವ ಹಿನ್ನೆಲೆ ಮುನ್ನೆಲೆಯೂ ಇಲ್ಲದ ಆಕಾಂಕ್ಷೆಯ ಹೊಳಪು ಮಾತ್ರ ಇತ್ತು. ಅವಳು ಹೋಗಿ ಮುಟ್ಟುವಲ್ಲಿನ ಕತ್ತಲೆಯ ಬದುಕಿನಲ್ಲಿ ಅವಳ ಅದಮ್ಯ ಉತ್ಸಾಹ ನಂದದಿರಲಿ ಎಂಥ ಹೃದಯವಿದ್ದ ಯಾರೇ ಆದರೂ ಹಾರೈಸುವಂತಿತ್ತು".**[೨೮]

ಮನೆಕೆಲಸದ ಹುಡುಗಿ ಅಹಲ್ಯ ಯಜಮಾನಿಯ ವಿರುದ್ಧ ಪ್ರತಿಭಟಿಸುವುದಕ್ಕೂ ನಾಗವೇಣಿಯವರ ಕಸಬರಿಕೆ ಕಥೆಯ ಚಂದು ಪ್ರತಿಭಟನೆಗೂ ಸಾಕಷ್ಟು ವ್ಯತ್ಯಾಸವಿದೆ.

ಮೇಲ್ಜಾತಿ ಎಂದು ಗುರುತಿಸಿಕೊಂಡವರ ಗುಣ, ನಡತೆಯಲ್ಲೂ ಮಡಿವಂತರೆನಿಸಿಕೊಳ್ಳ ಬೇಕಾಗುತ್ತದೆ. ಆದರೆ ಕಸಬರಿಕೆ ಕಥೆಯಲ್ಲಿ ಬರುವ ಅಮ್ಮಣಿಯಮ್ಮ ಎನ್ನುವ ಬ್ರಾಹ್ಮಣ್ತಿ ನಾಲಿಗೆಗೆ ಲಗಾಮು ಹಾಕಿಕೊಳ್ಳದವಳು. ಅವರು ಇವರು ಎನ್ನದೇ ಎಲ್ಲರನ್ನು ಸ್ವಲ್ಪ ಒರಟಾಗಿಯೇ ನಡೆಸಿಕೊಂಡವಳು. ಈ ಕಥೆಯಲ್ಲಿ ಬರುವ ಚಂದು ಎನ್ನುವ ಮೂಲ್ಯದ ಹುಡುಗಿ ಇವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಳು. ಆದರೆ ಅಮ್ಮಣಿಯಮ್ಮ ಅವಳ ಮೇಲೆ ತನ್ನ ದಟಲ್ ಬಾಯಿ ಬಿಟ್ಟು ಬೈಗುಳದ ಪ್ರಹಾರ ನಡೆಸುತ್ತಿದ್ದಳು. ಸಾಲದಕ್ಕೆ ಚಂದು ಮನಸ್ಸಿಗೆ ಹಚ್ಚಿಕೊಂಡಿದ್ದ ಮಂಜಪ್ಪನನ್ನು ಸೇರಿಸಿಕೊಂಡು ಬೈಯುತ್ತಿದ್ದಳು. ಇದು ಚಂದುವಿನ ಕೋಪವನ್ನು ಹೆಚ್ಚಿಸಿತು. ತನ್ನ ಮಂಜಪ್ಪನ ಕಾಲನ್ನು ಅಣಕಿಸಿದ ಬ್ರಾಹ್ಮಣ್ತಿ!ಯನ್ನು

"ಏನೇ ಬ್ರಾಹ್ಮಣ್ತಿ? ನನ್ನ ಮಿಂಡಕಾಲು ಅನ್ತೀಯಾ ಮುಂಡೆ' ಎಂದೆನ್ನುತ್ತಾ ಅಮ್ಮಣಿಯಮ್ಮನ ಜುಟ್ಟು **ಬಗ್ಗಿಸಿ, ಕೈಯಲ್ಲಿದ್ದ ಕಸಬರಿಕೆಯಲ್ಲಿ ಅಮ್ಮಣಿಯಮ್ಮನನ್ನು ತಿರುಗಿಸಿ ತಿರುಗಿಸಿ ಬಾರಿಸಿದ್ದಳು. ಅಮ್ಮಣಿಯಮ್ಮ ಅಳುತ್ತಲೇ ಅಬ್ಬರಿಸಿದಾಗ ಚಂದು ಬಾಯ್ಮುಚ್ಚು ಬಿಕನಾಸಿ ಬ್ರಾಹ್ಮಣ್ತಿ; ಬಾಯೆತ್ತಿದ್ರೆ ಮತ್ತೆ ಕಾಲ ಮೆಟ್ಟಲ್ಲಿ ಹೊಡೆದು ಬಿಟ್ಟೆನು"**[೨೯] ಎಂದಳು. ನಾಗವೇಣಿಯವರ ಈ ಕಥೆಯಲ್ಲಿ ಸ್ವಲ್ಪ ಚಂದುವಿನ ವರ್ತನೆ ಅಸಹಜವೆನಿಸಿದರೂ ನೇರನೇರವಾದ ಪ್ರತಿಭಟನೆಯನ್ನು ಗಮನಿಸಬಹುದಾಗಿದೆ.

ವೈದೇಹಿಯವರ 'ವಾಣಿಮಾಯಿ' ಕಥೆಯನ್ನು ಪ್ರತಿಭಟನೆಯ ನೆಲೆಯಲ್ಲಿ ಅವಲೋಕಿಸಬಹುದಾಗಿದೆ. ವಾಣಿಮಾಯಿ ಪಾಪ, ಹಾಗೆಂದು ಇವಳೇನು ಸಾಮಾನ್ಯದವಳಲ್ಲ.

ಅವಳಿಗೊಂದು ಹಟ ಎಂದರೇ!...ಥೇ! ಎಲ್ಲರೂ ಹೇಳುವಂತೆ ನಾವು ಹೇಳುವದು ಬೇಡ. ವಾಣಿಮಾಯಿಗೆ ಆಸೆಗಳಿವೆ. ಹಾಗೆ ಆಸೆ ಪಟ್ಟಳೆಂದರೆ ತನಗದು ಬೇಕೆ ಬೇಕು ಎನ್ನುವಷ್ಟು ತೀವ್ರ ಸ್ವಭಾವದವಳು. ದೊಡ್ಡದಲ್ಲದ ಅವಳ ಸಣ್ಣಮುಟ್ಟ ಆಸೆಗಳನ್ನೆಕೆ ನಾವು ಹಟ ಅನ್ನುಬೇಕು.

ಅವಳ ಆಸೆಗಳಲ್ಲಿ ದೊಡ್ಡವೆಂದರೆ ತಾನು ಒಂದು ಜೊತೆ ಮೆಟ್ಟು ತೆಗೆದುಕೊಳ್ಳಬೇಕು ಎಂಬುದು. ಆದರೆ ಅದಕ್ಕಾಗಿ ಅವಳಿಗೆ ಎಲ್ಲರೂ ಸೇರಿ ಗದರುವವರೇ. ದೊಡ್ಡಮ್ಮ ಅಂತು ನಮಗೆಲ್ಲ ದಿವಸ ಹೋದ್ದಿಲ್ಯ? ನಿಂಗೆ ಅದಿಲ್ಲದೆ ಕಳೆಯ ಅಂದರೆ ಏನು? ಎನ್ನುತ್ತಿದ್ದಳು.

ವಾಣಿಮಾಯಿಯದು ಹಾಸುಪಾದವಂತೆ. "ಈ ಹಾಸುಪಾದಕ್ಕೆ ಕಾಲು ಚೈನು ಸಾ ಚಂದ ಕಾಣ್‌ತಿಲ್ಲೆ' ಎಂದು ದೊಡ್ಡಮ್ಮ ಅವಳಿಗೆ ಕೊಡಿಸಿರಲಿಲ್ಲ. ಕಾಲುಚೈನು ಹಳತು ಫ್ಯಾಷನ್ನು ತನಗೆ ತೆಗೆಸಿಕೊಟ್ಟರೂ ಬೇಡ ಎಂದು ವಾಣಿಮಾಯಿ ಅದನ್ನು ಧಿಕ್ಕರಿಸಿಯೂ ಇದ್ದಳು. ನಂಗೊಂದು ಮೆಟ್ಟು ತೆಗಸಿಕೊಡ್ನಿ ಸಾಕು' ಎಂಬುದೊಂದೇ ಅವಳದು. ಯಂತದಕ್ಕೆ ಮೆಟ್ಟು? ಮೆಟ್ಟು ಹಾಕಿಂಡಿರೆ ಕಾಲಿನ ಲಕ್ಷಣ ಹೋತು' ಎನ್ನುವುದೂ ದೊಡಮನೇ! ನನ್ನ ಕಾಲಿಲೆ ಲಕ್ಷಣ ಇಲ್ಲೆ ಅಂದೆ ಮತ್ತೆ! ಎಂದು ಸವಾಲು ಹಾಕದೇ ಇದ್ದರೆ ಅದು ವಾಣಿಮಾಯಿಯೇ? ಜಾಸ್ತಿ ವಾದ ಮಾಡಿದರೆ ಮೆಟ್ಟು ಹಾಕುವುದು ಒಂದೋ ಬೊಂಬಾಯಿ ಸೂಳೆಯರು, ಇಲ್ಲ ಊರ ನಾಯಕಸಾನಿಯರು, ಹೊರತು ಮರ್ಯಾದಸ್ಥರಲ್ಲ... ಗರ್ಜನೆಗೆ ಕುಮ್ಮಕ್ಕು ಕೊಡಲು ನರಸಿಂಹನಿದ್ದಾನೆ. ನರಸಿಂಹನಿಗೇಕೆ ವಾಣಿಮಾಯಿಯನ್ನು ಕಂಡರೆ ಆಗುವುದಿಲ್ಲ? ವಾಣಿ ಮಾಯಿಗೇಕೆ ನರಸಿಂಹನ ಸ್ವರ ಕೇಳಿದರೆ ಆಗುವುದಿಲ್ಲ? 'ನೀವು ಮೆಟ್ಟುಗಿಟ್ಟು ಕೊಡಿಸಲೆ ದೊಡಮ. ಈಗಳೇ ಇಷ್ಟು ಹಾರ್‌ತಲ್, ಇನ್ನು ಅದೊಂದು ಶೋಕು ಬಾಕಿ... ನಿಮಗೆ ಯಂತದೂ ತಿಳಿತಿಲ್ಲ... ಅಂತೆಲ್ಲ ಚಾಚಿ ಕೊಡುತ್ತಿದ್ದ. 'ನಂಗೆ ದೊಡಪ ತೆಗೆಸಿಕೊಂಡ್ತ್‌ರ್’ [೨೦] ಎಂದು ವಾಣಿಮಾಯಿ ಹೇಳಿಕೊಳ್ಳುತ್ತಾಳೆ.

ಇದು ಬರಿ ಮೆಟ್ಟಿನ ಸಮಸ್ಯೆಯಲ್ಲ. ಮನೆಯ ಹೆಣ್ಣುಮಕ್ಕಳನ್ನ ನರಸಿಂಹನಂತವರು ಅಷ್ಟೇ ಏಕೆ ದೊಡ್ಡಮ್ಮ ಕೂಡ ಪಾಲಿನ ಮನೆಯ ಹೆಣ್ಣುಮಕ್ಕಳು ಬಂದಾಗ ನಡೆದುಕೊಳ್ಳುವ ರೀತಿ ಇದಿಯಲ್ಲ ಅದು ಛೀ ಅನಿಸುವಂತದ್ದು. ಯಾಕೆಂದರೆ ಕಷ್ಟವಿಲ್ಲದೆ ಕಳಚಬಹುದಾದ ಕೆಂಪು, ಹಸಿರು, ಕಪ್ಪು ಬಣ್ಣಗಳ ಫಳಫಳ ಮಿಂಚುವ ಮೆಟ್ಟನ್ನ ಕಳಚಿಟ್ಟು ಒಳಗೆ ಬಂದ ಹುಡುಗಿಯರು ದೊಡ್ಡಮ್ಮ ಹಾಸಿದ ಬಣ್ಣದ ಚಾಪೆಯ ಮೇಲೆ ಚಟ್ಟಾಮುಟ್ಟ ಹಾಕಿ ಕುಳಿತರು. ಹಾಗೆ ಕೂರುವುದು ಗಂಡಸರು ಮಾತ್ರ. ಉಳಿದವರಿಗಾದರೆ ಗದರಿ ಸರಿಯಾಗಿ ಕಾಲು ಮಡಚಿ ಬಾಮವಾಗಿ ಕೂಡಲು ಹೇಳುವ ದೊಡ್ಡಮ್ಮ ಈ ಹೆಣ್ಣು ಮಕ್ಕಳೆದುರು ಬಹಳ ಗೌರವದಿಂದ ಮಾತನಾಡುತ್ತಾ ಇದ್ದರು.

ಇದೆಲ್ಲ ಯಾಕೆ? ದ್ವೇಷಿಸುವುದಾದರೆ, ದೂಷಿಸುವುದಾದರೆ ಅಂದು ಎಲ್ಲರಿಗೂ ಆಗಲಿ ಆದರೆ ಇಲ್ಲಿ ಶ್ರೀಮಂತಿಕೆಗಿಲ್ಲ. ಗಂಡಿಗಿಲ್ಲ, ಪಾಲಿನ ಹೆಣ್ಣು ಮಕ್ಕಳಿಗಿಲ್ಲ, ಅದಷ್ಟೆ ಏಕೆ ಬೊಂಬಾಯಿ ಸೂಳೆಯರಿಗೂ ಇಲ್ಲದ ದೋಷಣೆ ವಾಣಿಮಾಯಿಗೆ ಅವಳಂತ ಮುಗ್ಧರಿಗೆ ಮಾತ್ರ ಯಾಕೆ? ಹಾಗಾಗಿಯೇ ವಾಣಿಮಾಯಿಯ ಆಸೆಗಳನ್ನು ಹಟ ಅಂತ ಒಪ್ಪಿಕೊಳ್ಳಲಿಲ್ಲ. ಅದು ಹಟವೇ

ಆದರೂ ಏನೀಗ? ಕೇಳದಿದ್ದರೆ ಏನೂ ಸಿಗುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಹಟ ಮಾಡಿಯಾದರೂ, ಗಲಾಟೆ ಮಾಡಿಯಾದರೂ ಬಯಸಿದ್ದನ್ನು ಪಡೆದುಕೊಳ್ಳಬಹುದು ಎಂದು ವಾಣಿಮಾಯಿಗೆ ಗೊತ್ತಾಗಿದೆಯಲ್ಲ ಅಷ್ಟು ಸಾಕು. ಕೊನೆಗೂ ವಾಣಿಮಾಯಿಯ ತನ್ನ ಹಟದ ಸಾಧನೆ ಮಾಡಿಕೊಳ್ಳುತ್ತಾಳೆ. ಹೊಳಪಿನದಲ್ಲದಿದ್ದರು ದೊಡ್ಡಪ್ಪ ಬ್ಯಾರಿಯವರಿಂದ ಒಂದು ಮೆಟ್ಟು ಹೊಲಿಸಿ ಕೊಡುತ್ತಾರೆ. ಆಶ್ಚರ್ಯವೆಂದರೆ ಸಾವಿನ ಕೊನೆ ಕ್ಷಣದಲ್ಲೂ ನರಸಿಂಹನ ಮೇಲೆ ವಾಣಿಮಾಯಿ ದ್ವೇಷಕಾರುತ್ತಾಳೆ. ಸಂಚಲನವೇ ಇಲ್ಲದ ಬಲಗಾಲನ್ನ ಮೆಲ್ಲನದುರಿಸಿ ಅವನ ಮುಖ ಜಜ್ಜುಳಿಯಾಗುವಂತೆ ಮೂಗು ಬಾಯಲ್ಲಿ ರಕ್ತಚಿಮ್ಮುವಂತೆ ಬೀಸಿ ಅಪ್ಪಳಿಸುತ್ತಾಳೆ. ಇಂಥ ಒಂದು ಅನಿರೀಕ್ಷಿತಕ್ಕೆ ನರಸಿಂಹ ಕನಸಿನಲ್ಲೂ ಸಿದ್ಧವಿರಲಿಲ್ಲ. ವೈದೇಹಿಯವರ ಅಮ್ಮಚ್ಚಿಯೆಂಬ ನೆನಪು ಕಥೆಯಲ್ಲಿಯೂ ಒಂದು ಬಗೆಯ ಪ್ರತಿಭಟನೆ ಇದೆ. ವೈದೇಹಿ ಸೃಷ್ಟಿಸಿರುವ ಅತ್ಯಂತ ಚೈತನ್ಯಶಾಲಿ ಪಾತ್ರಗಳಲ್ಲಿ ಅಮ್ಮಚ್ಚಿಯ ಪಾತ್ರವೂ ಒಂದು. ಈ ಕಥೆಯ ನಾಯಕಿ 'ಅಮ್ಮಚ್ಚಿ' ತಂದೆ ಸಾಯುವಾಗ ಆರು ತಿಂಗಳ ಮಗುವಷ್ಟೇ. ಹಾಗಾಗಿ ತಾಯಿ ಸೀತಮ್ಮನಿಗೆ ಬೇರೆ 'ಬಲ' ಇಲ್ಲದ ಕಾರಣ ಹನ್ನೆರಡು ವರ್ಷದ ವೆಂಕಪ್ಪನೆ ಅದು ಇದು ತರಲು ಓಡಾಡಿಕೊಂಡಿದ್ದ. ಯಾರು ಇಲ್ಲದ ವೆಂಕಪ್ಪ ಮನೆಯವನೇ ಎಂಬಂತೆ ಸೀತತ್ತೆಯ ಮನೆಯಲ್ಲಿಯೇ ಇದ್ದು ಬಿಟ್ಟ, ಬೆಳೆಯುತ್ತ ವೆಂಕಪ್ಪಯ್ಯನಾದ, ಅಮ್ಮಚ್ಚಿಯ ಹಕ್ಕುದಾರನೂ ತಾನೆ ಎನ್ನುವಂತಾದ. ಹಾಗೆ ಬೆಳೆಯುತ್ತ ಅಮ್ಮಚ್ಚಿಯಿ ಕಣ್ಣಲ್ಲಿ ಅಸಹ್ಯವಾಗುತ್ತ ಇದ್ದ ಆದರೂ ವೆಂಕಪ್ಪಯ್ಯನೆ ಮನೆಯ ಎಲ್ಲಾ ವಹಿವಾಟನ್ನು ನೋಡಿಕೊಳ್ಳುತ್ತಿದ್ದ.

ಇಲ್ಲಿ ಅಮ್ಮಚ್ಚಿ ವೆಂಕಪ್ಪಯ್ಯನನ್ನು ವಿರೋಧಿಸುವುದಕ್ಕಿಂತ ತಾನು ಅವನಿಗಿಂತ ಏನೂ ಕಡಿಮೆ ಇಲ್ಲ. ಈ ಎಲ್ಲಾ ಕೆಲಸಗಳನ್ನು ತಾನು ಮಾಡಬಲ್ಲೆ, ತನ್ನಿಂದಲೂ ಸಾಧ್ಯ ಆಗುತ್ತದೆ. ಹೆಣ್ಣು ಅಡುಗೆಮನೆಯ ಕೆಲಸಗಳು ಮಾತ್ರವಲ್ಲ, ಹೊರಗಿನ ವಹಿವಾಟುಗಳನ್ನು ನಿರ್ವಹಿಸಬಲ್ಲಳು ಎಂಬುದು ಅವಳ ಮಾತುಗಳಿಂದ ವ್ಯಕ್ತವಾಗುತ್ತದೆ. ಮುಂದುವರೆಯುತ್ತಾ ಅಮ್ಮಚ್ಚಿ ಪೇಟೆಗೆ ಹೋಗಲು ನಡೆಸುವ ತಯಾರಿಗಳು ಯಾವಾಗಲೂ ವೆಂಕಪ್ಪಯ್ಯನಿಗೆ ಸಿಟ್ಟುತರಿಸುವಂತವಾದರೂ ಅಮ್ಮಚ್ಚಿಗೆ ಅವೆಲ್ಲವೂ ಬೇಕು. ಅವಳು ವೆಂಕಪ್ಪಯ್ಯನಿಗೆ ಅವನ ಬೆದರಿಕೆಗೆ ಯಾವುದಕ್ಕೂ ತಲೆಕೆಡಿಸಿಕೊಂಡವಳಲ್ಲ.

ಅಪ್ಪ ಸತ್ತ ಲಾಗಾಯ್ತಿನಿಂದ ಸಂಬಂಧಿಕರ್‍ಯಾರು ತಮ್ಮನ್ನು ಏನು ಎಂದು ಕೇಳಿಲ್ಲ ಮತ್ತು ಹಾಗೆ ಜವಾಬ್ದಾರಿ ತೆಗೆದುಕೊಂಡಿದ್ದರೆ ಈ ವೆಂಕಪ್ಪಯ್ಯನ ಮಾತು ಕೇಳುವ ಅವಶ್ಯಕತೆ ಇರುತ್ತಿರಲಿಲ್ಲ ಎನ್ನುವ ಬೇಸರಿಕೆ ಅಮ್ಮಚ್ಚಿಯನ್ನು ಕಾಡದೆ ಬಿಟ್ಟಿಲ್ಲ. ಅಮ್ಮಚ್ಚಿಗೆ ವೆಂಕಪ್ಪಯ್ಯನ ಬಗ್ಗೆ ಅಸಮಾಧಾನವಿದೆ. ಹಾಗೆ ನಡೆದು ಕೊಳ್ಳುವುದಕ್ಕೆ ಬಲವಾದ ಕಾರಣಗಳು ಇವೆ. ದಿಕ್ಕುದೆಸೆ ಇಲ್ಲದ ವೆಂಕಪ್ಪಯ್ಯ ಮನೆ ಮಗಳ ಮೇಲೆ ಯಜಮಾನಿಕೆ ನಡೆಸುತ್ತಾನೆ. ಅಷ್ಟೇ ಅಲ್ಲ ಅವಳು ಇಷ್ಟಪಟ್ಟು

ಹೊಲೆಯಲು ಕೊಟ್ಟ ಹಿಂದು ಗುಬ್ಬಿಯ ರವಿಕೆಯನ್ನ ವಿಕಾರ ಗೊಳಿಸಿಕೊಟ್ಟಿದ್ದ. ಅವನು ಮಾಡಿದ್ದನ್ನೆಲ್ಲ ಮಾಡಿಸಿಕೊಂಡು, ಹೇಳಿದ್ದನ್ನೆಲ್ಲ ಕೇಳಿಕೊಂಡು ಸುಮ್ಮನಿರುವ ಜಾಯಮಾನದವಳಲ್ಲ ಅಮ್ಮಚ್ಚಿ. ಅವಳು ಹೀಗೆ ಒಮ್ಮೆ ವೆಂಕಪ್ಪಯ್ಯನ ಶರ್ಟಿನ ಹಿಂಭಾಗ ಕೊಯ್ದು, ಮುಂಭಾಗ ಹೊಲಿದು, ಮುಂಭಾಗದ ಗುಂಡಿಗಳನ್ನು ಹಿಂಭಾಗಕ್ಕೆ ಹೇಗೆ ಹೇಗೋ ಇಟ್ಟು ಸೇಡುತೀರಿಸಿಕೊಂಡಳು.

ಅಮ್ಮಚ್ಚಿಯೂ ಸ್ವಲ್ಪ ಜರ್ಬದಸ್ತಿನವಳೆ. ಯಾರಾದರೂ ಒಂದು ಮಾತು ಹೇಳಿದರೆ ಹೋಗ್ಲಿ ಬಿಡು ಎಂದು ಎಂದೂ ಬಿಟ್ಟವಳಲ್ಲ. ಗಂಡಸಿಗೆ ಸಮನಾಗಿಯೇ ನಿಂತು ವಾದ ಮಾಡುತ್ತಾಳೆ. ಎದುರು ವಾದಿಸಿ ವೆಂಕಪ್ಪಯ್ಯನಿಂದ ಹೊಡೆತ ತಿಂದಿದ್ದು ಉಂಟು. ಇದೆಲ್ಲವನ್ನ ಗಂಡುಬೀರಿತನ, ಗಯ್ಯಾಳಿತನ ಅಂತ ಕರೆದರು ಸರಿಯೇ, ಅಮ್ಮಚ್ಚಿ ಅವನ್ನೆಲ್ಲ ಬಿಟ್ಟು ಕೊಡುವವಳಲ್ಲ.

ತನ್ನ ಮೇಲೆ ಹಲವು ರೀತಿಯಲ್ಲಿ ದಬ್ಬಾಳಿಕೆ ನಡೆಸುತ್ತಿದ್ದ, ತನ್ನ ವೈಯುಕ್ತಿಕ ಸ್ವಾತಂತ್ರ್ಯವನ್ನು ಹರಣಮಾಡುತ್ತಿದ್ದ, ಕುಟುಂಬದ ಯಜಮಾನಿಕೆಯನ್ನು ತಾನೇ ವಹಿಸಿಕೊಂಡು ತನಗೂ ತನ್ನ ತಾಯಿಗೂ ತಮ್ಮದೇ ಆದ ಅಸ್ಮಿತೆಯೇ ಇಲ್ಲದಂತೆ ಮಾಡುತ್ತಿದ್ದ ವೆಂಕಪ್ಪಯ್ಯನನ್ನು ಕಂಡರೆ ಅಮ್ಮಚ್ಚಿಗೆ ಸಿಟ್ಟು ಮತ್ತು ತಿರಸ್ಕಾರ. ತನ್ನ ಬಟ್ಟೆ ಬರೆ, ಅಲಂಕಾರ, ತಿರುಗಾಟ, ಎಲ್ಲದರಲ್ಲಿಯೂ ಮೂಗು ತೂರಿಸುತ್ತಿದ್ದ ವೆಂಕಪ್ಪನನ್ನು ಅಮ್ಮಚ್ಚಿ ಯಾವ ಕಾರಣಕ್ಕೂ ಮೆಚ್ಚಿಕೊಳ್ಳಲಾರಳು. ತನ್ನ ತಾಯಿಯ ಅಸಹಾಯಕತೆ ಅವಳಿಗೆ ಅರ್ಥವಾಗುವುದಾದರೂ ವೆಂಕಪ್ಪಯ್ಯ ಹೀಗೆ ಬೆಳೆಯಲು ಅವಳೇ ಕಾರಣ ಎಂದು ಅಮ್ಮಚ್ಚಿಗೆ ಅವಳ ಬಗ್ಗೆಯೂ ಸಿಟ್ಟು. ಕಥಾ ಸಂವಿಧಾನದ ಮುಖ್ಯ ಭಾಗವೆಂದರೆ ಅಮ್ಮಚ್ಚಿ–ವೆಂಕಪ್ಪರ ಸಂಘರ್ಷ.

ಕೊನೆಗೂ ವೆಂಕಪ್ಪಯ್ಯನೊಂದಿಗೆ ಅಮ್ಮಚ್ಚಿಯ ಮದುವೆಯಾಗುತ್ತದೆ. ಅವನ ಮೊದಲಿನ ಪ್ಲಾನಿನಂತೆ ತಿರುಪತಿಯ ಹತ್ತಿರ ಹೋಟೆಲು ಇಟ್ಟಿದ್ದು ಆಯಿತು. ವೆಂಕಪ್ಪಯ್ಯ ನೇಣುಹಾಕಿಕೊಂಡು ಸತ್ತಿದ್ದು ಆಯಿತು. ವಾಪಸ್ ಊರಿಗೆ ಬಂದ ಅಮ್ಮಚ್ಚಿಯನ್ನ ಸೀತತ್ತೆ **"ಏನ್ ರಂಡೆ' ಒಬ್ಬಳೇ! ಯಂತ ಕತೆ ಮಾಡಿಂಡೆ? ಎಂದರು ಗುಮಾನಿ ಬಂದಂತೆ. 'ಒಬ್ಬಳೇ ಬರದೆ ಮತ್ತೆಂತ ಮಾಡ್ತರ್ ಅಲ್ಲಿದ್ದ್? ನಿನ್ನ ಯಂಕಪ್ಪಯ್ಯ ನೇಣು ಹಾಕಿಂಡ'– ಎಂದು ಅಮ್ಮಚ್ಚಿ ಸೀದ ಕಲ್ಲುಮರಿಗೆ ಇದ್ದಲ್ಲಿಗೆ ಹೋಗಿ ನೀರನ್ನು ಮುಖಕ್ಕೆ ಬೀಸಿ ಬಡಿದು ಕೊಳ್ಳುತ್ತ ತಿರುಗಿ ತಾಯಿಯನ್ನ ನೋಡಿದಳು. ಸೆರಗಿಂದ ಮುಖವರೆಸಿಕೊಳ್ಳುತ್ತ ಎಡೆಯಲ್ಲಿ ನನ್ನನ್ನು ನೋಡಿ ನಕ್ಕಳು"!**[೨೧]

ದೂರದ ಊರಲ್ಲಿ ಹೋಟೆಲ್ ದಿವಾಳಿಯಾದದ್ದನ್ನ ಗಂಡನೆನಿಸಿಕೊಂಡ ವೆಂಕಪ್ಪಯ್ಯ ನೇಣು ಬಗಿದುಕೊಂಡು ಸತ್ತದ್ದನ್ನ ಅಮ್ಮಚ್ಚಿ ಸಹಿಸಿಕೊಂಡದ್ದಿದೆಯಲ್ಲ ಅದು ನಿಜವಾದ ಗಟ್ಟಿತನದ್ದು. ಬಹುಶಃ ಅವಳ ಇಂತ ಒರಟುತನಗಳೇ ಅವಳ ಸಹಾಯಕ್ಕೆ ಬಂದಿರಬಹುದು.

ವೈದೇಹಿಯವರ 'ಹಕ್ಕಿಲ್ಲದವರು' ಒಂದು ಮಹತ್ವಾಕಾಂಕ್ಷಿ ರಚನೆಯಾಗಿದೆ. ಅಕ್ಕು, ಅಮ್ಮಚ್ಚಿಯೆಂಬ ನೆನಪು, ವಾಣಿಮಾಯಿ ಮುಂತಾದ ಕಥೆಗಳಲ್ಲಿ ಕಾಣುವ ಭೌತಿಕ ಹಿಂಸೆ ಇಲ್ಲಿ ಕಾಣುವುದಿಲ್ಲ. ಇಲ್ಲಿ ಹಿಂಸೆ ಎನ್ನುವುದು ಮಾತಿನ ಮೂಲಕ ಪ್ರಯೋಗವಾಗುತ್ತದೆ. ಮಾತು ಬಿರುಸಾಗಿಯೇ ಇರಬೇಕೆಂದಿಲ್ಲ, ಮಾತು ಮೇಲುವಾಗಿದ್ದರೂ, ಮೃದುವಾಗಿದ್ದರೂ ಅದರ ಧಾಟಿಯಲ್ಲಿ ಹಿಂಸೆ ವ್ಯಕ್ತವಾಗಬಹುದು. ಕೆಲವೊಮ್ಮೆ ಮೌನದಲ್ಲಿಯೂ ಇದು ಸಾಧ್ಯವಾಗುತ್ತದೆ. ಹಾವಭಾವ, ನೋಟ, ಸನ್ನೆಗಳ ಮೂಲಕವೂ ಹಿಂಸೆ ಪ್ರಯೋಗವಾಗುತ್ತಿರುತ್ತದೆ. ಇಡೀ ಕಥೆ ಇಲ್ಲಿ ಒಂದು ದಿನದ ಅವಧಿಯಲ್ಲಿ ನಡೆದು ಹೋಗುತ್ತದೆ.

ಸಾಮಾನ್ಯವಾಗಿ ವೈದೇಹಿಯವರ ಕಥೆಗಳಲ್ಲಿ ನಾಯಕಿ ಪಾತ್ರಗಳಿಗೆ ಪ್ರತಿ ಪಾತ್ರವನ್ನು ಸೃಷ್ಟಿಮಾಡಿದ್ದು ಬಹಳ ಕಡಿಮೆ. ಒಂದರ್ಥದಲ್ಲಿ ಇಲ್ಲವೇ ಇಲ್ಲ ಎನ್ನುವುದು ಸೂಕ್ತ. ಏಕೆಂದರೆ ಕಥೆಯೊಳಗೆ ನಾಯಕ ನಿರ್ವಹಿಸಬಹುದಾದ ಎಲ್ಲಾ ಸಂದರ್ಭ ಸನ್ನಿವೇಶಗಳನ್ನು ಇಲ್ಲಿ ಕಥಾನಾಯಕಿ ನಿರ್ವಹಿಸುತ್ತಾಳೆ. ಇಡೀ ಸಂಸಾರದ ನೌಕೆಯನ್ನು ಒಬ್ಬ ಅನಕ್ಷರಸ್ಥ ಹೆಣ್ಣು ಸಾಗಿಸುವುದಿದೆಯಲ್ಲ ಅದು ನಿಜಕ್ಕೂ ಕುತೂಹಲದ್ದು. ಹಕ್ಕಿಲ್ಲದವರು ಕಥೆಯ 'ಸಿರಿ' ಕೂಡ ಈ ನಿಟ್ಟಿನಲ್ಲಿ ದುಡಿಯುತ್ತಾಳೆ.

ವಯಸ್ಸಾದ ತಾಯಿ, ಇಬ್ಬರು ಮಕ್ಕಳು, ಹದಿಹರೆಯದಲ್ಲೇ ಏನೋ ಆಗಿ (ಏನಂತ ಯಾರೂ ಹೇಳದೆ ನಾನಾ ಕಾರಣಗಳಿಗೆ ಬಲಿಯಾಗಿರುವ) ತಂಗಿ ರಾಧೆ, ಜೊತೆಗೆ ಬಂದು ಹೋಗುವವರನ್ನ ಉಪಚರಿಸುವುದು, ಸಾಲದ್ದಕ್ಕೆ ಮನೆ ಮತ್ತು ತೋಟದ ವಹಿವಾಟು ನಡೆಸುವುದು. ಗಂಡನಿದ್ದಾನೆ ಸಂಸಾರ ಮಾಡುವವನಲ್ಲ. ಮಕ್ಕಳಿದ್ದಾರೆ ವಯಸ್ಸಿಗೆ ಬಂದವರಲ್ಲ. ತಾಯಿ ಇದ್ದಾರೆ ಆದರೆ ಹಾಸಿಗೆ ಹಿಡಿದು ಅವರಿಗೆ ಮತ್ತೊಬ್ಬರ ಸಹಾಯ ಬೇಕಿದೆ. ತಂಗಿ ರಾಧೆಯೋ ಅವಳ ಎಲ್ಲಾ ಕೆಲಸಗಳು ನಡೆಯುವುದೇ ಕೋಣೆಯೊಳಗೆ. ಅವಳ ವಯಸ್ಸೀಗಾ ಮೂವತ್ತೈದರ ಮೇಲೆ ಆಗಿರಬೇಕು. ಅವಳ ಎಲ್ಲಾ ಹೇಸಿಗೆಯನ್ನು ಬಾಚುವುದು ಈ ಸಿರಿಯೇ, ಇನ್ನು ಸಿರಿಗೆ ಸೆರೆ ಎನಿಸಿರಬಹುದಾದ ಮತ್ತೊಂದು ಪಾತ್ರ ಸಿರಿಯ ಅಣ್ಣನದು.

ದೊಡ್ಡಕ್ಕನ ಆಸ್ತಿಗೆಲ್ಲ ಹಕ್ಕುದಾರನಾಗಿರಬೇಕಾಗಿದ್ದ ಸಿರಿಯ ಅಣ್ಣ, ಸಿರಿ ತನ್ನ ಗಂಡ ಮಕ್ಕಳ ಸಮೇತ ಬಂದು ಕುಳಿತುಕೊಳ್ಳುವವರೆಗೂ ಬಿಡಲಿಲ್ಲ. 'ಅಮ್ಮನಿಗೆ ಒಂದು ಜೊತೆ ಇರಲಿ, ಅಪ್ಪ ಹೋದೆ ಮೇಲೆ ಒಬ್ಬಳೇ ಆಗಿದ್ದಾಳೆ ಅಲ್ಲಿ. ಆ ತೋಟ ನನಗೆ ಬೇಡ. ನನ್ನ ಸಂಪಾದನೆ ನನಗುಂಟು. ನೀನೆ ಇರು. ಗಂಡ ಹೇಗೂ ಹೋಟೆಲು ಮುಚ್ಚಿದ ಅಂದ ಮೇಲೆ ನಿಂಗೂ ಒಂದು ದಿಕ್ಕು ಬೇಕಲ್ಲ...' ಎಂದಿದ್ದ ಸಿರಿಯ ಅಣ್ಣ. ಅದನ್ನ ಸತ್ಯ ಅಂಥ ನಂಬಿದ್ದಳು ಸಿರಿ. ಈಗ ಎಲ್ಲ ಭಾರ ಹೊತ್ತು ತೋಟ ಇನ್ನೇನು ರೂಢಿಗೆ ಬಂತು ಅನ್ನುವಾಗ ತೋಟ ಬೇಕು ಅಂತ ಗಲಾಟೆ ಎಬ್ಬಿಸಿದ್ದಾನೆ ಮನೆ ರಿಪೇರಿಗೆ ಬಂದಿದೆ. ಆದರೆ ಬೀಳುವ ಮನೆಯನ್ನ ದೊಡ್ಡ ರಿಪೇರಿ

ಮಾಡಿಸಲು ಇವಳಿಗೆ ಹಕ್ಕಿಲ್ಲ. ಸಿರಿಯ ಅಮ್ಮ, ದೊಡ್ಡಕ್ಕ ಕೂಡ ತನ್ನ ಸಮಸ್ತ ಜವಾಬ್ದಾರಿ ಹೊತ್ತ ಮಗಳನ್ನ ಮನೆಗೆ ಬಂದ ನೆಂಟರಿಷ್ಟರ ಮುಂದೆ ಅವಮಾನಿಸುವರಂತೆ ಮಾತನಾಡಿಸುತ್ತಾರೆ.

ಕಾನೂನಿನ ದೃಷ್ಟಿಯಿಂದ ತೋಟ ಮನೆಗಳ ಮೇಲಿನ ಹಕ್ಕು ಸಿರಿಯ ಅಣ್ಣನದೇ. ಆದರೆ ಅದನ್ನು ಒಂದು ಸ್ಥಿತಿಗೆ ತಂದದ್ದು ತಾನಲ್ಲವೇ ಎಂಬುದು ಸಿರಿಯ ಪ್ರಶ್ನೆ. ತೋಟ ಒಂದು ಹದಕ್ಕೆ ಬಂದಮೇಲೆ ಅಣ್ಣ ತೋಟದ ಮೇಲೆ ಹಕ್ಕು ಸಾಧಿಸಲು ಬಂದರೆ ಸಿರಿ ಏನು ಮಾಡಬೇಕು? ಅವಳು ಇಲ್ಲಿಗೆ ತಾನಾಗಿಯೇ ಬಂದದ್ದೂ ಅಲ್ಲ. ತನಗೆ ತೋಟದಲ್ಲಿ ಹಕ್ಕಿಲ್ಲ, 'ನೀನಲ್ಲಿ ಬಪ್ಪುಗೇ ತೀರ ಇತ್' ಎಂಬ ಮಾತನ್ನು ಪದ್ಮನಾಭ ಆಡಿದಾಗ ಸಿರಿ ಕೆರಳಿ ಬಿಡುತ್ತಾಳೆ. "ಬಾರದೆ ಇದ್ರೆ ಈಗ ನೀವು ಒಂದು ಲೋಟ ನೀರು ಸೈತ ಸಿಗದೆ ದೊಂಡೆ ಒಣಸಿಂಡ್ ವಾಪಾಸು ಹೋಗ್ಗಿತ್" ಎಂಬ ಮಾತುಗಳು ಅವಳ ಬಾಯಿಯಿಂದ ಬಂದು ಬೀಡುತ್ತವೆ. ಒಂದು ದೃಷ್ಟಿಯಿಂದ ಕಥೆಯ ಶೀರ್ಷಿಕೆ 'ಹಕ್ಕಿಲ್ಲದವರು' ನೇರವಾಗಿ ಸಿರಿ, ರಾಧೆ, ಸಿರಿಯ ಮಕ್ಕಳು ಮತ್ತು ದೊಡ್ಡಕ್ಕನಿಗೂ ಸಹ ನೇರವಾಗಿ ಅನ್ವಯವಾಗುವಂತಿದೆ. ಏಕೆಂದರೆ ಅದರ 'ನಿಜವಾದ' ಅಂದರೆ ಕಾನೂನಿನ ಕಣ್ಣಿನಲ್ಲಿ 'ಹಕ್ಕುದಾರ'ನೆಂದರೆ ತೋಟದ ಕೆಲಸ ಮಾಡದ ತಾಯಿಯನ್ನು ನೋಡಿಕೊಳ್ಳದ 'ಮನೆ'ಯ ಜವಾಬ್ದಾರಿಯನ್ನ ಹೊರದ ಸಿರಿಯ ಅಣ್ಣ. ಇನ್ನೊಂದು ದೃಷ್ಟಿಯಿಂದ ಎಲ್ಲದಕ್ಕೂ ಸಿರಿಯನ್ನೇ ನೆಚ್ಚಿಕೊಂಡು ಸಿರಿಯ ದುಡಿಮೆಯನ್ನೇ ಆಶ್ರಯಿಸಿಕೊಂಡಿರುವ ದೊಡ್ಡಕ್ಕ ಮತ್ತು ರಾಧೆಗೆ ಸಿರಿಯನ್ನು ವಿನಾಕಾರಣ ಹಿಂಸಿಸಲು ಹಕ್ಕಿಲ್ಲ. ಅವರೂ 'ಹಕ್ಕಿಲ್ಲದವರು' ಇನ್ನು ಅಪರೂಪಕ್ಕೆಂಬಂತೆ ದೊಡ್ಡಕ್ಕನ ಮನೆಗೆ ಬರುವ ಅವಳ ಮನೆ ಮತ್ತು ಅದರ ತಾಪತ್ರಯಗಳಿಗೆ ಅರ್ಥಪೂರ್ಣವಾಗಿ ಸ್ಪಂದಿಸದ ಸಿರಿಯ ಬಂಧು-ಬಾಂಧವರಿಗೆ ಅವಳನ್ನು ಟೀಕಿಸಲು ಅವಳಲ್ಲಿ ತಪ್ಪು ಕಂಡುಹಿಡಿಯಲು ಯಾವ ಹಕ್ಕು ಇಲ್ಲ. ಅವರೂ ಈ ದೃಷ್ಟಿಯಿಂದ 'ಹಕ್ಕಿಲ್ಲದವರು'. ಹೀಗೆ ವೈದೇಹಿ ಕಥೆಯು ಹಕ್ಕಿನ ಪ್ರಶ್ನೆಯನ್ನು ನಾನಾ ರೀತಿಗಳಲ್ಲಿ ಎತ್ತಿ, ಇಲ್ಲಿನ ಮನುಷ್ಯ ಸಂಬಂಧಗಳನ್ನು ವ್ಯವಹಾರಗಳನ್ನು ಸಮಸ್ಯಾತ್ಮಕಗೊಳಿಸುತ್ತದೆ. ಯಾರ 'ಹಕ್ಕು' ಎಂಥದ್ದು ಮತ್ತು ಎಷ್ಟು ಎಂಬ ಪ್ರಶ್ನೆಗಳಿಗೆ ಸರಳವಾದ ಉತ್ತರಗಳಿಲ್ಲ.

ಎಷ್ಟೋ ಸಂದರ್ಭಗಳಲ್ಲಿ ಸಿರಿ ಒಂದು ರೀತಿಯಲ್ಲಿ ಗಯ್ಯಾಳಿಯಾಗಿ ಕಾಣಿಸಿಕೊಳ್ಳುತ್ತಾಳೆ. ಆಕೆ ಹಾಗೆ ನಡೆದುಕೊಳ್ಳಬೇಕು ಕೂಡ. ಇಲ್ಲದಿದ್ದಲ್ಲಿ ಇಷ್ಟು ದಿನ ಮನೆ, ತೋಟ ಅಂಥ ಎಲ್ಲವನ್ನೂ ಸಂಭಾಳಿಸಿಕೊಂಡು ಬಂದಿರುವ ಸಿರಿಗೆ ಬಹುಶಃ ಯಾವ ಹಕ್ಕು ಸಿಗಲಾರದು. ಸಿರಿಯ ಮಾತು ಒರಟುತನ, ಹಕ್ಕು ಚಲಾವಣೆ, ಎಲ್ಲದರಲ್ಲಿಯೂ ಯಾವ ಗಂಡಸಿಗೂ ಕಡಿಮೆ ಇಲ್ಲದಂತೆ ಕಾಣಿಸಿಕೊಳ್ಳುವ ಅನಿವಾರ್ಯತೆ ಸಿರಿಗಿದೆ.

ಪ್ರತಿಭಟನೆಯ ನೆಲೆಯಲ್ಲಿ ಗುರುತಿಸಬಹುದಾದ ವೈದೇಹಿಯವರ ಮತ್ತೊಂದು ಕಥೆ ಚಿಕ್ಕನ ಸತ್ಯಾಗ್ರಹ. ಈ ಕಥೆಯ ಚಿಕ್ಕ, ಸುವರ್ಣಮ್ಮನ ಮನೆಯ ಕೆಲಸದ ಹೆಂಗಸು. ಮುದಿಗಂಡ,

ಕುಡುಕ ಮಗ, ಮಗಳನ್ನ ಸಾಕುವ ಜವಾಬ್ದಾರಿಯು ಇವಳದೆ. ಎಷ್ಟು ದುಡಿದರು ದುಡ್ಡಿನ ತಾಪತ್ರಯವಂತೂ ಹೇಗೆ ಮಾಡಿದರೂ ಮುಗಿದಿಲ್ಲ.

ಹಾಗಂತ ಇಲ್ಲಿ ಚಿಕ್ಕನ ಪ್ರತಿಭಟನೆ ಇರೋದು ಹಣಕ್ಕಾಗಿ ಅಲ್ಲ, ತಿನ್ನೊ ಅನ್ನಕ್ಕಾಗಿಯು ಅಲ್ಲ, ತನ್ನ ಪುಟ್ಟ ಮನೆಯ ಉಳಿವಿಗಾಗಿ. ಚಿಕ್ಕ ತನ್ನ ಮನೆಯನ್ನ ಯಾರದ್ದೊ ಜಾಗದಲ್ಲಿ ಕಟ್ಟಿಕೊಂಡಿಲ್ಲ. ಮನೆ ಕಟ್ಟೋಕೆ ಯಾರಿಂದಲೂ ಸಾಲಾನು ಪಡೆದಿಲ್ಲ, ಸಾಲ ತೀರಿಸೋಕೆ ಮನೆಯನ್ನು ಗಿರವಿಗೂ ಇಟ್ಟಿಲ್ಲ. ಆದರೂ ಚಿಕ್ಕಗೆ ಇತ್ತೀಚೆಗೆ ಆ ಬಗ್ಗೆ ಆತಂಕ ಶುರುವಾಗಿದೆ.

ಎಷ್ಟೋ ವರ್ಷದಿಂದ ಖಾಲಿ ಇದ್ದ ತನ್ನ ಮನೆ ಮುಂದಿನ ಜಾಗದಲ್ಲಿ ಮನೆಯಾಗಿದೆ ಅವಳ ಮಾತಿನಲ್ಲೆ ಹೇಳಬೇಕೆಂದರೆ 'ಯಂತಾ ದ್ವಡ್ ಬೂತ್ ಮನಿ ಅಂತ್ರಿ! ಯ್ಯೇನ್, ಯೆಸ್ಟ್ ಲಕ್ಸೊ ಬೇಕೋ ದೇವ್ರೆ!' ಕಲ್ಲುಗುಂಡಿನ ಹಾಗಿನ ಮನೆ. ಉಪ್ಪರಿಗೆ ಸುತ್ತಲೂ ಪಾಗಾರ, ಭರ್ಜರಿ ಗೇಟು ಕಟ್ಟಿದರೆ ಹೀಗೆ ಕಟ್ಟಬೇಕು ಎಂಬ ಹಾಗೆ. ಇಡೀ ಮನೆಗೆ ಲೈಟು ಹಾಕಿ ಒಕ್ಕಲು ಮಾಡಿದ್ದಾರೆ. ಚಿಕ್ಕನಿಗೆ ಭಯ ಶುರುವಾಗಿದ್ದು ಕೂಡಾ ಅವತ್ತೆ. ಹಾಗಾಗಿಯೇ ಚಿಕ್ಕನಿಂದ ನಿಧಾನಕ್ಕೆ ಮೌನ ಪ್ರತಿರೋಧಗಳು ಪ್ರಾರಂಭವಾಗುತ್ತವೆ.

ಊಟ ಆಗಿದ್ದೇ ಎಂಜಲೆಲೆಯನ್ನು ತೆಗೆತೆಗೆದು ಹಿಂದೆ ಚಿಕ್ಕನ ಮನೆ ಕಡೆಗೆ ಬಿಸಾಡಿದರು. ಎಲ್ಲಾ ಸೀದಾ ಮನೆ ಮೆಟ್ಟಿಲಿನ ಮೇಲೆ ಬಾಗಿಲೊಳಗೆ ಬೀಳುತ್ತಿತ್ತು. ಪಕ್ಕದಲ್ಲೆ ಮುನ್ಸಿಪಾಲಿಟಿ ತೊಟ್ಟಿ ಇದ್ದರು, ಅದನ್ನು ತೋರಿಸಿದರು, ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ಮನೆಯವರೇ ಹೇಳಿ ಮಾಡಿಸಿದ್ದಾರೆ. ಇಲ್ಲವಾದರೆ ಕೆಲಸದವಕ್ಕೆ ಅಷ್ಟು ಧೈರ್ಯ ಎಲ್ಲಿಂದ? ಬರುತ್ತೆ ಎನ್ನೋದು ಚಿಕ್ಕನ ಸಂದೇಹ. ಎಂಜಲು, ಕಸ, ಮುಸುರೆ ಗಲೀಜನ್ನು ಬಿಸಾಡುವುದು ಮರುದಿನವೂ ನಿಲ್ಲಲಿಲ್ಲ. ಮರುದಿನದಿಂದ ತೋಟದ ಮಾಲಿಯೂ ಅದೇ ಅಭ್ಯಾಸ ಮಾಡಿಕೊಂಡ. ಅಡುಗೆಯವರು ಅಳಿದು ಬಳಿದ ಎಲ್ಲವನ್ನು ಚಿಕ್ಕನ ಮನೆಯ ಕಡೆ ಎಸೆಯುತ್ತಿದ್ದರು.

"ಅವು ಈಚೆಗೆ ಹಾಕಿದಷ್ಟನ್ನೂ ಇವಳ ಮಗಳು ಬಾಚಿ ಆಚೆಗೆ ಬೀಸಿ ಬಿಸಾಡಿ ಅದು ಅವರ ಮನೆ, ಗೋಡೆ, ಕಿಟಕಿ ದಾಟಿ ಕೋಣೆಗೆ ಬಿದ್ದು ಅಲ್ಲಿಂದೊಬ್ಬ ಗಂಡಸು ಎದ್ದು ಬಂದು... ತನಗೂ ತಡೆಯದೆ ಕೂಗಾಡಿದೆ, ಅದಕ್ಕೆ ಆತ ಸೀದಾ ಒಳಗೆ ಹೋಗಿ ಕೋವಿ ತರುವುದೆ! ಕೋವಿ ತೋರಿಸಿ ಗುಂಡ್ ಹೊಡ್ದ್ ಒಂದೇ ಪೆಟ್ಟಿಗ್ ಹುಟ್ಸೇ ಇಲ್ಲೆ ಮಾಡ್‌ಸ್ವೆ ನಸ್ರಾಣೆಗ್ಳ್. ಆಗ್ದಿರೆ ಜಾಗ ಬಿಟ್ ಎದ್ದ್ ನಡೀನಿ', ಅಂತ ಒಂದ್ ಸ್ವರ ತೆಗೆದಿದ್ದೆಂದರೆ! ಚಿಕ್ಕನ ಜಬ್ಬುಗಲ್ಲ ನಡಗುತ್ತಿತ್ತು".[೨]

ಇದು ಪ್ರತಿದಿನದ ಗೋಳಾಯಿತು. ಅವರಿಗೆ ಮತ್ತೇನಿಲ್ಲ. ಇಷ್ಟು ಒಳ್ಳೆಯ ಜಾಗದಲ್ಲಿ ಕುಳಿತಿದ್ದಾವಲ್ಲ ಇವು ಅಂತ ಹೊಟ್ಟೆಕಿಚ್ಚು. ಇವರು ಮನೆಕಟ್ಟಿಕೊಂಡ ಕಾಲಕ್ಕೆ ಮೂರು ಪಾವಾಣೆಗೆ ಕೇಳುವವರಿಲ್ಲ ಈ ಜಾಗವನ್ನು. ಅವರು ಇವತ್ತು ಬಂದವರು, ತಾವು ಆದಿಕಾಲದಿಂದಲೂ ಇಲ್ಲೇ ಸತ್ತುಕೊಂಡಿದ್ದವರು. 'ಲಕ್ಸೊ ಅಲ್ಲ, ಕ್ವೋಟಿ ಕೊಟ್ರೂ ನಾ ಯೇಳೆ' ಅನ್ನೋದು ಚಿಕ್ಕನ ವಾದ.

"ಅಯ್ಯೋ... ನಾವಿದ್ದೇ ಇವ್ರ್ ಮನಿ ಗಲೀಜ್ ಹೆಕ್ಕಿ ಹಾಕೂಕೆ ಅಂತಾಯ್ತಲೇ... ನಮ್ ಕಂದ್ರೇ ಅವ್ರ್ ಮನೀ ಹೆಂಗಸ್ರಿಗ್ ಸಮೇತ ಅಸಯ್ಯ ಅಂಬ್ರ್, ನನ್ ಗಂಡ ಕೆಮ್ಮಿರ್ ಅಸಯ್ಯ ಅಂಬ್ರ್, ನನ್ನ ಮಗ ಕುಡ್ಕಂಡ್ ಬಂದ್ರ್ ಅಸಯ್ಯ ಅಂಬ್ರ್, ದ್ವಡ್ಡ್ ಕುಡ್ರೆ ಅಸಯ್ಯ ಇಲ್ಯ ಅಮ್ಮ, ಅವ್ರ್ ಹಾಂಗೆ, ಹ್ಞಂ! ಇಚಿತ್ರೋ.. ನಾವ್ ಆಚೀಗ್ ಹೋಪಿಕಿಲ್ಲೆ ಈಚೀಗ್ ಹೋಪಕಿಲ್ಲೆ ಅಸಯ್ಯಥೂ ಅಂತೆಳಿ ಉಗೀತೊ, ನಮ್ಮನ್ ಎಬ್ಬುಕ್ ಮಾಡೊ ಹಿಕ್ಕಿ ಇದೆಲ್ಲ. ಸಮಾ ಇಪ್ಪ್ ಮನ್‌ಸ್ರಾರ್ ಸರಾಸರಿ ಏದ್ರ್ ಬಂದ ರಾಜಾರೋಷ ಮಾತಾಡ್ದ... ಇದ್ ಹಾಂಗಲ್ಲ. ಅಡ್ಡದಾರಿ ಕಾತಿ. ನಾನು ಕಾತಿ. ಬಾಯಗ್ ಒಂದ್ ಶಬ್ದೊ ಆಡ್ಡೆ ಯಂಜ್ಲ್ ಕಸೊ ಅದ್ಯೋನೇನ್ ಬಿಸಾಕ್ ತ್ವೊ ಯಲ್ಲ ಯತ್ಯೆತ್ತಿ ಮುನ್ಸಿಪಾಲ್ಟಿ ತೊಟ್ಟಿಗ್ ಬಿಸಾಕ್ತಿ. ಹಾಕ್ದ್ ಹಾಂಗೂ ಬಿಸಾಕ್ತಿ. ಹಾಕ್ದಾಂಗೂ.. ನನ್ ಕೂಡೆ ಎಷ್ಟ್ ದಿವ್ಸೊ ತಡೊಕಾತ್ತೊ ಅಷ್ಟ್‌ದಿವೊ...' ಚಿಕ್ಕನ ಇಡೀ ದೇಹ ನಡುಗ ತೊಡಗಿತು. ಒಡಲ ದುಃಖ ಮೈಮೇಲೆ ಅಮರಿಕೊಳ್ಳತೊಡಗಿತು. ದನಿ ಏರುತ್ತಾ ಹೋಯಿತು. ಸ್ಫೋಟವಾಗುವಂತಿದ್ದಳು ಚಿಕ್ಕ. 'ಅಯ್ಯೋ ಹೊರಗಾರೂ ಮಲ್ಕಮ್ನೇ, ರಾತ್ರಿಯಂತೂ ಕಾಣ್ದೆಯಪ್ಪೊಟ್ತಿಗ್ ಯೇನ್ ಹ್ಯಾಂಗ್ ಬಂದ್ ಬೀಳತ್ತ್ ಅಂತೇಳಿ ಹೇಳೂಕ್ ಯಡ್ವ? ನಾಯಿ ಹೇಲಂತೂ ಕಾಣ್ದೆ ಬಿಸಾಡ್ವಲೇ, ನಾನೆಲ್ಲಿಗ್ ಹ್ವಾಪ್ದ್! ನನ್ದ್ ಬಡ್ಕೇ ಬರಿ ಹಗ್ಲ್‌ವೇಸೂ ಆಯ್ತು ಲಬ್ಯೇ...."[೩೩]

'ಚಿಪ್ಪು' ಕಥೆ ಒಳಗೊಂಡಿರುವ ವಸ್ತು ಮತ್ತು ನಿರೂಪಣಾ ದೃಷ್ಟಿಯಿಂದ ಸಂಕೀರ್ಣವಾದ ಕಥೆ. ಇಲ್ಲಿ ಅವಿವಾಹಿತ ಹೆಣ್ಣಿನ ದುಗುಡಗಳು ಚಿತ್ರಿತವಾಗಿವೆ. ಈ ಕಥೆಯ 'ಯಶೋಧ' ತನ್ನೆಲ್ಲ ಮನಸ್ಸಿಚ್ಛೆಗಳನ್ನು ಬಚ್ಚಿಟ್ಟುಕೊಂಡು ಅಜ್ಜ, ಅಮ್ಮ, ಅಪ್ಪ, ನೆರೆಹೊರೆಯವರು ತಾನು ಹುಟ್ಟುವ ಮುಂಚೆಯೇ ಸೃಷ್ಟಿಸಿ ಇಟ್ಟು ಆ ಹಳೆಯ, ನಾರುವ, ಬೋಳು ಬೇಲಿಯ ಒಳಗೆ ತನ್ನ ನಾಲಿಗೆಯನ್ನು ಬಂಧಿಸಿಕೊಂಡಿದ್ದಾಳೆ.

ಯಶೋಧ ಕುಟುಂಬ ಎಂಬ ಚಿಪ್ಪಿನೊಳಗೆ ರಕ್ಷಿಸಲ್ಪಟ್ಟಿದ್ದಾಳೋ ಅಥವಾ ಬಂಧಿಸಲ್ಪಟ್ಟಿದ್ದಾಳೋ ತಿಳಿಯುವುದಿಲ್ಲ. ಏಕೆಂದರೆ ತನ್ನ ಮದುವೆಯ ವಿಚಾರದಲ್ಲಿ ಕುಟುಂಬದವರೇ ತೆಗೆದುಕೊಳ್ಳುವ ತೀರ್ಮಾನಗಳ ವಿರುದ್ಧ ಯಶಿ ಮನೆಯೊಳಗೆ ಪ್ರತಿಭಟಿಸುತ್ತಾಳೆ. ಮತ್ತೆ ಮತ್ತೆ ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುತ್ತಾಳೆ. ತನ್ನನ್ನು ನೋಡಲು ಬರುವ ಮುಂಬಯಿಯ ವರನ ಬಗ್ಗೆ ತನ್ನ ಮನಸ್ಸಿನಲ್ಲಿ ಏಳುತ್ತಿದ್ದ ಸಹಸ್ರ ಸಹಸ್ರ ಪ್ರಶ್ನೆಗಳಲ್ಲಿ ಒಂದಾದರೂ ಅಪ್ಪನ ಮನದಲ್ಲಿ ಏಳಬೇಡವೇ?

ತಾನಟ್ಟಿದ್ದನ್ನು ಒಪ್ಪವಾಗಿ ಬಡಿಸುತ್ತಾ 'ನೀವಂದದ್ದಕ್ಕೆ ನನ್ನ ಸಹಿ' ಎಂಬಂತೆ ವಿಧೇಯವಳಾಗಿ ನಿಂತ ಅಮ್ಮನನ್ನು 'ಹೆತ್ತವಳು ನೀನು ತಾನೆ? ಹೆತ್ತದ್ದು ಮಾತ್ರವೇನು? ಪ್ರಶ್ನೆ ಕೇಳಲು ನಿನ್ನ ಜೀವದಲ್ಲಿ ಕಸುವಿಲ್ಲವೆ?' ಎಂತ ಕೇಳಬೇಕೆಂದುಕೊಳ್ಳುತ್ತಾಳೆ.

ಯಾವಾಗಲೂ ಯಶೀಯ ಪರವಾಗಿಯೇ ಮಾತನಾಡುವ ರಂಗಜ್ಜಿ ಯಶೀ ಅಪರಂಜಿಯಂತಹವಳು ಎಂದು ಹೊಗಳಿದಾಗ ಹೊಗಳಿಕೆಯಿಂದ ಉಬ್ಬುತ್ತಾಳೆ. ಆದರೆ ಅನೇಕ

ಸರಿ ಹೊಗಳಿ ಹೊಗಳಿ ಎನ್ನ ಶೂಲಕ್ಕೇರಿಸಿದರಯ್ಯ ಎಂಬಂತೆ ತನ್ನ ಪರಿಸ್ಥಿತಿ ಎಂದು ಮರುಗುತ್ತಾಳೆ. ಮದುವೆಯ ವಿಚಾರದಲ್ಲಿಯೂ ಅಜ್ಜಿ "ನಮ್ಮ ಯಶೀಗೇನು ಯಾರೊಡನೆಯೂ ರಾಣಿಯಂತಿರಬಲ್ಲಳು' ಎಂದಾಗ ಯಶೀಯ ಮನಸ್ಸು ಸಿಟ್ಟಿಗೇಳುತ್ತದೆ. ಆಗ ಅವಳಂದುಕೊಳ್ಳುವ ಮಾತುಗಳು ತನ್ನವರನ್ನೆಲ್ಲ ಧಿಕ್ಕರಿಸುವಂತವು. ಬಹುಶಃ ಯಶೋಧಳಂತ ಅದೆಷ್ಟೋ ಹೆಣ್ಣುಮಕ್ಕಳ ಮನದಾಳದ ಮಾತಿರಬೇಕು. 'ರಂಗಜ್ಜಿ ಒಮ್ಮೆ ಸಾಯುತ್ತೀಯಾ? ಜೀವದಲ್ಲಿದ್ದು ನನ್ನನ್ನೇಕೆ ಕೊಲ್ಲುತ್ತಿ? ನಿನಗೆ ಹೇಗೆ ಗೊತ್ತು ನಾನು ಯಾರೊಂದಿಗೂ ಜೀವನ ತೆಗೆಯುವವಳೆಂದು? ನೀನು ಹೀಗೆ ಅಂದೆ. ಅನ್ನುತ್ತಲೇ ನನ್ನನ್ನು ಬೆಳೆಯಿಸಿದೆ. ಆ ಚಿಪ್ಪಿನಲ್ಲಿಯೇ ನಾನೀಗ ಸಮಾಧಿಯಾಗುತ್ತಿದ್ದೇನೆ ನೋಡು. ಈಗಲಾದರೂ ಸುಮ್ಮನಿರು. ನನ್ನ ತಲೆ ಗಾರೆದ್ದು ಹೋಗಿದೆ. ಇದೀಗ ನಡೆಯುತ್ತಿರುವುದು ನನ್ನ ಭವಿಷ್ಯದ ಚರ್ಚೆ, ಮಾತನಾಡಲು ನಾನಿದ್ದೇನೆ ಸತ್ತಿಲ್ಲ. ನೀನು ಎಲ್ಲ ಕಳೆದು ಕುಳಿತಿದ್ದೀಯಾ. ಇಷ್ಟು ಅಂಚಿಗೆ ಬಂದರೂ ಇನ್ನೂ ನಿನ್ನ ಅಣತಿಯನ್ನ ಮೆರೆಯಿಸುವ ಆಸೆಯೇ? ತನ್ನ ಮನಸ್ಸು ಕಿಡಿಕಿಡಿಯಾಗುತ್ತದೆ. ಅಪ್ಪ ಒಳಗೆ ಬರುತ್ತಾರೆ. ಕಸೂತಿ ಬಿಡಿಸುತ್ತ ಕುಳಿತಿರುವ ತನ್ನೆಡೆಗೆ ನೋಟ ಬೀರಿ 'ಏನು, ಯಶೋಧಮ್ಮನವರು?' ಎಂದು ಹೊಸ ವಿವಿಧ ಸ್ವರದಲ್ಲಿ ಸಣ್ಣಗೆ ನಗುತ್ತ ಕೇಳುತ್ತಾರೆ. ತಾನೂ ನಾಚುತ್ತಾ ನಗುತ್ತೇನೆ. ಈ ನಾಚಿಕೆ ಎಲ್ಲಿಂದ ಬಂತು? ಒಳಗೆ ಇಷ್ಟೊಂದು ಕೋಲಾಹಲ ಮಾಡುತ್ತಿರುವ ತಾನು ಒಮ್ಮೆ ಹೊರಬರಬಾರದೆ?"[೭೪] ಎಂದುಕೊಳ್ಳುತ್ತಾಳೆ. ಇಲ್ಲಿಯೂ ಅಷ್ಟೆ ಯಶೋದಳದು ಬರಿ ಮೌನಪ್ರತಿಭಟನೆಯೇ ಹೊರತು ಘೋಷಣೆಯದ್ದಲ್ಲ.

ವೈದೇಹಿಯವರ 'ಚಿಪ್ಪು' ಕಥೆಯ ಯಶೋಧಳಂತೆ ನಾಗವೇಣಿಯವರ 'ಸೇವಂತಿ ಓಲೆ' ಕಥೆಯ ಸೇವಂತಿ ಅವಿವಾಹಿತ ಹೆಣ್ಣು. ಜೀವದೆಳೆಯಂತಿದ್ದ ಗಂಗಯ್ಯ ಶೆಟ್ಟಿಯೊಂದಿಗೆ ನೇತ್ರಾವತಿ ನದಿಯ ಬಳಿಗೆ ಬಂದು ಪಾದೆಕಲ್ಲಿನ ಮೇಲೆ ಕುಳಿತು ನದಿಗೆ ಪಾದ ಸೋಕಿಸುತ್ತ ಆತನೊಂದಿಗೆ ಮಾತಿನ ಕಡಲಿಗೆ ಬಿದ್ದು, ಆತ ಹರಿಸುವ ಪ್ರೀತಿಯ ಮಾತುಗಳ ಮಳೆಯಿಂದ ತೋಯ್ದು, ಅವನೊಂದಿಗೆ ಮುಂದಿನ ಬದುಕಿನ ಕನಸು ಕಂಡಿದ್ದಳು. ಜಾತಿ, ಆಸ್ತಿ, ಅಂತಸ್ತು ಯಾವುದು ಅವರ ಪ್ರೇಮ ಸಂಬಂಧಕ್ಕೆ ಬಾಧೆ ತಂದಿರಲಿಲ್ಲ. ಆದರೆ ಸೇಸುಮೂಲ್ಯನ ಮಗಳು ಸೇವಂತಿ ಹಾಗೂ ತ್ಯಾಂಪಣ್ಣ ಶೆಟ್ಟರ ಮಗ ಗಂಗಯ್ಯ ಶೆಟ್ಟರ ನಡುವಿನ ಪ್ರೀತಿಯ ಸುದ್ದಿ ಶೆಟ್ಟರ ಮಡದಿ ಕೂಸಕ್ಕೆಯ ಕಿವಿಬೀಳಿಗೆ ತಲುಪಿದಂದಿನಿಂದ ಅವರಿಬ್ಬರ ನಡುವಿನ ಪ್ರೀತಿಯ ಎಳೆಗಳ ಬಂಧ ಕಳೆದುಕೊಳ್ಳುವಂತ ಅನುಭವ ಶುರುವಾಗುತ್ತದೆ.

ಮನೆತನದ ಮರ್ಯಾದೆ ಉಳಿಸಿಕೊಳ್ಳಲು ಜಾತಿಯ ಹುಡುಗಿಯನ್ನೊಂದು ಮನೆ ತುಂಬಿಸಿಕೊಳ್ಳಲು ತ್ಯಾಂಪಣ್ಣ ಶೆಟ್ಟರು ನಿರ್ಧರಿಸಿ ತಂಗಿಯ ಮಗಳ ಜೊತೆ ಮದುವೆ ಮಾಡಲು ಮುಂದಾಗುತ್ತಾರೆ.

ಮಾನವತೆ – ಅಂತಃಕರಣಕ್ಕಿಂತ ಯಾವ ಜಾತಿಯೂ ದೊಡ್ಡದ್ದಲ್ಲ ಸಂಪ್ರದಾಯವೂ ದೊಡ್ಡದಲ್ಲ ಎಂದು ಆತ ಬಲ್ಲವನಾದರೂ, ಅತ್ತ ಒಡಹುಟ್ಟಿದ ತಂಗಿಯ ಬದುಕನ್ನು ಕೈಬಿಡಲಾರದವನಾಗಿ, ಇತ್ತ ಸೇವಂತಿ ಇಲ್ಲದ ಬದುಕನ್ನು ಊಹಿಸಲಾರದವನಾಗಿ ವಿಕ್ಷಿಪ್ತ ಮನಸ್ಸಿಗನಾಗಿ, ಜೀವಂತ ಹೆಣದಂತಾಗಿ, ಹರಕೆಯ ಕುರಿಯಂತಾಗಿದ್ದ. ಅದೆಷ್ಟೋ ದಿನಗಳಿಂದ ಆಕೆಯ ಅಂತರಂಗದಲ್ಲಿ ಎದ್ದಿರುವ ನೋವು, ಅಸಹಾಯಕತೆ, ಅವಮಾನಗಳ ಜ್ವಾಲಮುಖಿಯ ಒತ್ತಡವನ್ನು ಆಕೆ ಇದೀಗ ಮೌನ ಮುದ್ರೆ ಹೊತ್ತಿರುವ ಬಿಗಿದುಕೊಂಡ ಮುಖದಲ್ಲೇ ಒತ್ತಿ ಹಿಡಿದ್ದಿದ್ದಾಳೋ ಎನ್ನುವಂತೆ ಮೌನವಾಗಿದ್ದಳು. ಗಂಗಯ್ಯ ನೇತ್ರಾವತಿ ದಡದಲ್ಲಿ ಕುಳಿತ ಸೇವಂತಿಯಲ್ಲಿಗೆ ಬಂದು ಆಕೆ ಆಸೆ ಪಟ್ಟಿದ ಏಳುಕಲ್ಲಿನ ಬೆಂಡೋಲೆ ಜೇಬಿನಿಂದ ಹೊರತೆಗೆದು 'ಇದು ನನ್ನ ಸೇವಂತಿಗಾಗಿ... ನನ್ನ ಪ್ರೀತಿಗಾಗಿ... ನನ್ನ ನೆನಪಿಗಾಗಿ' ಎಂದು ಆಕೆಯ ಬಲ ಅಂಗೈಯನ್ನು ಬಿಡಿಸಿ ಅದರೊಳಗೆ ಮುಚ್ಚಿಸಿದ್ದ.

ಪ್ರೀತಿಯ ಕಾಣಿಕೆ, ನನ್ನ ನೆನಪಿಗಾಗಿ ಎಂದೆಲ್ಲಾ ಹೇಳಿ ಕಲ್ಲಿನ ಓಲೆಯನ್ನು ಗಂಗಯ್ಯ ಕೊಟ್ಟಾಗ ಸೇವಂತಿಗೆ ಅವನ ಮೇಲಿದ್ದ ಕೊನೆಯ ಭರವಸೆಯು ಮುರಿದಂತಾದಾಗ ಎಲ್ಲವೂ ಮುಗಿದು ಹೋಯಿತೆಂಬಂತೆ, ದೇವರು ಕಂತುವ ಹೊತ್ತಾದ್ದರಿಂದ ನೀರಿಗಿಳಿದ ಸೇವಂತಿ ನಿಧಾನಕ್ಕೆ ಬಾಗಿ ಎರಡೂ ಮುಂಗೈಗಳನ್ನು ನೀರಲ್ಲಿ ಮುಳುಗಿಸಿಟ್ಟು ಸೂರ್ಯದೇವನಿಗೆ ಅರ್ಘ್ಯ ಬಿಡುವಂತೆ ಮುಷ್ಟಿಯಲ್ಲಿದ್ದ ಬೆಂಡೋಲೆಯನ್ನು ನೀರಿಗೆ ಜಾರಿಸಿದ್ದಳು.

ಬಹುಶಃ ಸೇವಂತಿ ಬಿಟ್ಟಿದ್ದು ಓಲೆಯನ್ನಷ್ಟೆ ಅಲ್ಲ ಗಂಗಯ್ಯನ ಮೇಲಿನ ಈವರೆಗಿನ ಪ್ರೀತಿಯನ್ನು ಜೊತೆಗೆ ಕನಸುಗಳನ್ನು ಕೂಡ ಹಾಗೆಯೇ ತನ್ನ ಪ್ರೀತಿಯನ್ನು ನೇತ್ರಾವತಿಯ ಪಾಲು ಮಾಡಿದ ಈ ಜಾತಿ, ಧರ್ಮ, ಸಂಪ್ರದಾಯಗಳನ್ನು ಅರ್ಘ್ಯ ಬಿಡುವ ಮೂಲಕ ಸಾಂಕೇತಿಕವಾಗಿ ಈ ಬಗೆಯ ಆಲೋಚನೆಗಳಿಗೆ ತೆರೆ ಎಳೆಯುವಂತಿದೆ.

"ದಿನವೇಳು ಕಳೆದರೂ ಗಂಗಯ್ಯ ನೇತ್ರಾವತಿಯ ದಡಕ್ಕೆ ಕಾಲಿಡದಾಗ ಸೇವಂತಿಯೊಳಗೆ ದಾಳಿಯಿಟ್ಟ ಅಸಂಖ್ಯಾ ಭಾವಗಳು ಆಕೆಯ ಯೋಚನಾ ದಾರಿಯನ್ನೇ ಪಲ್ಲಟಗೊಳಿಸಿದ್ದವು. 'ಈತನ ಪ್ರೀತಿಯೆಂಬುದು ಮರಳಲ್ಲಿ ಬರೆದು ಮಡಿಲಲ್ಲಿ ಕಟ್ಟಿಕೊಂಡಷ್ಟು ಕ್ಷಣಿಕವಾಗಿ ಹೋಯ್ತಲ್ಲ... ನೇತ್ರಾವತಿಗೆ ಹಾರಿ ಈ ಜೀವನವನ್ನು ಕೊನೆಗಾಣಿಸಲೇ' ಎಂಬ ಕೆಟ್ಟ ಅಲೋಚನೆಯಿಂದ ಆರಂಭವಾದ ಯೋಚನೆ 'ನೇರ ಆತನ ಹಿತ್ಲು ಹೊಕ್ಕು ಬಿಟ್ಟು... ಯಾಕ್ಹೀಗೆ ಕತ್ತು ಕ್ಕೊದೆ... ಎಂದು ಕೇಳಲೇ' ಎನ್ನುವವರೆಗೂ ಮುಂದುವರಿದು ಕೊನೆಗೂ ಆಕೆ ಯಾವುದೇ ಒಂದು ಸ್ಪಷ್ಟ ನಿರ್ಧಾರಕ್ಕೂ ಬರಲಾಗದೆ ಹಾಗೇ ತೊಳಲಾಡುತ್ತ 'ಹೆಕ್ಕಿ ತಿನ್ನಲು ಹಕ್ಕಿಗ್ಯಾಕೆ ಕಲಿಸಬೇಕು. ಆತನು ಅಷ್ಟೆ, ಹೆಕ್ಕಿ ತಿಂದ... ಹಾರಿದ"[೩೫] ಇನ್ನು ದುಃಖಿಸುವುದೊಂದೇ ಇದಕ್ಕೆ

ಪರಮ ದಾರಿ ಎನ್ನುವ ಭಾವ ಹೊತ್ತು ನೇತ್ರಾವತಿಗೆ ಕಣ್ಣೀರ ಧಾರೆಯನ್ನು ಮತ್ತಷ್ಟು ಹರಿಸುತ್ತಾಳೆ, ಅತ್ತು ಹಗುರಾಗುತ್ತಾಳೆ.

ನಾಗವೇಣಿಯವರ 'ಬಗ್ಗುಂಡಿ ಪ್ರಸಂಗ' ಜಾತಿ, ಊಳಿಗ ಪದ್ಧತಿಯ ನೆಲೆಯಲ್ಲಿ ಪ್ರತಿಭಟಿಸುವ ಕಥೆ. ಬಗ್ಗುಂಡಿ ಪ್ರಸಂಗ ಕಥೆಯಲ್ಲಿ ಬರುವ ಕರಿಯ ವೆಂಕಪ್ಪಾಳ್ವರ ಮನೆಯ ಊಳಿಗಕ್ಕೆ ಬಂದು ಹದಿನೇಳು ವರ್ಷಗಳೇ ಕಳೆದಿವೆ. ವೆಂಕಪ್ಪಾಳ್ವರಿಗೆ ಕೋಳಿ ಅಂಕದ ಹುಚ್ಚು ಹಿಡಿದಂದಿನಿಂದ ಅವರು ಮತ್ತೆ ಸಾಗುವಳಿಯ ಕಡೆ ತಲೆಹಾಕದೆ ತನ್ನ ಭಾವಮೈದುನ ಮಂಜಯ್ಯ ಶೆಟ್ಟರಿಗೆ ಪತ್ರ ಬರೆದು ಅವರ ಒಕ್ಕಲಿನ ಪಿಜಿನನ ಮಗ ಕರಿಯನನ್ನು ಕರೆಸಿಕೊಂಡಿದ್ದರು. ಬರುಬರುತ್ತಾ ವೆಂಕಪ್ಪಾಳ್ವರು ಕರಿಯನ ಮೇಲೆ ನಡೆಸುವ ದಬ್ಬಾಳಿಕೆ ಹೆಚ್ಚಾಗುತ್ತಾ ಬಂದಿತ್ತು. ಕರಿಯನ ಮೇಲಿನ ಸಿಟ್ಟು ಉಮ್ಮಕ್ಕೆಯಲ್ಲಿ ಕೊನೆಗೊಳ್ಳುತ್ತಿತ್ತು. ಕರಿಯ ಮತ್ತು ಉಮ್ಮಕ್ಕೆ ಹೆಚ್ಚು ಕಡಿಮೆ ಒಂದೇ ವಯಸ್ಸಿನವರಾದರೂ ಉಮ್ಮಕ್ಕೆಯನ್ನು ಕರಿಯ ತಾಯಿಯ ಸ್ಥಾನದಲ್ಲಿಟ್ಟು ನೋಡಿದ್ದ ಆದರೆ ವೆಂಕಪ್ಪಾಳ್ವರು ಅವರಿಬ್ಬರ ನಡುವೆ ಇಲ್ಲಸಲ್ಲದ ಸಂಬಂಧ ಕಲ್ಪಿಸಿಕೊಂಡು ಹೆಂಡತಿ ಮೇಲೆ ಪ್ರಹಾರ ಆರಂಭಿಸುತ್ತಿದ್ದರು. ಕರಿಯನಿಂದಾದ ಆಕಸ್ಮಿಕ ತಪ್ಪಿನಿಂದ ಮನೆಯೊಡತಿಗೆ ನಿಷ್ಕಾರಣವಾಗಿ ಸಿಕ್ಕಿದ ಹಿಂಸೆಗಾಗಿ ಕರಿಯ ಬಹಳಷ್ಟು ಪಶ್ಚಾತ್ತಾಪ ಪಟ್ಟುಕೊಂಡಿದ್ದ. ಅದೆಲ್ಲ ಕರಿಯನಿಗೆ ಮರೆಯಲಾಗದ ಘಟನೆಯಾಗಿದ್ದವು.

ಮಾರಿಪೂಜೆಯೆಂದು ಕರಿಯ ಧಣಿಗಳಿಗೆ ನೆನಪಿಸದೆ, ಅವರಪ್ಪಣೆ ಇಲ್ಲದೆ ಮಾರಿಗೆ ಕೋಳಿ ಕಡಿಸಿ ಬಂದಂದಿನಿಂದ ಒಂದು ಹಗರಣವೇ ಆಗಿತ್ತು. ವೆಂಕಪ್ಪಾಳ್ವರ ಹೆಂಡತಿ ಉಮಕ್ಕೆ ತಂದಿಟ್ಟ ನೀರು ದೋಸೆ ಕೋಳಿ ಗಸಿಯನ್ನ ರಪ್ಪಕ್ಕನೆ ತಟ್ಟೆ ಸಮೇತ ಜಗಲಿಗೆಸೆದು ಆಕೆಯ ಜುಟ್ಟು ಹಿಡಿದು, ಅವಾಚ್ಯ ಶಬ್ಧಗಳಿಂದ ಬಯ್ಯುತ್ತಾ "ಬೋಳಿಮುಂಡೆ; ಆ ಮಾದಿಗ ರಂಡೇಮಗ ಗೂಡಿನಿಂದ ಕೋಳಿಕೊಂಡು ಹೋಗುವಾಗ ನೀನೆಲ್ಲಿದ್ದೆ? ಸತ್ತಿದ್ದೆಯಾ? ಮಣ್ಣು ಮುಕ್ಕಿದ್ದೆಯಾ?" ಎನ್ನುತ್ತ ಉಮಕ್ಕೆಯ ಮೂಗು ಮುಖ ನೋಡದೆ ರಪರಪ ಬಾರಿಸಿದ್ದ. ವೆಂಕಪ್ಪಾಳ್ವರು ತಮ್ಮ ಹೆಂಡತಿ ಮಕ್ಕಳೊಡನೆ ವರ್ತಿಸುವ ರೀತಿಗೆ ರೋಸಿ ಹೋಗಿದ್ದ ಕರಿಯ ಧಣಿಯ ಬಗ್ಗೆ ದಿನದಿಂದ ದಿನಕ್ಕೆ ಅಂತರ-ಅನಾದರ-ಜಿಗುಪ್ಸೆ ಹೆಚ್ಚಿಸಿಕೊಳ್ಳುತ್ತಲೇ ಇದ್ದ. ಅದೆಷ್ಟೋ ಬಾರಿ ಇಬ್ಬರೊಳಗೂ ಮಾತಿಗೆ ಮಾತು ಬೆಳೆದು, ಉಟ್ಟ ಬಟ್ಟೆಯಲ್ಲೇ ಊರಿಗೆ ಹಿಂದಿರುಗುವ ಆಲೋಚನೆ ಕರಿಯನನ್ನು ಕಾಡಿದ್ದಿದೆ. ಆಳ್ವರ ತಾತ್ಸರ-ದರ್ಪ-ಅಹಂಕಾರಗಳನ್ನು ಕರಿಯ ಸಹಿಸುವವನಲ್ಲ. ಆತ ಹಾಗೆನಿದ್ದರೂ ತಗ್ಗಿಬಗ್ಗಿ ನಡೆಯುತ್ತಿದ್ದಾರೆ. ಉಮ್ಮಕ್ಕಿಯ ಮುಖ ನೋಡಿ ಅಷ್ಟೆ.

ಗಂಟುಮೂಟೆ ಸಮೇತ ಕರಿಯ ಮನೆ ಬಿಟ್ಟು ಹೋಗಿದ್ದು, ಅವನ ಪ್ರತಿಭಟನೆ. ಕರಿಯ ಗುತ್ತಿನ ಮನೆಗೆ ಬಂದಾಗಿನಿಂದ ತನ್ನ ಮನೆ ಎಂಬಂತೆ ಪ್ರಾಮಾಣಿಕವಾಗಿ ದುಡಿಯುತ್ತಿದ್ದ.

ವರ್ಷಕ್ಕೆ ಕೇವಲ ಎರಡು ಬೆಳೆ ತೆಗೆಯುತ್ತಿದ್ದ. ಆಳ್ವರ ಗುತ್ತಿನಲ್ಲಿ ಕರಿಯ ಬಂದಾಗಿನಿಂದ ಸುಗ್ಗಿ, ಎಣೆಲ್, ಕೊಳಕೆ–ಅಂತ ಮೂರು ಬೆಳೆಗಳನ್ನು ಬೆಳೀತಿದ್ದ. ಆಳ್ವರು ಮೂರುಹೊತ್ತು ಗಡಂಗಲ್ಲಿ, ಜುಗಾರಿ ಕಟ್ಟೆಯಲ್ಲಿ ಬಿದ್ದುಕೊಳ್ಳಲಾರಂಭಿಸಿದ ಮೇಲೆ ಮನೆ–ಮಠ, ಗುತ್ತು–ಎತ್ತು–ಬಿತ್ತು ಎಲ್ಲದರ ಮೇಲೆ ವೆಂಕಪ್ಪಾಳ್ವಾರ ಆಸಕ್ತಿ ಕಳಚಿ ಬಿದ್ದು ಊರ ಪರವೂರ ಕೋಳಿ ಅಂಕಗಳನ್ನು ಬಿಟ್ಟು ಉಳಿದೆಲ್ಲ ಊರ ಕೂಟಗಳಿಗೆ ತನ್ನ ಪರವಾಗಿ ಕರಿಯನನ್ನೇ ಕಳಿಸುವ ವಾಡಿಕೆಯೇ ಬೆಳೆದು ಹೋಗಿತ್ತು. ಆದ್ರೆ ಈಗ...?

ಸೌತೆ ಹೋಳಿಗೆ ತಾನೆ ಸವರಿದ ವಿಷವನ್ನು ಕುಕ್ಕಿದ ಕಡೆಲೆ ಹುಂಜ ಬಾಕಿ ಮಾರು ಗುತ್ತಿನ ಹೆಸರನ್ನು ಅನೇಕಾನೇಕ ಕೋಳಿ ಅಂಕಗಳಲ್ಲಿ ಎತ್ತಿ ಮೆರೆದಿತ್ತು. ಈಗ ಜಂಬದ ಕೆಂಪು ಕಿರೀಟವನ್ನು ವಾಲಿಸಿ ಇದಕ್ಕಿದ್ದಂತೆ ಮರಗಟ್ಟಿದೆ... ಉಮ್ಮಕ್ಕೆಗೆ ನಂಬಲಾಗಲಿಲ್ಲ. ಕಡಲೆ ಹುಂಜದ ಸಾವು ಮಾತ್ರವಲ್ಲ ಕರಿಯ ಗಂಟುಮೂಟೆ ಕಟ್ಟಿದ್ದನ್ನು ಕೂಡ. ವೆಂಕಪ್ಪಾಳ್ವರ ಲೆಕ್ಕಾಚಾರ ತಲೆಕೆಳಗಾಗಿ ಮರಗಟ್ಟಿ ನಿಲ್ಲುತ್ತಾನೆ.

ಬಗ್ಗುಂಡಿಗೆ ಹೋಗುವ ರಾತ್ರಿ ವೆಂಕಪ್ಪಯನ ಗಲಾಟೆ ಹೆಚ್ಚಾಯಿತು. ಉಮ್ಮಕ್ಕೆಯ ಮೇಲೆ ಬೈಗುಳದ ಜೊತೆಗೆ ಜುಟ್ಟು ಹಿಡಿದು ಹೊಡೆಯುವುದಕ್ಕೆ ಪ್ರಾರಂಭಿಸಿದಾಗ ಕರಿಯ ಜಗುಲಿಯಿಂದ ಚಾವಡಿಗೇರಿ ಆಳ್ವಾರನ್ನು ಜಾಡಿಸಿ ದೂರ ದೂಡಿದ್ದ, **"ನನ್ನ ಎಂಜಲು ನೆಕ್ಕಿ ನನ್ನೆದುರು ನಿಲ್ತಿಯೇನೋ ಬೇವರ್ಸಿ – ಎಂದೆನ್ನುತ್ತಾ ಕರಿಯನ ಮೇಲೆ ಕೈ ಮಾಡಬೇಕು ಎನ್ನುವಷ್ಟರಲ್ಲಿ ಕರಿಯ 'ವೆಂಕಪ್ಪಾಳ್ವರೇ' ಎಂದು ಆರ್ಭಟಿಸಿದ್ದು, ಆಳ್ವರಿಗೆ ಒಂದು ಕ್ಷಣ ಉಸಿರು ಸಿಲುಕಿಕೊಂಡ ಅನುಭವ".**[೩೬]

ಕರಿಯ ಧಣಿಯಂದೆನ್ನದೆ ಹೆಸರಿಡಿದು ಅಬ್ಬರಿಸಿದ್ದು ಬಾರಿ ಆಘಾತವಾಗಿತ್ತು. ಆರಡಿ ಆಜಾನುಬಾಹು ಕರಿಯನ ಕಣ್ಣುಗಳಲ್ಲಿದ್ದ ಬೆಂಕಿ ಆಳ್ವರ ತಲೆಗೇರಿದ್ದ ಅಮಲನ್ನು ಬಠ್ರನೆ ಕೆಳಗಿಳಿಸಿತ್ತು. ಇಲ್ಲಿಂದ ಮುಂದೆ ಆಳ್ವರು ಬದಲಾದಂತೆ ಎನಿಸಿದರು ಕೊನೆಯಲ್ಲಿ ಲೇಖಕಿ ಕಥೆಗೆ ಹೊಸ ತಿರುವೊಂದನ್ನ ನೀಡುತ್ತಾರೆ.

ಮುಳ್ಳುಸೌತೆಗೆ ಉಪ್ಪುಕಾರ ಹಚ್ಚಿದ ವೆಂಕಪ್ಪಾಳ್ವರು ಹೆಂಡತಿ ಮಕ್ಕಳಿಗೆ ಕೊಡುತ್ತಾರೆ. ಅಂತೆಯೇ ಕರಿಯನಿಗೂ ನಾಲ್ಕು ಹೋಳು ತೆಗೆದಿಡುತ್ತಾರೆ. ಕರಿಯನಿಗಾಗಿ ಕಾದಿದ್ದ ಆ ಸೌತೆ ಹೋಳನ್ನ ಕುಕ್ಕಿದ ಆಳ್ವರ ಅಂಕದ ಕಡಲೆ ಹುಂಜ ಒದ್ದಾಡಿ ಕೊನೆಯುಸಿರೆಳೆಯುತ್ತದೆ. ವೆಂಕಪ್ಪಳ್ವಾರೆ ಎಂದು ಹೆಸರಿಡಿದು ಕೂಗಿದ ಕರಿಯನನ್ನು ಇಲಿಪಾಷಾಣ ಸವರಿದ ಸೌತೆಹೋಳನ್ನ ತಿನ್ನಿಸಿ ಸಾಯಿಸಬೇಕೆಂದುಕೊಂಡ ಆಳ್ವರ ಕೋಪ ಸೋಲುತ್ತದೆ. ಕಾರಣ ಈ ಮನೆಯಲ್ಲಿ ತನ್ನ ಕೊನೆಯ ಕೆಲಸವೆಂಬಂತೆ ಬಗ್ಗುಂಡಿಯಿಂದ ಮೀನು ತಂದಿಟ್ಟು ಕರಿಯ ಗಂಟುಮೂಟೆಯೊಂದಿಗೆ

ತನ್ನೂರು ಸೇರಿಕೊಳ್ಳುವುದರ ಮೂಲಕ ಕರಿಯನ ಪ್ರತಿಭಟನೆ ವ್ಯಕ್ತವಾಗುವುದರ ಜೊತೆಗೆ ಅವನ ಹೊಸ ಬದುಕು ತೆರೆದುಕೊಳ್ಳುತ್ತದೆ.

ಪ್ರತಿಭಟನೆಯ ನೆಲೆಯಲ್ಲಿ ಗುರುತಿಸಬಹುದಾದ ನಾಗವೇಣಿಯವರ ಬಹುಮುಖ್ಯ ಕಥೆಗಳಲ್ಲಿ 'ದಾನ' ಕಥೆಯು ಒಂದು. ಈ ಸಮಾಜ ಕೊರಗ ಜಾತಿಯವರನ್ನ ಕೀಳಾಗಿ ಕಂಡು ಪ್ರಾಣಿಗಿಂತಲೂ ಕಡೆಯಾಗಿ ಅಸ್ಪೃಶ್ಯರನ್ನಾಗಿ ನೋಡಿದೆ. ಈ ಕಥೆಯಲ್ಲಿ ಅಸಹ್ಯವೆನ್ನಿಸುವ ಮೂಢನಂಬಿಕೆಯ ಅಜಲು ಪದ್ಧತಿಯ ವಿರುದ್ಧ ಕೇತು ಪ್ರತಿಭಟಿಸುತ್ತಾನೆ.

"ಊರ ಅಜಲಿನ ಕೊರಗರಿಗೆ ಮಗುದಾನ ಮಾಡುವ ಶಾಸ್ತ್ರವೆಂದರೆ ಮಗುವನ್ನು ಕೊರತಿಯ ಕೈಗೊಪ್ಪಿಸುವ ಮೂಲಕ ಮಗುವನ್ನು ಕಾಡುವ ಶನಿಯನ್ನು ಕೊರತಿಯ ಸಂತಾನಕ್ಕೆ ದಾಟಿಸಿ ಬಿಡುವುದು ಎಂದರ್ಥ. ಅನಾದಿಕಾಲದಿಂದಲೂ ಉಳ್ಳವರು, ಉಚ್ಚ ಕುಲದವರು ನಡೆಸಿಕೊಂಡು ಬಂದಿರುವ ಸಂಪ್ರದಾಯ, ಆಚಾರವಿದು. ಅಸ್ಪೃಶ್ಯತೆಯ ಕಿರೀಟ ಧರಿಸಿಕೊಂಡು ಹೊಟ್ಟೆಗಿಲ್ಲದೆ ಕೈಯಲ್ಲಿ ದುಡಿತವಿಲ್ಲದೆ ಭೂಮಿ ಕಾಣಿಯೂ ಇಲ್ಲದೆ ಕಾಡಿನಂಚಿನಲ್ಲಿ ಹೀನ-ದೀನ-ದರಿದ್ರ ಬದುಕನ್ನು ಸವೆಸುತ್ತಿದ್ದ ಶಾಪಗ್ರಸ್ತ ಕೊರಗರ ಸಂತಾನಗಳು ಇಂತಹ ದುಷ್ಟ-ಅನಿಷ್ಟ, ಕುಟಿಲ ಆಚಾರ ಸಂಪ್ರದಾಯಗಳ ಬಗ್ಗೆ ವಿವೇಚನೆಯಿಲ್ಲದೆ ನಾ ಮುಂದು, ತಾ ಮುಂದು ಎಂದು ನುಗ್ಗಿ ಬಂದು ಆ ಶಾಸ್ತ್ರ ನಡೆಸಿಕೊಡುವ ಕಾಲವೊಂದಿತ್ತು. ಉಳ್ಳವರ ಮನೆಯಿಂದ ಇಂತಹ ಶಾಸ್ತ್ರಕ್ಕೆ ಕರೆ ಬಂದರೆ ಸಾಕು. ಅಂದು ಇಡೀ ಸಂತಾನವೇ ಎದ್ದು ಬಿದ್ದು ಓಡಿ ಬರುವ ಪರಿಯೇನು! ಎಂಜಲ ಬಟ್ಟಿ ಕೈಯಲ್ಲಿ.. ಎಂಜಲುಗಳುವ ಗೆರಟೆಯೊಂದು ಕೊರಳಲ್ಲಿ. ಉಚ್ಚಕುಲದವರ ಭೂಮಿಯ ಮೇಲೆ ಉಗುಳು ಬಂದರೆ ಎಂಬ ಮುನ್ನೆಚ್ಚರಿಕೆಗಾಗಿ ಈ ಗೆರಟೆ. ಎಣ್ಣೆದಾನ, ಅನ್ನದಾನದ ಜತೆಗೆ ಮತ್ತಷ್ಟು ಎಂಜಲು ಸಿಕ್ಕಿದರೆ ಎಂಬ ಆಸೆಯಿಂದ ಆ ಎಂಜಲು ಬಟ್ಟಿ"[52]

ಮಗುವನ್ನು ಕಾಡುವ ಶನಿಯನ್ನು ಕೊರತಿಯ ಸಂತಾನಕ್ಕೆ ದಾಟಿಸಿ ಬಿಡುವ ಅಜಲಿನ ಪದ್ಧತಿ ಕೊರಗ ಜನರಲ್ಲಿ ರೂಢಿಯಲ್ಲಿರುವ ಅನಿಷ್ಟ ಪದ್ಧತಿ. ಸಂಪ್ರದಾಯದ ಹೆಸರಲ್ಲಿ ಆಚಾರ ಕಟ್ಟಳೆಗಳ ನೆಪದಲ್ಲಿ ಕೊರಗರ ಮೇಲೆ ಸವರ್ಣೀಯರು ನಡೆಸುವ ಕ್ರೌರ್ಯ, ಶೋಷಣೆಗಳು ಈ ಕಥೆಯಲ್ಲಿ ವ್ಯಕ್ತವಾಗುತ್ತವೆ.

ಒಳ್ಳೆಯದೋ ಕೆಟ್ಟದೋ ಒಮ್ಮೆ ಆ ಶಾಸ್ತ್ರಕ್ಕೆ ಜೀವ ಬಂದರೆ ಸಾಕು. ಹಾಗೇ ಬಿಟ್ಟರೆ ಆ ಸಂಪ್ರದಾಯದವೆಲ್ಲ ನೆಲಕಚ್ಚಿ ಹೋಗುತ್ತೆ ಎಂದು ಜೋಯಿಸರ ಯೋಚನೆಯಾಗಿತ್ತು. ಹಿಂದೆಲ್ಲಾ ಜೋಯಿಸರೂ ನೇರವಾಗಿ ಆ ಕೊರಗರಿಗೆ ಕರೆ ಕಳುಹಿಸುವ ಪರಿಪಾಠವೇ ಇತ್ತು.

ಈಗ ಕಾಲ ಬದಲಾಗಿದೆ. ಕೊರಗರೀಗ ಎಚ್ಚೆತ್ತುಕೊಂಡಿದ್ದಾರೆ. ಸಂಪ್ರದಾಯದ ಹೆಸರಲ್ಲಿ ಆಚಾರ ಕಟ್ಟಳೆಗಳ ನೆಪದಲ್ಲಿ ತಮ್ಮ ಮೇಲೆ ಸವರ್ಣೀಯರು ನಡೆಸುವ ಕ್ರೌರ್ಯ ಶೋಷಣೆಗಳನ್ನು ಅವರು ಅರ್ಥೈಸಿಕೊಂಡಿದ್ದಾರೆ. ಕೊರಗರನ್ನು ಹೀನಾಯವಾಗಿ ನಡೆಸಿಕೊಂಡರೆ, ಅಜಲು ಪದ್ಧತಿಗೆ ಒತ್ತಾಯಿಸಿದರೆ, ಮುಟ್ಟಿದರೆ ಗೋರ್ಮೆಂಟು ಮಾತ್ರ ಯಾರು. ಏನು. ಎಂಥದ್ದು

ಎಂದು ಹಿಂದೆ ಮುಂದೆ ನೋಡದೇ ಜೈಲಿನ ಒಳತಳ್ಳಿ ವರ್ಷಗಟ್ಟಲೆ ರಾಗಿ ಗಂಜಿ ಕುಡಿಸುತ್ತದೆ ಎನ್ನುವ ಭಯದಿಂದ ಕೆಲ ಮೇಲ್ಜಾತಿ ಮಂದಿ 'ಸುಮ್ಮನೆ ಹೇಸಿಗೆಗೆ ಕಲ್ಲು ಹಾಕಿ ಅದನ್ನು ಮುಖಕ್ಯಾಕೆ ಸಿಡಿಸಿಕೊಳ್ಳಬೇಕು' ಅಜಲಿನ ಶಾಸ್ತ್ರವನ್ನೇ ಮಾಡದಿದ್ದಾರೇನಾಗುತ್ತದೆ ಎಂದು ಸುಮ್ಮನಾಗಿದ್ದಾರೆ. ಆದರೆ ಇನ್ನು ಕೆಲವು ಹಳೆ ತಲೆಗಳು ಹಳೆಯ ರೀತಿ ರಿವಾಜು ಕಟ್ಟು ಕಟ್ಟಳೆಗಳನ್ನು ಬಿಡಲಾಗದೆ ಅಜಲಿನ ಪದ್ಧತಿಗೆ ಎಳ್ಳುನೀರು ಬಿಡದೆ ಕೊರಗರ 'ಮನ ಪರಿವರ್ತನೆಗೆ' ಎದುರು ನೋಡುತ್ತಿದ್ದಾರೆ. 'ಅಂವು ಕೊರಗ ಮಕ್ಕಳು ವಿರೋಧಿಸಿದವೆಂದು ತಲೆ ತಲಾಂತರದಿಂದ ಕಟ್ಟಿಕೊಂಡು ಬಂದಿರುವ ಆ ಅಜಲು ಪದ್ಧತಿಯನ್ನು ಹಾಗೇ ಬಿಟ್ಟು ಬಿಡಲಿಕ್ಕಾಗುತ್ತಾ...? ಇವತ್ತು ಅವರು ಹೇಳಿದರೆಂದು ನಾವು ಬಿಟ್ಟರೆ ನಾಳೆ ಅಂವು' ತಮ್ಮ ತಲೆ ಹತ್ತಿ ಕೂತು ಹೇತು ಬಿಡುತ್ತವೆ. ಲಗಾಮು ತಪ್ಪಿದಂತಾಗಿ ನಮಗೇ ಕೇಡು ತಂದಿಡುತ್ತವೆ ಎಂದು ಜೋಯಿಸರು ಅದೆಷ್ಟೋ ಸಂಪ್ರದಾಯದ ತಲೆಗಳ ಮರೆಯಲ್ಲಿ ವಾದಿಸಿದ್ದು ಭೋದಿಸಿದ್ದು ಇದೆ.

ಕೊರಗ ಮಕ್ಕಳು ಈಗ ಅಕ್ಷರಸ್ಥರಾಗುತ್ತಿದ್ದಾರೆ. ಕೊರತಿ ಕುಡ್ಪುವಿನ ಮಗ ಕೇತು ಕೆಂಜಾರು ಶಾಲೆಯಲ್ಲಿ ಮಾಸ್ಟ್ರ ಆಗಿದ್ದಾನೆ. ಈಗೇನಾದರೂ ಗುತ್ತಿನೊಡೆಯರು ಅಜಲಿನ ಕೊರತಿಗೆ 'ಮಗುವನ್ನು ಕೈ ಹಗರಿಸುವ ಶಾಸ್ತ್ರ'ಕ್ಕೆ ಬರಬೇಕಂತೆ ಎಂದು ಹೇಳಿ ಕಳುಹಿಸಿದರೆ, ಕೇತು ನಮ್ಮನೆಯ ಮಗು ಹಗರಿಸುವ ಶಾಸ್ತ್ರಕ್ಕೆ ನಿಮ್ಮ ಹೆಂಡತಿಯನ್ನು ಕಳುಹಿಸಿ ಎಂದು ಹೇಳುವವನಾಗಿದ್ದಾನೆ.

ಕೊರಗ ಕೇತು ಸಾಮಾನ್ಯದವನಲ್ಲ. ಆತನ ಹಿಂದೆ ವಿದ್ಯೆ ಬುದ್ಧಿ ಕಲಿತ ಸುತ್ತಲ ನಾಕೂರಿನ ಕೊರಗ, ಮನ್ಸ, ಮುಂಡಾಲ, ಮೊಗೇರ, ಮಕ್ಕಳ ದೊಡ್ಡ ಹಿಂಡನ್ನೇ ಕಟ್ಟಿಕೊಂಡು ಸಂಘ ಕಟ್ಟಿಕೊಂಡಿದ್ದಾರೆ. ಇದುವರೆಗೂ ತಮ್ಮನ್ನು ತುಳಿದು ಹಿಪ್ಪೆಮಾಡಿದ ಮೇಲ್ಜಾತಿಯವರೇನಾದರೂ ಈಗ ಬಾಯಿ ತೆರೆದರೆ ಸಾಕು ಮರುದಿನವೆ ಪೋಲಿಸ್ ಟೊಪ್ಪಿಗಳು ಕೋಳ ಹಿಡಿದು ಅಂಗಳಕ್ಕೆ ಬರುವಂತೆ ಮಾಡುತ್ತಿದ್ದಾರೆ.

ಈ ಹಿಂದೆ ಊರಿಗೆ ಕಂಬಳ ಸಾರುವ ಡೋಲಿನ ಶಾಸ್ತ್ರಕ್ಕೆ ಹಾಗೂ ಕಂಬಳದ ಹಿಂದಿನ ರಾತ್ರಿಯ 'ಪನಿಕುಲ್ಲುವ' ಶಾಸ್ತ್ರಕ್ಕೆ ಕೊರಗರಿಗೆ ಹೇಳಿ ಕಳುಹಿಸಿದರೆ ಒಂದು ನರಪಿಳ್ಳೆಯೂ ಬರುತ್ತಿಲ್ಲ. ಸ್ವತಃ ಗುತ್ತಿನೊಡೆಯರು ಹೋಗಿ ವಿಚಾರಿಸಿದರೆ ಅದಕ್ಕೆ ಕೇತು ಉತ್ತರ ಕೊಡುತ್ತಾನೆ.

"ನನ್ನಪ್ಪನಿಗೆ ಆ ಕಾಲದಲ್ಲಿ ಊರಿನ ದೊಡ್ಡವರು ಅಜಲಿನ ಕೆಲಸಕ್ಕಾಗಿ ಕೊಟ್ಟ ಡೋಲು ಇಲ್ಲೇ ಜೋತು ಬಿದ್ದಿದೆ ನೋಡಿ ಶೆಟ್ರೇ ಬೇಕಿದ್ರೆ ನಿಮ್ಗೆ ವಾಪಾಸು ಕೊಡುತ್ತೇನೆ ನಿಮ್ಮಲ್ಲೇ ಯಾರಾದ್ರೂ ಆ ಶಾಸ್ತ್ರ ಮುಗಿಸಿ ಬಿಡಿ. ಇನ್ನು ಮುಂದೆ ಇದಕ್ಕೆಲ್ಲ ನಮ್ಮ ಕೇರಿಗೆ ಕರೆಯಲು ಬರಬಾರದು ನೋಡಿ ಎಂದು ಎಚ್ಚರಿಸಿ ಕಳಿಸಿದ್ದನಂತೆ".[೨೮]

ಕುಪ್ಪ ಪೂಜಾರಿ ತನ್ನ ಮಗ ಅಂಗರನ ಮೂಲಕ, ಕೊರತಿಗೆ ಕರೆ ಕಳಿಸಿದ್ದ. ಕೊರಗರ ಕೊಟ್ಟಕ್ಕೆ ಬಂದ ಅವ ಧ್ವನಿಯೇರಿಸಿ ಕೇತುವನ್ನು ಹೊರ ಕರೆದು ನಾಳೆ ಮನೆಯಲ್ಲಿ ಬಯಕೆ ಮಾರಾಯ ಎಣ್ಣೆ ಹೊಯ್ಯುವ ಶಾಸ್ತ್ರಕ್ಕೆ ನಿಮ್ಮ ಕೊರತಿಯನ್ನು ಕಳುಹಿಸಿಕೊಡಬೇಕು ಎಂದು ಕೇಳಿದ್ದನಷ್ಟೆ.

'ನಾನೇ ಬಂದರಾಗದೆ ಮಾರಾಯ? ಬೇಕಾದರೆ ಜತೆಯಲ್ಲಿ ನಾಲ್ಕು ಖಾಕಿ ಪೋಲಿಸರನ್ನು ಕರೆ ತರುವ ಕೊರತಿಗೆ ಹೊಯ್ಯುವ ಎಣ್ಣೆಯನ್ನು ಅವರಿಗೆ ಹೊಯ್ದು ಎಂಜಲನ್ನವನ್ನು ಅವರಿಗೇ ತಿನ್ನಿಸಿ ಬಿಡುವ ... ಆಗದಾ?' ಎಂದ.

ಗುತ್ತಿನ ಕುಡಿಯ ಶನಿದೋಷಕ್ಕೆ ಕೊರತಿಯನ್ನು ಕರೆತರಲು ಗುತ್ತಿನ ಧಣಿಗಳು ಒಕ್ಕಲಿನ ಆಳು ಕಾಂತುವನ್ನು ಕಾಡಿನಂಚಿಗೆ ಅಟ್ಟಿದ್ದರು. 'ಓಲೆ ಅದೇ ವೇಗದಲ್ಲಿ ವಾಪಾಸ್ಸು ಬಂದಿತ್ತು'. ಕೊರತಿ ಕೊರಗನ ಬದಲು ಮಗ ಕೇತುವೇ ಗುತ್ತಿನ ಒಡೆಯರಿಗೆ ಸ್ಪಷ್ಟ ಉತ್ತರ ಕಳುಹಿಸಿದ. 'ಅಸ್ಪೃಶ್ಯತಾ ನಿವಾರಣಾ' ಕಾಯ್ದೆಯಡಿ ದಲಿತ ದೌರ್ಜನ್ಯದ ಕೇಸು ಹಾಕಿ ಗುತ್ತಿನ ಧಣಿಗಳನ್ನು ವರ್ಷಗಟ್ಟಲೆ ಕೊಳೆಸಬಲ್ಲೆ ಎಂದು ಹೇಳಿ ಕಳಿಸಿದ್ದ.

ಎಲ್ಲಾ ಮೇಲ್ಜಾತಿಯವರು ಒಂಥರ ಗರಗಸದಂತೆ, ಸಿಗಿಯುವುದೊಂದೇ ಅವರ ಕೆಲಸ ಎಂದು ಕೇತು ಹೇಳವಾಗೆಲ್ಲ, ಕೊರಗ ಕೊರತಿ ಇಬ್ಬರೂ ಹಳೆಯ ಕಾಲದಿಂದಲೂ ಕಟ್ಟಿಕೊಂಡು ಬಂದಿರುವ ಕಟ್ಟನ್ನು (ಪದ್ಧತಿ) ಹಾಗೆ ಬಿಟ್ಟು ಬಿಡಲಿಕ್ಕಾಗುವುದಿಲ್ಲ. ನಮ್ಮ ಜೀವ ಇರುವವವರೆಗೆ ಇದು, ನಂತರ ನಿನಗೆ ಇಷ್ಟ ಬಂದಹಾಗೆ ಮಾಡು ಎಂದು ಆ ಹಳೆ ಜೀವಗಳು ವಾದಿಸಿದ್ದವು.

ಆಗೆಲ್ಲ ಕೇತುವಿಗೆ ಅಪ್ಪನನ್ನು ಹೊಡೆದು ಸಾಯಿಸುವಂತ ಕೋಪವುಕ್ಕಿ ಬರುತ್ತಿತ್ತು. 'ನೀನು ತಾಯಹೊಟ್ಟೆಯಿಂದ ಉದುರುವಾಗಲೆ ಆ ಕಟ್ಟುಗಳನ್ನೆಲ್ಲ ಕಟ್ಟಿಕೊಂಡು ಬಂದಿದ್ದೇನು? ಆ ಕಟ್ಟುಗಳನ್ನು ಮಾಡಿದವರಾರು? ಆ ಮೇಲ್ಜಾತಿಯವರು ಅವ್ರು, ಇಷ್ಟು ದಿನ ನಮ್ಮನ್ನು ನರಿನಾಯಿಗಳಂತೆ ನಡೆಸಿಕೊಂಡು ಬಂದಿದ್ದು ಸಾಕು.. ಇನ್ನು ನಾವು ನಾಯಿಗಳಂತೆ ಬದುಕು ನಡೆಸಬೇಕಾ?'

ಅಲ್ಲಪ್ಪ... ಯಾತಕ್ಕಾಗಿ ನಾವು ಅವರ ಶನಿಯನ್ನ ನುಂಗಬೇಕು. ವರ್ಷಾನುಗಟ್ಟಲೆಯಿಂದ ನಾವವರ ಎಂಜಲು ನುಂಗಿದ್ದು ಸಾಕು. ಆ ಅಜಲು ಪದ್ಧತಿಯ ಶಾಪವೂ ಸಾಕು... ಎಂದು ಕೇತು ವಾದಿಸುತ್ತಾನೆ.

ಗುತ್ತಿನ ಶೆಟ್ಟಿ ಸೀತಕ್ಕೆಗೆ ಈ ಕಾಲದಲ್ಲಿ ಎಂತಹ ರೋಗಗಳನ್ನಾದರೂ ಗುಣಪಡಿಸುವಂತಹ ವೈದ್ಯರಿದ್ದಾರೆ ಎಂಬ ಸತ್ಯ ಗೊತ್ತಿದ್ದರು ತಲೆಮಾರುಗಳಿಂದ ನಡೆದುಕೊಂಡು ಬಂದ ಶಾಸ್ತ್ರ ಸಂಪ್ರದಾಯಗಳಲ್ಲಿ ವಿಪರೀತ ನಂಬಿಕೆ. ಅದಕ್ಕೆ ಕೊರತಿಯನ್ನು ತಾವೇ ಖುದ್ದಾಗಿ ಬಂದು ಕರೆದು ಹೋಗುತ್ತಾರೆ.

ಜಾತಿ ಯಾವುದಾದರೇನು? ನೀತಿ ದೊಡ್ಡದು ಅಂತೆಯೇ ಮಾತಿಗೆ ತಪ್ಪದಂತೆ ಕೊರತಿ ಗೆರಸೆ ಹೊತ್ತು ಬಂದು ಶಾಸ್ತ್ರ ಮುಗಿಸುತ್ತಾಳೆ. ಕೊನೆಯದಾಗಿ ಕೊರತಿಯ ಬುಟ್ಟಿಗೆ ಶಾಸ್ತ್ರದ ಪಡಿಯಾಗಿ ಭತ್ತ ಸುರಿಯುವಾಗ ಕೊರತಿಯ ಮಗ ಕೇತು ಬರುತ್ತಾನೆ. ಕೇತು ಓದಿದ್ದಾನೆ ಈಗ ಕೆಂಜಾರು ಶಾಲೆಯ ಮಾಸ್ಟ್ರು ಆಗಿದ್ದಾನೆ. ಕೇತು ಎತ್ತ ಬಹುದಾದ ನೂರಾರು ಪ್ರಶ್ನೆಗಳಿಗೆ ಕೊರತಿ 'ತಿನ್ನುವ ಬಾಯಿ ನಮ್ಮದು – ಕೊಡುವ ಕೈ ನಿಮ್ಮದು ಆವತ್ತಿನ ನಿಮ್ಮ ಅನ್ನದ ಋಣ, ಇವತ್ತು ನನ್ನ ಮಗನನ್ನು ಹೀಗಿಟ್ಟಿದೆ ನೋಡಿ... ಎಂದು ತಾಯಿ ಮಗನತ್ತ ಹಂಗಿನ ಬಲೆ ಎಸೆದು ಮಗನನ್ನು ದುರ್ಬಲಗೊಳಿಸುತ್ತಾಳೆ'. ಇದು ಇನ್ನೊಬ್ಬರ ಹಂಗಿನಲ್ಲಿ ನಾವಿದ್ದಾಗ ನಮ್ಮ ಸ್ವಾಭಿಮಾನದ ಪರಿಕಲ್ಪನೆಗಳಿಗೆ ಹೆಚ್ಚಿನ ಒಲವುದೊರೆಯದು ಎಂಬುದರ ಒಳದನಿಯೂ ಹೌದು.

ಆದರೆ ಕಥೆಯ ಕೊನೆಯಲ್ಲಿ ಗುತ್ತಿನೊಡತಿಗೆ 'ಅಮ್ಮ... ಈ ಬಾರಿ ನಿಮ್ಮ ಸಂಕಲ್ಪದಂತೆಯೇ ಕೆಲಸ ನಡೆದು ಹೋಗಿರಬಹುದು ಆದರೆ ಮುಂದೆ ಎಂದೂ ಹೀಗಾಗುವುದಿಲ್ಲ, ಈಗ ಕಾಲ ಬದಲಾಗಿದೆ. ನಿಮ್ಮ ಮನಸ್ಸು – ಯೋಚನೆಯೂ ಬದಲಾಗಬೇಕಾಗಿದೆ. ನಮ್ಮ ಕೊರತಿಯಿಂದ ಮಗು ಗುಣವಾಗುವುದಿಲ್ಲ. ಆಯಸ್ಸಿದ್ದರೆ ಮಗುವನ್ನು ಗುಣಪಡಿಸಬೇಕಾದವರು ವೈದ್ಯರು...' ಹೀನ ಜಾತಿಯ ಕೊರಗರಲ್ಲ ಎಂದು ಕೇತು ಎಚ್ಚರಿಸುತ್ತಾನೆ.

ಈ ಮಾತು ಬರಿ ಗುತ್ತಿನೊಡೆಯರನ್ನು ಮಾತ್ರವಲ್ಲ ಈ ಅನಿಷ್ಟ ಪದ್ಧತಿಗಳನ್ನು ಸಂಪ್ರದಾಯದ ಹೆಸರಲ್ಲಿ ಆಚಾರ ಕಟ್ಟಳೆಗಳ ನೆಪದಲ್ಲಿ ಅನಾದಿಕಾಲದಿಂದಲೂ ನಡೆಸಿಕೊಂಡು ಬಂದ ಉಳ್ಳವರು, ಉಚ್ಚಕುಲದವರು ಎನಿಸಿಕೊಂಡ ಎಲ್ಲರನ್ನು ಎಚ್ಚರಿಸಿದಂತಿದೆ.

ಪ್ರತಿಭಟನೆಯ ನೆಲೆಯಲ್ಲಿ ಪರಿಚಯಿಸಲೇ ಬೇಕಾದ ನಾಗವೇಣಿಯವರ ಬಹು ಮುಖ್ಯವಾದ ಕಥೆ 'ಧಣಿಗಳ ಬೆಳ್ಳಿಲೋಟ'. 'ಆ ಮಾನಗೇಡಿ ಹೊಳೆಗೆ ಒಂದಿಷ್ಟು ಉಗುರೆಡೆಯಲ್ಲಾದರೂ ನಾಚಿಕೆಯೆಂಬುದು ಇದ್ದಿದ್ದರೆ...' ಇಲ್ಲಿ ಕಥೆ ಪ್ರಾರಂಭವಾಗುವುದೇ ಹೀಗೆ. ಈ ಕಥೆಯ ಚಿನ್ನಮ್ಮನದು 'ಧಣಿಯ ದಬ್ಬಾಳಿಕೆಯ' ವಿರುದ್ಧ ಪ್ರತಿಭಟನೆ. ಆದರೆ ಇಲ್ಲಿ ಚಿನ್ನಮ್ಮ ಅಸಹಾಯಕ ಸ್ಥಿತಿಯಲ್ಲಿ ಶಾಂಭವಿ ಹೊಳೆಯ ಗುಣವಾಚನಕ್ಕೆ ತೊಡಗುತ್ತಾಳೆ. ಕಾರಣ ಶ್ರಾವಣ ಮಾಸದ ನಾಕರಂದು ಅದೇ ಹೊಳೆ ಆಕೆಯ ಕುಟುಂಬದ ಮೇಲೆ ಅಪವಾದವೊಂದನ್ನು ಹೊರಿಸಿ ಇಡೀಯ ಕುಟುಂಬದ ಉಗ್ರಕೋಪ ಅಸಹನೆಗೆ ಬಲಿಯಾಗಿದೆ.

ಕಳ್ಳತನದ ಅಪವಾದದ ಬೇಗುದಿಯಲ್ಲಿ ಬೆಂದು ಹೋದ ಚಿನ್ನಮ್ಮನ ಕುಟುಂಬ, ಮಾಡದೆ ಇರುವ ತಪ್ಪಿಗೆ ಅನುಭವಿಸಿದ ಶಿಕ್ಷೆಯಿಂದ ಅವಮಾನಿತಳಾಗಿದ್ದಾಳೆ. ಆ ಘಟನೆ ನಡೆದ ಒಂಭತ್ತು

ತಿಂಗಳು ಈ ಕುಟುಂಬ ಪಡಿಯಿಲ್ಲದೆ ದುಡಿಯಿತು. ಚಿನ್ನಮ್ಮನಿಗೆ ನೇರವಾಗಿ ಧಣಿಯನ್ನು ಬಯ್ಯಲಾಗುತ್ತಿಲ್ಲ. ಧಣಿಯ ದಬ್ಬಾಳಿಕೆಯ ವಿರುದ್ಧ ಧ್ವನಿ ಎತ್ತಲಾಗುತ್ತಿಲ್ಲ ಅದಕ್ಕಾಗಿಯೇ ಸಿಡುಕು ಮುನಿಸುಗಳನ್ನೆಲ್ಲ ಆ ಹೊಳೆಯ ಮೇಲೆ ತೀರಿಸಿಕೊಳ್ಳುತ್ತಿದ್ದಾಳೆ.

ಧಣಿಗಳ ಸೂಚನೆಯಂತೆ ಕುದುಪ ಕಾದು ಬತ್ತಿರುವ ಹೊಳೆಯಿಂದ ಹೂಳೆತ್ತಿ ತಂದು ತೆಂಗಿನ ತೋಟಕ್ಕೆ ಹಾಕುತ್ತಿದ್ದಾನೆ. ಧಣಿಗಳ ಮಾತು ಚಿನ್ನಮ್ಮನ ಕಿವಿಗೂ ತಲುಪುತ್ತಿದೆ. ಆದರೆ ಅದು ತನಗಲ್ಲ ತನ್ನ ಕಿವಿ ಬೀಳಿನ ಬುಗುಡಿಗೆ ಎಂಬಂತೆ ಮುಸುರೆ ಪಾತ್ರೆ ತಿಕ್ಕುತ್ತ ನಿರ್ಲಕ್ಷಿಸುತ್ತಾಳೆ. ಉಂಡು ಬಂದು ಹೂಳು ಹೊರವ ಕೆಲಸದಲ್ಲಿ ತೊಡಗಿಕೊಳ್ಳುತ್ತಾಳೆ. 'ಸುಡುವ ಸೂರ್ಯನಡಿ ಹೂಳೆತ್ತುತ್ತಾ ತಾನು ಕರಟುತ್ತಿರುವಾಗ ತೋಟದ ನೆರಳಲ್ಲಿ ಕುಳಿತು ಧಣಿಯವರು ಕೊಡುವ ಸೂಚನೆಗಳಿಂದ ಚಿನ್ನಮ್ಮನ ಸಿಟ್ಟಿನುರಿಗೆ ಮತ್ತಷ್ಟು ತುಪ್ಪ ಸುರಿದಂತಾಗುತ್ತಿತ್ತು. ಚಿನ್ನಮ್ಮ ಅಸಹನೆಯಿಂದ ಕನಲುತ್ತಾ, ನೆತ್ತಿ ಮೇಲೆ ಬೆಂಕಿಯುಗುಳುತ್ತಿದ್ದ ಸೂರ್ಯನನ್ನು ಧಣಿಯನ್ನು ಶಪಿಸುತ್ತಾ ಹೂಳು ಹೊರುತ್ತಿದ್ದಳು' ಮೂಳೆ ಮುರಿದು ಹೋಗುವಂತಹ ಕೆಲಸ ಅದು.

ಕುದುಪ ಸುಸ್ತಾದ ಒಂದರೆಕ್ಷಣ ಅಲ್ಲೇ ನೀರೊಳಗೆ ಕುಸಿದು ಕುಳಿತ. ನೆರಳಲ್ಲಿದ್ದ ಧಣಿಗಳಿಗೆ ಸಿಟ್ಟಿನಿಂದ ಪಿತ್ತವೇರಿದಂತಾಯಿತ್ತು. **"ಎದ್ದೇಳೋ ಮೂರ್ಕಾಸಿನವನೆ... ಪಡಿ ಅಳೆಯುವಾಗ ಪಾವಕ್ಕಿ ಕಮ್ಮಿ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು?" ಎಂದು ಸಿಡುಕಿದರು. ಚಿನ್ನಮ್ಮನಿಗಂತೂ ಪಡಿಯಿಲ್ಲದ ಈ ದುಡಿತದ ಬಗ್ಗೆ ಇನ್ನಿಲ್ಲದಂತಹ ಅಸಮಾಧಾನವಿದೆ. ಒಂದೆಡೆ ಕಳ್ಳತನದ ಅಪವಾದ ಮತ್ತೊಂದೆಡೆ ಕಠಿಣ ಶ್ರಮದ ದುಡಿತಕ್ಕೂ ಬೆವರಿಗೂ ಪ್ರತಿಫಲವಿಲ್ಲ. ಚಿನ್ನಮ್ಮ ತನ್ನ ಭಾರದ ಒಡಲನ್ನು ಕಣ್ಣೀರು ಜಿನುಗಿಸಿಕೊಂಡು ಮೆದುಗೊಳಿಸಿಕೊಂಡಳು. ಕುದುಪ ಧಣಿಯವರ ಸಿಡುಕು ಬೈಗಳಿಗೆ ಬೆದರಿ ಎದ್ದುನಿಂತು ಮತ್ತೆ ಕೆಲಸದಲ್ಲಿ ಮಗ್ನನಾದ".**[೩೯]

ಹೂಳು ತುಂಬಿದ್ದ ಬುಟ್ಟಿಯನ್ನು ಚಿನ್ನಮ್ಮನಿಗೆ ತಲೆಗೇರಿಸಬೇಕೆನ್ನುವಷ್ಟರಲ್ಲಿ ಆ ಹೂಳಲ್ಲಿ ಧಣಿಗಳ ಬೆಳ್ಳಿಲೋಟದ ಮಂಕು ಮೂತಿ ಕಾಣಿಸುತ್ತದೆ. ಅಂತು ಕುದುಪನಿಗೆ ಧಣಿಗಳ ಬೆಳ್ಳಿಲೋಟ ಸಿಕ್ಕಿತು. ಮಣ್ಣು ತೊಳೆದು ಎಲೆವಸ್ತ್ರದಲ್ಲಿ ಒರೆಸಿ ಚಿನ್ನಮ್ಮನ ಕೈಗೆ ಕೊಡುವುದನ್ನು ಧಣಿಗಳು ಮೌನವಾಗಿಯೇ ದಿಟ್ಟಿಸಿದರು. ಚಿನ್ನಮ್ಮ ತನ್ನ ಕೈಯಲ್ಲಿದ್ದ ಲೋಟ ತಿರುಗಿಸುತ್ತಿದ್ದಂತೆ ಅವರನ್ನೇ ಆಕೆ ತಿರುಗಿಸಿದಂತಾಯ್ತು! ಚಿನ್ನಮ್ಮನಿಗೆ ಆ ಲೋಟವನ್ನು ಅದೆಷ್ಟು ನೋಡಿದರೂ ಸಾಲದು. ಧಣಿಗಳಿಗೆ ಕಾಣುವಂತೇ ಎತ್ತರಿಸಿ ಹಿಡಿದು ನೋಡಿಯೇ ನೋಡಿದಳು.

"ಆ ಸಂಕಟವುಂಡ ಜೀವಕ್ಕೆ ಏನಿನಸಿತೋ ಆ ಕ್ಷಣ! ಚಿನ್ನಮ್ಮ ತಟ್ಟನೆ ಪೂರ್ವಾಭಿಮುಖವಾಗಿ ನಡೆದಳು. ಆ ಹೊಳೆಯಲ್ಲೆ ಹತ್ತು ಹೆಜ್ಜೆ ಹಾಕಿ ಹನ್ನೊಂದನೇ ಹೆಜ್ಜೆಯಡಿ ನಿಂತವಳು... ಅತ್ತ ದೂರದಲ್ಲಿದ್ದ ಹೊಳೆಯ ಆಳ ಮಡುವತ್ತಿ ಬೆಳ್ಳಿಲೋಟವನ್ನು ಎಸೆದೇ ಬಿಟ್ಟಳು"![೬೦]

ಚಿನ್ನಮ್ಮನ ಒಡಲಲ್ಲಿ ಅದೆಷ್ಟು ಭಾವನೆಗಳು ಗಿರಕಿ ಹೊಡೆಯತೊಡಗಿದ್ದಾವೋ ಅವೆಲ್ಲಕ್ಕೂ ಉತ್ತರ ಇದಾಗಿತ್ತು. ಲೋಟವಲ್ಲವೇ ಅವಳ ಬೆವರಿನ ಬೆಲೆ ಕಳೆದದ್ದು. ಕಳ್ಳತನದ ಕಿರೀಟವನ್ನು ಅವಳ ಮುರುಕಲು ಗುಡಿಸಲು ಚಾವಣಿಗೆ ಜೋಡಿಸಿದ್ದು. ಬೆಳ್ಳಿಗೆ ಮಣ್ಣಿಗಿಂತಲೂ ಬುರ್ನಾಡು ಬುದ್ಧಿ ಮೂರ್ಖಾಕಿಸಿನದ್ದು ಅನ್ನಿಸಿರಬೇಕು. ಪಟ್ಟದ ಮೇಲಿನ ಕತ್ತಿಗೆ ಚಟ್ಟದಲ್ಲಿರುವವನ ಮೇಲೆ ದಿಟ್ಟ ಎಂದಿಗೂ ಸಲ್ಲ. ಈ ಲೋಟದಿಂದ ತನ್ನ ಕುಟುಂಬ ಇದುವರೆಗೆ ಉಂಡ ನೋವು, ಅವಮಾನ, ಪಟ್ಟಪಾಡು ಪರಿತಾಪಗಳಲ್ಲಿ ಚಿನ್ನಮ್ಮನ ಚಿತ್ತದಿಂದ ದಿಗಿಣ ಹೊರಟಿರಬೇಕು. ಅದಕ್ಕೆ ಇರಬೇಕು ಅವಳ ಸಿಟ್ಟೆಲ್ಲ ಆಕ್ರೋಶಗೊಂಡಂತೆ ಪ್ರತಿಕ್ರಿಯಿಸುತ್ತಾಳೆ.

ಚಿನ್ನಮ್ಮ ಕಳ್ಳತನದ ಅಪವಾದದಿಂದ, ಪಡಿಯಿಲ್ಲದ ದುಡಿಮೆಯಿಂದ ಒಮ್ಮೆ ಎದ್ದು ಬಂದವಳಂತೆ ಹೊಳೆಯ ನೀರಲ್ಲೊಮ್ಮೆ ಸಂಪೂರ್ಣ ಮುಳುಗಿ ಮತ್ತೆ ಎದ್ದು ನಿಲ್ಲುತ್ತಾಳೆ. ಸಿಕ್ಕ ಬೆಳ್ಳಿಲೋಟವನ್ನು ಧಣಿಯವರ ಎದುರಲ್ಲೆ ಬಿಸಾಕಿದ್ದು ಚಿನ್ನಮ್ಮನ ತೀವ್ರ ಪ್ರತಿಭಟನೆಯೇ ಸರಿ. ಧಣಿಗೆ ಬೆಳ್ಳಿಲೋಟ ಮುಖ್ಯ, ಚಿನ್ನಮ್ಮನಿಗೆ ಜೀವನದ ಮೌಲ್ಯಮುಖ್ಯ. ಅದಕ್ಕಾಗಿ ಪ್ರತಿಭಟಿಸಲೇ ಬೇಕಾಗಿತ್ತು. ಒಟ್ಟಾರೆ ಈ ಕಥೆ ಯಜಮಾನ ಪರಂಪರೆಯಲ್ಲಿನ ಸಂಘರ್ಷದ ರೂಪಕವಾಗಿ ಕಾಣುತ್ತದೆ.

ಪ್ರತಿಭಟನೆಯ ನೆಲೆಯಲ್ಲಿ ಗುರುತಿಸಬಹುದಾದ ನಾಗವೇಣಿಯವರ ಮತ್ತೊಂದು ವಿಶಿಷ್ಟವಾದ ಕಥೆ ಸೀಮಂತ. 'ಸೀಮಂತ' ಎನ್ನುವುದನ್ನು ಬರೀ ಕಿವಿಯಲ್ಲೇ ಕೇಳಿ ಸಂಭ್ರಮಿಸುತ್ತಿದ್ದ ಸೀತೆ ಈಗ ತನ್ನ ಸ್ವಂತ ಮಾಮಿಯ ಸೀಮಂತಕ್ಕೆ ತನ್ನ ಅಪ್ಪನೊಂದಿಗೆ ಹೊರಟುನಿಂತಿದ್ದಾಳೆ. ಸೀಮಂತದ ಬಗ್ಗೆ ತನ್ನ ಅಮ್ಮನಲ್ಲಿ ಕೇಳುತ್ತಿದ್ದ ಅಸಂಖ್ಯ ಪ್ರಶ್ನೆಗಳಿಗೆ ಮಾಮಿಯ ಸೀಮಂತ ಉತ್ತರವಾಗಬೇಕಿತ್ತು.

ನಿರ್ಮಲ ಮನಸ್ಸಿನ ಆ ಪುಟ್ಟ ಹುಡುಗಿ ಸೀತೆ, ಸಿರಿವಂತ ತನ್ನ ಮಾಮಿಯ ಸೀಮಂತದ ಬಗ್ಗೆ ಅದೆಷ್ಟು ಕನಸು ಕಾಣುತ್ತಾಳೆ, ಮಾಮಿಯನ್ನು ಕಾಣಲು ಹಂಬಲಿಸುತ್ತಾಳೆ, ತಾನೇ ಹೋಗಿ ಬಾಚಿ ತಬ್ಬುತ್ತಾಳೆ, ಸೀಮಂತದಷ್ಟೆ ಕುತೂಹಲ ಹುಟ್ಟಿಸಿದ್ದ ಬೇಯಿಸಿದ ಇಡೀ ಕೋಳಿ ಮೊಟ್ಟೆಗಾಗಿ ಕಾತರಿಸುತ್ತಾಳೆ. ತನ್ನ ಮಾಮಿ ಪ್ರೀತಿಯಿಂದ ತನಗೆ ಕೊಡುತ್ತಾಳೆಂದು ಆಸೆಪಡುತ್ತಾಳೆ. ಮಾಮಿಯ ಕಣ್ಣಿಗೆ ತಾನು ಕಾಣುವಂತೆ ಹತ್ತಿರಕ್ಕೆ ಹೋಗಿ ನಿಲ್ಲುತ್ತಾಳೆ. ಮಾಮಿ ತೆಗೆದುಕೊಳ್ಳುವ ಎರಡು

ಕೋಳಿ ಮೊಟ್ಟೆಯಲ್ಲಿ ಸೀತೆಗೆ ಕುತೂಹಲ. ಆದರೆ ಸೀತೆಯನ್ನೆ ಮಾಮಿ ಗಮನಿಸುವುದಿಲ್ಲ. ಸೀತೆಯ ಆಸೆಗೆ ತಣ್ಣೀರೆರಚುವಂತೆ ಮೊಟ್ಟೆಯನ್ನು ಕೈಯಲ್ಲಿಯೂ ತೆಗೆದುಕೊಳ್ಳಲು ಹಿಂಜರಿದ ಮಕ್ಕಳಿಗೆ ಒತ್ತಾಯವಾಗಿ ಕೊಡುತ್ತಾಳೆ. ಮಾಮಿ ಜಾನಕಿಯ ಮುಖಕಕ್ಕೆ ಎಸೆಯುವಂತೆ ಎಸೆದ ಒಂದು ಮೊಟ್ಟೆ ಸೀತೆಯ ಪಕ್ಕಕ್ಕೆ ಬಂದು ಬೀಳುತ್ತದೆ. ಮಾಮಿಯ ವರ್ತನೆಯಿಂದ ಬೇಸತ್ತ ಸೀತೆ ಮಹಾಪ್ರಾಣವಾದ ಮೊಟ್ಟೆಯನ್ನ ಕಾಲಿಂದ ಹೊಸಕಿಹಾಕಿ ತನ್ನ ಪ್ರತಿಕ್ರಿಕಯೆಯನ್ನ ವ್ಯಕ್ತಪಡಿಸುತ್ತಾಳೆ.

ಸೀಮಂತದ ವೈಭವವನ್ನು ಮತ್ತೆ ಸವಿಯಲಾಗದೆ ಅಪ್ಪನಿದ್ದಲಿಗೆ ಓಡಿ ಬರುತ್ತಾಳೆ. ಆತನ ತೊಡೆಯಲ್ಲಿ ಮುಖ ಮುಚ್ಚಿಕೊಳ್ಳುತ್ತಾಳೆ. ಮದುವೆಯ ನಂತರ ತನ್ನ ಗಂಡನ ಮನೆಯ ಶ್ರೀಮಂತಿಕೆಯಲ್ಲಿ ಮೈಮರೆತಿದ್ದ ಜಾನಕಿ ತನ್ನನ್ನು ತಬ್ಬಿಹಿಡಿದ ಸೀತೆಯ ಕೈಗಳನ್ನು ಬಿಡಿಸಿಕೊಳ್ಳುವುದು ಸೀತೆಯನ್ನು ಮಾತ್ರವಲ್ಲ ತನ್ನ ತವರನ್ನು, ಮುಗ್ಧ ಮನಸ್ಸನ್ನು, ಅಷ್ಟೇ ಯಾಕೆ ತನ್ನ ಅಣ್ಣನ ಬಡತನವನ್ನೇ ಬಿಡಿಸಿಕೊಳ್ಳುವಂತೆ ಕಾಣುತ್ತದೆ. ಸೀತೆಗದು ಅವಮಾನ ಎನಿಸುತ್ತದೆ. ಆದರೆ ಸೀಮಂತದ ಬಗ್ಗೆ ನೂರೆಂಟು ಕನಸು ಕಂಡಿದ್ದ ಸೀತೆ ಮಾಮಿಯ ನಿರ್ಲಕ್ಷ್ಯೆಯನ್ನು ಗಮನಿಸುತ್ತಲೆ ಸೀಮಂತವನ್ನು ಹತ್ತಿರದಿಂದ ಕಣ್ತುಂಬ ಸವಿಯಲು ಮೈಯಲ್ಲ ಆಸೆಗಣ್ಣಾಗಿ ನಿಂತಿರುತ್ತಾಳೆ. ಅಂಥವಳನ್ನು ಜಾನಕಿ ಕಡೆಗಣಿಸುತ್ತಾಳೆ.

ಅದನ್ನು ಪ್ರತಿಭಟಿಸುವಂತೆ ಸೀತೆ ತನ್ನ ಕಾಲಡಿ ಬಿದ್ದ ಮೊಟ್ಟೆಯನ್ನು ಮೆಟ್ಟಿ ಹೊಸಕಿ ಹಾಕುತ್ತಾಳೆ. ಸೀತೆ ಮೆಟ್ಟಿ ಹೊಸಕಿ ಹಾಕಿದ್ದು, ಕಾಲಡಿ ಬಿದ್ದ ಮೊಟ್ಟೆಯನ್ನಷ್ಟೇ ಅಲ್ಲ ಶ್ರೀಮಂತಿಕೆಯ ದರ್ಪವನ್ನೂ ಕೂಡಾ. ಸೀತೆಯ ಶ್ರೀಮಂತ ಕನಸುಗಳಿಗೆ ಜಾನಕಿಯ ಶ್ರೀಮಂತಿಕೆ ಸಮನಾಗಲಾರದು. ಅರ್ಧದಲ್ಲಿ ಬಂದ ಶ್ರೀಮಂತಿಕೆಯ ಸೊಕ್ಕು ಸೀತೆಯ ಕಾಲಡಿ ಬಿದ್ದ ಮೊಟ್ಟೆಗೆ ಸಮಾನವೆನಿಸುತ್ತದೆ.

ಒಡವೆ ಕಥೆಯಲ್ಲಿ ಇನ್ನೊಂದು ಬಗೆಯ ಚಿಂತನೆ ಇದೆ. ಗಾಂಧಿ ಮಂಗಳೂರಿಗೆ ಬರುವ ಸುದ್ದಿಯೊಂದಿಗೆ ಮನೆಗೆ ಬಂದ ಮಾರಪ್ಪ ದಾರುವಿನಲ್ಲಿ ಅವಳ ಒಡವೆಯನ್ನ ಕೇಳುತ್ತಾನೆ. ಯಾಕೆ ಎಂದು ಕೇಳುವುದರೊಳಗೆ ಅತ್ತೆ ನಡುವೆ ಬಾಯಿಹಾಕುತ್ತಾಳೆ ಪಿತ್ತನೆತ್ತಿಗೇರಿಸಿಕೊಂಡ ಮಾರಪ್ಪ ದಾರುವಿನ ಹೆಣ್ತನವನ್ನು ನಿಂದಿಸಿ ಹೀನಾಯವಾಗಿ ಬೈಯುತ್ತಾನೆ.

ತನ್ನ ಹೆಣ್ತನದ ಬಗ್ಗೆ ತನ್ನ ಗಂಡನೆ ಹೀನಾಯವಾಗಿ ಮಾತಾಡಿದಾಗ ಕೈಗಳು ಒಂದೊಂದೆ ಒಡವೆಗಳನ್ನು ಕಳಚಿ ಒಡವೆ ಗಂಟನ್ನು ಹಿಡಿದು ಅವಸರವಾಗಿ ಜಗಲಿ ಇಳಿದು ಹೊರಟ ಮಾರಪ್ಪನನ್ನು ಸೂರಕ್ಕೆ ಧ್ವನಿ ಎತ್ತರಿಸಿ ಬೈಯುತ್ತಾಳೆ.

‘ದಾರು, ಅತ್ತೆಯ – ಅಬ್ಬರದ ದನಿಗೆ ಮಲ್ಲಿಗೆಯಂತಹ ಮೃದು ಮಾತಿನಿಂದಲೇ ಅಂದಳು ‘ನೀನು ಸುಮ್ನಿರಿ ಮಾಮಿ, ನನಗ್ಯಾಕೆ ಈ ಒಡವೆಗಳಲ್ಲಿ ಗಾಂಧಿಗಾದ್ರೂ ಕೊಟ್ರೆ ಪುಣ್ಯವಾದರೂ ಬರುತ್ತೆ... ಆ ಪುಣ್ಯದಿಂದಾದ್ರೂ ನಿಮ್ಮಗನಿಗೆ ಹೆಣ್ಣಿನ ಹೆಣ್ತನ ಹುಡುಕುವ ಗಂಡಸ್ತನ ಬರಲಿ...”[೪೧]

ದಾರುವಿನ ಮಾತಿಗೆ ಮಾರಪ್ಪ ಒಡವೆ ಗಂಟನ್ನ ಹಿಡಿದು ಅಲ್ಲೇ ಕುಸಿದು ಕೂರುತ್ತಾನೆ.

ದಾರುವಿನ ಈ ನಿಲುವಿನಲ್ಲಿ ಕಥೆಯ ಕೊನೆಯಲ್ಲಿ ಪುರುಷ ಕೇಂದ್ರಿತ ಚಿಂತನೆಯ ವಿರುದ್ಧ ಪ್ರತಿಭಟನೆ ತುಂಬಾ ಸೂಕ್ಷ್ಮವಾಗಿ ಮಂಡಿತವಾಗಿದೆ. ಗರ್ಭಚೀಲ ದೇಹಕ್ಕೊಂದು ಅಂಗ. ಅದರ ಊನಕ್ಕೆ ಶಿಖಂಡಿ ಪಟ್ಟ ಕಟ್ಟಿ ಈ ಸಮಾಜ ಅವಳನ್ನ ಕೆಟ್ಟದಾಗಿ ನಡೆಸಿಕೊಳ್ಳುತ್ತದೆ. ಕಟ್ಟಿಕೊಂಡ ಗಂಡನು ಆಕೆಯ ಹೆಣ್ತನವನ್ನು ಅವಮಾನಿಸಿದಾಗ ಅವಳ ಅಂತರಾತ್ಮದ ಒಳಗೆ ಹಲವು ಪ್ರಶ್ನೆ ಏಳುವುದಕ್ಕೆ ಕಾರಣವಾದವು. ಹೌದು–ಹೆಣ್ಣಿಗೆ ಹೆಣ್ತನವೇ ಒಡವೆ. ಆದರೆ ಗಂಡಿಗ್ಯಾವುದು? ತನ್ನ ಗಂಡನಿಗಿದೆಯೆ ಯಾವುದೇ ಗಂಡಿಗಿರಬೇಕಾದ ಒಡವೆ? ಎನ್ನುವಲ್ಲಿ ಪುರುಷ ಕೇಂದ್ರಿತ ಚಿಂತನೆಯ ವಿರುದ್ಧ ಪ್ರತಿಭಟಿಸುವ ಮನಸ್ಸೊಂದು ಸಿದ್ದವಾಗಿದ್ದನ್ನು ಕಾಣಬಹುದಾಗಿದೆ.

ಪ್ರತಿಭಟನೆಯು ನಾಗವೇಣಿಯವರಿಗೆ ವಾಚ್ಯವಲ್ಲ. ಅವರ ಎಲ್ಲಾ ಕಥೆಗಳಲ್ಲಿ ಪ್ರತಿಭಟನೆಗಳು ಬೇರೆ ಬೇರೆ ನೆಲೆಗಳಲ್ಲಿ ವ್ಯಕ್ತವಾಗುತ್ತವೆ. ದಾರು ಒಡವೆಯನ್ನು ಕಳಚಿ ಕೊಡುವಂತೆ, ಸೀತೆ ಮೊಟ್ಟೆಯನ್ನು ಹೊಸಕಿ ಹಾಕುವಂತೆ, ಸೇವಂತಿ ಓಲೆಯನ್ನು ನೀರಿಗೆ ಹಾಕುವಂತೆ! ಇಲ್ಲಿ ಪ್ರತಿಭಟನೆಗಳು ವ್ಯಕ್ತವಾಗಿವೆ.

೩.೪ ಮಾನವೀಯ ಸಂಬಂಧಗಳು ಮತ್ತು ಕೌಟುಂಬಿಕ ಚಿತ್ರಣ

ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದು ತಮ್ಮ ಸುತ್ತಲ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗ್ರಹಿಸುತ್ತ ತಮ್ಮ ಬರವಣಿಗೆಗೆ ಬೇಕಾದ ಮೂಲ ಜೀವದ್ರವ್ಯವನ್ನು ವೈದೇಹಿ ಪಡೆದ ಬಗೆಯೇ ಒಂದು ರೋಚಕ ಕಥನವಾಗಿದೆ. ಇವರ ಹೆಚ್ಚಿನ ಬರವಣಿಗೆಗಳು ಒಂದು ಸಮುದಾಯದಲ್ಲಿ, ಸಂಸ್ಕೃತಿಯಲ್ಲಿ ಆಳವಾಗಿ ಬೇರು ಬಿಟ್ಟಿರುವಂಥದ್ದು. ಬದುಕಿನ ಮೌಲ್ಯಗಳನ್ನು ಕುರಿತ ಜಿಜ್ಞಾಸೆಗಳು ಪಡೆದುಕೊಳ್ಳುವ ಅಸಾಧಾರಣ ಸಾಧಾರಣೀಕರಣದಲ್ಲಿ ವೈದೇಹಿಯವರ ಬರೆವಣಿಗೆಯ ಹೆಚ್ಚುಗಾರಿಕೆಯಿದೆ. ಆಪ್ತವಾಗಿ ಸಂವಾದಿಸುತ್ತಲೆ ಜೀವನದ ಸಂಕೀರ್ಣ ಆಳವನ್ನು ಸ್ಪರ್ಶಿಸಿ ಬಿಡುತ್ತಾರೆ. ಸೀಮಿತ ಆವರಣದಲ್ಲಿ ಬರೆಯುತ್ತಿದ್ದಾರೆ ಎನಿಸಿದರು ‘ಮದುವೆ’, ‘ಕುಟುಂಬ’ದಂಥ ಸಾಮಾಜಿಕ ಸಂಸ್ಥೆಗಳನ್ನು ಆಳವಾದ ಪರಿಶೀಲನೆಗೆ ಒಡ್ಡಿದ್ದಾರೆ. ತೀರಾ

ಸಂಪ್ರದಾಯಸ್ಥರಿಂದ ತೀರಾ ಆಧುನಿಕರವರೆಗೆ, ಅವಿವಾಹಿತೆಯಿಂದ ವಿಧವೆಯವರೆಗೆ, ಗೃಹಿಣಿಯರಿಂದ ವೇಶ್ಯೆಯರವರೆಗೆ ಈ ಪ್ರಪಂಚ ಹರಡಿಕೊಂಡಿದೆ. ಇಲ್ಲಿ ವಿದ್ಯಾವಂತರು, ಅವಿದ್ಯಾವಂತರು, ಕಳ್ಳರು, ಹುಚ್ಚರು ಇದ್ದಾರೆ. ಶೋಷಿಸುವವರು, ಶೋಷಣೆಗೆ ಒಳಗಾದವರು ಇದ್ದಾರೆ. ಅಂದರೆ ವೈದೇಹಿ ಕಥೆಗಳಲ್ಲಿ ಹೆಣ್ಣು ವಿವಿಧ ಆಕೃತಿಗಳಲ್ಲಿ, ಭಾವಸ್ಥಿತಿಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಈ ವೈವಿಧ್ಯವೇ, ಬಹುರೂಪತೆ, ಬಹುಧ್ವನಿಗಳೇ ವೈದೇಹಿಯವರನ್ನು ನಮ್ಮ ಕಾಲದ ಬಹುಮುಖ್ಯ ಬರಹಗಾರ್ತಿಯರಲ್ಲಿ ಒಬ್ಬರನ್ನಾಗಿ ಮಾಡಿರುವುದು. ಜೀವನವೆನ್ನುವುದು ಅಸಂಖ್ಯಾ ಬಣ್ಣ, ಚಹರೆ, ವಾಸನೆಗಳಿಂದ ಕೂಡಿರುವಂಥದ್ದು ಎಂಬ ಸಂಕೀರ್ಣಗ್ರಹಿಕೆಯೂ ಒಂದು ಮಾನವೀಯ ಸನ್ನಿವೇಶದ ಹಿಂದೆ ಹಲವು ಬಗೆಯ ಒತ್ತಡಗಳಿರುತ್ತವೆ ಎಂಬ ಗಾಢ ತಿಳುವಳಿಕೆಯೂ ಇಲ್ಲಿ ಕೆಲಸ ಮಾಡಿದೆ.

ನಾಗವೇಣಿಯವರ ಕಥೆಗಳಲ್ಲಿ ವಿಶೇಷ ಅನುಭವಗಳ ವಿಶಿಷ್ಟ ಮಂಡನೆ ಇದೆ. ಇವರ ಕಥೆಗಳಲ್ಲಿ ಹೆಣ್ತನದ ನಿರ್ವಚನಗಳಿವೆ. ತಾಯಿ, ಹೆಂಡತಿ ಒಕ್ಕಲಗಿತ್ತಿಯಾಗಿರುವುದು ಬೇರೆ ಎಂಬ ಅರಿವು ನಾಗವೇಣಿಯವರಿಗಿದೆ. ಇದು ತುಂಬ ಪ್ರಮುಖವಾದ ಅರಿವು ಕೂಡಾ ಹೌದು. ಏಕೆಂದರೆ ಇವರ ಕಥೆಗಳಲ್ಲಿ ಅನೇಕ ಮುಖಗಳುಳ್ಳ ಮಹಿಳೆಯರ ಮತ್ತು ಹೆಣ್ತನದ ಪರಿಚಯವಾಗುತ್ತದೆ. ಆಧುನಿಕ ಉತ್ಪಾದನೆಯ ಕ್ರಮದಲ್ಲಿ ಮಹಿಳೆಯರು ಮನೆಯಿಂದ ಹೊರಗೆಬಂದು ದುಡಿಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಮಧ್ಯಮವರ್ಗದ ಕುಟುಂಬದ ಸ್ವರೂಪದಲ್ಲಿಯೂ ವ್ಯಾಪಕ ಬದಲಾವಣೆಯಾಗಿದೆ. ಕೂಡು ಕುಟುಂಬಗಳು ಗೈರು ಹಾಜರಿಯಾಗಿವೆ. ಕೌಟುಂಬಿಕ ಮೌಲ್ಯಗಳು ಕೂಡಾ ಬದಲಾಗಿವೆ. ಮನೆಯ ಒಳಗೆ ಅಡುಗೆ ಕೆಲಸ ಮಕ್ಕಳ ಲಾಲನೆ, ಪಾಲನೆ, ಕೌಟುಂಬಿಕ ವಿಚಾರಗಳಲ್ಲಿ ಮಾತ್ರ ತೊಡಗಿಕೊಂಡಿದ್ದ ಮಹಿಳೆಯರು ಆಧುನಿಕ ಉತ್ಪಾದನೆಯ ಕ್ರಮದಲ್ಲಿ ಮನೆಯಿಂದ ಹೊರಗೆ ಬಂದು ದುಡಿಯುತ್ತಿದ್ದಾರೆ. ಇದರಿಂದಾಗಿ ಮಧ್ಯಮವರ್ಗದ ಕುಟುಂಬದ ಸ್ವರೂಪದಲ್ಲಿ ವ್ಯಾಪಕವಾದ ಬದಲಾವಣೆಗಳಾಗಿವೆ.

ಮಾನವ ಜಗತ್ತಿನಲ್ಲಿ ಸಮಾಜಕ್ಕು ಬೇರೆ ಬೇರೆ ಮುಖಗಳಿವೆ. ಇಂಥ ಸಮಾಜದ ಆಯ್ಕೆ ಎನ್ನುವುದು ಲೇಖಕರಿಗೆ ಸಂಬಂಧಿಸಿದ್ದು. ನಾಗವೇಣಿಯವರಿಗೆ 'ಆಯ್ಕೆ'ಯು ತೀರಾ ವೈಯಕ್ತಿಕವೇನಲ್ಲ. ಅದಕ್ಕೆ ಬಹಿರ್ಮುಖತೆಯಿದೆ. ಗಂಡು ಹೆಣ್ಣಿನ ಸಂಬಂಧ ಪತ್ಯದ ಹೊರಗೆ ಬೇರೆ ಬೇರೆ ರೀತಿಯಿರಬಹುದು. ಆದರೆ ಕಥೆಗಾರ್ತಿಯಾಗಿ ಇವರು ಅದನ್ನು ನಿರ್ದಿಷ್ಟ ಸಂಯೋಜನೆಗೆ ಗುರಿಪಡಿಸಿದ್ದಾರೆ.

ಬದುಕಿನ ತುಂಬ ಸಂಕೀರ್ಣ ಸ್ವರೂಪದ ಕಡೆಗೆ ವೈದೇಹಿಯವರು ಆಸಕ್ತಿ ಕುತೂಹಲಗಳಿಂದ ನೋಡುತ್ತಾರೆ. ಆದ್ದರಿಂದ ಅನುಭವಗಳನ್ನು, ಮಾನವ ಸಂಬಂಧಗಳನ್ನು, ಮಾನವರ ಒಳ, ಹೊರಗಿನ ಸ್ವಭಾವವನ್ನು ಹಿಡಿದಿಡಲು ಪ್ರಯತ್ನಿಸುತ್ತಾರೆ. ಅಂಥದೊಂದು ಸೃಜನಶೀಲ ಶಕ್ತಿ 'ಮರಗಿಡ ಬಳ್ಳಿ' ಕಥೆಯಲ್ಲಿ ಆಳವಾಗಿ ವಿಸ್ತಾರವಾಗಿ ಕಾಣಿಸಿಕೊಂಡಿದೆ.

ತಾಯಿ ಮಕ್ಕಳ ಸಂಬಂಧದ ಸುತ್ತ ಕಥೆ ಹೆಣೆಯುತ್ತಾ ಹೋಗುತ್ತಾರೆ. ಒಂದು ಹಂತದವರೆಗೆ ತಾಯಿ ಮಕ್ಕಳ ನಡುವಿನ ಅನ್ಯೋನ್ಯ ಸಂಬಂಧಗಳನ್ನು ಚಿತ್ರಿಸುತ್ತಾ ಹೋದಂತೆ ಕಂಡರು, ಸಂಬಂಧಗಳ ನಾನಾ ಮಜಲುಗಳನ್ನ ಹೊರಗೆಳೆದು ತರುತ್ತಾರೆ. ಇಲ್ಲಿ ತಾಯಿ ತನ್ನ ಮಕ್ಕಳನ್ನ ಹೆತ್ತು ಹೊತ್ತು ಬೆಳೆಸುವಲ್ಲಿ ಪಟ್ಟಪಾಡು ಮಕ್ಕಳ ವಿದ್ಯಾಭ್ಯಾಸ, ಮಗಳ ಮದುವೆ ಆ ಮಕ್ಕಳಿಗೆ ಇಷ್ಟವಾಗುವ ತಿಂಡಿ ಊಟ ಎಲ್ಲವನ್ನು ಮೆಲುಕು ಹಾಕುತ್ತ ಮಕ್ಕಳ ಮುಂದೆ, ತಾನು ಈಗ ಮಗುವಾಗುವ ಹಂಬಲಿಕೆಯನ್ನು ವ್ಯಕ್ತಪಡಿಸುತ್ತಾಳೆ.

ಎದ್ದು ಓಡಾಡಲಾಗದೆ ಹಾಸಿಗೆ ಹಿಡಿದಿರುವ ತಾಯಿ, ಮಗಳು ಶಾರದೆ ಮನೆಗೆ ಬರುವುದನ್ನು ಕೇಳಿ ಸಂತೋಷಪಡುತ್ತಾಳೆ. ಮಲಗಿದಲ್ಲೆ ಮನಸ್ಸಲ್ಲೆ ನೆನಯುತ್ತಾಳೆ. ಮಗಳ ಮದುವೆ, ಮಕ್ಕಳು, ಬಾಣಂತನ, ತಾನು ಅವಳಿಗಾಗಿ ಕಾದದ್ದು ಚಾವಡಿಯ ತಳಿಕಂಡಿಯ ಬಳಿ ಕುಳಿತು ಅವಳು ಒಳ ಬರುವುದನ್ನು ನೋಡಿ ಹರ್ಷಿಸಬೇಕೆಂದುಕೊಳ್ಳುತ್ತಾಳೆ. ಅವಳಿಗೆ ಶಾವಿಗೆ, ಪತ್ರೊಡೆ, ದೊಡ್ಡವೆಂದರೆ ತುಂಬಾ ಇಷ್ಟ. ಅವಳು ಬಂದಾಗೆಲ್ಲ ಅದನ್ನೆಲ್ಲ ಮಾಡಿ ಹಾಕುತ್ತಿದ್ದೆ ಅದು ಕೊನೆಯಾಗಿ ಹೋಯಿತು, ಇನ್ನು ಈ ಜನ್ಮದಲ್ಲಿ ನಾನು ಅವನ್ನೆಲ್ಲ ಮಾಡಿಹಾಕುವುದುಂಟೆ? ಅವಳು ತಿನ್ನುವುದುಂಟೆ? ಎಂದೆಲ್ಲ ಹಾಸಿಗೆಯಲ್ಲಿ ಮಲಗಿದ್ದಲ್ಲೆ ನೆನೆಯುತ್ತಾಳೆ. ಆದರೆ ಮಗಳು ಶಾರದೆ ಬಂದಾಗ ಎಷ್ಟೆಲ್ಲ ಬದಲಾಗಿದ್ದಾಳೆ. ಅಲ್ಲ ಬದಲಾದದ್ದಲ್ಲ ತಾಯಿ ಮಗಳಿಂದ ನಿರೀಕ್ಷಿಸಿದ್ದ ನಿರೀಕ್ಷೆಗಳು ನೆರವೇರುವುದಿಲ್ಲ ಅಷ್ಟೆ. ತನ್ನ ಮಗಳು ಶಾರದ ತನ್ನನ್ನು ಮಗುವಂತೆ ಜೋಪಾನ ಮಾಡುತ್ತಾಳೆ. ಅವಳು ಬಂದರೆ ಮನೆಯೆಲ್ಲಾ ಮಾತಿನಿಂದ ಗಲಗಲ ಎನ್ನುತ್ತೆ. ನನ್ನ ಬಳಿ ಕುಳಿತು ಹರಟೆ ಕೊಚ್ಚುತ್ತಾಳೆ ಎಂದೆಲ್ಲ ಭಾವಿಸಿದ್ದಳು. ಆದರೆ ಅತ್ತಿಗೆ ಜೊತೆ ಅಡುಗೆ ಮನೆಯಲ್ಲಿ ಗುಸುಗುಸು ಮಾತಾಡಿದ್ದು, ನಗುವುದು ತಾಯಿಗೆ ಕಿರಿಕಿರಿ ಅನಿಸುತ್ತದೆ.

'ಶಾರದೆ ತನ್ನ ಬಳಿ ಮಲಗಿ ನಿದ್ರಿಸುವಾಗ ತಾನು ನಿನಗೆ ಏನೆಲ್ಲ ಹೇಳಬೇಕಿದೆ ರಾತ್ರಿ ಎದ್ದು ಬಂದದ್ದು, ಬಿದ್ದವಳು ಬಿದ್ದಲ್ಲೇ ಆದದ್ದು, ನಂಗೆ ಸಾಯಬಾರದಿತ್ತೆ ಎಂತ ಅನಿಸಿದ್ದು ಏನೆಲ್ಲ ಹೇಳಲಿಕ್ಕಿದೆ' ಎಂದು ಅವಳೊಡನೆ ಆತ್ಮೀಯವಾಗಿ ಮಾತಾಡಬೇಕಂತ ಈಗ ಮಗು ನಾನು, ತಾಯಿ ನೀನು ಹೀಗಾಗಿದೆ ನೋಡು ನನ್ನ ಪರಿಸ್ಥಿತಿ ಎಂದು ಗೋಳೋ ಅಂತ ಅಳಬೇಕಂತ

ತೀವ್ರ ಆಸೆಯಾಗುತ್ತದೆ. ಆದರೆ ಮಗಳಿಗೆ ನಿದ್ರೆ. ಸೂರ್ಯಮಾಣಿಯನ್ನು ನೆನೆಯುತ್ತಾಳೆ. ಅವನನ್ನು ಚಿಕ್ಕಂದಿನಲ್ಲಿ ಸಾಕಲು ಪಟ್ಟಕಷ್ಟಗಳು ಹೈಸ್ಕೂಲ್ ಮೆಟ್ಟಿಲು ಹತ್ತುವವರೆಗೂ ನನ್ನ ಸೆರಗಿನ ಹಿಂದುಗಡೆ ಅಡಗಿ ಕುಳಿತು ಎಡಗೈ ಹೆಬ್ಬೆಟ್ಟನ್ನು ಚೀಪುತ್ತಾ ಬಲಗೈಯಿಂದ ಸೆರಗಿನ ತುದಿಯನ್ನು ತಿಪ್ಪುತ್ತಾ ಬೆಳೆದವನು ಇವನೆ. 'ಬೆಟ್ಟು ಬೀರ' ಎಂತಲೇ ಕರೆಯುತ್ತಿದ್ದರು. ಅವನು ಬೆಟ್ಟು ಚೀಪುವುದನ್ನು ತಪ್ಪಿಸಲು ನಾನು ಪಟ್ಟಕಷ್ಟವೆಷ್ಟು? ದೇವರಿಗೇ ಹೇಳಬೇಕು ಅದನ್ನು ರಕ್ತಬಳ ಹಚ್ಚಿದರಿಲ್ಲ, ಬೇವಿನ ಎಣ್ಣೆ ಬಳಿದರಿಲ್ಲ, ಒರೆಸಿಕೊಂಡು ಮತ್ತೆ ಚೀಪಿದ; ಕೊನೆಗೂ ನೀನು ಬೆಟ್ಟು ಚೀಪಿದರೆ ನಾನು ಸತ್ತು ಹೋಗುತ್ತೇನೆ ನೋಡು ಎಂತ ಹಲ್ಲು ಕಡಿದು ಜೋರು ಮಾಡಿದ ಮೇಲೆ ಅವನು ಹೆದರಿ, ಅಮ್ಮನೆಲ್ಲಾದರೂ ಸತ್ತೆ ಹೋದರೆ ನೀನೇ ಮಾಡಿದ ತಪ್ಪು, ಸ್ವಲ್ಪ ಮುಂಚೆಯೇ ಅಭ್ಯಾಸ ಬಿಡಿಸಬೇಕಿತ್ತು ನೀನು ಎಂದು ಹಾರಿ ಬೀಳುತ್ತಾನೆ. ಅಂತ ಸೂರ್ಯಮಾಣಿ ಈಗ ಅಮ್ಮ ಹಾಸಿಗೆ ಹಿಡಿದಿರುವ ಸುದ್ಧಿ ತಿಳಿದ ಮೇಲೂ ಹದಿನಾಲ್ಕಕ್ಕೆ ಬರುತ್ತೇನೆಂತ ಪತ್ರ ಬರೆದು ಹದಿನೈದು ದಿನಗಳಾದರು ಬಂದಿಲ್ಲ.

ಇಲ್ಲಿ ಎಲ್ಲರೂ ಹಾಸಿಗೆ ಹಿಡಿದಿರುವ ತಾಯಿಯನ್ನು ಒಂದು ನಿರ್ಜೀವ ವಸ್ತುವಿನಂತೆ ನೋಡುತ್ತಿದ್ದಾರೆ. ಔಪಚಾರಿಕ ಕಟ್ಟುಗಳಿಂದ ನೋಡುವುದು ತಾಯಿಗೆ ಇಷ್ಟವಾಗುವುದಿಲ್ಲ. ತಾಯಿ ಮಾಡಿದ ಚಾಕರಿಗೆ ದೊಡ್ಡದು ಸಣ್ಣದು ಎಂದು ಲೆಕ್ಕ ಹಾಕುವುದನ್ನ ನೋಡಿದ ತಾಯಿ ಬದುಕಿನಿಂದ ಹೊರಗೆ ನಿಂತು ನಾನು ಸತ್ತರೆ ಯಾರು ಅಳುವುದಿಲ್ಲ. ನನ್ನ ಮರಣ ದುಃಖಿಸಲಾರದ ಸಾವಿನ ಸಾಲಿಗೆ ಸೇರಿದೆ. ಗೋಡೆಗೆ ತಲೆಕುಟ್ಟಿಕೊಂಡು ಅಳೋಣವೆನಿಸುತ್ತದೆ. ಸತ್ತ ಅಮ್ಮ ಎದ್ದು ಬಂದು ನಕ್ಕಂತಾಗುತ್ತದೆ.

"ವರ್ಷಗಟ್ಟಲೆ ಸಮೃದ್ಧವಾಗಿ ಫಲ ಕೊಡುತ್ತಿದ್ದ ಗೋವೆ ಮರಕ್ಕೆ ವರಳೆ ಹಿಡಿದು ಲಡ್ಡು ಆದಾಗ ಅದನ್ನು ನಾನು ಕಡಿಸಿದ್ದು ನೆನಪಾಗಿ ಆ ಕೊಡಲಿಯೇಟು ಎರಡು ಪಟ್ಟು ಜೋರಿನಿಂದ ತನ್ನ ಎದೆಯ ಮೇಲೆಯೇ ಬಿದ್ದಂತಾಗುತ್ತದೆ."

"ಎಂಟು ಹತ್ತು ಕರುಗಳಿಗೆ ಜನ್ಮಕೊಟ್ಟು ಧಾರಾಳ ಹಾಲುಕೊಟ್ಟು ಮುದಿಯಾಗಿ ಉಪಯೋಗವಿಲ್ಲದೆ ಕೊಟ್ಟಿಗೆಯಲ್ಲಿದ್ದ ಕಾಳಿದನವನ್ನು ಚೀಂಕ್ರನೊಡನೆ ಹೊಡೆದುಕೊಂಡು ಹೋಗಲು ಹೇಳಿದ್ದು, ಕಾಳಿ ಗೇಟಿನಿಂದ ಹೊರಗೆ ಹೋಗಲು ಒಪ್ಪದಿದ್ದಾಗ ಪೆಟ್ಟುಕೊಟ್ಟು ಕಳಿಸಿದ್ದು, ಅದು ಅಂಬಾ ಎಂತ ಮೇಲಿಂದ ಮೇಲೆ ಕೂಗುತ್ತ, ಹಿಂದೆ ನೋಡುತ್ತ ಹೋದದ್ದು– ಎಲ್ಲ ಈಗಲೇ ಯಾಕೆ ನೆನಪಾಗುತ್ತದೆ?"[೪೨]

ಮನೆತುಂಬ ಮಕ್ಕಳಿದ್ದಾರೆ. ಸೊಸೆ, ಅಳಿಯ, ಮೊಮ್ಮಕ್ಕಳು ಎಲ್ಲಾ ಇದ್ದಾಗಲೂ ತಾಯಿಯನ್ನು ನೋಡಿಕೊಳ್ಳಕೆ ಒಬ್ಬ ನರ್ಸನ್ನು ನೇಮಿಸಲು ತೀರ್ಮಾನಿಸುತ್ತಾರೆ. ಸಾಯುತ್ತಿರುವ

ತಾಯಿ ಬದುಕುತ್ತಿರುವ ಮಕ್ಕಳಿಗೆ ಏನು ತಾನೆ ಹೇಳುವುದಕ್ಕೆ ಸಾಧ್ಯ. ಸಂಬಂಧಗಳು ಎಷ್ಟು ಬೇಗ ಬದಲಾಗುತ್ತವೆ ಎಂಬ ಸಂಕೀರ್ಣ ಚಿತ್ರಣಗಳನ್ನು ತಮ್ಮ ಕಥೆಯಲ್ಲಿ ವೈದೇಹಿ ಶಕ್ತವಾಗಿ ಕಟ್ಟಿಕೊಡುತ್ತಾರೆ.

'ಸಂ-ಸಾರ' ಕಥೆಯಲ್ಲಿಯೂ ವೈದೇಹಿ ಒಂದು ಕುಟುಂಬದ ಚಿತ್ರಣವನ್ನು ಹೆಣೆಯುತ್ತಾರೆ. ಮನೆಯನ್ನು ಬಿಡಲಾರೆ, ಮಕ್ಕಳನ್ನು ಬಿಟ್ಟುಕೊಡಲಾರೆ, ಬಿಡಿಸಲಾರದ ಸಿಕ್ಕು, ಕಗ್ಗಂಟು, ಜಿಗುಟು. ರಾತ್ರಿಯಿಡಿ ಮಲಗದೆ ತನ್ನ ಸಂಸಾರಕ್ಕಾಗಿಯೆ ಮಿಡಿಯುತ್ತಿರುವ ತಾಯಿ ಜೀವ. ಹೊಸದಾಗಿ ಮದುವೆಯಾದ ಮಗಳ ಸುಜಯನ ಬಗ್ಗೆ ತಲೆಕೆಡಿಸಿಕೊಳ್ಳುತ್ತಾಳೆ. ಮನೆಯ ಸೂಕ್ಷ್ಮ ವಿಷಯಗಳಲ್ಲಿ ಹೊಸಬಳು ಸ್ವಲ್ಪ ಧೈರ್ಯ ಕಡಿಮೆ. ಏನು ತರಬೇಕಾದರೂ, ಕೊಡಬೇಕಾದರೂ ಒಬ್ಬರ ಸಹಾಯ ಬೇಕವಳಿಗೆ. ಏನು ಮಾಡುವುದಪ್ಪ ಎಂದು ಗಲಿಬಿಲಿಗೊಂಡಿದ್ದಾಳೆ.

"ಅಮ್ಮ, ನೀನು ನನ್ನೊಡನೆ ಒಂದು ತಿಂಗಳಾದರೂ ಇದ್ದು ಹೋಗಬೇಕು, ಇಲ್ಲವಾದರೆ ನಾನೇನು ಮಾಡಲಿ?' ಅವಳು ನಿಸ್ಸಹಾಯಕಳಾಗಿ ನುಡಿದಾಗ ಹರ್ಷ ತನ್ನ ಎಂದಿನ ಒತ್ತಾಯದ ದನಿಗೂಡಿಸಿದ. 'ಹೌದು, ಹೌದತ್ತೆ. ಈ ಸುಜಯಳನ್ನು ನಂಬಿ ನೆಮ್ಮದಿಯಿಂದ ನಾನು ಆಫೀಸಿಗೆ ಹೋದ ಹಾಗೆ. ಅವಳಿಗೆ ಸ್ವಲ್ಪ ರೂಢಿಯಾಗುವವರೆಗೆ ನೀವು ಇರಲೇ ಬೇಕು".[೪೩]

ಏನೇನೋ ಸಮಜಾಯಿಷಿ ಸುಜಯ, ಹರ್ಷರನ್ನ ಕಳಿಸಿಕೊಡುವ ತಾಯಿಗೆ ಮನಸ್ಸಿಗೆ ನೆಮ್ಮದಿಇಲ್ಲ. 'ನೀನು ಬಾರಮ್ಮ' ಅಂತ ಬೆಳಿಗ್ಗೆ ಎದ್ದವಳೇ ಅಡುಗೆ ಮನೆಯಲ್ಲಿ ಒಲೆ ಮುಂದೆ ನಾನು ಕಾಫಿ ಮಾಡುತ್ತಿರುವಾಗ ಬಂದು, ಹತ್ತಿರ ಕುಳಿತು, ಗೋಗರೆದಿದ್ದು ಎಣಿಸಿ ಕರಳು ಚುರ್ ಎಂದಿತು. ನಿನ್ನನ್ನು ಬಿಟ್ಟು ದೂರ ಹೋಗಿ ಗೊತ್ತಿದೆಯಾ ನನಗೆ? ಸ್ವಲ್ಪ ದಿನವಾದರೂ ಬಂದಿರು, ಇಲ್ಲವಾದರೆ ದಿನಾ ಮನೆಯ ನೆನಪಾಗಿ ಅಳು ಬರುವಂತಾಗುತ್ತದೆ' ಎಂದು ಸಣ್ಣಗೆ ಬಿಕ್ಕಿದ್ದು ನೆನೆದಾಗಲಂತೂ ತಾಯಿಯ ಗಂಟಲೇ ಕಟ್ಟಿ ಬಂದತ್ತಿತ್ತು.

ಮತ್ತೊಬ್ಬ ಮಗಳು ವಿಜಯಳಿಂದ ಕಾಗದ ಬಂದಿದೆ. 'ನೀವೆಲ್ಲ ಬರೆದಂತೆ ನಾನು ಈ ಸಲ ಬಾಣಂತನಕ್ಕೆ ಅಲ್ಲಿಗೆ ಬರುವುದಿಲ್ಲ. ಇವರಿಗೂ ಕಳಿಸಲು ಮನಸ್ಸಿಲ್ಲ. ಈ ಬಾರಿ ನಾನು ಆಸ್ಪತ್ರೆಯಲ್ಲಿಯೇ ಅಂತ ತೀರ್ಮಾನಿಸಿದ್ದೇನೆ. ಅಮ್ಮ, ನೀನೇ ಇಲ್ಲಿಗೆ ಬಂದುಬಿಡು ಆಯಿತಾ? ಅಡುಗೆಗೆ ಕೆಲಸಕ್ಕೆ ಹೇಗೂ ಜನವಿದೆ, ಯಾರಿದ್ದರೂ ಈ ಸಮಯ ಹೆತ್ತ ತಾಯಿ ಇದ್ದಂತೆ ಆಗುತ್ತದೆಯೇ? ನಿನಗೆ ವೃಥಾ ತೊಂದರೆ ಕೊಡುತ್ತಿದ್ದೇನೆ. ಆದರೆ ಇಂತಹ ತೊಂದರೆಯನ್ನು

ನಾನು ನಿನಗಲ್ಲದೆ ಬೇರೆ ಯಾರಿಗೆ ಕೊಡಲಿ? ನೀನು ಖಂಡಿತ ಬಂದೇ ಬರುವೆಯೆಂಬ ನಂಬಿಕೆ ನನಗಿದೆ" ಎಂದು.

'ಅಮ್ಮ ಬರುವಿಯಲ್ಲವೇ?' ಎಂದು ಆರ್ತವಾಗಿ ಕೂಗಿದಂತೆ ಭಾಸವಾಗುತ್ತಿತ್ತು. ನಿಟ್ಟುಸಿರು ಹೊರಬರುತ್ತಲೇ ಇತ್ತು. ತರಕಾರಿ ಹೆಚ್ಚುವುದನ್ನು ನೋಡಿದ ಸೊಸೆ ವತ್ಸಲ ನಗುತ್ತಾಳೆ. 'ನೀವು ಏಳಿ ನನಗೇನೂ ಆಯಾಸವಾಗುವುದಿಲ್ಲ. ನಿಧಾನವಾಗಿ ಹೆಚ್ಚಿಕೊಡುತ್ತೇನೆ. ನೀವು ವಿಜಿಯತ್ತಿಗೆ ಮನೆಯಲ್ಲಿ ಇದ್ದಿರಿ ನನಗೆ ಗೊತ್ತು, ಕೈಗಿಯ್ ಕತ್ತರಿಸಿಕೊಂಡರೆ ಕಷ್ಟ'.

ವತ್ಸಲಳನ್ನು ಪರೀಕ್ಷಿಸುತ್ತ ಎಷ್ಟು ತೆಳ್ಳಗೆ ಈ ವತ್ಸಲ. ಆದರೆ ಆರೋಗ್ಯ ಕೆಟ್ಟಿರಲಿಲ್ಲ. ಈ ಎರಡು ವರ್ಷಗಳಿಂದ ಎಷ್ಟು ಸೋತುಬಿಟ್ಟಿದ್ದಾಳೆ! ಪುಟ್ಟು ಹುಟ್ಟಿದ ಮೇಲಂತೂ ಬಡಕಲೆಂದರೆ ಪೂರಾ ಬಡಕಲೇ. ಇಷ್ಟು ಸಣ್ಣ ವಯಸ್ಸಿನಲ್ಲಿ ಅದೇನೋ ಒಂದು ಆಪರೇಷನ್ನು ಆಯಿತು. ವತ್ಸಲ ಹೆತ್ತಿದ್ದು ಒಂದು. ಆದರೆ ಶಕ್ತಿಯಲ್ಲಿ ನನಗಿಂತಲೂ ಕಡೆ. ಮೊನ್ನೆ ಡಾಕ್ಟರೇ ನನ್ನೊಡನೆ ಹೇಳಿದರಲ್ಲ ಸ್ವಲ್ಪ ಜಾಗ್ರತೆಯಾಗಿರಬೇಕು ಅವರು. ಇನ್ನು ಆರು ತಿಂಗಳು ಕೆಲಸ ಬೊಗಸೆ ಮಾಡಬಾರದು ಎಂದು. ಸೊಸೆಯ ಬಗ್ಗೆಯೂ ಯೋಚಿಸುವ ತಾಯಿ ಹೃದಯ ತನ್ನ ಸಂಸಾರಕ್ಕಾಗಿ ಅದೆಷ್ಟು ಹವಣಿಸುತ್ತದೆ. ಒಟ್ಟು ಯಾವಾಗಲೂ ಸಂದಿಗ್ಧತೆ. ಮನೆಬಿಟ್ಟು ವತ್ಸಲಳನ್ನು ಬಿಟ್ಟು, ನಾನು ಎಲ್ಲಿಗೂ ಹೋಗುವುದಿಲ್ಲ. ಅತ್ತ ಸುಜಯ ಎಳೆಯುತ್ತಿದ್ದಾಳೆ ಇತ್ತ ವಿಜಯ ಕರೆಯುತ್ತಿದ್ದಾಳೆ ಅವಳಿಗೂ ಇಲ್ಲ ಎನ್ನದೆ, ಇವಳಿಗೂ ಎನ್ನಲಾಗದೆ ತಾಯಿ ಜೀವ ಒದ್ದಾದುತ್ತಿದೆ.

ಗಂಡನೊಡನೆ ಸುಖ ದುಃಖ ಹೇಳಲು ಹೋದರೆ ತಮಾಷೆ ಮಾತಾಡುತ್ತಾರೆ. ತನ್ನ ಉದ್ವೇಗ ಇವರಿಗೆ ಗೊತ್ತಾಗುವುದಿಲ್ಲ ಎಂದು ಮುಖ ತಿರುಗಿಸಿಕೊಳ್ಳುತ್ತಾಳೆ. ಮರುದಿನ ಕಾರಿನಲ್ಲಿ ನಂದಿಬೆಟ್ಟಕ್ಕೆ ಕರೆದುಕೊಂಡು ಹೋಗುವಾಗ ನಂದಿಬೆಟ್ಟಕ್ಕೆ ಕಲ್ಲು ಹಾಕಿ ಎನ್ನುವಂತಾಯಿತು. ತಾಯಿಗೆ ಎಂತಹ ಆತಂಕಗಳಿದ್ದರು ತಂದೆಯಾದವನಿಗೆ, ಯಜಮಾನ ಎನಿಸಿಕೊಂಡವನಿಗೆ ತನ್ನ ಕುಟುಂಬದ ಜವಾಬ್ದಾರಿ ಇದ್ದೆ ಇರುತ್ತದೆ ಎಂಬುದನ್ನು ತುಂಬಾ ಚೆನ್ನಾಗಿ ಲೇಖಕಿ ತುಂಬಿಕೊಡುತ್ತಾರೆ. ನಮ್ಮಲ್ಲಿಯೂ ಆಸ್ಪತ್ರೆ ಇದೆ ಎಂದು ವಿಜಯಳನ್ನು ಕರೆತರಲು ಮಗ ಮುರುಳಿಯನ್ನು ಕಳಿಸುವ ಯೋಚನೆ ಮಾಡಿದ್ದಾರೆ, ಸೊಸೆ ವತ್ಸಲಳಿಗೆ ಸಹಾಯಕ್ಕೆ ಲಕ್ಷ್ಮಿ ಅತ್ತಿಗೆ (ಗಂಡನ ಅಕ್ಕ) ತನ್ನ ಅಡುಗೆಯವಳನ್ನು ಮನೆಗೆ ಕಳಿಸಿದ್ದಾಳೆ. ವಿಜಯಳ ಬಾಣಂತನ ಮುಗಿದ ಮೇಲೆ ಅಮ್ಮ ಬಂದು ಒಂದಲ್ಲ ಎರಡು ತಿಂಗಳಾದರೂ ಇರುತ್ತಾಳೆ ಅಂತ ಕಾಗದ ಬರೆದಿದ್ದಾರೆ. ವಿಷಯ ತಿಳಿದಾಗ ಮಕ್ಕಳಿಗೆ ತಾಯಿ, ಅಳಿಯ, ಸೊಸೆಗೆ ಅತ್ತೆಯಾಗುವ ಮೊದಲು ತಾನಿವರಿಗೆ ಹೆಂಡತಿಯಾಗಿದ್ದೆ ಎಂಬುದನ್ನು ಮರೆತಂತೆ ಎಲ್ಲ ಜವಾಬ್ದಾರಿಗಳನ್ನು ತಲೆಯ ಮೇಲೆ

ಸುರಿದುಕೊಂಡಂತಿದ್ದವಳಿಗೆ ಮಾತು ಹೊರಡದೆ ಮೂಕವಾಗಿ ಇವರನ್ನೆ ನೋಡುತ್ತಲೆ ಇರುವಾಗ "ಅಲ್ಲ ರಂಗೂ, ಸೊಸೆಗೂ ನೀನು ಬೇಕು, ಆ ಮಗಳಿಗೂ ಬೇಕು, ಈ ಮಗಳಿಗೂ ಬೇಕು ಎಂದೇ ಸದಾ ಹೇಳುತ್ತಿರುತ್ತಿಯಲ್ಲ! ನನಗೂ ನೀನು ಬೇಕು ಎಂಬುದನ್ನು ಮರೆತೇ ಬಿಟ್ಟೆಯಾ' ಎಂದು ಕೇಳಿದ, ಅದೇ ಮೂವತ್ತು ವರ್ಷದ ಹಿಂದಿನ ಮಧುರ ಇನಿದನಿಯಲ್ಲಿ ಅದೆಷ್ಟು ಪ್ರೀತಿ ಇದೆ. ಗಂಡ ಹೆಂಡತಿ, ಮಕ್ಕಳು, ಅಳಿಯ, ಸೊಸೆ, ಮೊಮ್ಮಕ್ಕಳ ನಡುವಿನ ಮಧುರ ಬಾಂಧವ್ಯದ ಬೆಸುಗೆಯೇ ಸಂಸಾರ ಎಂಬುದನ್ನು ಸಂ ಸಾರ ಕಥೆ ಚೆನ್ನಾಗಿ ಅನಾವರಣಗೊಳಿಸುತ್ತದೆ.

ಒಂದು ಕಾಲಕ್ಕೆ ಈ ಮನುಷ್ಯ ಸಂಬಂಧಗಳು ಯಾವೆಲ್ಲಾ ಬಗೆಯಲ್ಲಿ ಹೆಣೆದು ಕೊಂಡಿರುತ್ತಿದ್ದವು. ಅಜ್ಜಿ-ಅಜ್ಜ, ಅಮ್ಮ-ಅಪ್ಪ, ಮಗಳು-ಮಗ, ಸೊಸೆ-ಅಳಿಯ, ಮೊಮ್ಮಕ್ಕಳು ದೊಡ್ಡಮ್ಮ-ದೊಡ್ಡಪ್ಪ, ಚಿಕ್ಕಮ್ಮ-ಚಿಕ್ಕಪ್ಪ, ಅತ್ತೆ-ಮಾವ, ಭಾವ-ಮೈದುನ, ಅತ್ತಿಗೆ-ನಾದಿನಿ ಎಷ್ಟು ಚಂದದ ಬಂದ ಅದು. ಎಲ್ಲರೂ ಎಲ್ಲರನ್ನು ಎಲ್ಲರಂತೆ ಕಾಣುತ್ತಿದ್ದ ಬಂಧನವದು. ಇತ್ತೀಚಿನ ವರುಷಗಳಲ್ಲಿ ಅದು ಅಮ್ಮ ಅಪ್ಪ ಒಂದು ಮಗುವಿಗೆ ಮೀಸಲಾಗುತ್ತಿದೆ. ಅಲ್ಲಿ ಯಾವುದೇ ಬಾಂಧವ್ಯದ ಬೆಸುಗೆಗಳಿಲ್ಲ. ತೊಟ್ಟಿಲು ತೂಗುವ ಅಜ್ಜಿ ಇಲ್ಲ. ಕಥೆ ಹೇಳುವ ಅಜ್ಜನಿಲ್ಲ. ಎತ್ತಿ ಆಡಿಸುವ ಮಾವ ಚಿಕ್ಕಮ್ಮಂದಿರಿಲ್ಲ, ಜೋಪಾನ ಮಾಡುವ ದೊಡ್ಡಮ್ಮನಿಲ್ಲ, ಕೂಡಿ ಆಡಲು ಮೊಮ್ಮಕ್ಕಳ ಸಮೂಹವಿಲ್ಲ ಬೇಸಿಗೆ ರಜೆಯೇ ಸಾಕಾಗದಷ್ಟು ನೆಂಟರ ಮನೆಗಳು ಈಗ ಅದ್ಯಾವುದು ಇಲ್ಲ. 'ಭೂತ' ಕಥೆ ಅಂತ ಒಂದು ಮಧುರ ನೆನಪುಗಳನ್ನು ಮರುಕಳಿಸುವ ಕಥೆ ಮಾತ್ರವಲ್ಲದೆ ವರ್ತಮಾನದ ಕಥೆಯೂ ಆಗಿದೆ.

ಇಲ್ಲಿ ಭೂತ ಭಯ ಹುಟ್ಟಿಸುವ ದೆವ್ವವಾಗಿ ಕಾಣಿಸಿಕೊಳ್ಳದೆ ಕಳೆದು ಹೋದ ಭೂತಕಾಲದ ನೆನಪಾಗಿ ಕಾಣಿಸುತ್ತದೆ. ತನ್ನ ಬಾಲ್ಯದಲ್ಲಿ ದೊಡ್ಡಮ್ಮನ ಮನೆಗೆ ಬರುವ ಮೀರ ದೊಡ್ಡಮ್ಮನ ಮಗಳು ಪಾರ್ವತಿಯ ಜೊತೆಗೆ ಒಂದು ಸುಮಧುರ ಬಂಧವನ್ನು ಬೆಸೆದುಕೊಳ್ಳುತ್ತಾಳೆ. ಪಾರ್ವತಿಯ ಧೈರ್ಯ, ಕೆಲಸ ತನ್ನೊಂದಿಗೆ ಆತ್ಮೀಯವಾಗಿ ಸಂತೈಸುವ ರೀತಿಯಿಂದ ಪಾರ್ವತಿಯ ಬಗೆಗೆ ಒಂದು ಆಕರ್ಷಣೆ ಕುತೂಹಲವನ್ನು ಬೆಳೆಸಿಕೊಳ್ಳುತ್ತಾಳೆ.

ಆವರಣವೇ ಇಲ್ಲದ ಕಲ್ಲೂಕಟ್ಟೆರದ, ಆಚೆಗೊಂದು ಈಚೆಗೊಂದು ಬಾಗಿನಿಂತ ಗೂಟ. ಮಧ್ಯಸಿಕ್ಕಿಸಿದ ಕೋಲು, ಕೋಲಿನಲ್ಲಿ ರಾಟೆ, ಕೆಲವು ಬಾವಿಗೆ ರಾಟೆಯೇ ಇಲ್ಲದ ಬಾವಿಯಿಂದ ನೀರು ಎತ್ತುತ್ತಿದ್ದ ಪಾರ್ವತಿ, ಎರಡು ಮೂರು ಹಾವುಗಳನ್ನು ಕಂಡರೂ ಭಯವೆ ಇಲ್ಲದೆ ಹಾವಲ್ಲ ಅದು ಕೇರೆ ಎಂದಳು.

ಆಯಾಸವೇ ಇಲ್ಲದಂತೆ ಮಾಡುತ್ತಿದ್ದ ಕೆಲಸಗಳು ಒಮ್ಮೆ ಕವುಚಿ, ಒಮ್ಮೆ ಅಂಗಾತನೆ ಹಾಯಾಗಿ ನೆಲದ ಮೇಲೆ ನಡೆಯುವುದಕ್ಕಿಂತಲೂ ಸಲೀಸಾಗಿ ಪಾರ್ವತಿ ಈಜುತ್ತಿದ್ದಳು. ದೋಟಿಗಿಂತಲೂ ಎತ್ತರವಾಗಿ ಅಡಿಕೆ ಮರವನ್ನು ಮೀರಿ ನನಗೆ ಯಾವತ್ತೂ ಎಟುಕದವಳು ಎಂಬ ಗಟ್ಟಿಗಟ್ಟಿದ ಗೌರವದಿಂದ ಆ ಪುಟ್ಟ ಕಣ್ಣುಗಳಲ್ಲಿ ಸೆರೆಯಾಗಿದ್ದಳು ಪಾರ್ವತಿ.

ಈಗ ಮೀರಳಿಗೂ ಮದುವೆಯಾಗಿದೆ ತನ್ನೆರಡು ಮಕ್ಕಳಿಗೆ ದೊಡ್ಡಮ್ಮನ ಊರು ತೋರಿಸಬೇಕೂಂತ ಆಸೆಯಾಗಿ ಅಮ್ಮನನ್ನು ಕರೆದುಕೊಂಡು ಹೋಗುತ್ತಾಳೆ. ಬಸ್ಸಿನಲ್ಲಿ ಅಮ್ಮ ಪಾರ್ವತಿ ಈಗ ಮನೆಯಲ್ಲೆ ಇರುವುದಾಗಿ ಹೇಳುತ್ತಾಳೆ. ಪಾರ್ವತಿ ಅದೆಷ್ಟು ಕಷ್ಟದ ಜೀವ. ತನ್ನ ಬಾಲ್ಯದಲ್ಲಿ ಆಕೆಯನ್ನು ಕಂಡಾಗ ಅದೆಷ್ಟು ಎತ್ತರವೆನಿಸಿದ್ದಳು. ಮನೆಗೊಬ್ಬ ಪ್ರಾಯ ಬಂದ ಮಗನಂತಿದ್ದಳು ಪಾರ್ವತಿ. ಏತದಿಂದ ನೀರು ಮೊಗೆ ಮೊಗೆದು ತೋಟಕ್ಕೆ ನೀರು ಬಿಡುತ್ತಿದ್ದಳು. ಕೆಲಸದವರೆಲ್ಲ ದೊಡ್ಡಪ್ಪಯ್ಯನ ಮಾತಿಗಿಂತ ಪಾರ್ವತಿಯ ಮಾತಿಗೇ ಹೆಚ್ಚು ಬೆಲೆ ಕೊಡುವವರಂತೆ ದೊಡ್ಡಮ್ಮ ಹೇಳುತ್ತಿದ್ದಳು. ಅವಳು ನಿಂತು ಕೆಲಸ ಮಾಡಿದವಳೆಂದರೆ ಅದು ಸರಿಯಾಯಿತೆಂದೇ ಲೆಕ್ಕ. ಆ ಸಪೂರ ದೇಹದಲ್ಲಿ ಇರುವ ಸಾಮರ್ಥ್ಯ ಎಣಿಕೆಗೆ ಸಿಕ್ಕದ್ದು. ಅಲ್ಲಿನ ಬದುಕು ಶಾಂತವಾಗಿತ್ತು. ಆದರೆ, ಈಗ ಪಾರ್ವತಿ ತನ್ನೆಲ್ಲ ಧೈರ್ಯವನ್ನು ಉಡುಗಿಸಿಕೊಂಡವಳಂತೆ ತವರಿಗೆ ಬಂದು ಕೂತಿದ್ದಾಳೆ. ಈಗಾಗಲೇ ಮದುವೆಯಾಗಿದ್ದ ಗಂಡನ್ನು ಮದುವೆಯಾಗಿದ್ದ ಪಾರ್ವತಿ ಎರಡು ಮಕ್ಕಳ ತಾಯಿ. ನಾಕು ದಿನಕ್ಕಂತ ಇಲ್ಲಿಗೆ ಕಳುಹಿಸಿದವ ನಾಪತ್ತೆಯಾಗಿದ್ದಾನೆ. ಮತ್ತೊಂದು ಮದುವೆಯಾಗಲು ಹೋಗಿರಬೇಕು ಎಂದು ಮಾತು ಮುಗಿಸಿದ್ದರು.

ಒಂದು ಅಪರಾಧದ ತನಿಖೆ ಕಥೆಯಲ್ಲಿ ಗಂಡನಮನೆ ಬಿಟ್ಟು ಬಂದ ಕುಸುಮಳನ್ನು ಮನೆ ಕೆಲಸದ ಹೆಂಗಸು ಬಾಬಿ ನೂರೆಂಟು ಪ್ರಶ್ನೆಗಳನ್ನು ಕೇಳುತ್ತಾಳೆ. ಮಗಳು ಮನೆಗೆ ಬಂದು ಕುಳಿತಿದ್ದರ ಬಗ್ಗೆ ತಾಯಿಗೆ ಸಾಕಷ್ಟು ಬೇಸರಿಕೆ ಇದೆ. ಆದರೆ ಈ ಕಥೆಯಲ್ಲಿ ದೊಡ್ಡಮ್ಮ ಪಾರ್ವತಿಯ ಈ ಸ್ಥಿತಿಗೆ ಮರುಕುವುದಿಲ್ಲ. ಮರ್ಯಾದೆಗೆ ಅಂಜುವುದಿಲ್ಲ ಎಷ್ಟು ಸಹಜವಾಗಿ ತೆಗೆದುಕೊಳ್ಳುತ್ತಾರೆ.

"ಪಡೆದದ್ದು ಉಂತಿಯ ದುಡಿದದ್ದ" ಅಂತ ಗಾದೆಯೇ ಉಂಟಲ್ಲ ಪಡೆದದ್ದು ಉಣ್ಣದೆ ಹೋಪುಕಾತ್ತ? ಅವಳು ಮದುವೆ ಆಯಿಂಡು ಹೋದ ಮೇಲೆ ಗದ್ದೆ ತೋಟ ಕೇಳ್ತವರಿಲ್ಲದ ಹಂಗಿತ್ತು. ಈಗ ಗಂಡು ಗಂಡಸು ಮನೆಯಲ್ಲಿದ್ದ ಹಾಗೆ ಆಯಿತಲ್ಲ. ಒಬ್ಬ ಮಗ ಇದ್ದಿಪ್ಪರೆ ಇರ್ತಿರಲ್ಲಯ?"[11]

ಈಗಲೂ ಒಮ್ಮೊಮ್ಮೆ ಪಾರ್ವತಿಯ ಗಂಡ ಎನಿಸಿಕೊಂಡವ ಬರುವುದುಂಟಂತೆ ಆದ್ರೆ ದೊಡ್ಡಮ್ಮ ಒಳ ಸೇರಿಸುವುದಿಲ್ಲ. ಮೊನ್ನೆ ಒಂದುದಿನ ಪಾರ್ವತಿಯೇ ಹಿಡಿಕಟ್ಟು ಹಿಡಿದು 'ಹೋತೆಯ ಇಲ್ಲ ಪೂಜೆ ಮಾಡಗ' ಅಂದ್ ಕಾಳಿ ಅವತಾರ ಮಾಡಿದಳು ಧೈರ್ಯಸ್ಥೆ, ಮಹಾಧೈರ್ಯಸ್ಥೆ, ಮತ್ತೆಂತದಿಯ? ಪಾಪ ಅಂದ್ ಬಿಟ್ಟರೆ ನಾಳೆ ತಲೆ ಕೊಡ್ತವರು ಯಾರು?

ದೊಡ್ಡಮ್ಮ ಹೇಳುತ್ತಿದ್ದದು ಹೀಗೆ 'ಅದಕ್ಕೆ ಬೇಜಾರವೆ? ಅದಕ್ಕೆ ಮದುವೆ ಆದ ಹಾಗೂ ಇಲ್ಲ, ಆಗದಂಗೂ ಇಲ್ಲ. ಒಂದು ದಿನ ಹಿಂಗಾಯಿತು ತನ್ನ ಕಥೆ ಎಂದು ಅದು ಕಣ್ಣಲ್ಲಿ ನೀರು ಹಾಕಿದ್ರೆ ಹೇಳು. ಒಂದು ಜಾತಿ ಭೂತ ಅದು!' ಆ ಕ್ಷಣಕ್ಕೆ ಪಾರ್ವತಿ ಹೊದಿಕೆಯೊಳಗೆ ಮೂಗೊರೆಸಿಕೊಂಡಂತೆನಿಸುತು ಆದರೆ ಮತ್ತೆ ಸ್ವಲ್ಪ ಹೊತ್ತಿನಲ್ಲಿ ತಲೆಯವರೆಗೆ ಮುಸುಕೆಳೆದುಕೊಂಡು ಮಗ್ಗಲು ಮಗುಚಿ ಮಲಗಿಕೊಂಡಳು.

ಜೀವನದ ಎಂಥದ್ದೆ ಕ್ಷಣದಲ್ಲೂ ಧೈರ್ಯಗೆಡದೆ ಮಗ್ಗಲು ಬದಲಿಸಿದಷ್ಟೆ ಸಹಜವಾಗಿ ಬದುಕನ್ನು ಎದುರಿಸಿದ ಪಾರ್ವತಿಯ ಜೀವಂತ ಚಿತ್ರಗಳನ್ನು ಕಟ್ಟಿಕೊಡುವ ಲೇಖಕಿ 'ಭೂತಕಾಲ' ವ್ಯಕ್ತಿಯ 'ವರ್ತಮಾನ'ವನ್ನು ನಿರ್ಧರಿಸುತ್ತದೆ ಎಂಬುದನ್ನು ಈ ಕಥೆಯಲ್ಲಿ ಸಮರ್ಥವಾಗಿ ಕಟ್ಟಿಕೊಡುತ್ತಾರೆ. ಬಾಲ್ಯದ ಸ್ಮೃತಿಗಳ ನೆನಕೆಯ ಜೊತೆಗೆ ಕಾಲಪ್ರವಾಹದಲ್ಲಿ ರೂಪುಗೊಂಡ ವಿವೇಕದ ಸ್ವರೂಪವನ್ನ ನೆನಪಿನ ಸರಣಿಯಲ್ಲಿ ಧ್ಯಾನಸ್ಥವಾಗಿ ಅರಿಯುವ ಒಂದು ವಿಧಾನ ಈ ಕಥೆಯಲ್ಲಿದೆ.

ಮಾನವೀಯ ಸಂಬಂಧಗಳನ್ನು, ಕೌಟುಂಬಿಕ ಚಿತ್ರಣಗಳನ್ನು ನಾಗವೇಣಿ ಕಟ್ಟಿಕೊಡುವ ರೀತಿಯಲ್ಲಿ ಸಾಕಷ್ಟು ವಿಭಿನ್ನತೆಯಿದೆ. ಅವರ 'ಗಾಳ' ಕಥೆಯ ಮೂಡೂರ ತಾನು ಒಬ್ಬ ಮನುಷ್ಯನಂತೆ ಬದುಕಬೇಕೆಂದು ಕೊಂಡವನು. ಹಾಗಾಗಿ ಶೆಟ್ಟರ ಗಟ್ಟದಲ್ಲಿರುವ ಆಸ್ತಿಯ ಉಸ್ತುವಾರಿ ನೋಡಿಕೊಂಡು ಅಷ್ಟಿಷ್ಟು ಹಣ ಸಂಪಾದನೆ ಮಾಡಲು, ತಾನು ತುಂಬ ಪ್ರೀತಿಸುವ ಹೆಂಡತಿ ಚಿನ್ನಮ್ಮನನ್ನು ತನ್ನೊಂದಿಗೆ ಕರೆದುಕೊಂಡು ಹೋದರೆ ತನ್ನ ತಮ್ಮ ಬೇಚನಿಗೆ ಬೇಯಿಸಿ ಹಾಕೋರು ಯಾರು ಇಲ್ಲ ಎಂದು ಚಿನ್ನಮ್ಮನನ್ನು ಬೇಚನ ಉಸ್ತುವಾರಿಯಲ್ಲಿ ಬಿಟ್ಟು ಹೋಗುತ್ತಾನೆ.

ಹೆಚ್ಚು ಕಡಿಮೆ ಒಂದು ವರ್ಷದ ನಂತರ ಗಟ್ಟ ಇಳಿದು ಬಂದ ಮೂಡೂರನಿಗೆ ತನ್ನ ಚಿನ್ನಮ್ಮ ಬಸಿರಾಗಿರುವ ವಿಷಯ ಕೇಳಿ ಅಪರಮಿತ ಸಂತಸದ ಜೊತೆಗೆ ಆತಂಕವನ್ನು ತರುತ್ತದೆ. ಅವನ ಆತಂಕಕ್ಕೆ ಕಾರಣ ಮುಡೂರನ ಲೆಕ್ಕದ ಪ್ರಕಾರ ಚಿನ್ನಮ್ಮನ ಹೊಟ್ಟೆಗೆ ಹತ್ತು ತಿಂಗಳು ದಾಟಿ ಹೋಗಿದೆ ಎಂದು.

ತಾನು ಗಟ್ಟಿ ಹತ್ತುವಾಗ ಚಿನ್ನಮ್ಮನನ್ನು ಬಿಟ್ಟು ಹೋಗಲೇ ಬಾರದಿತ್ತು. ತನ್ನ ಬೇಚ ಚಿನ್ನಮ್ಮನ ಮೇಲೆ ತೋರಿದ ಕಾಳಜಿಯಾದರೂ ಎಂಥದ್ದು? ಆ ಜುಮಾದಿಯ ದಯೆಯಿಂದ ಈ ಬಾರಿ ಆಕೆ ಬದುಕುಳಿದರೆ ಸಾಕು; ಮತ್ತೆಂದೂ ಆಕೆಗೆ ಹೊಟ್ಟೆಯೇ ಬೇಡ ಎಂದು ದುಃಖಿಸುತ್ತಿದ್ದ ಮೂಡೂರ – ಪಶ್ಚಾತ್ತಾಪದ ಬೇಗುದಿಯಲ್ಲಿ ನರಳುತ್ತಾನೆ. ಇಂಥದೊಂದು ಸ್ಥಿತಿಯಲ್ಲಿಯೂ ತನ್ನ ಚಿನ್ನಮ್ಮನನ್ನು ಯಾವ ಧರ್ಮಾಸ್ಪತ್ರೆಗೆ ಕೊಂಡೊಯ್ಯಲಿ ಎಂಬ ಚಿಂತೆ ಆತಂಕದಲ್ಲಿದ್ದ ಮೂಡೂರ ಚಿನ್ನಮ್ಮ ಹೆರುವವರೆಗೂ ಯಾರಿಗೂ ಮುಖ ತೋರಿಸದೆ ಅವಮಾನದ ಬೇಗುದಿಯಲ್ಲಿ ಬೇಯುತ್ತಿದ್ದ ಮುಡೂರ ಚಿನ್ನಮ್ಮ ಹೆತ್ತ ಗಂಡು ಮಗುವನ್ನು ಕಂಡು ತನ್ನೆಲ್ಲ ನೋವನ್ನು ಮರೆತವನಂತೆ ಸಂತೋಷಗೊಳ್ಳುತ್ತಾನೆ. ಶೆಟ್ರಲ್ಲಿ ಈ ವಿಚಾರವನ್ನು ತುಂಬ ಸಂತಸದಿಂದಲೇ ಹೇಳಿಕೊಳ್ಳುತ್ತಾನೆ ಮುಡೂರನಿಗೆ ಅವನ ಸಂಬಂಧಗಳೇ ಮುಖ್ಯವಾಗುವುದನ್ನ ಕಥೆ ಹೇಳುತ್ತದೆ.

ಮನುಷ್ಯ ಸಂಬಂಧಗಳಲ್ಲಿ ದಾಂಪತ್ಯವು ನವಿರಾದ ಒಂದು ಬಿಡಿಸದ ಬಂಧ ಎಂಬುದನ್ನು ಸವಿಗೀತ ಕಥೆಯ ಮೂಲಕ ತುಂಬ ಚೆನ್ನಾಗಿ ಹೇಳುತ್ತಾರೆ. ಬಯಲು ಸೀಮೆಯ ಬಡಕವಿ ಬೇಂದ್ರೆ ಬದುಕಿನ ಘಟನೆಯನ್ನ ಲೇಖಕಿ ಇಲ್ಲಿ ಸವಿಗೀತವಾಗಿಸಿದ್ದಾರೆ.

ಆಧುನಿಕತೆ ಎಂಬ ಜಂಜಾಟದಲ್ಲಿ ಸಿಲುಕಿ ದಾಂಪತ್ಯದಲ್ಲಿ ಸ್ವಾರಸ್ಯವೇ ಕಳೆದು ಹೋಗುತ್ತಿರುವ ಈ ಹೊತ್ತಲ್ಲಿ ಅದರ ಸೌಂದರ್ಯದ ಸವಿಯನ್ನು ನೀಡುವ ಕವಿದಂಪತಿಗಳ ಪ್ರೀತಿ ಅನನ್ಯವಾದದ್ದು, ಮನಸ್ಸುಗಳು ಬಯಸುವಂತೆ ಎರಡು ಹೃದಯಗಳು ಹಂಬಲಿಸುತ್ತವೆ. ಸಂಸಾರದೊಳಗಿನ ನಂಬಿಕೆ ಒಂದಕ್ಕೊಂದು ಹೊಂದಿಕೊಂಡು ಹೋಗುವ ರೀತಿ ಎಲ್ಲವು ಇಲ್ಲಿದೆ.

ಜೀವನ ಸಂಧ್ಯಾಕಾಲದಲ್ಲಾದರೂ ಉಡುಪಿಯ ಶ್ರೀಕೃಷ್ಣನ ದರ್ಶನ ಮಾಡಬೇಕೆಂದು ಆಸೆ ಪಡುವ ಕವಿ ಪತ್ನಿ. ಹಾಳು ಬಡತನದಿಂದಾಗಿ ಹೆಂಡತಿಯ ಆಸೆ ಪೂರೈಸಲಾಗದೆ ಕವಿ ಮನಸ್ಸು ಪಡುವ ಯಾತನೆ ನಿಜಕ್ಕೂ ಮನಸ್ಸನ್ನು ಮುದುಡಿಸುತ್ತದೆ. ಉಡುಪಿ ಕೃಷ್ಣಮಠದಲ್ಲಿ ಏರ್ಪಾಡಾಗಿದ್ದ ಕಾವ್ಯಗೋಷ್ಠಿಗೆ ಗಟ್ಟದ ಮೇಲಿನ ಈ ಗಾರುಡಿಗನನ್ನೆ ಮುಖ್ಯಸ್ಥನನ್ನಾಗಿ ಆಹ್ವಾನಿಸಿದಾಗ ಕೃಷ್ಣದರ್ಶನ ಮಾಡುವ ಅವಕಾಶ ಕಾಲಬುಡಕ್ಕೆ ಬಂದಿದೆ ಎನಿಸಿದಾಗ ಹೆಂಡತಿಯ ಆಸೆಯಂತೆ ತನ್ನೊಂದಿಗೆ ಕರೆದೊಯ್ಯುವ ಮನಸ್ಸು ಮಾಡುತ್ತಾರೆ. ಆದರೆ ಕವಿಯನ್ನು ಕರೆದೊಯ್ಯಲು ಬಂದ ಕಾರಿನಲ್ಲಿ ಕವಿಗೆ ಸರಿಯಾದ ಸ್ಥಳವಾಕಾಶಗಳು ಇಲ್ಲದಿದ್ದಾಗ ಮನಸೊಂದು ಬಿಟ್ಟು ಹೋಗುತ್ತಾರೆ. ಆಸೆಯನ್ನು ಬರಿ ಆಸೆಯಾಗಿಯೇ ಉಳಿಸಿಕೊಂಡು ಹೋದ ಆ ಹೆಣ್ಣು ಜೀವ ಗಂಡನಿಗಾಗಿ ಉಳಿಸಿ ಹೋದ ಪ್ರೀತಿ ಬಹಳವಾಗುತ್ತದೆ. ಪತ್ನಿಯ ಮರಣ ನಂತರ ಕವಿಗೆ ಮತ್ತೊಮ್ಮೆ ಉಡುಪಿಗೆ ಹೋಗುವ ಅವಕಾಶ ಬಂದಾಗಿತ್ತು ಆದರೆ ಕವಿಗಳಿಗೆ

ಎದೆಯಲ್ಲಿ ಎಳ್ಳಷ್ಟು ಸಂತಸವಿಲ್ಲ ಮಣ್ಣಾದ ಪತ್ನಿಯನ್ನು... ಆಕೆಯಾಸೆಯನ್ನು ಕ್ಷಣ ಕ್ಷಣಕ್ಕೂ ಕವಿ ಚಿತ್ತಕ್ಕೆತ್ತಿತಂದು ಕವಿಯ ಮುದಿ ಕಣ್ಣಲ್ಲಿ ಸಾಕಷ್ಟು ನೀರ ಮುತ್ತುಗಳನ್ನು ಉರುಳಿಸಿದರು ಕವಿಗಳಿನ್ನು ಸಿದ್ದರಾಗಿಲ್ಲ ಅವರು ಅದೇನೋ ಮಹತ್ತರವಾದ ಹತಾರಿನ (ವಸ್ತುವಿನ) ಹುಡುಕಾಟದಲ್ಲಿದ್ದರು.

"ಕವಿಗಳ ಕಣ್ಣಲ್ಲಿ ಧಾರಕಾರವಾಗಿ ನೀರಿಳಿಯತೊಡಗಿತ್ತು. ಈ ಬಾರಿ ಕಡಲ ಜಿಲ್ಲೆಗೆ ಹೊರಡುವಾಗ ಪತ್ನಿ ಜತೆಗಿಲ್ಲದಿದ್ದರೂ ಆಕೆಯಷ್ಟೆ... ಆಕೆಯ ಮೊಗದಷ್ಟೇ ಪ್ರಿಯವಾಗಿದ್ದ ಆಕೆಯ ಚಾಳೀಸನ್ನು ತುಳುವ ಜಿಲ್ಲೆಗೆ ಕೊಂಡೊಯ್ದು ಅದಕ್ಕೆ ಕೃಷ್ಣದರ್ಶನ ಮಾಡಿಸುವ ಮೂಲಕ ಆಕೆಗೇ ಕೃಷ್ಣದರ್ಶನ ಮಾಡಿಸಿದೆನೆಂಬ ಆತ್ಮತೃಪ್ತಿಪಟ್ಟುಕೊಳ್ಳಲು ಭಾವುಕ ಕವಿಗಳು ನಿರ್ಧರಿಸಿದ್ದರು."[೪೫]

ಈ ಮನುಷ್ಯ ಜನ್ಮವೇ ಹಾಗೆ ಅನಿಸುತ್ತದೆ. ಇದ್ದಾಗ ಬಯಸದ್ದನ್ನು ಇಲ್ಲದಾಗ ಬಯಸುತ್ತೆ, ಸಾಯುವ ಕೊನೆ ಕ್ಷಣದವರೆಗೂ ಬೇಡದವನು ಕೆಟ್ಟವನಾದವನು ಸತ್ತ ಮರುಕ್ಷಣದಲ್ಲೇ ಬೇಕೆನಿಸಿಕೊಳ್ಳುತ್ತಾನೆ, ತುಂಬಾ ಒಳ್ಳೆಯವನಾಗಿ ಬಿಡುತ್ತಾನೆ. ಇಂಥದೊಂದು ಸನ್ನಿವೇಶವನ್ನು ತಾಯ್ತನ ಕಥೆಯಲ್ಲಿ ಕಾಣಬಹುದಾಗಿದೆ.

ಮುಂಜಾನೆ ಮ್ಯೊದಿನ್‌ಬ್ಯಾರಿಯವರು ಇಹಲೋಕ ತ್ಯಜಿಸಿರುವ ಸುದ್ದಿ ಕೇಳಿ ಕೇರಿ ಮಂದಿಯೆಲ್ಲ ಜೀವ ಹಿಂಡಿಕೊಂಡು ಹನಿಗಣ್ಣಾಗಿದ್ದಾರೆ. ಅಂದು ಕೊಳ್ಳಿ-ಕೊಡಲಿ ಹಿಡಿದಿದ್ದ ಕೈಗಳೆಲ್ಲ ಇಂದು ಮ್ಯೊದಿನ್‌ಬ್ಯಾರಿಯವರಿಗಾಗಿ ಅತ್ತು ಕಣ್ಣೊರಸಿಕೊಳ್ಳುತ್ತಿವೆ. ಅದೆಷ್ಟೋ ವರ್ಷಗಳಿಂದ ಮುಸ್ಲಿಂ ಕುಟುಂಬದೊಂದಿಗೆ ಯಾವೊಂದು ಭೇದವಿಲ್ಲದೆ ಅಣ್ಣತಮ್ಮಂದಿರಂತೆ ಸಾಮರಸ್ಯದಿಂದ ಬದುಕು ಸಾಗಿಸುತ್ತಿದ್ದ ಆ ಕೇರಿಯ ಶೂದ್ರ ಮಂದಿಯ ಎದೆಯೊಳಗೆ ಯಾರೋ ಕಿಡಿಗೇಡಿ ಮನೆಮುರುಕರು ಜಾತಿ ಮತದ ಭೂತವೊಂದನ್ನು ಹೊಗಿಸಿ ಬಿಟ್ಟಿದ್ದು, ಮೊನ್ನೆ ಮೊನ್ನೆ ಇನ್ನಿಲ್ಲದ ರಾದ್ಧಾಂತಕ್ಕೆ ಎಡೆಮಾಡಿಕೊಟ್ಟಿತ್ತು.

ಒಂದುಕಡೆ ಮ್ಯೊದಿನ್‌ಬ್ಯಾರಿಯವರ ಶವದ ಯಾತ್ರೆ ಸಿದ್ಧವಾಗಿದೆ. ಈ ಕಡೆ ತುಕ್ರ ಮ್ಯೊಲಿಯ ಗುಡಿಸಲಲ್ಲಿ ತುಂಬು ಬಸರಿ ಸುಂದರಿಗೆ ಹೆರಿಗೆ ನೋವು ಕಾಣಿಸಿಕೊಂಡಿದೆ. ಆ ಕೇರಿಯಲ್ಲಿರುವ ಪ್ರಸೂತಿ ಪ್ರವೀಣೆ ಪದೆತಿ (ಸೂಲಗಿತ್ತಿ) ಎಂದರೆ ಐಸಂಬ್ಯಾರಿ ಒಬ್ಬರೇ. ನಂಬಿಕೊಂಡು ಬಂದಿರುವ ಧರ್ಮ – ಕರ್ಮದ ಕಟ್ಟುಪಾಡು ಏನಾದರೂ ಇರಲಿ, ಪ್ರಾಣ ಉಳಿಸುವ ಪುಣ್ಯದ ಕೆಲಸಕ್ಕೆ ಮನುಷ್ಯತ್ವದ ವಿಚಾರಕ್ಕೆ ಮಾತ್ರ ಎಂದೆಂದೂ ಆ ಕಟ್ಟುಪಾಡುಗಳು ಅಡ್ಡಬರದಂತೆ ನೋಡಿಕೊಂಡ ಜೀವ ಐಸಂಬ್ಯಾರಿಯವರದು. ಮ್ಯೊದಿನ್‌ಬ್ಯಾರಿಯವರು ಈ ವಿಚಾರದಲ್ಲಂತೂ ಮಡದಿಯ ಪರ ವಹಿಸಿದವರು ಐಸಂಬ್ಯಾರಿ ಇದ್ದತ್ ವಿಧಿಯಲ್ಲಿರುವಾಗಲೇ ತುಕ್ರಭಂಡಾರಿ, ಸುಂದರಿಯ ಹೆರಿಗೆ ನೋವಿನ ಸುದ್ಧಿ ತಿಳಿಸಿದ್ದ. ತಾನು ಇಲ್ಲಿ ಗೋಳಾಡಿದರೆ ಅಲ್ಲಿ

ಸಾಯುತ್ತಿರುವ ತಾಯಿ ಮಗುವನ್ನು ಬದುಕಿಸಲಾದೀತೆ? ಎಂಬ ಸತ್ಯವೂ ಐಸಮ್ಮನವರನ್ನು ಕಾಡದಿರಲಿಲ್ಲ.

ವಾರದ ಹಿಂದೆ ಕೇರಿಯವರು ನಡೆದುಕೊಂಡ ರೀತಿಯಂತೆ ಇಂದು ಐಸಂಬ್ಯಾರ್ದಿ ನಡೆದುಕೊಂಡಿದ್ದರೆ ಸುಂದರಿಯ ಕಥೆ ಏನಾಗುತ್ತಿತ್ತು. ಆದರೆ ಆಕೆಗೆ ಮನುಷ್ಯತ್ವ ಮುಖ್ಯವಾಗಿತ್ತು. ಜೀವದೊಡ್ಡದು... ಬದುಕು ಅದಕ್ಕಿಂತ ಬಲು ದೊಡ್ಡದು... ಸಂಪ್ರದಾಯ ಅದಕ್ಕಿಂತೇನು ದೊಡ್ಡದಲ್ಲ ಎಂದು ತನ್ನ ಗಂಡ ಯಾವತ್ತೂ ಹೇಳುತ್ತಿದ್ದ ಮಾತುಗಳನ್ನ ಐಸಂಬ್ಯಾರ್ದಿ ಮತ್ತೊಮ್ಮೆ ಮನದಟ್ಟು ಮಾಡಿದ್ದಳು.

ಮಾನವೀಯ ಸಂಬಂಧಗಳನ್ನು ಹೇಳುವ ಮತ್ತೊಂದು ಕಥೆ 'ಜೀವಸೆಲೆ'. ಕೈರಿಕ್ಷಾ ಎಳೆಯುವ ಭಾವತಾರಣ, ಸೂಳೆಗೇರಿಯ ಬಿಂದುವಾಸಿನಿ ಹದಿನೆಂಟರ ಸುಂದರಿಯನ್ನ ತನ್ನ ಬದುಕಿನ ಜೀವಸೆಲೆಯೆಂದೇ ಆಯ್ದುಕೊಂಡಿದ್ದ. ಹೇಗಾದಾರೂ ಮಾಡಿ ಆಕೆಯನ್ನು ತನ್ನ ಪ್ರೀತಿಯ ವರ್ತುಲದಲ್ಲಿ ಕಠಿಣವಾಗಿ ಬಂಧಿಸಿಬಿಡಬೇಕೆಂದು ಪಡುವ ಪಾಡು ಅಷ್ಟಿಷ್ಟೇನು? ಮನುಷ್ಯತ್ವದ ಘನತೆಗಾಗಿ ತುಡಿಯುವ ಭಾವತಾರಣ ಆಕೆಯಲ್ಲಿ ಜಡಗಟ್ಟಿರುವ ಸ್ತ್ರೀ ಸಹಜ ಸಂವೇದನೆಯನ್ನು ಮೊನಚುಗೊಳಿಸಿ ಬದುಕಿನ ವೈರುಧ್ಯ ಮತ್ತು ಕನಸುಗಳಿಗೆ ಹೊಸ ಜಾಗೃತಿಯ ಸ್ಪಂದನ – ಪುಳಕವನ್ನುಂಟು ಮಾಡಲು ಪ್ರಯತ್ನಿಸಿದ್ದ.

"ದಿನವಿಡೀ ಎತ್ತಿನಂತೆ ದುಡಿವ ಈ ಪ್ರೀತಿಯ ಜೀವ ತನಗಾಗಿ ಯಾಕೆ ಇಷ್ಟೊಂದು ತುಡಿಯುತ್ತಿದೆ ಎಂದು ಆಕೆಗೇನು ತಿಳಿದಿದೆ? ಇದುವರೆಗೆ ಈ ಹಠಮಾರಿ ಭಾವತಾರಣ ಆತನಿಗಾಗಿ ಎಂದೂ ಬದುಕಲೇ ಇಲ್ಲ ಎಂಬುದು, ಆತ ಈಗ ಬದುಕುತ್ತಿರುವುದಾದರೂ ಅದು ಬಿಂದುವಾಸಿನಿಗಾಗಿ ಮಾತ್ರ".[೪೬]

ವೇಶ್ಯಾವೃತ್ತಿ ನಡೆಸುತ್ತಿದ್ದ ಹರಿಪ್ರಿಯ ಖುಟ್ಯಾಳಿಗೆ ಬಿಂದುವಾಸಿನಿ ನದಿತಟದಲ್ಲಿ ಕೈರಿಕ್ಷಾ ವಾಲನಜೊತೆ ಇರುವ ಸುದ್ದಿ ಕೇಳಿ ಭಾನು, ಭುವಿ ಒಂದಾಗುವಂತೆ ಚೀರಾಡುತ್ತ ನೇರ ನದಿತಟಕ್ಕೆ ಬಂದವಳೇ ಭಾವತಾರಣನ ಸಮಾಧಾನದ ಯಾವುದೇ ಮಾತನ್ನು ಕೇಳಿಸಿಕೊಳ್ಳದೆ ಬಿಂದುವಾಸಿನಿಯ ತಲೆಗೂದಲಿಗೆ ಕೈಹಾಕಿ ಧರಧರನೇ ಎಳೆದೊಯ್ದುಳು. ಬಿಂದುವಾಸಿನಿ – ಭಾವತಾರಣರ ನಡುವೆ ಹರಿದಾಡುತ್ತಿರುವ ಮನಸ್ಸಿನ ವ್ಯಾಪಾರಗಳ ಬಗ್ಗೆ 'ನಿರ್ಮಲ ಹೃದಯ'ದ 'ತೆರೆಸಾ' ತಾಯಿಗೆ ಅರಿವಿಲ್ಲದಿರಲಿಲ್ಲ, ಆದರೆ ತಾಯಿಗೆ ಲೌಕಿಕ ಸುಖಗಳಿಗಿಂತ ಅಲೌಕಿಕ ಸುಖಗಳ ಬಗ್ಗೆಯೇ ಹೆಚ್ಚು ನಂಬಿಕೆ, ವಿಶ್ವಾಸ ಆದರೆ ತನ್ನ ನಂಬಿಕೆ – ವಿಶ್ವಾಸವನ್ನು ಇತರರ ನಂಬಿಕೆಗಳ ಮೇಲೆ ಹೇರಲು ಹೊರಡುವ ತಾಯಿ ಆಕೆಯಲ್ಲ.

ಒಮ್ಮೆ ತಾಯಿ ನಿಂತಿರುವ ರಸ್ತೆ ಮುಂದೆಯೇ ಅಳು – ರಂಪಾಟ – ಚೀರಾಟ – ಬಡಿದಾಟ ನಡೆಯುತ್ತಿರುವುದನ್ನು ತಾಯಿ ಮೌನವಾಗಿ ಗಮನಿಸಿದರು. ರಸ್ತೆಯ ಪಕ್ಕಕ್ಕೆ ನಡೆದು ಹರಿಪ್ರಿಯ ಖಿಟ್ಯಾಳಿಯೊಂದಿಗೆ ಮಾತುಕತೆ ನಡೆಸಿದರಂತೆ, ಖಿಟ್ಯಾಳಿಗೆ ತೆರೆಸಾ ತಾಯಿ ಎಂದರೆ ಕಾಳಿ ಮಾತೆಯಷ್ಟೇ ಪೂಜ್ಯ ಭಾವನೆ. ಹಾಗಾಗಿ ಖಿಟ್ಯಾಳಿ ತಾಯಿಯ ಕಾಲಿಗೆ ಬಿದ್ದು ಹಣ ಸ್ವೀಕರಿಸದೆ ಬಿಂದು ವಾಸಿನಿಯನ್ನು ನಿರ್ಮಲ ಹೃದಯಕ್ಕೆ ಕಳುಹಿಸಿಕೊಡುತ್ತಾಳೆ.

ತಾಯಿ ಹಾಗೆ ಬಿಂದುವಾಸಿನಿಯನ್ನು ನಿರ್ಮಲ ಹೃದಯದೊಳಗೆ ಕರೆತಂದವರು ಆಕೆಯ ಹಣೆಗೊಂದು ಪ್ರೀತಿಯ ಮುತ್ತಿಟ್ಟು ಆಕೆಗೆ ಕೈಯ್ಯಾರೆ ಉಣಿಸಿದ್ದರು. ಭಾವತಾರಣನನ್ನು ಬಿಂದುವಾಸಿನಿಯ ಪಕ್ಕದಲ್ಲಿ ನಿಲ್ಲಿಸಿ ಹಾಡತೊಡಗುತ್ತಾರೆ. ತಟ್ಟನೆ ಭಾವತಾರಣನ ಕಣ್ಣಿನಿಂದ ಧುಮುಕಿದ ನೀರನ್ನು ತಾಯಿ ತನ್ನ ಸೆರಗಲ್ಲೇ ಒರಸಿ ಹಣೆಗೊಂದು ಮುತ್ತಿಟ್ಟರು.

ಈ ಮನುಷ್ಯ ಸಂಬಂಧಗಳು ಪ್ರಾಣಿಗಳೊಂದಿಗೆ ಅದರಲ್ಲೂ, ನಿಯತ್ತಿಗೆ ಹೆಸರಾದ ನಾಯಿಯೊಂದಿಗಿನ ಸಂಬಂಧ ಅನಾದಿಕಾಲದಿಂದಲೂ ಬೆಳೆದುಕೊಂಡು ಬಂದಿರುವಂಥದ್ದು. ಎಷ್ಟೋ ಮನೆಗಳಲ್ಲಿ ಮನೆಯ ಒಬ್ಬ ಸದಸ್ಯನಂತೆ ನಾಯಿಯನ್ನ ನೋಡಿಕೊಂಡದ್ದಿದೆ. ನಾಗವೇಣಿಯವರು ಅಂಥ ಒಂದು ನಾಯಿಯನ್ನ ತಮ್ಮ 'ದಾಸಿ' ಕಥೆಯ ಒಂದು ಬಹುಮುಖ್ಯ ಪಾತ್ರವೆಂಬಂತೆ ತರುತ್ತಾರೆ.

ಒಂದು ದಿನ ಪೋಕ ಎಂಬುವನು ಒಂದು ನಾಯಿ ಮರಿಯನ್ನ ತಂದು ರಸ್ತೆ ಬದಿಗೆ ಬಿಟ್ಟುಹೋಗಿದ್ದ. ಆ ಮರಿಯನ್ನ ಇಸಬು – ರತ್ನಿಯ ಮಕ್ಕಳಾದ ಉಂಗ, ಬೂದರು ಮನೆಗೆ ಕರೆತಂದು 'ದಾಸಿ' ಎಂದು ನಾಮಕರಣವನ್ನು ಮಾಡಿದ್ದರು. ಮಕ್ಕಳು ದಾಸಿಯನ್ನು ಸಾಕುವುದನ್ನ ಬಯಸದ ರತ್ನಿ ದಾಸಿಯನ್ನ ಕಡಲೆ ಬದಿಗೆ ಬಿಟ್ಟುಬರುವಂತೆ ಹಠ ಹಿಡಿದಿದ್ದಳು, ಆದರೆ ಇಸಬು ನಾಯಿಮರಿಯ ಗಾಯವಾದ ಕಾಲು ನೆಟ್ಟಗಾಗುತ್ತಲೇ ಜುಮಾದಿಯಾಣೆಯಾಗಿ ಬಿಟ್ಟು ಬರುವುದಾಗಿ ಹೇಳಿದ ಮೇಲೆ ರತ್ನಿ ಆಣೆಯ ಕಾರಣಕ್ಕಾಗಿ ತನ್ನ ಹಠವನ್ನು ಸ್ವಲ್ಪ ಸಡಿಲಿಸಿಕೊಂಡಿದ್ದಳು.

ಬೂದನ ಬಾಯಿಂದ ನಾಯಿ ಮರಿಯ ಅಂದಚಂದದ ವರ್ಣನೆ ಕೇಳಿ ದಾಸಿಯನ್ನು ನೋಡಲು ಬಂದ ನಾಯ್ಕರ ಹೆಂಡತಿ ರುಕುಣಿಯಮ್ಮನನ್ನ ರತ್ನಿ ಅವಮಾನಿಸಿದ್ದಳು.

ಮುದ್ದು ಮರಿ ಬಿಡೋದಕ್ಕೆ ನಿಂಗೆ ಮನಸ್ಹೇಗೆ ಬರುತ್ತ್ಯೇನೆ ರತ್ನೀ ಎಂದು ರುಕುಣಿಯಮ್ಮ ರತ್ನಿಯನ್ನ ಸಹಜವಾಗಿ ಪ್ರಶ್ನಿಸಿದಾಗ – 'ರುಕುಣಿಯಮ್ಮ ನಿಮಗ್ಹೇಗೂ ಮಕ್ಕಳು ಮರಿಗಳಿಲ್ಲ,

ಅದನ್ನ ನೀವೇ ಸಾಕಿಬಿಡಿ; ನಿಮಗೊಂದು ಮಗಳಾಯ್ತು' – ರತ್ನಿ ವ್ಯಂಗ್ಯ ಬೆರೆತ ಸಿಟ್ಟನ್ನು ಕ್ಷಣಮಾತ್ರದಲ್ಲಿ ಕಾರಿಕೊಂಡು ಬಿಟ್ಟಿದ್ದಳು.

ಆ ಮಾತಿನಿಂದ ಅವಮಾನಗೊಂಡ ರುಕುಣಿಯಮ್ಮ ಅದೇ ದಾಸಿಯನ್ನ ಸಾಕುತ್ತಾಳೆ. ದಾಸಿಯ ಮರಿಯನ್ನು ಸಾಕುವ ಮನಸ್ಸು ಮಾಡಿದ ರತ್ನಿ ತನ್ನ ಮಕ್ಕಳಲ್ಲಿ ಮರಿಕೊಡುವಂತೆ ಅಪ್ಪ ಹೇಳಿದನೆಂದು ಹೇಳಿಕಳಿಸುತ್ತಾಳೆ. ಆದರೆ ರುಕುಣಿಯಮ್ಮ 'ಮರಿಗಳನ್ನ ಬೇರೆಯವರಿಗೆ ಹೇಳಿಯಾಗಿದೆ, ಹೆಣ್ಣು ಮರಿ ಇದ್ದಿದ್ದರೆ ನಿನ್ನಪ್ಪನಿಗೆ ಕೊಟ್ಟೇ ಕೊಡುತ್ತಿದ್ದೆ, ಪಾಪ ಆತನಿಗೂ ಹೆಣ್ಣು ಮಕ್ಕಳಿಲ್ಲ' ಎಂದು ರುಕುಣಿಯಮ್ಮ ಅಪ್ಪನ ಹಿಂದಿದ್ದ ಅಮ್ಮನಿಗೆ ಮರು ಉತ್ತರ ಹೇಳಿ ಕಳುಹಿಸಿದ್ದರು.

ದಾಸಿಯ ಹಗರಣ ಇಷ್ಟಕ್ಕೆ ಮುಗಿಯದೆ ಇನ್ನು ಮುಂದುವರೆದು ಕೊನೆಗೂ ದಾಸಿ ತನ್ನ ಸಂಸಾರವನ್ನು ದುರ್ಗಾವಿಲಾಸ – ಬ್ರಾಹ್ಮಣರ ಚಾ – ಕಾಫಿ ಫಲಹಾರ ಮಂದಿರಕ್ಕೆ ವರ್ಗಾಯಿಸಿತು. ದಾಸಿ ವಾಸು ಭಟ್ಟರ ಸಂತಾನದ ಮೇಲೆ ಅಚಲನಿಷ್ಠೆ ತೋರಿಸಿದ್ದ ಕಾರಣ ರುಕುಣಿಯಮ್ಮನ ಸ್ಥಿತಿಗಾಗಿ ಮರುಕ, ಬೇಸರವನ್ನ ಇಸುಬು ವ್ಯಕ್ತಪಡಿಸುತ್ತಾನೆ.

ಅಡಿಟಿಪ್ಪಣಿ

೧. ಕೇಶವ ಶರ್ಮ ಕೆ., ***ಸ್ತ್ರೀವಾದಿ ಆಖ್ಯಾನ,*** ಪು.ಸಂ. ೧೬೫

೨. ಅದೇ, ಪು.ಸಂ. ೩೦

೩. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಒಂದು ಅಪರಾಧ ತನಿಖೆ ಕಥೆ, ಪು.ಸಂ. ೧೧೭

೪. ಅದೇ, ಪು.ಸಂ. ೧೨೧

೫. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಅಕ್ಕು ಕಥೆ, ಪು.ಸಂ. ೧೫೨–೧೫೩

೬. ಅದೇ, ಪು.ಸಂ. ೧೫೩

೭. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಗೂಡಿನೊಳಗೆ ಒಂದು ಹಕ್ಕಿ ಕಥೆ, ಪು.ಸಂ. ೧೬೦

೮. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಸೌಗಂಧಿಯ ಸ್ವಗತಗಳು ಕಥೆ, ಪು.ಸಂ. ೩೩೧

೯. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ ಕಥೆ, ಪು.ಸಂ. ೩೬೨

೧೦. ಅದೇ, ಪು.ಸಂ. ೩೬೨

೧೧. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಮರೆವು ಕಥೆ, ಪು.ಸಂ. ೫೬೬

೧೨. ಟಿ.ಪಿ. ಅಶೋಕ, ***ವೈದೇಹಿ ಕಥನ,*** ಪು.ಸಂ. ೭೪

೧೩. ಎಚ್. ನಾಗವೇಣಿ, ***ನಾಕನೇ ನೀರು,*** ನಾಕನೇ ನೀರು ಕಥೆ, ಪು.ಸಂ. ೧೨೭

೧೪. ಅದೇ, ಪು.ಸಂ. ೧೧೯

೧೫. ಎಚ್. ನಾಗವೇಣಿ, ***ನಾಕನೇ ನೀರು,*** ಬಿಳಿ ಕಾಗೆ ಕಥೆ, ಪು.ಸಂ. ೧೪೩

೧೬. ಎಚ್. ನಾಗವೇಣಿ, ***ಮೀಯುವ ಆಟ,*** ಒಡವೆ ಕಥೆ, ಪು.ಸಂ. ೫೬

೧೭. ಕೇಶವ ಶರ್ಮ ಕೆ., ***ಸ್ತ್ರೀವಾದಿ ಆಖ್ಯಾನ,*** ಪು.ಸಂ. ೧೬೫-೧೬೬

೧೮. ಎಚ್. ನಾಗವೇಣಿ, ***ಮೀಯುವ ಆಟ,*** ಒಡವೆ ಕಥೆ, ಪು.ಸಂ. ೫೬

೧೯. ಎಚ್. ನಾಗವೇಣಿ, ***ನಾಕನೇ ನೀರು,*** ಇನಾಮು ಕಥೆ, ಪು.ಸಂ. ೮

೨೦. ಎಚ್. ನಾಗವೇಣಿ, ***ನಾಕನೇ ನೀರು,*** ಬೆಲ್ಲ ಕಥೆ, ಪು.ಸಂ. ೧೬

೨೧. ಎಚ್. ನಾಗವೇಣಿ, ***ಮೀಯುವ ಆಟ,*** ತಾಯ್ತನ ಕಥೆ, ಪು.ಸಂ. ೭೦

೨೨. ಎಲ್.ಸಿ. ಸುಮಿತ್ರಾ, ***ವಿಭಾವ,*** ಸ್ತ್ರೀ ವಿಶಿಷ್ಟ ಕಾಳಜಿಯ ವೈದೇಹಿಯವರ ಕಥೆಗಳು ಪು.ಸಂ. ೨೧

೨೩. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಚಂದಲೆ ಕಥೆ, ಪು.ಸಂ. ೧೬೭

೨೪. ಅದೇ, ಪು.ಸಂ. ೧೭೦

೨೫. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಗುಲಾಬಿ ಟಾಕೀಸ್ ಮತ್ತು ಸಣ್ಣ ಅಲೆಗಳು ಪು.ಸಂ.

೨೬. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ, ಪು.ಸಂ. ೩೬೫

೨೭. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಒಂದು ಕಳ್ಳ ವೃತ್ತಾಂತ, ಪು.ಸಂ. ೩೬೬

೨೮. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಅವಲಂಬಿತರು ಕಥೆ, ಪು.ಸಂ. ೧೯೪

೨೯. ಎಚ್. ನಾಗವೇಣಿ, ***ನಾಕನೇ ನೀರು,*** ಕಸಬರಿಕೆ ಕಥೆ, ಪು.ಸಂ. ೬೩

೩೦. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ವಾಣಿಮಾಯಿ ಕಥೆ, ಪು.ಸಂ. ೪೫೨

೩೧. ಅದೇ, ಪು.ಸಂ. ೫೮೪

೩೨. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಚಿಕ್ಕನ ಸತ್ಯಗ್ರಹ ಕಥೆ, ಪು.ಸಂ. ೫೩೦

೩೩. ಅದೇ, ೫೩೧

೩೪. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಚಿಕ್ಕು ಕಥೆ, ಪು.ಸಂ. ೮೨

೩೫. ಎಚ್. ನಾಗವೇಣಿ, ***ಮೀಯುವ ಆಟ,*** ಸೇವಂತಿ ಓಲೆ ಕಥೆ, ಪು.ಸಂ. ೧೦೨

೩೬. ಎಚ್. ನಾಗವೇಣಿ, ***ನಾಕನೇ ನೀರು,*** ಬಗ್ಗುಂಡಿ ಪ್ರಸಂಗ ಕಥೆ, ಪು.ಸಂ. ೧೧೨

೩೭. ಎಚ್. ನಾಗವೇಣಿ, ***ಮೀಯುವ ಆಟ,*** ದಾನ ಕಥೆ, ಪು.ಸಂ. ೨೯

೩೮. ಅದೇ, ಪು.ಸಂ. ೪೦

೩೯. ಎಚ್. ನಾಗವೇಣಿ, ***ಮೀಯುವ ಆಟ,*** ದಣಿಗಳ ಬೆಳ್ಳಿ ಲೋಟ ಕಥೆ, ಪು.ಸಂ. ೨೨

೪೦. ಅದೇ, ಪು.ಸಂ. ೨೪

೪೧. ಎಚ್. ನಾಗವೇಣಿ, ***ಮೀಯುವ ಆಟ,*** ಒಡವೆ ಕಥೆ, ಪು.ಸಂ. ೬೧

೪೨. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಮರಗಿಡ ಬಳ್ಳಿ ಕಥೆ, ಪು.ಸಂ.

೪೩. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಸಂಸಾರ ಕಥೆ, ಪು.ಸಂ.

೪೪. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಒಂದು ಅಪರಾಧ ತನಿಖೆ ಕಥೆ, ಪು.ಸಂ. ೧೪೯

೪೫. ಎಚ್. ನಾಗವೇಣಿ, ***ಮೀಯುವ ಆಟ,*** ಸಖಿಗೀತ ಕಥೆ, ಪು.ಸಂ. ೩೩

ಅಧ್ಯಾಯ – ೪

ಅಸ್ಪೃಶ್ಯರು ಮತ್ತು ಗಾಂಧಿ ಬಂದ ಕಾದಂಬರಿಗಳ ತೌಲನಿಕ ಅಧ್ಯಯನ

ವಸ್ತು, ಆಶಯ, ತಾತ್ವಿಕತೆ, ಅಭಿವ್ಯಕ್ತಿ ಮತ್ತು ನಿರೂಪಣಾ ತಂತ್ರ :

೧೯೯೨ರಲ್ಲಿ ಪ್ರಕಟವಾದ ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿ ೨೦೧೨ರಲ್ಲಿ ಇಂಗ್ಲೀಷ್‌ಗೆ ಅನುವಾದಗೊಂಡಿದೆ. ೧೯೯೪ರಲ್ಲಿ ಎಂ.ಕೆ. ಇಂದಿರಾ ಪ್ರಶಸ್ತಿಯನ್ನು ಪಡೆದುಕೊಂಡ ಈ ಕಾದಂಬರಿ ಅಸ್ಪೃಶ್ಯತೆಯಂತಹ ಗಂಭೀರ ಸಾಮಾಜಿಕ ಸಮಸ್ಯೆಯನ್ನು ವಸ್ತುವಾಗಿಸಿಕೊಂಡು ತನ್ನ ಸ್ಥಳೀಯ ವಿವರಗಳಲ್ಲಿ ಬೇರುಬಿಟ್ಟ ಒಂದು ಸಾಂಸ್ಕೃತಿಕ ಪಠ್ಯವೂ ಹೌದು.

ಆಧುನಿಕ ಭಾರತೀಯ ಸಾಹಿತ್ಯದ ಆರಂಭದ ಕಾಲದಿಂದಲೇ ಅಸ್ಪೃಶ್ಯತೆ ಮತ್ತು ವಿಧವೆಯರ ಸಮಸ್ಯೆ ನಮ್ಮ ಸಾಹಿತ್ಯದ ಒಂದು ಮುಖ್ಯ ವಸ್ತುವಾಗಿದೆ. ಕನ್ನಡದ ಮೊದಲ ಸ್ವಾತಂತ್ರ್ಯ ಸಾಮಾಜಿಕ ನಾಟಕ ಎಂದು ಗುರುತಿಸಿರುವ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ' ಹಾಗೂ ಗುಲ್ವಾಡಿ ವೆಂಕಟರಾಯರ ಪ್ರಥಮ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ'ಯಲ್ಲಿಯೇ ಇದಕ್ಕೆ ಸ್ಪಷ್ಟ ಸೂಚನೆಗಳು ಸಿಗುತ್ತದೆ. ಕನ್ನಡ ಸಾಹಿತ್ಯದಲ್ಲಿ ಇದೇ ವಸ್ತು ಹಲವು ಬಣ್ಣ ಮತ್ತು ರೂಪಗಳಲ್ಲಿ ಕುವೆಂಪು, ಭೈರಪ್ಪ, ಅನಂತಮೂರ್ತಿ, ಲಂಕೇಶ್, ಶ್ರೀಕೃಷ್ಣ ಆಲನಹಳ್ಳಿ, ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಇನ್ನೂ ಅನೇಕರ ಕಥೆ ಕಾದಂಬರಿಗಳಲ್ಲಿ ವೈವಿಧ್ಯಮಯವಾಗಿ ರೂಪುಗೊಂಡಿದೆ. ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯನ್ನು ಈ ಪರಂಪರೆಯಲ್ಲಿಟ್ಟು ಚರ್ಚಿಸಬಹುದಾಗಿದೆ. ಹಾಗೆ ನೋಡಿದರೆ ೧೯೩೨ರಲ್ಲಿ ಪ್ರಕಟವಾದ ಶಿವರಾಮ ಕಾರಂತರ 'ಚೋಮನದುಡಿ' ಕೂಡಾ ದಲಿತರ ಸ್ಥಿತಿ ಸಾಧ್ಯತೆಗಳನ್ನು ರೂಪಿಸುವ ಕೃತಿಯಾಗಿದೆ.

ಭಾರತೀಯ ಇಂಗ್ಲೀಷ್ ಬರಹಗಾರ ಮುಲ್ಕ್‌ರಾಜ್ ಆನಂದ ಅವರ 'ಅಸ್ಪೃಶ್ಯ' ಕಾದಂಬರಿ ಮತ್ತು ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಗಳಿಗಿರುವ ವ್ಯತ್ಯಾಸವು ಕೇವಲ ಏಕವಚನ ಮತ್ತು ಬಹುವಚನಗಳ ನಡುವಣ ತಾಂತ್ರಿಕ ವ್ಯತ್ಯಾಸವಷ್ಟೇ ಅಲ್ಲ. ಮುಲ್ಕ್‌ರಾಜ್ ಆನಂದರ ಅಸ್ಪೃಶ್ಯ ಕಾದಂಬರಿಯ ಕೇಂದ್ರ ಪಾತ್ರವಾದ ಬಾಖನು ಜಾತಿಯ ನೆಲೆಯಲ್ಲಿ ಅಸ್ಪೃಶ್ಯ. ವೈದೇಹಿ ಅವರ ಕಾದಂಬರಿಯಲ್ಲೂ ಕೊರಗರು ಜಾತಿ ನೆಲೆಯ ಅಸ್ಪೃಶ್ಯರು. ಆದರೆ ಮೇಲ್ಜಾತಿಯವರೆನಿಸಿಕೊಂಡ ಬ್ರಾಹ್ಮಣ ಸ್ತ್ರೀಯರು ಬೇರೆ ಬೇರೆ ಸಂದರ್ಭಗಳಲ್ಲಿ ಅಸ್ಪೃಶ್ಯರು. ಮಹಿಳೆಯರ ಮುಟ್ಟು,

ಬಾಣಂತನ, ಮಡಿ–ಮೈಲಿಗೆಗಳ ಪ್ರಪಂಚವನ್ನು ಕಾದಂಬರಿ ದಟ್ಟವಾದ ವಿವರಗಳಲ್ಲಿ ದಾಖಲಿಸಿದೆ.

೧೯೯೯ರಲ್ಲಿ ಪ್ರಕಟಗೊಂಡ ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿ ಕೂಡಾ ಅಸ್ಪೃಶ್ಯತೆ ಮತ್ತು ವಿಧವೆಯರ ಸಮಸ್ಯೆಯನ್ನೇ ಮುಖ್ಯ ವಸ್ತುವಾಗಿಸಿಕೊಂಡ ಕೃತಿಯಾಗಿದೆ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ನೆನಪಿಸುವ ಈ ಕಾದಂಬರಿ ಕನ್ನಡದ ಕಥನ ಪರಂಪರೆಗೆ ಋಣಿಯಾಗಿದ್ದು, ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆ. ಶ್ರೀನಿವಾಸ ವೈದ್ಯ ಅವರ 'ಹಳ್ಳ ಬಂತು ಹಳ್ಳ', ಗೋಪಾಲಕೃಷ್ಣ ಪೈರವರ 'ಸ್ವಪ್ನ ಸಾರಸ್ವತ', ನಾಗವೇಣಿಯವರ 'ಗಾಂಧಿ ಬಂದ'ದಂತಹ ಕಾದಂಬರಿಗಳು ಕುವೆಂಪು, ಕಾರಂತರ ಮಾರ್ಗ ಕನ್ನಡದಲ್ಲಿ ಇನ್ನೂ ಜೀವಂತವಾಗಿರುವುದಕ್ಕೆ ಸಾಕ್ಷಿಯಾಗಿವೆ. ಗಾಂಧಿ ಬಂದ ಕಾದಂಬರಿಯಲ್ಲಿನ ವಿವರಗಳು ತೀರಾ ಪ್ರಾದೇಶಿಕವಾಗುವುದರ ಜೊತೆಗೆ ವಿಶ್ವಾಸತ್ಮಾಕವಾಗುವ ಮಹತ್ವಾಕಾಂಕ್ಷೆಯುಳ್ಳದ್ದಾಗಿದೆ.

ಹೊಸತರ ಆಗಮನದಿಂದ ಶಾಶ್ವತವೆಂದು ಕಾಣಿಸುತ್ತಿದ್ದ ಜೀವನ ಕ್ರಮಗಳಲ್ಲಿ ಸಾಕಷ್ಟು ಬದಲಾವಣೆಗಳಾದವು. ಕನ್ನಡ ಕಾದಂಬರಿಯ ಒಂದು ಸಾಮಾನ್ಯ ವಸ್ತು. ತನ್ನದೇ ಆದ ನಂಬಿಕೆಗಳು, ರೀತಿ ರಿವಾಜುಗಳು, ಮೌಲ್ಯಗಳೊಂದಿಗೆ ಬದುಕುತ್ತಿರುವ ಸಮಾಜವೊಂದು ಹೊಸ ಭಾಷೆ, ಸಾಹಿತ್ಯ, ಶಿಕ್ಷಣ ವ್ಯವಸ್ಥೆ, ಧಾರ್ಮಿಕ ಚಟುವಟಿಕೆಗಳು, ಆಡಳಿತ ವ್ಯವಹಾರಗಳು, ಜೀವನಶೈಲಿಗಳು, ನಿತ್ಯದ ನಡಾವಳಿಗಳೊಂದಿಗೆ ತೆರೆದುಕೊಂಡಾಗ ಇವುಗಳ ಪ್ರಭಾವದಿಂದ ಕೆಲವೊಮ್ಮೆ ಒತ್ತಡಗಳಿಂದ ಸಮಾಜದ ನಂಬಿಕೆಗಳು, ಮೌಲ್ಯಗಳು ಬದಲಾಗುವುದು ತೀರಾ ಸಹಜ. ಇಂಥ ಬದಲಾವಣೆಗಳಿಗೆ ಯಾರೇ 'ಒಬ್ಬ' ವ್ಯಕ್ತಿ ಅಥವಾ ಯಾವುದೋ ಒಂದು 'ಘಟನೆ' ಮಾತ್ರ ಕಾರಣವಾಗಿಲ್ಲದಿದ್ದರೂ ಪ್ರಭಾವ – ಪ್ರೇರಣೆ ಖಂಡಿತವಾಗಿಯೂ ಆಗುತ್ತದೆ. ಹಾಗಾಗಿ ಹೊಸ ವಿದ್ಯಮಾನಗಳಿಗೆ, ಹೊಸ ಬದಲಾವಣೆಗಳಿಗೆ ಪ್ರತೀಕವಾಗಿ ಕೆಲವು ಬಾರಿ ಗಾಂಧಿ, ವಿವೇಕಾನಂದ, ಅಂಬೇಡ್ಕರ್ ಅಂಥವರು ಯಾರು ಕಾರಣವಾಗಿರಬಹುದು. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ವಿವೇಕಾನಂದ ನೇರವಾಗಿ ಒಂದು ಪಾತ್ರವಲ್ಲ. ಆದರೆ ಅವರ ಪ್ರಭಾವ ಕುವೆಂಪು ಕಾದಂಬರಿಯಲ್ಲಿದೆ. ಅಂತೆಯೇ ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಗೆ ಗಾಂಧಿಯ ಪ್ರಭಾವವಿದೆ. ಕಾದಂಬರಿಯಲ್ಲಿ ಮಂಗಳೂರಿಗೆ ಮೂರು ಬಾರಿ ಬಂದು ಹೋಗುವ ಗಾಂಧಿ ನಿರ್ದಿಷ್ಟ ಚಾರಿತ್ರಿಕ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾರೆ. ಈ ಕಾದಂಬರಿ ಕುವೆಂಪು ಅವರ ಕಾನೂರು ಹೆಗ್ಗಡತಿ, ಅನಂತಮೂರ್ತಿ ಅವರ ಭಾರತೀಪುರ

ಕಾದಂಬರಿಗಳಿಗಿಂತ ಮಲೆಗಳಲ್ಲಿ ಮದುಮಗಳು ಕಾದಂಬರಿಗೆ ಹೆಚ್ಚು ಸಮೀಪವಾಗಿ ಹೋಲಿಕೆಯಾಗುತ್ತದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಂತೆ ಗಾಂಧಿ ಬಂದ ಕಾದಂಬರಿಯಲ್ಲಿಯೂ ಪ್ರೇಮ ಮತ್ತು ಕ್ರಾಂತಿ ಒಟ್ಟೊಟ್ಟಿಗೆ ಸಾಗುತ್ತದೆ. ಅಲ್ಲಿ ಗುತ್ತಿ-ತಿಮ್ಮಿ, ಮುಕುಂದಯ್ಯ-ಚಿನ್ನಮ್ಮ ಇದ್ದರೆ ಇಲ್ಲಿ ಅದ್ರಾಮ-ದ್ರೌಪದಿ, ಮಾರಪ್ಪ-ದಾರು ಇದ್ದಾರೆ. ಅಲ್ಲಿಯ ಮದುವೆಯಂತೆ ಇಲ್ಲಿಯೂ ತುಸು ಅಸಾಂಪ್ರದಾಯಿಕ ನೆಲೆಯಲ್ಲಿ ನಡೆಯುತ್ತದೆ. ಕುವೆಂಪು ಕಾದಂಬರಿಯಲ್ಲಿ ಗಮನಿಸಬಹುದಾದಂತೆ ತೀರಾ ಸಾಮಾನ್ಯರೆಂದು ಕಾಣುವ ಹಲವು ವ್ಯಕ್ತಿಗಳು ತೋರುವ ವಿಕಾಸದ ಸಾಧ್ಯತೆಗಳು ನಾಗವೇಣಿಯವರ ಈ ಕೃತಿಯಲ್ಲಿಯೂ ಕಂಡುಬರುತ್ತದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿ ಹಾಗೂ ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಯನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸುವುದು ನನ್ನ ಅಧ್ಯಯನದ ಕೇಂದ್ರ ಕಾಳಜಿಯಾಗಿದೆ.

೪.೧ ಅಸ್ಪೃಶ್ಯತೆ ಎನ್ನುವುದು ಕಾದಂಬರಿಯಲ್ಲಿ ವ್ಯಕ್ತವಾದ ಬಗೆ

'ಅಸ್ಪೃಶ್ಯರು' ಕಾದಂಬರಿ ಮೊದಲ ಎತ್ತಿಕೊಳ್ಳುವ ಪ್ರಶ್ನೆ ಅಸ್ಪೃಶ್ಯರು ಎಂದರೆ ಯಾರು? ಯಾವುದನ್ನೆಲ್ಲ ನಿರೂಪಕಿ ಅಸ್ಪೃಶ್ಯತೆ ಎಂದು ಕರೆಯುತ್ತಾರೆ? ಜಾತಿಯ ನೆಲೆಯ ಅಸ್ಪೃಶ್ಯತೆ ಯಾವ ಯಾವ ಜಾತಿಯವರು ಯಾರಿಗೆ ಅಸ್ಪೃಶ್ಯರು, ಮೇಲ್ಜಾತಿಯವರಿಗೆ ಕೆಳಜಾತಿಯವರು ಅಸ್ಪೃಶ್ಯರು, ಕೆಳಜಾತಿಯವರೆಂದು ಗುರುತಿಸಿಕೊಂಡವರು ಅವರಿಗಿಂತ ಕೀಳು ಜಾತಿಯವರನ್ನು ಅಸ್ಪೃಶ್ಯರು ಎಂದು ಕರೆಯುತ್ತಾರೆ.

ಕಾದಂಬರಿಯ ಒಂದು ಸಂದರ್ಭದಲ್ಲಿ ವಾಸುದೇವರಾಯರ ಮನೆಗೆ ಕೂಸ ಬಂದಿದ್ದಾಗ ಅವನು ಕುಡಿದು ಇಟ್ಟು ಹೋದ ಕಾಫಿ ಲೋಟವನ್ನು ಯಾರು ತೊಳೆಯಬೇಕೆಂಬ ಜಗಳದಲ್ಲಿ ಜಾತಿ ಸಮಾಜದ ಒಳಗಿದ್ದ ಕಹಿಗಳೆಲ್ಲ ವ್ಯಕ್ತಗೊಳ್ಳುತ್ತವೆ. ಶಿವ ಲೋಟವನ್ನು ಜಗಲಿಯ ತುದಿಗಿಟ್ಟು ಮನೆಗೆಲಸದ ಹೆಂಗಸನ್ನು ಕುರಿತು, 'ರುಕ್ಕು, ಇದನ್ನು ತೊಳೆದಿಡಬೇಕಂತೆ'- ಎಂದು ಹೇಳಿ ಮಾಯವಾದ. ಅದಕ್ಕೆ ರುಕ್ಕು 'ಯಾರು? ಆ ಕೂಸ ಕುಡಿದದ್ದ? ಅವ ಬಂದದ್ದು ನನಗೆ ಗೊತ್ತು. ಗೊತ್ತು ಮಾಡದೆ ಅವನ ಎಂಜಲನ್ನು ನನ್ನ ಕೈಯಿಂದ ತೊಳೆಸಬೇಕೆಂತ ಮಾಡಿದಿರ? ನಾ ತೊಳೆಯುವುದಿಲ್ಲ'- ಎಂದಳು. ಗೌರಮ್ಮ ಹೊರಗೆ ಬಂದು 'ಅಬ್ಬ ನಾವು ನಿನ್ನನ್ನೇ ಸೇರಿಸದಿದ್ದರೆ, ನೀನು ಕೂಸನನ್ನೇ ಸೇರಿಸುವುದಿಲ್ಲವಲ್ಲಾ? ಎಂದರೆ 'ಮತ್ತೆ? ನಾವು ಅವಕ್ಕಿಂತ ಊಂಚವಲ್ಲವ?

ಬೇಡಿ ತಿಂದರೂ ಅವರ ಕುಡಿದ ಲೋಟ ನಾನು ತೊಳೆಯಲಿಕ್ಕಿಲ್ಲ' ಎನ್ನುತ್ತಾಳೆ ರುಕ್ಕು. "ನೀನು **ತೊಳೆಯುವುದಿಲ್ಲವೆಂದರೆ ಮತ್ತೆ ಯಾವ ಜನ ಉಂಟು ಇಲ್ಲಿ?' 'ಹೇಳಬೇಕಿತ್ತು ಅವನಿಗೆ. ಪ್ಯಾಂಟು ಶರ್ಟ್ ಹಾಕಿದ ಕೂಡಲೇ ಕುಡಿದ ಲೋಟೆ ತೊಳೆದಿಡಬಾರದು ಅಂತಿದೆಯ? ಸಾಯಂಕಾಲ ಬರುತ್ತಾಳಲ್ಲ, ಅವನ ಅಕ್ಕ ಗಾಂಧಾರಿ! ತೊಳೆಯಲಿ"**.[7]

ಗಮನಿಸಬೇಕಾಗಿದ್ದು, ಇಲ್ಲಿ ರುಕ್ಕುವಿಗೆ ತನ್ನನ್ನು ತನ್ನ ಜಾತಿಯವರನ್ನು 'ಶೋಷಿಸುವ' ಬ್ರಾಹ್ಮಣ ಜಾತಿಯವರು ಕುಡಿದು ತಿಂದ ಎಂಜಲು ಪಾತ್ರೆಗಳನ್ನು ತೊಳೆಯಲು ರುಕ್ಕುವಿಗೆ ಯಾವ ತೊಂದರೆಯೂ ಇಲ್ಲ. ಕೊರಗರ ಕೂಸ ಕುಡಿದಿದ್ದ ಲೋಟವನ್ನ ಮುಟ್ಟಲೂ ಬಾರದೆನ್ನುವ ಬ್ರಾಹ್ಮಣ ಜಾತಿಯವರು ಕೂಸನಿಗಿಂತ ಮೇಲ್ಜಾತಿಗೆ ಸೇರಿದ ರುಕ್ಕುವಿಗೂ ಆ ಅಧಿಕಾರವನ್ನ ಕೊಡುವುದಿಲ್ಲ. ಆದರೆ ರುಕ್ಕು ಅದನ್ನೇ ಕೇಳುವುದು. ರುಕ್ಕುವಿನ ಮಾತುಗಳನ್ನ ಸೂಕ್ಷ್ಮವಾಗಿ ಗಮನಿಸಿದರೆ ಗೊತ್ತಾಗುತ್ತದೆ. ನೀವು ತೊಳೆಯಲ್ಲ ಅಂದರೆ ನಾನು ತೊಳೆಯಲ್ಲ, ನಾನು ಕೂಸನಿಗಿಂತ ಮೇಲ್ಜಾತಿ. ಹಾಗಾಗಿ ತಾನು ಆ ಲೋಟವನ್ನು ತೊಳೆಯೋಲ್ಲ ಎಂಬ ವಿರೋಧ ವ್ಯಕ್ತವಾಗುತ್ತದೆ. ಇದು ಬರಿ ಎಂಜಲು ಲೋಟದ ಸಮಸ್ಯೆಯಲ್ಲ. ಈ ಸಮಾಜದಲ್ಲಿನ ಮೇಲು ಕೀಳೆಂಬ ಜಾತಿಯ ಸಮಸ್ಯೆ. ತನಗಿಂತಲೂ ಕೀಳು ಜಾತಿಯಲ್ಲಿ ಗುರುತಿಸಿಕೊಂಡ ಕೂಸ ಕುಡಿದ ಲೋಟ ತೊಳೆಯಲು ತಕರಾರಿದೆ. ಇಂಥ ಜಾತಿಯ ಇಕ್ಕಟ್ಟುಗಳನ್ನು ದಾಟಲು ಸಾಧ್ಯವಾಗುವುದು 'ಜಾಗೃತ'ಗೊಂಡ ಮನುಷ್ಯರಿಗೆ ಮಾತ್ರ. ಕಾದಂಬರಿಯಲ್ಲಿ ಜಾಗೃತಗೊಂಡ ಪಾತ್ರಗಳಾಗಿ ಭಾಸ್ಕರ, ವಾಸುದೇವರಾಯ, ಸರೋಜ, ಶೀನಾ, ಕೂಸ, ಕುಮುದಿನಿ ಮುಂತಾದ ಪಾತ್ರಗಳು ಬರುತ್ತವೆ. ಕೂಸ ಕುಡಿದ ಲೋಟೆಯನ್ನು ತೊಳೆಯಲು ರುಕ್ಕು ನಿರಾಕರಿಸಿದಾಗ ಸರೋಜ ಮುಂದಾಗುತ್ತಾಳೆ 'ಬಾಯಿ ಬಿಗಿ ಹಿಡಿ. ನಿನ್ನಿಂದಾಗುವುದಿಲ್ಲವಾ? ನಾ ತೊಳೆಯುತ್ತೇನೆ. ದಿಮಾಕೆ?' ಎಂದು ಸೀರೆ ನೆರಿಗೆ ಸೊಂಟಕ್ಕೆ ಸಿಕ್ಕಿಸಿಕೊಳ್ಳುತ್ತಾಳೆ. ಕೂಸ ಕುಡಿದಿಟ್ಟ ಲೋಟೆ ತೊಳೆಯಲು ನಡೆದ ಜಗಳದ ವಿಷಯ ತಿಳಿದ ವಾಸುದೇವರಾಯರು ಒಳಗೆ ಬಂದು 'ಯಾರೇ ಆಗಲಿ, ಒಂದು ಸ್ಥಾನ ಪಡೆದುಕೊಂಡು ಬಂದರೆ ಗೌರವವುಂಟೇ ಉಂಟು. ಹೇಳಿಕೆ ಇಲ್ಲದೆ ಊಟಕ್ಕೆ ಬಂದು ಕುಳಿತುಕೊಳ್ಳುವ ನಾರಟೆ ಬ್ರಾಹ್ಮಣನಿಗಿಂತ ಕುರ್ಚಿ ಮೇಲೆ ಕೂಡುವ ಸ್ಥಾನವಂತ ಕೂಸನಿಗೆ ಹೆಚ್ಚು ಮರ್ಯಾದೆ ತನ್ನಷ್ಟಕ್ಕೆ ಹುಟ್ಟಿಕೊಳ್ಳುತ್ತದೆ. ಬ್ರಾಹ್ಮಣ ಎಂದರೆ ಎಂತದೆಂತ ನೀವು ಹೇಳುವುದು? ಮನುಷ್ಯ ಮನುಷ್ಯನನ್ನು ಗುರುತಿಸುವುದೇ ನೀತಿ ನಡತೆಯಿಂದ, ಸ್ಥಾನಮಾನದಿಂದ, ಹುಟ್ಟಿನಿಂದ ಅಲ್ಲ ಎನ್ನುವಲ್ಲಿ "ಮಾನವ ಜಾತಿ ತಾನೊಂದೆ ವಲಂ" ಎಂಬ ಪಂಪಭಾರತದ ಉಕ್ತಿ ನೆನಪಾಗುತ್ತದೆ.

ಕೂಸ ಜಾತಿಯ ಲೆಕ್ಕಾಚಾರದಲ್ಲಿ ಕೆಳಗೆ ಇದ್ದರೂ ವರ್ಗದ ನೆಲೆಯಲ್ಲಿ ಸಾಕಷ್ಟು ಮೇಲೆ ಇದ್ದಾನೆ. ಇಷ್ಟೆಲ್ಲಾ ಚರ್ಚೆಗಳ ನಂತರವೂ ನಮ್ಮ ತಿಳುವಿಗೆ ಬರಬೇಕಾದ್ದು ಅಸ್ಪೃಶ್ಯರು ಕಾದಂಬರಿ ಕೊರಗ ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನ ಅಲ್ಲ. ಹಾಗೆಂದು ಅವರ ಜೀವನವನ್ನು ಕೇಂದ್ರವಾಗಿಟ್ಟುಕೊಂಡ ಕೃತಿಯೂ ಅಲ್ಲ. ಆದರೆ ಇಲ್ಲಿ ಲೇಖಕಿ ತಮ್ಮ ಜಾತಿ – ವರ್ಗದವರು ತನ್ನ ಸುತ್ತಲಿನ ಕೊರಗ ಮತ್ತು ಇತರೆ ಜಾತಿಯವರೊಂದಿಗೆ ಇಟ್ಟುಕೊಂಡಿರುವ ಸೀಮಂತ ಸಂಬಂಧವನ್ನು ಒಟ್ಟಂದದಲ್ಲಿ ಕಟ್ಟುವ ಪ್ರಯತ್ನ ಮಾಡಿದ್ದಾರೆ. ಜಾತಿ ಜಾತಿಗಳೊಳಗೆ ನಡೆಯುವ ಇಂಥ ಅನೇಕ ತಿಕ್ಕಾಟಗಳನ್ನು ಕಥನದೊಳಗೆ ಸಂದರ್ಭೋಚಿತವಾಗಿ ತಂದು ಅವುಗಳನ್ನು ಅಲ್ಲಿಯೇ ಹೊಸಕಿ ಹಾಕುವ ಚಮಕು ಲೇಖಕಿಗೆ ಕರಗತವಾದಂತಿದೆ.

ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಯ ಮೊದಲ ಅಧ್ಯಾಯದಲ್ಲೇ ಅದರ ಸ್ವರೂಪ ಮತ್ತು ಆಶಯಗಳು ವ್ಯಕ್ತವಾಗುತ್ತವೆ. ಜಾತಿ ಶ್ರೇಣೀಕರಣದ ಹಲವು ಮೆಟ್ಟಿಲುಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಬ್ರಾಹ್ಮಣರಿಂದ ಅಸ್ಪೃಶ್ಯರವರೆಗೆ ಚಾಚಿಕೊಂಡಿರುವ ಈ ಸಮುದಾಯದಲ್ಲಿನ ಎಲ್ಲಾ ಜಾತಿಗಳು ಪರಸ್ಪರ ಭಿನ್ನವಾಗಿದ್ದರೂ ಒಂದನ್ನೊಂದು ಅನಿವಾರ್ಯ ಸಂದರ್ಭಗಳಲ್ಲಿ ಅವಲಂಬಿಸಿ ಬದುಕುತ್ತಿರುವ ಸಂಕೀರ್ಣ ವಿನ್ಯಾಸವನ್ನು ಹೆಣೆಯುತ್ತಾರೆ.

ಇಲ್ಲಿ ಕೆಳಜಾತಿಯವರ ಮೇಲೆ ಮೇಲ್ಜಾತಿಯವರು ನಡೆಸುವ ಎಲ್ಲಾ ಕ್ರೌರ್ಯ–ಶೋಷಣೆಗಳ ಜೊತೆಗೆ ಭೂಮಾಲೀಕ ವರ್ಗವು ನಡೆಸುವ ಕ್ರೌರ್ಯ–ಶೋಷಣೆಗಳನ್ನು ನೇರವಾಗಿ ಖಂಡಿಸುತ್ತಲೇ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾಣಲಾಗದ ಮಾನವೀಯ ಸಂಬಂಧಗಳು ನಾಗವೇಣಿಯವರು ಚಿತ್ರಿಸಿರುವ ಈ ಸಮುದಾಯದಲ್ಲಿ ಸಾಧ್ಯವಾಗಿದೆ. ಕೃಷಿ ಪ್ರಧಾನವಾದ ವ್ಯವಸ್ಥೆಯಲ್ಲಿ ಇವರೆಲ್ಲ ಪರಸ್ಪರ ಪ್ರೀತಿ–ದ್ವೇಷಗಳ ಸಂಬಂಧದಲ್ಲಿ ಅನಿವಾರ್ಯವೆಂಬಂತೆ ಹೊಂದಿಕೊಂಡು ಬದುಕುತ್ತಿದ್ದಾರೆ. ಭೂಮಾಲೀಕ ವರ್ಗದವರು, ಮೇಲ್ಜಾತಿಯವರು ನಡೆಸುವ ಕ್ರೌರ್ಯ, ಶೋಷಣೆ, ಅಸಮಾನತೆಯ ನಡುವೆಯೂ ಎಲ್ಲಾ ಸಮುದಾಯವನ್ನು ಒಳಗೊಂಡು ಇಲ್ಲಿ ಕಂಬಳ, ಕೋಲ, ಜಾತ್ರೆ, ಉತ್ಸವಗಳು ನಡೆಯುತ್ತವೆ. ಇಲ್ಲಿನ ದಿನನಿತ್ಯದ ಸಾಮಾಜಿಕ ಬದುಕಿನಲ್ಲಿ ಎಲ್ಲರ ಸ್ಥಾನಮಾನಗಳು ಅವರವರ ಜಾತಿ – ವರ್ಗ – ಲಿಂಗಗಳನ್ನು ಆಧರಿಸಿ ನಿರ್ಧರಿತವಾಗಿದ್ದರೂ ಒಂದು ಸಮುದಾಯವಾಗಿ ಅವರಿಗೊಂದು ಅಸ್ತಿತ್ವವಿದೆ. ಮತ್ತೆ ಮತ್ತೆ ಶೋಷಣೆಗೆ ಒಳಗಾಗುತ್ತಲೆ ಅತೃಪ್ತಿಯನ್ನು ಅನುಭವಿಸುತ್ತಲೇ ಕಂಬಲ, ಕೋಲಗಳಲ್ಲಿ ಬೆರೆತು ಸಂಭ್ರಮಿಸುತ್ತಾರೆ, ಶೋಷಣೆಯನ್ನು ಅನುಭವಿಸುತ್ತಲೇ ಒಳಗೊಳಗೆಯೇ ಪ್ರತಿಭಟಿಸುತ್ತಾರೆ. ಒಮ್ಮೆ ಹೀಗೆಯೇ ಹೆಬ್ಬಾರರ ಮನೆಯಲ್ಲಿ ನಡೆಯುವ ಕಂಬಳದೂಟದಲ್ಲಿ ಮೊದಲೆರಡು ಪಂಕ್ತಿ

ಬ್ರಾಹ್ಮಣರದ್ದು; ಅದು ಚಾವಡಿಯೊಳಗೆ ನಡೆಯುತ್ತೆ. ಮೂರನೇ ಪಂಕ್ತಿ ಶೂದ್ರರದ್ದು ಹೊರಗಡೆ ಅಂಗಳದಲ್ಲಿ ನಡೆಯುತ್ತೆ. ನಾಕನೇ ಪಂಕ್ತಿ ಊರು ಪರವೂರುಗಳಿಂದ ಕೋಣ ತಂದಿರುವ ಆಳುಗಳಿಗೆ ಮತ್ತು ಅವುಗಳ ಒಡೆಯರಿಗೆ; ಅದೂ ಅಂಗಳದಲ್ಲಿ ನಡೆಯುತ್ತೆ. ಐದನೆ ಪಂಕ್ತಿ ಗದ್ದೆಯಲ್ಲಿ, ಅದು ಕೊರಗರಿಗೆ ಮತ್ತು ಹೊಲೆ ಮಕ್ಕಳಿಗೆ. ಅವರಿಗೆಲ್ಲ ಬಡಿಸುವುದು ಶೂದ್ರರೆ. ಈ ಗುತ್ತಿನ ಶೆಟ್ರುಗಳಿಬ್ಬರೂ ಎಷ್ಟೋ ವರ್ಷಗಳಿಂದ ಹೆಬ್ಬಾರರ ಮನೆಯಲ್ಲಿ ಕಂಬಳದೂಟ ಮಾಡುತ್ತಿಲ್ಲ. ಉಣ್ಣುವ ವಿಚಾರದಲ್ಲಿ ಮಾತ್ರ ಹೆಬ್ಬಾರರು, ಅವರು ಎಂತಹ ಗುತ್ತಿನ ಶೆಟ್ಟರೇ ಆಗಿರಲಿ, ಎಷ್ಟು ಉಳ್ಳವನೇ ಆಗಿರಲಿ, ಪಂಕ್ತಿಭೇದ ಮಾಡದೆ ಅವರನೆಲ್ಲ ಶೂದ್ರ ಪಂಕ್ತಿಯಲ್ಲೇ ಕುಳ್ಳಿರಿಸಿ ಊಟ ಹಾಕಿಸುತ್ತಿದ್ದರು. ಇದು ಗುತ್ತಿನ ಶೆಟ್ರುಗಳಿಬ್ಬರಿಗೂ ಸಹಿಸಲಾರದ ವಿಚಾರವಾಗಿತ್ತು. ಇವರಿಬ್ಬರೂ ತಮ್ಮ ಗುತ್ತಿನಿಂದ ಕಂಬಳದ ಕೋಣಗಳನ್ನು ಹೆಬ್ಬಾರರ ಚಂದ್ರಕೆರೆ ಕಂಬಳಕ್ಕೆ ಕಳುಹಿಸದಿರುವುದು ಈ 'ಪಂಕ್ತಿ ನ್ಯಾಯ'ದ ಅತೃಪ್ತಿಯಿಂದಲೇ! ಕಂಬಳಕ್ಕೆ ತರಕಾರಿ ಹೊರೆ ಕಳುಹಿಸುವವರು ಶೂದ್ರರು. ಕಂಬಳದ ಕೆಲಸಕ್ಕೆ ಇನ್ನಿಲ್ಲದಂತೆ ಜೀವತೇಯುವವರು ಶೂದ್ರರು. ಆದರೆ ಮರ್ಯಾದೆಯಿಂದ ಕಂಬಳದ ಕೋಣಗಳಂತೆ ಹೊಟ್ಟೆ ಬಿರಿಯುವ ಹಾಗೆ ಚಾವಡಿಯಲ್ಲಿ ಕೂತು ಉಣ್ಣುವುದು ಮಾತ್ರ ಬ್ರಾಹ್ಮಣರು. ಇದು ಅನ್ಯಾಯ ಎಂದು ಶೆಟ್ರುಗಳಿಬ್ಬರೂ ಮನಸ್ಸಿನೊಳಗೆ ಉರಿದುಕೊಂಡಿದ್ದಾರೆ.

ಈ ರೀತಿಯ ಒಳಬಂಡಾಯಗಳು ಕಾದಂಬರಿಯುದ್ದಕ್ಕೂ ನಡೆಯುತ್ತವೆ. ಪಿಜಿನ ಮೂಲ್ಯ, ಕೊರಗರ ಐತು, ಅಂತಪ್ಪ-ಕೂಸಮ್ಮೈಲಿ-ಮಂಜಪ್ಪ ಅಂಗರಮೂಲ್ಯನಂಥವರು ಮಾಡುವ ಸಣ್ಣಪುಟ್ಟ ವಿರೋಧಗಳು ಕೇವಲ ಮೌನ ಪ್ರತಿಭಟನೆಗಳಾಗಿ ಕಾಣಿಸಿಕೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ ತಮ್ಮ ತಮ್ಮ ಜಾತಿ ಸ್ಥಾನಮಾನಗಳನ್ನೇ ಒಪ್ಪಿಕೊಂಡು ಯಾವುದನ್ನು ಪ್ರಶ್ನಿಸದೆ ಎಲ್ಲವೂ ಸಹಜವೆಂಬಂತೆ ಜೀವಿಸುತ್ತಾರೆ. ಜಾರಿಗೆ ಬೆಟ್ಟಲ್ಲಿ ಬೊಜ್ಜದ ಊಟಕ್ಕಾಗಿ ಹಿಂದಿನ ದಿನವೇ "**ಐತು ಕೊರಗನ ಸಂತಾನ ಬೀಡುಬಿಟ್ಟತ್ತು. ಕೊಳಲು-ಡೋಲು ಸೇವೆಗಾಗಿ ನಿನ್ನೆ ಬೆಳಿಗ್ಗೆಯೇ ಆತ ಕಟ್ಟಹುಣಿ ಏರಿದ್ದ. ಈಗ ಬಂದಿರುವ ಕೊರಗರು ಆತನ ಪಕ್ಕಕ್ಕೆ ಕುಳಿತುಕೊಂಡರೆ, ಕೊರಗರಿಗಿಂತ ಸ್ವಲ್ಪ ಮೇಲೆಂದು ಭಾವಿಸಿರುವ ಮನ್ಸರು, ಮುಂಡಾಲರು ಅವರಿಗಿಂತ ಬಹಳಷ್ಟು ದೂರದಲ್ಲೇ ಕೂತು, ತಮ್ಮ ಅಂತರ-ಮಡಿವಂತಿಕೆ ಕಾಪಾಡಿಕೊಂಡರು. ಕೊರಗ-ಮನ್ಸ-ಮುಂಡಾಲರಿಗಿಂತ ನಾವು ಬಹಳಷ್ಟು ಎತ್ತರದಲ್ಲಿರುವವರೆಂದು ಹೆಬ್ಬಾರರಷ್ಟೇ ಅಸ್ಪೃಶ್ಯತೆ ತೋರುತ್ತಿರುವ ಮುಗೇರರು ಆ ಕಟ್ಟಹುಣಿಯಲ್ಲೇ ಕೂರದೆ ಅದಕ್ಕಿಂತ ಸ್ವಲ್ಪ ದೂರವಿರುವ ಬೆಟ್ಟುಗದ್ದೆಯಲ್ಲಿ ಕೂತರು.**

ತಾವು ಸಮಾಜದ ಕ್ರೂರ ಅಮಾನವೀಯ ಜಾತಿ ವ್ಯವಸ್ಥೆಯಡಿ ಸಿಲುಕಿ ಅತ್ಯಂತ ಹೀನವಾಗಿ, ತುಚ್ಛವಾಗಿ ಬದುಕುತ್ತಿದ್ದರೂ, ತಮ್ಮ ತಮ್ಮೊಳಗೆ ಅದೇ ಜಾತಿ ತಾರತಮ್ಯವನ್ನು ಉಳಿಸಿಕೊಂಡು,

ಅಸ್ಪೃಶ್ಯತೆಯನ್ನು ತಮ್ಮ ಕಣ್ಮಣಿಯಂತೆ ಬಹಳ ಜೋಪಾನವಾಗಿ ಕಾಯ್ದುಕೊಂಡಿರುವ ಇವರೆಲ್ಲರೂ ಇದೀಗ ಸಮಾನರೆಂಬಂತೆ ಬೊಜ್ಜದ ಊಟಕ್ಕಾಗಿ ಅಂಗಳಾದಚೆಗೆ ಕಾದುಕುಳಿತಿದ್ದಾರೆ!'[2] ಬ್ರಾಹ್ಮಣರು–ಕೊರಗರು, ಮೇಲು–ಕೀಳು ಎಂಬಂತೆ ವ್ಯಕ್ತವಾಗುವುದು ಒಂದು ಸಮುದಾಯದ ಸಾಮಾಜಿಕ ಶ್ರೇಣಿಕರಣದ ಜಾತಿಯ ನೆಲೆ ಇಲ್ಲಿ ಗೊತ್ತಾಗುತ್ತದೆ.

ಅಸ್ಪೃಶ್ಯತೆಯು ಒಂದು ಸಾಮಾಜಿಕ ಅನಿಷ್ಟವೆಂಬ ಎಚ್ಚರ ನಮಗಿರುವುದು ನಿಜವಾದರೂ ಅದು ನಮ್ಮ ಸಮಾಜದ ಅವಿಭಾಜ್ಯ ಭಾಗವೆಂಬಂತೆ ಬೆಳೆದು ಬಂದ ದುರಂತವೂ ನಿಜವಾದುದು. ಇನ್ನೊಬ್ಬ ಮನುಷ್ಯನನ್ನು ಮುಟ್ಟದ ಮನುಷ್ಯ ರೂಪಿಗಳನ್ನು ರೂಪಿಸಿದ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆಯ ಅನುಭವ ಮತ್ತು ಆಯಾಮಗಳು ಹಲವು.

ವೈದೇಹಿಯವರ ಅಸ್ಪೃಶ್ಯರು ಕಾದಂಬರಿಯಲ್ಲಿ ವ್ಯಕ್ತವಾಗುವ ಇನ್ನೊಂದು ನೆಲೆ ಮಡಿ ಮೈಲಿಗೆಗೆ ಸಂಬಂಧಿಸಿದ್ದು. ಎಲ್ಲಾ ಜಾತಿಗಳಿಗಿಂತ ಬ್ರಾಹ್ಮಣ ಜಾತಿಯೇ ಮೇಲು ಎಂದುಕೊಳ್ಳುವವರ ಪ್ರಪಂಚದಲ್ಲಿ ಈ ಜಾತಿಯ ಹೆಂಗಸರು ತಮ್ಮ ಜೈವಿಕ ಸ್ಥಿತಿಯ ಕಾರಣಕ್ಕಾಗಿ ತಮ್ಮ ಬದುಕಿನ ಕೆಲ ಭಾಗವನ್ನು ಅಸ್ಪೃಶ್ಯರಾಗಿ ಕಳೆಯಬೇಕಾದ ವಿಪರ್ಯಾಸ. ಮುಟ್ಟು, ಬಾಣಂತನ, ಮಡಿ–ಮೈಲಿಗೆಯ ಇಕ್ಕಟ್ಟುಗಳು ಅವರನ್ನು ಅವರು ಹೆಣ್ಣಾದ್ದರಿಂದ ಬಾಧಿಸುವ ರೀತಿಯನ್ನು ಕಾದಂಬರಿ ದಟ್ಟವಾದ ವಿವರಗಳಲ್ಲಿ ದಾಖಲಿಸಿದೆ. ರತ್ನಳ ಹೆರಿಗೆ ನೋವಿನ ಸನ್ನಿವೇಶದಿಂದ ಪ್ರಾರಂಭವಾಗುವ ಈ ಕಾದಂಬರಿಯಲ್ಲಿ ಬಾಣಂತನದ ವಿವರಗಳು ಆ ಸಂದರ್ಭದಲ್ಲಿನ ಮಡಿ–ಮೈಲಿಗೆಯ ಸೂತಕದ ದಿನಗಳು ಆಗ ಬಾಣಂತಿ ಅನುಭವಿಸುವ ದೈಹಿಕ–ಮಾನಸಿಕ ಯಾತನೆಗಳು ಮಗುವಿನ ಲಾಲನೆ ಪಾಲನೆ, ಮಡಿ–ಮೈಲಿಗೆಯ ಕಾರಣಕ್ಕಾಗಿ ರತ್ನಾಳ ಮೊದಲ ಮಗು ರವಿಮಾಣಿಯ ಎಳೆಯ ಮನಸ್ಸಿನ ಮೇಲೆ ಉಂಟಾಗಬಹುದಾದ ಕೆಟ್ಟ ಪರಿಣಾಮಗಳನ್ನು ಹೇಳುತ್ತದೆ.

ಶಾಮಿ ಮುಟ್ಟಾದಾಗ ಗೌರಮ್ಮ, ಪಾರ್ತಕ್ಕನ ಅಭಿಪ್ರಾಯಗಳಿಗಿಂತ ಸರೋಜನ ಅಭಿಪ್ರಾಯಗಳು ಭಿನ್ನವಾಗಿ ಗೋಚರಿಸುವಲ್ಲಿ ಲೇಖಕಿಯ ಆಶಯ ವ್ಯಕ್ತವಾಗುತ್ತದೆ. "ಅಮ್ಮ, ನೀನು ಅಕ್ಕನಿಗೆ ಮತ್ತು ನಂಗೆ ಮಾಡಿದ್ದು ನೆನಪಿದೆ. ಊಟವೂ ಆ ಕತ್ತಲೆ ಕೋಣೆಯೊಳಗೆ, ಕೈತೊಳೆಯುವುದೂ ಅಲ್ಲಿಯೇ ಮೂರುದಿನವಿಡೀ ಸ್ನಾನಸಹಇಲ್ಲದೆ. ತಲೆಬಾಚದೆ.....ಶಿ.....ಶಿ.... ಅಕ್ಕ ಹೇಳಿದಷ್ಟು ನಾನು ಕೇಳಲಿಲ್ಲ. ನಿನ್ನ ಮಡಿಯನ್ನೆಲ್ಲ ಅಡಿಮೇಲು ಮಾಡಿದೆ. ನಾನು ಒಪ್ಪಿದಷ್ಟು ಶಾಮಿ ಒಪ್ಪಲಿಕ್ಕಿಲ್ಲ.....

ಹಿಂದೆಲ್ಲ ಮುಟ್ಟಾದವರ ನೆರಳು ಬಿದ್ದರೂ ತಲೆ ಸ್ನಾನ ಮಾಡಿ ಮಡಿಯಾಗಬೇಕಿತ್ತು. ಈಗ ಇಷ್ಟೂ ಮಾಡದಿದ್ದರೆ ಹೇಗೆ ಎನ್ನುವುದು ಪಾರ್ತಕ್ಕ ಗೌರಮ್ಮನ ವಾದ.

ಅದೆಲ್ಲ ಬೇಡ, ಶಾಮಿ ಬೇಕಾದರೆ ದೂರವಿರಲಿ ವಿಶ್ರಾಂತಿಗೋಸ್ಕರ. ಆದರೆ, ಕೇವಲ ಮಡಿಮೈಲಿಗೆಯೆಂದಲ್ಲ ಅವಳಿಗೆ ರಗಳೆ ಮಾಡುವುದು ನನಗೆ ಸರಿಕಾಣುವುದಿಲ್ಲ. ತನಗೆ ಮಾಡಿದ ಹಾಗೆ ಅರಿಸಿನ ಸುಣ್ಣ ಬೆರಸಿ ಕೈ ಅದ್ದಿಸಿ ಗೋಡೆಯ ಮೇಲೆ ಅದರ ಅಚ್ಚು ಒತ್ತಿಸಿ ಚಟ್ಟು ಹೊಯ್ಯಬಾರದು. ಆರತಿ ಮಾಡಬಾರದು. ಇದೇನು ವಿಚಿತ್ರವ? ಜಗತ್ತಿನಲ್ಲಿ ಎಲ್ಲಿಯೂ ಇಲ್ಲದ್ದ? ನಾಲ್ಕು ಜನರಿಗೆ ಗೊತ್ತು ಮಾಡುವುದು ಬೇಡ ಅನ್ನುವುದು ನೀವೆ. ಹೀಗೆಲ್ಲ ಮಾಡಿ ಗೊತ್ತು ಮಾಡುವವರು ನೀವೆ. ಅದನ್ನು ಅದರಷ್ಟಕ್ಕೆ ಬಿಟ್ಟುಬಿಡಿ ಮೊದಲೆ ಬೇಜಾರಿನಲ್ಲಿದೆ. ತಿಂಡಿ ಮಾಡಿ. ಯಾರು ಬೇಡವೆಂದವರು? ಆರತಿ ಗೀರತಿ ಅಂಥ ನಾಲ್ಕು ಜನರನ್ನು ಕರೆದು ಗುಲ್ಲು ಮಾಡುವುದು ಬೇಡ ಎನ್ನುವುದು ಸರೋಜನ ಅಭಿಪ್ರಾಯ.

ಮುಟ್ಟು, ಬಾಣಂತನ ಮಡಿ ಮೈಲಿಗೆಯಂತ ವಸ್ತುವನ್ನಿಟ್ಟುಕೊಂಡು ಕಾದಂಬರಿ ಅಸ್ಪೃಶ್ಯತೆಯ ಒಂದು ನೆಲೆಯಲ್ಲಿ ರಚಿತವಾಗಿದ್ದರೂ ನಿರೂಪಕಿಯ ಆಶಯ ಬೇರೆಯೇ ಆಗಿದೆ. ಹಿಂದಿನ ಆಚಾರ-ವಿಚಾರಗಳು ಏನೇ ಆಗಿದ್ದರೂ ಮಡಿ-ಮೈಲಿಗೆಗಳನ್ನು ಬಿಟ್ಟು ತನಗೆ ಬೇಕಾದಂತೆ ಸ್ವೇಚ್ಛೆಯಾಗಿರುವುದಾಗಿದೆ. ಹೆಣ್ಣಿನ ನೋವನ್ನು ಹೆಣ್ಣು ಅರ್ಥಮಾಡಿಕೊಂಡಂತೆ, ಹೆಣ್ಣು ಬಿಚ್ಚಿಟ್ಟಂತೆ ಗಂಡು ಬಿಚ್ಚಿಡಲಾರ. ಗರ್ಭಿಣಿ ಹೆಣ್ಣಿನ ಮನಸ್ಥಿತಿ, ಪ್ರಥಮ ತಾಯ್ತನದ ಆನಂದದ ಅನುಭವ, ಹೆರಿಗೆಯ ನೋವು, ಮುಟ್ಟಿನ ಮನಸ್ಥಿತಿ ದೈಹಿಕ ಚಡಪಡಿಕೆ ಇವೆಲ್ಲವೂ ಹೆಣ್ಣಿನ ಲೇಖನಿಯಿಂದ ಮೂಡಿ ಬರಬೇಕಷ್ಟೆ. ಇಂಥ ಎಲ್ಲಾ ಕ್ಷಣಗಳನ್ನು ತಮ್ಮ ಕೃತಿಗಳಿಗೆ ವಸ್ತುವಾಗಿಸಿಕೊಂಡವರು ವೈದೇಹಿ. ಅವರ 'ಮಲ್ಲಿನಾಥನಧ್ಯಾನ' ಸಂಕಲನದ 'ನಮ್ಮ ಲೋಕದ ಗೀತೆ' ಬರಹ ಇದಕ್ಕೊಂದು ಅದ್ಭುತ ಉದಾಹರಣೆಯಾಗಬಲ್ಲದು. ಮುಟ್ಟು ಬಾಣಂತನದಂತ ಮಡಿ-ಮೈಲಿಗೆಗಳನ್ನು ಅಸ್ಪಶ್ಯತೆಯ ನೆಲೆಯಲ್ಲಿ ನೋಡಿರುವುದು ಈ ಕಾದಂಬರಿಯ ವೈಶಿಷ್ಯವೇ ಸರಿ. ಈ ನೆಲೆಯ ಅಸ್ಪೃಶ್ಯತೆಯ ಜೊತೆಗೆ ಕಾದಂಬರಿಗೆ ಇನ್ನೊಂದು ಆಯಾಮವಿದೆ. ಅಸ್ಪೃಶ್ಯತೆಯ ಪ್ರಶ್ನೆಯನ್ನು ವೈದೇಹಿ ಮನುಷ್ಯರ ದೇಹದ ನೆಲೆಯಲ್ಲಿ ಮಾತ್ರ ನೋಡದೆ ಅವರ ಮನಸ್ಸಿನ ನೆಲೆಯಲ್ಲೂ ನೋಡುವುದರಿಂದ ಈ ಕಥನದ ವಸ್ತು ಮತ್ತಷ್ಟು ವಿಸ್ತರಿಸುತ್ತದೆ.

ಸರೋಜ ತನ್ನಕ್ಕ ರತ್ನನ ಮನೆಗೆ ಹೋಗಿದ್ದಾಗ ಭಾವ ಅಕ್ಕನೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿಯಿಂದ ಬೇಸರಗೊಳ್ಳುತ್ತಾಳೆ. ಅಕ್ಕ-ಭಾವನ ಮನಸ್ಸುಗಳ ಮಧ್ಯೆ ಹೊಂದಾಣಿಕೆ ಇಲ್ಲದ್ದನ್ನು ಗಮನಿಸಿದ ಸರೋಜ ಕಿರಿಕಿರಿಯಿಲ್ಲದ ಚಂದದ ಬದುಕು ತನ್ನದಾಗಬೇಕೆಂದು ಆಸೆಪಡುತ್ತಾಳೆ.

"ತಾನೆಣಿಸಿದವ ಸಿಕ್ಕಿದರೆ ಅವ ಯಾವ ಜಾತಿಯವನೆ ಆಗಿರಲಿ ತಾನು ಆಗುವವಳೇ. 'ಅಂತವ ಸಿಗದೆ ಇದ್ದರೆ ಕೇವಲ ನಿಮ್ಮ ಭಾರ ಹರಿಸುವುದಕ್ಕೋಸ್ಕರ ಮದುವೆ ಆಗುವವಳಲ್ಲ' ಅಂತೆಲ್ಲ ತಾಯಿ ತಂದೆಯೊಂದಿಗೆ ಹೇಳಿಬಿಡಬೇಕಂತ ಅನ್ನಿಸುತ್ತದೆ. ಅವ ಲಕ್ಷಣವಾಗಿರಬೇಕು. ಅವನಿಗೆ ಬುದ್ಧಿ ಶಕ್ತಿಯಿರಬೇಕು, ಹೃದಯವೂ. ದೇವರು-ದಿಂಡಿರು ಇತ್ಯಾದಿಗಳನ್ನು ಹಿಡಿಯಲೂ ಆಗದ, ಬಿಡಲೂ ಆಗದ ತನ್ನನ್ನು ಅದೆಲ್ಲದರಿಂದ ದೂರ ಕರೆದುಕೊಂಡು ಹೋಗಿ ಒಟ್ಟು ಬದುಕೆ ಎಷ್ಟು ಚೆಂದ ಎಂದು ಬದುಕುವುದನ್ನೇ ಪ್ರೀತಿಸುತ್ತ, ಗೌರವಿಸುತ್ತ ಇರುವಾತನನ್ನು ತಾನು ಮದುವೆಯಾಗಬೇಕು. ನಡೆ-ನುಡಿ, ಊಟ-ನೋಟ, ಹಾಸಿಗೆ..... ಎಲ್ಲದರಲ್ಲಿಯೂ ಅವುಗಳನ್ನು ಮೀರಿ ಉತ್ತಮಿಕೆಯತ್ತ ಬೆಳೆಯುತ್ತ ಇರಬೇಕು ತಾನು... ಅವನೊಂದಿಗೆ."[8]

ಸರೋಜನ ಮನಸ್ಸು ಬರೀ ಹೀಗೆ ಆವೇಶದ ಉದ್ವೇಗದ ಗೂಡಾಗಿದೆಯೇ ಹೊರತು, ತುಟಿ ತೆರೆಯದೆ ತಾನು ಬಯಲಾಗುವಂತಿಲ್ಲ ಎಂಬ ಸತ್ಯದಅರಿವಿದೆ. ಪಾರ್ತಕ್ಕನ ಮಗ ಭಾಸ್ಕರನನ್ನು 'ಭಾಸ್ಕರಣ್ಣ' ಎನ್ನಲೇ ಬೇಕಾದ ಪರಿಸ್ಥಿತಿಗೆ ಸಂಕಟಪಡುತ್ತಾಳೆ. ಅವನ ಹೆಂಡತಿ ಎಷ್ಟು ಅದೃಷ್ಟವಂತೆ ಅಂಥವ ಗಂಡನಾಗಿ ದೊರೆತರೆ ವಾದ್ಯ, ಮಂತ್ರಾಕ್ಷತೆ, ಮಂಟಪ, ಧಾರೆ, ಬಂದಜನ, ಊಟ, ಉಡುಗೊರೆ ಎಲ್ಲವನ್ನೂ ಒಂದರ್ಥದಲ್ಲಿ ಪೋಣಿಸಿದಂತೆ ಆದೀತು ಎಂದು ಹಂಬಲಿಸುತ್ತಾಳೆ.

"ತಾನು ಹೀಗೆಯೆ ಮನವೊಪ್ಪುವವನಿಗಾಗಿ ಕಾದು ಕಾದು ಕೊನೆಗೆ ಕೆನ್ನೆಗುಳಿ ಬಿದ್ದು, ಕೂದಲು ಹಣ್ಣಾಗಿ, ಚರ್ಮ ಸುಕ್ಕಾಗಿ ಬಿಟ್ಟೀತು ಎಂಬ ಭೀತಿಯಿಂದ ಯಾರನ್ನಾದರೂ ಅವಸರದಿಂದ ಒಪ್ಪಿ ಬಿಡಲಿಕ್ಕಿಲ್ಲವಷ್ಟೆ? ಆ ಆತ ರತ್ನಕ್ಕನ ಗಂಡನಂತೆ ಯಾವ ಭಾವನೆಗಳಿಗೂ ಸ್ಪಂದಿಸದೆ, ಸ್ಪರ್ಶಿಸದೆ ತನ್ನನ್ನು ಅಸ್ಪೃಶ್ಯಳನ್ನಾಗಿಯೇ ಇರಿಸಿ ತನ್ನ ಯಾವ ಭಾವನೆಗಳಿಗೂ ಅಸ್ಪೃಶ್ಯನಾಗಿಯೇ ಉಳಿದು ತಮ್ಮ ಮಕ್ಕಳ ಯಾವ ಉತ್ತಮ ಭಾವನೆಗಳಿಗೂ ಸ್ಪಂದಿಸದೆ ಅಸ್ಪೃಶ್ಯ ಮನದವರಾಗಿಯೇ ಉಳಿಯುವಂತಹ ಸಂಸಾರ ತನ್ನದಾಗಲಿಕ್ಕಿಲ್ಲವಷ್ಟೇ... ಎಂದು ಯೋಚಿಸುತ್ತಾಳೆ".[9]

ದೇಹ-ದೇಹಗಳ ಸ್ಪರ್ಶ ಮತ್ತು ಮನಸ್ಸು-ಮನಸ್ಸುಗಳ ಸ್ಪರ್ಶದ ಪ್ರಶ್ನೆಗಳನ್ನು ಹೀಗೆ ಏಕಕಾಲದಲ್ಲಿ ಸಮಸ್ಯಾತ್ಮಕಗೊಳಿಸಿ ನೋಡುವಲ್ಲಿ, ಈ ಕೃತಿಯ ಹೆಗ್ಗಳಿಕೆಯ ಜೊತೆಗೆ ಇದು ಈ ಕೃತಿಯ ವೈಶಿಷ್ಟ್ಯವು ಆಗಿದೆ. ಮೇಲ್ನೋಟಕ್ಕೆ ಸಾಧಾರಣ ಕತೆಯಂತೆನಿಸಿದರು ಕಥನದ ಓದುವಿಕೆಯಲ್ಲಿ ಸಾಧಾರಣತೆಯನ್ನು ಮೀರಿದ ಒಂದು ಮಹತ್ವಾಕಾಂಕ್ಷೆಯ ಬರಹವಾಗುವಲ್ಲಿ ಕೃತಿಯ ಯಶಸ್ಸಿದೆ.

ರಘುನಾಥ ಎಚ್.ಎಸ್. ಅವರು ತಮ್ಮ ಸಂಶೋಧನಾ ಮಹಾಪ್ರಬಂಧ "ಹೊಸಗನ್ನಡ ಕಾದಂಬರಿಗಳಲ್ಲಿ ಅಂತರ್ಜಾತೀಯ ಮತ್ತು ಮತೀಯ ವಿವಾಹ"ದಲ್ಲಿ ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯ ಕುರಿತಾಗಿ ಹೀಗೆ ಹೇಳಿದ್ದಾರೆ.

ವೈದೇಹಿ **"ಅವರ ಅಸ್ಪೃಶ್ಯರು ೧೯೮೨ರಲ್ಲಿ ಪ್ರಕಟಗೊಂಡಿದ್ದು ಅಸ್ಪೃಶ್ಯತೆಯಂತಹ ಗಂಭೀರ ಸಾಮಾಜಿಕ ಸಮಸ್ಯೆಯನ್ನು ಕುರಿತು ಚರ್ಚಿಸದ ತೆಳುವಾದ ಕೃತಿಯಾಗಿದೆ. ಸಾಂಪ್ರದಾಯಿಕ ಮನಸ್ಸುಗಳ ಅಸ್ಪೃಶ್ಯತೆಯನ್ನು ಕಂಡುಕೊಳ್ಳುವ ಮನೋಭಾವ ಕುರಿತು ವಿಶ್ಲೇಷಿಸುವ ಈ ಕೃತಿಯಲ್ಲಿ ಸುಧಾರಣಾವಾದಿ ಯುವಕನೊಬ್ಬ ಅಸ್ಪೃಶ್ಯರ ಉದ್ಧಾರದ ಸದುದ್ದೇಶದಿಂದ ವಿದ್ಯಾವಂತಳಾದ ಅಸ್ಪೃಶ್ಯ ಕನ್ನೆಯೊಬ್ಬಳನ್ನು ಆದರ್ಶದ ನೆಲೆಯಿಂದ ಅಂತರ್ಜಾತೀಯ ವಿವಾಹವಾದ ಪರಿಣಾಮಗಳನ್ನು ಚರ್ಚಿಸಲಾಗಿದೆ. ಕಾದಂಬರಿಯ ವಸ್ತು ಸಹ ಇದುವೇ ಆಗಿದೆ".**[3] ಎಂಬ ಹೇಳಿಕೆಯನ್ನು ನಾನು ಈ ಸಂದರ್ಭದಲ್ಲಿ ಒಪ್ಪಿಕೊಳ್ಳಲಾಗುವುದಿಲ್ಲ. ಮೇಲ್ನೋಟಕ್ಕೆ ವಾಸುದೇವರಾಯರ ಕೌಟುಂಬಿಕ ಕಥೆಯಂತೆಯೇ ಕಾಣುವ ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿ ಅಸ್ಪೃಶ್ಯತೆಯಂತ ಸಾಮಾಜಿಕ ಸಮಸ್ಯೆಯನ್ನು ವಸ್ತುವಾಗುಳ್ಳದ್ದಾಗಿದೆ. ಅಸ್ಪೃಶ್ಯತೆಯನ್ನು ಜಾತಿಯ ನೆಲೆಯಲ್ಲಿ ನೋಡುವಾಗ ಬ್ರಾಹ್ಮಣರು-ಕೊರಗರ ಜಾತಿಯಲ್ಲಿ ಮಾತ್ರ 'ಅಸ್ಪೃಶ್ಯತೆ'ಯನ್ನು ನೋಡದೆ ಮೇಲ್ಜಾತಿ ಕೆಳಜಾತಿ ಎಂಬುದು ಕೇವಲ ಬ್ರಾಹ್ಮಣ-ಕೊರಗ ಜಾತಿಯ ಮಧ್ಯೆ ಮಾತ್ರ ಇಲ್ಲದೆ ಕೆಳಜಾತಿಯವರೆನಿಸಿಕೊಂಡವರಲ್ಲಿಯೂ ಇದ್ದಿರಬಹುದಾದ ಅಸ್ಪೃಶ್ಯತಾ ಮನೋಭಾವವನ್ನು ಚರ್ಚಿಸುತ್ತದೆ. ಕೆಳಜಾತಿಯವರು ತಮಗಿಂತ ಕೆಳಜಾತಿಯವರನ್ನು ಅಸ್ಪೃಶ್ಯರನ್ನಾಗಿ ಕಾಣುತ್ತಿರುವುದರ ಬಗ್ಗೆ ಚರ್ಚಿಸುತ್ತದೆ. ಮುಂದುವರೆದು ಮೇಲ್ಜಾತಿಯವರೆನಿಸಿಕೊಂಡ ಬ್ರಾಹ್ಮಣ ಸ್ತ್ರೀಯರು ಮುಟ್ಟು, ಬಾಣಂತನ, ಮಡಿ-ಮೈಲಿಗೆಯ ಹೆಸರಿನಲ್ಲಿ ಅನುಭವಿಸುತ್ತಿರುವ ಅಸ್ಪೃಶ್ಯತೆಯನ್ನು ಚರ್ಚಿಸುವುದರ ಜೊತೆಗೆ ಮತ್ತೊಂದು ಆಯಾಮಕ್ಕೆ ತೆರೆದುಕೊಳ್ಳುತ್ತದೆ. ಅದು ದೇಹ ಮನಸ್ಸಿಗಳಿಗೆ ಸಂಬಂಧಿಸಿದ್ದು. ದೇಹ ಮನಸ್ಸುಗಳ ನಡುವೆ ಹೊಂದಾಣಿಕೆ ಇಲ್ಲದಿದ್ದರೆ ಅದು ಕೂಡ ಒಂದು ರೀತಿಯ ಅಸ್ಪೃಶ್ಯತೆ ಎನ್ನುವುದನ್ನು ಕೃತಿಯಲ್ಲಿ ಭಿನ್ನಭಿನ್ನವಾಗಿ ನೋಡುವ ಸಾಧ್ಯತೆ ಇರುವುದರಿಂದ ಹೊಸ ಹೊಳಹುಗಳನ್ನು ದಾಖಲಿಸುತ್ತಾ ಹೋಗುತ್ತದೆ. 'ಅಸ್ಪೃಶ್ಯರು' ಎಂಬ ಶೀರ್ಷಿಕೆಯಲ್ಲೇ ವೈದೇಹಿಯವರು ತಮ್ಮ ಕೃತಿಯಲ್ಲಿ ಹಲವು ಬಗೆಯ ಅಸ್ಪೃಶ್ಯತೆ ಮತ್ತು ಅಸ್ಪೃಶ್ಯರನ್ನು ಒಳಗೊಳ್ಳುವ ಇಂಗಿತವನ್ನು, ಸೂಚನೆಯನ್ನು ಕಾಣಿಸಿರುವುದು ಸ್ಪಷ್ಟವಾಗಿದೆ.

ದಕ್ಷಿಣ ಕನ್ನಡದ ದೇವಕಿಶೆಟ್ಟಿ ಬರೆದ ಒಂದು ಕಥೆ "ಜಾತಿಭೂತಕ್ಕೆ ಬಲಿ" ಅಸ್ಪೃಶ್ಯತೆಯ ಇತರೆ ಮುಖಗಳನ್ನು ಬಿಚ್ಚಿಡುವಲ್ಲಿ ವಿಶಿಷ್ಟವೆನಿಸುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಗಾಂಧಿಯವರ

ಅಸ್ಪೃಶ್ಯತಾ ವಿರೋಧಿ ಆಂದೋಲನ ದಕ್ಷಿಣ ಕನ್ನಡದ ಗ್ರಾಮೀಣ ಪರಿಸರದಲ್ಲಿ ಬೀರಿದ ಪರಿಣಾಮವನ್ನು ಚಿತ್ರಿಸುವ ಕಥೆ.

ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಯಲ್ಲಿ ಈಗಾಗಲೇ ಸ್ಪಷ್ಟೀಕರಿಸಿದಂತೆ ಜಾತಿ ಶ್ರೇಣೀಕರಣದ ನೆಲೆಯಲ್ಲಿ ಅಸ್ಪೃಶ್ಯತೆಯನ್ನು ಗುರುತಿಸಲಾಗಿದೆಯೆ ಹೊರತು ಮುಟ್ಟು, ಬಾಣಂತನದ, ಮಡಿ–ಮೈಲಿಗೆಗಳನ್ನು ಕಾದಂಬರಿಯಲ್ಲಿ ಪ್ರಸ್ತಾಪಿಸುವುದಿಲ್ಲ. ಅದು ಅವರ ಕಾದಂಬರಿಯ ವಸ್ತುವೂ ಅಲ್ಲ. ಬಸರಿ ಬಯಕೆ, ಹೆರಿಗೆ, ಬಾಣಂತನದಂತ ಸಂದರ್ಭಗಳು ಕಾದಂಬರಿಯಲ್ಲಿ ಬಂದರೂ ಅದು ಸಹಜವೆಂಬಂತೆ ಚಿತ್ರಣಗೊಂಡಿದೆ. ಇಂತಹ ಚಿತ್ರಣಗಳನ್ನು ನಾಗವೇಣಿಯವರ ದಾನ, ತಾಯ್ತನ, ಮೀಯುವ ಆಟ, ನಾಕನೆ ನೀರು ಕಥೆಗಳಲ್ಲಿ ವಿಶಿಷ್ಟ ಬಗೆಯ ವಿವರಗಳಿರುವುದನ್ನು ಗಮನಿಸಬಹುದಾಗಿದೆ. ಈ ಸಂದರ್ಭಕ್ಕೆ ದಾನ ಕಥೆ ಒಳ್ಳೆಯ ಉದಾಹರಣೆಯಾಗಬಹುದು.

ಬಾಕ್ಯಾರು ಗುತ್ತಿಲ್ಲಿ ಬಾಣಂತನವೆಂದರೆ ಅದು ನಿಜಕ್ಕೂ ಒಂದು ಸಾಂಪ್ರದಾಯಿಕ ಬಾಣಂತನವೆ ಎಂಬಂತೆ ಚಿತ್ರಿತವಾಗಿದೆ. **"ಗುತ್ತಿನ ಬಾಣಂತನವೆಂದರೆ ಎಲ್ಲರಿಗೂ ಒಂಥರಾ ಕಣ್ಣರಳಿಕೆಯೆ ಅಲ್ಲಿನದು ಅಂತಿಂಥ ಬಾಣಂತನವಲ್ಲ. ಹಸಿ ಬಾಣಂತಿ ತುಪ್ಪದಲ್ಲಿ ಮುಳುಗಿ ಲೇಹ್ಯ – ಕಷಾಯಗಳಲ್ಲಿ ತೇಲಬೇಕು. ಆ ಲೇಹ್ಯ ಕಷಾಯಗಳೇನು ಒಂದು ಜಾತಿಯವೇ! ನೂರಾರು ಜಾತಿಯವು. ಇವೆಲ್ಲದರ ಜತೆಗೆ ಹತ್ತಿಪ್ಪತ್ತು ನಮೂನೆಯ ಸಂಬಾರ ಗಂಜಿಗಳ ಹಿಮ್ಮೇಳ ಬೇರೆ. ಮೈ ತಂಪಿಗೆ ಒಂದಾದರೆ... ಮೊಲೆ ಹಾಲು ಉಕ್ಕಿಸಲು ಇನ್ನೊಂದು... ಉಷ್ಣಕ್ಕೊಂದು... ಶೀತಕ್ಕೊಂದು ಸೊಂಟನೋವು ತಗ್ಗಿಸಲು ಮತ್ತೊಂದು. ಹೀಗೆ ಬಾಣಂತಿಯ ಸುತ್ತ ಇವುಗಳದ್ದೇ ರಂಪಾಟ.**

ಗುತ್ತಿನ ಮನೆಯ ಬಾಣಂತನದ ವೈಭವ – ಅಬ್ಬರ ಊರವರಿಗೆ ತಿಳಿಯುವುದೇ ದಿನಾ ಅಲ್ಲಿಂದ ಬೀಸಿ ಬರುವ ತುಪ್ಪದಲ್ಲಿ ಬೇಯುವ ಲೇಹ್ಯ, ಸಂಬಾರಗಳ ಪರಿಮಳದಿಂದ; ಕಷಾಯ – ಮದ್ದುಗಳ ಕಮಟನಿಂದ. ಅದರಲ್ಲೂ ತಪ್ಪದಲ್ಲಿ ಹುರಿಯುವ ಮೆಂತೆ – ಬೆಳ್ಳುಳ್ಳಿಗಳ ಪರಿಮಳಕ್ಕೆ ಬರೀ ಊರಿನ ಹೆಂಗಸರಾಕೆ ಗಂಡಸರೂ ಕೂಡಾ ಬಾಣಂತನದ ಸುಖವನ್ನೊಮ್ಮೆ ಅನುಭವಿಸಲು ಹಾತೊರೆಯಬೇಕು! ಅಂಥ ಹಿತವಾದ ಪರಿಮಳ ಆ ಬಾಣಂತಿ ಲೇಹ್ಯ ಪರಿಕರಗಳದ್ದು".[6]

ಇಲ್ಲಿ ಬಾಣಂತನ ಎನ್ನುವುದು ಮಡಿ–ಮೈಲಿಗೆಯ ನೆಲೆಯಲ್ಲಿ ಚಿತ್ರಿತವಾಗದೆ ಅದೊಂದು ಸಂಪ್ರದಾಯವೆಂಬಂತೆ ಚಿತ್ರಣಗೊಂಡಿದೆ. ಮುಟ್ಟು, ಬಾಣಂತನ, ಮಡಿ–ಮೈಲಿಗೆಗಳು ಒಂದೇ ಆಗಿದ್ದರೂ ವೈದೇಹಿ ಮತ್ತು ನಾಗವೇಣಿ ತಮ್ಮ ಕೃತಿಗಳಲ್ಲಿ ಇವುಗಳನ್ನು ಅಭಿವ್ಯಕ್ತಿಸಿದ ಬಗೆ ಮಾತ್ರ ಭಿನ್ನವಾಗಿದ್ದು ಒಂದೊಂದು, ಒಂದೊಂದು ಕಾರಣಕ್ಕೆ ವಿಶಿಷ್ಟವಾದವುಗಳೇ ಆಗಿವೆ.

೪.೨ ಕಾದಂಬರಿಯಲ್ಲಿ ವೈದವ್ಯದ ಪ್ರಸ್ತಾಪ

ಗಂಡ ಸತ್ತ ಬಳಿಕ ವಿಧವೆ ಎನ್ನಿಸಿಕೊಳ್ಳುವ ಹೆಣ್ಣನ್ನು ಈ ಸಮಾಜ ವಿಧವೆ, ಮುಂಡೆ ಎಂದೆಲ್ಲ ಕರೆಯುವುದುಂಟು. ಸಾಹಿತ್ಯದ ಸಂದರ್ಭದಲ್ಲೂ ಹೀಗೆ ಬಳಕೆಯಾಗುತ್ತಿರುವ ವಿಧವೆ ಹೆಣ್ಣನ್ನು ವೈದೇಹಿ ಮತ್ತು ನಾಗವೇಣಿ ತಮ್ಮ ಕೃತಿಗಳಲ್ಲಿ ಹೇಗೆ ಕರೆದುಕೊಂಡಿದ್ದಾರೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಅಸ್ಪೃಶ್ಯರು ಮತ್ತು ಗಾಂಧಿ ಬಂದ ಎರಡೂ ಕಾದಂಬರಿಗಳಲ್ಲೂ ವಿಧವೆಯ ಪ್ರಸ್ತಾಪ ಬರುತ್ತದೆ. ವೈದವ್ಯದ ಬಗೆಗೆ ಈ ಇಬ್ಬರೂ ಲೇಖಕಿಯರು ಪರಿಭಾವಿಸಿದ ರೀತಿಯಲ್ಲಿ ಸಾಕಷ್ಟು ಭಿನ್ನತೆಗಳಿವೆ.

ಅಸ್ಪೃಶ್ಯರು ಕಾದಂಬರಿಯಲ್ಲಿ ಬರುವ ಪಾರ್ತಕ್ಕ, ಗಂಡ ಸತ್ತ ಮೇಲೆ ವಾಸುದೇವರಾಯರ ಮನೆಯಲ್ಲಿ ಎಲ್ಲರಿಗೂ ಬೇಕಾಗಿ ಮನೆಯ ಸದಸ್ಯೆಯಂತೆ ಇರುವವರು. ಜಾತಿ, ಲಿಂಗ, ಸಮಾಜದ ಆಚಾರ-ವಿಚಾರ, ಸಂಪ್ರದಾಯ ಯಾವುದನ್ನೂ ಪ್ರಶ್ನಿಸದೆ ಅವು ಸಹಜವೆಂಬಂತೆ ಒಪ್ಪಿಕೊಂಡು ಪರಂಪರಗತವಾಗಿ ನಡೆದುಕೊಂಡು ಬಂದಿರುವ ರೂಢಿ ಆಚರಣೆಗಳನ್ನು ತಾನು ಪಾಲಿಸಿಕೊಂಡು ಬಂದದ್ದಲ್ಲದೆ ಮುಂದುವರೆಸಿಕೊಂಡು ಹೋಗಬೇಕಾದವಳು ಎಂಬಂತೆ ಮಡಿ-ಮೈಲಿಗೆಯನ್ನು ರೂಢಿಸಿಕೊಂಡು ಜೀವಿಸುತ್ತಿರುವ ಪಾರ್ತಕ್ಕ ತನ್ನ ಒಬ್ಬನೇ ಮಗ ಭಾಸ್ಕರ ಕೊರಗ ಜಾತಿಯ ಹೆಣ್ಣು ತುಕ್ರಿಯನ್ನು ಮದುವೆಯಾಗಿದ್ದಾನೆ ಎನ್ನುವ ಕಾರಣಕ್ಕೆ ಅವನಿಂದ ಸಂಪೂರ್ಣವಾಗಿ ದೂರವೇ ಉಳಿದು ಬಿಡುತ್ತಾಳೆ. ಮಡಿ-ಮೈಲಿಗೆಯನ್ನು ಚಾಚೂತಪ್ಪದೇ ನಡೆಸಿಕೊಂಡು ಬರುವವಳಾಗಿದ್ದು, ಗಂಡು ಹೆಣ್ಣು ಎನ್ನುವ ಯಾವ ಭೇದವಿಲ್ಲದೆ ತನ್ನ ಮಡಿಯನ್ನು ಕಾಪಾಡಿಕೊಂಡು ಮೋಕ್ಷ ಪಡೆಯಬೇಕೆಂದಿರುವ ಪಾರ್ತಕ್ಕ ತುಕ್ರಿಯನ್ನು ವಾಸುದೇವರಾಯರು ಬಸುರಿ ಎಂದು ಮನೆಗೆ ಕರೆತಂದಾಗ ಮನೆಯ ಅಟ್ಟ ಏರಿ ಹಳೆಯ ಪಾತ್ರೆಗಳ ಸಂದಿಯಲ್ಲಿ ಅಡಗಿ ಕುಳಿತು ತನ್ನ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವಷ್ಟರ ಮಟ್ಟಿಗೆ ವಿಧವೆ ಪಾರ್ತಕ್ಕ ನಡೆದುಕೊಳ್ಳುತ್ತಾಳೆ.

ಮನುಷ್ಯರನ್ನು ಕೇವಲ ಶೋಷಕರು ಮತ್ತು ಶೋಷಿತರು ಎಂಬ ಎರಡು ಸರಳ ವರ್ಗೀಕರಣದಲ್ಲಿ ಪರಿಭಾವಿಸಿದೆ. ಬೇರೆ ಬೇರೆ ಸಂದರ್ಭಗಳಲ್ಲಿ ಶೋಷಕರು ಶೋಷಿತರೆಂದು ಕಾಣುವ ಶೋಷಿತರು ಶೋಷಕರೆಂಬಂತೆ ವರ್ತಿಸುವ ಹಲವು ಸನ್ನಿವೇಶಗಳನ್ನು ಪಾರ್ತಕ್ಕನ್ನ ಮೂಲಕ ನಿರೂಪಕಿ ಮುಖಾಮುಖಿಯಾಗಿಸುತ್ತಾರೆ. ಸಮಾಜದ ಇಂಥ ಸಂಕಿರಣ ವಿನ್ಯಾಸಕ್ಕೊಂದು ಉದಾಹರಣೆ ಪಾರ್ತಕ್ಕ. ಗಂಡ ಸತ್ತ ಮೇಲೆ 'ಮುಂಡೆ' ಎಂಬ ಅಂಕಿತವನ್ನು ಧರಿಸಿ, ತಲೆಬೋಳಿಸಿಕೊಂಡು ಒಂದು ರೀತಿಯಲ್ಲಿ ವಾಸುದೇವರಾಯರ ಆಶ್ರಯದಲ್ಲಿ

ಬದುಕುತ್ತಾ, ಜಾತಿ-ಲಿಂಗ ವ್ಯವಸ್ಥೆಯ ವಿಕೃತ ನೀತಿ ಮತ್ತು ಅದರ ಪರಿಣಾಮಕ್ಕೆ ಸಂಕೇತವಾಗಿರುವ ಪಾರ್ತಕ್ಕನನ್ನು ಶೋಷಿತರು ಎಂದು ಒಂದು ನೆಲೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಇದೇ ಪಾರ್ತಕ್ಕ ಸ್ವತಃ ತಾನು ಜಾತಿಯ ನೆಲೆಯಲ್ಲಿ ತನಗಿಂತ ಕೀಳು ಎಂದು ತಿಳಿಯಲಾದ ಇತರರನ್ನು ಅವರು ಗಂಡಾಗಲೀ, ಹೆಣ್ಣಾಗಲೀ ಕೀಳಾಗಿ ನೋಡುವ ಕಾರಣಕ್ಕಾಗಿ ಇನ್ನೊಂದು ನೆಲೆಯಲ್ಲಿ ಪಾರ್ತಕ್ಕನನ್ನು ಶೋಷಕರ ಗುಂಪಿಗೆ ಸೇರಿಸಬಹುದು. ತನ್ನ ಜಾತಿಯ ಪುರುಷರಿಗೆ ಮಾತ್ರ ಅಧೀನಳಾಗಿದ್ದು, ಬೇರೆ ಕೆಳಜಾತಿಯ ಗಂಡುಗಳನ್ನು ಕೀಳಾಗಿಯೇ ನೋಡುವುದು ಅಂದರೆ ಮಹಿಳೆಯರೆಲ್ಲ ಶೋಷಿತರು ಪುರುಷರೆಲ್ಲ ಶೋಷಕರು ಎಂಬ ಸರಳ ಸಮೀಕರಣಗಳನ್ನು ಕಾದಂಬರಿ ಒಡೆಯುತ್ತದೆ.

ಗಾಂಧಿ ಬಂದ ಕಾದಂಬರಿಯ ಪಟೇಲ ಸೀನಪಯ್ಯ ಹೆಬ್ಬಾರರ ತಾಯಿ ಅಂಮುಣಿಯಮ್ಮ ಮತ್ತು ಮಗಳು ದ್ರೌಪದಿ ಇಬ್ಬರು ತಲೆ ಬೋಳಿಸಿಕೊಂಡು ವಿಧವೆ ಪಟ್ಟವನ್ನು ಹೊತ್ತುಕೊಂಡು ಬದುಕುತ್ತಿರುವವರು. ಹಿಂದಿನಿಂದ ನಡೆದುಕೊಂಡು ಬಂದ ರೂಢಿ ಎಂಬಂತೆ ತಲೆ ಬೋಳಿಸಿಕೊಳ್ಳುವುದಕ್ಕೆ ಯಾವ ತಕರಾರು ಇಲ್ಲದೆ ಮಡಿ ಮೈಲಿಗೆಯಿಂದ ನಡೆದುಕೊಳ್ಳುತ್ತಾ ಮೊಮ್ಮಗಳಿಗೂ ಅದನ್ನೇ ಪಾಠಮಾಡುತ್ತಿರುವ ಆ ಮುದಿ ಬ್ರಾಂಮಣ್ತಿಯಮ್ಮನ ಶುದ್ಧ, ಮಡಿ-ಮೈಲಿಗೆಯ ಕತೆ ಕೇಳಿದರೆ ಹೆಬ್ಬಾರರ ಕೊಟ್ಟಿಗೆಯೊಳಗಿನ ಕೋಣಗಳೂ ಎದ್ದು ಬಿದ್ದು ನಗಬೇಕು ಹಾಗಿದೆ. ಅಮ್ಮಣಿಯಮ್ಮ ಸಾಮಾನ್ಯವಾಗಿ ತನ್ನ ಮಡಿ ಕೆಡಿಸುವ ಶೂದ್ರ ಮಕ್ಕಳನ್ನೆಲ್ಲ ಅಲ್ಲೇ ಕೆಳ ಅಂಗಳದ ಮೂಲೆಯಲ್ಲಿ ನಿಲ್ಲಿಸಿ ಮಾತನಾಡಿಸಿದರೆ ಶೂದ್ರರೆ ಆಗಿರುವ ಮ್ಯೊಲಿಗಳನ್ನು ಮಾತ್ರ ಅವರು ದೇವರ ಕೆಲಸಕ್ಕೆ ಹತ್ತಿರವಾದವರೆಂಬ ಕಾರಣಕ್ಕೆ ಎರಡು ಮಾರ್ಪು ಹತ್ತಿರಕ್ಕೆ ಬಿಟ್ಟುಕೊಳ್ಳುವುದಿದೆ. ಆದರೂ ಆಕೆ ಅವರ ಕೈಗೂ ಹಾಕುವುದು, ಪಡೆಯುವುದು ಎಲ್ಲವೂ ಒಂದುವರೆ ಮಾರ್ಪು ದೂರ ಅಥವಾ ಎತ್ತರದಿಂದಲೇ. ಅಂಮುಣಿಯಮ್ಮನೇನಾದರೂ ಶೂದ್ರಮಕ್ಕಳಿಂದ ಅಥವಾ ಇತರ ಅನಿಷ್ಟವುಗಳಿಂದ ಮಡಿಕೆಡಿಸಿಕೊಂಡರೆ, ನೇರವಾಗಿ ದೇವರ ಕೆರೆಯಲ್ಲಿ ಮುಳುಗೆದ್ದು ಮೈಲಿಗೆಯಾದ ವಸ್ತುಗಳನ್ನು ಕೆರೆಯಲ್ಲಿ ಮುಳುಗಿಸಿ ತೆಗೆದು ನಾರಾಯಣ...ನಾರಾಯಣ... ಎಂದು ನಾಕೈದು ಬಾರಿ ಕೂಗುತ್ತಾ ಮೌನವಾಗಿ ಮಿಂದು ಬಂದರೆ ಅಲ್ಲಿಗೆ ಮುಗಿಯುತ್ತದೆ ಅವರ ಮಡಿಯೂಟ.

ವೈದವ್ಯದ ಬಗೆಗೆ ಲೇಖಕಿಯ ಅಭಿಪ್ರಾಯ ಆಶಯಗಳೆಲ್ಲ ವ್ಯಕ್ತವಾಗುವುದು ದ್ರೌಪದಿಯ ಪಾತ್ರದಲ್ಲಿ. ತನ್ನ ಹದಿನೆಂಟನೆ ವಯಸ್ಸಿನಲ್ಲೆ ತನ್ನ ಗಂಡನನ್ನು ಕಳೆದುಕೊಂಡ ದ್ರೌಪದಿಯ ಇಡಿಯ ಬದುಕೇ ಕವಚಿ ಬಿದ್ದಾಂತಾಗಿ ಯಾವ ಗೌಜಿ ಗಮ್ಮತ್ತು ಬೇಡವೆಂದು ನಿಂತಲ್ಲೇ ನಿಂತು ನೋಡಿದ್ದನ್ನೆ ಮತ್ತೆ ಮತ್ತೆ ನೋಡುವಂತಾಗಿದ್ದಾಳೆ. ಧರ್ಮ ಸೂಕ್ಷ್ಮಜ್ಞರಾದ ಹೆಬ್ಬಾರರು ಮಗಳ

ಬದುಕು ಬೋಳಾದೊಡನೆ, ಧರ್ಮ ವಿರೋಧಿಯಾಗದೆ ಆಕೆಯ ವಿರೋಧ-ಬಿಕ್ಕಳಿಕೆಗಳ ನಡುವೆಯೇ ಆಕೆಯ ತಲೆಯನ್ನು ಬೋಳಿಸಿದರು. ಆದರೆ 'ಆಕೆಯ ಜೀವನದ ನೈಸರ್ಗಿಕ ಒತ್ತಡಗಳನ್ನು ಮಾತ್ರ ಬೋಳಿಸೋಕೆ ಸಾಧ್ಯವಾಗಿಲ್ಲ'. ಬೋಳಿಸಿದಂತೆಲ್ಲ ಮತ್ತೆ ಮತ್ತೆ ಚಿಗುರಿ ಬೆಳೆವ ಕೂದಲಂತೆಯೇ ಆಕೆಯೊಳಗೆ ಚಿಗುರಿ ಬರುವ ಬಯಕೆ, ಭಾವನೆ, ಹಂಬಲಗಳನ್ನು ಅದುಮಿಡುವ ಶಕ್ತಿ ಆ ಎಳೆಜೀವಕ್ಕೆ ಇಲ್ಲವಾಗಿ ಆಕೆಯನ್ನ ದ್ವಂದ್ವಕ್ಕೆ ಈಡುಮಾಡಿದೆ.

ಬ್ರಾಹ್ಮಣ ಸಮಾಜದೊಳಗಿನ ಇಂಥ ಇಕ್ಕಟ್ಟುಗಳನ್ನು ಅಶಾಂತ ಜ್ವಾಲಾಮುಖಿಗಳನ್ನು ಕಾದಂಬರಿ ಅಷ್ಟೇ ಸಂಕಿರಣವಾಗಿ ಚರ್ಚಿಸುತ್ತದೆ. 'ತಲೆ ಬೋಳಿಸಿಕೊಂಡರು ಮನಸ್ಸು ಬೋಳಿಸಿಕೊಳ್ಳದ ದ್ರೌಪದಿ ಎಲ್ಲಾ ಸಾಂಪ್ರದಾಯಿಕ ಚೌಕಟ್ಟು ದಾಟಿ ಬಂದು ಅನ್ಯಧರ್ಮಿಯ ಅದ್ರಾಮ ಬ್ಯಾರಿಯನ್ನು ಮದುವೆಯಾಗಿ ಸುಖದ ಜೀವನ ನಡೆಸುತ್ತಾಳೆ'. ಲೇಖಕಿಗಿರುವ ವಿಧವಾ ವಿವಾಹದ, ಪುನರ್ ವಿವಾಹದ ಕನಸು ಇಲ್ಲಿ ಸಾಕಾರಗೊಳ್ಳುತ್ತದೆ. ಬ್ರಾಹ್ಮಣ ಸಮುದಾಯದ ಕಟ್ಟುಪಾಡುಗಳು ಏನೇ ಇದ್ದಾಗಲು ಎಳೆ ವಿಧವೆಯ ಮುಗ್ಧ ಮನಸ್ಸು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗುತ್ತದೆ.

ದ್ರೌಪದಿಯ ಮಾವ ಕೇಶವ ಶ್ಯಾನುಭೋಗರು ಮಗ ನರಹರಿ ಸತ್ತಾಗ ದ್ರೌಪದಿಯ ಮರುಮದುವೆಯ ಪ್ರಸ್ತಾಪ ಎತ್ತಿದ್ದರಿಂದ ಎಲ್ಲರ ವಿರೋಧ ಕಟ್ಟಿಕೊಂಡಿದ್ದರು. ದ್ರೌಪದಿ ಅದ್ರಾಮನನ್ನು ಮದುವೆಯಾದಾಗ ಉಳಿದ ಬ್ರಾಹ್ಮಣರೆಲ್ಲ ಸೇಡಿನ ಹಲವು ಹತ್ತು ಸಾಧ್ಯತೆಗಳನ್ನು ಚರ್ಚಿಸುತ್ತಿದ್ದಾಗ ಶ್ಯಾನುಭೋಗರು ಹೇಳುತ್ತಾರೆ; 'ಹುಡುಗಿಯ ನೊಂದ ಬದುಕಿಗೆ, ತುಂಬಿದ ಯೌವನಕ್ಕೆ ನಮ್ಮ ಸಂಪ್ರದಾಯ, ರೀತಿ ರಿವಾಜುಗಳ ಅಂಕುಶ ಹಾಕಿದ್ದೇ ಪರಮ ತಪ್ಪು. ದೇಹ ಮನಸ್ಸಿನ ಹಂಬಲ, ಬಯಕೆಗಳನ್ನು ಅದುಮಿಡುವ ಶಕ್ತಿ ಆ ವಯಸ್ಸಿಗೆ ಇಲ್ಲ. ಆ ದೇಹಕ್ಕೂ ಇಲ್ಲ. ಇದು ಆಕೆಯ ಯೌವನದ ಕುರುಡಲ್ಲ. ಮನಸ್ಸು ಸಹಜವಾದ ಬಯಕೆ. ಮಗ ಸತ್ತಾಗಲೇ ಕೇಶವ ಶ್ಯಾನುಭೋಗರು ವಿಧವೆ ದ್ರೌಪದಿಗೆ ಇನ್ನೊಂದು ಮದುವೆ ಮಾಡುವಾಂತ ಹೇಳಿದ್ದರು ಆದರೆ ಹೆಬ್ಬಾರರೇ ಮುಖ ತಿರುಗಿಸಿದ್ದರು.

ಅಂತರ್ಜಾತಿಯ ಅದರಲ್ಲೂ ಅಂತರ್‌ಧರ್ಮಿಯ ಅದ್ರಾಮನನ್ನು ದ್ರೌಪದಿ ಮದುವೆಯಾದಾಗ ಬ್ರಾಹ್ಮಣ ಮತ್ತು ಮುಸ್ಲಿ ಎರಡೂ ಧರ್ಮದ ಮುಖಂಡರು ನಡೆಸುವ ಹುನ್ನಾರಗಳು ಅಷ್ಟಿಷ್ಟಲ್ಲ. ಜಾತಿಯನ್ನೇಕೆ ಅವಳ ಹೆಸರನ್ನೆ ಬದಲಿಸಿ ದೋಮು ಬ್ಯಾರ್ದಿ ಎಂದು ಮರುನಾಮಕರಣ ಮಾಡುತ್ತಾರೆ. ಆಕಡೆ ಮುಸ್ಲಿಂ ಧರ್ಮದ ಕಟ್ಟುಪಾಡಿನಂತೆ, ಅದ್ರಾಮನನ್ನು ನಾಳೆಯೇ ಮಸೀದಿಗೆ ಕರೆತರಬೇಕೆಂದು ಮ್ಯೊದಿನ್ ಬ್ಯಾರಿಯವರಿಗೆ ಅಪ್ಪಣೆ ಮಾಡುತ್ತಾರೆ. ಆತನ

ಜೊತೆ ಆ ಹೆಣ್ಣನ್ನೂ ಕರೆತಂದು ಇಲ್ಲಿ ಮನೆಯಲ್ಲೇ, ಧರ್ಮಗುರುಗಳ ಸಮ್ಮುಖದಲ್ಲಿ ಮತಾಂತರಗೊಳಿಸಬೇಕೆಂದು ತೀರ್ಮಾನಿಸುತ್ತಾರೆ.

ಧರ್ಮದ ಕಟ್ಟುಪಾಡುಗಳು ಏನೇ ಇದ್ದಾಗಲೂ ಅದ್ರಾಮ ದ್ರೌಪದಿಯನ್ನು ಯಾರೂ ಬೇರ್ಪಡಿಸಲಾಗಲಿಲ್ಲ. ಮತ್ತೆ ಅವರಿಬ್ಬರನ್ನು ಬೇರ್ಪಡಿಸಿದ್ದು ಆ ವಿಧಿಯೆ. ಸ್ವರಾಜ್ಯದ ಕನಸು ಕಂಡಿದ್ದ ಅದ್ರಾಮ ಪೋಲಿಸರ ಲಾಟಿ ಏಟಿಗೆ ಬಲಿಯಾಗುತ್ತಾನೆ. ಅದ್ರಾಮನ ಸಾವಿನ ನಂತರ ತಾನೆ ಸ್ವತಃ ತನ್ನ ಮುತ್ತೈದೆ ತನವನ್ನು ಕಳಚಿಕೊಳ್ಳುತ್ತಾಳೆ. ತಲೆ ಮಾತ್ರವಲ್ಲ ಮನಸ್ಸನ್ನು ಬೋಳಿಸಿಕೊಳ್ಳುತ್ತಾಳೆ. ನಿರೂಪಕಿಯ ನಿಜವಾದ ಆಶಯ ವ್ಯಕ್ತವಾಗುವುದು ಇಲ್ಲಿಯೇ ಎನಿಸುತ್ತದೆ. ವಿಧವೆ ದ್ರೌಪದಿಯ ಪುನರ್ ವಿವಾಹವು ಅವಳ ಕುಂಕುಮ, ಹೂವು, ಮುತ್ತೈದೆಯ ಯಾವ ಅಲಂಕಾರವನ್ನು ಉಳಿಸದೆ ಮತ್ತೆ ಬೋಳು ಮಾಡುತ್ತದೆ. ಆಗ ಬ್ರಾಹ್ಮಣ ಆಚಾರ ಪದ್ಧತಿಗಳು ಬಲವಂತವಾಗಿ ದ್ರೌಪದಿಯ ಮೇಲೆ ಹೇರಲ್ಪಟ್ಟಿದ್ದವು. ಆದರೆ ಅದ್ರಾಮನ ಸಾವಿನ ನಂತರ ದ್ರೌಪದಿಯೇ ಅವೆಲ್ಲವನ್ನು ಹೇರಿಕೊಳ್ಳುತ್ತಾಳೆ. ಇಲ್ಲಿ 'ಹೇರಿಕೆ' ಮತ್ತು 'ಸ್ವೀಕರಣ' ಇವುಗಳು ನೀಡುವಂತಹ ಫಲಿತಗಳಲ್ಲಿಯ ಭಿನ್ನತೆಯನ್ನು ಈ ನೆಲೆಯಲ್ಲಿ ಗ್ರಹಿಸಬಹುದು. ಮನುಷ್ಯ ಸಹಜ ಬದುಕಿಗೆ ಮೈಗಂಟಿದ ಚರ್ಮದಂತೆ ಬಂದಿರುವ ಬಯಕೆಗಳಿವೆ. ಅವು, ನಮ್ಮ ಕೃತಕ ಪರಿಸರದ ಯಾವುದೇ ನಿರ್ಬಂಧಕ್ಕು ತಮ್ಮನ್ನು ಮಿತಿಗೊಳಿಸಿಕೊಳ್ಳಲಾರದು. ಒಮ್ಮೆ ಅವು ಮಿತಿಗೊಂಡರು, ಇನ್ನಾವುದೇ ಸಂದರ್ಭದಲ್ಲಿ ತಮ್ಮ ಅಭಿವ್ಯಕ್ತಿಯನ್ನು ಪಡೆಯುತ್ತವೆ ಎಂಬುದನ್ನು ಇಲ್ಲಿ ಸೂಕ್ಷ್ಮವಾಗಿ ಗ್ರಹಿಸಬಹುದು.

"೧೯೪೦ರ ಸುಮಾರಿಗೆ ಬರೆಯತೊಡಗಿದ ೧೯೫೧ರಲ್ಲಿ ಅಕಾಲ ಮರಣಕ್ಕೀಡಾದ ದೇವಾಂಗನಾ ಶಾಸ್ತ್ರೀ ಕೂಡಾ ಸಂಪ್ರದಾಯದ ಅರ್ಥಹೀನ ಆಚರಣೆಗಳು ಹೇಗೆ ಸ್ತ್ರೀಯ ಬದುಕನ್ನು ನಿಯಂತ್ರಿಸುತ್ತವೆ, ಮುರುಟಿಸುತ್ತವೆ ಎಂದು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. 'ವೇಣಿ ಸಂಹಾರ' ಪ್ರಾತಿನಿಧಿಕ ಕಥೆ. ಎಳೆ ವಯಸ್ಸಿನ ವಿಧವೆಯ ಸುಂದರ ಕೂದಲನ್ನು ಮಡಿಯ ಹೆಸರಿನಲ್ಲಿ ಕತ್ತರಿಸಿ ಹಾಕುವುದನ್ನು 'ವೇಣಿಸಂಹಾರ' ಎಂಬ ಹೆಸರೆ ಸೂಚಿಸುವಂತೆ ಶಾಂತೆಯ ವ್ಯಕ್ತಿತ್ವದ ಸಂಹಾರವೇ ಅದು ಎಂಬಂತೆ ಸಮರ್ಥವಾಗಿ ಚಿತ್ರಿಸಿದ್ದಾರೆ. ಸ್ವತಃ ಲೇಖಕಿಯ ಬದುಕೇ ಆ ಕಾಲದ ಸ್ತ್ರೀಯರು ತಮ್ಮ ಇಚ್ಛೆಯಂತೆ ಬದುಕನ್ನು ರೂಪಿಸಿಕೊಳ್ಳಲು ಇದ್ದ ತೊಡಕಿಗೆ, ಮಿತಿಗಳಿಗೆ ನಿದರ್ಶನವಾಗಿದೆ. ದೇವಾಂಗನ ಶಾಸ್ತ್ರೀ ತಮಗೆ ಎರಡನೇ ಮಗು ಈಗಲೇ ಬೇಡ ಎಂದು ಯಾವುದೋ ನಾಟಿ ಔಷಧವನ್ನು ತೆಗೆದುಕೊಂಡ ಫಲವಾಗಿ ಅತಿರಕ್ತಸ್ರಾವದಿಂದ ೧೯೫೧ರಲ್ಲಿ ಚಿಕ್ಕವಯಸ್ಸಿನಲ್ಲಿ ನಿಧನರಾದರು. ದೇವಾಂಗನಾ ಅವರ ಕಥೆಗಳು ಧಾರವಾಡದ ಅವನಿ ರಸಿಕರಂಗ ಪ್ರಕಾಶನದಿಂದ ೨೦೦೫ರಲ್ಲಿ 'ವೇಣಿಸಂಹಾರ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ".[೭]

ಕಾದಂಬರಿಯ ಕೊನೆಯಲ್ಲಿ ಗಾಂಧಿ ಬರುತ್ತಾರೆ, ಗಾಂಧಿ ಬಂದರು... ಗಾಂಧಿ ಬಂದರು... ಎಂಬ ಗಡಿಬಿಡಿ, ಸಂತಸದಲ್ಲಿ ಎಲ್ಲರೂ ಮುಳುಗಿರುವಾಗ, ಗಾಂಧಿಯವರ ಪಕ್ಕೆಲುಬಿನಂತಿದ್ದ ದೇಶ ಭಕ್ತರೊಬ್ಬರು ಅಂದು ಸತ್ಯಾಗ್ರಹದಲ್ಲಿ ನೆಲಕಚ್ಚಿದ ದೇಶಪ್ರೇಮಿ ಅದ್ರಾಮನ ಬಗ್ಗೆ ಗಾಂಧಿಯವರಿಗೆ ಹೇಳುತ್ತಲೇ ಆತನ ವಿಧವೆಯನ್ನು ಬೊಟ್ಟು ಮಾಡಿ ತೋರಿಸಿದ್ದರು. ಗಾಂಧಿಯವರು ಇನ್ನೊಂದು ಕ್ಷಣವೂ ತಡಮಾಡದೆ ದ್ರೌಪದಿ ಬಳಿ ಹೋಗುತ್ತಾರೆ. ಆಗ ದ್ರೌಪದಿ ಮಗನ ಸಮೇತ ಗಾಂಧಿಯವರ ಕಾಲಿಗೆರಗುರತ್ತಾಳೆ. ಆ ಕ್ಷಣದಲ್ಲಿ ಅಲ್ಲಿ ನೆರದಿದ್ದ ಜನಸ್ತೋಮ ಭಾವುಕವಾಗುತ್ತೆ. ಆ ಕಣ್ಣೀರ ಮುತ್ತುಗಳು ಅದ್ರಾಮನಿಗಾಗಿಯೂ ಉರುಳಿದ್ದಿರಬಹುದು. ದಾರುವೂ ಅದೇ ಸಂದರ್ಭದಲ್ಲಿ ಗಾಂಧಿಯವರ ಕಾಲಿಗೆರಗುತ್ತಾಳೆ. ಇಬ್ಬರೂ ತಾವು ತಂದಿದ್ದ ಒಡವೆಗಳ ಗಂಟನ್ನು ಬಿಚ್ಚಿ ಅವೆಲ್ಲವನ್ನು ಗಾಂಧಿಗರ್ಪಿಸಿದರು. ದ್ರೌಪದಿ ತನ್ನ ಅದ್ರಾಮ ಗಾಂಧಿಯವರಿಗಾಗಿ ನೇಯಿಸಿಟ್ಟ ಎರಡು ಸೀರೆಗಳನ್ನು ಅವರಿಗೆ ಕೊಡುಗೆ ಕೊಟ್ಟಳು. ಗಾಂಧಿಯವರು ಅಷ್ಟೊಂದು ಒಡವೆಗಳನ್ನು ಕೊಡುಗೆಯಾಗಿ ಕೊಟ್ಟದ್ದನ್ನು ನೋಡಿ ಸುಸ್ತಾಗಿಯೋ ಅಥವಾ ಒಡವೆಗಳ ಭಾರಕ್ಕೋ ಏನೋ ಅಲ್ಲೇ ಕುಸಿದು ಕುಳಿತು ಕೊಳ್ಳುತ್ತಾರೆ. ಅವೆಲ್ಲ ತುಂಬಾ ಒಳ್ಳೆಯ ಕುಸುರಿ ಕೆಲಸದ ಒಡವೆಗಳು! ದಾರು ತನ್ನ ಮೈಮೇಲಿರುವ ಒಡವೆಗಳನ್ನಷ್ಟೇ ಬಿಟ್ಟು ಮಿಕ್ಕೆಲ್ಲವನ್ನು ಗಾಂದಿಗೆ ಕೊಟ್ಟಿದ್ದಳು. ಇದರಿಂದ ದೇಶಪ್ರೇಮಿ ಮಾರಪ್ಪನಿಗೆ ಸಾಕಷ್ಟು ಸಂತೋಷ ಆಗುತ್ತೆ. **"ಹಾಗೇ ಒಡವೆಗಳನ್ನು ನೋಡುತ್ತಿದ್ದ ಗಾಂಧಿಯವರು ಇದ್ದಕ್ಕಿದಂತೆ ದಾರು-ದ್ರೌಪದಿಯರನ್ನು ಕರೆದು ತನ್ನ ಪಕ್ಕದಲ್ಲೇ ಕೂರಿಸಿಕೊಂಡರು! ಎಲ್ಲರೂ ನೋಡುತ್ತಿದ್ದಂತೆ ಆ ಒಡವೆ ಗಂಟಿನಿಂದ ಕೆಂಪುಕಲ್ಲಿನ ಮೂಗಿನ ಬುಲಾಕೊಂದನ್ನು ತಾನೇ ತೆಗೆದು ದಾರುವಿನ ಕೈಯಲ್ಲಿಟ್ಟು ದ್ರೌಪದಿಯ ಮೂಗಿಗೆ ತೊಡಿಸುವಂತೆ ಕೇಳಿಕೊಂಡರು! ಹಾಗೆಯೇ ಬುಗುಡಿ ಎಣ್ಣೆಯೋಲೆಗಳನ್ನು ದಾರುವಿನಿಂದಲೇ ಆ ಬೋಳು ಕಿವಿಗಳಿಗೆ ತೊಡಿಸಿದರು. ಇನ್ನು ಕೊರಳಿಗೆ ಸರವೆಂದು ಆ ಚಂದ್ರಹಾರವನ್ನೇ ಆರಿಸಿ ತೆಗೆದು 'ಚಿನ್ನಣ್ಣನ' ಕೈಯಲ್ಲೇ ತಾಯಿಗೆ ಹಾಕಿಸಿದಾಗ ನೆರೆದಿದ್ದ ಜನಸ್ತೋಮವೆಲ್ಲ ಆ ದೃಶ್ಯವನ್ನು ನೋಡಿ ಸಂತೋಷದಿಂದ ಚಪ್ಪಾಳೆ ತಟ್ಟಿತು. ಕೇಶವ ಶ್ಯಾನುಭೋಗರ ಮುದಿ ಕೈಯೂ ಆ ಕ್ರಿಯೆಯಿಂದ ಹೊರತಾಗಿರಲಿಲ್ಲ. ಗಾಂಧಿಯವರು ತನ್ನ ಪರಿವಾರದಲ್ಲಿದ್ದ ಹೆಂಗಸರಿಂದ ಕುಂಕುಮ ತರಿಸಿ ಅವರಿಂದಲೇ ದ್ರೌಪದಿಯ ಹಣೆಗೆ ಕುಂಕುಮವಿರಿಸಿದರು".**[೮]

ಹುಟ್ಟಿನಿಂದ ಹೆಣ್ಣಿನೊಟ್ಟಿಗೆ ಬರುವ ಕುಂಕುಮ, ಹೂವು ಯಾಕೆ ತಲೆಯ ಕೂದಲನ್ನು ಸಹ ಗಂಡ ಸತ್ತನೆಂದು ತೆಗೆಸುವುದು ಯಾವ ನ್ಯಾಯ? ಅದನ್ನೊಪ್ಪದ ಲೇಖಕಿಯ ಮನಸ್ಸು ವಿಧವ ವಿವಾಹವನ್ನೇ ಮಾಡಿಸಿತ್ತು. ಮದುವೆಯಾದ ಕಾರಣಕ್ಕೆ ಆ ಎಲ್ಲವೂ ದ್ರೌಪದಿಗೆ ಸಿಕ್ಕಿದ್ದು ಸಹಜವಾದುದ್ದೇ ಆದರೂ ಅದ್ರಾಮನ ನಂತರವೂ ಗಾಂಧಿಯಿಂದ ಮುತ್ತೈದೆಯ ಎಲ್ಲಾ ಒಡವೆಗಳು ಮತ್ತೆ ಅವಳಿಗೆ ದೊರಕಿದ್ದು ಮೌಲ್ಯವುಳ್ಳದ್ದೇ ಆಗಿದೆ. ಹೆಣ್ಣಿನ ನಿಜವಾದ ಹಕ್ಕನ್ನು, ಬದುಕಿನಲ್ಲಿ ಒದಗಿಸಿಕೊಡುವಲ್ಲಿ ಕಾದಂಬರಿ ಯಶಸ್ವಿಯಾಗುತ್ತದೆ. ವಿಧವಾ ವಿವಾಹಕ್ಕಿಂತ

ಅದ್ರಾಮನ ಸಾವಿನ ನಂತರವೂ ಹೂವು, ಕುಂಕುಮ, ಆಭರಣಗಳೆಲ್ಲ ವಿಧವೆ ಹೆಣ್ಣಿನ ಮೈಮೇಲೆ ಉಳಿಯುವಂತೆ ಮಾಡುವುದು ಈ ಕಾದಂಬರಿಯ ವೈಶಿಷ್ಟ್ಯವೂ ಆಗಿದೆ.

೪.೩ ಕಾದಂಬರಿಗಳಲ್ಲಿ ಅಂತರ್ಜಾತೀಯ ವಿವಾಹ ಮತ್ತು ಗಾಂಧೀಜಿಯ ಪ್ರಭಾವ

'ಅಸ್ಪೃಶ್ಯರು' ಮತ್ತು 'ಗಾಂಧಿಬಂಡ' ಈ ಎರಡೂ ಕಾದಂಬರಿಗಳಲ್ಲಿ ಮುಖ್ಯವಾಗಿ ಗಮನಿಸಲೇಬೇಕಾದ ಅಂಶವೆಂದರೆ ಅಂತರ್ಜಾತೀಯ ವಿವಾಹ ಮತ್ತು ಗಾಂಧಿಯ ಪ್ರಭಾವ. ಅಸ್ಪೃಶ್ಯತೆಯಂತ ಸಮಸ್ಯೆಯನ್ನು ಕಾದಂಬರಿಯ ವಸ್ತುವಾಗಿಸಿಕೊಂಡ ವೈದೇಹಿಯವರು ಸಾಮಾಜಿಕ ಶ್ರೇಣಿಕರಣದ ನೆಲೆಯಲ್ಲಿ ಅಸ್ಪೃಶ್ಯತೆಯ ನಾನಾ ಮಜಲುಗಳನ್ನು ಗುರುತಿಸಲು ಆಯ್ದುಕೊಂಡದ್ದು ಅಂತರ್ಜಾತಿಯ ವಿವಾಹವನ್ನೆ. ಮೇಲ್ಜಾತಿ ಎಂಬ ಹೆಗ್ಗಳಿಕೆಯನ್ನಿಟ್ಟುಕೊಂಡ ಬ್ರಾಹ್ಮಣ ಜಾತಿಯ ಭಾಸ್ಕರನಿಗೂ ಸಮಾಜದ ಅತಿನಿಕೃಷ್ಟ ಜಾತಿಗೆಸೇರಿದ ಕೊರಗಜಾತಿಯ ತುಕ್ರಿಗೂ ಇಲ್ಲಿ ವಿವಾಹವಾಗುತ್ತದೆ. ಆ ಕಾರಣಕ್ಕಾಗಿ ವಾಸುದೇವರಾಯರ ಕುಟುಂಬ ಮತ್ತು ಸಂಪ್ರದಾಯಸ್ಥ ಮನಸ್ಸುಗಳಲ್ಲುಂಟಾದ ಪಲ್ಲಟಗಳನ್ನು ಅಂತರ್ಜಾತಿಯ ವಿವಾಹದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಗಾಂಧಿಯ ವಿಚಾರಗಳಿಂದ ಪ್ರಭಾವಿತನಾಗಿದ್ದ ಸುಧಾರಣಾವಾದಿ ಯುವಕ ಭಾಸ್ಕರ ಅಸ್ಪೃಶ್ಯರ ಉದ್ಧಾರದ ಸದುದ್ದೇಶದ ಕನಸು ಕಂಡವನು. ಆ ಕಾರಣಕ್ಕಾಗಿ ಆದರ್ಶದ ನೆಲೆಯಲ್ಲಿ ಕೊರಗ ಜಾತಿಯ ಅವಿದ್ಯಾವಂತಳಾದ ಅಸ್ಪೃಶ್ಯ ಕನ್ನೆ ತುಕ್ರಿ (ಕುಮುದಿನಿ)ಯನ್ನು ವಿವಾಹ ಆಗುತ್ತಾನೆ. ಈ ವಿವಾಹದ ನಂತರವೇ ನಿಜವಾದ ಸಾಮಾಜಿಕ ಸಮಸ್ಯೆಗಳು ಎದುರಾಗುತ್ತವೆ. ವಾಸುದೇವರಾಯರಿಗೆ ತಾವು ಕಂಡ ಸುಧಾರಣಾ ಪರ ಕನಸುಗಳು ಭಾಸ್ಕರನಲ್ಲಿ ಸಾಕಾರಗೊಂಡಿದ್ದಕ್ಕೆ ಹೆಮ್ಮೆ ಇದೆ. ಹಾಗಾಗಿಯೇ ರಾಯರು ಭಾಸ್ಕರನ ವಿವಾಹವನ್ನು ವಿರೋಧಿಸುವುದಿಲ್ಲ. ಅವರ ಪತ್ನಿ ಗೌರಮ್ಮನಿಗೆ ಆ ಬಗ್ಗೆ ಆತಂಕ ಇದ್ದೆ ಇದೆ. ಆಧುನಿಕ ಮನೋಭಾವದ ವಾಸುದೇವರಾಯರ ಮಕ್ಕಳಾದ ಸರೋಜ, ಶಿವು ಅವರಿಗೆ ಕುಟುಂಬದಲ್ಲುಂಟಾದ ಇಂಥ ಪಲ್ಲಟಗಳಿಂದ ಸಾಮಾಜಿಕ ಬದುಕನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ.

ಸಂಪ್ರದಾಯಸ್ಥ ವಿಧವಾ ಮಡಿಹೆಂಗಸು ಭಾಸ್ಕರನತಾಯಿ ಪಾರ್ತಕ್ಕನಮಗ ಕೊರಗ ಹುಡುಗಿಯನ್ನು ಮದುವೆಯಾದದ್ದು ತನಗೆ ನರಕ ಪ್ರಾಪ್ತಿಯ ದಾರಿ ಎಂದು ಭಾವಿಸುವುದರಿಂದ ಆಯುಷ್ಯದ ಕೊನೆಗಾಲದಲ್ಲಿ ಯಾವ ಬದಲಾವಣೆಯನ್ನು ಒಪ್ಪಿಕೊಳ್ಳದೇ ಸಂಪ್ರದಾಯದ ನೆರಳಿನಲ್ಲೇ ಬದುಕುವುದರಿಂದ ಅಂತಜಾರ್ತಿಯ ವಿವಾಹದ ಕುರಿತು ಪಾರ್ತಕ್ಕನಿಂದ ಹೆಚ್ಚಿನ ಪ್ರತಿಕ್ರಿಯೆಗಳು ಕಂಡುಬರುವುದಿಲ್ಲ.

ಸುಧಾರಣಾ ಮನೋಧರ್ಮದಿಂದ ಆದರ್ಶಕ್ಕಾಗಿಯೇ ವಿವಾಹವಾದ ಭಾಸ್ಕರನಿಗೆ ವೈಯಕ್ತಿಕ ನೆಲೆಯಲ್ಲಿ ಕುಮುದಿನಿಯೊಂದಿಗೆ ನಡೆಸಬಹುದಾದ ಆದರ್ಶವಂತಿಕೆಯ ಬದುಕಿನ ಬಗ್ಗೆ ಅರಿವಿದೆ. ಈ ಬಗೆಯ ತಾತ್ವಿಕ ಬದ್ಧತೆ ಅವನನ್ನು ರೂಪಿಸಿದ್ದರೂ ಕೌಟುಂಬಿಕವಾಗಿ ಎದುರಾಗುವ ಸಮಸ್ಯೆಗಳನ್ನು ಎದುರಿಸಲೇ ಬೇಕಾಗುತ್ತದೆ. ಜೊತೆಗೆ ನೌಕರಿಯನ್ನು ಕಳೆದುಕೊಳ್ಳುವ ಸಂದರ್ಭ, ಕೊರಗರ ಸಮಸ್ಯೆಯ ಕುರಿತಾಗಿ ಹೋರಾಡಿ ಜೈಲಿಗೂ ಹೋಗಬೇಕಾಗುತ್ತದೆ. ಕೆಳಸಮುದಾಯದ ನೋವುಗಳಿಗೆ ಸ್ಪಂದಿಸುವ ಮನೋಭಾವ ಭಾಸ್ಕರನದಾಗಿದ್ದ ಕಾರಣದಿಂದ, ಎದುರಾಗುವ ಯಾವ ಆತಂಕಗಳಿಗೂ ಧೃತಿಗೆಡುವುದಿಲ್ಲ. ಜಾತಿ ಶ್ರೇಷ್ಠತೆ, ಸಂಪ್ರದಾಯ, ನಂಬಿಕೆಯಿಂದಲೇ ಬದುಕನ್ನು ಕಂಡುಕೊಂಡಿರುವ ಪಾರ್ತಕ್ಕ ಗೌರಮ್ಮನವರಿಗೆ ಬ್ರಾಹ್ಮಣ ಜನ್ಮಕ್ಕೆ ಎದುರಾದ ಬಹುದೊಡ್ಡ ಅಪಮಾನವಾಗಿ ಕಾಣಿಸುತ್ತದೆ. ಇದಕ್ಕೆ ತದ್ವಿರುದ್ಧವಾದ ನಿಲುವು ವಾಸುದೇವರಾಯರದ್ದು. ತಮ್ಮ ಉಳಿದ ಮಕ್ಕಳ ವಿವಾಹದ ಪ್ರಶ್ನೆಯನ್ನು ಪಾರ್ತಕ್ಕ ಎತ್ತಿದರು ಅಂತಹ ಆತಂಕವನ್ನು ಮೀರಿದ ಧೈರ್ಯದಿಂದ ಕುಮುದಿನಿಯನ್ನು ಬಾಣಂತನಕ್ಕೆಂದು ಮನೆಗೆ ಕರೆತರುತ್ತಾರೆ. ಇದು ವಾಸುದೇವರಾಯರು ಪ್ರತಿಪಾದಿಸಿದ ಪ್ರಗತಿಪರ ನಿಲುವಿನ ಧ್ಯೋತಕವಾಗಿದೆ. ರಾಯರ ನಿರ್ಧಾರವನ್ನು ಕಂಡು ಸುಮ್ಮನಿರುವುದೇ ಗೌರಮ್ಮ, ಪಾರ್ತಕ್ಕನ ವಿರೋಧವಾಗಿದೆ. ಸೊಸೆಯನ್ನು ಮನೆಗೆ ಕರೆತಂದಾಗ ಪಾರ್ತಕ್ಕನಂತೂ ಅವಳ ಮುಖವನ್ನೂ ನೋಡಬಾರದು, ಎಲ್ಲಿ ಆಕೆಯನ್ನು ದೇವರ ಮನೆಗೆ ಕರೆತರುತ್ತಾರೋ ಎಂಬ ಹೆದರಿಕೆಯಿಂದ ಮನೆಯ ಅಟ್ಟದಲ್ಲಿರುವ ಹಳೆಯ ಪಾತ್ರೆಗಳ ಸಂದಿಯಲ್ಲಿ ಅಡಗಿ ಕುಳಿತುಕೊಳ್ಳುತ್ತಾರೆ. ವಾಸುದೇವರಾಯರ ಮಕ್ಕಳಾದ ಸರೋಜ, ಶಿವು, ಭಾಸ್ಕರನ ನೆರಳಿನಲ್ಲಿಯೇ ಯೋಚಿಸುವ ಹೊಸ ಚಿಂತನೆಯ ಬೆಳಕಾಗಿ ಕಾಣಿಸಿಕೊಳ್ಳುತ್ತಾರೆ.

ಈ ರೀತಿಯ ಪರಸ್ಪರ ವಿರುದ್ಧ ಮೌಲ್ಯಗಳ ಸಂಘರ್ಷದ ಮೂಲಕ ಕಾದಂಬರಿಕಾರ್ತಿ ಸಂಪ್ರದಾಯದ ಕುರುಡನ್ನು ಪ್ರಶ್ನಿಸುತ್ತಾರೆ. ಅಂತರ್ಜಾತಿಯ ವೈವಾಹಿಕ ಚಲನೆಯೇ ಕಾದಂಬರಿಯಲ್ಲಿ ಮುಖ್ಯವೆನಿಸಿದರೂ ಇಲ್ಲಿ ಏಕಮುಖಿ ನಿಲುವಿದೆ. ವಿವಾಹದ ನಂತರದ ಸಂಘರ್ಷವನ್ನು ಗುರುತಿಸುವ ಕಾದಂಬರಿ, ಈ ವಿವಾಹದ ಪೂರ್ವದಲ್ಲಿ ಎದುರಾಗಿರುವ ಬಿಕ್ಕಟ್ಟುಗಳನ್ನು ಗುರುತಿಸುವುದಿಲ್ಲ. ಹಾಗೆಯೇ ತುಕ್ರಿಯ ಕುಟುಂಬದ ಪರಿಸ್ಥಿತಿಯನ್ನು ಕಾದಂಬರಿಯಲ್ಲಿ ಚರ್ಚಿಸುವುದಿಲ್ಲ ಮತ್ತು ಇಡೀ ಕಥನಕ್ಕೆ ಕಾರಣಳಾದ 'ಕುಮುದಿನಿ'ಯ ವ್ಯಕ್ತಿತ್ವವೇ ಇಲ್ಲಿ ನಾಪತ್ತೆಯಾಗಿದೆ.

ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಬೆಳೆದ ಲೇಖಕಿಗೆ ಅಂತರ್ಜಾತೀಯ ವಿವಾಹದಿಂದ ಬ್ರಾಹ್ಮಣ ಕುಟುಂಬದಲ್ಲುಂಟಾದ ಪಲ್ಲಟಗಳನ್ನ, ಪರಿಸ್ಥಿತಿಗಳನ್ನ ಚರ್ಚಿಸಲು

ಸಾಧ್ಯವಾಗಿದೆಯೇ ಹೊರತು ಕೊರಗ ಸಮಾಜದ ಪರಿಸ್ಥಿತಿಯನ್ನಲ್ಲ. ಇಂತಹ ಅನುಭವಗಳು ಇಲ್ಲದೇ ಇರುವುದಕ್ಕೆ ಸಂರಕ್ಷಿತ ಬ್ರಾಹ್ಮಣ ಕುಟುಂಬದಲ್ಲಿ ಬೆಳೆದದ್ದು ಕಾರಣವಾಗಿರಬಹುದು. ಇಷ್ಟಾದರೂ ಅಂತರ್ಜಾತೀಯ ವಿವಾಹದ ಪರವಾಗಿಯೇ ಲೇಖಕಿಯ ನಿಲುವಿರುವುದು ಸ್ಪಷ್ಟವಾಗುತ್ತದೆ. ಸಮಾಜದ ಸಮಸ್ಯೆಗಳನ್ನು ಕಾದಂಬರಿಕಾರ್ತಿ ಗುರುತಿಸಬಹುದೇ ಹೊರತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದನ್ನು ಓದುಗವಲಯ ಮನಗಾಣಬೇಕಿದೆ. ಅಸ್ಪೃಶ್ಯರು ಕಾದಂಬರಿಯಲ್ಲಿ ಸುಧಾರಣಾ ಪರವಾದ ನಿಲುವುಗಳ ಮೂಲಕ ಗಾಂಧಿ ವಿಚಾರಗಳಾಗಿ, ಪ್ರಭಾವಗಳಾಗಿ ಮಾತ್ರ ಕಾಣಸಿಗುತ್ತಾರೆ.

ಗಾಂಧಿ ಕೇವಲ ವಿಚಾರವಾದಿ ಮಾತ್ರವಲ್ಲ ಒಂದು ಪಾತ್ರವೆಂಬಂತೆಯೂ ಕಾಣಿಸುವುದು ನಾಗವೇಣಿಯವರ ಗಾಂಧಿ ಬಂದ ಕಾದಂಬರಿಯಲ್ಲಿ. ದಕ್ಷಿಣ ಕನ್ನಡದ ಗ್ರಾಮಗಳಲ್ಲಿ ಗಾಂಧಿಯ ಪ್ರವೇಶ ಹೇಗಾಯಿತು, ಯಾವ ವಿಭಿನ್ನ ಮಾದರಿಗಳಲ್ಲಿ ಯಾವ ಮಟ್ಟದಲ್ಲಿ ಪ್ರವೇಶಿಸಿದವು ಎಂಬ ಶೋಧನೆ ಈ ಕಾದಂಬರಿಯ ಒಂದು ಆಶಯವೂ ಹೌದು. ಗಾಂಧಿ ಕೇವಲ ಓರ್ವ ವ್ಯಕ್ತಿಯಲ್ಲ ಅದೊಂದು ಬಗೆಯ ನೈತಿಕತೆ, ವೈಚಾರಿಕತೆ, ದಿಟ್ಟತನದ ಪಾತ್ರವೂ ಆಗಿದೆ. ಗಾಂಧಿ ಎಂಬುದು ಒಂದು ನೆನಪು. ಪರೋಕ್ಷ ಪ್ರಭಾವ, ಒಂದು ಕಾರ್ಯಸೂಚಿ, ಒಂದು ಹೊಸ ಪ್ರಜ್ಞೆ ಈಗಾಗಲೇ ಸಾಕಷ್ಟು ವಿವರಗಳಲ್ಲಿ ಗಮನಿಸಿದಂತೆ ಸಂಕೀರ್ಣ ಸಾಮಾಜಿಕ ಸಂರಚನೆಯಲ್ಲಿ ಗಾಂಧಿ ಪ್ರವೇಶಿಸಿದ ಪ್ರಕ್ರಿಯೆ ತುಂಬ ಸಂಕೀರ್ಣವಾದದ್ದು.

ಗಾಂಧಿ ಬಂದ ಕಾದಂಬರಿಯಲ್ಲಿ ಗಾಂಧಿ ಮೂರುಬಾರಿ ಮಂಗಳೂರಿಗೆ ಬಂದು ಹೋಗುತ್ತಾರೆ. ಹಾಗೆ ಅವರು ಮೂರುಬಾರಿ ಬಂದು ಹೋಗಿದ್ದು ಅಲ್ಪಾವಧಿ ಭೇಟಿಗೆ. ಸುತ್ತಲ ಗ್ರಾಮಗಳ ಜನ ಅವರನ್ನು ನೋಡಿದ್ದು ಸಾಕಷ್ಟು ದೂರದಿಂದಲೇ, ಅವರಮಾತುಗಳು ಕೂಡಾ ಅವರನ್ನು ನೇರವಾಗಿ ತಲುಪಿಲ್ಲ, ತಲುಪಿದ್ದು ಯಾರೋ ಅಲ್ಪಸ್ವಲ್ಪ ಇಂಗ್ಲೀಷ್ ತಿಳಿದವರು ಮಾಡಿದ ಅನುವಾದದಿಂದ. ಅವರ ಸುತ್ತಲಿನವರು ಗಾಂಧಿಯನ್ನು ತಮಗೆ ತಿಳಿದಂತೆ ವ್ಯಾಖ್ಯಾನಿಸಿದ್ದರಿಂದ ಗಾಂಧಿಯಿಂದ ಪ್ರಭಾವಿತರಾಗಿ ಅವರ ಆದರ್ಶಗಳನ್ನು, ವಿಚಾರಗಳನ್ನು ಹರಡುತ್ತಿದ್ದ ಕೆಲ ಸ್ಥಳೀಯರಿಂದ ಗಾಂಧಿ ಮತ್ತು ಗಾಂಧಿವಾದ ನಿಧಾನವಾಗಿ ಪರಿಚಯವಾಗುತ್ತಾ ಬಂದದ್ದು ವಿಶಾಲ ವ್ಯಾಪ್ತಿಯನ್ನು ಪಡೆದುಕೊಂಡಿತು. ಕಾದಂಬರಿಯಲ್ಲಿ ಆದರ್ಶಗಳನ್ನು, ವಿಚಾರಗಳನ್ನು ಕಾರ್ನಾಡರು, ತಿಂಗಳಾಯರು, ಮಾರಪ್ಪಶೆಟ್ಟಿ, ಅದ್ರಾಮ ಇವರುಗಳ ಮೂಲಕವೇ ಗಾಂಧಿ ಗ್ರಾಮವಾಸಿಗಳ ಪ್ರಜ್ಞೆಯಲ್ಲಿ ಅಷ್ಟಿಷ್ಟು ಬಂದದ್ದು. ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಂತಿರುವ ಸೀನಪ್ಪಯ್ಯ ಹೆಬ್ಬಾರರನ್ನು ಅಲುಗಾಡಿಸುವುದು ಈ ಗಾಂಧಿ ಭಕ್ತರೆ. ಗಾಂಧಿಯ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡಿದ್ದಕ್ಕೆ ಅನ್ನಿಸುತ್ತೆ. ಹೆಬ್ಬಾರರಿಗೆ ಧೈರ್ಯವಾಗಿ

ದ್ರೌಪದಿಗೆ ಇನ್ನೊಂದು ಮದುವೆ ಮಾಡಿ ಎಂದು ಕುದುರೆ ಗಾಡಿ ಹೊಡೆಯುವ ಅದ್ರಾಮ ಹೇಳಿದ್ದು.

ದ್ರೌಪದಿ-ಅದ್ರಾಮರ ಮಧ್ಯೆ ಮೃದುವಾದ ಒಂದು ಪ್ರೀತಿಯ ಸಂಬಂಧ ಬೆಳೆಯುತ್ತಿರುವ ಸಂದೇಹಕ್ಕೆ ಒಳಗಾದ ಹೆಬ್ಬಾರರು ಅದ್ರಾಮನನ್ನು ಮುಗಿಸುವ ಎಲ್ಲಾ ಸಂಚುಗಳನ್ನು ಮಾಡುತ್ತಾರೆ. ಅವನಿಗೆ ಬುದ್ಧಿ ಹೇಳಿಸಬಹುದು ಎಂದು ಕೊಂಡವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಅದ್ರಾಮನೊಡನೆ ಸಂಪರ್ಕದಲ್ಲಿರುವವರೇ ಆಗಿರುವುದರಿಂದ ಹೆಬ್ಬಾರರು ಅದ್ರಾಮನಿಗೆ ಹೆದರುವುದು. "**ಅದರಲ್ಲೂ ಅವ ಮೊನ್ನೆ ಬೆಸ್ತರ ಮುಂದಾಳು ಮೋನಪ್ಪ ತಿಂಗಳಾಯರ ಜತೆ ದೇಶಭಕ್ತ ಕಾರ್ನಾಡ ಸದಾಶಿವರಾಯರನ್ನು ನೋಡಿ ಬಂದಿದ್ದಾನಂತೆ! ಪಾಪ. ಕಾರ್ನಾಡರು ನರಿ-ನಾಯಿ ಬೆಕ್ಕುಗಳು ಸಿಕ್ಕಿದರೂ ಸರಿ, ಎಲ್ಲರೂ ಕೊರಗರ ಜತೆ ದೇವರ ಕೋಣೆಯಲ್ಲಿ ಕೂತು ಉಣ್ಣಬೇಕು. ಮನೆಯಲ್ಲಿರುವ ಮುಂಡೆ ಹೆಂಗ್ಸರಿಗೆ ಮದುವೆ ಮಾಡಿಸಬೇಕು. ಪರದೇಶಿ ಬಟ್ಟೆ ಸುಡಬೇಕು, ತಕ್ಲಿ ಹಿಡಿದು ಕೂತು ಖಾದಿ ಬಟ್ಟೆ ನೇಯಬೇಕು ಎಂದು ಗೋಗರೆಯುತ್ತಿದ್ದಾರೆಂದು ಕಡಲ ಕೆರೆಯಲ್ಲಿ ಅಂತಪ್ಪಪೂಜಾರಿಯನ್ನು ಕಂಡಾಗ ಪೂವಮರಕಾಲ ಹೆಮ್ಮೆಯಿಂದ ಹೇಳಿಕೊಂಡಿದ್ದಾನಂತೆ. ಹೆಬ್ಬಾರರಿಗೆ ಇದೆಲ್ಲವನ್ನು ಯೋಚಿಸುತ್ತಿದ್ದಂತೆಲ್ಲ ಏನೇನೋ ಭಯ ಶುರುವಾದಂತಾಗಿದೆ...**"

ಹೆಬ್ಬಾರರಿಗೆ ಅದ್ರಾಮನ ಮೇಲೆ ಆಕ್ರಮಣ ಮಾಡುವುದು ಸಾಧ್ಯವಿಲ್ಲ ಎನಿಸಿದಾಗಲೇ ಗಾಂಧಿಯ ಪರಮಭಕ್ತನಾದ ಮಾರಪ್ಪ ಶೆಟ್ಟಿಯಿಂದ ಅದ್ರಾಮನಿಗೆ ಬುದ್ಧಿ ಹೇಳಿಸುವ ಉಪಾಯ ಮಾಡಿದ್ದು. ಆದರೆ ಮಾರಪ್ಪ ಶೆಟ್ಟಿಗೂ ದ್ರೌಪದಿಗೆ ಮದುವೆ ಮಾಡಿಸುವ ತುಡಿತವಿದೆ. ಅದ್ರಾಮನು ಬ್ರಾಹ್ಮಣ್ಯದ ಬೇಲಿಯನ್ನು ಮುರಿದು ಒಳನುಗ್ಗುವ ವೀರನಾಗಿದ್ದಾನೆ ಎಂಬುದನ್ನು ಮಾರಪ್ಪನು ಬಲ್ಲ. 'ಜಾತಿಮತದ ಗೋಡೆಯುರುಳಿಸಲು ಗಾಂಧಿಯವರು ಹಗಲಿರುಳು ನಿದ್ದೆಗೆಡುತ್ತಿದ್ದಾರೆ. ಕಾರ್ನಾಡರು ಕೇರಿ-ಕೇರಿ ತಿರುಗುತ್ತಿದ್ದಾರೆ' ಹಾಗಾಗಿ ಗೋಡೆಯುರುಳಿಸುವ ಕೆಲಸ ಇಲ್ಲಿಂದಲೇ ಯಾಕಾಗಬಾರದು ಎಂದು ಅವನು ಯೋಚಿಸುತ್ತಾನೆ. ಅದು ಕಷ್ಟ ಎಂದು ಮಾರಪ್ಪನಿಗೂ ಗೊತ್ತು. ಗುತ್ತಿನಶೆಟ್ಟರು ಗಾಂಧಿಗೆ ತಲುಪಿಸಲೆಂದು ಕೊಟ್ಟ ಒಡವೆಗಳನ್ನು ಹೆಬ್ಬಾರರು ತಮ್ಮ ಪ್ರೇಯಸಿ ಪುಟ್ಟಮ್ಮಕ್ಕಳ ಮೈಮೇಲೆ ಹೋರಿಸಿದ್ದನ್ನು ಕಂಡ ಗುತ್ತಿನ ಶೆಟ್ಟರು ಹೇಗಾದರೂ ಮಾಡಿ ಬುದ್ಧಿಕಲಿಸಬೇಕೆಂದುಕೊಂಡವರು ದ್ರೌಪದಿಯನ್ನು ಅಪಹರಿಸಲು ಅದ್ರಾಮನಿಗೆ ಸಹಾಯಮಾಡಿ ಅವರಮದುವೆಗೆ ಬೆಂಬಲವಾಗಿ ನಿಲ್ಲುತ್ತಾರೆ. ಆದರೆ ಈ ಮದುವೆ ಎತ್ತುವ ಸಾಮಾಜಿಕ ಮತ್ತು ರಾಜಕೀಯ ಪ್ರಶ್ನೆಗಳು ಮತ್ತು ಪರಿಣಾಮಗಳು ಕಾದಂಬರಿಯ ಸಂವಿಧಾನವನ್ನು ಮುನ್ನೆಡೆಸುವ ಮುಖ್ಯ ಪರಿಕರಗಳಾಗುತ್ತವೆ.

ಮದುವೆ ಎಂಬುದು ಕೇವಲ ಹೆಣ್ಣು ಗಂಡಿನ ನಡುವಿನ ಸಂಬಂಧ ಮಾತ್ರವಾಗಿರದೆ ಎರಡು ಕುಟುಂಬದ ನಡುವಿನ ಸಂಬಂಧವು ಆಗಿರುವುದರಿಂದ ಬೇರೆ ಬೇರೆಯವರು ನೆಂಟರಾಗುತ್ತಾರೆ ಅವರ ನಡುವೆ ಒಂದು ಅನ್ಯೋನ್ಯ ಸಂಬಂಧ ಉಂಟಾಗುತ್ತದೆ. ಅಂತೆಯೇ ಎರಡು ಜಾತಿಯ ಹೆಣ್ಣು ಗಂಡುಗಳ ನಡುವೆ ಅಂತರ್ಜಾತಿಯ ವಿವಾಹ ಏರ್ಪಟ್ಟು ಬೇರೆ ಬೇರೆ ಜಾತಿಗಳೊಳಗೆ ಒಂದು ಒಳ್ಳೆಯ ಸಂಬಂಧ ಸೃಷ್ಟಿಯಾಗುವುದಾದರೆ ಅದು ಸಮಾಜದ ಒಳಿತು. ಆ ಮೂಲಕ ಜಾತಿಯತೆಯನ್ನು ಹೊಡೆದೋಡಿಸುವ ಆಶಯ ಈ ಇಬ್ಬರೂ ಲೇಖಕಿಯರಿಗಿದ್ದಂತಿದೆ.

ಈ ಕಾದಂಬರಿಯಲ್ಲಿ ಬರುವ ಮತ್ತೊಂದು ಮದುವೆ ಮಾರಪ್ಪ-ದಾರುವಿನದು. ಇದಂತು ನೇರವಾಗಿ ಗಾಂಧಿಯ ಪ್ರಭಾವದಿಂದಲೇ ಆದದ್ದು. ಮದುವೆಯ ಮಾತೆತ್ತಿದರೆ ಮಾರುದೂರ ಹಾರಿ ಸ್ವರಾಜ್ಯ ಎತ್ತುತ್ತಿದ್ದ ಮಾರಪ್ಪ ಗರ್ಭಕೋಶವಿಲ್ಲದ್ದರಿಂದ 'ಶಿಖಂಡಿ' ಎಂದು ಅವಮಾನಕ್ಕೆ ಒಳಗಾಗಿದ್ದ ದಾರುವನ್ನ ಮದುವೆಯಾಗಿ ಅವಳಿಗೊಂದು ಗೌರವಯುತ ಬಾಳನ್ನು ದೊರಕಿಸಿ ಕೊಟ್ಟ ಮಾರಪ್ಪನ ಆದರ್ಶಕ್ಕೆ ಗಾಂಧಿಯೇ ಪ್ರೇರಣೆ. ಗಾಂಧಿಯ ವಿಚಾರಗಳು ಮಾರಪ್ಪನನ್ನು ಎಷ್ಟೇ ಪ್ರೇರೇಪಿಸಿದರು ಮಾರಪ್ಪ ಈ ವಿಚಾರಗಳನ್ನು ಒಂದು ಸಮುದಾಯದ ಮೇಲೆ ಪ್ರಯೋಗಿಸ ಹೊರಟಾಗ ಅವನು ಎದುರಿಸಿದ ಸಮಸ್ಯೆಗಳೇ ಬೇರೆ. ನಾಗವೇಣಿ ತಮ್ಮ ಕೃತಿಗೆ 'ಗಾಂಧಿಬಂದ' ಎಂಬ ಶೀರ್ಷಿಕೆಯನ್ನು ಮಾತ್ರ ಇಡದೆ ಗಾಂಧಿಯ ಬರುವಿಕೆಯಿಂದ ಸಾಂಪ್ರದಾಯಿಕ ಸಮಾಜವೊಂದರ ಪರ-ವಿರೋಧದ ಹಲವು ನೆಲೆಗಳನ್ನು ಪರಿಶೀಲಿಸುತ್ತಾರೆ. ಸ್ವತಃ ಮಾರಪ್ಪ ತನ್ನ ತಾಯಿಯ ವಿರೋಧವನ್ನು ಕಟ್ಟಿಕೊಳ್ಳುತ್ತಾನೆ. ಆ ಗಾಂಧಿಯಿಂದಲೇ ತನ್ನ ಮಗ ಸರ್ವನಾಶವಾದ ಎಂಬ ಭಾವದಿಂದ ಗಾಂಧಿಯ ಹೆಸರು ಬಂದೊಡನೆ ಅನೇಕ ಬಾರಿ ಭೂತ ಹಿಡಿದವಳಂತೆ ಸೂರಕ್ಕೆ ಅಸಹನೆಯಿಂದ ಸಿಟ್ಟಿನಿಂದ ಕಂಪಿಸಿದ್ದಿದೆ. ಮಗ ಅದೆಷ್ಟು ಬಾರಿ ಗಾಂಧಿಯವರ ವಿಚಾರಗಳನ್ನು ತಿಳಿಯ ಹೇಳಲು ಪ್ರಯತ್ನಿಸಿಲ್ಲ. ಆಗೆಲ್ಲ ಸೂರಕ್ಕೆ 'ಸುಮ್ಕಿರೋ... ನನಗೆ ಗಾಂಧಿಯಾದರೇನು, ಪರಂಗಿಯವರಾದರೇನು? ನಂಗೇನು ಕೋಟೆ ಆಳುವುದಿದೆಯಾ ಎಂದು ಕ್ಷಣ ಮಾತ್ರದಲ್ಲಿ ಪುಸ್ಕ' ಮಾಡಿ ಹಾಕುತ್ತಾಳೆ. ಮಗ ಮನೆಯ ಬಗ್ಗೆ, ಕೃಷಿ ಕೆಲಸದ ಬಗ್ಗೆ ಏನೂ ಲಕ್ಷ್ಯ ಕೊಡದೆ ಗಾಂಧಿ ಗಾಂಧಿ ಎಂದು ಓಡುವುದು, ನಲವತ್ತು ಸಮೀಪಿಸಿದರೂ ಮದುವೆಯಾಗದಿರುವುದು ಒಬ್ಬನೇ ಮಗನ ತಾಯಿಯಾದ ವಿಧವೆ ಸೂರಕ್ಕೆಗೆ ಯಾವತ್ತೂ ಇಷ್ಟವಾಗದ ಆತಂಕದ ವಿಷಯವೇ ಆಗಿತ್ತು. ಹಾಗೆ ನೋಡಿದರೆ ಇದು ಆದರ್ಶ ವಾಸ್ತವಗಳನ್ನು ಮುಖಾಮುಖಿಯಾಗಿಸುವ ಸಂಕೀರ್ಣ ಸಂಗತಿ. ಈ ಬಗೆಯ ಆತಂಕಗಳು ಸೂರಕ್ಕೆಯದು ಮಾತ್ರವಲ್ಲ ಹೆಚ್ಚು ಕಡಿಮೆ ಇದೇ ಕಾಲಾವಧಿಯ ಮತ್ತೊಂದು ಕಥೆಯನ್ನು ಇನ್ನೊಂದು

ಪರಿಸರದ ಸಂದರ್ಭದಲ್ಲಿಟ್ಟು ಕಾರಂತರು ನಿರೂಪಿಸುತ್ತಾರೆ. 'ಮರಳಿ ಮಣ್ಣಿಗೆ' ಕಾದಂಬರಿಯ ನಾಗವೇಣಿಯ ಮನಸ್ಥಿತಿ ಸೂರಕ್ಕೆಯವರ ಮನಸ್ಥಿತಿಗಿಂತ ತೀರಾ ಬೇರೇಯೇನೂ ಅಲ್ಲ.

'ಗಾಂಧಿ ಬಂದ' ಕಾದಂಬರಿಯಲ್ಲಿ ನಾಗವೇಣಿ ಕೇವಲ ಒಂದು ಸಮುದಾಯದ ಕಥೆಯನ್ನು ಹೇಳುತ್ತಿಲ್ಲ. ಒಂದು ಕಾಲಘಟ್ಟದ, ಒಂದು ಮನಸ್ಥಿತಿಯ ನಿರೂಪಣೆಯನ್ನು ಮಾಡುತ್ತಿದ್ದಾರೆ. ಮಾರಪ್ಪ ವೈಯಕ್ತಿಕವಾಗಿ ಬದಲಾಗಬಹುದು. ಆದರೆ ಇಡೀ ಸಮುದಾಯ, ಸಮಾಜ ಹಾಗೆ ದಿಢೀರನೆ ಬದಲಾಗುವುದಿಲ್ಲ. ಗಾಂಧಿಯವರ ಪ್ರಭಾವಗಳಿಗೆ ಶರಣಾಗಿ ಅವರ ಚಳುವಳಿಗೆ ಚಂದಾಕೊಡಬಹುದು; ಸಾಂಕೇತಿಕವಾಗಿ ಚರಕಾ ಹಿಡಿಯಬಹುದು. ಆದರೆ ಗಾಂಧಿ ವಿಚಾರಗಳು ಸಾಂಪ್ರದಾಯಸ್ಥ ಜೀವನಕ್ರಮದ ಮೂಲಧಾತುವನ್ನೇ ಸ್ಪರ್ಶಿಸತೊಡಗಿದಾಗ ಪರಿಣಾಮಗಳು ಸರಳವಾಗಿರುವುದಿಲ್ಲ.

ಉದಾಹರಣೆಗೆ **"ಪಣಂಬೂರು ಜಾತ್ರೆಯೆಂದು ಕಾರ್ನಾಡು ಸದಾಶಿವರಾಯರ ಸಲಹೆಯಂತೆ ಮಾರಪ್ಪ-ತಿಂಗಳಾಯರು ಬೈಕಂಡಿ ಮೀನುಕಳಿಯದ ಬೆಸ್ತರ ಗುರಿಕಾರರ ಮುಂದಾಳತ್ವದಲ್ಲಿ ಜಾತ್ರೆಯ ಊಟದ ಪಂಕ್ತಿಯ ಬಗ್ಗೆ ನ್ಯಾಯ ಎಬ್ಬಿಸಿದ್ದರು. ಊರಿನ ಸರ್ವ ಅಬ್ರಾಹ್ಮಣರನ್ನು ದೇವಸ್ಥಾನದ ಹೊರ ಪ್ರಾಂಗಣದೊಳಗೆ ಕರೆದೊಯ್ದು, ಇವರಿಗೆಲ್ಲ ಬ್ರಾಹ್ಮಣರ ಪಂಕ್ತಿಯಲ್ಲೇ ಊಟ ಬಡಿಸಬೇಕು – ಇಲ್ಲವೇ ನೀವೂ ಉಣ್ಣಬಾರದು' ಎಂದು ಗಲಭೆ ಎಬ್ಬಿಸಿ ಕೊರಗರನ್ನು, ಮುಂಡಾಲರನ್ನು, ಮುಗೇರ, ಮೌಲ್ಯ, ಪೂಜಾರಿ, ಮ್ಯೊಲಿ, ಆಚಾರಿ, ಬೆಸ್ತರು, ಶೆಟ್ರುಗಳನ್ನೆಲ್ಲ ದೇವಾಳದ ಒಳನುಗ್ಗಿಸಿದ್ದರು."**[10]

ಆದರೆ ಆ ಸಂಚಿನ ವಾಸನೆ ಹೇಗೋ ಜನಿವಾರಗಳಿಗೆ ತಲುಪಿ ದೇವಸ್ಥಾನದ ಅಡುಗೆ ಮನೆಯಿಂದ ಕಟಾರ, ಕೌಳಿಗೆ ತುಂಬಾ ಅನ್ನಸಾರು, ಭೋಜನ ಭಕ್ಷ್ಯಗಳೆಲ್ಲ ಭೂತೈತಾಳರ ಮೂರಂಕಣದ ಚಾವಡಿಯ ಮೇಲೇರಿ ಶೂದ್ರರ ನೆರಳೂ ಸೋಕಿಸದೆ ಬ್ರಾಹ್ಮಣರ ಊಟ ಸಾಂಗವಾಗಿ ನೆರವೇರಿತು. ಇತ್ತ ದೇವಸ್ಥಾನದ ಹೊರ ಪ್ರಾಂಗಣದಲ್ಲಿ ಪಂಕ್ತಿ ಭೇದ ಮಾಡದೇ ಶೂದ್ರರಿಗೆ ಊಟ ಇಕ್ಕಲಾಯಿತು. ಇಲ್ಲಿ ಒಂದು ಬ್ರಾಹ್ಮಣ ಹುಳುವು ಇರಲಿಲ್ಲ ಅದನ್ನು ಕಂಡು ಮಾರಪ್ಪ, ತಿಂಗಳಾಯರ ಮುಖ ಸಣ್ಣಗಾಯಿತು. ಆದರೆ ಶೂದ್ರಾದಿಗಳು ಎಲೆ ಹರಿಯುವಂತೆ ನೆಕ್ಕಿ ನೆಕ್ಕಿ ಉಂಡವು. ಇವಕ್ಕೆ ಉಣ್ಣುವುದಕ್ಕೆ ಬ್ರಾಹ್ಮಣರ ಪಂಕ್ತಿಯೇ ಬೇಕೇನು? ಒಟ್ಪಾರೆ ಬ್ರಾಂಬ್ರ ಊಟ ಸಿಕ್ಕಿದರಾಯಿತು. ಹೊಟ್ಟೆ ಬಾಕವೆನಿಸುವಷ್ಟು ಉಂಡ ಮೇಲೆ ಶೂದ್ರರ ತಗಾದೆ ಆರಂಭವಾಯಿತು. ಅದೂ ಆ ಕ್ಷುದ್ರ ಬ್ರಾಹ್ಮಣೋತ್ತಮರ ಸಮುಖದಲ್ಲೇ. ಮಾರಪ್ಪ-ತಿಂಗಳಾಯರಿಗೆ ಮುಖಭಂಗವಾಗಲು ಇದಕ್ಕಿಂತ ಹೆಚ್ಚಿನ 'ಭಾಗ್ಯ' ಬೇಕಾಗಿರಲಿಲ್ಲ. **"ತಮಗಿಂತ ಕೆಳಸ್ತರದವರಾದ ಕೊರಗರ ಐತುವಿನ ಜನರು ತಮ್ಮೊಡನೆ ಊಟಕ್ಕೆ ಕೂತಿದ್ದು ಸರಿಯಲ್ಲವೆಂದು, ಮತ್ತೊಂದು**

ಅಸ್ಪೃಶ್ಯಕುಲವಾದ ಮುಂಡಾಲರು ನ್ಯಾಯ ತೆಗೆದರು. ಕೊರಗರು, ಮುಂಡಾಲರೊಂದಿಗೆ ತಮಗೆ ಊಟ ಇಕ್ಕಿದ್ದೇ ಎಂದು ಇನ್ನೊಂದು ಅಸ್ಪೃಶ್ಯಕುಲದ ಮುಗೇರರು ಸಿಟ್ಟಾದರು. ಹಾಗೆಯೇ ತೀರಾ ಹೀನ ಕುಲದವರಾದ ಕೊರಗರು, ಮುಂಡಾಲರು, ಮುಗೇರರನ್ನೆಲ್ಲ ತಮ್ಮೊಡನೆ ಊಟಕ್ಕೆ ಯಾಕೆ ಕೂರಿಸಬೇಕಿತ್ತೆಂದು ಮೈಲಿ, ಮೂಲ್ಯ, ಪೂಜಾರಿ, ಬೆಸ್ತರು, ಶೆಟ್ರು ಆಚಾರಿಗಳೆಲ್ಲ ಗಲಭೆ ಎಬ್ಬಿಸಿದರು. ಕಳ್ಳು ಮೂರ್ತೆ ಮಾಡುವ ಪೂಜಾರಿಗಳಿಗೆ ದೇವಸ್ಥಾನದೊಳಗೆ ಪ್ರವೇಶವೇ ಇಲ್ಲ. ಅಂತಾ ಜಾತಿಯನ್ನು ಒಳನುಗ್ಗಿಸಿ, ಅವರ ಜತೆ ನಮ್ಮನ್ನು ಕೂರಿಸಿ ಉಣಿಸಿದ್ಯಾಕೆ ಎಂದು ಕೆಲವು ಮೂಲ್ಯರು, ಬೆಸ್ತರು ಹಾಗೂ ಶೆಟ್ರುಗಳು ಮತ್ತೊಂದು ತಗಾದೆ ತೆಗೆದು ಮುಖ ಊದಿಸಿಕೊಂಡರು...."

"ಒಟ್ಟಾರೆ ಈ ಅಬ್ರಾಹ್ಮಣ ಶೂದ್ರ ಜಗತ್ತಿನೊಳಗೇ, ಜಾತಿಭೇದಗಳ ವಿಷ ಬ್ರಾಹ್ಮಣರಿಗಿಂತ ಸ್ವಲ್ಪ ವಿಷಮವೇ ಇದೆಯೆಂದು ಮಾರಪ್ಪ–ತಿಂಗಳಾಯರಿಗೆ ತಿಳಿದೊಡನೆ, ಅಂದೇ ಅವರಿಬ್ಬರೂ ಈ ವಿಚಾರದಲ್ಲಿ ಮೌನವಾಗಿ ಬಿಟ್ಟರು. ಇದು ತಮ್ಮಿಂದ ತೊಳೆಯಲಾರದ ಸಾಮಾಜಿಕ ಕೊಳೆ. ಆದರೂ ಜನಜಾಗೃತಿ ಉಂಟು ಮಾಡಿ ಅದಕ್ಕಾಗಿ ಪ್ರಯತ್ನಿಸುವುದು ನಮ್ಮ ಕರ್ತವ್ಯವೆಂದು ಗಾಂಧಿಯವರು ಅಂದು ಹೇಳಿದ ಮಾತು ಮಾರಪ್ಪನಿಗೆ ನೆನಪಿಗೆ ಬಂತು".[11] ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಇದೇ ಜನ ತಮ್ಮ ಕುಲವನ್ನು ಮೀರಿ ಯೋಚಿಸಬಲ್ಲರೆಂಬುದನ್ನು ಕಾದಂಬರಿ ದಾಖಲಿಸುತ್ತದೆ. ಹೆಬ್ಬಾರರ ಅಂಗಳದಲ್ಲಿ ಭೂತಕೋಲ ನಡೆದ ಸಂದರ್ಭದಲ್ಲಿ ಪ್ರಸಾದ ತೆಗೆದುಕೊಳ್ಳಲು ಅದ್ರಾಮನನ್ನು ಸ್ವತಃ ಭೂತವೇ ಆತನನ್ನು ಕೈ ಸನ್ನೆಯಿಂದ ಒಳಕರೆದಿತ್ತು. "ಭೂತ ಪರಜಾತಿಯವನಿಗೆ ಹೂ–ಗಂಧ ನೀಡುವ ಚಂದವನ್ನು ಸೇರಿದ ಜನರೆಲ್ಲರೂ ಸಂತೋಷದಿಂದಲೇ ವೀಕ್ಷಿಸಿದರು. 'ದೈವಕ್ಕೆ ಜಾತಿಯ ಭೇದವಿಲ್ಲ; ಅದೆಲ್ಲ ಇರುವುದು ರಾಕ್ಷಸ ಜಾತಿಯ ಮನುಷ್ಯರಿಗೆ ಮಾತ್ರವೇ' ಎಂದು ಪೂಜಾರಿ ಕೊರಗ ಮೂಲ್ಯ ಮಡಿವಾಳ ಸಿದ್ದುವಲ್ಲಿ ಹೇಳಿಕೊಂಡ.

ಗಾಂಧಿ ಎಂಬ ಚೇತನವು ಕಾರ್ನಾಡು ಸದಾಶಿವರಾಯರಂಥ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿದೆ. ತಿಂಗಳಾಯ, ಮಾರಪ್ಪಶೆಟ್ಟಿ ಅದ್ರಾಮನಂಥವರು ತೀವ್ರವಾಗಿ ಪ್ರಭಾವಿತರಾಗಿದ್ದಾರೆ. ಹಾಗೆಯೇ ಆರಾಧನೆ, ಮುಗ್ಧಭಕ್ತಿ, ಬದ್ಧತೆಗಳ ಜೊತೆಜೊತೆಯಲ್ಲೇ ಸಿನಿಕತನ, ವ್ಯಂಗ್ಯ, ತಿರಸ್ಕಾರಗಳನ್ನು ಚಿತ್ರಿಸುತ್ತಲೇ ಕಾದಂಬರಿ ತನ್ನ ವಸ್ತುನಿಷ್ಠತೆಯನ್ನು ಕಾಯ್ದುಕೊಂಡಿದೆ. ಗಾಂಧಿಯವರ ಒಂದೊಂದು ಭೇಟಿಯೂ ಮೂರು ಘಟ್ಟಗಳನ್ನೇ ಸೂಚಿಸುವಂತಿದೆ.

ಗಾಂಧಿಯವರ ಮೂರನೆಯ ಭೇಟಿಯ ಸಂದರ್ಭದಲ್ಲಿ ಅವರನ್ನು ನೋಡಿ ತಮ್ಮ ಆಭರಣಗಳನ್ನು ಅವರಿಗೆ ಸಮರ್ಪಿಸಲು ಹೋಗುವ ದ್ರೌಪದಿ ಮತ್ತು ದಾರು ಗಾಂಧಿಯವರಿಗೆ ನೇರವಾಗಿ ಮುಖಾಮುಖಿಯಾಗುತ್ತಾರೆ. ಕಾದಂಬರಿಕಾರ್ತಿಯ ಕಲ್ಪನೆಯ ಪಾತ್ರಗಳು ಮತ್ತು ವಾಸ್ತವದ ಇತಿಹಾಸಪುರುಷ ಬೆರೆಯುವ ಒಂದು ಅಪೂರ್ವ ಕ್ಷಣವದು.

ಹಲವು ಕಾರಣಗಳಿಂದ ಗಾಂಧಿಗೆ ವಿರೋಧವಾಗಿದ್ದವರೂ ಕ್ರಮೇಣ ಗಾಂಧಿಗೆ ಹತ್ತಿರವಾಗುವ ಸೂಚನೆಗಳೂ ಕಾದಂಬರಿಯಲ್ಲಿವೆ. ತನ್ನ ಮಗನನ್ನು ತನ್ನಿಂದ ಕಸಿದುಕೊಂಡ ಎಂಬ ಭಾವನೆಯಲ್ಲಿ ಗಾಂಧಿ ಹೆಸರು ಕೇಳಿದರೆ ಸಿಟ್ಟಾಗುತ್ತಿದ್ದ ಮಾರಪ್ಪನ ತಾಯಿ ಸೂರಕ್ಕೆ ದ್ರೌಪದಿಯ ಬೋಳುಬದುಕು ಅನೇಕ ವಿರೋಧಗಳನ್ನು ಎದುರಿಸಿಯೂ ಗಾಂಧಿಸ್ಪರ್ಶದಿಂದ ಮತ್ತೆ ಚಿಗುರುವ ಈ ಪ್ರಸಂಗದಿಂದ ತನ್ನ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುತ್ತಾಳೆ. ಇದು ಈ ಕಾದಂಬರಿಯ ಆಶಯವೂ ಆಗಿದೆ. 'ಮುಂಜಾನೆ ಬೋಳು ಮುಚ್ಚಿಕೊಂಡಿದ್ದ ದೋಪಮ್ಮ ಇದೀಗ ಕುಂಕುಮಶೋಭಿತೆಯಾಗಿ ಬಂದಿರುವ ಕಥೆಯನ್ನು ಸೂರಕ್ಕೆಯವರು ಸೊಸೆಯ ಬಾಯಲ್ಲಿ ಕೇಳಿದವರೇ ಸಂತಸದಿಂದ ಅಯ್ಯೋ...... ಪುಣ್ಯಾತ್ಮ! ನಿನ್ನನ್ನೊಂದು ಗಳಿಗೆ ಕಾಣದೆ ಹೋದೆನೇ ಎಂದು ಪರಿತಪಿಸುತ್ತ ಚಾವಡಿಯಲ್ಲಿ ಕುಸಿದು ಕುಳಿತರು!'

ಗಾಂಧಿಬಂದ ಎಂಬ ಶೀರ್ಷಿಕೆಯೇ ಓದುಗನಲ್ಲಿ ಅನಂತ ಅರ್ಥಸಾಧ್ಯತೆಗಳನ್ನು ಸೃಷ್ಟಿಸುತ್ತದೆ. ಗಾಂಧಿ ಬಂದಮೇಲೆ ಭಾರತ ಹಿಂದಿನ ಹಾಗೆ ಉಳಿಯಲಿಲ್ಲ. ಬ್ರಿಟಿಷರು ಉಳಿಯಲಿಲ್ಲ. ಭಾರತದ ಸ್ವಾತಂತ್ರ್ಯ ಹೋರಾಟವೂ ಗಾಂಧಿಯ ಪ್ರವೇಶದ ನಂತರ ಬೇರೆ ಸ್ವರೂಪವನ್ನೇ ಪಡೆದುಕೊಂಡಿತು. ಒಟ್ಟಾರೆ ಗಾಂಧಿ ಬಂದಮೇಲೆ ಭಾರತದ ಮಟ್ಟಿಗೆ ಬದಲಾವಣೆಗೆ ಒಡ್ಡಿಕೊಂಡು ಏನೇನೊ ಆಯಿತು. 'ಬಂದ' ಎನ್ನುವುದು ಕೊನೆಯೇ ಇಲ್ಲದ ವರ್ತಮಾನ ಕಾಲವಾಗಿ, ಕಾಲಕಾಲಕ್ಕೂ ಗಾಂಧಿ ಪರಮ ಸತ್ಯವಾಗಿ ಧ್ವನಿಸುತ್ತಾ ಹೋಗುತ್ತದೆ.

ಗಾಂಧಿ ಎನ್ನುವವನು ಯಾರೆಂಬುದೇ ಗೊತ್ತಿಲ್ಲದ, ದಕ್ಷಿಣ ಕನ್ನಡದ ಶೂದ್ರರು, ಮಹಿಳೆಯರು, ಗಾಂಧಿಯನ್ನು **"ಮಹಾತ್ಮನಾಗಿ ಹೊಸ ಯುಗದ ಹರಿಕಾರನಾಗಿ ಸ್ವಾಗತಿಸುತ್ತಿರುವ ಬ್ರಾಹ್ಮಣ ಮತ್ತು ಶೂದ್ರ ಗಾಂಧಿವಾದಿಗಳು ಮತ್ತು ಗಾಂಧಿಯನ್ನು ಅಪಾಯವಾಗಿ ಗ್ರಹಿಸಿದ ಬ್ರಾಹ್ಮಣರಿದ್ದಾರೆ. ಇವರೆಲ್ಲರನ್ನೂ ಮತ್ತು ಸಮಸ್ತ ಭಾರತೀಯ ಜನಮಾನಸವನ್ನೂ ಬೇಕಾಗಿ, ಬೇಡವಾಗಿ, ಮಿತ್ರನಾಗಿ, ಎದುರಾಳಿಯಾಗಿ ಸನಾತನಿಯಾಗಿ, ಆಧುನಿಕನಾಗಿ, ಸಂತನಾಗಿ, ಲೌಕಿಕನಾಗಿ, ಅಲೌಕಿಕನಾಗಿ ಆವರಿಸಿದ ಗಾಂಧಿಯನ್ನು ವಿಲಕ್ಷಣವೂ ಆರ್ದ್ರವೂ ಆದ ನೆಲೆಗಳಲ್ಲಿ ನಾಗವೇಣಿ ಕಟ್ಟಿಕೊಡುತ್ತಾರೆ".**[೧೨]

ಗಾಂಧಿ, ಸ್ವಾತಂತ್ರ ಈ ಹಿನ್ನೆಲೆಯಲ್ಲಿ ಬಂದ ಪರಿವರ್ತನೆಗಳನ್ನು ಗಾಂಧಿ ಬಂದ ಕಾದಂಬರಿ ಹಿಡಿದಿಡುತ್ತದೆ. ಗಾಂಧಿವಾದದ ಧೋರಣೆಗಳು ಗೊತ್ತಾಗದಂತೆಯೇ ನುಸುಳಿಕೊಂಡು ಬರುತ್ತವೆ. ಹಾಗೆ ಬರುವ ಮೂಲಕ ಗಾಂಧಿ ಎಷ್ಟರಮಟ್ಟಿಗೆ ಪ್ರಸ್ತುತರು ಅವರ ಆಲೋಚನೆಗಳಿಗಿರುವ ಸಾರ್ವಕಾಲಿಕತೆ ಏನು ಎಂಬುದನ್ನ ಕಾದಂಬರಿ ಆಲೋಚಿಸುವಂತೆ ಮಾಡುತ್ತದೆ.

ಅಡಿ ಟಿಪ್ಪಣಿ

೧. ವೈದೇಹಿ, ***ಅಸ್ಪೃಶ್ಯರು,*** ಪು.ಸಂ.

೨. ಎಚ್. ನಾಗವೇಣಿ, ***ಗಾಂಧಿ ಬಂದ,*** ಪು.ಸಂ. ೨೨೩

೩. ವೈದೇಹಿ, ***ಅಸ್ಪೃಶ್ಯರು,*** ಪು.ಸಂ. ೫೦

೪. ಅದೇ, ಪು.ಸಂ. ೫೦

೫. ರಘುನಾಥ ಎಚ್.ಎಸ್., ***ಹೊಸಗನ್ನಡ ಕಾದಂಬರಿಯಲ್ಲಿ ಅಂರ್ಜಾತೀಯ ಮತ್ತು ಮತೀಯ ವಿವಾಹ,*** ಪು.ಸಂ. ೨೪೫-೨೪೬

೬. ಎಚ್. ನಾಗವೇಣಿ, ***ದಾನ ಕಥೆ,*** ಪು.ಸಂ. ೬

೭. ***ನಿರ್ದಿಗಂತ,*** ಸಂಪುಟ ೧, ವೀಣಾ ಶಾಂತೇಶ್ವರ ಅಭಿನಂದನಾ ಗ್ರಂಥ, ಪು.ಸಂ. ೩೩೪

೮. ಎಚ್. ನಾಗವೇಣಿ, ***ಗಾಂಧಿ ಬಂಧ,*** ಪು.ಸಂ. ೩೫೬-೩೫೭

೯. ಅದೇ, ಪು.ಸಂ. ೩೪

೧೦. ಅದೇ, ಪು. ಸಂ. ೧೮೭

೧೧. ಅದೇ, ಪು.ಸಂ. ೧೮೭-೧೮೮

೧೨. ***ಪ್ರಜಾವಾಣಿ,*** ಸಾಪ್ತಾಹಿಕ ಪುರವಣಿ, ಭಾನುವಾರ ೧೬ ಮಾರ್ಚ್ ೨೦೧೪, ನಾರಿಕೇಳ ಎಂ.ಎಸ್. ಆಶಾದೇವಿ.

ಅಧ್ಯಾಯ – ೫

ವೈದೇಹಿ ಮತ್ತು ನಾಗವೇಣಿ ಅವರ ಪ್ರಬಂಧ ಸಾಹಿತ್ಯ

೫.೧. ಪ್ರಬಂಧಗಳಲ್ಲಿ ಪ್ರಾಕೃತಿಕ ಪರಿಸರ

ಕರಾವಳಿ ಪ್ರದೇಶದ ಪ್ರಾಕೃತಿಕ ಪರಿಸರವನ್ನು ಈ ಇಬ್ಬರು ಲೇಖಕಿಯರ ಆಧುನಿಕ ಮನಸ್ಸುಗಳು ವಿಶ್ಲೇಷಿಸಿದ ಬಗೆಯೇ ಅವರ ಪ್ರಬಂಧಗಳ ಮೂಲದ್ರವ್ಯ. ಆಧುನಿಕ ಶಿಕ್ಷಣದಿಂದ ಪ್ರೇರಿತವಾದ ಹೊಸ ಮೌಲ್ಯಗಳನ್ನು ಸ್ವೀಕರಿಸಿದ ಮನಸ್ಸೊಂದು ಗ್ರಾಮೀಣ ಜೀವನದ ಸಾಂಪ್ರದಾಯಿಕತೆಯೊಂದಿಗೆ ಮುಖಾಮುಖಿಯಾದಾಗ ಕಾಣುವ ಸಂಘರ್ಷವನ್ನು ವೈದೇಹಿಯವರ ಮೇಜು ಮತ್ತು ಬಡಗಿ ಹರಿವ ನೀರು ಸಂಕಲನದಲ್ಲಿ ಹಾಗೂ ನಾಗವೇಣಿಯವರ ಸೂರ್ಯನಿಗೊಂದು ವೀಳ್ಯಾ, ವಸುಂಧರೆಯ ಗ್ಯಾನ ಕೃತಿಗಳಲ್ಲಿ ಕಾಣಬಹುದಾಗಿದೆ. ನಾಗವೇಣಿಯವರ ವಸುಂಧರೆಯ ಗ್ಯಾನವಂತು ಸ್ವರೂಪ ಮತ್ತು ವಸ್ತುವಿನ ದೃಷ್ಟಿಯಿಂದ ಪ್ರಾಕೃತಿಕ ಹಿನ್ನೆಲೆಯಿಂದಲೇ ರೂಪುಗೊಂಡಂತಿದೆ. ಕರಾವಳಿಯ ನೈಜ ಪ್ರಾಕೃತಿಕ ಪರಿಸರವು ಕೃತಿಯೊಂದರ ಸೃಷ್ಟಿಯಲ್ಲಿ ವಹಿಸುವ ಪಾತ್ರ ಎಷ್ಟು ಮಹತ್ವದ್ದು ಮತ್ತು ಅದು ನೀಡಿದ ಪ್ರೇರಣೆ ಎಷ್ಟು ಪ್ರಭಾವಶಾಲಿಯಾದದ್ದು ಎಂಬುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ.

ಮನುಷ್ಯ ತನ್ನ ನಾಗರಿಕತೆಯ ಉತ್ತುಂಗ ಸ್ಥಿತಿಯಲ್ಲಿರುವ ಈ ಹೊತ್ತಲ್ಲಿ 'ಪ್ರಕೃತಿ'ಯನ್ನು ಕುರಿತಂತೆ ಹಿಂದೆಂದಿಗಿಂತಲೂ ಹೆಚ್ಚು ಕಾಳಜಿ ವಹಿಸಬೇಕಾದ ಅನಿವಾರ್ಯತೆಯಲ್ಲಿ ನಾವಿದ್ದೇವೆ. ಈ ಜಗತ್ತಿನ ಪ್ರತಿಯೊಂದು ಜೀವಿಯ ಹುಟ್ಟಿಗೆ ಅದರಲ್ಲೂ ಈ ಮನುಷ್ಯ ಕುಲದ ಹುಟ್ಟಿಗೆ ಅವನ ಉಳಿವಿಗೆ ಕಾರಣವಾಗಿರುವ ಪ್ರಕೃತಿ, ಮಾನವನ ಮೇಲೆ ಬೀರಿರುವ ಪ್ರಭಾವವನ್ನು ಕುರಿತಾಗಿ ಪಂಪನಾದಿಯಾಗಿ ಕುವೆಂಪು, ಕಾರಂತ, ಟಾಲ್‌ಸ್ಟಾಯ್, ಥಾಮಸ್ ಹಾರ್ಡಿ, ವರ್ಡ್ಸ್‌ವರ್ತ್ ಮುಂತಾದ ಅನೇಕರು ತಮ್ಮ ಕೃತಿಗಳಲ್ಲಿ ಭಿನ್ನಭಿನ್ನವಾಗಿ ಅನ್ವೇಷಿಸಿದ್ದಾರೆ. ವೈದೇಹಿ ಮತ್ತು ನಾಗವೇಣಿ ಅವರು ತಮ್ಮ ಪ್ರಬಂಧಗಳಲ್ಲಿ ಕರಾವಳಿಯ ಪ್ರಾಕೃತಿಕ ಪರಿಸರವನ್ನು ಹೇಗೆ ಅಭಿವ್ಯಕ್ತಿಸಿದ್ದಾರೆ ಎಂಬುದನ್ನು ಅಧ್ಯಯನ ನಡೆಸಲಾಗಿದೆ.

ಸ್ವಾತಂತ್ರ್ಯಾನಂತರ ಮುಂದಾಲೋಚನೆಯಿಲ್ಲದೆ ಸ್ಥಾಪಿತವಾದ ಕೈಗಾರಿಕೆಗಳು, ಬೃಹತ್ ಜಲವಿದ್ಯುತ್ ಯೋಜನೆಗಳು ಕಾಡಿನ ನಾಶಕ್ಕೆ ಪರಿಸರ ಮಾಲಿನ್ಯಕ್ಕೆ ಕಾರಣವಾದವು. ಹಾಗಾಗಿ ಈ ಪ್ರದೇಶದ ಪರಿಸರ ಹೇಗಿತ್ತು ಅದರೊಂದಿಗೆ ಜನಜೀವನ ಹೇಗೆ ಬೆಸೆದುಕೊಂಡಿತ್ತು ಎಂಬುದನ್ನು

ತಿಳಿಯಲು ಕಾರಂತರ ಕಾದಂಬರಿಗಳನ್ನೆ ಅಧ್ಯಯನ ಮಾಡಬೇಕಾಗಿದೆ. ಕಾರಂತರನ್ನು ಬಿಟ್ಟರೆ ಕರಾವಳಿಯ ಪ್ರಾಕೃತಿಕ ಪರಿಸರದ ಚಿತ್ರವನ್ನು ನಾಗವೇಣಿ ತುಂಬಾ ಚೆನ್ನಾಗಿ ಕಟ್ಟಿಕೊಡುತ್ತಾರೆ. ಅದಾಗಷ್ಟೆ ಸ್ವಾತಂತ್ರ್ಯ ಬಂದು ಹೆಚ್ಚು ವರ್ಷಗಳಾಗಿಲ್ಲದ ಕಾರಣ ದೇಶ ಅಭಿವೃದ್ಧಿಯ ಕನಸುಕಟ್ಟುತ್ತ ನಿಧಾನವಾಗಿ ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದ ಕಾಲವನ್ನು ವೈದೇಹಿ ತುಂಬ ಸೂಕ್ಷ್ಮವಾಗಿ ಹೇಳುತ್ತಾ ಹೋದದನ್ನು ಇವರ ಪ್ರಬಂಧಗಳಲ್ಲಿ ಗಮನಿಸಬಹುದಾಗಿದೆ. ಆ ಕಾರಣಕ್ಕಾಗಿ ಒಂದೇ ಭೌಗೋಳಿಕ ಹಿನ್ನೆಲೆಯಿಂದಲೇ ಬಂದ ಈ ಇಬ್ಬರೂ ಲೇಖಕಿಯರ ಪ್ರಬಂಧಗಳಲ್ಲಿನ 'ಪ್ರಾಕೃತಿಕ ಪರಿಸರ'ದ ತೌಲನಿಕ ಅಧ್ಯಯನ ತುಂಬ ಸೂಕ್ತವೆನಿಸುತ್ತದೆ.

ಪಶ್ಚಿಮ ಘಟ್ಟಗಳ ಜೀವ ವೈವಿಧ್ಯಕ್ಕೆ, ಸಸ್ಯ ವೈವಿಧ್ಯತೆಗೆ ಕಾರಣವಾಗಿರುವುದು ಇಲ್ಲಿನ ಮಳೆಕಾಡುಗಳು, ಪಶ್ಚಿಮ ಘಟ್ಟಗಳು ದಕ್ಷಿಣ ಭಾರತದ ಜೀವ ನದಿಗಳ ಉಗಮ ಸ್ಥಾನವಾಗಿವೆ. ಭಾರತದ ಶೇಕಡಾ ೨೭ರಷ್ಟು ಸಸ್ಯ ಸಂಪತ್ತು ಈ ಪಶ್ಚಿಮ ಘಟ್ಟಗಳಲ್ಲಿದೆ. ಈ ಕಾರಣದಿಂದ ಇಡೀ ದಕ್ಷಿಣ ಭಾರತದ ಜನಜೀವನ ಈ ಪಶ್ಚಿಮಘಟ್ಟಗಳನ್ನೇ ಆಧರಿಸಿದೆ.

ಪ್ರಕೃತಿ ಮಾನವ ಬದುಕಿನ ಅವಿಭಾಜ್ಯ ಅಂಗ. ಪ್ರಕೃತಿಯನ್ನು ಪೂಜಿಸುವ ಗೌರವಿಸುವ ಆಚರಣೆಗಳು ನಮ್ಮ ಜನಪದರಲ್ಲಿವೆ. ಮಾನವ ಸಂಸ್ಕೃತಿಯ ವಿಕಾಸದ ಮೊದಲ ಘಟ್ಟದಲ್ಲಿ ಪ್ರಕೃತಿಯ ಅಗಾಧ ಶಕ್ತಿಗೆ ಭಯಪಟ್ಟು ಪ್ರಕೃತಿಯನ್ನು ದೇವರೆಂದು ಪೂಜಿಸಿದ. ಹಾಗಾಗಿ ನೀರು, ಗಾಳಿ, ಆಕಾಶ, ಭೂಮಿ, ಬೆಂಕಿ ಇವುಗಳು ಪಂಚಭೂತಗಳೆನಿಸಿಕೊಂಡವು. ಈ ಪಂಚಭೂತಗಳ ಆರಾಧನೆಯಲ್ಲಿ ಕಲಾತ್ಮಕತೆ ಸೇರಿಕೊಂಡಂತೆ ಪ್ರಾಚೀನ ಕಾವ್ಯಗಳ ಕಥಾ ವಿನ್ಯಾಸದಲ್ಲಿ ಪ್ರಕೃತಿ 'ವರ್ಣನೆ'ಯ ರೂಪದಲ್ಲಿ ಬೆಸೆದುಕೊಳ್ಳುತ್ತಾ ಹೋಯಿತು. ಮುಂದೆ ಆಧುನಿಕರಾದ ನಾವು ಪ್ರಕೃತಿಯನ್ನು ನೋಡುವ ದೃಷ್ಟಿ ಪ್ರಾಚೀನರಿಗಿಂತ ಭಿನ್ನವಾಯಿತು. ವೈಜ್ಞಾನಿಕವಾಗಿ ಪ್ರಕೃತಿಯ ಮಹತ್ವ ಅರಿವಾದಂತೆಲ್ಲ ಆ ಕುರಿತು ಹೆಚ್ಚು ಸೂಕ್ಷ್ಮಜ್ಞರಾದೆವು ಅಲ್ಲಿಂದ ಪ್ರಕೃತಿಯ ಕುರಿತ ಮಾನವನ ತಿಳುವಳಿಕೆ, ನಿರೀಕ್ಷೆಗಳೂ ಬದಲಾದವು. ಹಂತಹಂತವಾಗಿ ಪ್ರಕೃತಿಯ ವೈವಿಧ್ಯತೆಗಳೆಲ್ಲ ಕಥನ ಕಾವ್ಯಗಳ ವಸ್ತುಗಳಾದವು.

ಕರಾವಳಿ ಪ್ರದೇಶ ಈ ಶತಮಾನದ ಆರಂಭದಲ್ಲೇ ವೈವಿಧ್ಯತೆಗೆ ತನ್ನನ್ನು ತೆರೆದುಕೊಂಡಿತ್ತು. ಈ ಹಿನ್ನೆಲೆಯಲ್ಲಿ ಕರಾವಳಿಯ ಪ್ರಕೃತಿ ಮನುಷ್ಯ ಜೀವನದ ಮೇಲೆ ಬೀರಿರುವ ಪ್ರಭಾವ ಕುತೂಹಲಕಾರಿಯಾದುದು. ಈ ನೆಲೆಯಲ್ಲಿ ವೈದೇಹಿ ಮತ್ತು ನಾಗವೇಣಿ ಈ ಇಬ್ಬರ ಪ್ರಬಂಧಗಳಲ್ಲಿನ ಪ್ರಾಕೃತಿಕ ಪರಿಸರವನ್ನು ಗಮನಿಸುತ್ತಿದ್ದೇನೆ.

'ಕಾಲೇ ವರ್ಷತು ಪರ್ಜನ್ಯಃ! ಪೃಥಿವೀ ಸಸ್ಯಶಾಲಿನಿ' ಎಂಬುದನ್ನು ಸೇರಿಸಿಕೊಳ್ಳುತ್ತ "ತೆಂಕಣದ ಗಾಳಿಯಾಟವನ್ನು ಎಳೆದು ತರುತ್ತಾರೆ ವೈದೇಹಿ. "ಬಿಸುಸುಯ್ಯುವ ಪಾತಾಳದ ಹಾವೋ" ಎಂಬಂತೆ ಮೊದಲು 'ಗಿಡ ಮರ ಬಗ್ಗಿಸಿ ಹೆಡೆ ಹೊರಳಾಡಿಸಿ' ತೆಂಕಣಗಾಳಿ ಬಂತು ಬಂತು, ಹಿಂದೆಯೇ ಮೇಘ ಕವುಚಿತೊ ಕವುಚಿತೊ, ಸಂಭ್ರಮವ ಸುರಿವ ಮಳೆ ಸುರಿಯಿತೂ ಸುರಿಯಿತೂ, 'ಮಳೆ ಬಂತೋ ಮಾರಾಯ, ಕೊಡೆ ಹಿಡಿಯೋ ಸುಬ್ರಾಯ'– ಹಾಡಿಸಿಯೇ ಬಿಟ್ಟಿತು. ರಪ್ಪರಪ್ಪ ಹೊಡೆವ ಮಳೆ, ಕುಂಭದ್ರೋಣ ಮಳೆ, ಬಗೆಬಗೆಯ ಬಗೆ ಬಗೆವ ಮಳೆ, 'ಭೋಗಸೆ ತುಂಬ ಸಿಗುವ ಮಳೆ', ವಾರಗಟ್ಟಲೆ ಹೊಯ್ಯುವ 'ಸಂತಧಾರೆ' – ಸತತ ಧಾರಾ ಮಳೆ. ಸುರಲೋಕದವರ ಸಹಸ್ರಕೋಟಿ ತಂತಿವಾದನ ಕಚೇರಿ, ಮೇಘ ಮಲ್ಹಾರ ರಾಗ, ಭುವಿಗೆ ಆಗಸದ ಮಸ್ತಕಾಭಿಷೇಕ ಮಘೆ, ಆರ್ದ್ರೆ, ಪುನರ್ವಸು ಮುಂತಾಗಿ ತಾರಾಲೋಕದಿಂದ ಆಯಾ ನಕ್ಷತ್ರಗಳು ತಂತಮ್ಮ ಹೆಸರಿನಲ್ಲಿ ಹೂಡುವ ವರ್ಷಶರ ಕಾಳಗ, ಜಂಭ ಅಹಂಕಾರ ಉಡಾಪು ಎಲ್ಲವೂ ಸೇರಿ ಛೀಳಿಡುತ ಬರುವ ಅವುಗಳ ರಭಸವೋ ಆ ಪೋರ್ಸಿಗೆ ಸೂರ್ಯ ಕೂಡ ಸಜ್ಜನರ ಉಪಾಯದಂತೆ ದಾರಿ ಬಿಟ್ಟು ಮರೆನಿಂತಿದ್ದಾನೆ. ಅಪರೂಪವಾಗಿರುವವರನ್ನು ಸುಲಭದಲಿ ವರ್ಣಿಸಲು 'ಮಳೆಗಾಲದ ರವಿಯಂತೆ' ಎಂಬ ಉಪಮಾನವೊಂದನ್ನು ಸಿರಿಗನ್ನಡಕ್ಕೆ 'ತಮಟೆಗಳ ಸದ್ದಿಲ್ಲದೆ' ಒದಗಿಸಿದ್ದಾನೆ.[1]

ಇಂಥ ಮಳೆಯ ಜೊತೆ ಕಳೆದ ವೈದೇಹಿಯವರ ಬಾಲ್ಯ ಸಂಭ್ರಮದ್ದು. ಝಿರ್ ಝಿರ್ ಮಳೆಯಲ್ಲಿ ಮನೆಯಲ್ಲಿ ಹೊರಬಂದು ಬೇಕೆಂದೇ ನೀರು ಸೋಕಿ ಅಮ್ಮನಿಂದ ಬೈಸಿಕೊಂಡು ಶೀತಜ್ವರ ಬರಿಸಿಕೊಂಡು ಶಾಲೆಗೆ ರಜೆ ಹಾಕಿದ್ದು. ಪೇಪರ್ ದೋಣಿಗಳನ್ನು ತೇಲಿ ಬಿಟ್ಟಿದ್ದು ಮುಳುಗಿಸಿದ್ದು ಯಾವುದಕ್ಕೂ ಲೆಕ್ಕವಿಲ್ಲ. ಬಣ್ಣವೇ ಇಲ್ಲದ ಮಳೆಯಲ್ಲಿ ಎಂಥಾ ಹಸಿರು ಅಡಗಿದೆ! ಟೀಚರ್ ಕೇಳಿದರೆ ಮಳೆಯ ಬಣ್ಣವೇನೆಂದು ಹಸಿರು ಅಂತ ಉತ್ತರಿಸಬೇಕೆಂದುಕೊಂಡದ್ದು, ಮಳೆನೀರನ್ನು ತಚಪಚ ತುಳಿದರೂ ಕೋಪಗೊಳ್ಳದೆ ನಕ್ಕದ್ದು ನಗಿಸಿದ್ದು ಶಾಲೆಯಿಂದ ಮರಳಿ ಬಂದಾಗ ಬಿಸಿ ಬಿಸಿ ತಿಂಡಿ, ಹಪ್ಪಳ ಉಪ್ಪೇರಿ, ಕೆಂಡದಲ್ಲಿ ಹೊಡಕಿಸಿ ಸುಟ್ಟ ಹಲಸಿನ ಬೀಜ, ದಾನೆ ಬೇಳೆ, ಕೋತಿಗೂ ಕೋಳಿಗೂ ಮದುವೆ ಮಾಡಿದ್ದು ಎಲ್ಲವೂ ಬಾಲ್ಯದ ತುಂಟತನಗಳೇ, ಹಾಗಾಗಿಯೇ ಇರಬೇಕು 'ಮಳೆಯೆಂದರೆ' ಸಾಟಿಯಿಲ್ಲದ ಕೆಳತನವೆಂದೇ ವೈದೇಹಿ ಹೇಳಿದ್ದು.

ಜೀರಿಗಟ್ಟಿ ಸುರಿವ ಮಳೆಯ ಹೊಡೆತ ಇಬ್ಬರು ಲೇಖಕಿಯರಿಗೂ ಒಂದೇ ಆಗಿದ್ದರೂ ಆ ರೌದ್ರ ಮಳೆಯಲ್ಲಿ ನೆಂದು, ಒದ್ದೆ ಮುದ್ದೆಯಾಗಿ ಅನುಭವಿಸಿದ್ದು ಬೇರೆ ಬೇರೆಯಾಗಿಯೆ. ಹಾಗಾಗಿ ಇಬ್ಬರ ಅಭಿವ್ಯಕ್ತಿ ಕ್ರಮದಲ್ಲೂ ಸಾಕಷ್ಟು ಭಿನ್ನತೆಗಳಿವೆ. ವೈದೇಹಿಯವರ ಬಾಲ್ಯ ಮಳೆ, ಶಾಲೆ, ಹಪ್ಪಳ, ಪೇಪರ್‌ದೋಣಿ ಆಟಗಳ ಜೊತೆ ಕಳೆದರೆ ನಾಗವೇಣಿಯವರ ಬಾಲ್ಯ ಎರೆಹುಳು, ಕಪ್ಪೆ, ಹೆಲಿಕಾಪ್ಟರ್ ಚಿಟ್ಟೆ, ದೇವರು ಉಗಿಯುವ ತಾಂಬೂಲದ ತುಣುಕುಗಳ ಹುಡುಕಾಟದಲ್ಲಿ

ತೊಡಗಿದ್ದು. ಮೊದಲ ಹೊಸ ಮಳೆ ಬಿದ್ದ ದಿನ ರಾತ್ರಿ ಮನೆಯ ದೊಡ್ಡವರು ಬೆಟ್ಟದ ಕಾಡ ನೀರಿನೊಂದಿಗೆ ಹರಿದು ಬರುವ ಬಾಲೆಮೀನು, ಮುಗುಡು, ಮಡೆಂಜಿಗಳನ್ನು ತರಿಯಲು ಗ್ಯಾಸ್‌ಲೈಟ್, ಮಚ್ಚು ಹಿಡಿದು ಕಾಯುತ್ತಿದ್ದರೆ, ಮಕ್ಕಳೆಲ್ಲ ಹಗಲಲ್ಲಿ ಮಳೆ ನೀರಿನೊಂದಿಗೆ ದೇವರು ಉಗಿಯುತ್ತಿದ್ದ ತಾಂಬೂಲದ ತುಣುಕುಗಳಿಗಾಗಿ ಕಾಯುತ್ತಿದ್ದ ನೆನಪು.

'ಮಳೆಯಲ್ಲಿ ನೆನೆಯಬೇಡಿರೇ; ನಾಳೆ ಶೀತ ಬಂದು ಜ್ವರ ಏರಿಬಿಟ್ರೆ ಅರಿಭಟ್ರ ಕಷಾಯ ತರುವುದಕ್ಕೆ ಓಡಿಸುವುದು ಯಾರನ್ನ ಎಂದು ಅಮ್ಮ ಬೊಬ್ಬರಿಯುತ್ತಿದ್ದರೆ ನಮಗೆ ನಮ್ಮದೇ ಹಾಡು... ನಮ್ಮದೇ ಪ್ರಪಂಚ. ಮೊದಲ ಮಳೆಗೆ ದೇವರು ಉಗಿಯುವ ತಾಂಬೂಲದ ತುಣುಕುಗಳು ಒಂದೇ ಎರಡೇ! ಸಾವಿರಾರು. ಎಲ್ಲಿ ನೋಡಿದರಲ್ಲಿ ಅವುಗಳದ್ದೇ ಸುಗ್ಗಿ. ಕಿರುಬೆರಳ ಉಗುರಿನಷ್ಟು ಗಾತ್ರದ, ರಕ್ತಗೆಂಪು ಬಣ್ಣದ ಮಕ್ಮಲ್ ಬಟ್ಟೆ ತೊಟ್ಟಿರುವ ಈ ಜೀವಿ ಜೇಡನ ಜಾತಿಗೆ ಸೇರಿದ್ದಿರಬೇಕು. ಪುಟಾಣಿ ಏಡಿಮರಿಯನ್ನು ಕಂಡಂತಾಗುತ್ತದೆ. ನೋಡುವುದಕ್ಕೆಷ್ಟು ಆಕರ್ಷಕವೋ ಮುಟ್ಟುವುದಕ್ಕೂ ಅಷ್ಟೇ ಮೆದು ಮುದ್ದು ಮುದ್ದು'.[೨]

ವೈದೇಹಿಯವರ ಬಾಲ್ಯಕ್ಕೆ ಕಥೆಗಳ ಹೂರಣವಿದ್ದಂತೆ ನಾಗವೇಣಿಯವರ ಬಾಲ್ಯಕ್ಕೆ ಕಥೆಗಳ ತೋರಣವಿದೆ. ಈ ಇಬ್ಬರೂ ಲೇಖಕಿಯರ ಕೃತಿಗಳನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಇವರಿಬ್ಬರ ಬಾಲ್ಯದ ಎಲ್ಲಾ ಒಡನಾಟಗಳೊಂದಿಗೆ ಹಿಮ್ಮೇಳದಂತೆ ಕಥೆಗಳು ಹೆಣೆದುಕೊಂಡು ಬಂದಿವೆ. ಮಳೆಗೊಂದು ಕಥೆಯಾದರೆ, ಸಿಡಿಲು ಮಿಂಚುಗಳಿಗೊಂದೊಂದು ಕಥೆ. ನಾಗವೇಣಿಯವರು ಹೇಳಿರುವಂತೆ ಈ ದೇವರ ತಾಂಬೂಲದ ಹುಳಗಳು ಕೆಲವೊಮ್ಮೆ ಮೊದಲ ಮಳೆಗೆ ಮಾತ್ರವಲ್ಲದೆ ಏಳೆಂಟು ಸಲ ಮಳೆಹೊಯ್ದರು ಆ ತುಣುಕುಗಳು ಬೀಳುತ್ತಿರುತ್ತವೆ. ಅವು ಹೇಗೆ ಬೀಳುತ್ತಮ್ಮ ಎಂದರೆ 'ದೇವರು ಮೇಲೆ ಕೂತು ತಾಂಬೂಲ ಮೆಲ್ಲುತ್ತಾ, ನಮ್ಮನೆಲ್ಲ ನೋಡುತ್ತ ಮಳೆ ಸುರಿಸುತ್ತಾ ಇರಬೇಕಾದರೆ, ಮಳೆಯ ಚಂದಕ್ಕೆ... ತಾಂಬೂಲವನ್ನು ಆಚೆಗೆ ಉಗಿಯುವುದನ್ನು ಮರೆತು ಕೆಳಗೆ ನಮಗೆ ಉಗಿದು ಬಿಡುತ್ತಾರಂತೆ' ಎಂಬ ಉತ್ತರದ ಕಥೆ ಅಮ್ಮನದು.

ಮೊದಲ ಮಳೆ ಅಥವಾ ನಂತರದ ಮಳೆಗೆ ಭೂಮಿ ಚೆನ್ನಾಗಿ ಸಡಿಲಗೊಂಡೊಡನೆ ಈ ಜೀವಿಗಳು ಮಣ್ಣೊಳಗಿಂದ ಮೇಲೆ ಬರುತ್ತವೆಂಬುದು ಪ್ರಾಣಿಶಾಸ್ತ್ರದ ಮೇಷ್ಟ್ರು ಹೇಳಿದನ್ನು ನೆನಪಿಸಿಕೊಳ್ಳುತ್ತಲೆ ಇತ್ತೀಚಿನ ವರ್ಷಗಳಲ್ಲಿ ತಮ್ಮೂರ ಭೂಮಿಯಲ್ಲಿ ಈ ತಾಂಬೂಲ ಜೀವಿಯನ್ನು ಕಂಡಿಲ್ಲ ಆದರೆ ಉರಿಕಾರುವ ಬಳ್ಳಾರಿ ನೆಲದಲ್ಲಿ ಕಂಡದ್ದಿದೆ ಎನ್ನುತ್ತಾರೆ.

ಕಾರ್ತೆಲ್ ತಿಂಗಳ ಜಡಿಮಳೆ, ಆಟಿ ತಿಂಗಳ ಸಿಡಿಲು ಮಿಂಚಿ ಬಾನಿಗೆ ಹುಚ್ಚು ಹಿಡಿದಂತೆ ಸುರಿವ ಮಳೆಗೆ ನೆಂದು ಒದ್ದೆಯಾಗುವುದು ನಿಜ. ಮಳೆಗಾಲದ ಅಂಗಳವೂ ಪಾಚಿಯ

ಬುರ್ನಾಸು ಬುದ್ಧಿಗೆ ಬಲಿಯಾಗುವಂತೆ ಮಾಡುತ್ತದೆ. ಬಾಲ್ಯದಲ್ಲಿ ಯಾರದ್ದೋ ಅಂಗಳದಿಂದ, ಯಾರದ್ದೋ ಹಿತ್ತಲಿಂದ ಯಾವುದೇ ದಿಕ್ಕಿಂದ ಓಡಿ ಬಂದರೂ ಈ ಅಂಗಳದಲ್ಲಿ ತುಳಸಿಕಟ್ಟೆಗೆ 'ಅಂಗಾತ ಬಿದ್ದು ನಮಸ್ಕಾರ ಮಾಡುವ' ಕಾರ್ಯಕ್ರಮ ಹೆಚ್ಚುಕಮ್ಮಿ ವಾರಕ್ಕೆರಡು ಬಾರಿ ಇದ್ದೇ ಇತ್ತು. ಅಂಗಳದಲ್ಲಿ ಬಿದ್ದು ಎದ್ದೊಡನೆ ಅಮ್ಮನ ಹುಣಸೆ ಅಡರು ಸದಾ ಸೇವೆಗೆ ಸಿದ್ಧವಾಗಿ ನಿಂತಿರುತ್ತಿತ್ತು. ಅಮ್ಮನ ಕಣ್ತಪ್ಪಿಸಿ ಧಾರಾಕಾರವಾಗಿ ಸುರಿವ ಜಡಿ ಮಳೆಯಲ್ಲೇ ಮನೆಬಿಟ್ಟು ಗದ್ದೆ ಬೈಲಿಗೆ ಓಡಿ... ತುಂಬಿ ಹರಿಯುವ ಕೆರೆ-ತೋಡುಗಳಲ್ಲಿ ಮೀನು ಏಡಿಗಳ ವಿಚಾರಣೆ ಮಾಡಿ, ಪಾಚಿಕಟ್ಟಿರುವ ಅಂಗಳದಲ್ಲಿ ತೊಟ್ಟಿರುವ ಫ್ರಾಕ್ ಮತ್ತು ಸ್ವಂತ ತಲೆಕಾಲಿನ ಬಗ್ಗೆ ಕಿಂಚಿತ್ತೂ ಭಯ ಗೌರವವಿಲ್ಲದೆ ಸದಾ ತುಂಟತನ ತೋರಿ ಅಂಗಾತ ಬಿದ್ದು ಅಮ್ಮನ ಆ ಹುಣಸೆ ಬೆತ್ತದ ರುಚಿಕಾಣದ ದಿನ ಯಾವುದು ಇರಲಿಲ್ಲವಂತೆ.

"ಬಾನ ಸೀಳುವಂತೆ ಮಿಂಚು ಸಿಡಿಲ ಹಿಮ್ಮೇಳದಲ್ಲಿ ಮಳೆಹೊಡೆಯುತ್ತಿರುವಾಗ ಒಳಗಡೆ ಅಮ್ಮ ಲಾಂದ್ರದ ಮಂದ ಬೆಳಕಲ್ಲಿ ಬಿಸಿ ಗಂಜಿಗೆ ತುಪ್ಪ ಹಾಕಿ ನಮಗೆ ಉಣಿಸುತ್ತಿರಬೇಕಾದರೆ ಹತ್ತಾರು ಪುಟಾಣಿ ಕಪ್ಪೆಮರಿಗಳು ತಟಪಟ ಕುಪ್ಪಳಿಸುತ್ತಾ ಬಂದು ಬಿಸಿಗಂಜಿಯ ತಟ್ಟೆಗೆ ಬಿದ್ದು ಒದ್ದಾಡುವ ದೃಶ್ಯ ನಮ್ಮ ಕಣ್ಮುಂದೆ ಇನ್ನೂ ಹಸಿಹಸಿ. ತಟ್ಟೆಗೆ ಬಿದ್ದ ಕಪ್ಪೆಮರಿಗಳನ್ನು ಸಿಟ್ಟನಿಂದ ಅಂಗೈಯಲ್ಲಿ ಅಮುಕಿ ಹಿಡಿದು, ಅವನ್ನು ನೆಲಕ್ಕೆ ಹೊಡೆದು ಚಟ್ನಿ ಮಾಡುವಾಗ ಅಮ್ಮ ಹೇಳಿದ ಮಾತುಗಳು ನಮ್ಮಲ್ಲಿದ್ದ ಪ್ರಾಣಿ ದಯೆ ಮತ್ತು ಭಯವನ್ನು ಮತ್ತಷ್ಟು ಹೆಚ್ಚಿಸಿದ್ದವೇನೋ? 'ಮಗಾ... ಕಪ್ಪೆ ಕೊಂದ್ರೆ ಅಪ್ಪೆ (ತುಳು=ತಾಯಿ) ಸಾಯ್ತಾರೆ' ಎಂಬ ಅಮ್ಮನ ಎಚ್ಚರಿಕೆ ಮಾತುಗಳಿಂದ ನಾವು ಮನೆ ತುಂಬಾ ಕುಪ್ಪಳಿಸುವ ನೂರಾರು ಮರಿಗಳನ್ನು ಜೋಪಾನವಾಗೆತ್ತಿ ಮತ್ತೆ ಜಗಲಿ ಹೊರಗಿನ ನೀರಿಗೆ ಎಸೆದು ಬರುವುದಿತ್ತು".[2]

ಕಪ್ಪೆಗಳು ನಾಗವೇಣಿಯವರ ಬಾಲ್ಯದ ಗೆಳೆಯರು. ಆಳುಗಳು ಹಿಡಿದುಕೊಟ್ಟ ದೊಡ್ಡ ದೊಡ್ಡ ಗೋಂಕ್ರು ಕಪ್ಪೆಗಳಿಗೆ ಬಾಳೆ ಹಗ್ಗದ ಬಾಲ ಕಟ್ಟುತ್ತಿದ್ದರು. ಕೆರೆ-ತೋಡುಗಳೊಳಗೆ ಅವಿತು ಕಣ್ಣು ಮಾತ್ರವೇ ಮಿಟಕಿಸಿಕೊಂಡು ಸೂರ್ಯನನ್ನು ಅಣಕಿಸುತ್ತಾ ತೇಲಾಡುವ ದೊಡ್ಡ ಕಪ್ಪೆ ಮರಿಕಪ್ಪೆಗಳಿಗೆ ಕಲ್ಲು ಹೊಡೆದು ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ತೇಲಾಡಿಸಿ ಮಜಾ ತೆಗೆದುಕೊಳ್ಳುವುದೇ ಬಾಲ್ಯದ ಪ್ರಮುಖ ಕೆಲಸ.

ಹಾಗೆಯೇ ರೈತ ಮಿತ್ರನೆಂದೇ ಹೊಗಳಿಸಿಕೊಳ್ಳುವ ಎರೆಹುಳುಗಳು ಕೂಡ ಇವರ ಬಾಲ್ಯದ ಗೆಳೆಯರಾಗಿದ್ದವು. ಮಳೆಗಾಲದಲ್ಲಿ ಮಾತ್ರವಲ್ಲ ನೀರಿನ ಒಸರು ಇರುವ ಭೂಮಿಯಲ್ಲೆಲ್ಲ ಹಿಂದೆ ಮಿಜಿ ಮಿಜಿ ಅನ್ನುತ್ತಿದ್ದ ಈ ಶ್ಯಾವಿಗೆ ರೀತಿಯ ಹುಳುಗಳು ಒಂದೇ ರಾತ್ರಿಯಲ್ಲಿ ಮಣ್ಣನ್ನು ಸಡಿಲಗೊಳಿಸಿ ಗದ್ದೆಯನ್ನು ಊಳುತ್ತಿದ್ದ ಅವುಗಳ ಅದ್ಭುತ ಶಕ್ತಿಯನ್ನು ಅಮ್ಮ ತಿಳಿಸಿದ್ದಾಗಿ ಹೇಳುತ್ತಾರೆ.

ತುಳುನಾಡಿನ ಕರಾವಳಿಯ ಪ್ರಾಕೃತಿಕ ಪರಿಸರವನ್ನು ಅರ್ಥೈಸಿಕೊಳ್ಳಲು ಬಹುಶಃ ನಾಗವೇಣಿಯವರ ವಸುಂಧರೆಯ ಗ್ಯಾನ ಪ್ರಬಂಧ ಸಂಕಲನದ 'ಎಲ್ಲಿ ಹೋದವು ಬಲ್ಲಿರಾ?' ಲೇಖನವೊಂದು ಒಳ್ಳೆಯ ಉದಾಹರಣೆಯಾಗಬಲ್ಲದೇನೋ. ತುಳುನಾಡಿನ ದಟ್ಟ ಕಾಡಿನ ವರ್ಣನೆ, ಜೀವವೈವಿಧ್ಯಗಳು, ಸಸ್ಯಸಂಪತ್ತು, ಜನಜೀವನ ಎಲ್ಲವನ್ನು ತುಂಬ ಚೆನ್ನಾಗಿ ವರ್ಣಿಸಿದ್ದಾರೆ. ತಮ್ಮ ಬಾಲ್ಯದ ಪರಿಸರದಲ್ಲಿ ಹಲವು ಜೀವಿಗಳ ಜೊತೆ ಒಡನಾಟವನ್ನಿಟ್ಟುಕೊಂಡದ್ದು ಈಗ ಕಾಡುಗಳು ನಾಶವಾದಂತೆ ಅವುಗಳು ನಾಪತ್ತೆಯಾಗಿರುವುದು ಕೆಲವೊಂದು ನಾಶವೇ ಆಗಿರುವುದರ ಸೂಚನೆಗಳನ್ನು ಕೊಡುತ್ತಾರೆ. ಮನೆಯ ಹಂಚಿನ ಮಾಡಲ್ಲಿ ಒಣಹುಲ್ಲು, ಮುಳಿಹುಲ್ಲುಗಳಂತ ಸಲಕರಣೆಗಳನ್ನು ತಂದು ಗೂಡುಕಟ್ಟಿ ಸಂಸಾರ ಹೂಡುತ್ತಿದ್ದ ಗುಬ್ಬಿಗಳು ಹೊಲ, ಗದ್ದೆ, ಪೈರುಗಳಿಲ್ಲದ ಊರಿನಲ್ಲಿ ಈಗ ದುರ್ಬೀನು ಹಾಕಿ ಹುಡುಕಿದರು ಕಾಣಸಿಗುತ್ತಿಲ್ಲ. ಈ ಗುಬ್ಬಿಯ ಕಥೆಯೇ ಪುಂಡದ ಹಕ್ಕಿಯದು. ಬೈಲ ಗದ್ದೆಗಳ ಜತೆ ಮುಂಡೇವ ಪೊದೆಗಳೂ ಪೈಸಲ್.... ಪುಂಡದ ಹಕ್ಕಿಯೂ ಫೈಸಲ್! ಬಾಲ್ಯದ ಸಂಗಾತಿಗಳಾಗಿದ್ದ ಮುದ್ದಿನ ಪೇರ್ ಪೇರ್ ಮಂಗಣ್ಣಗಳು ಈಗೆಲ್ಲಿವೆ? ನಮ್ಮನ್ನು ಬಿಟ್ಟು ಅವು ಎಲ್ಲಿಗೆ ಅಗಲಿದವು? ಅವುಗಳ ಸಂತಾನವನ್ನು ಹೊಸಕಿ ಹಾಕಿದವರ್ಯಾರು? ಇದಕ್ಕೆ ಉತ್ತರ ಕೊಡುವವರ್ಯಾರು? ಎನ್ನುವ ಪ್ರಶ್ನೆಗಳನ್ನು ಎತ್ತುತ್ತಾರೆ.

ಗಾತ್ರದಲ್ಲಿ ಹೆಸರುಕಾಳಿನಷ್ಟೇ ಇರುವ 'ಪೇರ್‌ಪೇರ್ ಮಂಗಣ್ಣ'ಗಳು ಮನೆಗಳ ಸುತ್ತ ಗೋಡೆಗೆ ತಾಗಿಕೊಂಡಿರುವ ಮೆದುಮಣ್ಣಲ್ಲಿ ಸಣ್ಣ ಆಲಿಕೆಗಳಂತೆ ಗುಳಿ ತೋಡಿ ಅದರೊಳಗೆ ಅಡಗಿಕೊಂಡಿರುವ ಅವುಗಳನ್ನು ಹೊರಬರಿಸುವುದೇ ಒಂದು ಆಟ. ಈಗ ಹುಡುಕಾಡಿದರೂ ಒಂದೂ ಮಂಗಣ್ಣಗಳಿಲ್ಲ. ಇವು ಯಾವ ಕಾರಣಕ್ಕಾಗಿ ಕಡಲ ಜಿಲ್ಲೆಯಿಂದ ನಾಪತ್ತೆಯಾದವೊ ಪ್ರಕೃತಿಯೇ ಉತ್ತರಿಸಬೇಕಿದೆ.

ಇನ್ನೂ ನಾಗವೇಣಿಯವರ ಬಾಲ್ಯದ ನೆನಪಿನ ಪಟ್ಟಿಯಲ್ಲಿ ಹೀರೋ ಆಗಿ ಬಾಕಿ ಉಳಿದದ್ದು ಹೆಲಿಕಾಪ್ಟರ್ ಚಿಟ್ಟೆ, ಬಣ್ಣದ ನೂರಾರು ಪಾತರಗಿತ್ತಿಗಳು, ಬೆಳ್ಳಗಿನ ಸೆಗಣಿ ಹುಳುಗಳು ಅವೆಲ್ಲ ಎಲ್ಲಿವೆ? ಸಾಕಾಯ್ತು ಈ ಪರಿಸರದ ಸಹವಾಸ ಎಂದು ಅವೆಲ್ಲ ಒಕ್ಕಲೆದ್ದು ಹೋಗಿವೆಯೆ? ಎನ್ನುವ ಪ್ರಶ್ನೆಗಳ ಜೊತೆಗೆ ಹಲವು ಹತ್ತು ಪುಟ್ಟ ಜೀವಿಗಳಿಗೆ ಒದಗಿದ ಸ್ಥಿತಿ ಕೆಲವು ಸಸ್ಯಜೀವಿಗಳಿಗೂ ಒದಗಿದೆ. ಈ ಸಸ್ಯಜೀವಿಗಳಿಗೆ ಚಲನೆಯಿಲ್ಲದಿದ್ದರೂ ತಮ್ಮ ಬಾಲ್ಯದ ಒಡನಾಡಿಗಳಂತಿದ್ದದ್ದನ್ನು ತಮ್ಮ ನೆನಪಿನಾಳದಿಂದ ಹೆಕ್ಕಿ ತೆಗೆಯುತ್ತಾರೆ. **"ಈಗಿನಂತೆ ಹಿಂದೆ ವಿಧವಿಧದ ತರಕಾರಿಗಳಿರಲಿಲ್ಲ. ಏನಿದ್ದರೂ ನುಗ್ಗೆ, ಬೆಂಡೆ, ತೊಂಡೆ, ಬದನೆ, ಸೌತೆ, ಪಡುವಲ, ಸೋರೆ, ಕುಂಬಳೆ, ಬಸಳೆ, ಹರಿವೆಗಳ ಜೊತೆ ಗದ್ದೆ ಬದುವಲ್ಲಿ ಬೆಳೆಯುವ ಕೆಸು, ಪೊನ್ನಂಗಣೆ, ತಿಮರೆ ಸೊಪ್ಪುಗಳಷ್ಟೆ". ಇದರಲ್ಲೂ ತಾಮಸ ಗುಣಗಳಿರುವ ಶೂದ್ರರ ತರಕಾರಿಗಳಾದ ನುಗ್ಗೆ, ಬದನೆ, ತೊಂಡೆ,**

ಬಸಳೆಗಳು ಉಡುಪಿ ಮಠದ ದೇವರಿಗೆ ಮತ್ತು ಆ ಮಠಕ್ಕೆ ಸೇರಿರುವ ಸಂಪ್ರದಾಯಸ್ಥ ಕುಟುಂಬಗಳಿಗೆ ಇಂದಿರೂ ವೃರ್ಜ. ಅಂದು ನಮ್ಮ ಹಯಗ್ರೀವ ದೇವರು ವಾದಿರಾಜ ಸ್ವಾಮಿಗಳಿಗೆ ಉಡುಪಿಯ ಮಟ್ಟು ನೆಲದಲ್ಲಿ ಬಿತ್ತುವಂತೆ ಮಟ್ಟುಗುಳ್ಳದ ಬೀಜವನ್ನು ನೀಡದೇ ಇದ್ದಿದ್ದರೆ ಈಗಿನ ಬ್ರಾಹ್ಮಣ ಕುಲಕ್ಕೆ ಮಟ್ಟುಗುಳ್ಳ (ಬದನೆ) ತಿನ್ನುವ ಭಾಗ್ಯವೇ ತಪ್ಪಿಹೋಗುತ್ತಿತ್ತೇನೋ?" ಟೊಮ್ಯಾಟೋ, ಎಲೆಕೋಸು, ಹೂಕೋಸು, ನವಿಲಕೋಸು, ಆಲೂಗಡ್ಡೆ, ಮೂಲಂಗಿ, ಬೀನ್ಸ್, ಕ್ಯಾರೆಟ್, ದೊಡ್ಡಮೆಣಸಿನಕಾಯಿ ಇತ್ಯಾದಿ ಹಲವು ನಮೂನೆಯ ತರಕಾರಿಗಳು ನಮ್ಮ ಮಣ್ಣಿಗೆ ಲಗ್ಗೆ ಇಟ್ಟರೂ ಅವನ್ನು ಇಂಗ್ಲೀಷ್ ತರಕಾರಿಗಳೆಂದು ಉಡುಪಿ ಮಠದವರು ಮತ್ತವರ ಅನುಯಾಯಿಗಳು 'ಅಭೋಜ್ಯ'ವೆಂದು ಪರಿಗಣಿಸಿ ದೂರ ಸರಿಸಿದಾಗ ನಮಗೆ ತೀರ ಹತ್ತಿರ ಬಂದವು ಸೌತೆ, ಬೆಂಡೆ, ಹಾಗಲ, ಸಿಹಿಕುಂಬಳ, ಹರಿವೆ, ಪಡವಲದಂತಹ ಸಾಂಪ್ರದಾಯಿಕ ತರಕಾರಿಗಳು.[9]

ಹಿಂದೆ ಸುಗ್ಗಿ ಬೆಳೆಯಾದೊಡನೆ ಸೌತೆ ನೆಡುವುದೇ ಒಂದು ಸಂಭ್ರಮ. ಅದರಲ್ಲೂ ಬ್ರಾಹ್ಮಣ ಹೆಂಗಸರದ್ದು ಸೌತೆ ಬೆಳೆಸುವುದರಲ್ಲಿ ಒಂದು ಮೇಲುಗೈ. ತುಳುನಾಡ ಮಣ್ಣಿಗೆ ಎಲ್ಲ ತರಕಾರಿಗಳಿಗಿಂತ ತೀರಾ ಹತ್ತಿರದ ಅಕ್ಕತಂಗಿಯರಂತೆ ನೆರವಿಗೆ ಬರುವ ತರಕಾರಿ ಎಂದರೆ ಸೌತೆಕಾಯಿ. ಒಟ್ಟಾರೆ ಸುಗ್ಗಿ ಕಳೆದು ಪಗ್ಗು ಬಂದರೆ ಸಾಕು ಜಾತಿಮತವಿಲ್ಲದೆ ಎಲ್ಲರ ಮನೆಯ ಪಕ್ಕಾಸುಗಳಲ್ಲೂ ಸೌತೆಕಾಯಿಗಳು ಬಾವಲಿ ನೇತಾಡುವಂತೆ ಸಾಲಾಗಿ ನೇತಾಡುತ್ತಿದ್ದವು. ಅವುಗಳ ಜೊತೆ ಸಿಹಿಗುಂಬಳ, ಬೂದುಗುಂಬಳದ್ದು ನೇತಾಡುವ ಸ್ಪರ್ಧೆ.

ಪಗ್ಗುವಲ್ಲಿ ಬೆಳೆದ ಸೌತೆ ಕುಂಬಳಗಳನ್ನು ತೆಂಗಿನ ಸೋಗೆಯ ಉರುಳು ಮಾಡಿಯೋ ಅಥವಾ ಬೈಹುಲ್ಲಿನ ಉರುಳಲ್ಲೋ ಸಿಗಿಸಿ ಮನೆ ಮಾಡಿನ ಪಕಾಸುಗಳಿಗೆ ನೇತುಹಾಕಿದರೆ ಮುಂದಿನ ವರ್ಷದ ಅಂದರೆ ಮುಂದಿನ ಮಳೆಗಾಲದಿಂದ ಬರುವ ಸುಗ್ಗಿ ಕಾಲದವರೆಗೂ ಇದೇ ತರಕಾರಿಗಳ ತಯಾರಿ ಆದಂತೆ. ಇದು ಆ ಕಾಲದ ಮನೆಯ ಮಾಡಿನ 'ಸೌತಿ ವೈಭವ' ಅಥವಾ ತರಕಾರಿ ವೈಭವ. ಆದರೆ, ಈ ಕಾಲದಲ್ಲಿ ಇಂತಹ ದೃಶ್ಯಗಳಿಲ್ಲ. ತುಳುವರಿಂದ 'ಸೌತೆಕಾಯಿ ಜಮಾನ' ಹೊರಟು ಹೋಗುತ್ತಿದೆ ಎಂಬ ವಿಚಾರವನ್ನು ಚರ್ಚಿಸುತ್ತಲೆ ಈ ಸೌತೆಕಾಯಿಗಳ ಜೊತೆ ಮೇಲೋಗರಕ್ಕಾಗಿ ಬಳಸುತ್ತಿದ್ದ ಎರಡು ಜಾತಿಯ ಹೆಸರುಕಾಳುಗಳನ್ನು ಪರಿಚಯಿಸುತ್ತಾರೆ.

ಅಪ್ಪಟ ತುಳುನಾಡಿನದ್ದೇ ಆದ ಈ ತಳಿಗಳು ಈಗ ಅಳಿದು ಹೋಗಿರುವುದೇ ವಿಷಾದದ ಸಂಗತಿ. 'ಸಣ್ಣ ಹೆಸ್ರು' ಎಂಬ ಒಂದು ಜಾತಿಯ ಹೆಸರುಕಾಳು – ಘಟ್ಟದ ಮೇಲಿನ ಮಡಿಕೆಕಾಳಿಗಿಂತ ಗಾತ್ರದಲ್ಲಿ ಸ್ವಲ್ಪದೊಡ್ಡದು. ಆದರೆ ಅದೇ ಬಣ್ಣ. ಆದರೆ ಮಡಿಕೆಕಾಳಿನಷ್ಟು ಗಡುಸಲ್ಲ ಮೃದು. ಬೇಯುವುದಕ್ಕೆ ಮಡಿಕೆಕಾಳಿಗಿಂತಲೂ ಕಡಿಮೆ ಅವಧಿ ಸಾಕಾಗುವುದು ಇದರ

ವೈಶಿಷ್ಟ್ಯ. ಇನ್ನೊಂದು ಜಾತಿ 'ಕಪ್ಪು ಹೆಸ್ರು'. ಉದ್ದಿನ ಕಾಳಿಗಿಂತಲೂ ಸ್ವಲ್ಪ ಜಾಸ್ತಿಯೇ ಕಪ್ಪು ಬಣ್ಣ. ಗಾತ್ರದಲ್ಲಿ ತುಸು ದೊಡ್ಡದು. ರುಚಿಯಲ್ಲಿ 'ಹಸಿರು ಹೆಸರು ಕಾಳಿ'ಗಿಂತಲೂ ಹೆಚ್ಚು ರುಚಿ.

ಆಗ ಊರಲ್ಲಿ ಅಲ್ಲಿಇಲ್ಲಿ ಕಾಣಿಸುತ್ತಿದ್ದ 'ನಾನಿಯಲ್' ಎಂಬ ದೊಡ್ಡ ಜಾತಿಯ ಮರ, ಅಮ್ಮನಂತೆ ಈ ಮರವೂ ತನ್ನ ಮೈಯನ್ನೇ ಬಾಗಿಸಿಬಿಟ್ಟು ತನ್ನ ಮೈಮೇಲೆಲ್ಲ ಮಕ್ಕಳು ಕುಣಿದು ಕುಪ್ಪಳಿಸುವಂತೆ ಅವಕಾಶ ಮಾಡಿಕೊಡುತ್ತದೆ. ಮರಕೋತಿಯಾಟಕ್ಕೆ ಹೇಳಿ ಮಾಡಿಸಿದ ಮರ. ಸಿಹಿಯಾದ ಕಾಯಿಹಣ್ಣುಗಳನ್ನು ಬಿಡುವ ಆ ಮರದ ಹೂವು ಕೂಡ ಸಿಹಿಯೇ. ಅದರ ಚಿಗುರು ಕೂಡ ಒಗರಲ್ಲ. ಚಿಗುರಲ್ಲೂ ಸತ್ವವಿದ್ದುದರಿಂದ ಅದರಿಂದ ತಂಬಳಿ, ಚಟ್ನಿ ಮಾಡಬಹುದಿತ್ತು. ಈಗ ಈ ಮರ ಸರ್ವನಾಶವಾಗಿದೆ. ಹಾಗೆ ನಾಶವಾಗಿರುವ ಇನ್ನೊಂದು ಮರ ವಿಚಿತ್ರ ಬುದ್ಧಿಯ 'ತ್ಯಾರೆಮರ' ಈ ಮರದ ಗುಣವನ್ನು ಮರೆತು ಅಪ್ಪಿಕೊಂಡರೆ ಅದು ಬಿಡುವ ನೇರಳೆ ಹಣ್ಣಿನಂತಹ ರುಚಿಕಟ್ಟಾದ ಆಕರ್ಷಕ ರೂಪಿನ ಹಣ್ಣನ್ನುತಿಂದರೆ ಮೈಯೆಲ್ಲ ಊದಿಕೊಳ್ಳುವಂತೆ ಮಾಡುವುದು ಇದರ ಗುಣ. ನಾಗವೇಣಿಯವರ ಬಾಲ್ಯದ ಒಂದಷ್ಟು ಕಾಲವನ್ನು ತನ್ನ ಬುಡದಲ್ಲೇ ಕಳೆವಂತೆ ಮಾಡಿದ ಸುವಾಸನೆ ಬೀರುವ ಸುರಗಿ ಮತ್ತು ರಂಜೆ ಮರಗಳು ಇವುಗಳ ಜೊತೆಗೆ ಕಾಣೆಯಾದ ಪಟ್ಟಿಯಲ್ಲಿರುವ ಇನ್ನೆರಡು ಮರಗಳೆಂದರೆ ಪುನರ್ಪುಳಿ ಮತ್ತು ಜಾರಿಗೆಮರ. (ಎಲ್.ಸಿ. ಸುಮಿತ್ರ ಅವರ **ಹೂ ಹಸುರಿನ ಮಾತು** ಕೃತಿಯಲ್ಲಿ ಹೀಗೆ ಅಳವಿನಂಚಿನಲ್ಲಿರುವ ಅನೇಕ ಜಾತಿಯ ಮರಗಳನ್ನು ಪರಿಚಯಿಸಲಾಗಿದೆ. ಅಲ್ಲಿ ಹೆಚ್ಚಿನ ವಿವರಗಳನ್ನು ಗಮನಿಸಬಹುದು) ಬಳ್ಳಿಗಳೆಂದರೆ ತೂನಗೇಣಸಿನ ಬಳ್ಳಿ, ರೋಮದ ಗೆಣಸಿನಬಳ್ಳಿ ಮತ್ತು ನೋಕಟೆ ಬಳ್ಳಿ. ಈ ನೋಕಟೆ ಬಳ್ಳಿಗೆ 'ನೀಟಮ್' (Gnetum) ಎಂಬ ವೈಜ್ಞಾನಿಕ ಹೆಸರಿದೆ. ಈ ನೋಕಟೆಬಳ್ಳಿಗೆ ಜೀವಂತಪಳೆಯುಳಿಕೆ ಸಸ್ಯ ಎಂಬ ಕಿರೀಟಧಾರಣೆಯಾಗಿರುವುದರಿಂದ ಸಸ್ಯಲೋಕದಲ್ಲಿರುವ ಅಪೂರ್ವವಾದ ಸಸ್ಯಸಂಕುಲವೆಂಬ ಮನ್ನಣೆ ಇದಕ್ಕಿದೆ. ದೊಡ್ಡ ಹೆಬ್ಬಾವಿನಷ್ಟು ದಪ್ಪಗೆ ಗಟ್ಟಿ ಬಳ್ಳಿಯಾಗಿ ಹೆಮ್ಮರಗಳನ್ನು ತಬ್ಬಿ ಮರಬಳ್ಳಿಯಾಗಿ ಬೆಳೆಯುವ ನೀಟಮ್ ಜಾತಿಯ ಸಸ್ಯಗಳು 'ಭಿನ್ನಲಿಂಗ' ಬಗೆಯದಾಗಿದ್ದು ಗಂಡುಬಳ್ಳಿ – ಹೆಣ್ಣುಬಳ್ಳಿಗಳು ಬೇರೆಬೇರೆಯಾಗಿರುತ್ತವೆ. 'ನೀಟಮ್‌ಉಲ' ಅಥವಾ 'ನೋಕಟೆ ಬಳ್ಳಿ'ಯ ಗಂಡುಬಳ್ಳಿಯು, ಕಾಳುಮೆಣಸಿನ ಹೂ ಕೋಲಿನಂತಿರುವ ಆದರೆ ಅದಕ್ಕಿಂತಲೂ ಗಾತ್ರದಲ್ಲಿ ಸಾಕಷ್ಟು ದೊಡ್ಡದಾಗಿರುವ ನೂರಾರು ಸಂಖ್ಯೆಯ ಗಂಡುಪುಷ್ಪಗಳ ಗುಚ್ಚಗಳನ್ನು ಅರಳಿಸಿ ಬಿಟ್ಟು ಲಕ್ಷೋಪಲಕ್ಷ ಪರಾಗಗಳನ್ನು ಗಾಳಿಯ ಮೂಲಕ, ಸುತ್ತಮುತ್ತಲಲ್ಲಿರುವ ಹೆಣ್ಣು ಬಳ್ಳಿಗಳು ಬಿಡುವ 'ಹೆಣ್ಣು ಪುಷ್ಪಗಳ ಗುಚ್ಛ'ಗಳಲ್ಲಿನ ಅಂಡಕಗಳತ್ತ ಕಳುಹಿಸಿಕೊಡುತ್ತದೆ. ಹಾಗೆ ಗಾಳಿಯಲ್ಲಿ ಹಾರಿಹೋದ ಪರಾಗಗಳು ಹೆಣ್ಣುಬಳ್ಳಿಗಳ ಅಂಡಕಗಳನ್ನು ಪತ್ತೆಹಚ್ಚಿ ನಂತರ ಸಮ್ಮಿಲನಗೊಂಡು

ಫಲೀಕರಣ ಹೊಂದಿ ಭೀಜೋತ್ಪಾದನೆ ಕಾರ್ಯಕ್ಕೆ ನಾಂದಿ ಹಾಡುತ್ತವೆ. ಒಮ್ಮೆ ಹೆಣ್ಣು ಬಳ್ಳಿಯೊಂದು ಬೀಜೋತ್ಪಾದನೆ ಆರಂಭಿಸಿದರೆ ಲಕ್ಷೋಪಲಕ್ಷ ಬೀಜಗಳನ್ನು ಉದುರಿಸುತ್ತದೆ. ಈಗ ಈ ಜಾತಿಯ ಬಳ್ಳಿಗೆ ಕಾಡಿನ ನಾಶದಿಂದಾಗಿ ಗಂಡಿಗೆ ಹೆಣ್ಣಿಲ್ಲ... ಹೆಣ್ಣಿಗೆ ಗಂಡಿಲ್ಲದಂತಹ ಪರಿಸ್ಥಿತಿ ಪ್ರಾಪ್ತಿಯಾಗಿದೆ.

ಅಪಾರ ಔಷಧೀಯ ಮೌಲ್ಯ, ಅತ್ಯುತ್ತಮವಾದ ಸ್ವಾದವುಳ್ಳ ಹಣ್ಣಿನ ಗಿಡಗಳು, ಅನೇಕಾನೇಕ ಇತರ ಉಪಯುಕ್ತ ಗಿಡಗಳು ಈ ಪರಿಸರದಲ್ಲಿದ್ದವು. ಇತರ ಗಿಡಗಳಂತೆ ಕಾಡುಗಿಡಗಳನ್ನು ಬೀಜಹಾಕಿ ಜೋಪಾನಮಾಡಿ ಬೆಳೆಸುವುದು ತೀರಾ ಕಷ್ಟದ ಕೆಲಸ. ತನ್ನಿಂತಾನೇ ಹುಟ್ಟಿಕೊಂಡ ಈ ಗಿಡಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ನಾಶಗೊಳಿಸುವಾಗ ವಿವೇಚನಾಶಕ್ತಿಯುಳ್ಳ ಮನುಷ್ಯ ಸ್ವಲ್ಪವಾದರೂ ಯೋಚಿಸುತ್ತಿದ್ದರೆ ಅನೇಕಾನೇಕ ಇತರ ಉಪಯುಕ್ತ ಗಿಡಗಳು ಇಂದು ಅಳಿವಿನ ಅಂಚಿನಲ್ಲಿವೆ ಎಂಬ ವಿಷಾದವನ್ನು ವ್ಯಕ್ತಪಡಿಸುವ ನಾಗವೇಣಿಯವರಲ್ಲಿ ಪರಿಸರದ ಬಗೆಗೆ ಅಪಾರವಾದ ಕಾಳಜಿ ಇದೆ.

ವೈದೇಹಿಯವರು ಬೆಳೆದು ಬಂದ ಪರಿಸರ ನಾಗವೇಣಿಯವರಂತೆ ಜೀವವೈವಿಧ್ಯ, ಸಸ್ಯ ವೈವಿಧ್ಯತೆಯೊಂದಿಗೆ ಒಡನಾಟವಿಟ್ಟುಕೊಂಡಂಥದ್ದಲ್ಲ ಬದಲಾಗಿ ಅದನ್ನ ದೂರದಿಂದಲೆ ಆಸ್ವಾದಿಸುತ್ತ ಆತ್ಮೀಯವಾಗಿ ಸ್ಪಂದಿಸುವುದಾಗಿತ್ತು. ಆಧುನಿಕತೆಗೆ ತಮ್ಮೂರು ತನ್ನನ್ನು ತಾನು ಒಡ್ಡಿಕೊಳ್ಳುವುದಕ್ಕೂ ಮೊದಲು ಹೇಗಿತ್ತು ಎನ್ನುವುದನ್ನು ಮಲ್ಲಿನಾಥನ ಧ್ಯಾನದ ಕೆಲವು ಲೇಖನಗಳಲ್ಲಿ ಹೇಳಿಕೊಂಡಿದ್ದಾರೆ. **'ಅಷ್ಟರವರೆಗೂ ಎಷ್ಟು ಚೆನ್ನಾಗಿತ್ತು ಅಲ್ಲಿನ ವಾತಾವರಣ; ಊರಿಂದ ತುಸು ದೂರವಿತ್ತು. ಯಾವ ಹಾಳು ರಗಳೆಯಿರಲಿಲ್ಲ. ಎಷ್ಟೆಲ್ಲ ಹಕ್ಕಿಗಳು ಬಂದು ಚಿಲಿಪಿಲಿ ಮಾಡುತ್ತಿದ್ದವು. ಆ ಹಕ್ಕಿ, ಇದು ಈ ಹಕ್ಕಿ, ಉದ್ದಕೊಕ್ಕಿನ ಹಕ್ಕಿ, ಗಿಡ್ಡಕುಚ್ಚದ ಹಕ್ಕಿ, ಕೆಂಪುಗಣ್ಣಿನ ಹಕ್ಕಿ, ಕಪ್ಪು ಕೊರಳಿನ ಹಕ್ಕಿ; ಆಹಾ! ಪನ್ನೀರು ಹಕ್ಕಿ ಮತ್ತು ಇದು ಯಾವ ಹಕ್ಕಿ, ಏನಿದರ ಹೆಸರು, ಅದರ ಊಟ, ಹಾರಾಟ, ಗೂಡು, ಮರಿಗಳು? ಹಕ್ಕಿಗಳನ್ನಾದರೂ ಹೆಸರಿಸಬೇಡಿರೋ ಅವಷ್ಟಕ್ಕೇ ಅವನ್ನು ಬಿಟ್ಟುಬಿಡಿ. ಹೆಸರಿಟ್ಟ ಕೂಡಲೇ ಅವು ಬೇರೆಯಾಗಿ ಕಾಣುತ್ತವೆ. ಅವುಗಳ ಊಟ, ಹಾರಾಟ, ಗೂಡು ಮರಿಗಳನ್ನು ತಿಳಿಯುತ್ತ ಹೋದಂತೆ ನಿಗೂಢತೆ ತೆಳುವಾಗುತ್ತಾ ಹೋಗುತ್ತದೆ. ಮರಿಗೋಲ್ಡ್, ಮಾವು, ದಾಸವಾಳ, ಕರವೀರ, ಚಿಕ್ಕು ಎಲ್ಲದರ ಮೇಲೊಂದು ಲೋಕ. ಸುತ್ತೊಂದು ಲೋಕ. ಲೋಕಗಳ ನಡುವೆ ಕಿನ್ನರಲೋಕ ಮೃದು ರೇಷ್ಮೆಯಂತಹ ಬೆಳಗು.'**[9]

ಹಕ್ಕಿ ಹಾರಿತೆಲ್ಲಿಗೆ, ಕಾಡಿಗೆ ಹೋದ ಗುಬ್ಬಿ, ಬಿದ್ದ ಗೂಡಿನ ಹಕ್ಕಿ ಮುಂತಾದ ಲೇಖನಗಳಲ್ಲಿ ಪರಿಚಿತ ಪಕ್ಷಿಗಳ ಪ್ರಸ್ತಾಪ ಮಾಡುವ ವೈದೇಹಿ ಪ್ರತಿಯೊಂದು ಸನ್ನಿವೇಶಕ್ಕೂ ಒಂದೊಂದು ಕತೆಗಳನ್ನು ಪೋಣಿಸುತ್ತ ಓದುಗನ ಬಾಲ್ಯವನ್ನು ನೆನಪಿಸುತ್ತ ಓದಿನಲ್ಲಿ ಆಸಕ್ತಿ

ಕೆರಳಿಸುತ್ತಾರೆ. ಕತೆಯ ಹಂದರದ ಮೇಲೆಯೇ ತೆಂಕನಾಡಿನ ಪ್ರಕೃತಿಯ ನಾಶದ ಕುರಿತಾಗಿ ಚರ್ಚಿಸುತ್ತಾರೆ. ಕಾಡು-ಕೊರಗು ಲೇಖನದಲ್ಲಿ ಕಾಡಿನ ನಾಶದಿಂದ ಮನುಷ್ಯನ ವಿನಾಶ ಹೇಗಾಗುತ್ತದೆ ಮುಂದಿನ ಪೀಳಿಗೆಗೆ ನಾವು ಕೊಡುವುದಾದರು ಏನನ್ನು? ಅದರ ಅರಿವಿರಬೇಕಾದ್ದು ಯಾರಿಗೆ? ಎಂಬೆಲ್ಲ ಎಚ್ಚರಿಕೆಗಳನ್ನು ನೀಡುತ್ತಾರೆ. ಊರಿನ ಬೆಂಕಿ ಕಾಣುವುದಿಲ್ಲ, ಕಾಡಿನ ಬೆಂಕಿ ಕಾಣುತ್ತದೆ ಎಂಬ ಗಾದೆಯಿದೆ. ಅದು ಸುಳ್ಳಾಗಿ 'ಕಾಣದಬೆಂಕಿ' ಬೀಳುತ್ತ ಬಂತು ಪ್ರತ್ಯಕ್ಷ ಬೆಂಕಿಕೊಳ್ಳಿ ಇಡುವ ಕೈಗಳು ನೂರಾದರೆ ಇಡದ ಕೈಗಳು ಮಿಲಿಯ ಇವೆ. ಆದರೆ ಆ ನೂರರ ಮುಂದೆ ಮಿಲಿಯ ಕೈಗಳು ಕೈಕಟ್ಟಿ ನಿಂತಿವೆಯಲ್ಲ ಯಾಕಾಗಿ? ಕೊಳ್ಳಿ ಇಡುವವರಿದ್ದಾರೆ ತಡೆಯುವವರಿಲ್ಲ. ನಂದಿಸುವುದು ನಂತರದ ಮಾತಾಯಿತು. ವನ್ಯದ ಲಾಭವನ್ನೆಲ್ಲ ಪಡೆದರೂ ಅದನ್ನು ಪ್ರೀತಿಸಲಾಗದೆ ಅದು ಸುಟ್ಟು ಕರಟುವುದನ್ನು ನೋಡಿಯೂ ರಕ್ಷಣೆಗೆ ಕೈ ಕೂಡಿಸಲಾರದೆ ಇವೆಲ್ಲವನ್ನು ಕೇವಲ ಸುದ್ಧಿಯಾಗಿ ಸ್ವೀಕರಿಸುವ, ಮಾತಾಡಲಿಕ್ಕೆ ಒಂದು ವಸ್ತುವಾಗಿಸುವ ನಮ್ಮನ್ನು ನೆನೆನೆದು ಒಳಗೊಳಗೇ ಕುಸಿಯುವಂತಾಗಿದೆ. ಯಂತ್ರ ಜಗತ್ತು ಸ್ಥಾಪಿಸಿದ ಸೌಲಭ್ಯ ಸಂಸ್ಕೃತಿಯ ಕರಾಳಗಳಲ್ಲಿ ಒಂದೇನೋ?

ದೇಶವೆಂದರೆ ಜನ ಮಾತ್ರವಲ್ಲ ಸಮಗ್ರ ಪ್ರಕೃತಿಯ ರಕ್ಷಣೆಯೆಂದರೆ ಪ್ರಜಾರಕ್ಷಣೆ ಮಾತ್ರವಲ್ಲ ಸಕಲ ಚರಾಚರಗಳ ರಕ್ಷಣೆಯೂ ಎಂಬುದೆಲ್ಲ ಎಷ್ಟು ಹುಂಬತನದ ಮಾತಾಗಿ ಕಾಣುತ್ತಿದೆ. ಇವತ್ತು ದೇಶವೆಂದರೆ ನಾವು! ನಾವೂ ಅಲ್ಲ; ನಾನು ಮಾತ್ರ ಎಂಬ ಬಗೆಯ ಸಿನಿಕತನಕ್ಕೆ ಬಂದುಬಿಟ್ಟಿದ್ದೇವೆ. ಕುಟುಂಬವು ನನ್ನ ನಂತರ ಬರುವಂಥದ್ದು. ಇಡೀ ಭೂಮಿ ಜೀವಂತ ಮನುಷ್ಯನನ್ನು ಸುಡುವ ವಿಲಯಾಗ್ನಿಯಾಗಿ ಪರಿವರ್ತನವಾಗುತ್ತಿದೆ. ಇದೆಲ್ಲದರ ಮಧ್ಯೆ ನಾವೆಲ್ಲರೂ ಯಥಾಪ್ರಕಾರ ಕುಡಿಯುತ್ತ, ಉಣ್ಣುತ್ತ, ಮಲಗುತ್ತ ಎದ್ದು ಉದ್ದುದ್ದ ಮಾತಾಡುವುದು ಯಾವುದೂ ಅಸಹಜವಾಗಿ ಕಾಣುವುದೇ ಇಲ್ಲ ಎಂಬಂತ ಆಕ್ರೋಶದ ಮಾತುಗಳನ್ನಾಡುತ್ತಾರೆ ವೈದೇಹಿ.

ಕರಾವಳಿಯವರಾದ ವೈದೇಹಿ ಮತ್ತು ನಾಗವೇಣಿಯವರಿಗೆ ನದಿ, ದೋಣಿ, ಗಾಳಿ, ಸೂರ್ಯಾಸ್ತ, ಕಾಡು, ಕಡಲು, ಮೀನು ಯಾವುದೂ ಅಪರಿಚಿತವಲ್ಲ. ಎಲ್ಲವೂ ಅವರ ಪರಿಸರದಲ್ಲಿ ಇರುವಂತಹದ್ದೇ. ಆದರೆ ಇವಿಷ್ಟರಿಂದಲೇ ಒಂದು ಕವಿ ಮನಸ್ಸು ಎಷ್ಟು ಚೆನ್ನಾಗಿ ಕಥೆ ಹೆಣೆಯುತ್ತದೆ, ಹಾಡುಕಟ್ಟುತ್ತದೆ. ಎಲ್ಲರು ನೋಡುತ್ತಿರುವುದನ್ನೇ ಕವಿ ತನ್ನ ನುಡಿಗಟ್ಟಿನಲ್ಲಿ ಬೇರೆಯೇ ಭಾವ ಬೆಳಕು ಹಾಯಿಸಿ ತೋರಿಸಲು ಸಾಧ್ಯ. ನೋಡುವ ಅಥವಾ ಕಾಣುವ ಕ್ರಮ ಈ ಇಬ್ಬರೂ ಲೇಖಕಿಯರಿಗೂ ದಕ್ಕಿದ ರೀತಿಯೇ ವಿಶಿಷ್ಟವಾಗಿದೆ.

"ಸೂರ್ಯ ಸದಾ ವೈದೇಹಿಯವರನ್ನ ಕಾಡುತ್ತಿರುತ್ತಾನಂತೆ ಅವರೇ ಹೇಳುವಂತೆ "ಕಡಲತೀರದವಳಾದ ನನಗೆ ಸೂರ್ಯಾಸ್ತ ಒಂದು ಆಪ್ಯಾಯಮಾನ. ಆತ್ಮೀಯ, ಸೂರ್ಯ ಕಡಲ ಮಡಿಲಿಗೆ ಉರುಳಿಕೊಳ್ಳುವುದನ್ನು ಆಗ ರಂಗಿನ ಲಂಗ ತೊಟ್ಟ ತೆರೆಗಳ ಚಿಮ್ಮು ಉಲ್ಲಾಸವನ್ನು ಕಡಲ ಬುಡಕ್ಕೇ ಹೋಗಿ ಕಂಡವಳು. ಆಗೆಲ್ಲ ಸೂರ್ಯ ಒಬ್ಬ ದೇವತೆಯಂತೆ ಕಂಡಿದ್ದ. ಬೇಡಿದರೆ ಮಗುವನ್ನು ಕೊಟ್ಟು ಬಿಡುವ ಪದ್ಮಪ್ರಮೋದ! ಕುಂತಿ ದೇವಿಯ ಕತೆಯನ್ನು ಪಾರ್ತಕ್ಕ ಹೇಳಿದ್ದರು. 'ಅದು ಯಾವ ಮಂತ್ರ? ಎಂದು ಕೇಳಿದ್ದಕ್ಕೆ "ಹೇಳಿ ಕೊಡಲೆ ನಿಂಗೆ?" ಎಂದು ನಗುತ್ತ ಕೇಳಿದ್ದರು. ನಾ ಭಯದಿಂದ ಬೇಡ ಬೇಡ ಎಂದಿದ್ದೆ.[6]

ಸೂರ್ಯನಾಗಲಿ, ಚಂದ್ರನಾಗಲಿ ಮಕ್ಕಳ ಮನಸ್ಸಿನಲ್ಲಿ ಮೊದಲು ಪ್ರವೇಶ ಪಡೆಯುವುದು ರಾಮಾಯಣ, ಮಹಾಭಾರತದ ಕಥೆಗಳ ಮೂಲಕ. ಚಂದ್ರನನ್ನು ತಂದುಕೊಡು ಎಂದು ಹಟ ತೆಗೆಯುವ ಕಂದ ಶ್ರೀರಾಮನದು 'ಕನ್ನಡಿ ಮತ್ತು ಚಂದ್ರ'ನ ಕಥೆಯಾದರೆ, ತನ್ನ ಚಿಕ್ಕಂದಿನಲ್ಲೇ ಸೂರ್ಯನನ್ನು ಹಿಡಿಯಲು ಹೋದ ಅಂಜನಾಪುತ್ರ ಹನುಮಂತನದು ತನ್ನ ಮೂತಿಯನ್ನು 'ಕೋತಿಯಂತೆ' ಊದಿಸಿಕೊಂಡ ಕಥೆ, ಶಿವನ ಆತ್ಮಲಿಂಗವನ್ನು ರಾವಣ ಲಂಕೆಗೆ ತೆಗೆದುಕೊಂಡು ಹೋಗುವಾಗ ವಟುವೇಷದ ಗಣಪತಿ ಆತ್ಮಲಿಂಗವನ್ನು ಭೂಮಿಗೆ ತಾಗಿಸಿದ್ದು ಆ ಕ್ಷೇತ್ರವೇ ಗೋಕರ್ಣ ಕ್ಷೇತ್ರವಾದದ್ದು ಒಂದು ಕಥೆಯೆ.

ಹಾಗೆ ನೋಡಿದರೆ ನಮ್ಮ ಬೆಳಗು ಆರಂಭವಾಗುವುದೇ ಸೂರ್ಯನಮಸ್ಕಾರದಿಂದ. ಅಮ್ಮ ಮತ್ತಿತರ ಮನೆಯ ದೊಡ್ಡವರು ಬೆಳಿಗ್ಗೆ ಹೊಸಲು ಬರೆದು ಹೂವಿಟ್ಟು ಗಿಂಡಿಯಲ್ಲಿನ ನೀರನ್ನು ತುಳಸಿಗಿಡಕ್ಕೆ ಹೊಯ್ದು ಪ್ರದಕ್ಷಿಣೆ ಹಾಕಿ ಅಂಗೈ ಮೇಲೆ ಅಂಗೈಯನ್ನು ವಿರುದ್ಧ ದಿಕ್ಕಿನಲ್ಲಿ ಜೋಡಿಸಿ ಬೆರಳುಗಳನ್ನು ಹೆಣೆದು ಎಡೆಯಿಂದ ಸೂರ್ಯನನ್ನು ನೋಡಿ (ಅವ ಕಾಣದಿದ್ದರೂ ಕಂಡೆವು ಎಂದು ಭಾವಿಸಿ) ಒಳಬಂದಾಗ ಅಮ್ಮನ ಹಿಂದೆಯೆ ಮಕ್ಕಳು, ಅವರು ಮಾಡಿದಂತೆಯೇ ಮಕ್ಕಳು ಮಾಡುವುದು ರೂಢಿ. ಸೂರ್ಯ ಕಾಣದ ದಿನ ಕಂಡಿಲ್ಲವೆಂದು ಮಕ್ಕಳು, ಎಲ್ಲಿ ಹೋಗುತ್ತಾನೆ? ಅಲ್ಲೆ ಮೋಡದಡ್ಡ ಇದ್ದಾನೆ, ಅಡ್ಡಿಯಿಲ್ಲ ನೆನೆದು ಕೈ ಮುಗಿಯಿರಿ ಅವನಿಗೆ ತಲುಪುವುದೆಂದು ದೊಡ್ಡವರು. ಆತ ಅಲ್ಲಿಲ್ಲವಾದರೆ ಬೆಳಗು ಆಗಿದ್ದು ಹೇಗೆ? ಸೂರ್ಯ ಅಲ್ಲೇ ಇರುವುದಕ್ಕೆ ಬೆಳಗಾಗಿರುವುದೇ ಪುರಾವೆ! ಎಂಥ ಗ್ರಹಣಕಾಲದಲ್ಲೂ ಹಿಡಿದ ಕೆಲಸ ಬಿಡದೆ ಅಲ್ಲೇ ಇದ್ದು ಸಂಜೆಯಾಗಿಸುತ್ತಾನೆ ಸೂರ್ಯ.

ಸೂರ್ಯ ಸಾಂಗತ್ಯ ನನ್ನ ಕಾಡುವ ಸೂರ್ಯ, ಪಶ್ಚಿಮದ ಕಿಟಕಿ ಮುಂತಾದ ಅನೇಕ ಲೇಖನಗಳಲ್ಲಿ ಸೂರ್ಯನನ್ನು ಕುರಿತಾಗಿ ವರ್ಣಿಸಿದ್ದಾರೆ. ಕರಾವಳಿಯವರು ಎಂದ ಮೇಲೆ ಕಡಲು, ಸೆಕೆ, ಬೆವರನ್ನು ಬಿಟ್ಟುಕೊಟ್ಟು ಮಾತಾಡುತ್ತಾರೆಯೇ? ಆಕಾಶ ಧಗಧಗ ಉರಿಯುತ್ತಿದ್ದರು ಭೂಮಿ ಕೆಂಡಾಮಂಡಲ ಜ್ವರ ಬಂದಂತಿದ್ದರು ಹೋಗುವುದೆಲ್ಲ, ಬರುವುದೆಲ್ಲ, ನಿಲ್ಲುವುದೆಲ್ಲ,

ಕುಳ್ಳುವುದೆಲ್ಲ ದಿನಗಳು ಬಿಸಿಬಾಣಲೆಯಲ್ಲಿ ಚಟಚಟನೆ ಮಗ್ಗುಲು ಬದಲಿಸಿ ನರಳಿ ಹೋದರು. ಬೆವರಿಳಿಯದ ಸೆಕೆಯಿರುವ ಊರಲ್ಲಿ ಕಡೆಗೆ ನೆಲದ ಮೇಲೊಂದು ದಿಂಬು ಎಸೆದುಕೊಂಡು ಮಲಗಲೂ ಸಾಧ್ಯವಿಲ್ಲ. ಮುಟ್ಟಿದ್ದೆಲ್ಲ ಬಿಸಿಯೇ ನಮಗೆ ಬೇಡಪ್ಪಾ, ಈ ಸೆಕೆಯೇ ಅಡ್ಡಿಲ್ಲ ಎನ್ನುತ್ತಾರೆ ಕರಾವಳಿಯವರು. ಸಾಲದ್ದಕ್ಕೆ ಇಲ್ಲಿನ ನೆಲ ತಣ್ಣಗಿರುತ್ತದೆ. ಹಾಸಿಗೆ ಹೊದಿಕೆಗಳು ಗಾಳಿಯೂ ತೀರಾ ಬಿಸಿಯಾಗೇನೂ ಇರುವುದಿಲ್ಲ. ಅಂತ ಮಾತು ಬೇರೆ ಸೇರಿಸುತ್ತಾರೆ. ಎಷ್ಟೆಂದರು ಸ್ವಲ್ಪ ಹುಳಿಜಾಸ್ತಿ ಅಂದ ಮೇಲೆ ಆ ಸೆಕೆಯನ್ನು ಬಿಟ್ಟುಕೊಡುವುದುಂಟೆ.

"ನಮ್ಮೂರ ಬೇಸಗೆಯನ್ನಂತೂ ಎಲ್ಲರೂ ಬೈಯುವವರೇ ಯಾಕೆಂದರೆ ಇಲ್ಲಿನ ಸೆಕೆಯೆಂದರೆ ಬೆವರು ನೀರು. ಬೆವರು ದೇಹವನ್ನು ತಂಪಾಗಿಸುವ ನೈಸರ್ಗಿಕ ವಿಧಾನ. ಆದರೆ ಅದಕ್ಕೆ ಹೊರ ಜನರು ಹೆದರುತ್ತಾರೆ. ಬೆವರದ ಸೆಕೆ, ಸೆಕೆಯೇ? ಅಲ್ಲ, ಅದು ಬೇಗೆ. ಬೆವರನ್ನು ಬೈಯದಿರಿ, ಜೋರುಸೆಕೆ, ಮಿಂದಂತಹ ಬೆವರು ಆಗ ಮಂದಗಾಳಿಯೊಂದು ಕಡಲ ಕಡೆಯಿಂದ ಮಾವಿನ ತಳಿರ ನಡುವಿಂದ ಹೀಗೆ ಬಂದು ಹಾಗೇ ಹಾಸಿ ಹೋಗಲಿ! ಆಹಾ! ಸ್ವರ್ಗವೆಂದರೇ ಅದೇ! ಅನುಭವಿಸಲು ಕರಾವಳಿಗೆ ಬನ್ನಿ".[2] ಬೇಸಿಗೆ, ಸೆಕೆ, ಬೆವರು ಯಾವುದನ್ನು ಜರಿಯದೆ ಕರಾವಳಿಯ ಆ ಪರಿಸರವನ್ನೆ ಬೇಕು ಎಂದು ಬಯಸುವ ಲೇಖಕಿ ಕರಾವಳಿಯ ಬೇಸಿಗೆಯನ್ನು ಮನದಣಿಯೇ ವರ್ಣಿಸುತ್ತಾರೆ. ಬೇಸಿಗೆಯ ಅಂಗಳಕ್ಕೆ ಧೂಳು ನಿವಾರಣೆಗಾಗಿ ಸೆಗಣಿ ಗುಡಿಸಬೇಕು. ಸೆಗಣಿ ಗುಡಿಸಿದ ನೆಲ ಮನೆಯೊಳಗೆ ತಂಪು ತರುತ್ತದೆ. ಗುಡಿಸಿದ ದಿನವಂತೂ ತಂಪೋ ತಂಪು. ಪ್ರತಿ ಬೇಸಿಗೆಯಲ್ಲಿ ಮನೆ ಅಂಗಳವನ್ನು ಒರೆದು ವೈನ ಮಾಡುವುದು, ವಿಶೇಷದ ದಿನಗಳಲ್ಲಿ ಚಪ್ಪರ ಹಾಕುವುದು, ವಿಶೇಷವೇನೂ ಇಲ್ಲದಿದ್ದರೂ ಚಪ್ಪರ ಹಾಕುವುದು, ಅಲ್ಲಿ ಮೇಜು, ಕುರ್ಚಿ, ಬೆಂಚು ಇಡುವುದು, ಮೇಜಿನ ಮೇಲೆ ಓಲೆ, ಬೀಸಣಿಗೆ, ಎಲೆಯಡಿಕೆ ಹರಿವಾಣ ಇಟ್ಟು ಹಗಲು ಸವೆಸಬೇಕು. 'ಸಂಜೆಯಾಗುತ್ತದೆ, ಕಡಲಗಾಳಿ ಬೀಸುತ್ತದೆ. ಉರಿಯ ಸೂರ್ಯ ಉರಿದುರಿದು ಕೊನೆಗೆ ತಾನೆ ಆ ಉರಿ ತಾಳಲಾರದೆ ಸಮುದ್ರಕ್ಕೆ ಹಾರಿಕೊಳ್ಳುತ್ತಾನೆ. ಕತ್ತಲೇರಿದ್ದರೂ ಕಾವುತಣಿಯುವುದಿಲ್ಲ. ಬಾಗಿಲು ತೆರೆದು ಮಲಗಿದರೂ ಸೆಕೆ, ಬೆವರು, ಗಾಳಿಯಿಲ್ಲ ಮರಗಿಡಗಳೂ ಉಸಿರುಕಟ್ಟಿದಂತಿರುತ್ತವೆ. 'ಅಬ್ಬಾ ಹೋದವರ್ಷ ಇಷ್ಟು ಸೆಕೆಯಿರಲಿಲ್ಲ'- ಎಂದು ತಪ್ಪದೆ ಪ್ರತಿವರ್ಷವೂ ಹೇಳುತ್ತ ಗಾಳಿಗೆ ಕಾಯುತ್ತ ಬೇಸಿಗೆ ಕಳೆಯಬೇಕು.

ಏನಂದರೂ ಬೇಸಿಗೆಯೂ ಬೇಕು ಏಕೆಂದರೆ ಬೇಸಿಗೆ ವ್ಯವಹಾರದ ಕಾಲ, ಸಂಗ್ರಹದ ಕಾಲ, ಒಣಗಿಸುವ ಕಾಲ, ಹಪ್ಪಳ ಸಂಡಿಗೆ ಉಪ್ಪಿನಕಾಯಿಯ ಕಾಲ. ಸೋರುವ ಗುಡಿಸಲು ಇರುವವರಿಗಂತೂ ಬೇಸಿಗೆಯೇ ನೆಮ್ಮದಿ. ನೋಡ ನೋಡುತ್ತಿದ್ದಂತೆ ಸೆಕೆಯೊಂದಿಗಿನ ಬದುಕು ಎಷ್ಟೊಂದು ಬದಲಾಗಿದೆ. ಚಪ್ಪರ ಕಟ್ಟುವ ಭದ್ರನಿಲ್ಲ, ಸೆಗಣಿ ಇಲ್ಲ, ಸೆಗಣಿ ಗುಡಿಸಲು

ಅಂಗಳವಿಲ್ಲ, ಕೊಟ್ಟಿಗೆಗಳಿಲ್ಲ, ಸೌದೆಗಾಡಿ, ಹುಲ್ಲುಗಾಡಿಗಳಿಲ್ಲ. ಬದಲಾಗಿ ಮದುವೆಗೆ ಕಲ್ಯಾಣ ಮಂಟಪಗಳು, ಹಾಲಿಗೆ ಡೈರಿಗಳು ಕಾಣಸಿಗುತ್ತವೆ. ಗೃಹಕೈಗಾರಿಕೆಯಾಗಿ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಉದ್ದಿಮೆಗಳು ತಲೆಯೆತ್ತಿವೆ. ಚಳಿಯೆಂದಾಗ ಅದನ್ನು ಓಡಿಸುವವನ ಸೋಗು ಹಾಕಿಕೊಂಡು ಬಹಳ ಮೆಲ್ಲಗೆ ಮತ್ತು ಬೆಚ್ಚಗೆ ಬಂದ ಬೇಸಿಗೆ ಅದೆಷ್ಟು ಬೇಗ ಭೂಮಿಯನ್ನು ಕಂಗೆಡಿಸಿ ತನ್ನ ಸಾಮ್ರಾಜ್ಯ ಸ್ಥಾಪಿಸುತ್ತದೆ. ಮಳೆಗಾಲದಲ್ಲಿ ಇದೇ ಸಮುದ್ರ ಒಳ್ಳೆ ಪೆಡಂಭೂತದಂತೆ ಗಾಳಿ ಮಳೆಯ ಜೊತೆ ಸೇರಿ ತನ್ನನ್ನೆ ಕೆರಳಿಸಿಕೊಂಡು ಯಾವ ಕ್ಷಣದಲ್ಲಿ ಊರನ್ನು ಗೋರಿ ಮಾಡುವುದೋ ಎಂಬಂತೆ ತೀರ ಮೀರಿ ಬರಲು ಹವಣಿಸುತ್ತ ಕ್ರುದ್ಧ ಸಮುದ್ರವಾಗಿ ಮಾರ್ಪಟ್ಟಿದ್ದು ಬೇಸಿಗೆಯಲ್ಲಿ ಎಷ್ಟು ಶಾಂತವಾಗಿ ಎಲ್ಲರೊಡನೆ ಬೆರೆತು, ರಜೆಯಲ್ಲಿ ದೂರದೂರಿನಿಂದ ಯಾರೆ ಮಂದಿ ಬಂದರೂ ಕುಣಿಸಿ ಕಳಿಸುವ ಹರ್ಷಾತಿರೇಕದಿಂದ ಆರ್ಭಟಿಸಿ ಪುಳಕಗೊಳಿಸುವುದು ಇದೇ ಸಮುದ್ರ.

"ಸುತ್ತ ತಂಪು ಮರಗಳಿದ್ದರೆ, ಬಿಸಿಲಹೊತ್ತಿನಲ್ಲಿಯೂ ಅದೂ ನದೀ ತೀರದಲ್ಲಿ ಕಾಯುವುದು ಕಷ್ಟವಲ್ಲ. ಕರೆಗಾಳಿ ಮೂಡಿನಿಂದ ಬೀಸುತ್ತಿರುತ್ತದೆ; ಕಡಲಿಗೆ ಸೆಕೆಯಾಯಿತೋ ತಾನು ಬೀಸಣಿಕೆ ಬೀಸುತ್ತಿದ್ದೇನೋ ಎಂಬಂತೆ ಕಡಲಗಾಳಿ ಮತ್ತು ಕರೆಗಾಳಿಗಳ ಸಂವಾದ– ಅದು ಎಲ್ಲರಿಗಿಂತ ಚೆನ್ನಾಗಿ ಬೆಸ್ತರಿಗೆ ಗೊತ್ತು. ಬೆಸ್ತರ ಗಾಂಭೀರ್ಯ ಕಂಡಾಗೆಲ್ಲ ಅವರು ಅದನ್ನು ಆಲಿಸುತ್ತಿರುವರೋ ಅಂತನಿಸುತ್ತದೆ. ... ಸಾಲು ಸಾಲು ಡಿಂಗಿಗಳು ನೀರನ್ನು ಶಾಂತ ನೀರನ್ನು, ಅಶಾಂತಗೊಳಿಸುತ್ತ ಮರಳು ಸಾಗಿಸುವ, ಹಂಚು ಸಾಗಿಸುವ, ಜನರ ಸಾಗಿಸುವ, ಮನುಷ್ಯ ಸಂಚಾರವನ್ನು ಒಂದೆಡೆಯಿಂದ ಕಿತ್ತು ಬೇರೆಲ್ಲಿಗೋ ಸಾಗಿಸುವ ನಾನಾ ಡಿಂಗಿಗಳು ಈ ಕಾಲದಲ್ಲಿಯೂ ಜಲಮಾರ್ಗ ಎಷ್ಟು ಜೀವಂತವಿದೆ ಇದೆ!"[೮]

ನೀರಿನಲ್ಲಿ ಪಾದವನ್ನು ಇಳಿಬಿಟ್ಟು ಕುಳಿತುಕೊಂಡರೆ ಅಲೆಗಳು ಅಲೆಅಲೆಯಾಗಿ ಬಂದು ತಟ್ಟುತ್ತವೆ. ಆಗ ಯಾರೋ ಪಾದವನ್ನು ಮೆಲ್ಲನೆ ಸವರಿದಂತಾಗಿ ಕಚುಗುಳಿ ಇಟ್ಟಂಥ ಅನುಭವವಾಗುತ್ತದೆ. ಕರೆಗೆ ಉತ್ತರದಂತೆ ಕಡಲಗಾಳಿ ಬೀಸುತ್ತಿರುವಾಗ ಅಂಬಿಗನ ಹಂಗೇ ಇಲ್ಲದೇ ದೋಣಿ ಚಲಿಸುತ್ತದೆ. ನೀರವ ನೀರ ಹಾಳೆ ಮತ್ತೆ ಹೊಳೆಯಾಗಿ ಹರಿದು, ಸುತ್ತ ಸರ್ವತ್ರ ಸಮಸ್ತವೂ ಯಾವುದೋ ಮಾಯದಲ್ಲಿ ಮತ್ತೆ ಕಾವ್ಯವಾಗಿ ಪಲ್ಲಟಗೊಂಡಂತೆನಿಸುತ್ತದೆ. ಅದಕ್ಕೆ ಸಂವಾದಿಯಾಗಿ ದೋಣಿಗೀತವೊಂದು ಕಂಠದಿಂದ ಗಟ್ಟಿಯಾಗಿ ಹೊಮ್ಮುವಂತೆ ಅದನ್ನ ಆಲಿಸುತ್ತಾ ದೋಣಿ ಸಾಗುತ್ತಿರುವಂತೆನಿಸುತ್ತದೆ. ಅನುಕೂಲಕರ ಗಾಳಿ ಬೀಸುತ್ತದೆ. ಸೂರ್ಯ ತಂಪಾಗುತ್ತಾನೆ, ಸುತ್ತೆಲ್ಲ ಕಾವ್ಯ ಚೆಲ್ಲಿ ಕಂಠವೂ ಬಿಡಿಸಿ ಸ್ವರ ಹೊರಟಾಗ ದಾರಿ ಸ್ವರ್ಗದಲ್ಲಿ ಸಾಗುತ್ತಿರುವಂತ ಅನುಭವಗಳನ್ನು ವೈದೇಹಿ ಮೆಲುಕುಹಾಕುತ್ತಾರೆ.

ಈ ವಿಚಾರದಲ್ಲಿ ನಾಗವೇಣಿಯವರ ಅನುಭವಗಳು ಬೇರೆ. ನಾಗವೇಣಿಯವರು ತಮ್ಮ ಅಮ್ಮನ ಸೊಂಟವೇರಿ ಆ ದೇಹಕ್ಕೊಂದು ಒಡವೆಯೇನೋ ಎಂಬಂತೆ ಬಿಂಕದಿಂದ ಕುಡಾಲದ ಪೇಟೆಗೆ ಹೋಗಿ ಬಂದದ್ದು ಹಲವು ಬಾರಿ. ತಮ್ಮೂರಿಗೆ ಪಣಂಬೂರು ಬಂದರು ಯೋಜನೆ ದೆಹಲಿಯಿಂದ ಹಾರಿಬಂದು ಕಾಮಗಾರಿ ಆರಂಭಿಸುವಷ್ಟರಲ್ಲಿ ಅವರಿಷ್ಟದ 'ಕುಡಾಲದ ಪೇಟೆ'ಯ ಹೆಸರು ಸಂಪೂರ್ಣ ಅಳಿದು ಹೋಗಿ ಮಂಗಳೂರು ಪೇಟೆ ಎಂಬ ಹೆಸರು ನೆಲೆಗೊಂಡಿತು. "ಬಡಗುದಿಕ್ಕಿನಿಂದ ಫಲ್ಗುಣಿ ನದಿ, ತೆಂಕು ದಿಕ್ಕಿನಿಂದ ನೇತ್ರಾವತಿ ನದಿ ಹಳ್ಳಿಗಳನ್ನು ಸುತ್ತುವರಿದು ಬಂದು ಕಡಲನ್ನು ಕೂಡುವಲ್ಲಿ ಅಥವಾ ನದಿ ಮುಖಜ ಭೂಮಿಯ ಮೇಲೆ ಎದ್ದು ಕೂತ ಆ ಪೇಟೆಗೆ ತುಳುವ ಮಂದಿ ಕಟ್ಟಿದ ಹೆಸರು ತೂಡುವಲ್ಲಿನ ಪೇಟೆ, ಕುಡಾಲದ ಪೇಟೆ. ಆ ಊರು ಬೆಳೆಯುತ್ತಾ ಕೈಗಾರೀಕರಣವೆಂಬ ಮಾರುತ, ಆಧುನಿಕ ಎಂಬ ಮಂತ್ರದೊಂದಿಗೆ ಬೀಸಿ ಬರುತ್ತಿದ್ದಂತೆ ಹಳೆಯ ಕುಡಾಲದ ಪೇಟೆ 'ಮಂಗಳೂರು ಪೇಟೆ'ಯಾಯಿತು. ತಮ್ಮ ಅಮ್ಮ ಮತ್ತು ಆಕೆಯ ಕುಟುಂಬದ ಬಳ್ಳಿಗಳೊಳಗೆ ಮಾತ್ರ ಈ ಪೇಟೆ 'ಕುಡ್ಲದ ಪೇಂಟೆ' ಎಂದೇ ಉಳಿದುಕೊಂಡು ಬಿಟ್ಟದನ್ನ ನೆನಪಿಸಿಕೊಳ್ಳುತ್ತಾರೆ. ಎರಡು ಕಡೆಯಿಂದಲೂ ಸುತ್ತಿ ಬರುವ ನೇತ್ರಾವತಿ, ಫಲ್ಗುಣಿ ನದಿ ಸೆರಗುಗಳಲ್ಲಿ ಬಂದು ನಿಂತರೆ ಅದರ ಒಡಲಲ್ಲಿ ಅದೆಷ್ಟೋ ದೋಣಿಗಳು! ಅಕ್ಕಿ ಸಾಗಿಸುವ, ಬೈಹುಲ್ಲು ಸಾಗಿಸುವ, ಆವೆಮಣ್ಣು ಸಾಗಿಸುವ, ಕಟ್ಟಿಗೆ ತೆಂಗಿನಕ್ಕಾ... ಹೀಗೆ ಏನೇನೋ ಸಾಗಿಸುವ ದೋಣಿಗಳು! ಆ ದೋಣಿಗಳ ಮಧ್ಯೆ ಮತ್ತು ಕೆಲವು ದೋಣಿಗಳು, ಕೆಲವು ಪ್ರಯಾಣಿಕರನ್ನು ಸಾಗಿಸುವ ದೋಣಿಗಳು, ಇನ್ನು ಕೆಲವು ಮೀನಿಗೆ ಬಲೆ ಬೀಸುವ ದೋಣಿಗಳು.

ಹಿಂದೆಲ್ಲ ಹೀಗೇಯೇ ಒಂದೂರಿನಿಂದ ಮತ್ತೊಂದುರಿಗೆ ಹೋಗಲು ಮೋಟಾರು ವಾಹನಗಳಿರಲಿಲ್ಲ ಹಾಗೂ ನದಿಗಳಿಗೆ ಸೇತುವೆಗಳಿಲ್ಲದ್ದರಿಂದ ಇಂತಹ ದೋಣಿಗಳಲ್ಲೇ ಪ್ರಯಾಣ ಬೆಳಸಬೇಕಿತ್ತು. ಹತ್ತು ಮೈಲು ದೂರ ಪ್ರಯಾಣ ಬೆಳೆಸಬೇಕಾದರೆ ಏಳೆಂಟು ತಾಸು ಬೇಕಾಗುತ್ತಿತ್ತು. ಎತ್ತಿನಗಾಡಿಯಲ್ಲಿ ಕೂತು ಹೊರಟರೆ ದಾರಿಯಿಡೀ ಸಿಗುವ ತೋಡು-ನದಿಯ ಕೈಗಳನ್ನು ದಾಟುವುದು ಸ್ವಲ್ಪ ತ್ರಾಸದ ಕೆಲಸವೇ ಆಗಿತ್ತು.

ಆಗ ಆ ಪ್ರದೇಶಗಳಲ್ಲಿ ದೋಣಿಗಳು ಸಾಗುತ್ತಿರುವಾಗ ಆ ನದಿಯ ಒಡಲಿಂದ ನದಿಸೆರಗತ್ತ ದೂರಕ್ಕೆ ಎಡಬಲಕ್ಕೆ ಕಣ್ಣು ಹಾಯಿಸಿದರೆ ಮತ್ತೊಂದು ಅಚ್ಚರಿಯ ನೋಟ ಕಾದಿರುತ್ತಿತ್ತು. ಅದು ಹೊಗೆ ಬಿಡುವ ಕಾರ್ಖಾನೆಗಳ ಕಾರುಬಾರು. ಹಂಚಿನ ಕಾರ್ಖಾನೆ, ಗೇರುಬೀಜದ ಕಾರ್ಖಾನೆ, ಕಾಫಿ ಬೀಜದ ಕಾರ್ಖಾನೆ ಅವೆಲ್ಲವನ್ನು ಅಲ್ಲಿನವರಿಗಾಗಿ ಪರಂಗಿದೊರೆಗಳು ಮಾಡಿಟ್ಟು ಹೋಗಿದ್ದಂತೆ. ಅದುವರೆಗೂ ಕೇವಲ ಸಾಗುವಳಿ, ಮೀನುಗಾರಿಕೆ,

ಜಾತಿ ಸಂಬಂಧ ವೃತ್ತಿ ಕೆಲಸಗಳನ್ನಷ್ಟೇ ನಂಬಿಕೊಂಡಿದ್ದ ಆ ಊರಿಗರಿಗೆ ಈ ಕಾರ್ಖಾನೆಗಳು ಒಂದು ಹೊಸದಾದ ಅನ್ನದ ದಾರಿಯನ್ನು ತೋರಿಸಿದ್ದರಿಂದ ಹಳ್ಳಿಗಳಿಂದ ಪೇಟೆಗೆ ವಲಸೆ ಹೊರಡುವವರ ಸಂಖ್ಯೆ ಹೆಚ್ಚಾಯಿತು.

ನಾಗವೇಣಿಯವರು ಕಡಲ ಸೆರಗಲ್ಲಿ ಕಂಡ ಬದುಕು ಅಮ್ಮನ ಮಡಿಲಷ್ಟೇ ಪ್ರೀತಿಕೊಟ್ಟಂಥದ್ದು. ಎದ್ದರೂ ಕಡಲ ತಡಿ ಬಿದ್ದರೂ ಕಡಲ ತಡಿ. ಅಮ್ಮನ ಮಡಿಲಲ್ಲಿ ಮಲಗಿ ಆ ಕತ್ತಲ ನೀರುವ ಮೌನದಲ್ಲಿ ಕಡಲ ಮೊರೆತವನ್ನು ಕಿವಿ ನಿಮಿರಿಸಿ ಆಲಿಸುತ್ತಿದ್ದಾಗ ಅಮ್ಮ ಹೇಳುವುದಿತ್ತು. 'ಕಡಲಮ್ಮ ತನ್ನೊಡಲಲ್ಲಿರುವ ಮಕ್ಕಳನ್ನೆಲ್ಲ ಮಲಗಿಸುವುದಕ್ಕೆ ಜೋಗುಳ ಹಾಡುತ್ತಿದ್ದಾಳೆ ಎಂದು. ಮುಂಜಾನೆದ್ದರೆ ಕೇಳುತ್ತಿದ್ದದ್ದು ಮತ್ತೆ ಅದೆ ಕಡಲದಡದ ಕಲರವ. ರಂಪಣಿ ಇಳಿಸುವ, ಮಾರಿಬಲೆ ಬೀಸುವ ಬೆಸ್ತರ ದುಡಿಮೆಯ ಸಡಗರವದು. ರಂಪಣಿ ಇಳಿಸಲು ಕಡಲಿಗಿಳಿಯುವ ಬೆಸ್ತರ ಮಂದಿಯನ್ನು ನೋಡುವುದೇ ಒಂದು ಚಂದ. ಕಡಲಮ್ಮನ ಸೀರೆ ಎಳೆಯಲು ಯಾರೋ ಪುಂಡರು ಬಂದಿದ್ದಾರೆ. ಆ ಪುಂಡರನ್ನು ಸದೆಬಡಿಯಲು ದಂಡು ಹಿಡಿದು ಹೊರಟ ವೀರರಂತೆ ಆ ಮೊಗವೀರರು ಕಾಣಿಸುತ್ತಾರೆ. **"ನಡುಬಿಸಿಲ ಧಗೆಗೆ, ಕಡಲಲ್ಲಿ ಪಡವಿಗೆ ಹುಟ್ಟು ಹಾಕುತ್ತಾ ಮೈಲುದ್ದದ ರಂಪಣಿ ಬಲೆಯನ್ನು ಇಳಿಸುವುದೇ ಒಂದು ಸಾಹಸದ ಕೆಲಸ. ದೇವರು ನಡುನೆತ್ತಿಗೆ ಬರುವಷ್ಟರಲ್ಲಿ ಬಲೆ ಹರಡಿಸಿ ತಂಡದವರೆಲ್ಲ ಕಡಲಿಂದ ಮೇಲೇರಿ ಬಂದು ಬಲೆ ಎಳೆಯುತ್ತಿರುವುದನ್ನು ನೋಡುವುದೇ ಒಂದು ಚೆಂದ. ಕಟೀಲು ಮೇಳದ ಸಮುದ್ರ ಮಂಥನದ ದೃಶ್ಯವೇ ಕಣ್ಣೆದುರು ಕುಣಿದಂತಾಗುತ್ತದೆ. ಕಡಲದಂಡೆಯಲ್ಲಿ ಮೈಲು ದೂರದ ಅಂತರದಲ್ಲಿ ತೆಂಕ್ಲಾಗೆ-ಬಡ್ಲಾಗೆ (ದಕ್ಷಿಣ-ಉತ್ತರ) ದಿಕ್ಕಲ್ಲಿ ನಿಂತು ಬಲೆಯ ಒಂದು ತುದಿಯನ್ನು ಒಂದೈವತ್ತು ಮಂದಿ ಎಳೆದರೆ ಮತ್ತೊಂದು ತುದಿಯನ್ನು ಮತ್ತೊಂದೈವತ್ತು ಮಂದಿ ಎಳೆಯುತ್ತಾ ಕಡಲ ಮಧ್ಯದಿಂದ ರಾಶಿರಾಶಿ ಮೀನುಗಳನ್ನು ಬಾಚುವುದನ್ನು ನೋಡುವುದೇ ಒಂದು ಸೋಜಿಗದ ದೃಶ್ಯ".**[6]

ಬೆಸ್ತರ ರಂಪಣಿ ಎಳೆಯುವ ಸಂಭ್ರಮ ಕೂಗು ಇಡೀ ಕಡಲ ಕೇರಿಗೆ ಮಾತ್ರವಲ್ಲ ಮೈಲುದೂರದ ರಾಜಬೀದಿವರೆಗೂ ಕೇಳಿಸುತ್ತದೆ. 'ಓ... ಮೇಲೆ ಐಸ್ಸ' ಎನ್ನುತ್ತ ರಂಪಣಿ ಬಲೆಯನ್ನೆಳೆದು ಕಡಲ ದಂಡೆಯಲ್ಲಿ ಮೀನ ರಾಶಿಯನ್ನು ಸುರಿದರೆ ಅದೊಂದು ಬೆಳ್ಳಿಬೆಟ್ಟ! ನಮ್ಮಲ್ಲಿರುವ ಜಾತಿ ವರ್ಗಗಳಂತೆ ಮೀನುಗಳಲ್ಲೂ ಎಷ್ಟೊಂದು ಜಾತಿಯ ಮೀನುಗಳಿವೆ. ಲೇಖಕಿ ತಾವು ಬಾಲ್ಯದಲ್ಲಿ ಕಂಡಿದ್ದ ತಮ್ಮ ಪ್ರೀತಿಯ ಕಡಲು ಈಗ ಮಲಿನಗೊಂಡದ್ದಕ್ಕೆ ಬೇಸರ ವ್ಯಕ್ತಪಡಿಸುತ್ತಾರೆ. ಅಂದು ರಂಪಣಿಯಂತಹ ಮೈಲುಗಟ್ಟಲೆ ಉದ್ದದ ಬಲೆಗಳನ್ನು ಬಾಚಿ ಬಾಚಿ ಎಳೆದು ತಂದಂತೆ ಇಂದೇನಾದರೂ ರಂಪಣಿ ಇಳಿಸಿ ಮೀನು ಬಾಚ ಹೋದರೆ ಬರೀ ಬಲೆಯನ್ನಷ್ಟೆ ಹಿಂದಕ್ಕೆ ಎಳೆದುಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ. ಅಂದಿನ ಸಾಂಪ್ರದಾಯಿಕ

ಮೀನುಗಾರಿಕೆಯಲ್ಲಿ ಮೀನುಗಳ ಯೋಗಕ್ಷೇಮ, ಅವುಗಳ ಹುಟ್ಟು ಬೆಳವಣಿಗೆಯ ಬಗ್ಗೆ ಸ್ವತಃ ಬೆಸ್ತರಿಗೆ ತಿಳುವಳಿಕೆ ಕಾಳಜಿಯಿತ್ತು. ಮೀನುಗಳ ಉಳಿಯುವಿಕೆಯಲ್ಲಿ ತಮ್ಮ ಬದುಕಿನ ಉಳಿಯುವಿಕೆಯ ಸತ್ಯವಡಗಿದೆ ಎಂಬ ಸತ್ಯದ ಅರಿವು ಬೆಸ್ತರಿಗಿತ್ತು. ಯಾವ ಮೀನು ಯಾವ ಕಾಲಕ್ಕೆ ಸಂತಾನಾಭಿವೃದ್ಧಿ ಮಾಡಿಕೊಳ್ಳುತ್ತದೆ, ಯಾವ ಕಾಲದಲ್ಲಿ ಯಾವ ಋತುವಿಗೆ ಯಾವ ರೀತಿಯ ಬಲೆ ಬೀಸಬೇಕು... ಎಷ್ಟು ಆಳದಲ್ಲಿ... ಎಷ್ಟು ದೂರದಲ್ಲಿ ಮೀನುಗಾರಿಕೆ ಮಾಡಬಹುದು ಎಂಬ ಜ್ಞಾನ ಅವರಿಗಿತ್ತು. ದುರಾಸೆಯ ಮನಸ್ಸುಗಳಿಗೆ ಬಲಿಯಾಗಿ ಕಡಲಿನ ಮತ್ಸ್ಯ ಸಂಪತ್ತು ಲೂಟಿಯಾಗುತ್ತಿದೆ. ಹಲವು ಜಾತಿಯ ಮೀನುಗಳು ಈಗ ಕಾಣಿಸುತ್ತಿಲ್ಲ ಎಂಬ ವಿಷಾದ ನಾಗವೇಣಿಯವರಿಗಿದೆ.

ಇದು ನಾಗವೇಣಿಯವರ ಪ್ರಪಂಚವಾದರೆ ವೈದೇಹಿಯವರ ಮೀನು ಪ್ರಪಂಚವೇ ಬೇರೆ. ನಾಗವೇಣಿಯವರು ಕಡಲದಂಡೆಯಲ್ಲಿ ತೀರ ಹತ್ತಿರದಿಂದ ಬೆಸ್ತರು, ಅವರೊಡಗಿನ ಒಡನಾಟ, ವಿವಿಧ ಜಾತಿಯ ಮೀನುಗಳನ್ನು ಕಂಡುಂಡವರು. ಆದರೆ ವೈದೇಹಿ ಮೀನ ಒಡನಾಟವನ್ನು ದೂರದಿಂದ ಗ್ರಹಿಸಿದವರು.

ಸಾಮಾನ್ಯವಾಗಿ ವೈದೇಹಿಯವರ ಕೃತಿಗಳಲ್ಲಿ ಬರುವ ಪಾತ್ರಗಳು ಕುಟುಂಬದ ಚೌಕಟ್ಟಿನೊಳಗೆ, ಮನೆಯೊಳಗೆ ಸೃಷ್ಟಿಗೊಂಡ ಪಾತ್ರಗಳು, ಆ ಪಾತ್ರಗಳು ಮೊಗವೀರ ಅಥವಾ ಬೆಸ್ತರ ಕುಟುಂಬಕ್ಕೆ ಸೇರಿದವುಗಳಾಗಿದ್ದರೆ ಅವುಗಳನ್ನ ಕಡಲಿನ ದಂಡೆಗೆ ಎಳೆದು ತರಬಹುದಾಗಿತ್ತು. ಆದರೆ ವೈದೇಹಿ ಕಥೆಗಳಲ್ಲಿ ಬರುವ ಪಾತ್ರಗಳು ಸಂಪ್ರದಾಯಸ್ಥ ಕುಟುಂಬದ ಚೌಕಟ್ಟಿನಲ್ಲಿ ಬೆಳೆದು ಬಂದಥವು. 'ಸೌಗಂಧಿ' ಮನೆ ಬಿಟ್ಟೇ ಹೋಗಲ್ಲ ಅಂದ ಮೇಲೆ ಕಡಲು ಹೇಗೆ ಬರುತ್ತೆ? ಕಡಲಿನ ವರ್ಣನೆಯನ್ನಾದರು ಲೇಖಕಿ ಹೇಗೆ ಮಾಡುತ್ತಾರೆ.

ಮೀನುಗಳ ಬಗ್ಗೆ ಬಾಲ್ಯದಲ್ಲಿ ಅವರಿಗಿದ್ದ ಕುತೂಹಲಗಳು ನೂರಾರು. ಮೀನುಗಳು ಮಾತಾಡಿದ್ದಾಗಲೀ, ಚೀರಿದ್ದಾಗಲೀ, ಅತ್ತದ್ದಾಗಲೀ, ಜಗಳಾಡಿದ್ದಾಗಲೀ ಕೇಳಿದ್ದೇ ಇಲ್ಲವಲ್ಲ! ಅವು ಗಾಳದೊಳಗೆ ಬೀಳುವಾಗಲೂ, ಬಿದ್ದಮೇಲೂ ಕಮಕ್ ಕಿಮಕ್ ಅನ್ನುವುದಿಲ್ಲವಲ್ಲ! ಗಾಳದಲ್ಲಿ ಬಿದ್ದು ನೀರಿನಿಂದ ಹೊರಡುವಾಗ ಪಾಪ ಎಷ್ಟು ಅಳುತ್ತವೆಯೋ ಏನೋ. ಅವುಗಳ ಅಪ್ಪ ಅಮ್ಮ ಎಷ್ಟು ಅಳುತ್ತಾರೋ ಏನೋ. ಮೀನು ಪೇಟೆಯಿಂದ ಹಿಂದಿರುಗುವವರ ಕೈಯಲ್ಲಿ ನೇತಾಡಿಕೊಂಡಿರುವ ಮೀನುಗಳು ಮಿಟುಕದ ಕಣ್ಣುಗಳಿಂದ ಆಕಾಶ ನೋಡುತ್ತಿವೆಯೇನೋ. ಪಳಪಳ ಮಿನುಗುವ ಮೀನುಗಳನ್ನು ಕಂಡಾಂಗಂತೂ ಅವುಗಳನ್ನ ಕೊಯ್ದು ಹೇಗೆ ಮಾಡುತ್ತಾರೆ, ಆ ಪದಾರ್ಥದ ರುಚಿ ಹೇಗಿರುತ್ತದೆ? ಒಮ್ಮೆ ಮೀನಿನ ಪೇಟೆಗೆ ಹೋಗಿ ಬರಬೇಕು,

ಒಟ್ಟಾರೆ ಪುಟ್ಟ ಕಣ್ಣುಗಳೆದುರು ನಿಗೂಢವಾಗಿದ್ದ ಮೀನುಗಳ ಬಗ್ಗೆ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿದ್ದವು. ಆಗೆಲ್ಲ ಮನೆಕೆಲಸದ ಹೆಂಗಸು ಚಿಕ್ಕಳನ್ನು 'ಚಿಕ್ಕ, ಈಗಲೂ ಮೀನು ಕೊಯ್ದರೆ ಅದರ ಹೊಟ್ಟೆಯೊಳಗೆ ಏನಾದರೂ ಸಿಗುತ್ತದಾ?' ಎಂದು ಕೇಳುತ್ತಿದ್ದರಂತೆ. ಈ ಬಗೆಯ ಆಲೋಚನೆಗಳು ಮಗುವಿನ ಮುಗ್ಧ ಮನಸ್ಸೊಂದರಲ್ಲಿ ಇರಬಹುದಾದ ನೂರಾರು ಕುತೂಹಲದ ಸರಣಿಯ ಪ್ರಶ್ನೆಗಳನ್ನು ಎತ್ತುವ ಮೂಲಕ ವಾಸ್ತವವನ್ನು ಗ್ರಹಿಸುತ್ತಾ ವಿಕಾಸದ ಪಥದಲ್ಲಿ ಸಾಗುವುದನ್ನು ಗ್ರಹಿಸಬಹುದು. **"ಮೀನಿನ ಬುಟ್ಟಿ ಹೊತ್ತು ಕೈಯಲ್ಲಿ ಬೆತ್ತ ಹಿಡಿದು ಬುಟ್ಟಿಯೊಳಗಿದ್ದ ಮೀನು ಕದಿಯಲು ಹೊಂಚುವ ಕಾಗೆಗಳನ್ನು ಓಡಿಸುತ್ತ ಪೇಟೆಗೆ ನಡೆವ ಹೆಂಗಸರು, ಅವರು ನಡೆಯುವುದಲ್ಲ, ಓಡುವುದು, ಓಡುವುದೂ ಅಲ್ಲ, ದೌಡಾಯಿಸುವುದು. ನೀರಿನಲ್ಲಿ ನಕ್ಕುಳಹುಳ ತುಂಬಿಕೊಂಡ ಉದ್ದ ಹಗ್ಗ ಕಟ್ಟಿದ ಕರಟವನ್ನು ಹೆಗಲಿಗೆ ನೇತುಹಾಕಿಕೊಂಡು ಬಿರಬಿರನೆ ಮೀನು ಹಿಡಿಯಲು ತೆರಳುವ ಮಂದಿ ಸಂಜೆ ನಸುಗತ್ತಲಲ್ಲಿ ಬೆನ್ನಹಿಂದೆ ಶಂಕುವಿನಾಕಾರದ ಬೆತ್ತದ ಬುಟ್ಟಿ ಸಿಗಿಸಿಕೊಂಡು ಏನೋ ಗುಣುಗುಣು ಮಾಡುತ್ತಾ ಹೊಳೆಯಿಂದ ಮರಳುವ, ಬೀದಿದೀಪವಿಲ್ಲದ ರಸ್ತೆಯ ಮೇಲೆ ಸಾಗುವ ನೆರಳಿನಂತೆ ಕಾಣುವ ಕಾಯಕದ ವೀರಮಂದಿ, ಕೆಲ ಚಿತ್ರಗಳು ಅವುಗಳನ್ನು ಕಂಡ ಕಾಲದ ಕತ್ತಲೆ ಬೆಳಕಿನ ಸಮೇತ ಹೇಗೆ ನೆನಪಿನಾಳದಲ್ಲಿ ತಂಗಿರುತ್ತವೆ. ಗಾಳಿ ಹಾಕಿದೊಡನೆ ಸಿಗುತ್ತ, ತಪ್ಪಿಸಿಕೊಳ್ಳುತ್ತ, ಆಟ ಆಡಿಸುತ್ತ.**[೧೦]

ಮೀನಿನ ಪೇಟೆಗೆ ಹೋಗುವ ರಸ್ತೆಯಲ್ಲಿ ಕೆಲ ಜನರು ಸಂಜೆಯಾಗುತ್ತಾಲೆ ದಿನಾ ಹಾಗೆ ಹೋಗುವುದೇ ಒಂದು ಧಾರ್ಮಿಕ ವಿಧಿಯೇನೋ ಅನ್ನುವಷ್ಟರಮಟ್ಟಿಗೆ ಕೊಳೆಗಟ್ಟಿದ ಚೀಲ ಹಿಡಿದುಕೊಂಡು ಮೀನು ಪೇಟೆಗೆ ತಪ್ಪದೇ ಹೋಗುತ್ತಿದ್ದರು. ಆ ರಸ್ತೆ ಮುಖ್ಯ ರಸ್ತೆಗೆ ಸೇರುವಲ್ಲಿ ಮೂಗು ಹಿಡಿದುಕೊಂಡು ಹೋಗುವಷ್ಟು ಕೆಟ್ಟವಾಸನೆ. ಇಂದಿಗೂ ಕಣ್ಣುಕಾಣದ ಆ ರಸ್ತೆ ಹಾಗೆಯೇ ಇದೆ. ಮೀನುಗಳು, ಸೂಳೆಯರು, ಕುಡುಕರು ಎಲ್ಲರನ್ನು ಬಚ್ಚಿಡುವ, ಬಿಚ್ಚಿಡುವ ರಸ್ತೆ, ಗದ್ದಲದ, ವ್ಯವಹಾರದ ನಡುವೆ ತೆಪ್ಪಗೆ ಮಲಗಿದೆ. ಮುಖ್ಯ ರಸ್ತೆ ದಾಟುವಾಗ ಅತ್ತ ಕಣ್ಣು ಹೊರಳಿದರು ಕಾಲು ತಿರುಗುವುದಿಲ್ಲ. ಆದರೆ ಕುತೂಹಲ ಮಾತ್ರ ಹಾಗೆ ಇದೆ.

ಕಡಲಿನ ಬಗೆಗೆ ನಾಗವೇಣಿಯವರ ಅನುಭವಗಳು ವಿಶಿಷ್ಟವಾದವುಗಳು. ಎಳ್ಳಮಾಸೆ, ಆಟಿ ಅಮಾಸೆ, ದಡಾರ-ಕೋರ ಎಂಬ ಅನೇಕ ನೆಪ ಒಡ್ಡಿ ಕಡಲು ಮೀಯುತ್ತಿದ್ದರು. ಈ ದಿನಗಳಲ್ಲಿ ಇಡೀ ಮನೆಯವರೆಲ್ಲ ಕಡಲು ಮೀಯುತ್ತಿದ್ದರು. ಮನೆಯವರ ಜೊತೆ ಮನೆ ಕಾಯುವ ನಾಯಿಗಳು, ಕಡಲು ಮೀಯುತ್ತಿದ್ದವು. ಕಡಲು ಮೀಯುವುದೇ ಒಂದು ಚೆಂದ. ಕಡಲ ನೀರು ವರ್ಷದ ವ್ಯಾದಿಗಳನ್ನು ತಡೆದು, ಮಾಡಿದ ಪಾಪಗಳನ್ನು ತೊಳೆದು ಏಳು ಕಡಲಾಚೆಗೆ ಎಸೆಯುತ್ತದೆಂಬ ನಂಬಿಕೆಯಿಂದ ಕಡಲ ಮಂದಿ ಕಡಲು ಮೀಯುತ್ತಿದ್ದ ರೂಢಿ ಇತ್ತು.

ಹಿಂದೆ ಸುಗ್ಗಿ ಕಾಲಕ್ಕೆ ಹುಣ್ಣಿಮೆ ಬೆಳಕಲ್ಲಿ ಕಡಲಾಮೆಗಳು ಕಡಲ ದಂಡೆಗೆ ಮೊಟ್ಟೆ ಇಡಲು ಬರುವುದನ್ನು ಕಾಣಲು ಹಿರಿಯರು ಮಕ್ಕಳನ್ನು ಕರೆದೊಯ್ಯುವ ಪರಿಪಾಠವಿತ್ತು. ಕಡಲ ಮಧ್ಯದಿಂದ ಈಜುತ್ತ ದಡಕ್ಕೆ ಬರುವ ದೊಡ್ಡ ಗುಡಾಣ ಗಾತ್ರದ ಕಡಲಾಮೆಗಳು ಅತ್ತಿತ್ತ ನೋಡಿ ಕಡಲಿನ ದಡದಲ್ಲಿ ಗುಳಿತೋಡಿ, ನೂರಾರು ಮೊಟ್ಟೆ ಉದುರಿಸಿ ಮತ್ತೆ ಮೊಟ್ಟೆಗಳಿಗೆ ಮರಳು ಮುಚ್ಚಿ ಹಿಂದಿರುಗುವ ವಿಸ್ಮಯ ಕ್ರಿಯೆ ಪ್ರಕೃತಿಯ ವೈಚಿತ್ರ್ಯ.

ಹಾಗೆಯೇ ಪ್ರತಿ ಜ್ಯೇಷ್ಠ, ವೈಶಾಖ ಮಾಸದಲ್ಲಿ ಪ್ರತಿ ಮನೆಯ ಅಬ್ರಾಹ್ಮಣ ಹೆಂಗಸರು ಮಕ್ಕಳಾದಿಯಾಗಿ ಕಡಲ ದಂಡೆಗೆ ಕೊಡಗಳನ್ನು ಹಿಡಿದು ಹೊರಡುವ ಅಭ್ಯಾಸವಿತ್ತು. **“ಆ ಕಾಲದಲ್ಲಿ ಮಾತ್ರವೇ ಮೊರೆದು ಬರುವ ಕಡಲ ತೆರೆಗಳು ಹೊತ್ತು ತರುವ ‘ಉರಿ’ ಎಂಬ ಸಣ್ಣಚಿಪ್ಪಿನ (ಮೃದ್ವಂಗಿ) ಜೀವಿಗಳನ್ನು ಬಾಚಿ ತರುವುದಕ್ಕಾಗಿ ಆ ಕೊಡಗಳು. ಮರಳ ದಂಡೆಗೆ ಬಂದು ರಾಶಿ ಬೀಳುವ ಆ ಜೀವಿಗಳ ರಾಶಿ ನೋಡುವುದಕ್ಕೆ ಹೊಂಗೆ ಹೂವುಗಳ ರಾಶಿಯಂತೆಯೇ ಗಾತ್ರದಲ್ಲೂ, ಬಣ್ಣದಲ್ಲೂ ಅದೇ ಹೋಲಿಕೆ. ಕೊಡ ಹೊತ್ತುತಂದ ಹೆಂಗಸರೆಲ್ಲ ಉಕ್ಕಿ ಬರುವ ಕಡಲತೆರೆಗಳ ಬಾಯಿಗೆ ತಮ್ಮ ಕೊಡಗಳನ್ನಿಟ್ಟು ಅದರ ತುಂಬಾ ‘ಉರಿ’ಯನ್ನು ತುಂಬಿಸಿಕೊಳ್ಳುತ್ತಿದ್ದರು. ಎರಡು ಮೂರು ಕೊಡಗಳು ತುಂಬಿದ ನಂತರ ಅದನ್ನ ಹೊತ್ತು ತಂದು ಸಿಹಿನೀರ ಪಾತ್ರೆಗೆ ಹಾಕಿದರೆ, ಆ ಪ್ರಾಣಿಗಳು ನಿಧಾನಕ್ಕೆ ತಾವು ನುಂಗಿರುವ ಮರಳ ಕಣಗಳನ್ನೆಲ್ಲ ಕಾರಿ ಬಿಡುತ್ತವೆ. ನಂತರ ಸಿಹಿನೀರಿನಿಂದ ತೆಗೆದು ಬಿಸಿ ನೀರಿಗೆ ಹಾಕುವುದಷ್ಟೇ ಕೆಲಸ. ಬಿಸಿನೀರಿನಲ್ಲಿ ಚಿಪ್ಪಿನೊಳಗಿನ ಮಾಂಸ ಬೇರ್ಪಡುತ್ತದೆ. ಬೇರ್ಪಟ್ಟ ಮಾಂಸವನ್ನು ಆ ಹೊತ್ತಿಗೆ ಎಷ್ಟು ಬೇಕೋ ಅಷ್ಟನ್ನು ಬಳಸಿ ಉಳಿದದ್ದನ್ನು ಒಣಗಿಸಿಡುವುದೂ ಇದೆ. ಬಾಲ್ಯದಲ್ಲಿ ವೈಶಾಖ ಮಾಸದಲ್ಲಿ ನಾವು ಬಳಸುತ್ತಿದ್ದ ‘ಉರಿ’ ಈಗ ಇಲ್ಲವೇ ಇಲ್ಲ.”**

ಯಾಕಾಗಿ ಇಂಥ ವೈಪರಿತ್ಯಗಳು ನಡೆಯುತ್ತಿವೆ ಎಂಬುದಕ್ಕೆ ಯಾರಿಂದಲೂ ಉತ್ತರವಿಲ್ಲ. ಸ್ವತಃ ಕಡಲನ್ನೇ ನಂಬಿ ಬದುಕುತ್ತಿರುವ ಬೆಸ್ತ ಜನಾಂಗಕ್ಕೂ ಉತ್ತರ ಹುಡುಕುವ ವ್ಯವಧಾನವಿಲ್ಲ, ಕಾರಣ ಕಡಲ ದಂಡೆಯ ಮೇಲಿರುವ ಉದ್ಯಮಗಳು ಬದುಕುವ ದಾರಿಯ ಮುಂದೆ ಒಂದು ಭ್ರಮಾಲೋಕವನ್ನೇ ಸೃಷ್ಟಿಸಿ ಬಿಟ್ಟದ್ದು ಇದಕ್ಕೆ ಕಾರಣವಿರಬಹುದು.

ಈಗ ಕಡಲಿಗೂ ಮನುಷ್ಯನಿಗೂ ಕದನ ಸತತವಾಗಿ ನಡೆಯುತ್ತಲೇ ಇದೆ. ಕಣ್ಮನ ತಣಿಸುವ ಕಡಲ ಸೆರಗಲ್ಲೇ ಆಕೆ ಉಕ್ಕಿ ಬರದಂತೆ ಏನೇನೋ ತಡೆಒಡ್ಡಿ ಆಕೆಯನ್ನು ಹಿಂದಕ್ಕಟ್ಟುವ ಪ್ರಯತ್ನ ನಡೆಯುತ್ತಿದ್ದರೆ, ರಾತ್ರಿಯಾಗುತ್ತಲೆ ಆಕೆ ಮನುಷ್ಯನ ಪ್ರಯತ್ನವನ್ನು ನಿರರ್ಥಕಗೊಳಿಸುತ್ತಲೇ ಬಂದಿದ್ದಾಳೆ. ಬಲವಂತದಿಂದ ಕೆಲವೆಡೆ ಹೆಬ್ಬಂಡೆಗಳ ರಾಶಿ ತಂದು ಹಾಕಿ ಆಕೆಯ ಸೆರಗನ್ನು ವಶಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಿದ್ದಂತೆ ಆಕೆ ರೋಷತಪ್ತಳಾಗಿ ಇನ್ನೊಂದೆಡೆ ತಾನು ಬದುಕಲು ಅನುವು ಮಾಡಿಕೊಟ್ಟ ಕುಟುಂಬಗಳತ್ತಲೇ ನುಗ್ಗಿ ಆ ಕುಟುಂಬದ

ಇಡೀ ಅಸ್ತಿತ್ವವನ್ನೇ ಕಬಳಿಸಿದ್ದಿದೆ. ಅದಕ್ಕೆ ಕಡಲ್ಕೊರೆತ ಎಂಬ ಅಪಾದನೆಯನ್ನು ಹಾಕಿ ಆಕೆಯನ್ನು ಮಾತ್ರವೇ ಜರಿಯುವ ಅಭ್ಯಾಸ ಮಾಡಿಕೊಂಡಿದ್ದೇವೆ. ಕಡಲಿನ ಒಂದಿಂಚೂ ಜಾಗಕ್ಕೆ ನಾವು ಹೊಂಚು ಹಾಕದೆ ಆಕೆಯ ಪಾಡಿಗೆ ಆಕೆಯನ್ನು ಸ್ವೇಚ್ಛೆಯಿಂದಿರಲು ಬಿಡಬೇಕು. ದಂಡೆಯ ಸಮತೋಲನ ಕಾಪಾಡಿದರೆ ಕಡಲು ಪ್ರಕೃತಿ ನಿಯಮದಂತೆಯೇ ಮೊರೆಯುತ್ತದೆ... ಉಕ್ಕುತ್ತದೆ. ಅನ್ಯತಾ ಕಬಳಿಸುವುದಿಲ್ಲ. ಅಷ್ಟಕ್ಕೂ ಆಕೆಗೆ ಇಷ್ಟೇ ದೂರಕ್ಕೆ ನೀನು ಉಕ್ಕಿ ಬಾ ಎಂದು ನಿರ್ದೇಶಿಸಲು ಗೆರೆ ಹಾಕಿ ಆದೇಶಿಸಲು ನಾವ್ಯಾರು? ಎನ್ನುವ ಪ್ರಶ್ನೆಗಳನ್ನೆತ್ತುವ ನಾಗವೇಣಿ ಯಾರಿಗೇನಾದರೂ ಈ 'ಕಡಲಮ್ಮ ಕತ್ತಿ ಮಸೆಯಲಿ' ನಮಗೆ ಮಾತ್ರ ಆಕೆ ಪ್ರೀತಿಯ ತಾಯಿಯೇ ಎನ್ನುತ್ತಾರೆ.

೫.೨. ಕೌಟುಂಬಿಕ ಚಿತ್ರಗಳು

ಕನ್ನಡ ಸಾಹಿತ್ಯದಲ್ಲಿ ಕೌಟುಂಬಿಕ ಕಥನಗಳ ಕುರಿತಾದ ಪ್ರತ್ಯೇಕ ಕೃತಿಗಳು ಮತ್ತು ಕಥಾಂತರ್ಗತ ಚಿತ್ರಗಳು ಅನೇಕ ಕೃತಿಗಳಲ್ಲಿ ಕಂಡುಬಂದಿವೆ. ನವೋದಯ ಕಾಲದಲ್ಲಿಯೇ ಕನ್ನಡ ಸಾಹಿತಿಗಳು ತಮ್ಮ ಗ್ರಂಥಗಳಲ್ಲಿ ಗ್ರಾಮ್ಯ ಜೀವನವನ್ನು ಚಿತ್ರಿಸುವಾಗ ಪರಿಸರಕ್ಕೆ ಎಷ್ಟು ಪ್ರಾಧನ್ಯತೆ ನೀಡಿದರೊ ಅಷ್ಟೇ ಕುಟುಂಬ ಜೀವನಕ್ಕೂ ಮಹತ್ವ ನೀಡಿರುತ್ತಾರೆ. ಕಾಲಾಂತರದ ದಶಕಗಳಲ್ಲಿ ಉಂಟಾದ ಸಾಮಾಜಿಕ ಪರಿವರ್ತನೆಗಳು ಮತ್ತು ಕೌಟುಂಬಿಕ ಪರಿವರ್ತನೆಯನ್ನು ಗಮನಿಸಿದಾಗ ಸಾಹಿತ್ಯ ಕೌಟುಂಬಿಕ ನೆಲೆಯ ಚಿತ್ರಣಗಳನ್ನು ಪ್ರಮುಖ ಆಕರವಾಗಿಯೇ ಅನೇಕ ಕವಿಗಳು, ಕವಯತ್ರಿಯರು ಕಾದಂಬರಿಗಳನ್ನು ರಚಿಸಿರುತ್ತಾರೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕನ್ನಡ ಕರಾವಳಿಯ ಕೌಟುಂಬಿಕ ಬದುಕಿನಲ್ಲಿ ತಲೆಮಾರುಗಳ ಅಂತರದ ಚಿಂತನೆ ಮತ್ತು ಸಾಮಾಜಿಕ ಸ್ತರವಿನ್ಯಾಸ ಹಾಗೂ ನಗರದತ್ತ ವಲಸೆ ಹೋಗುವ, ಶಿಕ್ಷಣದಿಂದ ಹೊಸತನ್ನು ಕಲಿತು ಜೀವಿಸುವ ಚಿಂತನೆಗಳು ಮೂಲ ಕುಟುಂಬ ವ್ಯವಸ್ಥೆಯೊಳಗೆ ತಮ್ಮದೇ ಆದ ಭಾವನಾತ್ಮಕ ಬದಲಾವಣೆಯನ್ನು ನಿರೀಕ್ಷಿಸಿದವು. ***ಈ ಹಿನ್ನೆಲೆಯಲ್ಲಿ ಇಂದಿಗೂ ಕುಟುಂಬದ ಕೇಂದ್ರವಾಗುವುಳ್ಳ ಸ್ತ್ರೀ ತನ್ನೊಳಗಿನ ತುಮುಲಗಳನ್ನು ಹಾಗೂ ಕುಟುಂಬ ವ್ಯವಸ್ಥೆಯೊಳಗಿನ ವೈರುದ್ಧ್ಯಗಳ ಹೊಸ ತಲೆಮಾರು ಮತ್ತು ಹೊಸ ತಲೆಮಾರುಗಳ ಅಂತರವನ್ನು ಅಭಿವ್ಯಕ್ತಿಸುತ್ತಲೇ ಸಾಗಿದೆ.*** ಅಲ್ಲದೆ ಮಾತೃಪ್ರಧಾನ ವ್ಯವಸ್ಥೆಯಿರುವ ಸಮುದಾಯಗಳು ಹೆಚ್ಚು ನೆಲೆಸಿರುವ ಕರಾವಳಿಯಲ್ಲಿ ಸಹಜವಾಗಿಯೇ ಅಲ್ಲಿನ ಸಾಹಿತಿಗಳು ಸ್ತ್ರೀವಾದಿ ಚಿಂತನೆಗಳನ್ನು ಕೌಟುಂಬಿಕ ನೆಲೆಯಲ್ಲಿ ಚಿತ್ರಿಸಿರುತ್ತಾರೆ. ಈ ನೆಲೆಯಲ್ಲಿ ವೈದೇಹಿ ಮತ್ತು ನಾಗವೇಣಿಯವರ ಪ್ರಬಂಧಗಳಲ್ಲಿ ಕೌಟುಂಬಿಕ

ಚಿತ್ರಣವನ್ನು ವೈಚಾರಿಕತೆಯ ನೆಲೆಯಲ್ಲಿ ಬಳಸಿಕೊಂಡಿರುವುದು ಇವರೀರ್ವರ ಪ್ರಬಂಧಗಳ ನಡುವಿನ ಸಾಮ್ಯತೆಯ ಅಂಶಗಳನ್ನು ಕೂಡ ಅಧ್ಯಯನ ನಡೆಸಲು ಸಾಧ್ಯವಾಗುತ್ತದೆ.

ವೈದೇಹಿ ತಮ್ಮ ಕುಟುಂಬದ ವಿಚಾರವಾಗಿ ಹೇಳುವುದು ಹೀಗೆ. ನಾನು ಹುಟ್ಟಿ ಬೆಳೆದದ್ದು ದೊಡ್ಡ ಕುಟುಂಬವೊಂದರಲ್ಲಿ ಅದು ಅವಿಭಕ್ತ ಕುಟುಂಬವಲ್ಲ. ತುಂಬ ಮಕ್ಕಳಿರುವ, ದಿನನಿತ್ಯ ಬಂಧುಬಾಂದವರು ಅದರ ಆಚೆಯವರು ಬಂದು ಹೋಗುವ ಉಳಕೊಳ್ಳುವ ಕುಟುಂಬ. **"ದೊಡ್ಡ ಕುಟುಂಬವೆಂದರೆ ಸಣ್ಣ ಪ್ರಪಂಚದಂತೆ, ಪ್ರಪಂಚದಲ್ಲಿ ಇರುವುದಿಲ್ಲವೂ ಅದರಲ್ಲಿ ಇರುತ್ತದೆ. ಇಲ್ಲದ್ದು ಇರುವುದಿಲ್ಲ, ಸರಿಯೆ. ಆದರೆ ಕಡಲು ವಿಶಾಲವಾಗಿದ್ದರೂ ನಮಗೆ ಸಿಗುವುದು ನಾನು ತೆಗೆದುಕೊಂಡು ಹೋದ ಪಾತ್ರೆಯಷ್ಟು ಮಾತ್ರ ಅನ್ನುತ್ತಾರಲ್ಲ, ಹಾಗೆಯೇ ತಾನೆ ನಮ್ಮ ನಮ್ಮ ಗ್ರಹಿಕೆಗೆ ಲಭ್ಯವಾಗುವ ಜಗತ್ತೂ? ಗಾಳ ಹಾಕಿ ಕುಳಿತಿದ್ದೇನೆ, ಸದ್ಯಕ್ಕೆ ಎಷ್ಟು ನೆನಪು ಸಿಗುತ್ತದೋ ಅಷ್ಟರಲ್ಲಿ ಬೇಕೆಂದೇ ಕೆಲವನ್ನು, ಬೇಡವೆಂದು, ಸದ್ಯಕ್ಕೆ, ಕಾಣುವಂಥವನ್ನೂ, ಕತೆಗಿತೆ ಲೇಖನಗಳಲ್ಲಿ ಈಗಾಗಲೇ ಹೇಳಿದ್ದೇನೆ. ಸಾಕು ಅನಿಸಿದ್ದನ್ನೂ ಮರಳಿ ಕಡಲಿಗೇ ಒಗೆದು, ಇರಲಿ ಅಂತ ಕಂಡವನ್ನು ಹೆಕ್ಕಿಡುತ್ತೇನೆ. ಬೇಡವೆನಿಸುವುದು, ಇರಲಿ ಅನಿಸುವುದು, ಸಾಕು ಅನ್ನಿಸುವುದು- ಎಲ್ಲದಕ್ಕೂ ಕಾರಣಗಳು ಇರಲೂಬಹುದು ಇಲ್ಲದೆಯೂ ಇರಬಹುದು, ಅದು ನಿಮಗೂ ಗೊತ್ತು".**[೧೩]

ತುಂಬು ಮನೆಯೊಳಗೆ ಮಕ್ಕಳ ಸುಂದರ ಮುಗ್ಧ ಬಾಲ್ಯ, ಅಸ್ವಸ್ಥತೆ, ಸಹಬದುಕು, ದೊಡ್ಡವರ ಜೀವನದ ಕಷ್ಟ-ಸುಖ, ನೋವು-ನಲಿವು, ದುಃಖ, ಹಿಂಸೆಗಳ ನಡುವೆ ಬೆಳೆದು ಬಂದರು ಅದು ದುಡ್ಡಿನ ಕಾಲವಾಗಿರದೆ ಅದು ಮರ್ಯಾದೆಯ ಹಾಗೂ ಕಟ್ಟುನಿಟ್ಟಿನ ಕಾಲವಾಗಿದ್ದರಿಂದ ಮಹಿಳೆಯರ ಶಿಕ್ಷಣ ಇನ್ನೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ತೆರೆದುಕೊಂಡಿರಲಿಲ್ಲ. ಪೀಳಿಗೆಯಿಂದ ಪೀಳಿಗೆಗೆ ಬದಲಾಗುತ್ತಾ ವೈದೇಹಿಯವರು ಹೆಚ್ಚಿನ ವಿದ್ಯಾಭ್ಯಾಸ ಪಡೆಯುವ ಕಾಲಕ್ಕೆ ಕುಂದಾಪುರದಲ್ಲೇ ಕಾಲೇಜಾಗಿ, ಕಾಲೇಜು ಶಿಕ್ಷಣವೂ ಸುಲಭವಾಯ್ತು. ಆ ಕಾಲದ ಹೆಣ್ಣು ಮಕ್ಕಳಿಗೆ ಒಳಗೆ ಇದ್ದು ಅಭ್ಯಾಸ. ಚಾವಡಿ, ಪಡಸಾಲೆ ದಾಟಿದ ನಂತರ ಇರುವ ಒಳಗೆ ಅದು. ಪಡಸಾಲೆಯಲ್ಲಿ ಗಂಡಸರು ಕುಳಿತಿದ್ದರೆ ಹೆಣ್ಣು ಮಕ್ಕಳು ಅಲ್ಲಿಗೆ ಬರುತ್ತಿರಲಿಲ್ಲವಂತೆ. ಚಾವಡಿಗೆ ಬರಬೇಕಾದರಂತೂ ಅಲ್ಲಿ ಗಂಡಸರು ಇರದಿರಬೇಕು! ಒಮ್ಮೆ ಹಣಕಿ ನೋಡಿ ಅಲ್ಲಿ ಯಾರೂ ಇಲ್ಲವೆಂದಾದರೆ ಹೋಗುತ್ತಿದ್ದರಂತೆ.

"ನಾವು ಎಲ್ಲಿಗೂ ಒಬ್ಬರೇ ಹೋಗುವ ಕಟ್ಟಳೆಯೇ ಇರಲಿಲ್ಲ ಎಂದೆನಲ್ಲ. ಜೊತೆಯಾಗಿಯೇ ಹೋಗುವುದು, ಬರುವುದು. ಹೆಂಗಸರಂತೂ ಇಲ್ಲಿಂದ ಅಲ್ಲಿಗೆ ಹೋಗ ಬೇಕಾದರೆ ಜೊತೆಗೊಂದು ಜನ, ಬಸ್ಸು ಹತ್ತಿಸಲು ಜನ, ಇಳಿಸಿಕೊಳ್ಳಲು ಜನ. ಅದು ಇವತ್ತಿಗೂ ಮುಕ್ಕಾಲು ಪಾಲು ಹಾಗೆಯೇ. ಜನ ಎಂದರೆ ಗಂಡಾಳು, ಮನೆಯ ಗಂಡಸು ಅಥವಾ ಆಳು. ಇದು ಕೇವಲ ಹೆದರಿಕೆ ಅಥವಾ ಆತಂಕಕ್ಕಾಗಿ ಮಾತ್ರವಲ್ಲ

ಮರ್ಯಾದೆಗಾಗಿ ಕೂಡ. ಒಬ್ಬಳೇ ತಿರುಗುವುದು ಅನಾಥೆ ಮಾತ್ರ ಎಂಬಂತೆ ಹೇಳಕೇಳುವ ಗಂಡಸರು ನಮಗಿದ್ದಾರೆ ಎನ್ನುವುದೇ ಮರ್ಯಾದೆ".[೧೩]

ಬ್ರಾಹ್ಮಣ ಕುಟುಂಬದಲ್ಲಿ ಬೆಳೆದ ಇವರನ್ನು ವಿಶೇಷವಾಗಿ ಕಾಡಿದ್ದು ಮಡಿ. ಈ ವಿಚಾರವಾಗಿ ವೈದೇಹಿ ಬಹುಪಾಲು ತಮ್ಮ ಎಲ್ಲಾ ಕೃತಿಗಳಲ್ಲೂ ಹೇಳಿಕೊಂಡಿದ್ದಾರೆ. ಉದಾಹರಣೆಗೆ ಅಸ್ಪೃಶ್ಯರು ಕಾದಂಬರಿ, ಲೇಖಕಿಯ ಪುಟಗಳು ಲೇಖನ ಮೇಜು ಮತ್ತು ಬಡಗಿ ಸಂಕಲನದ ಮೂರು ಮ ಕಾರಗಳ ನಡುವೆ ಭಾಗದಲ್ಲಿ ಸಾಕಷ್ಟು ಹೇಳಿದ್ದಾರೆ. ಅವರಲ್ಲಿ ಮುಟ್ಟಾದವರಿಗೆ ಅಂತಲೇ ಒಂದು ಬೇರೆ ಕೋಣೆ ಇತ್ತು. ಅದರ ಹೆಸರೇ "ಮುಟ್ಟಾದವರ ಕೋಣೆ". ಹೊರ ಹೋಗಲು ಅದಕ್ಕೆ ಬಾಗಿಲಿತ್ತು. ಅಲ್ಲಿಂದಲೇ ಹೋಗುವುದು, ಒಳ ಬರುವುದು. ಇವರ ಅಕ್ಕಂದಿರು ಮುಟ್ಟಾದ ಮೂರು ದಿನ ಕೈಕಾಲು ತೊಳೆಯಲು ಹಿತ್ತಲ ಮೂಲೆಗೆ ಹೋಗಬೇಕು ಅಲ್ಲೊಂದು ಪಾದೆ ಕಲ್ಲು ನೀರನ್ನು ತೆಗೆದುಕೊಂಡು ಹೋಗಿ ಮುಟ್ಟಿನ ಬಟ್ಟೆ ಬದಲಿಸಿಕೊಂಡು ಬರಬೇಕು. ಮೂರು ದಿನ ಸ್ನಾನವೂ ಇಲ್ಲದ ಕಾಲ. ಈ ಮಟ್ಟಿಗೆ ಕೆಟ್ಟ ಕಾಲವದು. ಹೊಸದಾಗಿ ಮೈನೆರೆದವರ ಕತೆಯಂತೂ ನಾಯಿಗೆ ಕೊಟ್ಟರೂ ಬೇಡವಾದ್ದು. ಆದರೆ ಇವರ ಸರದಿ ಬರುವಾಗ ಇದೆಲ್ಲಾ ಕಡಿಮೆ ಆಗಿತ್ತು. (ಅಮ್ಮನ ಲೆಕ್ಕದಲ್ಲಿ ತನ್ನ ಸರದಿ ಬರುವಾಗ ಕಡಿಮೆ ಆಗಿತ್ತು!) ಹೆಣ್ಣು ಮೈನೆರೆಯುವುದು ಸಹಜವಾದರೂ ಅದೇನೋ ಆದಂತೆ, ಸಲ್ಲದ್ದೇನೋ ನಡೆದು ಹೋದಂತೆ, ದೊಡ್ಡ ದುರಂತವೇ ಘಟಿಸಿದಂತೆ ಮನೆಯ ಹಿರಿಯರು ನಡೆದುಕೊಳ್ಳುತ್ತಿದ್ದರು. 'ಮುಟ್ಟಾದ ಕೂಡಲೇ ನಾನು ಜೋರಾಗಿ ಅತ್ತಿದ್ದೇಕಂತೆ?! ಹಾಗೆ ಅಳುವುದು ಕೂಡ ಒಂದು ಕಟ್ಟುಕಟ್ಟಳೆ ಎಂದು ತಿಳಿದಿದ್ದೇನೆ. ಏನು? ಎನ್ನುವ ಪ್ರಶ್ನೆಯನ್ನು ಮಾಡಿಕೊಳ್ಳುತ್ತಾರೆ ಲೇಖಕಿ. ಬಾಣಂತಿಗೋ ಹತ್ತು ದಿನ ಎಂಬುದು ಶಿಕ್ಷೆಯಂತಿತ್ತು. ತಮ್ಮ ಕಾಲಕ್ಕಾಗಲೆ ಈ ಬಗೆಯ ಮುಟ್ಟು, ಮಡಿ, ಮೈಲಿಗೆಗಳು ಬದಲಾಗಿದ್ದಕ್ಕೆ ದೇವರ ದಯೆ ಎನ್ನುತ್ತಾರೆ.

ಚಿಕ್ಕಂದಿನಲ್ಲಿ ಬಹಳದೂರದ ಪ್ರಯಾಣಎಂದರೆ ಪಾಣೆಮಂಗಳೂರಿನ ಆಚೆ ಕುಡುಮುನ್ನೂರು ಎಂಬ ತಾಯಿಯ ತವರು ಮನೆ. ನಾಲ್ಕು ಹೊಳೆ ದಾಟಿ ಅಲ್ಲಿಗೆ ಹೋದರೆ ಕಿವಿ ಮೇಲೆ ಬೀಳುವ ಅಲ್ಲಿನ ಕನ್ನಡವೇ ಬೇರೆ. ದನಿಯ ಸ್ಥಾಯಿಯೇ ಬೇರೆ, ಇವರ ಊರಿನಲ್ಲಿಯೇ ಇಲ್ಲದ ತುಳು ಭಾಷೆ ಅಲ್ಲಿತ್ತು. ಅಲ್ಲಿನ ಆಳುಕಾಳುಗಳ ಹೆಸರುಗಳೂ ಬೇರೆ ಇತ್ತು. ಅಜ್ಜಿ ಮನೆಯ ಅಡಿಗೆಯ ರುಚಿ ಕೂಡ ಭಿನ್ನ. ಪಲಾಶದೆಲೆಯ ಮೇಲೆ ಕುಟ್ಟಿದ ಕುಚ್ಚಿಗೆ ಅಕ್ಕಿಯ ಗಂಜಿಯೂಟದ ರುಚಿ ಎಂದರೆ ಲೋಕೋತ್ತರವಾದದ್ದು. ಅಪರೂಪಕ್ಕೆ ಅಲ್ಲಿಗೆ ಹೋಗುತ್ತಿದ್ದರಿಂದ ಅಲ್ಲಿನ ಹೆಂಗಸರೋ ಹುಟ್ಟಾ ಧೈರ್ಯವಂತೆಯರಂತೆ, ಸ್ವತಂತ್ರರಂತೆ ಕಾಣುತ್ತಿದ್ದರು. ಇವೆಲ್ಲ

ಅಜ್ಜನಮನೆಯ ವಿಶೇಷ ಆಕರ್ಷಣೆಯಾಗಿದ್ದವು. ಆದರೆ ಹುಟ್ಟಾ ಧೈರ್ಯವಂತೆಯರಂತೆ ಕಾಣಿಸುತ್ತಿದ್ದ ಅಜ್ಜನೂರಿನ ಆ ಹೆಂಗಸರನ್ನು ಈಗ ನೆನೆಯಹೋದರೆ ಅವರು ಸುತ್ತಣ ಪ್ರಪಂಚದ ಕಾಲುಪಾಲು ಸುಖವನ್ನೂ ಅನುಭವಿಸದೆ, ತಮ್ಮ ಬವಣೆಗಳನ್ನೇ ಸುಖವೆಂದುಕೊಂಡು ಭಾವಿಸಿ ಬದುಕು ಸವೆಸಿದವರು ಎಂಬುದು ಮನವರಿಕೆಯಾಗುತ್ತದಂತೆ.

ಹೆಚ್ಚು ತಿರುಗದೆ ಶಾಲೆಯಾಯ್ತು, ಮನೆಯಾಯ್ತು ಅಂತ ಇರುತ್ತಲೆ ಕೆಲಸದಲ್ಲಿ ನುರಿದು ನುಪ್ಪಿ ಹೋಗಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಬೇಸಿಗೆಯಲ್ಲಿ ಅಂಗಳದ ಬಿಸಿಲು ಒಂದು ತಟಕು ದಂಡವಾಗದ ಕಾಲ. ತೆಂಗಿನ ಒಣಗರಿಯನ್ನು ನೇಯ್ದು ಮಾಡಿದ ಸಾಲಾನು ಸಾಲು ಮಡಲು ಚಾಪೆಗಳು, ಅವುಗಳ ಮೇಲೆ ಯಾವ್ಯವ ತರಹದ ಹಪ್ಪಳ ಬೇಕು, ಸಂಡಿಗೆ ಬೇಕು? **"ಅತ್ತ ಉರಿವ ಆಗಸ, ಕುದಿವ ಸೆಕೆ, ಇತ್ತ ಜಗಲಿಯಲ್ಲಿ ಹಪ್ಪಳದ ಮಹಾಯಜ್ಞ. ಜೊತೆಗೆ ಒಡಲಿಂದ ಹಾಡುಗಳು ಚಿಮ್ಮಿಚಿಮ್ಮಿ ಕಂಠವೊಡೆಯುತ್ತಿವೆ. ಏನಿದೇನಿದು, ಹಾಡಿನ ಕಛೇರಿಯೋ, ಹಪ್ಪಳದ ಜಗಲಿಗೆ ಬಾಯಿ ಬಂದು ಹಾಡುವ ಜಗಲಿಯಾಗಿ ಮಾರ್ಪಡುವ ಜಾದುವೋ! ಹಪ್ಪಳದ ಹಸಿಹಿಟ್ಟು, ಮುಗುಚಿಟ್ಟ ಸೆಂಡಿಗೆ ಹಿಟ್ಟು ತಿನ್ನುವ "ಜಾನಪದ" ಸುಖ ನಮಗಿದ್ದಂತೆ ಈಗಿನ ಮಕ್ಕಳಿಗೆ ಇದೆಯೇ? ಬಿಡಿ ತಯಾರಿಕೆಯ ಕಷ್ಟ-ಸುಖವೂ ಇಲ್ಲ. ಅದು ಬೇಕೂ ಇಲ್ಲವಲ್ಲ. ದುಡ್ಡು ಕೊಟ್ಟರೆ ಯಾವುದು ಸಿಗದು. ಪ್ರೀತಿಯೊಂದು ಬಿಟ್ಟು? ಅವೆಲ್ಲ ಮನೆಯೊಳಗೆ ಎತ್ತರೆತ್ತರ ಹೊಸಿಲುಗಳು ಇದ್ದ ಕಾಲದ ಸಂಗತಿ. ಅವು ಬೇಕಿಲ್ಲದ ಯುಗಕ್ಕೆ ದಾಟಿಕೊಳ್ಳುವುದು ಹೇ, ಎಷ್ಟು ಸುಲಭ, ಅಲ್ಲಿ ಹೊಸಿಲುಗಳೇ ಇಲ್ಲ!"**[೯]

ಹಪ್ಪಳ ಸೆಂಡಿಗೆ ಕಾಯಲಿಕ್ಕೆ ಹೇಳಿದರೆ ಇವರು ತಲೆತಪ್ಪಿಸಿಕೊಂಡವರೇ. ಒಂದು ದಿನ ಎರಡು ದಿನವಾದರೆ ಸರಿ. ಬೇಸಿಗೆ ರಜೆಯಿಡೀ ಇದೇ ಕೆಲಸ ಮಾಡು ಎಂದರೆ! ಶಾಲೆಗೆ ರಜೆ ಕೊಟ್ಟಿದ್ದು ಹಪ್ಪಳ ಕಾಯಲಿಕ್ಕಾ? ಎಂದು ಪ್ರಶ್ನೆ ಕೇಳಿ ತಪ್ಪಿಸಿಕೊಳ್ಳುವಂತಿರಲಿಲ್ಲ. ಯಾರದು ಕಾನೂನು ಮಾತಾಡವುದು? ಮಳೆಗಾಲದಲ್ಲಿ ತಿನ್ನಲು ಬೇಕು ಈಗ ಕಾಯಲಿಕ್ಕೆ ಆಗುವುದಿಲ್ಲವೆ! ಎಂದು ಅಪ್ಪಾ ಜೋರು ಮಾಡುತ್ತಿದ್ದರು. ಈ ಅಮ್ಮನ ದೆಸೆಯಿಂದ ಸುಖವಿಲ್ಲಪ್ಪ ಎಂದುಕೊಂಡರೆ ಇತ್ತ ಈ ಮಕ್ಕಳನ್ನು ನಂಬಿ ಸುಖವಿಲ್ಲವೆಂದು ಅಮ್ಮನೂ ಕಂಡುಕೊಂಡ ಕಾಲವದು.

ಇವರ ತಂದೆಯೇ ಹಿರಿಯ ಮಗನಾದ್ದರಿಂದ ಶ್ರಾದ್ಧ, ಮಹಾಲಯ, ಶ್ರಾವಣಮಾಸ ಸಮಾರಾಧನೆ, ಗಣಹೋಮ, ಅಷ್ಟೇ ಅಲ್ಲ ಹುಡುಗಿ ನೋಡುವುದು, ನಿಶ್ಚಿತಾರ್ಥ, ಮದುವೆಗಳು, ಉಪನಯನ ಎಷ್ಟೊಂದು ಸಮಾರಂಭ. ಪ್ರತಿಯೊಂದು ಕಾರ್ಯಕ್ರಮಗಳು ಮುಗಿದ ಮೇಲೆಯೂ ಒಳಮನೆಯಲ್ಲಿ ಸಂಭ್ರಮ ಗೆಲುವು, ಮಾತು ಕುಶಾಲು, ಸಕಾರಣವೋ, ನಿಷ್ಕಾರಣವೋ ವೈಮನಸ್ಸು, ಮುನಿಸು. ಸಸೆತಗಳು ಅಂತು ಮನೆಯಲ್ಲಿ ಅಲ್ಲೋಲಕಲ್ಲೋಲ. ಇತ್ತ ಇದಾವುದರ ಗೊಡವೆಯೇ ಇಲ್ಲದೆ ಕ್ರೀಡಾಮಗ್ನರಾಗಿರುವ ಮಕ್ಕಳು. ಓದಿದೆಯಾ ಬರೆದೆಯಾ ಪ್ರಶ್ನೆಗಳೇ?

ಹಾಗೆಂದರೇನು? ಇಂತಹ ಕುಟುಂಬದಲ್ಲಿ ಹಲವು ಮಕ್ಕಳ ಜನನ ಬೆಳವಣಿಗೆಯ ನಡುವೆ ಬೆಳೆಯುವ ಎಲ್ಲರ ಮನಸ್ಥಿತಿಯೂ ಪ್ರಪಂಚ ಕಂಡಂತೆಯೇ ಇರುತ್ತದೆ ಅಲ್ಲವೆ?

ವೈದೇಹಿಯವರು ತಮ್ಮ ಬಾಲ್ಯದ ಬಹುಭಾಗವನ್ನು ಕಳೆದದ್ದು ಬಸಿರು, ಬಾಣಂತನ, ಮಗುವಿನ ಜನನದ ನಡುವೆಯೇ. ಅವರು ಕಂಡ ಮೊದಲ ಸಾವು ಅವರ ತಂದೆಯವರದು. ಅದೇ ಮೊದಲ ಆಘಾತವೂ. "ಹೆತ್ತವರ ಪದ ನೆನೆದು" ಭಾಗದಲ್ಲಿ ಹೇಳಿರುವಂತೆ, 'ನಾನು ಕಣ್ತೆರೆಯುವಾಗ ಆಗಲೇ ನನ್ನ ತಂದೆಗೆ ಐವತ್ತರ ವಯಸ್ಸು. ವೃತ್ತಿಯಲ್ಲಿ ಅವರು ವಕೀಲರು. ಬಿಳಿಪಂಚೆ, ಕರಿಕೋಟು, ಬಿಳಿಮುಂಡಾಸಿನಲ್ಲಿ ಕೋರ್ಟಿಗೆ ಹೊರಟುನಿಂತ ತಂದೆ ಎಷ್ಟು ಗಂಭೀರವಿದ್ದಾರೆ! ಅಮ್ಮ ಹೇಳುವಂತೆ ಒಳ್ಳೆ ಲಕ್ಷಣವಾಗಿ! ನೋಡಿದರೆ ಗೌರವವುಕ್ಕಿಸುವ, ಧೈರ್ಯ ಉಡುಗಿಸದ ಗಾಂಭೀರ್ಯ ಹೊತ್ತುಗೊತ್ತಿನ ಪರಿವೆಯೇ ಇಲ್ಲದೆ ಬರುವ ಕಕ್ಷಿಗಾರರನ್ನೆಲ್ಲ ಅತ್ಯಂತ ಸಾವಧಾನತೆಯಿಂದ ವಿಚಾರಿಸಿಕಳಿಸಿ ಅವರು ಒಳಗೆ ಬರುವಾಗ ಒಮ್ಮೊಮ್ಮೆ ರಾತ್ರಿ ಹನ್ನೊಂದು ಹನ್ನೊಂದವರೆ. ದಣಿದಿದ್ದರೂ ಬಿಡದೆ 'ಪಾರಾಯಣ, ಆ ಮೇಲೆಯೇ ಊಟ, ನನ್ನ ತಾಯಿ ಊಟದ ಹಾಲಿನ ಕಂಬಕ್ಕೆ ಒರಗಿ ನಿದ್ದೆ ಕೂರುತ್ತ ಅವರಿಗಾಗಿ ಕಾಯುತ್ತ ಕುಳಿತಿರುತ್ತಿದ್ದಳು. ತಂದೆಯ ನೆನಪೆಂದರೆ ನನಗೆ ಥಟ್ಟನೆ ಬರುವುದು ಅಮ್ಮನ ಈ ಚಿತ್ರವೆ.

"ನನ್ನ ತಾಯಿ ಮಧ್ಯಮ ಕೃಷಿಕ ಮನೆಯಿಂದ ಬಂದವಳು. ತಂದೆಯ ಎರಡನೆಯ ಹೆಂಡತಿ. ಐದು ಮಂದಿ ಮಕ್ಕಳು (ಹಿರಿಮಗಳು ಅಮ್ಮನಿಗಿಂತ ಒಂದು ವರ್ಷ ಚಿಕ್ಕವಳು) ಅಲ್ಲದೆ ಹಳ್ಳಿಯಿಂದ ಓದಲು ಬಂದಿರುವ ಬಂಧುವರ್ಗದ ಮಕ್ಕಳಿಂದ ಮನೆ ತುಂಬಿಕೊಂಡಿತ್ತು. ಮೊದಲೇ ಮಕ್ಕಳೆಂದರೆ ಬಲು ಪ್ರೀತಿಯವಳು. ಅವರೆಲ್ಲರಿಗೆ ಮಾತ್ರವಲ್ಲ, ಇಡಿಯ ಕುಟುಂಬಕ್ಕೇ ಪ್ರೀತಿಯ 'ಚಿಕ್ಕಮ್ಮ'ನಾಗಿಬಿಟ್ಟಳು. ತನ್ನ ಅಣ್ಣನೊಡನೆ ಮಾತಾಡುವಾಗ ತವರಿಗೋಡುವ ಅವಳ ಕನ್ನಡ ಕುಂದಾಪುರ ತಾಲ್ಲೂಕಿನ ಕೋಟಗನ್ನಡ. ತೆಂಕಲಾಯಿನ ಊರಾದ ಪಾಣೆಮಂಗಳೂರಿನಲ್ಲಿ ಕೋಟದವರ ಕನ್ನಡ ಬೇರೆಯೇ ಇದೆ. ಅದನ್ನು ತುಂಬಾ ಚೆನ್ನಾಗಿ ಮೈಗೂಡಿಸಿಕೊಂಡಿದ್ದಳು. ಭಾಷೆಯೊಂದಿಗೆ ಅಂಟಿಕೊಂಡೇ ಇರುವ ಆಯಾ ಊರು, ನಾಡು ಮನೆಮಂದಿಯ ಒಡಲು, ಅಲ್ಲಿ ಗೂಢಿಸಿಕೊಂಡ ಸಂಸ್ಕೃತಿಯ ಅರಿವು ಯಾವ ಅಡ್ಡ ಮರೆಯಿಲ್ಲದೆ ತಂತಾನೇ ಒಳಗಿಳಿಯುತ್ತದೆ. ಮದುವೆಯ ನಂತರ ತನ್ನ ಕನ್ನಡಕ್ಕೇ ನೇತಾಡುವುದೋ ಮನೆಯಕನ್ನಡವನ್ನು ಮಾತಾಡದೆ ಜಿಗುಟು ತೋರುವುದೋ ಮಾಡದೆ ಊರಮಂದಿ, ಬಂಧುಬಾಂಧವರಿಂದ ಬೇರೆನಿಲ್ಲಲು ಬಯಸದೆ ಬೆರೆತು ಒಂದಾಗಿ ಹೋಗುವ ಉಪಾಯವನ್ನು ಅರಿಯದೆಯೇ ಸಾಧಿಸಿದಳು".[೧೫]

ವೈದೇಹಿಯವರ 'ಹಕ್ಕಿಲ್ಲದವರು', 'ಅಮ್ಮಚ್ಚಿ ಎಂಬ ನೆನಪು', 'ವಾಣಿಮಾಯಿ', 'ಭೂತ', 'ಯಾತ್ರೆ' ಮುಂತಾದ ಕಥೆಗಳಲ್ಲಿ ಕೋಟ ಕನ್ನಡವನ್ನೇ ಬಳಸಲಾಗಿದೆಯಾದ್ದರಿಂದ ಇವು ಭಾಷಾ ಬಳಕೆಯಿಂದಲೂ ಮುಖ್ಯವಾಗುವ ಕಥೆಗಳಾಗಿವೆ. ಸ್ವಂತದ ಹಲವು ಬಸುರು, ಬಾಣಂತನ,

ಮನೆಮಕ್ಕಳ ಬಸುರು ಬಾಣಂತನ, ಬದುಕಿನ ವ್ಯಂಗ್ಯ ಟೀಕೆಟಿಪ್ಪಣಿಗಳ ನಡುವೆ ನಿಷ್ಠುರ ಸತ್ಯಗಳಿಗೆ ಗಟ್ಟಿಅಂಟಿಕೊಂಡು ತನ್ನ ದನಿಯನ್ನೂ ಬಾಳಿನ ಬನಿಯನ್ನು ಉಳಿಸಿಕೊಂಡವಳು. ಕೃಷಿಕ ಮನೆಯಿಂದ ಬಂದದ್ದಾರಿಂದಲೋ ಏನೊ ಆಕೆಗೆ ಕೆಲಸವೇ ವೇದ. ತಾಯಿಯಿಂದ ನಮಗೆ ಬಂದ ಬಳುವಳಿಗಳಲ್ಲಿ ಇದೂ ಒಂದು. ತಂದೆಯಿದ್ದಷ್ಟು ಕಾಲವೂ ಅವರಿಬ್ಬರೂ ಒಂದು ಪುಟ್ಟ ಜಗಳವನ್ನಾದರೂ ಆಡಿದ್ದು ನಾವು ಮಕ್ಕಳು ಕಂಡೇ ಇಲ್ಲ. ಇದು ಮಾತ್ರ ಇವತ್ತಿಗೂ ನನಗೆ ಅಚ್ಚರಿ ಮತ್ತು ಬದುಕಿನುದ್ದಕ್ಕೂ ಉದಾಹರಣೆಯ ಎಚ್ಚರ ದೀಪ.

ಆಗೆಲ್ಲ ಮನೆಯಲ್ಲೇ ಮದುವೆ. ಪ್ರತೀ ಡಿಸೆಂಬರ್, ಜನವರಿಯಲ್ಲಿ ಅಂಗಳಕ್ಕೆ ಮಣ್ಣು ಹಾಕಿ ವರೆದು ಸಾರಿಸಿ ಚೊಕ್ಕ ಮಾಡುತ್ತಿದ್ದರು. ಮಂಗಳ ಕಾರ್ಯಗಳು ಗೊತ್ತಾದರೆ ಅದಕ್ಕೆ ಇನ್ನಷ್ಟು ಮುತುವರ್ಜಿಯಿಂದ ನಡೆಯುತ್ತಿತ್ತು. ಚಪ್ಪರ ಏಳುತ್ತಲೆ, ವಾಚಣ್ಣ ಮಾವಯ್ಯ ಮಂಟಪ ಕಟ್ಟುತ್ತಾ ಇದ್ದರು. ನಾವು ಹೆಣ್ಣುಮಕ್ಕಳು ನೋಡುತ್ತ ಇದ್ದೆವು. ನೋಡುತ್ತ ಇದ್ದಂತೆ ಒಬ್ಬೊಬ್ಬರಾಗಿ ಮಂಟಪ ಹೊಕ್ಕೆವು. ಹೊರಬರುವಾಗ ಇಬ್ಬರಾಗಿದ್ದೆವು. ಮನೆಯಿಂದಲೇ ಬೇರೆಯಾಗಿದ್ದೆವು. ಮನೆ ಬಿಟ್ಟು ಹೊರಡುವುದೆಂದರೆ ಎಲ್ಲ ಎಲ್ಲವನ್ನೂ ಬಿಟ್ಟು ಹೊರಡುವುದು. ಮನೆ, ಅಂಗಳ, ಅಟ್ಟ, ದನ, ಮರ, ಪ್ರೀತಿಯ ಕೊರತಿ, ಸಮುದ್ರ ಹೀಗೆ ಎಲ್ಲವೂ. ಆಗ ನೋವು ತಿಳಿಯಲಿಲ್ಲ. ನೆನೆದರೆ ಈಗಲೂ ನಿಜವಾಗಿ ಹಸಿಹಸಿಯಾಗಿ ಕರುಳಬಳ್ಳಿ ಜಗ್ಗಿ ಎಳೆದ ಯಾತನೆ ಎನ್ನುತ್ತಾರೆ ವೈದೇಹಿ.

ಆ ದಿನಗಳಲ್ಲಿ ಮನೆಗಳಲ್ಲಿ ವಿಧವೆಯರಂತೂ ಎದ್ದು ಕಾಣುವಂತೆ ಇದ್ದರು. ಕೇಶ ಮುಂಡನ ಮಾಡಿಕೊಂಡು, ಕೆಂಪು ಸೀರೆಯುಟ್ಟುಕೊಂಡು! ಮನೆಯ ಆಗುಹೋಗುಗಳಲ್ಲಿ ಮನೆಯವರಂತೆಯೇ ಬೆರೆತವರು. ಅಜ್ಜಿಯಂತೆ ಬೆಚ್ಚಗಿನವರು. ಬದುಕಿನ ವ್ರತ ತೊಟ್ಟವರಂತೆ, ಸುಖದ ವ್ಯಾಖ್ಯೆಯನ್ನೇ ತಮ್ಮ ಕಾಲದ 'ಮರ್ಯಾದೆ'ಗನುಸಾರ ಬದಲಿಸಿಕೊಂಡವರಂತೆ ದಿನಮುಗಿಸಿ ನಡೆದರು. ಮಡಿಯ ಬಗ್ಗೆ ಅಂದು ನಮ್ಮಲ್ಲಿದ್ದ ವಿಕೃತ ಕಲ್ಪನೆಯ ಪರಿಣಾಮವಾಗಿ ಮಡಿ-ಮೈಲಿಗೆ ಮರ್ಯಾದೆಗಳೆಂಬ ಮೂರು ಮಕಾರಗಳಿಂದ ನಿರ್ದಿಷ್ಟವಾಗಿ ಬಳಲುತ್ತಿದ್ದರು. ಪ್ರೀತಿ ಗೌರವದ ಅಜ್ಜ, ಅಪ್ಪ, ಮಾವ ಭಾವ ಎಲ್ಲರ ಸಮ್ಮತಿ ಮೇರೆಗೇ ಮಗಳ, ಸೊಸೆಯ ಅಥವಾ ಸಂಬಂಧಿಕ ಹುಡುಗಿಯರ 'ಮಡಿ' ಅವರೆಲ್ಲರ ಪ್ರೀತಿಯ ನೆರಳಲ್ಲೇ ಆಗಲೇ ಬೇಕಾದ್ದ ಕರ್ಮದಂತೆ ನಡೆದು ಹೋಗುತ್ತಿತ್ತು. ಮಡಿ ಮಾಡಿದ ಮೇಲೆ ತಮ್ಮ ಕುಡಿಗೆ ಹೀಗಾಯಿತೆಂದು ಕೊರಗುತ್ತಿದ್ದವರೂ ಅವರೇ.

"ಹೆಣ್ಣುಮಕ್ಕಳೆಲ್ಲ ಆಯಾ ಕಾಲದ ಅನುಮತಿಗೆ ತಕ್ಕಂತಹ ಶಿಕ್ಷಣದೊಂದಿಗೆ ಮದುವೆಯಾದರೆ ಗಂಡುಮಕ್ಕಳೆಲ್ಲ ಹೆಚ್ಚಿಗೆ ಕಲಿಯಲು ಮಂಗಳೂರಿಗೆ, ಮದರಾಸಿಗೆ

ಹೋಗುತ್ತಿದ್ದರು. ಆಗ ಇವರೆಂದೂ ಮುಟ್ಟಲಾರದಂತಹ ಜ್ಞಾನರಾಶಿಯನ್ನು ಅವರು ಮುಟ್ಟಿ ಬಂದಿದ್ದಾರೆ ಅಂತ ಅನಿಸಿ ಭಯಮಿಶ್ರಿತ ಗೌರವ ಮೂಡುತ್ತಿತ್ತು. ಇವರೊಳಗೂ ಒಬ್ಬ ಓದುಗಳು ಎದ್ದಾಗಲೇ ಬರವಣಿಗೆಯೂ ಗಂಭೀರವಾಗುತ್ತ ಬಂತು... ಮದುವೆ ಎಂಬುದು ಲೇಖಕಿಯನ್ನು ನಿದ್ದೆಯಿಂದ ಎಚ್ಚರಿಸಿದ ಘಟನೆ. ಬಸಿರು, ಬಾಣಂತನಗಳ ನಡುವೆಯೆ ಇದ್ದಿದ್ದರೂ ಆ ಕುರಿತ ಪಿಸು ಮಾತುಗಳನ್ನೆಲ್ಲ ಹೇಳುತ್ತಿದ್ದರು. ಮುಗ್ಧವಾಗಿದ್ದರೂ ಸರಿಸಾಟಿಯವರೆದುರು ಎಲ್ಲ ತಿಳಿದವರಂತೆ ಸೋಗು ಹಾಕಿಕೊಂಡು ಮದುವೆಯಾಗಿ ಹೋಗುತ್ತಾರೆ. ಅತ್ತೆಮನೆ ಬದುಕು ಇವರನ್ನು ಸಂಪೂರ್ಣ ಗಂಭೀರವಾಗಿಸಿ ಅಂತರ್ಮುಖತೆಯನ್ನು ಹೆಚ್ಚಿಸಿತು. ಇದು ಅವರಿಗೆ ಬರವಣಿಗೆಯ ಅನಿವಾರ್ಯತೆಯನ್ನು ತಂದಿಟ್ಟಿತು. ಅಷ್ಟರಲ್ಲಿ ಲೇಖಕಿಗೆ ಎರಡು ಮಕ್ಕಳೂ ಆಗಿ, ಅವರ ನನ್ನ ದಿನಗಳು ಪೂರ್ತಿ ಕಂಗೆಡದಂತೆ ಕಾಪಾಡಿದವು. ಎರಡು ಬಸಿರು, ಬಾಣಂತನ ಮತ್ತು ಮಕ್ಕಳ ಸುಖವನ್ನು ಹನಿಬಿಡದೆ ಅನುಭವಿಸಿದರು. ತಮ್ಮ ಜೀವನದ ಅತ್ಯಂತ ಸುಖದ ಕ್ಷಣಗಳಲ್ಲಿ ಅವು ಒಂದಾಗಿ ಉಳಿದಿವೆ. ಏನೆಂದರೂ ಆಗ ತಾವು ಕಾಡಿನಲ್ಲಿ ಬಂದು ನಿಂತ ತಬ್ಬಿಬ್ಬು ಕರುವಿನಂತಿದ್ದರೆಂದು ಪುಣ್ಯಕ್ಕೆ ಅವರನ್ನು ಮೊಮ್ಮಗಳಂತೆ ಕಂಡ ಅಥವಾ ಅವರ ಅಜ್ಜನಂತೆ ಇದ್ದ ಮಾವನ (ಪತಿಯ ತಂದೆ) ಪ್ರೀತಿ ಅಭಿಮಾನಗಳು ಇವರಲ್ಲಿ ಆತ್ಮಸ್ಥೈರ್ಯ ತುಂಬಿದವು. ಪತಿಯಂತೂ ಸಜ್ಜನರಲ್ಲಿ ಸಜ್ಜನರಾಗಿದ್ದರಿಂದ ಸಾಹಿತ್ಯ, ಸಂಗೀತ, ನಾಟಕ, ಸಭೆ ಸಮಾರಂಭಗಳಿಗೆ ಬಿಡದೇ ಜೊತೆಯಲ್ಲೇ ಕರೆದುಕೊಂಡು ಹೋಗಿ ಇವರಿಗೊಂದು ಹೊಸಲೋಕವನ್ನೇ ತೆರೆದುಕೊಟ್ಟು ಬಿಟ್ಟರು. ನೊಂದಾಗೆಲ್ಲ "ನೀನು ಬರೆಯುವವಳು, ಮರೆಯಬೇಡ" ಎಂದು ಎಷ್ಟು ಸಲ ಎಚ್ಚರಿಸಿದರೋ ಇದೆಲ್ಲ ಇವರಂತೆ ಬೆಳೆದು ಬಂದ ಲೇಖಕಿಗೆ ಎಷ್ಟು ಅಗತ್ಯ ಎಂಬುದು ಅರಿತವರಿಗೆ ಮಾತ್ರ ಅರ್ಥವಾದೀತು ಎನ್ನುತ್ತಾರೆ. ಶಿವಮೊಗ್ಗ ಊರಂತೂ ವೈದೇಹಿಯವರಿಗೆ ಬಹಳ ಇಷ್ಟವಾಗಿತ್ತು. ಇವರನ್ನ ಸಂಪೂರ್ಣವಾಗಿ ಲೌಕಿಕ ಬದುಕಿನಾಚೆಯದಕ್ಕೆ ಪರಿಚಯಿಸಿದ ಊರು ಶಿವಮೊಗ್ಗವೇ ಆಗಿತ್ತು.

ಹೀಗೆ, ಮನೆಯೊಳಗೇ, ಮುಕ್ಕಾಲು ಪಾಲು ಹೆಂಗಸರೊಂದಿಗೆ ನಿಕಟವಾಗಿ ಬದುಕುವ ಲೇಖಕಿ ಅವರ ಬವಣೆ, ಕ್ರೌರ್ಯ, ಪರಸ್ಪರ ಹಿಂಸೆಗಳ, ನೇರ ಹಾಗೂ ಪರೋಕ್ಷ ಅನುಭವ ಪಡೆದವರು, ಬರಹ ಲೋಕಕ್ಕೆ ಅಂಟಿಕೊಂಡೆ ತಮ್ಮ ಕಾಲವನ್ನು ಅದರ ಹಿಂದಿ ಮತ್ತು ಮುಂದಿನ ಕಾಲದ ಜೊತೆ ಇಟ್ಟು ನೋಡಿಕೊಳ್ಳುತ್ತಿದ್ದಾರೆ. ಲೇಖಕಿಯ ಪುಟಗಳ ಲೇಖನದಲ್ಲಿ ತಮ್ಮೆಲ್ಲ ಕೌಟುಂಬಿಕ ಚಿತ್ರಗಳನ್ನು ದಾಖಲಿಸುವ ವೈದೇಹಿಯವರು ಅಂತಿಮವಾಗಿ ಇದು ಪ್ರೀತಿಯ ದೀಪ ಕೆಡುಗಾಳಿಗೆ ನಂದದಂತೆ ಕೈ ಅಡ್ಡ ಮಾಡಿ ಉಳಿಸಿಕೊಳ್ಳುವ ಹೋರಾಟವಷ್ಟೇ ಎನ್ನುತ್ತಾರೆ.

ವೈದೇಹಿಯವರಂತೆ ನಾಗವೇಣಿಯವರು ತಮ್ಮ ಕೌಟುಂಬಿಕ ಚಿತ್ರಗಳನ್ನು ತಮ್ಮ ಪ್ರಬಂಧಗಳಲ್ಲಿ ದಾಖಲಿಸಿರುವುದನ್ನು ಗಮನಿಸಬಹುದಾಗಿದೆ. ಆದರೆ ವೈದೇಹಿ 'ನಮ್ಮ ಲೋಕಗೀತೆ', 'ಲೇಖಕಿಯ ಪುಟಗಳು' ಲೇಖನದಲ್ಲಿ ತಮ್ಮ ಕೌಟುಂಬಿಕ ಚಿತ್ರಗಳನ್ನು ತಂದಂತೆ ಒಂದು ಪ್ರತ್ಯೇಕವಾದ ಲೇಖನವನ್ನೇ ನಾಗವೇಣಿ ಬರೆದಿಲ್ಲ ಬದಲಾಗಿ ಸಂದರ್ಭೋಚಿತವಾಗಿ ಅಲ್ಲಲ್ಲಿ ಎಳೆದು ತರುತ್ತಾರೆ. ಯಾವುದೋ ಒಂದು ವಿಚಾರವನ್ನು ಪ್ರಸ್ತಾಪಿಸಬೇಕಾಗಿದೆ ಅದಕ್ಕಾಗಿ ತಮ್ಮ ಕುಟುಂಬದ ಸ್ವಂತದ, ಅನುಭವದ ಯಾವುದೋ ಚಿತ್ರಣವನ್ನು ಪೂರ್ವ ಪೀಠಿಕೆಯ ರೂಪದಲ್ಲಿ ನೀಡುತ್ತಾ ಹೋಗುತ್ತಾರೆ.

'ಹೆಣ್ಣು ಮಾಯೆಯಲ್ಲ' ಲೇಖನದಲ್ಲಿ ಕಮಲಾಪುರದ ಕೆರೆಯಲ್ಲಿ ಮೀನು ಹಿಡಿಯುವ ಪಳನಿಯಪ್ಪನ ಹೆಂಡತಿ ಓಬಮ್ಮನ ತಾಯ್ತನದ ಕುರಿತಾಗಿ ಹೇಳಬೇಕಾಗಿದೆ ಅದಕ್ಕಾಗಿ ತಮ್ಮ ಹುಟ್ಟಿನ ಚಿತ್ರವನ್ನು ಓದುಗರ ಮುಂದಿಡುತ 'ಹೆಣ್ಣು' ಮಾಯೆಯಲ್ಲ ಅದೊಂದು ಶಕ್ತಿ. ಆಕೆಯ ಹೆಣ್ತನ, ತಾಯ್ತನ ಎಲ್ಲವನ್ನು ಮೀರುವಂತದ್ದು ಎಂಬುದನ್ನು ಈ ಲೇಖನದಲ್ಲಿ ಪ್ರಸ್ತಾಪಿಸುತ್ತಾರೆ.

"ಅಪ್ಪನ ಆಸೆಯ ಕೂಸಾಗಿ ನಾನಂತೂ ಹುಟ್ಟಿದವಳಲ್ಲ. ಅಮ್ಮನ ಐವರು ಹೆಣ್ಮಕ್ಕಳಲ್ಲಿ ಕೊನೆಯಾಕೆ. ಸೂಲಗಿತ್ತಿ ಪದುಮ ನನ್ನನ್ನು ಅಮ್ಮನ 'ಜಗತ್ತಿ'ನಿಂದ ಈ ಜಗತ್ತಿಗಿಳಿಸಿ ನಾಕು ಗಳಿಗೆಯೂ ಕಳೆದಿರಲಿಲ್ಲವಂತೆ! ಅಪ್ಪ ಹೆರಿಗೆ ಕೋಣೆಗೆ ರುಮು... ರುಮು ಬಂದವರೇ ಏನಿದು...! ಬೇಕಿತ್ತಾ ಮತ್ತೆ.... ಇದು! ಎಂದು ಅಮ್ಮನತ್ತ ಕೆಂಗಣ್ಣು ಬಿಡುವಷ್ಟರಲ್ಲಿ, ಅಮ್ಮ ಸುಸ್ತಲ್ಲೂ ಬಿರುಸಿನಿಂದಲೇ ಏನು... ಇದೇನು ಆಕಾಶದಿಂದ ಉದುರಿದ್ದಾ....? ಎಂದು ಮಾತಿನ ಪ್ರತಿಬಾಣ ಅಪ್ಪನತ್ತ ಬಿಡುವಷ್ಟರಲ್ಲಿ ಅಪ್ಪ 'ಕಾಲಿನಧೂಳು ಮೂಗಿಗೇರುವಷ್ಟು' ರಭಸದಲ್ಲಿ ಮನೆ ತಡಮೆ ದಾಟಿ ಬಿಟ್ಟಿದ್ದರಂತೆ!

ಹಾಗೆ ಮುಖ ಊದಿಸಿಕೊಂಡು ಹೊರಟುಹೋದ ಅಪ್ಪ... ಅಮ್ಮನಲ್ಲಿ ಮತ್ತೆ ಮಾತಾಡಿದ್ದು, ಅಮ್ಮ ಟೈಪಾಯ್ಡ್ ಜ್ವರ ಏರಿಸಿಕೊಂಡು, ಮೂರು ತಿಂಗಳ ಮಗುವನ್ನು ಮನೆಯಲ್ಲೇ ಬಿಟ್ಟು, ಪೇಟೆಯ ದೊಡ್ಡ ಆಸ್ಪತ್ರೆಯ ಮಂಚವೇರಿದಾಗ ಅಷ್ಟೇ. ತನ್ನ ಹಸುಗೂಸಿಗೆ ಒಮ್ಮೆ 'ತಾಯಿ ಹಾಲಿನ' ವ್ಯವಸ್ಥೆ ಮಾಡಿ ಎಂದು ಅಮ್ಮ ಅಪ್ಪನಲ್ಲಿ ಕಣ್ಣೀರಿಳಿಸಿದಾಗ, ಅಪ್ಪ ಹಿಂದೆಮುಂದೆ ನೋಡದೆ ನೇರ ಹೊಕ್ಕಿದ್ದು ಮರಕೆಲಸದ ಜನಾರ್ಧನ ಆಚಾರಿಯ ಹಿತ್ತಲನ್ನು! ಮುಂದೆ ಗಂಡನ ಅಣತಿಯಂತೆ ಜನಾರ್ಧನಾಚಾರಿಯ ಮಡದಿ ಬಾಣಂತಿ ಲಚುಮಿ ಆಚಾರ್ತಿ, ಒಂಭತ್ತು ತಿಂಗಳು ನನಗೆ ತಾಯಿ ಆದಳು. ಇಬ್ಬರು ಅಮ್ಮಂದಿರ 'ಪ್ರೀತಿಯ ಹಾಲು' ಕುಡಿದ ನಾನು... ಹಾಗೇ... ಅವರಿಬ್ಬರ ಪ್ರೀತಿಯಿಂದ ಬಲಿತು... ಕಲಿತು... ಬದುಕಿನ ದಾರಿ ಹಿಡಿದು ಘಟ್ಟವೇರಿದ್ದರೂ ನನ್ನ 'ಹಾಲಿನಮ್ಮ' ಲಚುಮಾಚಾರ್ತಿಯ ನೆನಪು ನನಗೆ ಈಗಲೂ ಹಸಿಹಸಿ!"[೧೬]

ಹೀಗೆ ತಮ್ಮ ಕೌಟುಂಬಿಕ ಚಿತ್ರಗಳನ್ನು ದಾಖಲಿಸಿದ ನಾಗವೇಣಿಯವರ ಇನ್ನೊಂದು ಲೇಖನ ಎಣ್ಣೆ ಬಂದಾಗ ಗಾಣ ಮುರಿದರೆ? ಇಲ್ಲಿಯೂ ಅಷ್ಟೇ ತಮ್ಮ ಕೆಲಸದ ನಿಮಿತ್ತ ಕಲ್ಕತ್ತ

ನಗರಕ್ಕೆ ಕಾಲಿಟ್ಟ ಮೊದಲ ದಿನಗಳಲ್ಲಿ ಪರಿಚಿತಳಾದ ಗೆಳತಿ ಋತುಪರ್ಣ ದಕ್ಷಿಣ ಕಲ್ಕತ್ತೆಯ ಬಂಗಲೆಯಲ್ಲಿ ಒಂಟಿಯಾಗಿರುವ ಶ್ರೀಮಂತ ಮುದಿವಿಧುರನಿಗೆ ಖಾಸಗಿ ಪರಿಚಾರಿಕೆಯಾಗಿ ಕೆಲಸ ನಿರ್ವಹಿಸುತ್ತಿರುವವಳು. ಋತುಪರ್ಣ ಮತ್ತು ಭಾವತಾರಣನ ನಡುವೆ ಇದ್ದ ಸುಮಧುರ ಸ್ನೇಹವನ್ನು ಮತ್ತು ಇದ್ದಕ್ಕಿದ್ದಂತೆ ಆತನ ಜೊತೆಗೆ ಮದುವೆಯನ್ನು ಋತುಪರ್ಣ ನಿರಾಕರಿಸುವುದಕ್ಕೆ ಕಾರಣವನ್ನು ಕೊಡಬೇಕಿದೆ. ಅದಕ್ಕಾಗಿ ತಮ್ಮ ಶಿಕ್ಷಣ ಕೆಲಸದ ಸಂದರ್ಭವನ್ನು ಪೀಠಿಕೆಯಾಗಿ ನೀಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ನಾಗವೇಣಿಯವರು ಅಮ್ಮನ ಕೊನೆಯ ಮಗಳಾದ ಕಾರಣ ಪದವಿ ಮುಗಿದೊಡನೆ ಹೆಚ್ಚಿನ ತಕರಾರುಗಳಿಲ್ಲದೆ ಮುಂದಕ್ಕೆ ಓದುವ ಅವಕಾಶ ಸಿಕ್ಕಿತು. ಇವರ ಅಕ್ಕಂದಿರು ತಮ್ಮ ಸರದಿ ಬಂದಾಗ 'ಹೆಚ್ಚಿನ ಓದಿಗೆ' ಅಮ್ಮನಲ್ಲಿ ಬೇಡಿಕೆಯ ಅರ್ಜಿಯನ್ನಿಟ್ಟಾಗ ಅಮ್ಮ **"ನೀನು ಇಷ್ಟು ಓದಿದ್ದು ಸಾಕು ಮಗ..., ಒಂದಿಟ್ಟು ಕಥೆ ಬೂಕು ಓದುದಕ್ಕೆ, ಗಂಡನಿಗೆ ಘನವಾದ ಕಾಗದ ಬರೆವಷ್ಟು ಬರೆವು (ಬರಹ–ವಿದ್ಯೆ) ಬಂದರೆ ಸಾಕು; ನೀವ್ ಮುಂದಕ್ಕೆ ಕಲಿತು... ಕೆಲಸ ಹುಡುಕಿ ನಮ್ಮನ್ನು ಸಾಕ್‌ಬೇಕಾಗಿಲ್ಲ. ನೀನ್ ಹೆಚ್ಚು ಕಲಿತ್ರೆ..., ಆ ನಿಮ್ಮ ಬರೆವಿಗೆ ತಕ್ಕ ಹುಡುಗನನ್ನು ತರ್ಬೇಕಾದ್ರೆ ನಮ್ಮ ಒಕ್ಕಲಿಗರಲ್ಲಿ ಲಕ್ಷಗಟ್ಟಲೆ ಬದಿ (ವರದಕ್ಷಿಣೆ) ಸುರಿಬೇಕಲ್ವ..., ನಿಮ್ಮಲ್ಲಿ ಕಲಿಕೆ ಇದೆ ಅಂತ ಹುಡುಗ್ರು ಬದಿಯಲ್ಲೇನಾದ್ರು ಮಾತ್ರ ಮಾಡುದಿದೆಯಾ...?! ಸಾಕು ಮಗ..., ಓದುದು ಕೈದು ಮಾಡಿ... ಮನೆ ಬಾಳ್ವೆ ಮಾಡೋದು ಹೇಗಂತ ಕಲ್ತುಕೊಳ್ಳಿ... ಸಾಕಷ್ಟೆ..."**[೧೭]

ನಾಗವೇಣಿಯವರು ಪದವಿ ಮುಗಿಸುವ ಕಾಲಕ್ಕೆ ಅವರಮ್ಮನ ಮನಸ್ಥಿತಿ ಬದಲಾಗಿ 'ಹೆಣ್ಣು ಮಕ್ಕಳು ಕಲಿತು... ಅವರ ಸ್ವಂತ ಕಾಲಲ್ಲಿ ಅವರು ನಿಲ್ಲುವಂತಾಗಬೇಕು ಎಂದು ಹೇಳುತ್ತಿದ್ದರಂತೆ. ಆದರೆ ಅವರ ಹೆಣ್ಮಕ್ಕಳು ಸ್ವಂತ ಕಾಲಲ್ಲಿ ನಿಲ್ಲಬೇಕಾದ್ದು ನನ್ನ ಹುಟ್ಟೂರಲ್ಲಿ ಅಥವಾ ತನ್ನ ಕಣ್ಣಳತೆಯಲ್ಲೇ ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲವಂತೆ. ಒಟ್ಟಿನಲ್ಲಿ ಪರಿಸ್ಥಿತಿ ಸ್ವಲ್ಪ ಬದಲಾಗಿದ್ದರಿಂದ ಹೆಚ್ಚಿನ ತಕರಾರಿಲ್ಲದೆ ಸ್ನಾತಕೋತ್ತರ ಶಿಕ್ಷಣವೂ ಮುಗಿಯಿತು. ಇನ್ನು ಉಳಿದದ್ದು ಮದುವೆ. ಕಲಿಕೆಯ ನಂತರ ಮನೆಯಲ್ಲಿ ಮದುವೆ ವಿಚಾರ ಕೈಗೆತ್ತಿಕೊಳ್ಳುವಷ್ಟರಲ್ಲಿ ಇವರಂತೂ ನಂಗೆ ಈಗ ಮದುವೆ ಬೇಡ... ಮೊದ್ಲು ನಾನು ಕೆಲ್ಸಕ್ಕೆ ಸೇರ್ಬೇಕು... ಆಮೇಲೆ ವರದಕ್ಷಿಣೆ ಕೇಳದ ಹುಡುಗನನ್ನು ಮದ್ವೆಯಾಗ್ಬೇಕು ಎಂಬ ಆಲಾಪವನ್ನು ಅಮ್ಮನ ಕಿವಿಬೀಳಿಗೆ ಮಾತ್ರವೇ ತಲುಪುವಷ್ಟು 'ಮಧುರವಾಗಿ' ಮಾಡಿದ್ದಿದೆ. ಆದರೆ ಆ 'ಮಧುರ ಆಲಾಪ', ಅಮ್ಮನ 'ಪರಂಪರೆಯ ಪಿತ್ತ'ವನ್ನು ಕೆರಳಿಸಿ ಇನ್ನೇನು ಶಿಸ್ತುಕ್ರಮ ನಡೆವಷ್ಟರಲ್ಲಿ... ಕಲ್ಕತ್ತೆಯಿಂದ ಕೇಂದ್ರ ಸರ್ಕಾರಿ ಹುದ್ದೆಯೊಂದು ಇವರ ಮನೆಬಾಗಿಲ ದಾರಂದಕ್ಕೆ ಆತುನಿಂತು ಕರೆಯುತ್ತಿದೆ ಎನ್ನುವಾಗ..., ಇದ್ದಕ್ಕಿದ್ದಂತೆ ಅದನ್ನು ಕಸಬರಿಕೆ ಹಿಡಿದು ಓಡಿಸಲು ನಮ್ಮ

ಮನೆಯವರೇನು ಮೂರ್ಖರೇ!? ಆದರೆ, ಮಗಳು ಕೆಲಸಮಾಡಬೇಕಾದ ಸ್ಥಳ ಕಲ್ಕತ್ತಾ- ಎಂದಾಕ್ಷಣ ಅಮ್ಮನ ಮನೋವ್ಯಾಪಾರವೆಲ್ಲ ಒಂದು ಕ್ಷಣ ನಿಂತುಹೋಗಿತ್ತು.

"ಬೇಡವೇ ಬೇಡ ನಿಂಗೆ ಆ ಕೆಲ್ಸ..... ನಿನ್ನ ಕೆಲ್ಸದ ಕಣ್ಣಿಗೆ ಬೆಂಕಿಬಿತ್ತು. ಒಬ್ಳೇ ಹೆಣ್ಣುಮಗಳನ್ನ ಅಷ್ಟು ದೂರಕ್ಕೆ... ಊರು ಭಾಷೆಗೊತ್ತಿಲ್ಲದ ಆ ಊರಿಗೆ ಕಳ್ಸಿದರೆ ಯಾರಾದರೂ ಏನಂದರೂ?... ಬೇಡ ನಾವಿಲ್ಲಿ ನಿನ್ನ ಚಿಂತೆಯಲ್ಲಿ ಸಾಯೋದು ಬೇಡ: ಗತಿ ಗೋತ್ರವಿಲ್ಲದ ಆ ಊರಲ್ಲಿ ನೀ ದುಡಿಯೋದು ಬೇಡ...' ಹೀಗೆ ಅಮ್ಮ ಭೂಮಿ ಆಕಾಶ ಒಂದಾಗುವಂತಹ ಸಿಟ್ಟಿನಲ್ಲಿ ತನ್ನ ನಿರ್ಣಯವನ್ನು ಮಂಡಿಸಿದಾಗ ನನ್ನ ನಿಲುವಿನಲ್ಲಿ ಎಳ್ಳಷ್ಟು ಬದಲಾವಣೆಯಾಗಿರಲಿಲ್ಲ. ಕೊನೆಗೆ ಅಣ್ಣಂದಿರ ಸಲಹೆಗೆ ಬಣ್ಣದ ಅಮ್ಮ ನನ್ನೆದುರು ಎರಡು ಷರತ್ತುಗಳನ್ನಿಟ್ಟಿದ್ದರು. ಆ ಷರತ್ತುಗಳೆಂದರೆ: ಗುರ್ತು ಪರಿಚಯವಿಲ್ಲದ ಊರದು, ತನಗೆ ಹೇಳುವವರು ಕೇಳುವವರು ಯಾರಿಲ್ಲ... ಹಾಗೂ ಹಾರುವುದಕ್ಕೆ ಬಲಿಷ್ಟವಾದ ರೆಕ್ಕೆಯಿದೆ ಎಂಬ ಸೊಕ್ಕಿನಿಂದ ಹೇಗ್ಗೇಗೋ ಹಾರಾಡುವಂತಿಲ್ಲ. ಹಾಗೆಯೇ ಒಂದೆರಡು ವರ್ಷಗಳ ಮಟ್ಟಿಗಷ್ಟೇ ಆ ಕಲ್ಕತ್ತಾ: ನಂತರ ಈ ಕಡೆಗೆ ವರ್ಗಾವಣೆ ಕೇಳಬೇಕು. ವರ್ಗಾವಣೆ ಸಿಗದಿದ್ದರೆ ಕೆಲಸ ಬಿಟ್ಟು ಬರಬೇಕಷ್ಟೆ: ನಂತರ ಮದುವೆ ಗ್ಯಾರಂಟಿ..."[೧೮]

ಹೀಗೆ ಷರತ್ತುಗಳನ್ನು ಒಪ್ಪಿ ವಂಗದೇಶಕ್ಕೆ ಕಾಲಿಡುವಂತಾಯಿತು ಎನ್ನುವ ಲೇಖಕಿ ಇಂಥದ್ದೆ ಇನ್ನು ಕೆಲವು ನೆನಪುಗಳನ್ನು 'ಧೂಳಿನಿಂದ ಧೂಳಿಗೆ' ಅಂಕಣ ಬರಹದಲ್ಲಿ ದಾಖಲಿಸುತ್ತಾರೆ. ಈ ಬರಹದಲ್ಲಿ ನಾಗವೇಣಿಯವರು ತಮ್ಮ ತುಂಟತನಗಳ ಜೊತೆಗೆ ಕೌಟುಂಬಿಕ ಚಿತ್ರಗಳನ್ನು ನೀಡುತ್ತಾರೆ. ತಾವು ಚಿಕ್ಕಂದಿನಲ್ಲಿ ಸಾಕಷ್ಟು ಮೈಗಳ್ಳಿಯಾಗಿದ್ದಾಗಿ ಹೇಳಿಕೊಳ್ಳುತ್ತಾರೆ. 'ಹೋಗೆ... ಕಸಬರಿಕೆ ಹಿಡಿದು ಅಂಗಳ ಗುಡಿಸು... 'ಇಲ್ಲ... ನನ್ನ ಕೈಲಿ ಆಗಲ್ಲಮ್ಮ ನಂಗೆ ಕೆಮ್ಮು ಬರುತ್ತೆ... ಆ ಧೂಳಿಗೆ', ಆಗಲ್ವಾ...? ಆಯ್ತು ಹಾಗಾದ್ರೆ ಅಡಿಗೆಮನೆಗೆ ಹೋಗಿ ಒಂದು ಗಡಿ ತೆಂಗಿನಕಾಯಿ ತುರಿದು ಚಟ್ನಿ ಅರಿ... ಹೋಗು... ಹೋಗಲ್ಲ, ನಾನು, ಅರೆಯುವ ಕಲ್ಲಿನ ತಲೆ ಹಿಡಿದ್ರೆ ನನ್ನ ಕೈ ಹಾಳಾಗುತ್ತೆ... ಹಾಗಂದ್ರೆ ಹೇಗೇನೆ? ಪಾತ್ರೆ ತೊಳೆ ಅಂದ್ರೆ ನಿನ್ನ ಅಂಗೈ ಗೆರೆ ಸವಿಯುತ್ತೆ... ಬಚ್ಚಲ ಒಲೆಗೆ ಬೆಂಕಿ ಹಾಕು ಅಂದೆ ಮೂಗು ಬಾಯಿ ಹೊಗೆ ಕುಡಿಯುತ್ತೆ ಅಂತ ದಿನಾ ರಂಪ ಮಾಡ್ತಿ...!

ಬೇಕಿದ್ರೆ ಬಚ್ಚಲ ಹಂಡೆಗೆ ನೀರು ತುಂಬಿಸ್ತೀನಿ...' 'ಬಿಕ್‌ನಾಸಿ... ಆ ಕೆಲ್ಸ ಮಾಡಲು ನೀನೆ ಬೇಕಾ? ನಲ್ಲಿಯ ಕಿವಿ ಹಿಂಡಿದ್ರೆ ಸಾಕು... ಹಂಡೆ ತುಂಬುತ್ತೆ; ದಿಂಡೆ ಬಸವಿ ನೀನು, ಹೀಗೇನೆ... ಕೆಲಸ ಕದ್ದುಕೋ, ನಾಳೆ ಗಂಡನ ಮನೇಲಿ ಅತ್ತೆ ಅಟ್ಟ ಏರಿಸಿ ಮೆಣಸಿನ ಹೊಗೆ ಹಾಕ್ತಾಳೆ ಅಷ್ಟೇ.' ಅಂದ್ರೆ ಹಾಕ್ಲಿ ಬಿಡಿ... ಅಲ್ಲಿ ಎಲ್ಲಾ ಕೆಲ್ಸ ಮಾಡ್ತೇನೆ. ಈಗ ಇವರೆಲ್ಲ ಇದ್ದಾರಲ್ಲಾ ಅಂತ ಅಕ್ಕಂದಿರತ್ತ ಕೈ ತೋರಿಸಿದ್ರೆ ಅಮ್ಮನಿಗೆ ಪಿತ್ತ ಕೆರಳಿ 'ಅವ್ರನ್ನ ಕೆಲ್ಸ ಮಾಡ್ಲೊದಕ್ಕೆ ನೀ ಹೇಳ್ಬೇಕೇನೆ... ಮೈಗಳ್ಳಿ, ಅವ್ರ ಮದ್ವೇ ಆದ್ಮೇಲೆ... ಮನೆಗೆಲಸದ ನೊಗ ನಿನ್ಮೇಲೆ ನೆನಪಿರ್ಲಿ. ನಾಳೆ ನೀನು ಗಂಡನ

ಮನೆಗೆ ಹೊಕ್ರೆ 'ಅವಳೆಂತಹ ತಾಯಿ, ಮಗಳ ಉಸುರನ್ನ ನೀರಿಗೆ ಸೋಕದಂತೆ ನೋಡ್ಕೊಂಡವಳು...' ಎಂದು ಅವ್ರು ನನ್ನ ಮುಖಕ್ಕೆ ಕ್ಯಾಕರಿಸಿ ಉಗಿತಾರಪ್ಪೆ ಅಂದ್ರೆ, ಆಯ್ತು ಆಯ್ತು, ಅವರೆಲ್ಲರ ಮದ್ವೆ ಆದ್ಮೇಲೆ ನಾನೇ ಮನೆ ಕೆಲ್ಸ ಎಲ್ಲ ಮಾಡ್ತೀನಿ ಅಂತಿದ್ರಂತೆ.

ಹೀಗೆ ಅಮ್ಮನ ಬಯ್ಗುಳು ಕೇಳುತ್ತಾ... ಮನೆಗೆಲಸದಲ್ಲಿ ಮೈಗಳ್ಳಿಯಾಗಿ ಒಂದು ಹಂತದ ವಿದ್ಯಾಭ್ಯಾಸ ಮುಗಿಸುವಷ್ಟರಲ್ಲಿ ಅಕ್ಕಂದಿರಿಗೆಲ್ಲರಿಗೂ ಮದುವೆಯಾಗಿತ್ತು. ಆದರೆ ಮನೆಗೆಲಸ ಇವರ ಹೆಗಲಿಗೆ ಬರುವಷ್ಟರಲ್ಲಿ ಸರಕಾರಿ ಹುದ್ದೆಯ ಬಾಲಹಿಡಿದು ಕಲ್ಕತ್ತಾ ನಗರಕ್ಕೆ ಪರಾರಿಯಾಗಿದ್ದರಂತೆ. ಹೀಗೆ ಮೂರ್‍ನಾಲ್ಕು ವಸಂತ ಬಂದು ಹೋಗುವಷ್ಟರಲ್ಲಿ ಹಂಪಿಯಲ್ಲಿ ತಮ್ಮದೇ ಕುಟುಂಬದ ಒಡತಿಯಾದಾಗ ಹೊಸ ಕುಟುಂಬ ಎಂದರೆ ಗೊತ್ತಲ್ಲ... ಅಲ್ಲಿ ಮೈಗಳ್ಳತನಕ್ಕೆ ಅವಕಾಶವಿಲ್ಲದೆ ಮನೆಕೆಲಸದ ಹೊರೆ ಮೈ ತುಂಬಾ ಅವುಚಿಕೊಂಡು 'ಮಾಡಿ ಕಲಿ, ನೋಡಿ ತಿಳಿ' ಎಂಬ ಪ್ರಯೋಗ ಮಾಡುತ್ತಲೇ ನಿಧಾನಕ್ಕೆ ಮನೆಕೆಲಸವನ್ನು ಕಲಿಯುವುದನ್ನು ರೂಢಿಸಿಕೊಂಡರು.

ಮುಂದುವರೆದು 'ಮೀನು-ಮುಳ್ಳಿನ ಮೀಮಾಂಸೆ' ಲೇಖನದಲ್ಲಿ ಬದುಕಿನ ಪಯಣದಲ್ಲಿ ಎದುರಾಗುವ ಹಲವಾರು ಬಗೆಯ ಸಂಕಷ್ಟಗಳನ್ನು ಎದುರಿಸಿ ಬದುಕು ಸಾಗಿಸುವ ಬಗ್ಗೆ ಅಮ್ಮ ಬೋಧಿಸಿದ್ದಾಗಿ ಹೇಳುತ್ತಾರೆ. ತಾಯಿ ಕೋಳಿ... ತನ್ನ ಹೂ ಮರಿಗಳಿಗೆ ಹದ್ದು ಕಾಗೆಗಳಿಂದ ರಕ್ಷಿಸಿಕೊಳ್ಳುವ ಪಾಠ ಹೇಳಿಕೊಡುವುದು ಯಾವ ಭಾಷೆಯಲ್ಲಿ... ಯಾವ ಭಾವದಲ್ಲಿ? ಒಟ್ಟಿನಲ್ಲಿ ಮರಿಗಳು ಕಲಿತಿರುತ್ತವೆ- ತಾಯಿಯಿಂದ ರಕ್ಷಣಾ ಪಾಠ ಕಲಿಯದವುಗಳು ನರಿ ಹದ್ದು ಕಾಗೆಗಳ ಪಾಲು ಅಷ್ಟೇ. ಆ ಹಂತದಲ್ಲಿ ತಾಯಿಂದ ತಾನೆ ಏನು ಮಾಡಲಾಗುತ್ತೆ? ಕಣ್ಣೀರೊಂದನ್ನು ಬಿಟ್ಟು. ಅಮ್ಮ ಇವರಿಗೆ ಮೀನು ತಿನ್ನುವುದನ್ನು ಕಲಿಸುವ ಬಾಲ್ಯದ ಘಟ್ಟವದು; ಹಸೀ ಬಾಲ್ಯ ತಿನ್ನುವ ಯಾವ್ಯಾವ ಮೀನುಗಳಲ್ಲಿ ಎಷ್ಟೆಷ್ಟು ಮುಳ್ಳುಗಳಿವೆ? ಯಾವುದರಲ್ಲಿ ಮುಳ್ಳಿಲ್ಲ, ಮುಳ್ಳಿರುವುದನ್ನು ಗುರುತಿಸುವುದು ಹೇಗೆ? ಮೀನೇನೋ ರುಚಿ. ಆದರೆ ಅದರ ಮುಳ್ಳೆಷ್ಟು ಅಪಾಯಕಾರಿ? ಬಾಯಂಗಳವನ್ನು ಮುಳ್ಳುಗಳಿಂದ ಹಿಂಸಿಸಿಕೊಳ್ಳದೆ ಮುಳ್ಳುಗಳನ್ನು ಅತ್ತಾಗೆ ದೂಡಿ ಮಾಂಸವನ್ನಷ್ಟೆ ಜಾಣ್ಮೆಯಿಂದ ತಿನ್ನೋದು ಹೇಗೆ...? ಹೀಗೆ ಉಣ್ಣುವ ಹೊತ್ತಲ್ಲಿ ಮುಳ್ಳು-ಮಾಂಸದ ಮೀಮಾಂಸೆಯನ್ನು ನನಗೆ ಬೋಧಿಸಿದ ಅಮ್ಮ ಮುಂದೆ ಬದುಕಿನ ಪಯಣದಲ್ಲಿ ಬದುಕಿಗೆ ಎರವಾಗಬಹುದಾದ ಹಲವಾರು ಬಗೆಯ 'ಮುಳ್ಳುಗಳ' ಬಗ್ಗೆಯೂ ಅಮ್ಮ ಬೋಧಿಸಿದ್ದಾಳೆ. ಅಮ್ಮ ಎದೆಹಾಲು ಉಣಿಸುವಾಗಲೇ... ಕಿವುಚಿದ ಅನ್ನದ ಜೊತೆ ಮೀನಿನ ಮಾಂಸ ತಿನ್ನಿಸುತ್ತಲೇ... ಮುಳ್ಳು ನೀಡುವ 'ನೋವನ್ನು' ಹದವಾಗಿ ನನಗೆ ಉಣಿಸುತ್ತಾ... ಮುಳ್ಳಿನಿಂದ ಯಾವತ್ತೂ ದೂರವಿರುವಂತೆ ಎಚ್ಚರಿಸಿದ್ದನ್ನು ನೆನಪಿಸಿಕೊಳ್ಳುತ್ತಾರೆ.

ದೀಪಾವಳಿ ಮರಳಿಬಂತೆಂದರೆ ತಮ್ಮೊಳಗಿನ ನೆನಪಿನ ಹಣತೆಗಳು ಹೊತ್ತಿ ಉರಿಯತೊಡಗುತ್ತವೆ ಎನ್ನುವ ನಾಗವೇಣಿಯವರು ತಮ್ಮ ಕುಟುಂಬದಲ್ಲಿ ವಿಶೇಷವಾಗಿ ಆಚರಿಸುತ್ತಿದ್ದ ದೀಪಾವಳಿ ಹಬ್ಬದ ಕುರಿತಾಗಿ ಪ್ರಸ್ತಾಪಿಸುತ್ತಾರೆ. ತುಳುವರಿಗೆ ಇರುವುದೊಂದೇ ಹಬ್ಬವೇನೋ ಎನ್ನುವಂತೆ ಈ ಹಬ್ಬವನ್ನು ಅವರು ಕರೆಯುವುದೇ 'ಪರ್ಬ' ಎಂದು. ಪರ್ಬ ಅಂದರೆ ದೀಪಾವಳಿ ಹಬ್ಬ ಎಂದು. ಕುಟುಂಬದಲ್ಲಿ ಯಾವುದೇ ಹೊಸ ಮಾತುಕತೆ, ವ್ಯವಹಾರ, ಶುಭನಿರ್ಧಾರ, ಶುಭಕಾರ್ಯ ನಡೆಯುವುದಿದ್ದರೂ 'ಅದು ಪರ್ಬದ ನಂತರ ನೋಡುವ ಮಾರಾಯ್ರ...' ಎನ್ನುವುದು ಇಲ್ಲಿಯ ವಾಡಿಕೆಯ ಮಾತು. ಪರ್ಬದ ಮೊದಲ ದಿನ 'ಮೀಯುವ ಹಬ್ಬ' ಅಂದರೆ ನರಕಚತುರ್ದಶಿ.

'ಇಕೊಳೆ ಮಾರಾಯ್ತಿ... ಮುಂದಿನ ತಿಂಗಳಲ್ಲಿ ಇಂತಿಂಥ ದಿನ ಮೀಯುವ ಹಬ್ಬ; ಅದರ ಮರುದಿನ ಅಂಗಡಿಪೂಜೆ. ಅದರ ಮರುದಿನ ಗೋಪೂಜೆ ಮತ್ತು ಬಲೀಂದ್ರನ ಪೂಜೆ'... ಎಂದು ಶಾಂಭಟ್ರ ಹೆಂಡತಿ ರುಕುಣಿಯಮ್ಮನ ಬಾಯಿಂದ ಹಬ್ಬದ ಮಾತು ಉದುರಿದರೆ ಸಾಕು ಮರುದಿನದಿಂದಲೇ ನನ್ನ ಅಮ್ಮನ 'ಪರ್ಬ'ದ ತಯಾರಿ ಆರಂಭವಾಗುತ್ತಿತ್ತು. ಮನೆಯ ಅಟ್ಟ ಗುಡಿಸುವ ಮೂಲಕ ಪರ್ಬದ ತಯಾರಿ ಸಂಭ್ರಮ ನಿಧಾನಕ್ಕೆ ಅಂಗಳಕ್ಕೆ ಅಡರಿಕೊಳ್ಳುತ್ತಿದ್ದಂತೆ ಮನೆಯ ಅಟ್ಟ ಗುಡಿಸುವುದೆಂದರೆ ಕೇವಲ ದೈಹಿಕ ಕ್ರಿಯೆಯಲ್ಲ, ಅದೊಂದು ಭಾವನಾತ್ಮಕ ಕ್ರಿಯೆಯೂ ಹೌದೆನ್ನುತ್ತಾರೆ. ಅಮ್ಮ ಅಟ್ಟದ ಮೇಲಿದ್ದ ಅಮ್ಮನ ಅಜ್ಜಿ, ಮುತ್ತಜ್ಜಿ ಕಾಲದ ಹಳೆಯ ಸಾಮಗ್ರಿಗಳನ್ನು ನಿಡಿದಾದ ನಿಟ್ಟುಸಿರಿನ ಜೊತೆ ಆ ತನ್ನ ಪರಿಕರಗಳಿಗೆ ಸಂಬಂಧಿಸಿದ 'ಕಥೆ'ಗಳನ್ನು ಮಕ್ಕಳೆದುರು ಬಿಚ್ಚಿಡುತ್ತ ಅವುಗಳ 'ಸಾಧನೆ'ಗಳನ್ನು ರಸವತ್ತಾಗಿ ವರ್ಣಿಸುತ್ತಾ ಅವೆಲ್ಲವನ್ನು ಪ್ರೀತಿಯಿಂದ ತೊಳೆದು, ಒರೆಸಿ ಮತ್ತು ಅವುಗಳಿಗೆ 'ಹೊಸ ವ್ಯಕ್ತಿತ್ವ'ವನ್ನು ದಯಪಾಲಿಸುವ ಪರಿಯಂತೂ ಅತ್ಯಂತ ಭಾವನಾತ್ಮಕವಾದುದು. ಚಾವಡಿಯಿಡೀ ಕಣ್ಣಪಿಳುಕಿಸುತ್ತ ಅಮ್ಮನ ಮಕ್ಕಳನ್ನು ಮತ್ತು ಒಕ್ಕಲು ಆಳುಗಳನ್ನು ನೋಡುತ್ತಿದ್ದ ಆ ಹಳೆಯ ವಸ್ತುಗಳೇನು ಒಂದೇ ಎರಡೇ?! ಹತ್ತಾರು. ಅತೊಂದುರ್ದಕರ (ಹಬೆಪಾತ್ರೆ), ಉಗುಳು ಪಾತ್ರೆ (ಪೀಕದಾನಿ) ಹಲವು ಹತ್ತು ಬಗೆಯ ವಿನ್ಯಾಸದ ಹಿತ್ತಾಳೆ ಮತ್ತು ತಾಮ್ರದ ಕೊಡಗಳು ಇತ್ಯಾದಿ. ಪ್ರತೀ ಪರ್ಬದಲ್ಲೂ ಅಮ್ಮ ಹೀಗೆ ತನ್ನ ಹಿಂದಿನ ತಲೆಮಾರುಗಳನ್ನು ನೆನಪಿಸುವ 'ಒಡವೆ'ಗಳನ್ನು ಚಾವಡಿಯಲ್ಲಿ ಅಂದವಾಗಿ ಜೋಡಿಸಿಡುತ್ತಿದ್ದಾರೆ, ಮಕ್ಕಳುಪಡುವ ಸಂತೋಷ ಅಷ್ಟಿಷ್ಟಲ್ಲ: **"ಅಮ್ಮನ ಅಮ್ಮ ನಾಗಮ್ಮಕ್ಕ, ನಾಗಮ್ಮಕ್ಕೆಯ ಅಮ್ಮ ಉಮ್ಮಕ್ಕೆ, ಉಮ್ಮಕ್ಕೆಯ ಅಮ್ಮ ಪದ್ಮಕ್ಕ... ಎಲ್ಲರೂ ತಮ್ಮ ತಮ್ಮ ಆಡಳಿತ ಕಾಲದ ಪರಿಕರಗಳಲ್ಲಿ ಆತ್ಮವಾಗಿ ಚಾವಡಿಯಲ್ಲಿ 'ಆಸೀನ'ರಾಗಿರುವಾಗ... ನಮ್ಮ ಅಪ್ಪ, ಚಾವಡಿ ಪ್ರವೇಶಿಸಿದರೆ ಸಾಕು ಅಲ್ಲಿನ ವಾತಾವರಣವೇ ಬದಲಾಗುತ್ತಿತ್ತು. ಅಪ್ಪನಿಂದ ಹಲವು ಟೀಕೆಗಳು ಹಾರಿ ಬರುತ್ತಿದ್ದುದುಂಟು.**

ಅವುಗಳಲ್ಲಿ ಸದಾ ನನಗೆ ನೆನಪಿನಲ್ಲಿರುವ ಒಂದು ಟೀಕೆ ಎಂದರೆ; 'ಅಬ್ಬಬ್ಬಬ್ಬಾ..., ನಮ್ಮ ಅಳಿಯಕಟ್ಟಿನ ಅರಸಿಯರು ಮತ್ತೆ ಅಟ್ಟದಿಂದ ಕೆಳಗೆ ಇಳಿದಿದ್ದಾರೊ...? ಅವರನ್ನೆಲ್ಲ ಅವತ್ತು ಎತ್ತಿ ಅಟ್ಟದಲ್ಲಿ ಕೂರಿಸಿದ್ದೆನಲ್ಲ; ಅಲ್ವೇ ಈ ತಾಮ್ರದ ಹಂಡೆ ಇದೆಯಲ್ಲಾ... ಅದನ್ನು ನೋಡಿದ್ರೆ ಸಾಕು ನನ್ಗೆ...'[೧೯]

ಅಳಿಯ ಕಟ್ಟು ಕುಟುಂಬ ವ್ಯವಸ್ಥೆಯನ್ನು ಸದಾ ವಿರೋಧಿಸುತ್ತಿದ್ದ ಅಪ್ಪನ ಮಾತಿನೊಳಗಿರುವ ವ್ಯಂಗ್ಯ ಅಮ್ಮನನ್ನು ತಿವಿಯದೇ ಇರುತ್ತಿರಲಿಲ್ಲ. ಹಳೆಯ ಪರಿಕರಗಳು ನನ್ನಮ್ಮನ ನೆನಪು, ಸಂವೇದನೆಯನ್ನು ಒಂದು ಹದದಲ್ಲಿ ಮೀಟುತ್ತಿದ್ದರೆ, ಅವು ಅಪ್ಪನ ಸಂವೇದನೆ, ನೆನಪನ್ನು ಮೀಟುತ್ತಿದ್ದದೇ ಬೇರೆ ರಿದಂನಲ್ಲಿ ಅಪ್ಪ ದೀಪಾವಳಿ ಸಂದರ್ಭದಲ್ಲಿ ಹಲವು ಬಾರಿ ತನ್ನ ಮಕ್ಕಳೊಡನೆ ಅಳಿಯಕಟ್ಟು ವ್ಯವಸ್ಥೆ ತನಗೆ ಕೊಟ್ಟ ನೋವನ್ನು ಹಂಚಿಕೊಂಡದ್ದಿದೆ. ನಾಳೆ ಮೀಯುವ ಹಬ್ಬವೆಂದರೆ ಹಬ್ಬಕ್ಕೆ... ಇವತ್ತು ಸಂಜೆಗೆ ನಮ್ಮ ಹಂಡೆಗೆ ಅಲಂಕಾರ ಸೇವೆ ಆರಂಭವಾಗುತ್ತಿತ್ತು. ಅಮ್ಮನ ಎಲ್ಲ ಮಕ್ಕಳೂ ಆ ತಾಮ್ರದ ಹಂಡೆಯ ಮೈಮೇಲೆ ಜೇಡಿಮಣ್ಣಿನ ಚಿತ್ತಾರವನ್ನು ತಮ್ಮ ಮನಸ್ಸು – ಸಾಮರ್ಥ್ಯಕ್ಕನುಗುಣವಾಗಿ ಮಾಡಿ ಮುಗಿಸುತ್ತಿದ್ದರು. ಚಂದದ ಗೊಂಡೆ ಹೂವಿನ ಮಾಲೆ ಹಾಕಿದ ನಂತರ ಹಿತ್ತಲ ಬಾವಿಯಿಂದ ನೀರು ಹೊತ್ತು ತಂದು ಹಾಕಿ ಹಂಡೆಯೊಳಗೊಂದು ನಾಣ್ಯ ಹಾಕಿ, ದೀಪ ಹಚ್ಚಿಟ್ಟು ಅಡ್ಡ ಬಿದ್ದು ನಮಸ್ಕರಿಸಿ ಮರುದಿನ ದೇವರು ಹುಟ್ಟುವ ಮೊದಲೆ ಒಲೆಗೆ ಉರಿಹಾಕಿ ಎಲ್ಲರ ಮೈಗೂ ಎಣ್ಣೆ ಹಚ್ಚುವ ಕಾರ್ಯ.

"ಎಣ್ಣೆ ಹಚ್ಚಿದ ಮಕ್ಕಳೆಲ್ಲ ಬಚ್ಚಲು ಮನೆಯಿಂದ ಮಿಂದು ಬಂದೊಡನೆ ನಂತರದ ಸರದಿ ಅಪ್ಪನದು. ಅಪ್ಪ ತನ್ನ ಸರದಿಯಂತೆ ಬಚ್ಚಲಮನೆ ಹೊಕ್ಕು... ಒಂದು ತಂಬಿಗೆ ನೀರು ಸುರಿದುಕೊಂಡ ಸದ್ದು ಕೇಳಿಸಿಕೊಂಡೊಡನೆ, ಅಮ್ಮ ಬಚ್ಚಲು ಮನೆಯ ಬಾಗಿಲು ಬಡಿದು ಹೇಳವುದಿತ್ತು– 'ನಮ್ಮ ನೀರ ಹಂಡೆ ನಾಗಮ್ಮಕ್ಕೆಯ ಎದುರು ಎಲ್ಲರೂ ಸಮಾನರು ಮಾರಾಯ್ರೇ..., ಆಕೆಯ ದೊಡ್ಡತನದ ಎದುರು ಆಳು ಬತ್ತಲಾಗಬೇಕು... ಅರಸನೂ ಬತ್ತಲಾಗಬೇಕು..., 'ನೀರು ಹಾಕ್ಕೊಂಡು ಚೆನ್ನಾಗಿ ಮಿಂದು ಬನ್ನಿ..., ನಾಗಮ್ಮಕ್ಕ ನಿಮ್ಮನ್ನು ಇನ್ನಷ್ಟು ತೊಳೆದು ಕಳಿಸಲಪ್ಪ..."[೨೦] ಇದುವೇ ನಮ್ಮ ಮೀಯುವ ಹಬ್ಬ – ನಮ್ಮನ್ನು ನಗುವಲ್ಲಿ ಮೀಯಿಸುತ್ತಿದ್ದ ಹಬ್ಬ ಈಗ ಅಮ್ಮ – ಅಪ್ಪನಿಲ್ಲದ ಮೇಲೆ ಅದೀಗ ಬರೇ 'ಮೀಯುವ ಹಬ್ಬ' ಅಷ್ಟೆ ಎನ್ನುತ್ತಾರೆ ನಾಗವೇಣಿ.

ವೈದೇಹಿಯವರು ತಮ್ಮ 'ಲೇಖಕಿಯ ಪುಟಗಳು' ಲೇಖನದಲ್ಲಿ 'ದೀಪಾವಳಿ'ಯ ನೆನಪಿನ ಹಣತೆ ಹಚ್ಚುತ್ತಾರೆ. ಈ ಹಬ್ಬದ ಕುರಿತಾಗಿ ಆಯಾಯ ಪ್ರದೇಶಗಳ ಆಚರಣೆಯಲ್ಲಿ ಕೆಲ ವ್ಯತ್ಯಾಸಗಳಿರಬಹುದೇ ಹೊರತು ಉಮೇದಿನಲ್ಲಿ ವ್ಯತ್ಯಾಸವಿಲ್ಲ. ಆದರೂ ಅವರವರ ಆಚರಣೆಯ ಸವಿ ಅವರವರದೇ ಎಂಬುದೇ ಸರಿ.

ಇವರಲ್ಲಿಯೂ ದೀಪಾವಳಿಯ ಹಿಂದಿನ ದಿನವೇ ಹರಿಗೆ (ಹಂಡೆಗೆ) 'ಬೂರ್ನೀರು' ತುಂಬುವುದರಿಂದಲೇ ಶುರು. ಸ್ವತಃ ಅಭ್ಯಂಜನ ಮಾಡಿ ತನ್ನ ಗೋಡೆ ಬಾಗಿಲು ಮೇಲೆಲ್ಲ ಸೇಡಿ ಮತ್ತು ಕಾವಿಯಿಂದ ಬರೆದ ದೀಪ ಹಚ್ಚಿಟ್ಟುಕೊಂಡು ರಂಗೋಲಿ ಬರೆದುಕೊಂಡು ಅಲಂಕೃತಗೊಂಡ ಬಚ್ಚಲೊಳಗೆ ಹೂ ಹಾರ ತೊಟ್ಟು ಮಂಗಳವಾಗಿ ಕಾಣುವ ತಾಮ್ರದ ಹರಿ ಚೊಂಬು, ನೀರು ಹೊತ್ತು ತರುವ ದೊಡ್ಡವರ ಹಿಂದೆ ತಾಳ ಜಾಗಟೆ ಸದ್ದು.

ದೀಪಾವಳಿ ಎಂದರೆ? ಕಥೆಯಾಗಿ ಗೊತ್ತು. ಬಿಟ್ಟರೆ, ಪಟಾಕಿಯ ರಿವಾಜಿಲ್ಲ. ದೀಪಾವಳಿಗಾಗಿಯೇ ಹೊಸ ಬಟ್ಟೆ ಖರೀದಿಸುವ ರಿವಾಜು ಇಲ್ಲ. ಇರುವುದೊಂದೇ ಸ್ನಾನ, ಕತ್ತಲು ಮುಗಿಯುವುದರೊಳಗೆ ಮುಗಿಯಲೇಬೇಕಾದ ಸ್ನಾನ. ಸ್ನಾನಗಳೆಲ್ಲ ಮುಗಿದಿದೆ ಬಚ್ಚಲು ಬಿಕೋ ಎನ್ನುತ್ತಿದೆ. ಮೆಲ್ಲ ಹೋಗಿ ಇಣುಕಿದರೆ, ಹಾ! ಹಿಂದಿನ ದಿನವಷ್ಟೇ ಹರಿಯ ಕತ್ತಿನ ಸುತ್ತ ನಿಗಿನಿಗಿ ನಗುತ್ತಿದ್ದ ಹಾರಗಳು ಹಬೆಗೆ ಬಾಡಿ ಬತ್ತಿಯೇ ಹೋಗಿವೆ. ಸೇಡಿ ಕಾವಿಯ ಹಣತೆಗಳು ಅಲ್ಲಲ್ಲಿ ಕದಡಿವೆ. ಮಿಂದು ಬಂದ ಒಬ್ಬೊಬ್ಬರನ್ನೇ ಕರೆಯುವ ಇಂದಿರಕ್ಕ ಪೌಡರು ಹಾಕಿ, ತಿಲಕವಿಟ್ಟು, ಹೊಸ ಅಂಗಿ (ಹೊಚ್ಚ ಹೊಸದಲ್ಲ) ತೊಟ್ಟು ಬಿಸಿ ಬಿಸಿ ದೋಸೆ ಅಥವಾ ಇಡ್ಲಿ, ಮೇಲೆ ಕರಗಿ ಇಳಿಯುವ ಹೊಂಬಣ್ಣದ ತುಪ್ಪ, ಮಧ್ಯಾಹ್ನ ಪಾಯಸ ಮಿಂದಾಯಿತು, ತಿಂದಾಯಿತು ಆಯಿತೆ ಹಬ್ಬ ಇಲ್ಲ. ಹಬ್ಬ ನಿಧಾನವಾಗಿ ಮುಂದೆ ಮುಂದೆ ಸರಿಯುತ್ತಿದೆ. ಸಂಜೆ ಆಕಾಶದಲ್ಲಿ ಹಣತೆಗಳು ಬೆಳಗಿದರೆ ಮನೆಮನೆಯ ಎದುರಲ್ಲಿ ಹಣತೆಗಳು ಬೆಳಗುತ್ತವೆ.

"ನಾಳೆ ಗೋಪೂಜೆ, ನಾಡಿದ್ದು 'ಅಂಗಡಿ ಪೂಜೆ' ಎಂದರೆ ಲಕ್ಷ್ಮೀಪೂಜೆ. ಅಂಗಡಿ ಪೂಜೆ ಅಂಗಡಿ ಮನೆಯವರಿಗೆ ಮಾತ್ರ, ಮನೆ ಮನೆಗಳಲ್ಲಿಯೂ ಲಕ್ಷ್ಮೀಪೂಜೆ ಮಾಡುವ ಕ್ರಮ ನಮ್ಮಲ್ಲಿಲ್ಲ 'ಅದೆಲ್ಲ ಘಟ್ಟದ ಮೇಲೆ' – ಈಗ? ಎಲ್ಲ ಇಲ್ಲಿಯೂ ಉಂಟು. ದಿಕ್ಕು ದಿಕ್ಕುಗಳಿಂದ ನಿಧಾನವಾಗಿ ಆಚರಣೆಗಳು ಆಮದಾಗುತ್ತವೆ. ನೆಲೆಸಿ ಬೇರೂರುತ್ತವೆ. ಇಲ್ಲಿನವೇ ಆಗಿಬಿಡುತ್ತವೆ. ಇಲ್ಲವಾದರೆ ಹಿಂದೆಲ್ಲ ಮದುಮಗಳ ಮನೆಯಲ್ಲಿ 'ಮೆಹಂದಿ ಕಾರ್ಯಕ್ರಮ' ಎಲ್ಲಿತ್ತು? ಗಂಟೆಗಟ್ಟಲೆ ನಿಂತೂ ನಿಂತೂ ಕೈ ಮುಗಿದೂ ಮುಗಿದೂ ಮುಗುಳು ನಗು ಧರಿಸೀ ಧರಿಸೀ 'ರಿಸೆಪ್ಷನ್' ಎಲ್ಲಿತ್ತು? ಈಗ?"[೨೧]

ದೀಪಾವಳಿಯ ಕಥೆಗೂ ಗೋಪೂಜೆಗೂ ಏನು ಸಂಬಂಧವೋ ಒಟ್ಟು ಮರುದಿನ ನೋಡಿದರೆ ಹಾಲು ಇಳಿಸದೆ ಬೆಳಿಗ್ಗೆಯಷ್ಟೆ ಪೆಟ್ಟು ತಿಂದ ಧನಗಳೂ 'ಗೋವು'ಗಳಾಗಿ ಪೂಜೆ ಪಡೆಯುತ್ತವೆ. ಬೆಳಿಗ್ಗೆಯೇ ಅವುಗಳಿಗೂ ಸ್ನಾನ ಮೈ ಒದ್ದೆ ಇದ್ದಂತೆಯೇ ಅದರ ಮೇಲೆ ಕದಡಿದ ಸೇಡಿ ಮತ್ತು ಕಾವಿಯಲ್ಲಿ ವರ್ತುಲಾಕಾರದಲ್ಲಿ ಮೊಹರು ಹೊಡೆದಿದ್ದಾರೆ, ಕೋಡುಗಳಿಗೂ ಕಾವಿ– ಸೇಡಿ ಮೆತ್ತಿಕೊಂಡು ದಾಸುದನ, ಕೈಲಿದನ, ಕಾಳಿದನ, ಸೋಮು ಶುಕ್ರ ಎಲ್ಲವೂ ಭಾರೀ

ಶೋಕಾಗಿವೆಯಲ್ಲ! ಆದರೆ ಅವುಗಳ ಕಣ್ಣಲ್ಲಿ ಹಬ್ಬವೆಂಬ ಸಂತೋಷ ಮಾತ್ರ ಇಲ್ಲ! ಬದಲು ಕಕ್ಕಾಬಿಕ್ಕಿ ಭಾವವಿದೆ. ಪ್ರತೀವರ್ಷ ಪೂಜೆಗೊಂಡರೂ ಇದೇ ಹೊಸದೆಂಬಂತೆ ಪ್ರತೀ ಸಲ ಕಣ್ಣು ಮೂಗು ಅರಳಿಸಿ, ಹೊರಳಿಸಿ ತಬ್ಬಿಬ್ಬಾಗುತ್ತವಲ್ಲ ಅನಿಸುತ್ತದೆ. ಕಾವಿ ಸೇಡಿ ವರ್ತುಲದಲ್ಲಿ ಮೆರೆಯುತ್ತ 'ಊರು ಮೆರವಣಿಗೆ'ಗೆ ಹೊರಟ, ನಾನಾ ಬಣ್ಣದ ತುರುಕರುಗಳು, ನೈವೇದ್ಯದ ರುಚಿಯನ್ನು ಮೆಲುಕುತ್ತಾ ನಿಧಾನ ಸಾಗುವ 'ಗಂಟಿಹಿಂಡು' ದೀಪಾವಳಿಯ ದಿನದಿಂದ ತಿಂಗಳ ಪರ್ಯಂತ ತುಳಸಿಗೆ ದೀಪವಿಡುವ ಹೊತ್ತಿಗೆ, ಹಟ್ಟಿಹಣೆಗೂ ದೀಪವಿಡುತ್ತೇವೆ. ಹಣತೆ ದೀಪದ ಬೆಳಕಲ್ಲಿ ಹಟ್ಟಿಯಲ್ಲಿ ಬಾಲ ಬೀಸುತ್ತ ಬೆಕ್ಕಸ ನಿಂತು ನೋಡುವ ಹೊಳೆವ ಫಳ ಫಳ ಕಣ್ಣುಗಳು... ಮೂಕ ದೇವತೆಗಳು ಜಾಗಟೆ ಹೊಡೆದು ಶಂಖ ಊದಿ ದನಗಳ ಬಾಯಿಗೆ ತಿಂಡಿ ಕೊಟ್ಟು ಅಡ್ಡಬಿದ್ದೆವು. ಪ್ರಸಾದ ಪಂಚಕಜ್ಜಾಯ ಬಾಯಿಗೆಸೆದು ಕೊಂಡೆವು ಹೊರತು, ಅಮ್ಮ ಮೂವತ್ತಮೂರು ದೇವತೆಗಳ ಆವಾಸಸ್ಥಾನವೆಂದು ಗೋಮಾತೆಯನ್ನು ವರ್ಣಿಸುತ್ತ ತನ್ನ ದಪ್ಪ ಗಂಡು ಸ್ವರದಲ್ಲಿ ಅಳಕೇ ಇಲ್ಲದೆ ಹಾಡುತ್ತಾ ಪೂಜೆ ಮಾಡುತ್ತಿದ್ದ ಹಾಡಿನ ಒಂದೇ ಒಂದು ಸೊಲ್ಲನ್ನು ಎತ್ತಿಟ್ಟುಕೊಳ್ಳಲಿಲ್ಲವಲ್ಲ ಎಂಬ ಬೇಸರಿಕೆಯನ್ನು ವ್ಯಕ್ತಪಡಿಸುವ ವೈದೇಹಿ ಈಗ ಅಮ್ಮ ಇಲ್ಲ, ಅವಳ ಹಾಡೂ ಇಲ್ಲ. ಆ ಹಟ್ಟಿಯೂ ಇಲ್ಲ... ಗೋವು ಇಲ್ಲ... ಆ ಮೆರವಣಿಗೆಯೂ ಇಲ್ಲ. ಕಾಲ ಸಂದಿದೆ, ಅದು ಮುಗಿದು ಹೋಗಿದೆ. ಕಂಡ ಕಣ್ಣಿನ ಕಪಾಟಿನೊಳಗೆ ಮಾತ್ರ ಎಂದೆಂದಿಗೂ ಅಳಿಯದಂತೆ ಜೋಪಾನವಾಗಿದೆ. ಈಗ ಆ ಕಾಲವ ನೆನೆದು ನಮಿಸಬೇಕಿದೆ. ಪ್ರತಿವರ್ಷ ಗೋಪೂಜೆಯ ದಿನ ನೈವೇದ್ಯ ತಯಾರಿಸಿ, ಮನೆಯೆದುರು ದಾಟಿ ಹೋಗುವ ಗೋವಿಗಾಗಿ ಕಾದು ನಿಲ್ಲುವ ಪರಿಸ್ಥಿತಿ ಬಂದಿದೆ.

೫.೩. ಲಿಂಗತಾರತಮ್ಯದ ನೆಲೆ

ಪ್ರತಿಯೊಂದು ಸಮಾಜವು ಒಂದು ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುತ್ತದೆ. ಆ ವ್ಯವಸ್ಥೆ ತನ್ನ ಸಮಾಜದ ಉಳಿವಿಗೆ ಮತ್ತು ಏಳಿಗೆಗಾಗಿ ತನ್ನ ಸದಸ್ಯರೊಡನೆ ಕೆಲವು ಜವಾಬ್ದಾರಿಗಳನ್ನು ಹಂಚಿಕೊಂಡಿರುತ್ತದೆ. ಈ ಹಂಚಿಕೆ ವ್ಯಕ್ತಿಗಳ ಲಿಂಗ, ವಯಸ್ಸು ಮತ್ತು ಸಾಮರ್ಥ್ಯವನ್ನು ಆಧರಿಸಿರುತ್ತದೆ. ಈ ರೀತಿಯ ಹಂಚಿಕೆ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುತ್ತದೆ. ಸ್ತ್ರೀ-ಪುರುಷ, ಯುವಕ-ಯುವತಿ, ವೃದ್ಧ-ವೃದ್ಧೆ ಮಕ್ಕಳು ಒಂದೇ ಕುಟುಂಬದಲ್ಲಿದ್ದು ಆ ಕುಟುಂಬದ ವಿವಿಧ ಆಶೋತ್ತರಗಳನ್ನು, ಅವಶ್ಯಕತೆಗಳನ್ನು ತಮ್ಮದೇ ಆದ ರೀತಿಯಲ್ಲಿ ಪೂರೈಸುತ್ತಿರುತ್ತಾರೆ. ಇಂಥ ಸಂದರ್ಭದಲ್ಲಿ ಪರಸ್ಪರರು ಅವಲಂಬಿತರಾಗಿರುತ್ತಾರೆ. ಪ್ರತಿಯೊಬ್ಬರಿಗೂ ತಮ್ಮದೇ ಆದ ಹಕ್ಕುಗಳಿರುತ್ತವೆ, ಕರ್ತವ್ಯಗಳಿರುತ್ತವೆ. ಆಸೆ-ಆಕಾಂಕ್ಷೆಗಳಿರುತ್ತವೆ.

ಪ್ರತಿಯೊಬ್ಬರು ಆರಂಭದಿಂದಲೂ ಪೂರ್ವ ನಿರ್ಧಾರಿತ ರೀತಿಯಲ್ಲಿ ಸಮಾಜದ ಒಂದು ಭಾಗವಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿರುತ್ತಾರೆ. ಸಮಾಜವು ಎಷ್ಟೇ ಸಣ್ಣದಾಗಿರಲಿ ಅದರ ಸದಸ್ಯರ ಪಾತ್ರ ನಿರ್ವಹಣೆ ಮಹತ್ವ ಪೂರ್ಣವಾಗಿರುತ್ತದೆ.

"ಮೇರಿ ವುಲ್‌ಸ್ಟನ್ ಕ್ರಾಫ್ಟ್ ೧೭೯೧ರಲ್ಲಿಯೇ ತಮ್ಮ ಕೃತಿಯಲ್ಲಿ ಪರಂಪರಾಗತ ಹಕ್ಕುಗಳು ಲಿಂಗತಾರತಮ್ಯಗಳ ಕುರಿತು ಬರೆಯುತ್ತಾಳೆ. "ಗಂಡಸು ನನ್ನ ಸಹಭಾಗಿ ಆದರೆ ನನ್ನ ಹಕ್ಕುದಾರನಲ್ಲ" ಎಂದು ಹೇಳುವ ಮೇರಿ ಖಾಸಗಿ ಆಸ್ತಿಯ ಕಲ್ಪನೆ, ಮನುಷ್ಯರನ್ನು, ಅದರಲ್ಲೂ ಮಹಿಳೆಯರನ್ನು ಪೂರ್ಣ ಗುಲಾಮತನಕ್ಕೆ ತಳ್ಳಿತು ಎಂದು ಬಲವಾಗಿ ಪ್ರತಿಪಾದಿಸುತ್ತಾಳೆ".[೨೨]

ವರ್ಗ, ಜನಾಂಗಗಳಂತೆ, ಲಿಂಗ ಪ್ರಭೇದ ಕೂಡ ಸಾಮಾಜಿಕವಾಗಿ ಕಟ್ಟಲ್ಪಟ್ಟಿರುತ್ತದೆ. ಸ್ತ್ರೀ-ಪುರುಷರ ನಡುವಿನ ಜೀವಶಾಸ್ತ್ರೀಯ ನೆಲೆಯ ಲೈಂಗಿಕ ವ್ಯತ್ಯಾಸಗಳು ಲಿಂಗ ಎನಿಸಿದರೆ ಸಾಮಾಜಿಕವಾಗಿ ಈ ಲಿಂಗಗಳ ಸುತ್ತ ರೂಪಗೊಂಡಿರುವ ಗುಣ ಸ್ವಭಾವ, ಲಕ್ಷಣ, ಶಕ್ತಿ ಸಾಮಾರ್ಥ್ಯದಿ ಭಿನ್ನತೆಗಳು ಲಿಂಗ ಪ್ರಭೇದವೆನಿಸುತ್ತದೆ. ಈ ವ್ಯತ್ಯಾಸಗಳು ಅನೇಕ ಸಮಾಜಗಳಲ್ಲಿ ಕ್ರಿಯಾನಿರತವಾಗಿದ್ದು ಹಲವು ಬಗೆಯ ಅಸಮಾನತೆ, ದಮನ ಮತ್ತು ಶೋಷಣೆಗೆ ಕಾರಣವಾಗಿರುತ್ತವೆ.

ಲೇಖಕಿ ವೈದೇಹಿ ಎಷ್ಟು ಸೂಕ್ಷ್ಮರಾದವರು ಎಂದರೆ ಲಿಂಗ ಅಸಮಾನತೆ, ದೌರ್ಜನ್ಯ, ಶೋಷಣೆ, ಕ್ರೌರ್ಯಗಳನ್ನು ಹೇಳಲು ಯಾವುದೋ ದೊಡ್ಡ 'ಥಿಯರಿ'ಯ ಮಾತುಗಳನ್ನ ತೆಗೆದುಕೊಳ್ಳುವುದಿಲ್ಲ. ಅರ್ಥವಾಗದ ಯಾವುದೋ ಕ್ಲಿಷ್ಟ ಪರಿಭಾಷೆಗಳ ಸಹವಾಸವನ್ನೂ ಮಾಡದೇ ದಿನನಿತ್ಯದ ಬದುಕಿನಲ್ಲಿ ಕಂಡ ಸಣ್ಣ ಸಣ್ಣ ಘಟನೆಗಳ ಮೂಲಕವೇ ಲಿಂಗ ಪಕ್ಷಪಾತತೆಯ ಒಂದು ದೊಡ್ಡ ಜೀವನಕ್ರಮವನ್ನೇ ನಮ್ಮ ಮುಂದೆ ದಟ್ಟವಾಗಿ ತೆರೆದು ತೋರಿಸಿ ಬಿಡುತ್ತಾರೆ. ಹೀಗಾಗಿ ವೈದೇಹಿಯವರ ಬರವಣಿಗೆಯನ್ನ ಸೂತ್ರೀಕರಿಸಿ, ಸಂಗ್ರಹಿಸಿ ಹೇಳುವುದು ತುಂಬ ಕಷ್ಟವಾಗುತ್ತದೆ.

ವೈದೇಹಿಯವರ 'ಸ್ತ್ರೀ ಪ್ರಜ್ಞೆ' ಎಷ್ಟು ಜಾಗೃತವಾಗಿದೆ ಎಂಬುದನ್ನ ತಿಳಿಯಲು ದೊಡ್ಡ ಸಂಗತಿಗಳ ಪ್ರೇರಣೆಬೇಕಾಗಿಲ್ಲ. ಅದು 'ದರ್ಶನ'ಕ್ಕೆ ಸಂಬಂಧಿಸಿದ ಸಂಗತಿಯಾದ್ದರಿಂದ ನೋಡುವ ನೋಟದಲ್ಲೇ ಇತರರಿಗೆ ಕಾಣಿಸಿದ ಎಷ್ಟೊ ಸಂಗತಿಗಳು ಸಹಜವೆಂಬಂತೆ ಕಾಣಿಸಿಕೊಂಡು ಬಿಡುತ್ತವೆ. ಲೇಖಕಿಯ ಸ್ತ್ರೀ ಪ್ರಜ್ಞೆ, ಜಾಗೃತವಾಗಿದೆ ಎಂಬುದಕ್ಕೆ ಅವರ 'ಮೇಜು ಕುರ್ಚಿಯ ಮೂಲಕ' ಎಂಬ ದೀರ್ಘ ಪ್ರಬಂಧ ಒಂದು ಒಳ್ಳೆ ಸಾಕ್ಷಿಯಾಗಬಹುದೇನೋ. ಲಿಂಗ ಸಮಾಜದ ಎಲ್ಲ ಓರೆಕೋರೆಗಳನ್ನು ಕಾಣುವುದಕ್ಕಾಗಿ ಅವರು ಈ ಪ್ರಬಂಧದಲ್ಲಿ ಮೇಜು ಮತ್ತು

ಕುರ್ಚಿಯ ಮೂಲಕ ಸಮಾಜವನ್ನು ನೋಡುತ್ತಾರೆ. ಇಲ್ಲಿ ಪ್ರಬಂಧ ಆರಂಭವಾಗುವುದೇ ಹೀಗೆ. "ಈ ಕುರ್ಚಿ ಮತ್ತು ಮೇಜು ಈಗ ಎಷ್ಟು ಸಾಮಾನ್ಯವಾಗಿಬಿಟ್ಟಿವೆ! ಹಿಂದೆ ಮನೆಯಲ್ಲಿ ಮೇಜು ಕುರ್ಚಿಗಳೇ ಇಲ್ಲದ ಕಾಲವಿತ್ತಂತೆ. ಏನೋ ಅವಳಿಗಂತೂ ನೆನಪಿಲ್ಲ. ಅವಳಿಗೆ ನೆನಪಿರುವುದು ಯಾರ ಮನೆಯಲ್ಲೇ ಆಗಲಿ ಕುರ್ಚಿ ಮೇಜನ್ನು ತಂದೆ, ಅಜ್ಜ ಅಥವಾ ಮನೆಯ ಗಂಡಸರು ಮಾತ್ರ ಬಳಸುತ್ತಿದ್ದದ್ದು. ಕುರ್ಚಿಯ ಮೇಲೆ ಕುಳಿತು ಓದುವುದಿರಲಿ, ಬರಿದೇ ಕುಳಿತುಕೊಳ್ಳುವುದು ಮೇಜಿನ ಮೇಲೆ ಪುಸ್ತಕ ಇಟ್ಟುಕೊಂಡು ಬರೆಯುವುದು ಹೆಂಗಸಿನ ಉಡಾಪು ಎನಿಸುತ್ತಿದ್ದದ್ದು – ಅದೇನು? ಗಂಡಸರ ಹಾಗೆ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕಾ? ದೊಡ್ಡ ಆಫೀಸರಳೇ ನೀನು? ಬರೆಯಲು ಮೇಜೇ ಬೇಕೆಂದರೆ!...

ಎಂದರೆ ಆಫೀಸರು ಆಗುವುದು ಕೂಡ ಕುರ್ಚಿಯ ಮೇಜುಗಳ ಹಕ್ಕುದಾರಿಕೆಯೊಂದಿಗೆ ಗಂಡಸರದೇ ಹಕ್ಕು ಎಂಬಿತ್ಯಾದಿ ಅರ್ಥಗಳನ್ನೆಲ್ಲ ಹೊತ್ತ ಗದರಿಕೆಗಳು. ಇನ್ನೂ ಹೇಳಬೇಕೆಂದರೆ ಮೇಜು ಕುರ್ಚಿ ಎಂದರೆ ಗಂಡಸರದೇ ಉಪಕರಣಗಳು. ಶೇವಿಂಗ್ ಉಪಕರಣಗಳು ಹೇಗೆ ನಮ್ಮದಲ್ಲವೋ ಹಾಗೆ!"

ಅವರು ಸಾಮಾಜಿಕ ಪರಿವರ್ತನೆಯ ಕಥನವನ್ನು ಕುರ್ಚಿ ಮೇಜುಗಳ ಬದಲಾದ ಇಮೇಜ್‌ಗಳಲ್ಲಿ ಕಾಣುತ್ತಾರೆ. ಅಡುಗೆ ಮನೆಯ ಹುಡುಗಿ ಪೂ ಪೂ ಊದುತ್ತಲೆ ಆ ವಿಮಾನದೊಳಗಿನ ಹಗಲು ವೇಷದ ಯಜಮಾನನ ಬಗೆಗೆ ಕನಸು ಕಾಣುತ್ತಿರುವುದನ್ನು ವೀಕ್ಷಿಸಬಲ್ಲವರು. ಹಾಗೆಯೇ ದೋಸೆ, ತಿಳಿಸಾರು, ವ್ಯಾನಿಟಿ ಬ್ಯಾಗಿನ ಮೂಲಕ ದೊಡ್ಡ ಸಾಂಸ್ಕೃತಿಕ ವಾಗ್ವಾದವನ್ನೆ ಸೃಷ್ಟಿಸಬಲ್ಲವರು.

'ಮೇಜು ಮತ್ತು ಬಡಗಿ' ಲೇಖನದ ಮೂಲಕ ಒಂದು ಪುಟ್ಟ ಮೇಜಿನ ಸುತ್ತ ತಮ್ಮ ಭಾವನೆಗಳ ಲಹರಿಯನ್ನು ಹರಿಯ ಬಿಡುತ್ತಾರೆ. ಬದಲಾದ ಮೇಜಿನ ಇಮೇಜಿನಲ್ಲಿ ಒಂದು ಜೀವನ ಕ್ರಮವೇ ಒಂದು ಸಂಸ್ಕೃತಿಯೇ ಪಲ್ಲಟಗೊಂಡದ್ದನ್ನು ಧ್ವನಿಸಿ ಬಿಡುತ್ತಾರೆ. ಈ ಪುಟ್ಟ ಮೇಜು, ಚಚ್ಚೌಕದ ಮೇಜು ಬಹಳ ಸಾಮಾನ್ಯದ್ದು. ಸಾಮಾನ್ಯವಾಗಿದ್ದುಕೊಂಡೇ ಖುಷಿ ಕೊಡುವ ಮಾಟದ್ದು. ತೃಪ್ತಿಯೊಂದು ಮರದ ನಾಲ್ಕು ಕಾಲು ಪಡೆದು ನಿಂತರೆ ಹೇಗಿರುತ್ತದೋ ಹಾಗೆ ನೇರ ಬದುಕಿನಲ್ಲಿ ಕಾಣುವ ಸಣ್ಣ ಪುಟ್ಟ ಸಂತೋಷಗಳಿರುತ್ತವಲ್ಲ ಹಾಗೆ. ತನ್ನ ಸ್ವಂತಕ್ಕೆಂದೂ ಊಟ ಬಯಕೆಯೂ ಇಲ್ಲವೆಂಬಂತೆ ಕಾಲವನ್ನು ಧರಿಸಿಕೊಂಡೇ ಕಾಲವನ್ನು ನೋಡುವಂತೆ ನಿರ್ಲಿಪ್ತವಾಗಿ ನಿಂತಿರುವ ಮೇಜನ್ನು ಲೇಖಕಿ ತತ್ತ್ವೀಕರಿಸುವ ರೀತಿ ಅವರು ಒಟ್ಟಾರೆ ಜೀವನವನ್ನು ಪರಿಭಾವಿಸಿಕೊಳ್ಳುವ ಬಗೆಯನ್ನು ಸೂಚಿಸುವಂತಿದೆ.

"ಅಂತೂ ಯಾವುದೋ ಒಂದು ಉದ್ದೇಶಕ್ಕಾಗಿ ಒಂದು ಕಾಡಿನ ಒಂದು ಮರದ ತುಂಡು, ಮೇಜು ಮಾಡಿಸುವ ಒಂದು ಮನಸ್ಸು ಮತ್ತು ಎಲ್ಲಿಯವನೋ ಒಬ್ಬ ಬಡಗಿ: ಅಷ್ಟೇ ಅಲ್ಲ ಎಲ್ಲಿಂದಲೋ ಬಂದು ಅವನನ್ನು ಸೇರಿದ್ದ ಒಂದು ಸುತ್ತಿಗೆ, ಕೀಸುಳಿ, ಉಳಿ, ಮೊಳೆ ಮತ್ತು ಒಂದಷ್ಟು ದಿನಗಳ ಮೊತ್ತವಾದ 'ವೇಳೆ' ಮುಂತಾದವುಗಳಿಂದ ಒಟ್ಟಿನಲ್ಲಿ ಹೇಳಬೇಕಾದರೆ ಈ ಎಲ್ಲವೂ ಸೇರಿ ದುಡಿದ ಒಂದು ಸಂಕಲ್ಪದಿಂದ – ಈ 'ಮೇಜ' ಎಂಬುದು ತಯಾರಾಯಿತು. ತನ್ನ ಜಾತಿ–ಜಾತಿ ಗುಣವನ್ನು ಇಟ್ಟುಕೊಂಡೂ, ದಾಟಿಕೊಂಡು! ತನ್ನ ಇತಿಹಾಸದ ಸಾರಮಾತ್ರವಾಗಿ ಈ ರೂಪದಲ್ಲಿ ನಿಂತಿರುವ ಈ ಘನವಸ್ತು ತಯಾರಾದ ಲಾಗಾಯ್ತಿನಿಂದ ಏನೆಲ್ಲವನ್ನು ಧರಿಸಿತೋ, ಏನಿದ್ದರೂ ಅದಕ್ಕೆ ಲಗತ್ತಾಗಿ ಕಾಣಿಸುವಂಥದ್ದು".[೨೩]

ರೇಡಿಯೋ ಬಂದರೂ, ಫೋನ್ ಬಂದರೂ, ಟಿ.ವಿ. ಬಂದರೂ ಅದಕ್ಕಾಗಿ ಸ್ಪೆಷಲ್ ಮೇಜು ಬೇಡವೆಂದು ಮೊದಲು ತೆರವಾದದ್ದು ಈ ಪುಟ್ಟ ಮೇಜೆ. ಏನೇ ತೆಗೆದು ಏನೇ ಇಟ್ಟರು ತನ್ನ ಸ್ವಂತಕ್ಕೆ ಯಾವ ಬಾಧೆಯೂ ಇಲ್ಲವೆಂಬಂತೆ ನಿರ್ಲಿಪ್ತವಾಗಿ ನಿಂತುಬಿಡುವ ಈ ಮೇಜು ವರ್ತಮಾನದಲ್ಲಿ ನಿಂತು ಭೂತಕ್ಕೆ ಸಾಕ್ಷಿಯಾಗಿ, ಭವಿಷ್ಯಕ್ಕೆ ಕಾದುಕುಳಿತಂತಿದೆ.

ಮೇಜುಕುರ್ಚಿಯ ಮೂಲಕ ಲೇಖನದ ಶೀರ್ಷಿಕೆಯಂತೆ ಲೇಖಕಿ ಮೇಜು ಕುರ್ಚಿಗಳನ್ನು ಮಾತ್ರ ನೋಡುವುದಿಲ್ಲ. ಅವುಗಳ ಮೂಲಕವು ನೋಡುತ್ತಾರೆ. ಗಂಡಸರು ಮಾತ್ರ ಈ ಮೇಜು ಕುರ್ಚಿಗಳನ್ನು ಬಳಸುತ್ತಿದ್ದರು. ಅವು ಪುರುಷರ ಸಂಕೇತವಾಗಿಯೇ ಇದ್ದ ಒಂದು ಸಂಸ್ಕೃತಿಯನ್ನು ಸ್ವಾರಸ್ಯಕರ ನಿರ್ದೇಶನಗಳೊಂದಿಗೆ ವೈದೇಹಿ ಅನಾವರಣಗೊಳಿಸುತ್ತಾರೆ. ಅಷ್ಟೇ ಅಲ್ಲದೆ ಮೇಜು, ಕುರ್ಚಿಗಳು 'ಹುದ್ದೆಯ ಸಂಕೇತ, ಆಫೀಸಿನ ಸಂಕೇತ, ದರ್ಪದ ಸಂಕೇತವಾಗಿದ್ದನ್ನು ನಿರೂಪಿಸುತ್ತಾರೆ.

'ದೋಸೆ ರಾಜಕೀಯ' ಎಂಬ ಮತ್ತೊಂದು ಬರಹದಲ್ಲಿ ಅವರು ಲಿಂಗ ಪೂರ್ವಗ್ರಹಗಳನ್ನು ಸೂಚಿಸುವ ರೀತಿ ಅನನ್ಯವಾದದ್ದು. "ಅವತ್ತು ಒಂದು ಸೆಮಿನಾರಿನಲ್ಲಿ, ಸೆಮಿನಾರುಗಳನ್ನು ದೋಸೆ ಮಗುಚುವುದಕ್ಕೆ ಸಮೀಕರಿಸಿದ್ದು ಕೇಳಿದೆ. ಒಂದು, ಆ ಸಮೀಕರಣವೇ ನನಗೆ ಆಶ್ಚರ್ಯ ತಂದಿತ್ತು. ಎರಡು, ಹೇಳಿದ ದಾಟಿಯಲ್ಲಿ ದೋಸೆ, ಅದನ್ನು ಮಗುಚುವಿಕೆ ಇತ್ಯಾದಿಗಳನ್ನು ಹಗುರವಾಗಿ ಕಂಡಂತೆ ಅನಿಸಿ ತಳಮಳಗೊಂಡೆ. ದೋಸೆಯನ್ನು ಚಿಂತಿಸಿದೆ. ಅಲ್ಲ, ಎಲ್ಲ ಬಿಟ್ಟು ದೋಸೆ ಸಮಾಚಾರ ಯಾಕೆ ಎನ್ನಬೇಡಿ... ಮನೆಯೊಳಗಿರುವ ನಮ್ಮಂಥ ಕೆಲವರ ಇಡೀ ಕಾಯಕವನ್ನೇ, ಸಮಯದ ಬಹುಭಾಗವನ್ನು, ಅಡುವ, ಬಡಿಸುವ, ನಾಳೆಗೇನೆಂದು ನೋಡಿ ತೆಗೆದಿಡಲು ಮುಡಿಪಿಡುವ ಶ್ರದ್ಧೆಯನ್ನೇ ಹೆೆ ಅಂತ ಬಿಸುಬ ಹಾಗಾಗಿ, ಬೇಸರವಾಗುತ್ತದೆ. ಅದೂ ಅಲ್ಲದೆ ಯಾವುದೇ ಆಗಲಿ, ತಿನ್ನಲು ಬೇಕು, ಚರ್ಚೆಗೆ ಬೇಡ ಎಂದರೆ ಹೇಗೆ? ನೋಡಿದರೆ ಜಗತ್ತಿನ ದೊಡ್ಡ ದೊಡ್ಡ ವಾದಗಳ ಮೂಲದಲ್ಲಿ ಮುಖ್ಯವಾಗಿ ಇರುವುದೇ ಇಂತಹ ಪ್ರಶ್ನೆ, ಅವುಗಳ ತೊಡುಗೆ ತುಸು ಭಿನ್ನವಿದ್ದೀತು ಅಷ್ಟೆ".[೨೪]

ನಾಗವೇಣಿಯವರ ಬರಹಗಳ ಕೇಂದ್ರವೂ ಹೆಣ್ಣೇ. ಈ ಹೆಣ್ಣು ವಿವಿಧ ಜಾತಿ, ವಯಸ್ಸು, ಅಂತಸ್ತು, ಸಂವೇದನೆಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಹೆಣ್ಣು ವಿವಿಧ ಆಕೃತಿಗಳಲ್ಲಿ, ಭಾವಸ್ಥಿತಿಗಳಲ್ಲಿ ಕಾಣಿಸಿಕೊಳ್ಳುವಲ್ಲಿ ವೈವಿಧ್ಯತೆ ಇದೆ. ಇದು ನಾಗವೇಣಿಯವರನ್ನು ನಮ್ಮ ಕಾಲದ ಬಹುಮುಖ್ಯ ಬರಹಗಾರ್ತಿಯರಲ್ಲಿ ಒಬ್ಬರನ್ನಾಗಿ ಮಾಡಿದೆ. ಅವರು ಬದುಕನ್ನು ಹೆಣ್ಣಿನ ದೃಷ್ಟಿಯಿಂದ ನೋಡುತ್ತಾರೆ. ಸಮಕಾಲಿನ ಸಮಸ್ಯೆಗೆ ಈ ಬಗೆಯ ಆಲೋಚನೆಯನ್ನು ತಳುಕು ಹಾಕುವುದರಿಂದ ಹೆಣ್ಣು ಎದುರಿಸುತ್ತಿರುವ ಸಮಸ್ಯೆಗಳ ನಿಜವಾದ ನೆಲೆಗಳನ್ನು ಮನಗಾಣುವುದಕ್ಕೆ ಸಾಧ್ಯ ಇಲ್ಲವೇ ವಸ್ತು ಸ್ಥಿತಿಯನ್ನು ಯಥಾವತ್ತಾಗಿ ತೆರೆದಿಡುವ ಮೂಲಕ ಸಮಾಜದ ಗಮನವನ್ನು ಅತ್ತ ಸೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಲೇಖಕಿ ಲಿಂಗ ಅಸಮಾನತೆಯ ಪ್ರಶ್ನೆಯನ್ನು ತುಂಬ ಪ್ರಬುದ್ಧವಾಗಿ ನಿರ್ವಹಿಸಿದ್ದಾರೆ. ಹೆಣ್ಣನ್ನು ಹಲವು ಮನುಷ್ಯ ಸಂದರ್ಭಗಳಲ್ಲಿ ಇಟ್ಟು ನೋಡುವಾಗಲೂ ಒಂದು ಲಿಂಗವಾಗಿ ಹೆಣ್ಣಿನ ಅನನ್ಯ ವಿಶಿಷ್ಟ ಸ್ಥಿತಿ ಅವರ ಅವಲೋಕನದಿಂದ ತಪ್ಪಿಸಿಕೊಳ್ಳುವುದಿಲ್ಲ. 'ದೋಸೆ ಕಾವಲಿ ಮೀಮಾಂಸೆ' ಬರಹದಲ್ಲಿ ನಾಗವೇಣಿ ಲಿಂಗ ಅಸಮಾನತೆಯ ಪ್ರಶ್ನೆಯನ್ನೆತ್ತುವುದು ಹೀಗೆ. ಹೊಸ ಸಂಸಾರ ಹೂಡುವಾಗ ಅಮ್ಮ ಪ್ರೀತಿಯಿಂದ ಕೊಟ್ಟ ಕಬ್ಬಿಣದ ದೋಸೆ ಕಾವಲಿಯನ್ನು ಎಂದೂ ಮೂಲೆಗೆ ತಳ್ಳದೆ ಆಗಾಗ್ಗೆ ಅದರ ಮೈಗೆ ಒಂದಷ್ಟು ಎಳ್ಳೆಣ್ಣೆ ಸವರಿ ಮೈಯನ್ನು ತುಸು ಬೆಚ್ಚಗೆ ಮಾಡಿ ಈರುಳ್ಳಿ ಹೋಳನ್ನು ಸವರಿ, ಓಲೈಸಿದರು ಅದು ತನ್ನ ಪರಂಪರೆಯ ದುರ್ಬುದ್ಧಿಯನ್ನು ಬಿಡುವುದಿಲ್ಲವಂತೆ.

'ಮನೆಯಲ್ಲಿ ಕಾವಲಿ ಎಂಬುದು ಇದೆಯಲ್ಲಾ... ಅದು ಮನೆಯ ಕರ್ತವ್ಯ ಯಜಮಾನ (ಗಂಡ) ಇದ್ದಹಾಗೆ. ಅದನ್ನು ಚೆನ್ನಾಗಿ ಇಟ್ಟುಕೊಂಡ್ರೆ ಇಡೀ ಕುಟುಂಬವನ್ನು ಚೆನ್ನಾಗಿ ಇಟ್ಟಂತೆಯೇ; ಅದೊಂದು ಕಬ್ಬಿಣದ ತುಂಡು ಅಂತ ಅದನ್ನು ಒಲೆ ಮೂಲೆಗೊರಗಿಸಿಡದೆ, ದಿನವೂ ಒಂದಿಷ್ಟು ಕೊರ್ಸಂಡೆಣ್ಣೆ (ಎಳ್ಳೆಣ್ಣೆ) ಹಚ್ಚಿ... ಒಂಚೂರು ಬಿಸಿ ಕೊಟ್ರೆ... ಅದು ನೀವು ಹೇಳಿದ್ಹಾಗೆ ಕೇಳದಿದ್ರ ಹೇಳಿ ಮತ್ತೆ! ಅದು ಬಿಟ್ಟು, ನಿಮ್ಗೆ ದೋಸೆ ಬೇಕಾದಾಗ ಮಾತ್ರ ಅದಕ್ಕೆ 'ತುಪ್ಪದಲ್ಲಿ ಪೂಸಿ ಹೊಡೆದ್ರೆ' ಅದೇನು ದಾರಿಗೆ ಬರುವಂತಹದಲ್ಲ..." ಎಂದು ಅಮ್ಮ ಹೇಳಿದರೆ.

ಲೇಖಕಿ ಮೂತಿ ತಿರುವಿ ಬೇಡಪ್ಪ... ನಂಗೆ ಅಂಥ ಗಂಡನೂ ಬೇಡ, ಕಾವಲಿನೂ ಬೇಡ ಅಂದಿದ್ದರಂತೆ. 'ನಮ್ಮ ಪರಂಪರೆಯ ಪ್ರತಿನಿಧಿಯಂತೆಯೂ, ಪಿತೃಪ್ರಧಾನ ಸಮಾಜದ ಗುರಿಕಾರನಂತೆಯೂ ಕಾಣಿಸುವ ಈ ದೋಸೆ ಕಾವಲಿಗೆ ಕಾಲಕಾಲಕ್ಕೆ ಎಣ್ಣೆಯನ್ನು ಬಿಸಿಯನ್ನು ಕೊಡುವುದಕ್ಕೆ ಏನು ಅಭ್ಯಂತರವಿಲ್ಲ. ಆದರೆ ನಾವು ಬಯಸುವ ಯಾವುದೇ ರುಚಿಯ ದೋಸೆಯನ್ನು 'ಪರಂಪರೆಯ ಸೂತ್ರ'ದ ತಕರಾರು ಇಲ್ಲದೆ ನೀಟಾಗಿ ಎಬ್ಬಿಸಿಕೊಟ್ಟರೆ ತಮ್ಮದು ಯಾವ ತಕರಾರು ಎಲ್ಲ ಎಂಬ ನಿಲುವು ಇಲ್ಲಿ ವ್ಯಕ್ತವಾಗಿದೆ.

ವೈದೇಹಿ 'ಲೇಖಕಿಯ ಪುಟಗಳು' ಎಂಬ ದೀರ್ಘ ಬರಹದಲ್ಲಿ 'ಮುಟ್ಟಿನ ಮಡಿ', ಮುಟ್ಟಿನ ಮೂರು ದಿನಗಳ 'ಅನುಭವ', ಬಸಿರು ಬಾಣಂತನಗಳ ವರ್ಣನೆಗಳು ಚಾವಡಿ ಪಡಸಾಲೆಗಳಿಗೆ ಪ್ರವೇಶವಿಲ್ಲದೆ ಹೆಣ್ಣುಮಕ್ಕಳು 'ಒಳಗೆ' ಮಾತ್ರ ಇರಬೇಕಾದ ಪರಿಸ್ಥಿತಿ ಮದುವೆ, ಹಪ್ಪಳ-ಸಂಡಿಗೆಯ ಲೋಕವನ್ನು ತುಂಬ ಆಪ್ತವಾಗಿ ಹೇಳುತ್ತಾ ಇಂಥ ಇಕ್ಕಟ್ಟುಗಳ ನಡುವೆಯೂ ಆ ಜೀವನ ಕ್ರಮವೇ ತಮಗೆನೀಡಿದ ಸಂಸ್ಕೃತಿಶಿಕ್ಷಣದ ಸ್ವರೂಪವನ್ನು ಲೇಖಕಿ ಮರೆಯುವುದಿಲ್ಲ. ಸ್ತ್ರೀ ವಿಶಿಷ್ಟ ದೃಷ್ಟಿಕೋನದಿಂದಲೇ ತಮ್ಮ ವೈಯಕ್ತಿಕ ಬದುಕನ್ನು, ಅದನ್ನೂ ಮೀರಿದ ವಿಶಾಲವಾದ ಲೋಕವನ್ನು ನೋಡುವ ಮೂಲಕ ಸಾಧಾರಣವಾಗಿ ನಮ್ಮ ಗ್ರಹಿಕೆಗೆ ನಿಲುಕದ ಹಲವು ಸೂಕ್ಷ್ಮಸಂಗತಿಗಳನ್ನು ನಮ್ಮ ಅರಿವಿನ ಮುಂದಿಡುತ್ತಾರೆ. ಆದರೆ ಪುರುಷರ ಬಗ್ಗೆಯಾಗಲೀ, ಒಟ್ಟಾರೆ ಪುರುಷ ಲೋಕದ ಬಗ್ಗೆಯಾಗಲಿ ಯಾವುದೇ ಕಹಿಯನ್ನು ಉಳಿಸಿಕೊಳ್ಳುವುದಿಲ್ಲ. ಎಲ್ಲ ಬಗೆಯ ಪಕ್ಷಪಾತ, ಪೂರ್ವಗ್ರಹ, ಹಿಂಸೆ, ಶೋಷಣೆಗಳನ್ನು ಪ್ರಸ್ತಾಪಿಸುವಾಗಲೂ ಅವರ ಧ್ವನಿಯಲ್ಲಿ ಸಿಟ್ಟು, ವ್ಯಂಗ್ಯ ಸಿನಿಕತನಗಳನ್ನು ನಾವು ಕಾಣುವುದಿಲ್ಲ. ಒಟ್ಟಾರೆಯಾಗಿ ಜೀರ್ಣಿಸಿಕೊಂಡ ಮಾಗಿದ, ಪ್ರಬುದ್ಧ ಮನಸ್ಸೊಂದನ್ನು ಇಲ್ಲಿ ಕಾಣಬಹುದಾಗಿದೆ.

ಈ 'ಗಂಡಸರು' ಎಂಬ ಜಾತಿ ಏನು ದುಷ್ಟವಪ್ಪ ಎಂದು ನಮಗೆ ಅನಿಸಲೇ ಬೇಕಿತ್ತು. ಏಕೆಂಬರೆ ಪಡಸಾಲೆಯಲ್ಲಿ ಗಂಡಸರು ಕುಳಿತಿದ್ದರೆ ಅಲ್ಲಿಗೆ ನಾವು ಬರುತ್ತಿರಲಿಲ್ಲ. ಚಾವಡಿಗೆ ಬರಬೇಕಾದರಂತೂ ಅಲ್ಲಿ ಗಂಡಸರು ಇರದಿರಬೇಕು! ಒಮ್ಮೆ ಹಣಕಿ ನೋಡಿ ಅಲ್ಲಿ ಯಾರೂ ಇಲ್ಲವೆಂದಾದರೆ ಹೋದೇವು. ನಿಜವಾಗಿ ನೋಡಿದರೆ, ಗಂಡಸರಿದ್ದಲ್ಲಿ ಹೋಗುವಂತಿಲ್ಲ, ಹಗಲು ಒಬ್ಬೊಬ್ಬರೆ ಹೋಗುವಂತಿರಲಿಲ್ಲ ಆದರೆ ಹಾಗೆ ಆಗಲೇ ಇಲ್ಲವಲ್ಲ! "ಹಾಗಾದರೆ ಗಂಡಸರ ಪುಣ್ಯ ಎಷ್ಟು ದೊಡ್ಡದಿರಬಹುದು! ಭೀತಿಯಿಲ್ಲದೆ ಗಂಡಸರ ಎದುರು ಸುಳಿಯುವ 'ಧೈರ್ಯ' ತೋರಿದರೆ ಸಾಕು. "ಆ ಹೆಣ್ಣಿಗೆ ಒಳ್ಳೆ ಧೈರ್ಯ, ಗಂಡಸರ ಹೆದರಿಕೆ ಚೂರು ಇಲ್ಲ" ಎಂದು ಅದನ್ನೇ ಒಂದು ಸಂಗತಿ ಎಂಬಂತೆ ಮೆಚ್ಚಿಕೊಳ್ಳುವವರೂ ಇದ್ದರು. ಅಂತಹ 'ಗಂಡುಕೋಟಿ' ಹುಡುಗಿಯರೆಂದರೆ ಗಂಡಸರನ್ನು ಕಂಡಷ್ಟೇ ಹೆದರುವವರೂ. ನನ್ನ ತಂದೆಯ ಆಫೀಸಿನ ಚಾವಡಿಯಲ್ಲಿ ಹೆಂಗಸು ಕಕ್ಷಿಗಾರಳು ಬೆಂಚಿನಲ್ಲಿ ಮುದುರಿಕೊಂಡೋ, ತಳಿಕಂಡಿಯ ದಂಡೆಗೆ ಒರಗಿ ನಿಂತುಕೊಂಡೋ ಅರೆ ಕುಳಿತುಕೊಂಡೋ ಇರುತ್ತಿದ್ದಳು. ಅವಳ ಕೇಸು ವಿವರಿಸಲು ಜೊತೆಗೆ ಹಿತೈಷಿಯೋ ಬಂಧುವೋ, ಉಪಕಾರಿಯೋ ಆದ ಒಬ್ಬ ತೈನಾತಿ. ಒಬ್ಬಂಟಿಯಾಗಿ ಆಫೀಸಿಗೆ ಬಂದು ವಕೀಲರೊಡನೆ ಬಿಡುಬೀಸಿಲ್ಲದೆ ದನಿಯೇರಿಸಿ ಮಾತಾಡುವ ಹೆಂಗಸರು ಇದ್ದರು. ಅಂಥವರ ಸ್ವರ ಕೇಳಿದೊಡನೆ "ಯಾರದು? ಗಂಡಸರ ಹಾಗೆ ಗಟ್ಟಿಯಾಗಿ ಮಾತಾಡುವವರು"- ಎಂಬ ಕುತೂಹಲದಿಂದ ಇಣುಕಿ ನೋಡುತ್ತಿದ್ದೆವು!"

ಅಂಕಣ ಬರಹವೆಂಬ ಪದಕ್ಕೆ ಗೌರವ ತಂದುಕೊಟ್ಟ ಲೇಖನಗಳು 'ಮಲ್ಲಿನಾಥನ ಧ್ಯಾನ' ಪ್ರಬಂದದಲ್ಲಿವೆ. ಬಾಲ್ಯವನ್ನು ನೆನಪಿಸುವ 'ಸನಾತನದ ಮರ, ಲೇಖನದಲ್ಲಿ ಲಿಂಗ ಪಕ್ಷಪಾತಕಗಳು ಯಾರು ಹೇಳಿ ಕೊಡದೆಯೂ ಹೇಗೆ ಬಾಲ್ಯದಲ್ಲಿಯೇ ಚಿಗುರೊಡೆದು ಬಿಡುತ್ತವೆ ಎಂಬುದನ್ನು ಗಮನಿಸಬಹುದಾಗಿದೆ.

ಇದು ಯಾರೋ ನೆಟ್ಟ ಮಾವಿನಮರ. ಬೇಸಗೆ ರಜಕ್ಕೆ ಸರಿಯಾಗಿ ಮಿಡಿಕಾಯಿ ತುಂಬಿಕೊಂಡು ಮಕ್ಕಳಿಗೆ ಸಲುಗೆ ಕೊಟ್ಟುಬಿಡುತ್ತದೆ. 'ಮಾವಿನಮರ ಧರ್ಮ ಸಮನ್ವಯದ ಹರಿಕಾರ. ಮಕ್ಕಳು ತೊಟ್ಟ ಉಡುಗೆಯಲ್ಲಿ ಕಾಯಿಮುಚ್ಚಿ ಕಚ್ಚಿ 'ಕಾಗೆಯೆಂಜಲು' ಮಾಡಿ ಜಾತಿ ಭೇದವಿಲ್ಲದೆ ಹಂಚಿಕೊಳ್ಳುವ ಸಂಭ್ರಮ ನೋಡುತ್ತೇವೆ. ಆದರೆ ಲಿಂಗಭೇದ? ಹೆಣ್ಣುಮಕ್ಕಳಿಗೆ ಮನೆಯೊಳಗಿಂದ ಉಪ್ಪುಕಾರ ಚೂರಿತರಲು ಹೇಳಿ ಗೆಳೆಯರು ಮರಹತ್ತುತ್ತಾರೆ. ಕಾಯಿ ಕೊಯ್ದು ಕೊಡುವ ಕೆಲಸ ಅವರದು. ಕತ್ತರಿಸಿ ಉಪ್ಪುಕಾರ ಕಲಿಸಿಕೊಡುವ ಕೆಲಸ ಹೆಣ್ಣು ಮಕ್ಕಳದ್ದು. ಹಂಚುವ ಕಾರ್ಯ ಇದ್ದವರಲ್ಲಿ ಒಬ್ಬ ಬಲಿಷ್ಠನದು. ಹೆಣ್ಣು ಮಕ್ಕಳೊಡನೆ ಕೇಳುತ್ತೇನೆ.

"ಅದೇಕೆ ನೀವೇ ಉಪ್ಪುಕಾರ ತಂದು ಹಚ್ಚಬೇಕು?" "ಮರಹತ್ತಲು ನಮ್ಮಿಂದಾಗುವುದಿಲ್ಲ. ಅಬ್ಬಬ್ಬ"–ಹ್ಞಂ! ಉಪ್ಪುಕಾರ ಅರೆಯುವವರು ಹೆಣ್ಣು ಹೆಂಗಸರು ಎಂದು ಹಿಂಡಿನಲ್ಲಿನ ಜೋರಿನ ಹುಡುಗ ಮೀಸೆ ಬಂದವರಿಗಿಂತ ಜಾಸ್ತಿ ಜರ್ಬಿನಲ್ಲಿ ನುಡಿಯುತ್ತಾನೆ ಮಾವಿನ ಮರದ ಮುಖಾಂತರ ಹೇಗೆ ಈ ಮಕ್ಕಳೆಲ್ಲ ಯಾರೂ ಹೇಳದೆಯೂ ವ್ಯವಸ್ಥೆಗೆ ಸರಿಯಾಗಿ ಸ್ಥಾನ ವಿಂಗಡನೆ ಮಾಡಿಕೊಳ್ಳುತ್ತಾರೆ. ಹೆಣ್ಣು ಎನ್ನುವುದನ್ನೇ ಮಾನದಂಡವಾಗಿಸಿಕೊಂಡ ಪುರುಷ ಪ್ರಧಾನ ಸಮಾಜ ಹೇಗೆ ತನ್ನ ಯಜಮಾನಿಕೆಯನ್ನು ಪರಂಪರೆಯ ಬಗೆಯಲ್ಲಿ ಮುಂದುವರೆಸ ಬಯಸುತ್ತದೆ ಎನ್ನುವುದು ಇಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಇದು ಮಾನಸಿಕವಾಗಿ ಅವರನ್ನು ಪುರುಷನ ಸರಿಸಮಾನ ಅವಕಾಶಗಳಿಂದ ದೂರಾಗಿಸುವ ಮತ್ತು ಅವರನ್ನು ದ್ವಿತೀಯ ದರ್ಜೆಯಲ್ಲಿ ಪರಿಗಣಿಸುವ ವ್ಯವಸ್ಥಿತ ಸಂಚೂ ಹೌದು.

ಈ ಪುರುಷಸಮಾಜ ಯಜಮಾನಿಕೆಯ ಹೆಸರಿನಲ್ಲಿ ಇಚ್ಛೆ ಬಂದಂತೆಲ್ಲ ವರ್ತಿಸಿದ್ದುಂಟು. ಮನಸ್ಸಿಚ್ಛೆಯಂತೆ ಹೆಣ್ಣನ್ನು ತಳಿಸಿದ್ದುಂಟು. ಅದೆಲ್ಲದಕ್ಕೂ ದೌರ್ಜನ್ಯ, ಕ್ರೌರ್ಯ, ಶೋಷಣೆಯ ಹೆಸರುಗಳು. ಇದೇ ಸಂಗ್ರಹದ 'ಎಂದೂ ಅಳದ ಮಾಲತೆ' ಬರಹ ಇದಕ್ಕೊಂದು ಸಾಕ್ಷಿಯಾಗಬಹುದೇನೋ.

ಮಾಲತ್ತೆ ಗಂಡ ಲುಚ್ಚ. ಬೇಕಾದಂತೆ ಸಂಪಾದನೆ ಇದ್ದರೂ ಹೆಂಡತಿ ಮಕ್ಕಳ ಹೊಟ್ಟೆಬಟ್ಟೆ ನೋಡಿಕೊಳ್ಳಬೇಕಾದವನು ತಾನೇ ಎಂಬ ಪ್ರಜ್ಞೆ ಇಲ್ಲದವನು. ಎಲ್ಲೆಂದರಲ್ಲಿ ವಾಚಾಮಗೋಚರ

ಬೈಯುವವ. ಅವರು ಇವರು ಇದ್ದಾರೆ ಎಂಬ ನಗೆನಾಚಿಕೆ ಇಲ್ಲದೆ ಮಾತಿನಲ್ಲೇ ಕುಕ್ಕಿ ಕೊಲ್ಲುವವ. ಏಳೆಂದರೆ ಏಳಲೇಬೇಕು. ನಡೆ ಎಂದ ಮೇಲೆ ಮತ್ತೂ ನಿಂತಿರಲಿಕ್ಕೆ ಸಾಧ್ಯವಿಲ್ಲ. ಅವನನ್ನು ಹಿಂಬಾಲಿಸಬೇಕು. ತವರಿನಲ್ಲಿ ಒಂದು ದಿನ ಕಳೆಯುವ ಹಾಗಿಲ್ಲ.

ಇಂಥ ಕಷ್ಟಗಳನ್ನು ಸಾಮಾನ್ಯದವರು ತಡೆದುಕೊಳ್ಳಲಾಗುವುದಿಲ್ಲ. ಯಾರಿಗಾದರೂ ಹೇಳಲು ಹೋದರೆ ಇವೆಲ್ಲ ಪ್ರಪಂಚದಲ್ಲಿ ಇದ್ದ ಮಾಮೂಲು ಕಷ್ಟಗಳೇ ಎಂಬಂತೆ ಕಾಣಿಸುತ್ತವೆ. ಆದರೆ ಅದನ್ನು ಅನುಭವಿಸುವವರಿಗೆ ಅವು ಹಾಗಲ್ಲವಲ್ಲ. ಹತ್ತಿರದಲ್ಲಿಯೇ ನಿಂತು ಅನುಭವಿಸುವವರನ್ನು ನೋಡುವವರಿಗೂ ತಿಳಿಯುತ್ತದೆ. ಮಾಮೂಲು ಎನಿಸಿಕೊಂಡ ಕಷ್ಟಗಳು ಒಬ್ಬರಿಂದ ಒಬ್ಬರಿಗೆ ಎಷ್ಟು ಭಿನ್ನ ಅಂತ.

ಮಾಲತ್ತೆ ಇಂಥ ನೀಚ ಗಂಡನೊಡನೆ "ಸಂಸಾರ ಮಾಡುವಾಗ ಹಗಲೆಂದರೆ ಹಗಲು, ನಡುರಾತ್ರಿಯೆಂದರೆ ನಡುರಾತ್ರಿ, ನಿದ್ದೆಯಲ್ಲಿ ಎಬ್ಬಿಸಿದರೆ ಎದ್ದು, ಸ್ನಾನಕ್ಕೆ ಹೋದಾಗ ಅಲ್ಲಿಗೇ ಬಂದು ಬಾಗಿಲು ತಟ್ಟಿದನೆಂದರೆ ಅಲ್ಲಿಯೂ, ಆಕೆ ಹೆಣ್ಣಿನ ಅಂಗಾಂಗ ಮಾತ್ರ, ಆತ ಗಂಡು ಅಥವಾ ಅವಳಮ್ಮ ತಿರಸ್ಕಾರದಿಂದ ಗದ್ಗದಿತವಾಗಿ ಹೀಯಾಳಿಸುವಂತೆ "ಗಂಡು ಘಂಟಾಮಣಿ" ಮಾತ್ರ, ಆಕೆ ಹೇಳಿದಂತೆ ಕೇಳುವವಳು. ಆತ ಯಜಮಾನ! ಆದರೂ ಆಕೆ ಯಾರ ಮುಂದಾದರೂ ಕಣ್ಣೀರು ಹಾಕಿದ್ದು ಕಂಡವರಿದ್ದಾರೆಯೇ? ಕೊನೆಗೆ 'ಇನ್ನು ಸಾಕು ಮಗಳೇ, ನಿನ್ನ ಜನ್ಮ ಉದ್ಧಾರವಾಯಿತು. ಬಾ ಮನೆಗೆ'– ಎಂದು ಕರೆಯಲು ಬಂದ ಅಪ್ಪನ ಎದುರಿಗಾದರೂ ಹೇಳಿಕೊಳ್ಳಲಿಲ್ಲ. ಹೆಣ್ಣಿಗೆ ತಾಳ್ಮೆ ಇದೆ, ಸಹನಶೀಲೆ ಅದಕ್ಕಾಗಿ ಸಹಿಸಿಕೊಂಡಿದ್ದಾಳೆ ಅಲ್ಲ ಅನುಭವಿಸುತ್ತಿದ್ದಾಳೆ.

ಪುರುಷ ಸಮಾಜ ಯಾಜಮಾನಿಕೆಯ ಹೆಸರಿನಲ್ಲಿ ಹೆಣ್ಣಿನ ಮೇಲೆ ದೌರ್ಜನ್ಯವೆಸಗಿದ್ದನ್ನು ನಾಗವೇಣಿಯವರ 'ಸೂರ್ಯನಿಗೊಂದು ವೀಳ್ಯಾ' ಬರಹ ಸಂಗ್ರಹದ 'ಪ್ರತಿಬಿಂಬಕ್ಕುಂಟೇ ಮಾನಕವಚದ ಹಂಗು' ಲೇಖನದಲ್ಲಿ ಗಮನಿಸಬಹುದಾಗಿದೆ. ಈ ಲೇಖನದಲ್ಲಿ ಪುರುಷ ದೌರ್ಜನ್ಯದ ವಿಕೃತ ಮನಸ್ಸಿನ ಲಿಂಗ ಅಸಮಾನತೆಯ ಪ್ರಶ್ನೆಯನ್ನು ಈ ಸಮಾಜದ ಮುಂದಿಡುತ್ತಾರೆ. ಕುಟುಂಬಗಳೆಂಬ ಕಲ್ಪನೆಯೇ ಇರದಿದ್ದ ಆ ಕಾಲದ ಸಮಾಜದಲ್ಲಿ ಆಸ್ತಿಯ ವಾರಸತ್ವದ ಸಮಸ್ಯೆಯೇ ಇಲ್ಲದಿದ್ದಾಗ, ಪಿತೃತ್ವವನ್ನು ಗಮನಿಸುವ ಅವಶ್ಯಕತೆಯೂ ಇರಲಿಲ್ಲ. 'ಮಾತೃತ್ವ ವಾಸ್ತವ', ಪಿತೃತ್ವ ವಿಶ್ವಾಸ– ಅಂದರೆ ಮಾತೃತ್ವವೆಂಬುದು ಪ್ರತ್ಯಕ್ಷ ಪ್ರಮಾಣ, ಪಿತೃತ್ವ ಶಬ್ದ ಪ್ರಮಾಣ ಎಂಬ ಚಾಲ್ತಿಯ ಸತ್ಯವನ್ನು ಬಲ್ಲ ಅಂದಿನ ಸಮಾಜ, ನಿಧಾನಕ್ಕೆ ಕುಟುಂಬ ವ್ಯವಸ್ಥೆಯತ್ತ ತಿರುಗತೊಡಗಿದಂತೆ ಪಿತೃತ್ವದ ಕಲ್ಪನೆಯಲ್ಲೂ ತೀವ್ರ ಬದಲಾವಣೆಯಾಯಿತು.

ಅಲ್ಲಿವರೆಗೆ ಶಬ್ಧ ಪ್ರಮಾಣವಾಗಿದ್ದ ಪಿತೃತ್ವ ಪ್ರತ್ಯಕ್ಷ ಪ್ರಮಾಣವನ್ನು ಕಲ್ಪಿಸುವುದಕ್ಕಾಗಿಯೇ ಗಂಡಂದಿರಿಂದ ಹೊಸ ಮಾರ್ಗಾನ್ವೇಷಣೆ ಆರಂಭವಾಯಿತು. ಈ ಹೊಸ ಅನ್ವೇಷಣೆಯಲ್ಲಿ 'ಕಬ್ಬಿಣದ ಕೌಪೀನ' ಅಥವಾ ಇನ್ನೂ ನೇರವಾಗಿ ಹೇಳುವುದಾದರೆ 'ಕಬ್ಬಿಣದ ಯೋನಿ ಕವಚ'!ವನ್ನು ಹೆಣ್ಣಿಗೆ ತೊಡಿಸಲಾಯಿತು.

ಆಂಧ್ರದ ವೈಚಾರಿಕ ಬರಹಗಾರ ತಾವೆ ಧರ್ಮರಾವ್ ಅವರ ಸಂಶೋಧನಾ ಕೃತಿ 'ಕಬ್ಬಿಣದ ಕೌಪೀನಗಳು' ಕನ್ನಡಕ್ಕೆ ಅನುವಾದಿತವಾಗಿದೆ. ನಾಗವೇಣಿಯವರು ಹೇಳುವಂತೆ ನಮ್ಮ ಅಮ್ಮನಮ್ಮ ಅವರಮ್ಮನಮ್ಮನಿಗಿಂತ ಒಂದೆರಡು ತಲೆಮಾರಿನ ಹಿಂದೆ ಆ ಸಮಾಜದಲ್ಲಿ ಹೆಂಡತಿಯರ 'ಮಾನಕ್ಷೇತ್ರ'ಕ್ಕೆ ಕಬ್ಬಿಣದ ಕೌಪೀನ ತೊಡಿಸಿ, ಬೀಗ ಜಡಿಯುತ್ತಿದ್ದರಂತೆ! ಗಂಡಂದಿರು ಯಾವುದೋ ಕಾರ್ಯಾರ್ಥಕ್ಕಾಗಿ ದೇಶ ಸುತ್ತಾಡಲು ಹೊರಟಾಗ ತಮ್ಮ 'ಸ್ವಂತ ಆಸ್ತಿ'ಗಳಾದ ಹೆಂಡತಿಯರ ಪ್ರಮುಖ ಮಾನಕ್ಕೊಂದು ಸುಂದರ ಚಿತ್ತಾರವಿರುವ ಬೀಗ ಜಡಿದು ಬೀಗುತ್ತ ಹುಂಬ ವಿಶ್ವಾಸದಿಂದ ತುಂಬು ಆತ್ಮತೃಪ್ತಿಯಿಂದ ಕೀಲಿಯನ್ನು ಭದ್ರವಾಗಿಟ್ಟುಕೊಂಡು ಹೋಗುತ್ತಿದ್ದರಂತೆ.

'ತನ್ನ ವಂಶ ಪವಿತ್ರವಾಗಿರಬೇಕು ತನ್ನ ಸಮಸ್ತ ಆಸ್ತಿಯ ಮುಂದಿನ ವಾರಸುದಾರ ತನ್ನ ಬೀಜದಿಂದಲೇ ಹುಟ್ಟಿದವನಿರಬೇಕು, ತನ್ನ ಅನುಪಸ್ಥಿತಿಯಲ್ಲಿ ತನ್ನ ವಾರಸತ್ವದ ಹಕ್ಕಿರುವ ಪುತ್ರನನ್ನು 'ಹೆರುವ ಹಕ್ಕುಳ್ಳ' ಹೆಂಡತಿಯ ಮಾನಕ್ಷೇತ್ರಕ್ಕೆ ಪರಪುರುಷನ ಸಂಪರ್ಕವಾಗಲೇಬಾರದು ಎಂಬ ಪ್ರಮುಖ ಉದ್ದೇಶದಿಂದ ಹೆಂಡತಿಗೆ ಕಬ್ಬಿಣದ ಯೋನಿ ಕವಚವನ್ನು ತೊಡಿಸುತ್ತಿದ್ದರಂತೆ!

ಈಗ ಕಾಲ ಬದಲಾಗಿದೆ. ಪರಂಪರೆ, ಸನಾತನ ಧರ್ಮದಿಂದ ಬಂದಿರುವ ಪಾತಿವ್ರತ್ಯದ ವ್ಯಾಖ್ಯಾನವನ್ನು ಎಸೆದು ಪಾತಿವ್ರತ್ಯಕ್ಕೆ ಹೊಸದಾದ ವ್ಯಾಖ್ಯಾನ ಬರೆಯಿರಿ ಆ ಗಂಡಿಗೂ ಆತನ ನೈತಿಕತೆಯನ್ನು ಹದ್ದುಬಸ್ತಿನಲ್ಲಿಡಲು ಒಂದಿಷ್ಟು ನೀತಿಸಂಹಿತೆ'ಯನ್ನು ಜಾರಿಗೆ ತರುವ ಅವಶ್ಯಕತೆ ಇದೆ. ಪುರುಷ ಪ್ರಧಾನ ಸಮಾಜದ ಏಕಪಕ್ಷೀಯ 'ನೀತಿ ಸಂಹಿತೆ'ಯನ್ನು ಬದಲಾಯಿಸುವಂತೆ ಒತ್ತಾಯಿಸುವ ವೈಚಾರಿಕ ಮನೋಭಾವದ ಹಲವು ಮಹಿಳೆಯರು ಇದೀಗ ಮೈಕೊಡವಿಕೊಂಡು ಎದ್ದುಕೂತಿದ್ದಾರೆ. ಪ್ರತಿಯೊಬ್ಬ ಗಂಡನಿಗೂ 'ಇದು ತನ್ನದು...' ಎಂದು ಅಂದುಕೊಳ್ಳುವುದರಲ್ಲಿ ಸುಖವಿದೆಯೇನೋ ನಿಜ. ಆದರೆ ಆಕೆಯ ಸುತ್ತ ಮಾತ್ರವೇ ನೈತಿಕತೆಯ ದೊಡ್ಡ ಕೋಟೆ ಕಟ್ಟಿ ನಾನೇ ಸರ್ವಾಧಿಕಾರಿ ಎಂದು ವರ್ತಿಸುವುದರಲ್ಲಿ ಯಾವ ಮಹತ್ತನ್ನೂ ಸಾಧಿಸಲಾರ.

'ಸಂಘರ್ಷದ ಸರಿ' ಲೇಖನದಲ್ಲಿ ಮೌಖಿಕ ಮಹಾಕಾವ್ಯದ ಸಾಂಸ್ಕೃತಿಕ ವೀರೆ ತುಳುನಾಡಿನ ಸಿರಿಯ ಪಾಡ್ದನ ಮತ್ತು ಉಡುಪಿ ಶಾಸಕರ ಪತ್ನಿ ಪದ್ಮಪ್ರಿಯಳಿಗೆ ಎದುರಾದ ಇಕ್ಕಟ್ಟಿನ ಬದುಕು ಮತ್ತು ಆ ಬದುಕು ಧಾರುಣವಾಗಿ ಅಂತ್ಯಗೊಂಡಿದ್ದನ್ನು ಪ್ರಸ್ತಾಪಿಸುತ್ತಾರೆ.

ಉಡುಪಿ ಶಾಸಕರ ಪತ್ನಿ ಪದ್ಮಪ್ರಿಯ ಕೊನೆಗೂ ಸಾವಿನ ಮನೆಯನ್ನು ಹೊಕ್ಕಿದ್ದಾಳೆ! ಸಾಂಪ್ರದಾಯಿಕ ಸಮಾಜದ ರೀತಿ ರಿವಾಜುಗಳನ್ನು ಧಿಕ್ಕರಿಸಿ, ಕೌಟುಂಬಿಕ ವ್ಯವಸ್ಥೆಯೊಳಗಿನ ಕಟ್ಟುಪಾಡು, ಮೋಹ, ಆಮಿಷಗಳನ್ನು ತುಂಡರಿಸಿಕೊಂಡು ಅದುವರೆಗೂ ತಾನು ಕಾಣದಿದ್ದ ಹೊಸ ಬದುಕು ಒಂದಕ್ಕೆ ತುಡಿಯುತ್ತ ದೆಹಲಿಗೆ ಹೋದ ಪದ್ಮಪ್ರಿಯ ಆತ್ಮಹತ್ಯೆ ಮಾಡಿಕೊಂಡಳು. ಈ ಹೆಣ್ಣು ಇದೀಗ ತಾನಾಗಿಯೇ ಆತ್ಮಹತ್ಯೆ ಮಾಡಿಕೊಂಡಿದ್ದರೂ, ಅದು ನಮ್ಮ ವ್ಯವಸ್ಥೆಯ ಪಕ್ಷಪಾತೀಯ ಲಿಂಗಭೇದ ನೀತಿ ಆಕೆಯನ್ನು ಭೀಕರವಾದ ಮಾನಸಿಕ ವಿಪ್ಲವಕ್ಕೆ ದೂಡಿ ನಡೆಸಿದ ವ್ಯವಸ್ಥಿತ ಕೊಲೆಯೆಂದೇ ಪರಿಗಣಿಸಬೇಕಾಗುತ್ತದೆ ಎನ್ನುವ ಲೇಖಕಿ "ತಮ್ಮ ತುಳುನಾಡಿನ ಸಾಂಸ್ಕೃತಿಕ ವೀರೆ – ಸ್ವಾಭಿಮಾನಿ ದೇವತೆ 'ಸಿರಿ' ತುಳುವ ಸಮಾಜದಲ್ಲಿ ಹೊಸ ಮೌಲ್ಯಗಳ ಸ್ಥಾಪನೆಗಾಗಿ, ರೂಢಿಗತ ಸಂಪ್ರದಾಯಗಳನ್ನು ಭಂಜಿಸಿ, ಅದರಲ್ಲೂ ಪುರುಷಾಧಿಕಾರಕ್ಕೆ ತೀವ್ರ ಪ್ರತಿರೋಧ ಒಡ್ಡಿದ – ಈ ಸಾಂಸ್ಕೃತಿಕ ಧೀರೆಯ 'ಪೌರುಷ'ಗಳನ್ನು ಪಾಡ್ದನ (ಮೌಖಿಕ ಕಾವ್ಯ) ರೂಪದಲ್ಲಿ ಪದ್ಮಪ್ರಿಯಳೇನಾದರೂ ತನ್ನ ಬಾಲ್ಯಾವಸ್ಥೆಯಲ್ಲಿ ಕೇಳಿಸಿಕೊಂಡಿದ್ದರೂ... ಹೊಸ ಬದುಕು ರೂಪಿಸುವ ಆಕೆಯ 'ಕಾರ್ಯತಂತ್ರ'ದಲ್ಲಿ ಸಾಕಷ್ಟು ಬದಲಾವಣೆಯಾಗುತ್ತಿತ್ತೇನೋ?! ಎಂಬ ಆಶಯವನ್ನು ವ್ಯಕ್ತಪಡಿಸಲಾಗಿದೆ.

ಸಿರಿ – ಗಂಡನ ವಿಷಯ ಲಂಪಟತನವನ್ನು ಸಾರ್ವಜನಿಕವಾಗಿ ಪ್ರಶ್ನಿಸಿ, ಪ್ರತಿಭಟಿಸಿ, ಸಾಮಾಜಿಕ ನ್ಯಾಯ ಪಂಚಾಯ್ತಿಯ ಸಂದರ್ಭದಲ್ಲಿ ಕೈಹಿಡಿದ ಗಂಡನೇ ಎದುರಾಳಿ ಪಕ್ಷದ ಪರವಹಿಸಿ ಹೆಂಡತಿಗೆ ದ್ರೋಹಬಗೆದಾಗ ಆ ನೀತಿಗೆಟ್ಟ ಗಂಡನಿಗೆ ಆ ದಿನವೇ ವಿಚ್ಛೇದನ ನೀಡಿ ಆತನ ಪೌರುಷಕ್ಕೆ ಸವಾಲೆಸೆದು... ಮರುಮದುವೆಯಾಗುವ ಮೂಲಕ, ಅಲಕ್ಷಿತ ಸಮುದಾಯದಲ್ಲಿ ಆಕೆ ಒಂದು ಹೊಸ ಮಾದರಿ ವ್ಯವಸ್ಥೆಯನ್ನು ನಿರ್ಮಿಸಿದ ಪರಿ ಈ ಪಾಡ್ದನದ ಕಥಾ ಹಂದರದಲ್ಲಿ ದಿಟ್ಟವಾಗಿ ಮೂಡಿಬಂದಿದೆ. ತುಳುವ ಸ್ತ್ರೀ ಸಮುದಾಯಕ್ಕೆ ಹೊಸ ಮೌಲ್ಯಗಳನ್ನು ಕಟ್ಟಿಕೊಡುವ ಇಂತ ಪಾಡ್ದನಗಳು ಸಮಾಜದ ಸ್ಥಾಪಿತ ವ್ಯವಸ್ಥೆಗಳನ್ನು ಧಿಕ್ಕರಿಸಿ ಸುಭದ್ರವಾದ ಹೊಸ ಬದುಕನ್ನು ರೂಪಿಸುವ ಮಾದರಿಗಳಾಗಬೇಕು.

ಇದೆ ಮಾದರಿಯ ಕಥೆಯನ್ನು ವೈದೇಹಿಯವರ 'ಕಣಕ್ಕೊಂದು ಕತೆ' ಲೇಖನದಲ್ಲಿ ಕಾಣಬಹುದಾಗಿದೆ. ಇದು ಉಜ್ಜೈನಿಯ ಮಹಾಕಾಲನ ಪತ್ನಿ ಶಕ್ತಿದೇವತೆಯ ಕಥೆ. 'ಹರಸಿದ್ದ

ಮಾತಾಳ'ನ ಎರಡೂ ಕಥೆಗಳ ಜೊತೆಗೆ ಇದೂ ಬರುತ್ತದೆ. ಜನಪದಿಯ ಮೌಲ್ಯಗಳನ್ನು, ಅವುಗಳ ಸತ್ವವನ್ನು ಹಾಗೆಯೇ ಕಾಯ್ದಿರಿಸುವ ಮನಸ್ಸು ಈ ಇಬ್ಬರೂ ಲೇಖಕಿಯರಲ್ಲಿಯೂ ಮೇಳೈಸಿದೆ.

ಲಿಂಗ ವ್ಯವಸ್ಥೆಯಡಿ ಈ ಭಾಷೆಯೂ ಕೂಡ ನಲುಗಿ ಹೋದದ್ದನ್ನು ನಾಗವೇಣಿ 'ಹೆಣ್ಣೊಳಗಿನ ಭಾಷಾಂತರ' ಲೇಖನದ ಮೂಲಕ ಪ್ರಸ್ತಾಪಿಸುತ್ತಾರೆ. ಭಾಷೆ ಎಂಬುದು ಸಂವಹನ ಸಲಕರಣೆ ಮಾತ್ರವೇ ಅಲ್ಲ ಅದಕ್ಕೆ ಮನುಷ್ಯನ ಜೀವಂತಿಕೆಯನ್ನು ಕುಂದಿಸುವ ಶಕ್ತಿಯಿದೆ. ಇತ್ತೀಚಿನ ದಿನಗಳಲ್ಲಿ ಇಂಗ್ಲೀಷನ್ನು ತಮ್ಮ ಅಹಂಕಾರ ಪ್ರತಿಷ್ಠೆಯ ಸಲಕರಣೆಯಾಗಿ ಬಳಸಿಕೊಳ್ಳುತ್ತಿರುವ ಹಲವು ವ್ಯಕ್ತಿಗಳಿದ್ದಾರೆ. ಬಾಲ್ಯದಿಂದಲೂ 'ಭಾಷಾಂತರ'ದ ಸರ್ಕಸ್ ಮಾಡಿಕೊಂಡು ಅಗತ್ಯಕ್ಕೆ ತಕ್ಕಷ್ಟು ಭಾಷೆಗಳನ್ನು ಕಲಿಯೋದು ಲೇಖಕಿಗೆ ಕಷ್ಟವಾಗಲಿಲ್ಲವಂತೆ. ಆದರೆ ದೊಡ್ಡವರಾದ ನಂತರ ಈ ಪುರುಷ ಪ್ರಧಾನ ಸಮಾಜದ ಪುರುಷಜನ್ಯ 'ಭಾಷೆ'ಯನ್ನು ಕಲಿಯೋದು ಮತ್ತು ಆ ಭಾಷೆಯನ್ನು ತಮ್ಮ 'ಹೆಣ್ಣಿನ ಭಾಷೆಗೆ ಅಥವಾ ಹೆಣ್ಣಿನ ಭಾಷೆಯಿಂದ' ಭಾಷಾಂತರಿಸಿಕೊಳ್ಳುವ ಕಾರ್ಯ ಅಥವಾ ಸಂದರ್ಭವಿದೆಯಲ್ಲ ಅದು ಮಾತ್ರ ತೀರ ಯಾತನಾಮಯವಾದುದ್ದಾಗಿದೆ.

'ಆ ಕಾಲದ ನನ್ನ ಅನಕ್ಷರಸ್ಥೆ ಅಮ್ಮನೂ ನನ್ನಲ್ಲಿ ಹಲವು ಬಾರಿ ಹೇಳಿದ್ದಿದೆ. 'ಹೆಂಗಸರಿಗೆ... ನಮಗೆಲ್ಲಿದೆ ಭಾಷೆ ಮಗಾ... ನಮ್ಮದೇನಿದ್ದರೂ ಅಪ್ಪನ ಭಾಷೆ... ಅವರಪ್ಪನ ಭಾಷೆ ಮಾತ್ರ... ಅಂತ ನಿಜವಲ್ಲವೇ ಅದು! ಹೆಣ್ಣಿಗೆ ಮುಕ್ತತೆ ಇಲ್ಲದ ಮೇಲೆ ಭಾಷೆ ಹುಟ್ಟೀತು ಹೇಗೆ? ಅದು ಪುರುಷ ಕುಲಕ್ಕೆ ತಲುಪೀತು ಹೇಗೆ?

ಅದರಲ್ಲೂ ಲಿಂಗವ್ಯವಸ್ಥೆಯಿಂದ ಮುಕ್ತಗೊಂಡ 'ಹೆಣ್ಣಿನ ಭಾಷೆ'ಯನ್ನು ಪುರುಷ ಪ್ರಧಾನ ಸಮಾಜ ಒಪ್ಪಿಕೊಳ್ಳುವುದೂ ಇಲ್ಲ; ಸಹಿಸಿಕೊಳ್ಳುವುದು ಇಲ್ಲ. ನಿಜ ಹೇಳಬೇಕೆಂದರೆ, ನನ್ನೊಳಗಿನ ಯೋಚನೆ, ಚಿಂತನೆ, ಸಮಸ್ಯೆ ಸೃಜನಶೀಲತೆಯನ್ನು ನನ್ನ ಮಿಡಿತ-ತುಡಿತಕ್ಕೆ ತಕ್ಕ ಹಾಗೆ ಅಭಿವ್ಯಕ್ತಿಸಲು ನನ್ನೊಳಗಿರುವ ಸದ್ಯದ 'ಭಾಷೆ'ಯಿಂದ ನನಗಿನ್ನೂ ಸಾಧ್ಯವಾಗಿಲ್ಲ. ನಾನು ಇದವರೆಗೂ ಅಭಿವ್ಯಕ್ತಿಸಿದ್ದು ನನ್ನ ಅಪ್ಪ ಹೇಣ್ಣಾಗಿರುವ ಕಟ್ಟುಕಟ್ಟಲೆಯಡಿಯಲ್ಲಿ ಸವರಿ-ತಿದ್ದಿ-ತೀಡಿ ಕೊಟ್ಟ 'ಅವರ ಭಾಷೆ'ಯಲ್ಲೇ. ನನ್ನ ಅಮ್ಮನೂ ತನ್ನೊಳಗಿದ್ದ 'ಹೆಣ್ಣಿನ ಭಾಷೆ'ಯನ್ನು 'ಅಪ್ಪನ ಭಾಷೆಗೆ' ಭಾಷಾಂತರಿಸಿಕೊಂಡೇ ಬದುಕು ನಡೆಸಿದವರು. ನಾನು ಹಾಗೆ ಬದುಕು ನಡೆಸಬೇಕೆಂದು ಆಕೆ ಬಯಸಿದವರು. ಈ ಕಾರಣಕ್ಕೆ ಈ ಸಂಸಾರದಲ್ಲಿ ನನ್ನದೂ 'ಭಾಷಾಂತರ'ದ್ದೇ ಬದುಕು. ನನ್ನದು ಮಾತ್ರವಲ್ಲ ನನ್ನಂಥ ಎಲ್ಲ ಹೆಣ್ಣು ಮಕ್ಕಳದ್ದು ಕೂಡಾ ಎಂದು ನಾ ನಂಬಿದ್ದೇನೆ'.[೨೫]

ಹೆಣ್ಣಿಗೊಂದು ಭಾಷೆ ಏಕಿಲ್ಲ? ಎನ್ನುವ ಪ್ರಶ್ನೆಯನ್ನೆತ್ತುವ ಲೇಖಕಿ ಇದೇ ಶೀರ್ಷಿಕೆಯಡಿ ಮತ್ತೊಂದು ಲೇಖನವನ್ನು ಬರೆದಿದ್ದಾರೆ. ಅಲ್ಲಿ ಈ ಸಮಾಜದಲ್ಲಿ ಹೆಣ್ಣಿಗೊಂದು ಭಾಷೆ ಗಂಡಿಗೊಂದು ಭಾಷೆ ಇದೆ; ಭಾಷೆಯಲ್ಲಿ ಹೆಣ್ಣು ಮತ್ತು ಗಂಡುಗಳೆಂಬ ಎರಡು ನೆಲೆಗಳಿವೆ; ಹಾಗೆಯೇ ಈ ಪುರುಷ ಕೇಂದ್ರಿತ ಸಮಾಜ ವ್ಯವಸ್ಥೆಯಲ್ಲಿ ಇರುವ ಲಿಂಗತಾರತಮ್ಯದ ಪ್ರಭಾವ ಭಾಷೆಯಲ್ಲೂ ಇದೆ. ಈ ವಿಷಯ ಪ್ರಸ್ತಾಪವಾಗಿದ್ದು ಕನ್ನಡ ವಿಶ್ವವಿದ್ಯಾನಿಲಯದಲ್ಲಿ ನಡೆದ 'ಹೆಣ್ಣು ಮತ್ತು ಭಾಷೆ' ಎಂಬ ವಿಚಾರ ಸಂಕಿರಣದಲ್ಲಿ "ನಮ್ಮ ಭಾಷೆಯು ಪುರುಷ ನಿರ್ಮಿತ ಭಾಷೆ. ಆ ಭಾಷೆಯ ಪ್ರತಿಯೊಂದು ರಾಚನಿಕ ಹಂತ ಹಾಗೂ ಶಾಬ್ದಿಕ ಬಳಕೆ ಪುರುಷ ಕೇಂದ್ರಿತವಾದದ್ದು ಮತ್ತು ಪುರುಷನಿಗೆ ಪ್ರಾಧಾನ್ಯತೆಯನ್ನು ಕೊಡುವಂತಹದ್ದು. ಪುರುಷರು ಅಭಿವ್ಯಕ್ತಗೊಳಿಸುವ ಹಾಗೂ ಬಳಸುವ ಭಾಷಿಕ ರಚನೆಗೂ ಸ್ತ್ರೀಯರು ಬಳಸುವ ಅಭಿವ್ಯಕ್ತಿ ಭಾಷೆಯ ರಚನೆಗೂ ಸಾಕಷ್ಟು ವ್ಯತ್ಯಾಸವಿದೆ. ಹೆಣ್ಣು ಗಂಡುಗಳ ಭಾಷಾ ಬಳಕೆಯಲ್ಲಿ ಎಷ್ಟು ತಾರತಮ್ಯವಿದೆಯೆಂದರೆ – ಗಂಡಸರು ಬಳಸುವ ಭಾಷೆಯಲ್ಲಿ ಅವರ ಮಾತು 'ಎಲ್ಲವನ್ನೂ' ಒಳಗೊಂಡಿರುತ್ತದೆ. ಸಾಮಾಜಿಕವಾಗಿ ಇರುವ ಲಿಂಗತಾರತಮ್ಯದ ನೆಲೆಯನ್ನು ಹೆಂಗಸರು ಮಾತ್ರ ಅನುಭವಿಸುತ್ತ, ಅದಕ್ಕೆ ಪ್ರತಿಕ್ರಿಯೆಯಾಗಿ ಅವರು ತಮ್ಮ ಭಾಷೆಯಲ್ಲಿ ಸಮಾಜಕ್ಕೆ ತಕ್ಕಂತಹ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತಾರೆ. ಆದ್ದರಿಂದಲೇ ಹೆಂಗಸರ ಭಾಷೆ 'ಅಧೀನವಾಗಿದ್ದು ಒಟ್ಟಾರೆ ನಮ್ಮ ಭಾಷೆಯಲ್ಲಿ ಸ್ತ್ರೀ ವಿಶಿಷ್ಟ ಅನುಭವಗಳ ಗೈರುಹಾಜರಿ ಇದೆ' ಎನ್ನುತ್ತಲೆ ಅಪ್ಪನ ಭಾಷೆ ಎಂದೂ 'ಅಮ್ಮನ ಭಾಷೆ' ಆಗಿರಲಿಲ್ಲವೆಂಬುದನ್ನು ನೆನಪಿಸಿಕೊಳ್ಳುತ್ತಾರೆ.

"ಹೌದು, ಅಪ್ಪನ ಭಾಷೆಯಲ್ಲಿ ಕೆಲವು ಸ್ತ್ರೀವಾಚಕ ನಾಮಪದಗಳು, ಕ್ರಿಯಾಪದಗಳು: ಮತ್ತೆ ಕೆಲವು ಸ್ತ್ರೀವಾಚಿ ಪದಗಳಿಂದಲೇ ಹುಟ್ಟಿಕೊಂಡಂತಹ ಪುರುಷಸೂಚಕಪದಗಳು (ಬೋಳಿಮಗ, ಮುಂಡೇಮಗ, ರಂಡೇಮಗ, ಸೂಳೇಮಗ) ನಮ್ಮ ಅಂಗಳದೊಳಗೆ ಪ್ರಯೋಗಗೊಂಡಾಗಲೆಲ್ಲ ಅಮ್ಮ ತಮ್ಮ ಮೌನಭಾಷೆಗೆ ಶರಣಾಗುತ್ತಿದ್ದರು. ಆದರೆ ಕಣ್ಣಲ್ಲಿ 'ಕೆಂಡದ ಮಳೆ' ಸುರಿಸುತ್ತಿದ್ದರು". ಈ ಸಮಾಜದ ಎಲ್ಲಾ ಅಮ್ಮಂದಿರು ಮಾಡಿದ್ದು ಇದನ್ನೇ. ಹಾಗೂ ತಮ್ಮ ಹೆಣ್ಮಕ್ಕಳಿಗೆ ಕಡ್ಡಾಯವಾಗಿ ಮತ್ತು ನಿರಂತರವಾಗಿ ಬೋಧಿಸಿದ್ದು ಅದನ್ನೇ.

ಅದು ಗಂಡಸರ್ದು ಭಾಷೆ..., ಅದು ಹೇಗಿದ್ರೂ ಚಂದ..., ನಾವು ಮಾತ್ರ ಆ ಭಾಷೆಯನ್ನು ಬಳಸುವಂತಿಲ್ಲ..., ಹೆಣ್ಣುಗಳ ಭಾಷೆಗೆ ಒಂದು ರೀತಿ ರಿವಾಜು – ಕಟ್ಟುಪಾಡಿದೆ; ನಾವು ಹಾಗೇ ಮಾತನಾಡಿದರೆ ಊರು ನಮ್ಮನ್ನು ಕೆಟ್ಟದಾಗಿ ನೋಡುತ್ತೆ, ಕತೆಕಟ್ಟುತ್ತೆ, ನಮ್ಮ ಮುಖಕ್ಕೆ ಕ್ಯಾಕರಿಸಿ ಉಗಿಯುತ್ತೆ.

ಗುಂಪಾಗಿಯೇ ಹೊಡೆದಾಡುತ್ತ ಪ್ರೀತಿಸುತ್ತ ಸಾಯುತ್ತ ಹುಟ್ಟುತ್ತ ಸಾಗುತ್ತಲೇ ಇರುವ ದಾರಿ ಅದು.

"ಈ ವಿಶ್ವ ಹೀಗಾಗಲು ಮಿಲಿಯಾಂತರ ವರ್ಷ ಬೇಕಾಯಿತೇಕೆ? ಈ ಭೂಮಿ ಮತ್ತು ಈ ಭೂಮಿ ಮೇಲಿನ ನಾವು ಇವತ್ತಿನ ಈ ಸ್ಥಿತಿ ತಲುಪಲು ತಗಲಿದ ಸಮಯವೆಷ್ಟು? ಚಲಿಸುವ ಈ ಭೂಮಿಯ ಚಲನೆಯಾದರೂ ನಮಗೆ ತಿಳಿಯುತ್ತಿದೆಯೇ? ನಿಂತಂತೆ ಕಾಣುತ್ತದೆ. ಚಲಿಸುತ್ತದೆ. ವೇಗವನ್ನು ಒಂದು ಗೆರೆ ಜಾಸ್ತಿ ವರ್ಧಿಸಿದರೂ ತನ್ನ ಮಕ್ಕಳು ಎಲ್ಲಿ ಬಿದ್ದು ಹೋಗುತ್ತವೆಯೋ ಎಂಬ ಆತಂಕದಲ್ಲಿ ನಿಧಾನವಾಗಿ ಚಲಿಸುವ ಭೂಮಿ ಅದರಲ್ಲಿ ವೇಗವಾಗಿ ಚಲಿಸುವ ಬಯಕೆಯ ನಾವು ಜೋರಾಗಿ ಹೆಜ್ಜೆ ಹಾಕುತಿದ್ದೇವೆ ಅಂತ ನಮಗನಿಸಿದರೆ ಹಾಗೆ ಅನಿಸುವುದು ಮಾತ್ರ ಬದುಕನ್ನು ಆರಂಭದಿಂದ ಪುನಃ ಒಮ್ಮೆ ಅವಲೋಕಿಸಿದರೇನೇ ಸಾಕು, ಅದು ಬರೀ ಭ್ರಮೆ ಎಂಬುದು ಮನವರಿಕೆಯಾಗುತ್ತದೆ. ದೂಡಲಾಗದಂಥದು ಕಾಲವೊಂದೇ ಕಾಲವೆಂಬುದರ ನೀರಿನ ನಿಲುದಾಣವೇ ಪ್ರಲಯವೇ? ಅಲ್ಲಿಂದ ಮುಂದೆ ಮತ್ತೆ ಮೊದಲಿಂದ ತೊಡಗುವ ಕಾಲಚಕ್ರ."[೧೧]

ಮನುಷ್ಯನ ನೈತಿಕತೆಗಿಂತ ಮಾನವೀಯತೆಯೇ ಮುಖ್ಯ. ಮಾನವೀಯ ಗುಣಗಳೇ ಮುಖ್ಯ ಎಂಬುದನ್ನು ನಾಗವೇಣಿ ತಮ್ಮ ಸಾಹಿತ್ಯ ಕೃತಿಗಳ ಮೂಲಕ ಮತ್ತೆಮತ್ತೆ ದಾಖಲಿಸುತ್ತಾರೆ. ಆ ಮೂಲಕವೇ ಅವರು ಕಂಡುಕೊಂಡ ಜೀವನ ದರ್ಶನವನ್ನು ಗುರುತಿಸಬಹುದಾಗಿದೆ.

ಬಗ್ಗುಂಡಿ ಪ್ರಸಂಗ ಕಥೆಯಲ್ಲಿ ಕರಿಯ ಹದಿನೇಳು ವರ್ಷದಿಂದ ವೆಂಕಪ್ಪಾಳ್ವರ ಮನೆಯಲ್ಲಿ ಊಳಿಗಕ್ಕಿದಾನೆ. ಗುತ್ತಿನ ಮನೆಗೆ ಕರಿಯಾ ಬಂದಾಗಿನಿಂದ ಸುಗ್ಗಿ, ಎಣೆಲ್, ಕೊಳಕೆ ಅಂತ ಮೂರು ಬೆಳೆಗಳನ್ನು ತೆಗೆಯಲಾರಂಭಿಸಿದ್ದ ಮನೆಯ ಧಣಿಯೊಬ್ಬನನ್ನು ಬಿಟ್ಟು ಮನೆಯ ಇತರರೆಲ್ಲರನ್ನು ಪ್ರೀತಿಸುತ್ತಿದ್ದ ಗೌರವಿಸುತ್ತಿದ್ದ.

ಬರ್ತಬರ್ತ ವೆಂಕಪ್ಪಾಳ್ವರು ಕರಿಯನ ಮೇಲೆ ನಡೆಸುವ ದಬ್ಬಾಳಿಕೆ ಹೆಚ್ಚಾಗುತ್ತಾ ಬಂದಿತ್ತು. ಕರಿಯನ ಮೇಲಿನ ಸಿಟ್ಟು ಉಮ್ಮಕ್ಕೆಯಲ್ಲಿ ಕೊನೆಗೊಳ್ಳುತ್ತಿತ್ತು. ಕರಿಯ ಮತ್ತು ಉಮ್ಮಕ್ಕೆ ಹೆಚ್ಚು ಕಡಿಮೆ ಒಂದೇ ವಯಸ್ಸಿನವರಾದರೂ ಉಮ್ಮಕ್ಕೆಯನ್ನು ಕರಿಯ ತಾಯಿ ಸ್ಥಾನದಲ್ಲಿಟ್ಟು ನೋಡಿದ್ದ. ಆದರೆ ವೆಂಕಪ್ಪಾಳ್ವರು ಅವರಿಬ್ಬರ ನಡುವೆ ಇಲ್ಲಸಲ್ಲದ ಸಂಬಂಧ ಕಲ್ಪಿಸಿಕೊಂಡು ಹೆಂಡತಿ ಮೇಲೆ ಪ್ರಹಾರ ಆರಂಭಿಸುತ್ತಿದ್ದರು. ಧಣಿಗಳ ಅವಾಚ್ಯ ಬೈಗುಳ ಭಾಷೆ ಕೇಳಿದಾಗಲೆಲ್ಲ ಕರಿಯ ಮುಖವೆತ್ತಲಾರದಷ್ಟು ಮುದುಡಿ ಹೋಗುತ್ತಿದ್ದ. ಅವಮಾನಗಳಿಂದ ಕುಗ್ಗುತ್ತಿದ್ದ.

ಬಗ್ಗುಂಡಿಗೆ ಹೋಗುವ ರಾತ್ರಿ ವೆಂಕಪ್ಪಾಳ್ವರ ಗಲಾಟೆ ಹೆಚ್ಚಾಯಿತು. ಉಮ್ಮಕ್ಕೆಯ ಮೇಲೆ ಬೈಗುಳದ ಜೊತೆಗೆ ಜುಟ್ಟುಹಿಡುದು ಹೊಡೆಯುವುದಕ್ಕೆ ಪ್ರಾರಂಭಿಸಿದಾಗ ಕರಿಯ ಜಗುಲಿಯಿಂದ ಚಾವಡಿಗೇರಿ ಆಳ್ವರನ್ನು ಜಾಡಿಸಿ ದೂರದೂಡಿದ್ದ. "ನನ್ನ ಎಂಜಲು ನೆಕ್ಕಿ ನನ್ನ ಎದುರು ನಿಲ್ತಿಯೇನೋ

'ಈ ಸಮಾಜದಲ್ಲಿ ಹೆಣ್ಣಿನ ಭಾಷಾ ಬಳಕೆಗೆ ಮಿತಿಗಳಿವೆ' ಎಂಬುದನ್ನು ವೈದೇಹಿಯವರ 'ಟಾಕೀಸಿನ ಮಾತು' ಅಂಕಣ ಬರಹದಲ್ಲಿ ಗಮನಿಸಬಹುದಾಗಿದೆ. ಅಂದಿನ ಸಿನಿಮಾಗಳೂ ಕೂಡ ಪತಿ, ಪತಿಸೇವೆ ಎಂಬ ಪ್ರಮುಖ ಥೀಂಅನ್ನೆ ಹೇಳುತ್ತಿದ್ದವು. ಮುಗ್ಧತೆಯೇ ಮೈವೆತ್ತು ಬಂದಂಥ ನಟನೆಯಲ್ಲಿ ಹೆಣ್ಣು ಹೇಗಿರಬೇಕೆಂದು ಹೇಳಿದ್ದೆಲ್ಲವನ್ನು ಹೆಣ್ಣು ಪ್ರಪಂಚ ಇಷ್ಟಪಟ್ಟು ನೋಡುತ್ತಿತ್ತು.

ಒಟ್ಟಾರೆ 'ಕಣವನೆ ಕಣ್‌ಕಂಡ ದೈವಂ, ಸತಿಶಕ್ತಿ ಥೀಂ' ಬಗ್ಗೆ ಇವತ್ತಿಗೂ ನಮ್ಮ ತಕರಾರಿಲ್ಲ. ಜತೆಯಾಗಿ ಬದುಕುವವರ, ಜೀವನ ಹಂಚಿಕೊಳ್ಳುವವರ, ಬಾಳಸಂಗಾತಿಯ ಕುರಿತು ಕಾಳಜಿ, ಪ್ರೀತಿಯೆಲ್ಲ ಸರಿಯೆ ಇರಬೇಕಾದ್ದೆ. ಆದರೆ ಅದು ಏಕಪಕ್ಷೀಯವಾಗಿ ಒಂದೇ ಸಮನೆ ಕಥೆ ಹಾಡು ಸೀನರಿಗಳ ಮೂಲಕ ಬರುತ್ತ ಹೆಣ್ಣು ಮತ್ತು ಗಂಡು ಇಬ್ಬರ ಮಿದುಳನ್ನು ತೊಳೆಯಿತು. ಗಂಡನ್ನೂ ಒಂದು ಚೌಕಟ್ಟಿಗೆ ತಳ್ಳಿ ಬಂಧಿಸಿಟ್ಟಿತು. ಪುರುಷನ ಗ್ರಹಿಕೆಗೆ ಹೆಣ್ಣೆಂದರೆ ತನ್ನ ಸೇವೆಗೆ ಮೀಸಲಿರುವವಳು ಎಂಬುದು ಮೊಳೆ ಜಡಿದಂತೆ ಗಟ್ಟಿಯಾಗಿ ಕುಳಿತರೆ, ಮಹಿಳೆ, ಗಂಡನಾದವ ಅವ ಎಂಥವನೇ ಇರಲಿ, ಹೊಡೆದರೂ, ಬಡಿದರೂ, ಉಪವಾಸ ಕೆಡವಿದರೂ, ಕುಡಿದರೂ, ಹಾಳಾದರೂ, ಬಳುವಟೆ ತಿರುಗಿ ಕಾಯಿಲೆ ಹಿಡಿಸಿಕೊಂಡು ಬಂದರೂ ಪ್ರಶ್ನಿಸದೆ ಮೌನವಾಗಿ ಅವನ ಸೇವೆ ಮಾಡುವುದೇ ತನ್ನ ಕರ್ತವ್ಯ. ತನಗೆ ಅದರಿಂದಲೇ ಮುಕ್ತಿ ಎಂದು. 'ಬಿಡೆ ನಿನ್ನ ಪಾದ' ಎನ್ನುತ ಅದರಂತೆಯೆ ನಡೆದುಕೊಳ್ಳುವವಳು. ಅದು ಮಹಿಳೆಯರು ಇನ್ನೂ ಶಾಲೆ ಮೆಟ್ಟಿಲು ಹತ್ತಲೋ ಬೇಡವೋ ಎಂಬಂತೆ ಅಲ್ಲೊಬ್ಬ ಇಲ್ಲೊಬ್ಬ ಹುಡುಗಿ ಕಲಿಯಲು ಹೋಗುತ್ತಿದ್ದ, ಆರ್ಥಿಕವಾಗಿಯಂತೂ ಸಂಪೂರ್ಣ ಅವಲಂಬಿತಳೇ ಆಗಿದ್ದ ಕಾಲ. ಇಂಥಲ್ಲಿ 'ಪತಿ ಸೇವೆಯೆ ನನಗೆ ಗತಿ ನೀಡುವ ಸೌಭಾಗ್ಯ...' ಸಾಲುಗಳು ಎಂಥಾ ಬಹದ್ದೂರ್ ಹುಡುಗಿಯನ್ನೂ ಹದಮಾಡಿದವು. ನಮ್ಮ ಕೋ.ಲ. ಕಾರಂತರು ತಮ್ಮ 'ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು' ಪುಸ್ತಕದಲ್ಲಿ 'ಕಾಲಿನಲ್ಲಿಡಬೇಕಾದ್ದನ್ನು ಕಾಲಿನಲ್ಲಿಯೇ ಇಡಬೇಕು. ತಲೆಯ ಮೇಲೆ ಹೊತ್ತುಕೊಳ್ಳಬಾರದು ನೆಸೆ ಕೊಟ್ಟ ನಾಯಿ ನೋಸಲು ನೆಕ್ಕುತ್ತದೆ. ಹೆಂಡತಿಯಾದವಳಿಗೆ ಹೆಚ್ಚು ಸಲಿಗೆ ಕೊಡಬಾರದು' ಎನ್ನುವ ಆ ಕಾಲದ ಮನೋಧರ್ಮವನ್ನು ದಾಖಲಿಸಿದ್ದಾರೆ. ಅದಕ್ಕೆ ಸರಿಯಾಗಿ ಬರುತ್ತಿದ್ದ ಇಂಥ ರಮ್ಯ ಸಿನಿಮಾಗಳನ್ನು ಪ್ರೇಕ್ಷಕರು ತಲೆಕಾಸಿಕೊಳ್ಳದೆ ಖುಷಿಖುಷಿಯಾಗಿ ನೋಡುತ್ತಿದ್ದ ಸಿನಿಮಾಗಳು ಅವೆಲ್ಲ. ವಾಸ್ತವವಾಗಿ ಸರಳ ನೀತಿಕತೆಗಳಂತಿದ್ದವು. ಸಮಸ್ಯೆಯ ಸಂಕೀರ್ಣತೆಯ ಆಳಕ್ಕಿಳಿಯದೆ ಅಲ್ಲಲ್ಲೆ ತೀರ್ಮಾನಿಸಿ, ಕಡೆಗೊಂದು ಭಾವಚಿತ್ರದಲ್ಲಿ 'ಶುಭಂ' ಆದವುಗಳನ್ನು ಯಾವುದೇ ತಕರಾರೆತ್ತದೆ ನೋಡಿಕೊಂಡು ಬಂದವರು ಈ ಹೆಣ್ಣು ಮಕ್ಕಳೆ ಎಂಬುದು ಸೋಜಿಗದ ಸಂಗತಿ.

೫.೪. ರಾಜಕೀಯ ಮತ್ತು ಸಾಮಾಜಿಕ ಕಾಳಜಿ

ವೈದೇಹಿ ಮತ್ತು ನಾಗವೇಣಿಯವರ ವೈಚಾರಿಕ ಬರಹಗಳಲ್ಲಿ ರಾಜಕೀಯ ಮತ್ತು ಸಾಮಾಜಿಕ ಕಾಳಜಿ ಎನ್ನುವಂತದ್ದು ಹೇಗೆ ವ್ಯಕ್ತವಾಗಿವೆ ಎಂಬುದನ್ನು ಈ ಅಧ್ಯಯನದಲ್ಲಿ ಗಮನಿಸಲಾಗಿದೆ.

ವೈದೇಹಿಯವರ 'ಮಲ್ಲಿನಾಥನ ಧ್ಯಾನ' ಸಂಕಲನದ ಡಿಸೆಂಬರ್ ೬ರ ಪಾಠ ಲೇಖನದಲ್ಲಿ ಜಾತಿಯ ಕುರಿತಾಗಿ ರಾಮನ ಅಯೋಧ್ಯೆ ಕುರಿತಾಗಿ – ಬಾಬರಿ ಮಸೀದಿಯ ಕುರಿತಾಗಿ ವಿಚಾರ ಮಾಡುತ್ತಾರೆ. 'ನನಗೇನು ಜಾತಿಮತ ಭೇದವಿಲ್ಲ ಅಂತ ಹೇಳಬೇಕು ಎಂದು ಎಷ್ಟು ಆಸೆಯಾಗುತ್ತದೆ. ಆದರೆ ಸತ್ಯ ಹೇಳುವುದೆಂದರೆ ಹನುಮಂತ ಎದೆ ಬಗೆದು ತೋರಿಸಿದ ಹಾಗೆ. ಬರವಣಿಗೆಯೆಂದರೂ ಹಾಗೆಯೇ ಮತ್ತೇನು?' ಎಂದು ಪ್ರಾರಂಭವಾಗುವ ಈ ಲೇಖನದಲ್ಲಿ ದೈನಂದಿನ ಬದುಕಿನಲ್ಲಿ ನನಗೂ ಅನಿಸುತ್ತಿರುತ್ತದೆ. ನನ್ನ ಧರ್ಮದ ನೆನಪೇ ನನಗಾಗುತ್ತಿಲ್ಲವಲ್ಲ ಅಂತ. ಆದರೆ ಆ ಕ್ಷಣದಲ್ಲಿ ಹುಡುಕಿಕೊಂಡರೆ ನಾನೊಬ್ಬ ಹಿಂದೂ ಆಗಿ ಬ್ರಾಹ್ಮಣ ಹೆಣ್ಣುಮಗಳಾಗಿಯೇ ನಿಲ್ಲುತ್ತೇನೆ. ಆದರೆ ನಾನು ನನ್ನ ಸ್ನೇಹಿತೆ ಅಮೀನಾಬಿಯನ್ನು ಪ್ರೀತಿಸುವುದು ಯಾವತ್ತೂ ಅವಳ ಮುಸ್ಲಿಂ ಮತದ ಸಹಿತವೇ. ಅವಳ ಧರ್ಮವನ್ನು ಹೊರತುಪಡಿಸಿದ್ದರೆ ಅಮೀನಾಬಿ ಸಿಗುವುದಿಲ್ಲ. ಹಿಂದೂ ಆಗಿ ಬ್ರಾಹ್ಮಣಳಾಗಿ ಹುಟ್ಟಿರುವುದು ನನ್ನ ಆಯ್ಕೆಯಲ್ಲವಾದರೂ ಅದಕ್ಕಾಗಿ ಇನ್ನೊಂದು ಮತಧರ್ಮ ಜಾತಿ ದ್ವೇಷವನ್ನು ಖಂಡಿತಾ ಆಯ್ದುಕೊಳ್ಳಲಾರೆ ಎನ್ನುತ್ತಾರೆ.

ಈ ಧರ್ಮಗಿರ್ಮ ಎಲ್ಲ ಮನುಷ್ಯ ಮಾಡಿಕೊಂಡದ್ದು. ಎಂದೂ ಅದರಿಂದ ಹೊರ ಬರಲಾಗುವುದಿಲ್ಲ. ಧರ್ಮದೊಳಗಿದ್ದುಕೊಂಡೇ ಧರ್ಮಾತೀತತೆಯನ್ನು ಸಾಧ್ಯಗೊಳಿಸಿ ಕೊಳ್ಳಬೇಕಾಗಿದೆ. ಪ್ರತಿಯೊಂದು ಧರ್ಮವು ಮಾನವ ಧರ್ಮವೇ ದೊಡ್ಡದು ಎನ್ನುತ್ತದೆ. ಆದರೆ ವಿವಿಧ ಧರ್ಮಗಳೆಡೆಯಲ್ಲಿ ಯಾವುದು ಅರ್ಥವಾಗದೆ ಅಡ್ಡದಾರಿ ಹಿಡಿಯುತ್ತವೆ. ಈ ಜಾತಿ, ಧರ್ಮ, ಅಮೀನಾಬಿ ಡಿಸಿಲ್ವಾ.. ಸ್ನೇಹ ಎಷ್ಟು ಸರಳವೋ ಅಷ್ಟೇ ಸಿಕ್ಕುಸಿಕ್ಕು. ಮಾತು, ಭಾಷೆ, ಹಾಡು, ಅಡುಗೆ, ಉಡುಗೆ, ನಾಗರಿಕತೆ ಎಲ್ಲ ಕಲಿತೆವು ಆದರೆ ಉಪಯೋಗಿಸುವ ಯಾವುದೇ ವಿದ್ಯೆ ಮಾತ್ರ ಕಲಿಯಲಿಲ್ಲ.

"ಜಾತಿಗ್ ಜಾತಿ ಪಗೆ" ಎಂಬೊಂದು ಮಾತು ಪ್ರತಿ ಜಾತಿಯಲ್ಲಿಯೂ ಧರ್ಮದಲ್ಲಿಯೂ ಇದೆ. "ನಮ್ಮವರೇ ನಮಗೆ ಮೇಲೆ ಬರಲು ಬಿಡುವುದಿಲ್ಲ" ಎಂಬುದನ್ನು ಸಾಮಾನ್ಯವಾಗಿ ಕೇಳಿಯೇ ಇರುತ್ತೇವೆ. "ಯಾವ ಧರ್ಮ, ಜಾತಿಗಳ ಒಳಗೂ ಇಣುಕಿ ನೋಡಿದರೆ ಎಲ್ಲರೂ ಮರ್ಯಾದೆಯಿಂದ ದಿವಸ ಹೋದರೆ

ಸಾಕಪ್ಪಾ ದೇವರೇ ಎಂದು ಕೈಮುಗಿಯುವವರೇ. ಕುಳಿತಲ್ಲೇ ಹೊಟ್ಟೆ ತುಂಬುವವರಿಗೆ ಮಾತ್ರ ಅಯೋಧ್ಯೆಯಲ್ಲಿ ಬಾಬರಿ ಮಸೀದಿ, ಬಾಬರಿ ಮಸೀದಿಯಲ್ಲಿ ರಾಮಮಂದಿರ ಕಾಣುತ್ತದೆ. ಇಂಥವರ ಮೂಗಿನಡಿ ಕಣ್ಣುಮುಚ್ಚಿ ಧೊಪಧೊಪ ಧುಮುಕಿ ಬಲಿಯಾಗುವವರಿಗೆ ಕೊರತೆಯಿಲ್ಲ... ಡಿಸೆಂಬರ್ ಆರರ ಪ್ರಕರಣ ಆದಂದಿನಿಂದ ನಮ್ಮ ಮಾಮೂಲಿ ಕುಶಾಲುಗಳು ಅನಾಥವಾದವು. ಇದಕ್ಕೂ ಮುಂಚೆ ಕ್ರೈಸ್ತ ಮುಸ್ಲಿಮರೊಡನೆ ಮಾತ್ರವಲ್ಲ ನಮ್ಮ ನಮ್ಮ ಜಾತಿ ಉಪಜಾತಿಗಳೊಡನೆಯೂ ನಮ್ಮದೆ ಆದ ಛೇಡಿಕೆ ತಮಾಷೆಗಳೆಲ್ಲ ಇದ್ದವು. ಬಾಬರಿ ಮಸೀದಿ ಉರುಳಿದಾಗ ಇವೆಲ್ಲ ಗಲಿಬಿಲಿಗೊಂಡವು.[೨೬]

ಇದಾದ ನಂತರ ಎರಡು ಕುಶಾಲು ಮಾತಾಡಲು ಭಯವಾಗುತ್ತದೆ. ಉದಾಹರಣೆಗೆ ಶಿವಳ್ಳಿಯವರಿಗೆ ಕೋಟದವರು "ಅಂಚನ ಪಿಂಚನೆ" ಅಂತೆಲ್ಲ ಕೆಣಕಿದರೆ, ಕೋಟಬ್ರಾಹ್ಮಣರನ್ನು ಶಿವಳ್ಳಿಯವರು ಮತ್ತೇನಾದರೂ ಅಲ್ಲದ್ದು ಹೇಳಿ ರೇಗಿಸಿದರೆ ಹಿಂದಿನಷ್ಟು ಆರೋಗ್ಯ ಮನದಿಂದ ಜಗಳಾಡುವ ಕಾಲ ಹೋಗಿಬಿಟ್ಟಿದೆ. ಎಲ್ಲೋ ಹತ್ತಿದ ಬೆಂಕಿ, ಕಿಡಿ ಹಾರುವ ದಿಕ್ಕು ಹಿಡಿಯಲು ಸಾಧ್ಯವಾಗುತ್ತಿಲ್ಲ. ಸಮಾಜದ ಲವಲವಿಕೆಯನ್ನೆ ಚಿವುಟಿಹಾಕಿರುವಾಗ ಸಮಾಜದ ಸ್ವಾಸ್ಥ್ಯ ಹಾಗೆ ಉಳಿಯಲು ಸಾದ್ಯವಾಗುವುದಾದರೂ ಹೇಗೆ? ಪ್ರತಿದಿನ ಪರಸ್ಪರ ಭಯ, ಸಂಶಯದಲ್ಲೆ ಬದುಕು ಸಾಗಿಸಬೇಕಿದೆ.

ಲೇಖಕಿ ರಾಮಾಯಣ ಕೇಳಿ ಬೆಳೆದವಳಾದ್ದರಿಂದ ಆ ನೆಲೆಯಿಂದಲೂ ಮಾತಾಡುತ್ತಾರೆ. ಬಾಬರಿ ಮಸೀದಿ ಹಾಗಿರಲಿ, ಆ ದಿನ ಅಯೋಧ್ಯೆ ಕೂಡ ಕಳೆದು ಹೋಗಿಬಿಟ್ಟಿತು. ಮಸೀದಿ ಉರುಳಿಸುವ ಗಲಾಟೆಯಲ್ಲಿ ಅದು ಅನೇಕರಿಗೆ ಗೋಚರವಾಗಲೇ ಇಲ್ಲ.

ನಾವೆಲ್ಲ ಬೆಳೆದದ್ದೆ ರಾಮಾಯಣದ ಕಥೆಗಳನ್ನು ಕೇಳಿಕೊಂಡಲ್ಲವೇ. ಒಂದಲ್ಲ ಒಂದು ಬಗೆಯಲ್ಲಿ ರಾಮಾಯಣದ ಹಂಗು ಇಲ್ಲದ ಭಾರತೀಯನೇ ಇರಲಿಕ್ಕಿಲ್ಲ. ಚಿಕ್ಕಂದಿನಲ್ಲಿ ವಾಲ್ಮೀಕಿ ರಾಮಾಯಣದ ಶ್ಲೋಕಗಳು, ತುಳಸೀ ರಾಮಾಯಣದ ದೋಹೆಗಳು ಸದಾ ಮನೆಯಲಿ ಮಾರ್ದನಿಗೊಂಡದ್ದರಿಂದ ರಾಮಾಯಣವನ್ನು ಮೊತ್ತಮೊದಲು ನನ್ನ ಮನಸ್ಸನ್ನು ಭಾವದೀಪ್ತಗೊಳಿಸಿದ ಗ್ರಂಥ ಎನ್ನುತ್ತಾರೆ. ಆಗೆಲ್ಲ ರಾಮಾಯಣದ ಕಥೆ ಕೇಳುವಾಗ ಆ ಅಯೋಧ್ಯೆ ಬೀದಿಗಳು, ಅರಮನೆ, ದಶರಥ, ಕೈಕೆ, ಬಾಲರಾಮ, ಪ್ರಜೆಗಳ ಮೂಲಕವೇ ಮನಸ್ಸಲ್ಲಿ ಮೂಡುತ್ತಿತ್ತು. ಅದು ಎಂದೂ ಖಾಲಿ ಕಟ್ಟಡವಾಗಿರಲಿಲ್ಲ. ಕೇವಲ ಒಂದು ಪ್ರದೇಶವಾಗಿರಲಿಲ್ಲ ಒಂದೆಡೆ ತಟಸ್ಥ ನಿಂತದ್ದಲ್ಲ. ಆದರೆ ಈಗ ಅಯೋಧ್ಯೆ ಎಂಬುದು ಉತ್ತರಪ್ರದೇಶ ರಾಜ್ಯದಲ್ಲಿದೆ ಎಂದು ಕರಾರುವಕ್ಕಾಗಿ ಇತಿಹಾಸದ ಕತ್ತರಿಗೆ ಎಳೆತಂದು, ಅಕ್ಷಾಂಶ ರೇಖಾಂಶಕ್ಕನುಗುಣವಾಗಿ ಒಂದೆಡೆ ಪ್ರತಿಷ್ಠಾಪಿಸಿದಾಗ ಕತ್ತಲೆ ಕವಿದಂತಾಗುತ್ತದೆ. ಮಸೀದಿ, ಮಂದಿರ ವಿವಾದ ಇವು ಮನದಲ್ಲಿ ಮೂಡಿದ ಅಯೋಧ್ಯೆಯ ಚಿತ್ರಕ್ಕೆ ಅವಹೇಳನ ಮಾಡುವಂಥವು. ಮನುಷ್ಯ ರಾಮನನ್ನು

ಒಂದುಪಾತ್ರವನ್ನಾಗಿ ವಿವಿಧ ಆಯಾಮಗಳಲ್ಲಿ ಗ್ರಹಿಸುತ್ತ ನಡೆದನೋ ಹಾಗೆಯೇ ಅಯೋಧ್ಯೆಯನ್ನು ವರ್ತಮಾನದ ಡಿಸೆಂಬರ್ ಆರರ ಬಗೆಯಲ್ಲಿ ಕಾಣಬೇಕಾಗಿದೆ.

"ಬಾಬರಿ ಮಸೀದಿ ಕೆಡವಿ ದೊಂಬಿಯ ಅಟ್ಟಹಾಸದಲ್ಲಿ ಅವಿವೇಕದಲ್ಲಿ ನಮ್ಮನ್ನು ಅದ್ದಿಕೊಂಡಾಗಂತೂ ನನ್ನ ಹೃದಯದೊಳಗೆ ಬಾಲ್ಯದಿಂದಲೂ ಮೂಡುತ್ತಾ ವಿಸ್ತರಿಸಿಕೊಳ್ಳುತ್ತ ಬಂದ ಅಯೋಧ್ಯೆಯ ಭಾವಚಿತ್ರ ಗೀಚಾಗಿ ಚೂರಾಗಿ ಅಳಿಸಿ ಹೋಯಿತು. ಇದು ನೇರ ಸ್ವಧರ್ಮಿಯರೇ ನನ್ನಂತಹ ಅನೇಕಾನೇಕ ಭಾರತೀಯರ ಅಯೋಧ್ಯೆಯ ಕಲ್ಪನೆಯ ಮೇಲೆ ಮಾಡಿದ ನೇರ ಹಲ್ಲೆ. ಒಂದು ಅಯೋಧ್ಯೆಯ ಭ್ರಮೆಯಲ್ಲಿ ಸಾವಿರಾರು ಅಯೋಧ್ಯೆಯನ್ನು ಕೆಡವಿ ನಾಶ ಮಾಡಿದರಲ್ಲ ಈ ಹಕ್ಕು ಅವರಿಗೆ ಕೊಟ್ಟವರು ಯಾರು?"[೭]

ನಾವಾದರೂ ಎಷ್ಟು ದಿನ ಖಾಲಿ ಹಿಂದುಗಳಾಗಿ, ಖಾಲಿ ಮುಸ್ಲಿಮರಾಗಿ, ಖಾಲಿ ಕ್ರೈಸ್ತರಾಗಿ, ಖಾಲಿ ಕೊಂಕಣಿ, ಶೂದ್ರ, ಲಿಂಗಾಯಿತ ಮತ್ತಿತರ ಜಾತಿ ವಿಜಾತಿಗಳಾಗಿ, ಕಡೆಗೆ ಖಾಲಿ ಗಂಡು ಹೆಣ್ಣುಗಳಾಗಿ ಮಾತ್ರ ಉಳಿಯಲು ಸಾಧ್ಯ? ಪರಸ್ಪರ ಕೊಡುಕೊಳ್ಳುವಿಕೆ ಇಲ್ಲದೆ? ನಾವು ಮನುಷ್ಯರು ಮಾತ್ರ ಈ ಪ್ರಪಂಚದಲ್ಲಿ ಇರಲು ಅರ್ಹರಾದವರು ಎಂದು ಪ್ರಕೃತಿಯೊಡನೆ ವರ್ತಿಸತೊಡಗಿದ ಮನುಷ್ಯನ ನಡವಳಿಕೆಯ ಇನ್ನೊಂದು ಮಗ್ಗುಲು. ಹೀಗೆ ನನ್ನ ಧರ್ಮ, ನನ್ನ ದೇಶ, ನನ್ನ ಜಾತಿ, ನನ್ನ ಜನ ಕೊನೆಗೆ ನಾನು– ನಾನು ಮಾತ್ರ ಉಳಿಯತಕ್ಕವನು ಎಂದು ಹೂಂಕರಿಸುತ್ತದೆ. ನಾನೆಂಬುದು ಬದುಕಿರಬೇಕಾದರೆ ಈ ಎಲ್ಲವೂ ಬದುಕಿರಬೇಕು ಎಂಬುದರ ಅಲಕ್ಷ್ಯವೇ ತಾನೆ ಇವತ್ತು ಭೂಗೋಲವನ್ನು ಸೂರ್ಯನ ಕಿರಣಗಳಾಗಿ ನೇರ ಒಡ್ಡಲು ಹೊರಟಿರುವುದು? ಎನ್ನುವಲ್ಲಿ ಲೇಖಕಿಯ ಸಾಮಾಜಿಕ ಕಾಳಜಿಯನ್ನು ಗಮನಿಸಬಹುದಾಗಿದೆ.

ವೈದೇಹಿಯವರ ಮನದಾಳದ ರಾಮನನ್ನು ನಾಗವೇಣಿಯವರಲ್ಲಿ ಕಾಣಲಾಗುವುದಿಲ್ಲ. ಅವರು ರಾಮನನ್ನು ನೋಡುವುದು ಸೀತೆಯನ್ನು ವಂಚಿಸಿದ ಬಗೆಯಲ್ಲಿ. ಇವರ 'ನೀರ ತಾವರೆಯಡಿಯ ಪಾಚಿ', 'ರಾಮನ ವ್ಯಾಧಿ' ಬರಹಗಳಲ್ಲಿ ಜಾತಿ, ಅಸ್ಪೃಶ್ಯತೆ, ರಾಮ, ಅಯೋಧ್ಯೆ, ರಾಜಕೀಯ ಪಕ್ಷ, ಮಠಾಧೀಶರ ನೆಲೆಯಲ್ಲಿ ಗಮನಿಸುತ್ತಾರೆ.

"ಸುಮಾರು ಮೂರು ದಶಕಗಳ ಹಿಂದೆ ಹುಬ್ಬಳ್ಳಿಯಲ್ಲಿ ನಮ್ಮ ಮಠಾಧೀಶರು ಮಧ್ವನವಮಿ ಮಹೋತ್ಸವದ ನೇತೃತ್ವ ವಹಿಸಿ ಪ್ರವಚನ ನೀಡುತ್ತಿದ್ದ ಸಂದರ್ಭದಲ್ಲಿ ಈ ಶೂದ್ರವರ್ಗ ಅವರಲ್ಲಿ ಒಂದು ಆಕ್ಷೇಪವನ್ನು ಎತ್ತಿತು. "ಬ್ರಾಹ್ಮಣರು, ಕ್ಷತ್ರೀಯರು, ವೈಶ್ಯರು ದೇವರ ಮುಖವೇ ಮುಂತಾದ ಮೇಲಿನ ಅಂಗಗಳಿಂದ ಹುಟ್ಟಿದವರು ಶೂದ್ರರು ಮಾತ್ರ ದೇವರ

ಕಾಲನಿಂದ ಹುಟ್ಟಿದವರೆಂದು ಹೇಳಿರುವುದು ಶೂದ್ರರಾದ ನಮಗೆ ಮಾಡಿರುವ ಅವಮಾನ” ಎಂದು ಶೂದ್ರ ವರ್ಗದ ಆಕ್ಷೇಪ.

ಆದರೆ ಶೂದ್ರರ ಎಲ್ಲ ಅಸಮಧಾನ ಆಕ್ಷೇಪಕ್ಕೂ ತಾವು ನಂಬಿರುವ ಧರ್ಮ ಗ್ರಂಥಗಳಲ್ಲಿ ಉತ್ತರವನ್ನು ಅಡಗಿಸಿಕೊಂಡಿರುವ ಈ ಮಠಾಧೀಶರು ಆ ಸಂದರ್ಭದಲ್ಲಿ ತಮ್ಮ ಆರಾಧ್ಯ ಶ್ರೀಮಧ್ವರ ಮಹಾಭಾರತ ತಾತ್ಪರ್ಯ ನಿರ್ಣಯದ ಪುಟಗಳನ್ನು ಆಧರಿಸಿ ನೀಡಿದಂತಹ ಸಮಜಾಯಿಸಿ ಅವರೆಷ್ಟು ಚಾಲಾಕಿಗಳು ಎಂಬುದನ್ನು ಸ್ಪಷ್ಟಪಡಿಸಿತು.

“ದೇವರ ಉಗುರಿನಿಂದ ಪ್ರಾರಂಭಿಸಿ ತಲೆಗೂದಲಿನವರೆಗೂ ಪ್ರತಿಯೊಂದು ಅಂಗವೂ ಅವನ ಸ್ವರೂಪಾತ್ಮಕವಾದದ್ದು. ಅವನಂತೆಯೇ ಜ್ಞಾನಾನಂದಾತ್ಮಕವಾದದ್ದು. ಯಾವುದೇ ಅಂಗದಲ್ಲಿ ಮೇಲು ಕೀಳು ಭಾವನೆಗೆ ಅವಕಾಶವೇ ಇಲ್ಲ. ದೇವರ ಮುಖದಷ್ಟು ಅವನ ಪಾದವು ಪವಿತ್ರವಾದುದು. ಹೀಗಿರುವಾಗ ಬ್ರಾಹ್ಮಣರು ದೇವರು ಮುಖದಿಂದ ಹುಟ್ಟಿದವರು, ಶೂದ್ರರು ದೇವರ ಪಾದದಿಂದ ಹುಟ್ಟಿದವರು ಎಂದಾಕ್ಷಣ ಬ್ರಾಹ್ಮಣರು ಶೂದ್ರರಿಗಿಂತ ಶ್ರೇಷ್ಠರು ಎಂದೇನೂ ಹೇಳಿದಂತಾಗುವುದಿಲ್ಲ”.[೨೮]

ಯಾರ್‍ಯಾರು ಏನೇನೆ ಹೇಳಿದರು ಪೇಜಾವರ ಮಠಾಧೀಶರು ಮಾತ್ರ ಆ ಬಗ್ಗೆ ತಲೆಕೆಡಿಸಿಕೊಳ್ಳುವವರಲ್ಲವಂತೆ. ಹಾಗೆ ನೋಡಿದರೆ ಸ್ವಾಮಿಗಳು ಛಲದಲ್ಲಿ, ಚಾಣಾಕ್ಷತನದಲ್ಲಿ, ಕುಟಿಲತೆಯಲ್ಲಿ, ರಾಜಕಾರಣದಲ್ಲಿ ಹಾಗೂ ಲೋಕಕಲ್ಯಾಣಕ್ಕಾಗಿ ತಮ್ಮದಲ್ಲದ ವಿಚಾರಗಳಲ್ಲಿ ಮೂಗು ತೂರಿಸುವುದರಲ್ಲಿ – ನೂರಕ್ಕೆ ನೂರರಷ್ಟು ಶ್ರೀಕೃಷ್ಣ ಪರಮಾತ್ಮನಿಗೆ ಸಮನಾಗಿ ನಿಲ್ಲಬಲ್ಲವರು. ಇಂಥಹ ಅಪೂರ್ವ ವ್ಯಕ್ತಿತ್ವವುಳ್ಳ ಸರ್ವಸಂಗ ಪರಿತ್ಯಾಗಿ ವಿಶ್ವೇಶರತೀರ್ಥರು ‘ಬ್ರಾಹ್ಮಣಧರ್ಮವು ಯಾರನ್ನು ಅಸ್ಪೃಶ್ಯರೆಂದು ಹೇಳಿಲ್ಲ...’ ಎಂಬ ಘೋಷಣೆಯೊಂದಿಗೆ ಒಮ್ಮೆ ದಲಿತ ಕೇರಿಯೊಂದಕ್ಕೆ ಪಾದಯಾತ್ರೆ ಹೊರಟು ಕೊರಗರ ಕೊಟ್ಟಕ್ಕೆ ಹೋಗಿ ಪ್ರಸಾದ ಕೊಟ್ಟು ಹೋದ್ರಂತೆ. ಇದೆಲ್ಲ ಪೇಜಾವರ ಮಠಾಧೀಶರ ‘ಪಾದಯಾತ್ರೆಯ ರಾಜಕಾರಣವಂತೆ’. ನಾಗವೇಣಿಯವರಿಗೆ ಬಾಲ್ಯದಿಂದಲೂ ವಿಶ್ವೇಶರತೀರ್ಥರೆಂದರೆ ತುಂಬಾ ಇಷ್ಟ ಅಂತೆ. ಯಾಕೆ ಇಷ್ಟ ಅಂತ ಅಮ್ಮ ಮಗಳನ್ನ ಕೇಳಿದರೆ **“ಅವರ ತಲೆ ಬೋಳು ಬೋಳು... ಅವ್ರು ನನ್ನ ಗೊಂಬೆಯ ಹಾಗೆ” ಎಂದು ಹೇಳುತ್ತಿದ್ದರಂತೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅವರು ರಾಮಜನ್ಮಭೂಮಿ ವಿಚಾರದಲ್ಲಿ, ಬಿಜೆಪಿ ಉಮಾಭಾರತಿ ಸಂಘರ್ಷದಲ್ಲಿ, ಕೃಷ್ಣಮಠದ ಪೂಜೆ ವಿಚಾರದಲ್ಲಿ, ರಾಜ್ಯ ದೇಶದ ರಾಜಕಾರಣದಲ್ಲಿ... ‘ತನ್ನ ಕರ್ತವ್ಯದ ಗಡಿ’ಯನ್ನು ಮೀರಿ... ತಾವೇ ಮುನ್ನುಗಿ ಸಂಧಾನಕಾರರಾಗಿ ಹೋಗುತ್ತಿರುವುದರಿಂದ ನನಗ್ಯಾಕೋ ಅವರ ಬಗ್ಗೆ ಒಂಥರಾ ಮುನಿಸು ಎದ್ದು ಕೂತಿದೆ ಅಷ್ಟೆ. ಪರಂಪರೆಯಿಂದ ಅವರ ಹೆಗಲ ಮೇಲೆ ಏರಿ ಕೂತಿರುವ ಧಾರ್ಮಿಕ ಕರ್ತವ್ಯ, ಧರ್ಮದ ಪರಧಿಯಲ್ಲೆ ಅವರು ನಿರ್ವಹಿಸಬೇಕಾದ ಲೋಕಕಲ್ಯಾಣ..., ಇದರ ಜೊತೆ ಜೊತೆಗೆ ಸನ್ಯಾಸಿಗೆ ಇರಬೇಕಾದ ಧಾರ್ಮಿಕ ಕಟ್ಟುಪಾಡು... ಇವನ್ನೆಲ್ಲ ಮರೆತು ಇವರು ಇನ್ನು**

ತಲೆಮಾಸದ ಧರ್ಮಾಂಧ ರಾಜಕಾರಣಿಗಳ ಗಿಲೀಟು ಮಾತುಗಳಾಗಿ ಮರುಳಾಗಿ ಅಥವಾ ಪ್ರಚಾರದ ಹುಚ್ಚು-ಹೊಳೆಯಲ್ಲಿ ಈಜುವ ಮನಸ್ಸಾಗಿ, ದೇಶದ ರಾಜಕೀಯದ ಕೆಸರಿಗೆ ಕೈಹಾಕಿ ಮುಖ ಒರೆಸುವುದು ಅವರ ಸಾತ್ವಿಕತೆಗೆ, ಸನ್ಯಾಸತ್ವಕ್ಕೆ ಮತ್ತು ವಯಸ್ಸಿಗೆ ಶೋಭಿಸುವುದಿಲ್ಲ ಎನ್ನುವುದೇ ನನ್ನ ತಕರಾರು'.[೨೯]

ಇತ್ತೀಚೆಗೆ ನಮ್ಮ ವಿಧಾನಸೌಧದಲ್ಲಿ ಕಮಲದ ಹೂವಿನ ಕಾರುಬಾರು ಆರಂಭವಾದಾಗ ನಮ್ಮ ಸ್ವಾಮೀಜಿಯವರು "ಪಕ್ಷ ಬಯಸಿದಲ್ಲಿ ಮುನಿಸಿಕೊಂಡಿರುವ ಶಾಸಕ ಜಗದೀಶಶೆಟ್ಟರ ಮನಸ್ಸನ್ನು ತಣಿಸುವ- ಅವರನ್ನು ಸಂತೈಸುವ ಸಂಧಾನ ಕಾರ್ಯವನ್ನು ಕೈಗೊಳ್ಳಬಲ್ಲೇ ಎಂದರಂತೆ. ಈ ಸ್ವಾಮೀಜಿ ದಿನಪತ್ರಿಕೆಯಲ್ಲಿ 'ಸುದ್ದಿ ಪುಟ್ಟ'ರಾಗಿದ್ದು ಹೀಗೆ ಶಂಕಿತ ನಕ್ಸಲ್ ಆರೋಪಿ ಮಲ್ಲಿಕಾ ಮನೆಗೆ ತಮ್ಮ ಮಠದ ವತಿಯಿಂದ ವಿದ್ಯುತ್ ಸಂಪರ್ಕ ನೀಡಿ... ಅದನ್ನು ಉದ್ಘಾಟಿಸಿ ಸ್ವಾಮೀಜಿಯವರು ಮಲ್ಲಿಕಾಳ ತಾಯಿಗೆ ಮಕ್ಕಳು ಹಿಂಸಾ ಪ್ರವೃತ್ತಿಗೆ ಇಳಿಯುವುದನ್ನು ತಡೆಯುವಂತೆ ಕಿವಿಮಾತು ಹೇಳುತ್ತಿದ್ದ ಸುದ್ದಿ, ಚಿತ್ರ ಸಮೇತ ಪ್ರಕಟವಾಗಿತ್ತಂತೆ. ಹಾಗೆಯೇ ಸ್ವಾಮೀಜಿಯವರು ಸಮಾರಂಭವೊಂದನ್ನ ಉದ್ಘಾಟಿಸಿ 'ಜಗತ್ತಿನ ಯಾವುದೇ ಧರ್ಮದಲ್ಲೂ ಶೋಷಣೆಗೆ ಅವಕಾಶವಿಲ್ಲ. ದೇವರಿಗೆ ಜಾತಿಯ ಬಗ್ಗೆ ಪಕ್ಷಪಾತವಿಲ್ಲ. ಧರ್ಮ ಯಾರನ್ನು ಅಸ್ಪೃಶ್ಯರೆಂದು ಹೇಳಿಲ್ಲ. ಶ್ರೀಮಠ ಕಳೆದ ನಲ್ವತ್ತು ವರ್ಷಗಳಿಂದ ಅಸ್ಪೃಶ್ಯತೆಯ ವಿರುದ್ಧ ಹೋರಾಟ ನಡೆಸುತ್ತಾ ಬಂದಿದೆ' ಎಂದಿದ್ದರು. ಹಾಗಾದರೆ 'ಉಡುಪಿಯ ಅಷ್ಟಮಠಗಳು ಬ್ರಾಹ್ಮಣ್ಯದ ಮೂಲಕ ಇಂದಿಗೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಅನುಸರಿಸಿಕೊಂಡು ಬಂದಿರುವ ಅಸ್ಪೃಶ್ಯತೆಗಿಂತ ದೊಡ್ಡ ಅಮಾನವೀಯ ಹಿಂಸಾ ಪ್ರವೃತ್ತಿ ಈ ನಾಗರೀಕ ಸಮಾಜದಲ್ಲಿ ಬೇರೊಂದು ಇದೆಯೇ?' ಎನ್ನುವುದು ಇಲ್ಲಿನ ಪ್ರಶ್ನೆ.

ಅಸ್ಪೃಶ್ಯತೆ ಎಂಬುದು ಈ ಸಮಾಜದಿಂದ ಅಲ್ಪಸ್ವಲ್ಪ ಕಣ್ಮರೆಯಾಗಿದ್ದರೆ ಅದು ಸಂವಿಧಾನದ ಭಯದಿಂದಲೇ ಹೊರತು, ಮಠಾಧೀಶರ ಪಾದಯಾತ್ರೆ - ಪ್ರಸಾದದಿಂದಲ್ಲ ಮತ್ತು ಅವರ 'ಹೋರಾಟ'ದಿಂದಲ್ಲ. ನಮ್ಮ ಸ್ವಾಮೀಜಿಯವರು ಎಂದಾದರೂ ಸಾಮಾಜಿಕ ಕಾಳಜಿಯಿಂದ, ಅಸ್ಪೃಶ್ಯತೆಯ ವಿರುದ್ಧ ತಮ್ಮ ಆತ್ಮಸಾಕ್ಷಿ ಮತ್ತು ಮಾನವತೆಯಿಂದ ಹೋರಾಟ ನಡೆಸಿದ್ದಾದರೆ ಅದನ್ನವರು ಸಾರ್ವಜನಿಕವಾಗಿ ಸಾಬೀತುಪಡಿಸಬೇಕಾದುದು - ಕನಿಷ್ಠ ತಮ್ಮ ಕೃಷ್ಣಮಠದ ಚೌಕಿಮನೆಯಲ್ಲಿ ತಮ್ಮದೆ ಪಂಕ್ತಿಯಲ್ಲಿ ಅಥವಾ ಎದುರು ಪಂಕ್ತಿಯಲ್ಲೆ ನಾಲ್ಕೇ ನಾಲ್ಕು ಮಂದಿ ಶೂದ್ರ-ದಲಿತ ಮಕ್ಕಳನ್ನು ಕೂರಿಸಿ ಉಣ್ಣಲಿಕ್ಕುವ ಮೂಲಕ ಅಷ್ಟೇ.

ರಾಮನ 'ವ್ಯಾಧಿ'ಯ ಕುರಿತಾಗಿ ನಾಗವೇಣಿಯವರು ಹೇಳುವುದು ಹೀಗೆ. ಅವರ ಗೆಳತಿ ಸರೋಜ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಇವರ ಮೊಬೈಲ್‌ಗೊಂದು

ಸಂದೇಶಕಳಿಸಿದ್ದರಂತೆ. ರಾಮ ರಾಮನೇ ಅಲ್ಲ, ರಾಮಜನ್ಮಭೂಮಿಯೇ ಇಲ್ಲ, ರಾಮಾಯಣವೇ ನಡೆದಿಲ್ಲ ಎನ್ನುವ ಕಾಂಗ್ರೆಸಿಗೆ ಧಿಕ್ಕಾರ: ಕೊಡಿ ಬಿಜೆಪಿಗೆ ಅಧಿಕಾರ. ಅವಳ ಮೆಸೇಜ್ ಓದಿ ಫೋನ್ ಮಾಡಿದರೆ 'ಫೋನಿನಲ್ಲಿ ಆಕೆ ಮಂಡಿಸಿದ ರಾಮಭಕ್ತಿಯ ವಿಚಾರ... ಅಯೋಧ್ಯೆಯ ಶ್ರೀರಾಮದೇವರು ಯಾಕೆ ನಮಗೆ ಈಗ ಬೇಕಾಗಿದ್ದಾರೆ... ನಮ್ಮ ಕಮಲದ ಹೂ ಅರಳಿದರೆ ಅದು ಊರಿನ ಬ್ಯಾರಿಗಳಲ್ಲಿ ಏರಿರುವ ಛರ್ಬಿಯನ್ನು ಹೇಗೆ ಇಳಿಸುತ್ತದೆ... ಎಂಬ 'ಸೂಕ್ಷ್ಮಾತಿಸೂಕ್ಷ್ಮ' ವಿಚಾರಗಳನ್ನು ಆಕೆ ಅವಳದ್ದೇ ತಿಳಿವಿನ ದಾರಿಯಲ್ಲಿ ಬಹಳ ನಾಜೂಕಾಗಿ ಅವರೆದುರಿಗೆ ಬಿಚ್ಚಿಟ್ಟಿದ್ದನ್ನು ಕೇಳಿ ಇವರು ದಂಗಾಗಿ ಹೋಗಿದ್ದರಂತೆ. ಆಗ ಕಾಲ್ ಕಟ್ ಮಾಡಿ ಊರಿಗೆ ಹೋದಾಗ ಒಂದು ಒಳ್ಳೆಯ 'ರಾಮಪಾಠ' ಮಾಡಿದ್ದನ್ನು 'ರಾಮನವ್ಯಾಧಿ' ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

"ಹೂ ಮನಸ್ಸಿನ ಸಾಧ್ವಿ ಸೀತೆಯನ್ನು ಲೋಕದ ಜನರ ತೃಪ್ತಿಗಾಗಿ, ತನ್ನ ವಂಶದ ಗೌರವಕ್ಕಾಗಿ ಈತ ಅಮಾನವೀಯವಾಗಿ ಹಾಗೂ ಘೋರವಾಗಿ ಹಿಂಸಿಸಿದ ಪರಿಗೆ – ಸೂಕ್ಷ್ಮ ವಿವೇಚನೆಯುಳ್ಳ ಯಾವ ವ್ಯಕ್ತಿ ತಾನೆ ರಾಮನನ್ನು ಒಬ್ಬ ಮಹಾಪುರುಷ ಎಂದು ಒಪ್ಪಿಕೊಳ್ಳಲು ಸಾಧ್ಯವಿದೆ. ಅದರಲ್ಲೂ ಹೆಣ್ಣುಕುಲ! ರಾವಣನ ಅಂತಪುರದಲ್ಲಿದ್ದು ಆಗಲೇ ನೊಂದಿದ್ದ ಮಡದಿಯನ್ನು ಮತ್ತಷ್ಟು ಹೀನ ಮಾತುಗಳಿಂದ ನೋಯಿಸಿ ನಿಂದಿಸಿ ಅಗ್ನಿಪ್ರವೇಶವನ್ನು ಮಾಡಿಸಿದ ನಂತರವಾದರೂ ಆತನ ಮನಸ್ಸಿನ ವ್ಯಾಧಿ ಕಮ್ಮಿಯಾಯ್ತೇ? ಇಲ್ಲ. ಆಕೆಯ ಹೊಟ್ಟೆ 'ತನ್ನದಲ್ಲ' ಎಂಬ ಅನುಮಾನದಿಂದ ಯಾವನೋ ಒಬ್ಬ ಅಗಸನ ನೆಪವಿಟ್ಟು ಮತ್ತೆ ಆ ತುಂಬುಬಸುರಿಯನ್ನು ಕಾಡಿಗಟ್ಟಿದ್ದ...! ಕೊನೆಗೂ ಆ ರಾಮಚಂದ್ರನ ಮನಸ್ಸಿನ ಕಾಯಿಲೆ ಒಂದು ಹಂತಕ್ಕೆ ಬಂದು ನಿಲ್ಲುವುದು–ಸೀತೆ ಆತನ ಕಣ್ಣಳಿಂದ ಸಂಪೂರ್ಣಮರೆಯಾದ ನಂತರವಷ್ಟೆ".[೩೦]

'ಸೀತೆಯ ದೈವ ಕೆಟ್ಟಿತ್ತು', 'ಅದು ದೈವ ನಿಯಮ', ಶ್ರೀರಾಮಚಂದ್ರ ಲೋಕದ ಮಾತನ್ನು ಮೀರಿ ನಡೆಯಬಾರದಲ್ಲ' ಎಂದಲ್ಲ ಸಮಜಾಯಿಷಿ ನೀಡುತ್ತಾರೆಯೇ ಹೊರತು ರಾಮನ 'ವ್ಯಾಧಿ'ಯಿಂದ ಸೀತೆಗೆ ಇಂತಹ ಘೋರ ಬುದುಕು ಪ್ರಾಪ್ತಿಯಾಯಿತು ಎಂಬುದನ್ನು ಮಾತ್ರ ಒಪ್ಪುವುದಿಲ್ಲ. ನನ್ಗೆ ಆ 'ರಾಮರಾಜ್ಯ'ವೂ ಬೇಡ, ರಾಮನ 'ಮಾದರಿ'ಯ ಆಡಳಿತವೂ ಬೇಡ ಓಟು ಹಾಕು ಅಂದ್ರೆ ಹಾಕಬಹುದು ಆದ್ರೆ ರಾಮನ ಮುಖ ನೋಡಿ ಓಟು ಹಾಕು ಅಂದ್ರೆ ಹಾಕ್ತೀನಾ ಎಂದು ನಾಗವೇಣಿ ತಮ್ಮ ತಕರಾರನ್ನು ವ್ಯಕ್ತಪಡಿಸುತ್ತಾರೆ.

ಒಟ್ಟಿನಲ್ಲಿ ಈ ಇಬ್ಬರೂ ಲೇಖಕಿಯರು ರಾಮನ ಬಗೆಗಾಗಲಿ, ಜಾತಿಯ ಬಗೆಗಾಗಲಿ, ಅಸ್ಪೃಶ್ಯತೆಯ ಬಗೆಗಾಗಲಿ ಕಟ್ಟಿಕೊಂಡ ಅನುಭವದ ಜಗತ್ತು ತೀರಾ ಭಿನ್ನವಾಗಿದೆ.

ವೈದೇಹಿ 'ಹರಿವ ನೀರು' ಸಂಕಲನದ 'ಹನ್ನೆರಡಾಣೆಯ ಜಗತ್ತು' ಲೇಖನದಲ್ಲಿ ಗಣಿಗಾರಿಕೆ, ತುಂಗ-ಭದ್ರಾ ನದೀ ಮೂಲಗಳ ಬಗ್ಗೆ ವಿಚಾರಮಾಡುತ್ತಾರೆ. 'ಅದು ಬೆಟ್ಟ ಇದು ಬೆಟ್ಟವೋ ನಂಜುಂಡ ನಂದ್ಯಾಲ ಗಿರಿಬೆಟ್ಟವೋ...' ಇನ್ನೆಷ್ಟು ದಿನ? ಅದೇನು ಅಚ್ಚರಿಯಲ್ಲ. ಆನೆ ಕಾಣದ ಮೇಲೆ ಇರುವೆ ಕಾಣದ ಮೇಲೆ ಮನುಷ್ಯನೂ ಕಾಣದೆ ಹೋಗುತ್ತಾನೆ ಎಂಬುದು ನಿಯಮ.

ಹರಿವ ನೀರನ್ನು ಬಿಡದೆ ಕಾಡುವ, ನಿಂತ ಬಂಡೆಗಳನ್ನೂ ಬಿಡದೆ ದೋಚುವ ಲಾಭಕೋರರು ನಮ್ಮೊಳಗೆ ಇರುವರಲ್ಲ ಇದನ್ನು ತಡೆಯುವುದಾದರು ಹೇಗೆ. ಕಾಲ ಸದಾ ಪರಿವರ್ತನಾಶೀಲವಾದದ್ದು ಸರಿಯೇ ಆದರೆ ಪರಿವರ್ತನೆಯ ನೆಪದಲ್ಲಿ ಎಲ್ಲವನ್ನು ನಾಶಮಾಡುತ್ತಾ ಹೋದರೆ ನಮ್ಮನ್ನು ನಾವು ಮಾರಿಕೊಂಡಂತೆಯೇ ಸರಿ. ಸದ್ದಿಲ್ಲದೆ ನಾವೊಂದು ಅಪಕಲ್ಪನೆಯ ಯುಗಕ್ಕೆ ಜಾರಿಕೊಳ್ಳುತ್ತಿದ್ದೇವೆ. ಸೌಂದರ್ಯ, ಶ್ರೀಮಂತಿಕೆ, ಸ್ವಾತಂತ್ರ್ಯ, ಶಿಕ್ಷಣ, ಮಹಿಳೆ ಎಲ್ಲದರ ಬಗ್ಗೆಯೂ ನಮಗೆ ಅಪಕಲ್ಪನೆಯೇ. **"ತೀರಾ ಇತ್ತೀಚೆಗೆ ಇದೇ ನಮ್ಮ 'ಬೆಳಗಾನೆ ನಾನೆದ್ದು ಯಾರ್‍ಯಾರ ನೆನೆಯಲಿ... ಎಳ್ಳು ಜೀರಿಗೆ ಬೆಳೆವಂತ ಭೂತಾಯ ಎದ್ದೊಂದುಗಳಿಗೆ ನೆನೆದೇನು' ಎನ್ನುವಂತ ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದ ರಾಜಕಾರಣಿಗಳಿಂದಲೇ ಅನುಮತಿಗಿಟ್ಟಿಸಿ ಎಸ್.ಇ.ಜಡ್.ನವರು ರಾತ್ರೋರಾತ್ರಿ ಬಾಗಿಲು ತಟ್ಟಿ 'ಮನೆ ಖಾಲಿ ಮಾಡಿ' ಲಾರಿಗಟ್ಟಲೆ ಮಣ್ಣನ್ನು ತೆನೆಗಟ್ಟಿದ ಪೈರಿನ ಮೇಲೆ ಸುರಿದು 'ಈ ಜಾಗ ನಿಮ್ಮದಲ್ಲ ಬಿಡಿ' ಎಂದದ್ದು ನೆನಪಿಸಿಕೊಳ್ಳಲಿ. ಭ್ರೂಣಹತ್ಯೆ ಇನ್ನು ಬೇರೆ ಇದೆಯೇನು? ಗ್ರೆಗರಿಯೆಂಬ ಕೃಷಿಜೀವಿಯ ಮನೆಕೆಡವಿ ತೋಟ ಹುಡಿಗೈದು, ನಿಂತ ನೆಲದಲ್ಲೆ ನಾಯಿ, ದನ, ಎಮ್ಮೆ, ಕೋಳಿಗಳೂ ಸೇರಿದ ಆ ಇಡೀ ಕುಟುಂಬವನ್ನು ನೀರುನಿಟ್ಟಲದಂತೆ ರಸ್ತೆಪಾಲು ಮಾಡಿದರು. ಹಿಂದಿ ಸಿನಿಮಾಗಳಲ್ಲಿ ನೋಡಿದ್ದೆವು ಇದನ್ನೆಲ್ಲ. ಅದು ಇತ್ತೀಚೆಗೆ ನಮ್ಮೆದುರಿಗೇ ನಮ್ಮೂರಲ್ಲೇ ಪ್ರತ್ಯಕ್ಷ ಕಂಡಂತಾಯ್ತು.**[೩೧]

ಜವಾಬ್ದಾರಿ ಹೊತ್ತ ಮಂದಿ ಏನೋ ವಹಿವಾಟು ನಡೆಸಿಕೊಂಡು ಹೋಗುತ್ತಿದ್ದಾರೆ ಅಂಥ ದೃಢವಾಗಿ ನಂಬಿಕೊಂಡು ನಾವು ಮನೆಮಂದಿ ನಮ್ಮ ನಮ್ಮ ಕೆಲಸ ಕಾರ್ಯ ಕಷ್ಟ-ಸುಖ ಹಸಿವೆ ಊಟ, ಹಾಡು ಹಸೆ ಕಂಬನಿ ನಗೆ ಮಾತುಕತೆಗಳಲಿ ನಮ್ಮಷ್ಟಕ್ಕೆ ಮರೆತುಕೊಂಡಿರುವ ಹೊತ್ತಿಗೆ ವಹಿವಾಟು ವಹಿಸಿದ ಮಂದಿ ಹಣದ, ಅಭಿವೃದ್ಧಿಯ ಹುಚ್ಚು ಹಂಬಲದಲ್ಲಿ ಇಡೀ ಇಡೀ ಮನೆ ಆಸ್ತಿಪಾಸ್ತಿ ಸರ್ವಸ್ವವನ್ನು ಅಡವಿಟ್ಟ ಸುದ್ಧಿ ಬಂದು ಕವಿಯುವ ಕನ್ನೆತ್ತರು ಕಟ್ಟಿದಂತಹ ಮೌನದ ಹಾಗೆ. ಒಡಲಿಗೆ ಬೆಂಕಿ ಬಿದ್ದಂತಹ ಅನುಭವ, ಏನು ಮಾತು ತೋಚದ ಆಘಾತಗಳು ಇವೆಲ್ಲ. ಒಂದಲ್ಲ ಎರಡಲ್ಲ ಸಾಲು ಸಾಲು... ಗಂಗಡಿಕಲ್ಲು, ಕುದುರೆಮುಖ, ಪಶ್ಚಿಮಘಟ್ಟ, ಶರಾವತಿಕೊಳ್ಳ,

ಕೈಗಾ, ನರ್ಮದಾ, ತುಂಗಭದ್ರಾ, ನೇತ್ರಾವತಿ ನದಿ, ನಂದಿಕೂರು, ಮೊನ್ನೆ ಮೊನ್ನೆಯಷ್ಟೆ ಎಸ್.ಇ.ಜಡ್. ವಿಶೇಷವಿತ್ತ ವಲಯಕ್ಕೆ ಒಳಪಟ್ಟಿವೆ.

ಕುದುರೆಮುಖ ಗಣಿಗಾರಿಕೆ ಮುಂದುವರಿದರೆ ತುಂಗ-ಭದ್ರಾ ನದಿಮೂಲವೇ ಒಣಗುತ್ತದೆ. ಇದು ವಿಜ್ಞಾನ ಸಂಸ್ಥೆಗಳೇ ಅಧ್ಯಯನ ಮಾಡಿ ಆಧಾರ ಸಹಿತ ನುಡಿದ ಭವಿಷ್ಯ. ತುಂಗ-ಭದ್ರಾ ನದಿ ಪಾತ್ರಗಳು ಜಲವಿಹೀನವಾಗುತ್ತಿವೆ. ನದಿ ಬೇಕು, ಜೀವನ ಬೇಕು, ನದಿ ಒಣಗಿದಲ್ಲಿ ಲೋಕಜೀವನ ಒಣಗುತ್ತದೆ.

ಪ್ರತಿಯೊಂದು ಸರ್ಕಾರ ಬಂದಾಗಲೂ ಜನ ಅಳಿದುಳಿದ ಆಸೆಗಳನ್ನು ಒಗ್ಗೂಡಿಸುತ್ತಾರೆ. ನಿರೀಕ್ಷೆ ಆವಾಯಿಸಿಕೊಂಡು ಸರಕಾರದತ್ತ ಮುಖವೆತ್ತುತ್ತಾರೆ. ಪ್ರತಿಸಲವೂ ಆಸೆಗಣ್ಣಿಗೆ ಮಣ್ಣು ಬೀಳುತ್ತದೆ. ಸ್ವಾರ್ಥ ಸರಕಾರಗಳು, ಯಾವತ್ತೂ ನೋವಿಗೆ ಸತ್ಯಕ್ಕೆ ಸಹಜಕ್ಕೆ ಸ್ಪಂದಿಸುವುದಿಲ್ಲ. ಬದಲು ಮಾಡಿದ ಕಾನೂನುಗಳನ್ನು ಸ್ವತಃ ತಾವೇ ಮುರಿಯುತ್ತವೆ. ಸಂವಿಧಾನವನ್ನೇ ತಿದ್ದಿಲು ಮುಂದಾಗುತ್ತಲೆ ಮಾಡಿರುವ ಮಾಡುತ್ತಿರುವ ಅಪರಾಧವನ್ನು ಸಮರ್ಥಿಸಿಕೊಳ್ಳುತ್ತವೆ. ಕಂಪನಿಗಳೊಂದಿಗೆ ಕೂಡಿ ವಾಣಿಜ್ಯ ಲಾಭಕ್ಕಾಗಿ ಪುಂಖಾನುಪುಂಖ ಜುಜುಬಿ ಸಮಸ್ಯೆಗಳನ್ನೆ ಭೂತಗನ್ನಡಿಯಲ್ಲಿ ತೋರಿಸುತ್ತ ತಮ್ಮನ್ನೆ ತಾವೇ ಸಂಮೋಹಿಸಿಕೊಳ್ಳುತ್ತವೆ. ನಂಬಿ ಅಧಿಕಾರ ಕೊಟ್ಟು ನಿಂತಿರುವ ಜನತೆ ನಾಳೆಯ ಚಿಂತೆಯಲ್ಲಿ ವಿಚಿತ್ರ ತಲ್ಲಣದಲ್ಲಿ ಇಂದನ್ನು ಕಳೆಯಬೇಕಾಗಿದೆ. ಜೀವಜಾಲದ ಮೂಲಕ್ಕೇ ಕೈಹಾಕ ಹೊರಟಿರುವ ಸರಕಾರದ ವರ್ತನೆ ಹಿಂದೆಂದಿಗಿಂತಲೂ ಹೆಚ್ಚು ನಿರ್ಲಕ್ಷ್ಯವಾಗಿ ಭ್ರಷ್ಟವಾಗಿ ಕಾಣುತ್ತಿದೆ.

ದೇಶದಲ್ಲಿ ಅನೇಕ ಉದ್ಯಮಗಳು ಆರ್ಥಿಕ ಸಂಕಟದಲ್ಲಿ ಮುಚ್ಚುವ ಪರಿಸ್ಥಿತಿಯಲ್ಲಿರುವಾಗ ಇರುವ ಉದ್ಯಮಗಳಾದರೂ ಉಳಿಯಲಿ ಎಂಬುದು ಸರಕಾರದ ಬಯಕೆಯೆಂದು ಹೇಳುತ್ತಾರೆ. ಜೀವ-ಜೀವನಗಳನ್ನು ಬಲಿಕೊಟ್ಟಾದರೂ ಉದ್ಯಮಗಳು ಉಳಿಯಬೇಕೆ? ಯಾರಿಗಾಗಿ? ಎನ್ನುವುದು ಲೇಖಕಿಯ ಪ್ರಶ್ನೆ. ಜನಪರ ಕಾಳಜಿ ಇರುವ ಯಾವುದೇ ರಾಜಕಾರಣಿಯಾದರೂ ಈ ಜಲಮೂಲ ಒಣಗಿ ಹೋಗುತ್ತಿರುವ ಇಂದಿನ ಸಂದರ್ಭದಲ್ಲಿ – ಇರುವ ಜಲಮೂಲಗಳಾದರೂ ಉಳಿಯಲಿ, ನದಿಗಳನ್ನು ಸೃಷ್ಟಿಸಲು ಸಾಧ್ಯವಿಲ್ಲದ ನಾವು ಕೊನೆಪಕ್ಷ ಅವುಗಳ ನಾಶ ಮಾಡುವುದು ಬೇಡ ಎಂಬ ಧೋರಣೆ ತಳೆಯಬೇಕು. ಇಂದು ಸರ್ಕಾರದೆದುರು ಜನಮನ ಗೆಲ್ಲುವ ಒಂದು ಅಪೂರ್ವ ಅವಕಾಶವಿದೆ. ಅವಿವೇಕಕ್ಕೆ ಹುಚ್ಚು ಅಮಲಿಗೆ ಬಲಿಯಾಗದೆ ಗಣಿಗಾರಿಕೆ ನಿಲ್ಲಿಸುವ ಮೂಲಕ ನದಿ ಉಳಿಸುವ ಮೂಲಕ ಚರಾಚರ ಜೀವಿಗಳ ಬದುಕುವ ಹಕ್ಕಿಗೆ ಸ್ಪಂದಿಸುವ ಜನಮತಕ್ಕೆ ಸ್ಪಂದಿಸುವ ಸುವರ್ಣ ಅವಕಾಶವಿದು. ನೋವಿಗೆ

ಬದುಕಿಗೆ ಸ್ಪಂದಿಸುವ ಸರ್ಕಾರಗಳಿಗೆ ಯಾವತ್ತೂ ಸೋಲಿಲ್ಲವೆಂಬುದನ್ನು ಮನಗಂಡು ತಕ್ಷಣವೇ ಅದು ಕಾರ್ಯೋನ್ಮುಖವಾಗಬೇಕಾದ ಅವಶ್ಯಕತೆ ಅನಿವಾರ್ಯತೆ ಎರಡು ಇದೆ.

ನಾಗವೇಣಿ ಸೂರ್ಯನಿಗೊಂದು ವೀಳ್ಯ ಸಂಕಲನದ 'ಧೂಳಿನಿಂದ ಧೂಳಿಗೆ', 'ತುಂಗಭದ್ರೆಯ ವಾರ್ಷಿಕಗೋಳು' ಲೇಖನಗಳಲ್ಲಿ ಕ್ರಮವಾಗಿ ಗಣಿಹಣದ ಕಾಂಚಾಣ ನರ್ತನ, ತುಂಗಭದ್ರಾ ನದಿ ಫ್ಯಾಕ್ಟರಿ ಪರಿಸರ ನಾಶದ ಕುರಿತಾಗಿ ಮಾತಾಡುತ್ತಾರೆ.

ಬಳ್ಳಾರಿ ಜಿಲ್ಲೆಯ ಗಣಿ ಧೂಳಿನ ಹಣದಿಂದ ಕೊಬ್ಬಿದವರು ಆ ಬಾರಿ ಚುನಾವಣಾ ಕಣಕ್ಕಿಳಿದು, ಚುನಾವಣಾ ಪ್ರಚಾರ ನಡೆಸುವ ಅಬ್ಬರದ ಸಂದರ್ಭದಲ್ಲಿ ತಮ್ಮ ಮತದಾರರನ್ನು ಖರೀದಿಸುವ ಪೈಪೋಟಿಯಲ್ಲಿ ಕೂಡಿಟ್ಟ ಹಣವನ್ನು ಧೂಳಿನಂತೆ ಊದಿ ಬಿಡುತ್ತಿದ್ದಂತೆ ಇಡೀ ಜಿಲ್ಲೆಯ ಸಾಮಾಜಿಕ ವ್ಯವಸ್ಥೆ, ಕಾನೂನು ವ್ಯವಸ್ಥೆ, ಪರಿಸರ ವ್ಯವಸ್ಥೆ, ಬದುಕಿನ ಶೈಲಿ ಮನುಷ್ಯ ಸಂಬಂಧಿ ಬದುಕಿನ ಮೌಲ್ಯಗಳು ಹೀಗೆ ಎಲ್ಲವೂ ಕಾಂಚಾಣದ ರುದ್ರನರ್ತನಕ್ಕೆ ಸನ್ನಿ ಹೊಡೆದಂತಾಗಿ ಏಕ್‌ದಂ ಉಲ್ಟಾ ಹೊಡೆದವು!

ಆ ಬಾರಿಯ ಗಣಿಜಿಲ್ಲೆಯ ಚುನಾವಣಾ ಪ್ರಚಾರಕಾಲದ ವಿಶೇಷವೆಂದರೆ ಮನೆ ಮನೆ ಚುನಾವಣಾ ಪ್ರಚಾರ, ಭಾಷಣ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಮಹಿಳೆ ಹಾಗೂ ಪುರುರಷರಿಗೆ ದಿನವೊಂದಕ್ಕೆ ತಲಾ ೨೦೦ ರೂಪಾಯಿ, ಮಕ್ಕಳಿಗೆ ೫೦ ರೂಪಾಯಿ, ಓಟಿರುವ ಪ್ರತಿ ಮತದಾರರಿಗೆ ಪ್ರತಿಯೊಂದು ಪಕ್ಷ ಹಾಗೂ ಪಕ್ಷೇತರರಿಂದ ತಲಾ ಎರಡು ಸಾವಿರ ರೂಪಾಯಿಂದ ಮೂರುಸಾವಿರ ರೂಪಾಯಿಯವರೆಗೂ 'ಬಕ್ಷೀಸು'! ಇಷ್ಟೇ ಅಲ್ಲ ಪ್ರತಿ ಸಮುದಾಯಗಳ ಗುಡಿಗೋಪುರಗಳ ಉದ್ಧಾರಕ್ಕಾಗಿ ಪ್ರತಿಯೊಂದು ಪಕ್ಷದಿಂದ ಪೈಪೋಟಿಯ ಮೇಲೆ ಎರಡರಿಂದ ಮೂರು ಲಕ್ಷದಷ್ಟು ಹಣ ಸಹಾಯ, ಇನ್ನು ಕೆಲವೆಡೆ ಬೆಳ್ಳಿನಾಣ್ಯ, ಮೊಬೈಲ್, ಕಲರ್ ಟಿವಿಗಳನ್ನು ಕಾಣಿಕೆಯಾಗಿ ನೀಡಲಾಯಿತು.

ಇದು ಕೇವಲ ಹದಿನೈದು ದಿನಗಳ ಕಾಲದ 'ಕಾಂಚಾಣ ನರ್ತನ', ಎಂಬುದು ಈ ಮುಗ್ಧ ಹಾಗೂ ಆಗಲೇ ಆರ್ಥಿಕವಾಗಿ ಕಂಗೆಟ್ಟಿದ್ದ ಮನುಸ್ಸುಗಳಿಗೆ ಮಾತ್ರ ಕಿಂಚಿತ್ತೂ ಹೊಳೆಯಲಿಲ್ಲ. ಪ್ರಜ್ಞಾವಂತರಾದ ಕೆಲವರಿಗೆ ಹೊಳೆದರೂ 'ಅದು ಗಣಿ ಧೂಳಿನಿಂದ ಬಂದ ಹಣ, ಈ ಸಾಮಾಜಿಕ ವ್ಯವಸ್ಥೆಯಲ್ಲಿ ಧೂಳಾಗಿ ಬದುಕುತ್ತಿರುವ ನಮ್ಮಂತವರಿಗೂ ಸ್ವಲ್ಪ ಸಲ್ಲಲಿ' ಎಂಬ ಇರಾದೆಯಿಂದ ಅವರೀಗ ಓಟಿನ ಸಲುವಾಗೇ ತೇಲಿಬಂದ ಹಣದ ಹೊಳೆಯಲ್ಲಿ ಇಳಿದು ಕೈಗೆ ಸಿಕ್ಕಷ್ಟು ಬಾಚಲು ಮುಂದಾಗಿದ್ದರು.

ಗಣಿಗಾರಿಕೆಯಿಂದ ಆ ಭಾಗದ ನಿಸರ್ಗವನ್ನೇ ಲೂಟಿ ಹೊಡೆದು ಸೇರಿಸಿಟ್ಟಿದ್ದ ಅಪಾರ ಪ್ರಮಾಣದ ಹಣದ ರಾಶಿಯ ಮೇಲೆ ಅಮರಿ ಕೂತಿರಬಹುದಾದ ಧೂಳಿನ ಪ್ರಮಾಣದಷ್ಟೇ ಹಣವನ್ನು ... ಧೂಳಿನಷ್ಟೇ ಸಲೀಸಾಗಿ ಕೊಡವಿ... ಜಿಲ್ಲೆಯ ಬಹುಸಂಖ್ಯೆಯ ಮತದಾರರನ್ನು ಹದಿನೈದು ದಿನಗಳ ಕಾಲ ತಮ್ಮ ಮುಷ್ಠಿಯೊಳಗೆ ಹಿಡಿದಿಟ್ಟ ಪರಿ... ಬಳ್ಳಾರಿ ಜಿಲ್ಲೆಯಲ್ಲಿ ಹದಗೆಟ್ಟ ಕಾನೂನು ವ್ಯವಸ್ಥೆಗೆ ಹಿಡಿದ ಕನ್ನಡಿಯಲ್ಲದೆ ಬೇರೇನೂ ಅಲ್ಲ. ಜಿಲ್ಲಾ ಚುನಾವಣಾ ವೀಕ್ಷಕರಾಗಿ ರೇಮಂಡ್ ಪೀಟರ್ ಬರುವವರೆಗೂ ಜಿಲ್ಲೆಯಲ್ಲಿ ಎಲ್ಲ ಚುನಾವಣಾ ವೀಕ್ಷಕರು, ಅಭ್ಯರ್ಥಿಗಳಾಗಿರುವ ಗಣಿ ದೊರೆಗಳ ರೊಕ್ಕದ ಬಿಸಿ ಅಪ್ಪುಗೆಯಲ್ಲಿದ್ದರು ಎಂಬುದಂತೂ ಈ 'ಹಂಚಿಕೆ ಪ್ರಕರಣ'ಗಳ ಮೂಲಕ ಸ್ಪಷ್ಟವಾಗಿತ್ತು.

"ಮಾರಿಕೊಳ್ಳುವವರು ಇರುವ ತನಕ ಕೊಂಡುಕೊಳ್ಳುವವರು ಇದ್ದೆ ಇರುತ್ತಾರೆ. ನಮ್ಮತನಗಳನ್ನು ನಾವೇ ಮರೆತರೆ ನಮ್ಮ ನಾಶವನ್ನು ನಾವೇ ಕೈಬೀಸಿ ಕರೆದಂತಾಗುವುದರಲ್ಲಿ ಎರಡು ಮಾತಿಲ್ಲ. **ವಸುಧೇಂದ್ರರ ಹಂಪಿ ಎಕ್ಸ್‌ಪ್ರೆಸ್ ಕಥಾ ಸಂಕನಲದ 'ಕೆಂಪುಗಿಣಿ'** ಕಥೆ ಕೇವಲ ಅರ್ಧ ಶತಮಾನದ ಅಲ್ಪಾವಧಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಆದ ಪಲ್ಲಟಗಳನ್ನು ಅದ್ಭುತವಾಗಿ ಸೆರೆಹಿಡಿದಿದೆ".

ತುಂಗಭದ್ರೆಯ ವಾರ್ಷಿಕ ಗೋಳು ಲೇಖನದಲ್ಲಿ ಲೇಖಕಿಯ ಪರಿಸರ ಕಾಳಜಿ ವ್ಯಕ್ತವಾಗುತ್ತದೆ. **"ಅಲ್ಲ ವರ್ಷಂಪ್ರತಿ ಸಕ್ಕರೆ ಪ್ಯಾಕ್ಟರಿಯವರು ಮಾರ್ಚ್-ಏಪ್ರಿಲ್ ತಿಂಗಳ ಕಾಲಕ್ಕೆ ಕಬ್ಬು ಅರೆಯುವ ಸೀಸನ್ ಮುಗಿದೊಡನೆ ತಮ್ಮ ಕಾರ್ಖಾನೆಯನ್ನು ತೊಳೆದು 'ಲಕಲಕ'ಗೊಳಿಸಿ ತೊಳೆದುಳಿದ ಆ ಸರ್ವ ರಾಸಾಯನಿಕ ನೀರನ್ನು, ಕಾರ್ಖಾನೆಯ ಇತರ ತ್ಯಾಜ್ಯ ವಸ್ತುಗಳೊಡನೆ ವಿಲೇವಾರಿ ಮಾಡುವುದು ಎಲ್ಲಿಗೆ? ನಮ್ಮ ಹಂಪಿಯ ತುಂಗಭದ್ರೆಯ ಒಡಲಿಗೆ. ಆದರೆ ಈ ಬಾರಿ ಮೊನ್ನೆ ಮೊನ್ನೆ ಶಿವರಾತ್ರಿಯ ಕಾಲಕ್ಕೆ 'ಆ ವರ್ಷದ ಕೊಳಕನ್ನು' ಬಿಟ್ಟು ತುಂಗಭದ್ರೆಯ ಎಲ್ಲ ಜೀವರಾಶಿಗಳನ್ನು ಪರಲೋಕಕ್ಕೆ ಅಟ್ಟಿಯಾಗಿದೆ ಈಗ ಮತ್ಯಾಕೆ... ಮತ್ಯಾವ ವಿಷಯುಕ್ತ ತ್ಯಾಜ್ಯ ನೀರನ್ನು ಈ ಕಾರ್ಖಾನೆ ಕುಡಿವ ನೀರಿನ ಕಾಲುವೆಗೆ ಹರಿಸಿದೆ... ಇದನ್ನು ಪ್ರಶ್ನಿಸುವ ಕೆಲವು ತಲೆಗಳಾದರೂ ಇನ್ನೂ ಈ ಪಂಪಾಕ್ಷೇತ್ರದಲ್ಲಿ ಹುಟ್ಟಿಲ್ಲವೇ?"**[31] ಎಂಬ ಪ್ರಶ್ನೆಯನ್ನೆತ್ತುವ ಲೇಖಕಿ ಮುಂದುವರೆದು ಕಳೆದ ವರ್ಷ ಕಾರ್ಖಾನೆಯ ಈ 'ಕೃತ್ಯಕ್ಕೆ' ತೀರಾ ತೆಳ್ಳಗೆ ವ್ಯಕ್ತವಾಗಿದ್ದ ಪ್ರತಿಭಟನೆ, ಆ ಕಾರ್ಖಾನೆ ತಟ್ಟನೆ ವ್ಯಕ್ತಪಡಿಸಿದ ಅದ್ಭುತ ಪರಿಸರ ಕಾಳಜಿಯ ಸ್ವರೂಪವನ್ನು ಕುರಿತು ಪ್ರಸ್ತಾಪಿಸುತ್ತಾರೆ. ಪ್ರತಿಭಟನಾಕಾರರ ವಾದವೇನು ಕಾರ್ಖಾನೆಯ ತ್ಯಾಜ್ಯನೀರನ್ನು ನದಿಗೆಬಿಟ್ಟರೆ ಮೀನುಗಳ ಮಾರಣಹೋಮವಾಗುತ್ತದೆ ಎಂದುತಾನೆ, ಅದಕ್ಕೆ ಕಾರ್ಖಾನೆಯವರು ಒಂದು ಲಕ್ಷ ಮೀನು ಮರಿಗಳನ್ನು ತುಂಗಭದ್ರೆಯ ಮಡಲಿಗೆ ಬಿಡುವ ಬಗ್ಗೆ ಆಶ್ವಾಸನೆ ನೀಡಿದ್ದರು. ಕಾರ್ಖಾನೆ ಮೀನು ಮರಿಗಳನ್ನು ನದಿ ನೀರಿಗೆ ಬಿಟ್ಟಿತೋ ಇಲ್ಲವೋ ಆ

ಪ್ರಶ್ನೆ ಈ ಚರ್ಚೆಗೆ ಬೇಡ. ಆದರೆ ಹಾಗೆ ಬಿಡುವ ಮೀನುಮರಿಗಳು ತುಂಗೆಭದ್ರೆಯ ತ್ಯಾಜ್ಯ ನೀರಿನಲ್ಲಿ ಬದುಕುಳಿಯಲು ಸಾಧ್ಯವಿದೆಯ ಯಾಕೆಂದರೆ ಈಗಾಗಲೇ ಅಲ್ಲಿರುವ ದೊಡ್ಡ ದೊಡ್ಡ ಮೀನುಗಳೇ ಹೊಟ್ಟೆ ಉಬ್ಬಸಿಕೊಂಡು ನೀರಿನ ಮೇಲೆ ತೇಲುತ್ತಿವೆ.

ಗಮನಿಸಬೇಕಾದ ಮತ್ತೊಂದು ಅಂಶ ಈಗ ಬಿಡುವ ಮೀನುಮರಿಗಳು ತುಂಗಭದ್ರೆಯ ಮಡಿಲಲ್ಲಿ ಬೆಳೆವ ಅಂದರೆ ಆ ಜೈವಿಕ ಪ್ರದೇಶದಲ್ಲಿರುವ ವಿಶಿಷ್ಟ ಜೀವ ಪ್ರಭೇದಗಳಿಗೆ ಎಂದಾದರೂ ಸಮವೇ, ಕಾರ್ಖಾನೆ ನಿರಂತರವಾಗಿ ಹೀಗೆ... ವರ್ಷಂಪ್ರತಿ ವಿಷಯುಕ್ತ ತ್ಯಾಜ್ಯ ನೀರನ್ನು ನದಿಗೆ ಬಿಡುತ್ತಲೇ ಇದ್ದಾರೆ... ಆ ಜೈವಿಕ ವಲಯದ ವಿಶಿಷ್ಟವಾದ ಜೀವ ಪ್ರಭೇದಗಳು ಅಲ್ಲಿ ಬದುಕುಳಿಯಲು ಸಾಧ್ಯವಿದೆಯೇ? ಎನ್ನುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದರ ಜೊತೆಗೆ ಆ ವಿಶಿಷ್ಟ ಜೀವ ಪ್ರಭೇದಗಳು ಉಳಿವಿಗಾಗಿ ಕಾಳಜಿವಹಿಸಬೇಕಾಗಿದೆ.

ವೈದೇಹಿಯವರ 'ಇಲಿ ಮತ್ತು ಬೋನ್' ಬರಹದಲ್ಲಿ ಅಣ್ಣಾ ಹಜಾರೆಯವರ ಕುರಿತಾಗಿ ಪ್ರಸ್ತಾಪಿಸುತ್ತಾರೆ. ಅಣ್ಣಾ ಭಾವಚಿತ್ರ ಮಾಧ್ಯಮಗಳಲ್ಲಿ ಬರಲು ತೊಡಗಿದ ಲಾಗಾಯ್ತಿನಿಂದಲೂ ನನಗೆ ಈ ಮನುಷ್ಯನನ್ನು ಎಲ್ಲೋ ನೋಡಿರುವೆನಲ್ಲ ಅಂತಲೇ. ಎಲ್ಲಿ ಅಂದರೆ ಹೊಳೆಯುತ್ತಿಲ್ಲ. ಅತ್ತ ಗಾಂಧಿಯವರನ್ನೂ ಇತ್ತ ಲಾಲಬಹದ್ದೂರ್ ಶಾಸ್ತ್ರೀಯವರನ್ನೂ ಹೋಲುವ, ಹೋಲಿಕೆ ಇದ್ದೂ ಹಾಗಲ್ಲದ ಆತನ ಬೊಚ್ಚುಬಾಯಿ, ಮುಗ್ಧವೆನಿಸುವ ಚರ್ಯೆ, ಹೊಡೆದೆದ್ದು ಹೂಂಕರಿಸಿದ ಮೃದುವಾಗಿ ಇದ್ದೂ ಸಣ್ಣಗೆ ಇದ್ದೂ ಅತ್ತಿತ್ತ ಕದಲದ ದೃಢ ಧ್ವನಿ. 'ಅಜ್ಜಯ್ಯ'ನಂತಹ ಕಣ್ಣಗೆ, ಈಗಷ್ಟೇ ಗದ್ದೆಕೆಲಸದಿಂದ ಹಿಂದಿರುಗಿ ಕೈಕಾಲು ತೊಳೆದು ಮನೆಮುಂದಿಯೆದುರು ಬಂದು ಕುಳಿತಂತಹ ಭಂಗಿ. ನಮ್ಮೊಳಗೊಬ್ಬನಾಗಿ ಕಾಣುವ ಜೊತೆಗೇ ನಾವು ಬಯಸುವ ಒಬ್ಬ ಸರಳ ನೇರ ಜಿಗುಟು ಸಾಚಾ ಬೋಳೇ ಮನುಷ್ಯನಾಗಿ ಕಾಣುವ ಅಣ್ಣಾ. ನೇತಾರಿಕೆಯ ಯಾವ ಹುಸಿಗತ್ತೂ ಇಲ್ಲದ ಅಣ್ಣಾ ಹಜಾರೆಯವರನ್ನು ಯಾರೂ ಸನಿಹ ಸುಳಿಯಲು ಸಾಧ್ಯವೆನಿಸುವಂತಹ ಅವರ ಗಾತ್ರ, ವಿಚಾರ, ಭಾವದಿಂದಾಗಿಯೂ ಕೂಡ ತಮ್ಮ ನವನೇತಾರನನ್ನಾಗಿ ಜನ ಆಯ್ದುಕೊಂಡಿದೆ.

ಅಣ್ಣಾ ಗುಂಪಿನಲ್ಲಿ ಆಸ್ತಿ ಪಾಸ್ತಿ ಮಾಡಿದವರು ಭ್ರಷ್ಟರು ಸುಳ್ಳರು, ಬಂಡವಾಳ ಶಾಹಿಗಳು ಎಲ್ಲ ಸೇರಿ ಮೈಕು ಎತ್ತಿಕೊಂಡಿರುವುದು ಆಘಾತಕರವೇ, ನಿಜ. ಮುಂದಿಟ್ಟ ಹೆಜ್ಜೆ ತೊಡರಿ ಮೆಲ್ಲ ಹಿಂದೆ ಸರಿಯುವುದು ಸಹಜ. ಅಲ್ಲಿ ಮೇಧಾ ಇದ್ದಾರೆ, ಕರ್ನಾಟಕ ಕಂಡ ಅತ್ಯಪರೂಪ ವ್ಯಕ್ತಿತ್ವದ ನಮ್ಮ ಸಂತೋಷ ಹೆಗ್ಡೆ ಇದ್ದಾರೆ ಮತ್ತು 'ಈ ದೇಶದ ಜನರು' ಎಂದಾಗ 'ಭಾರತೀಯ ಪ್ರಜೆಗಳು' ಎಂದಾಗ ಯಾರು ಕಣ್ಮುಂದೆ ಬರುತ್ತಾರೋ ಅವರು ಸಹಸ್ರಸಹಸ್ರ ಸಂಖ್ಯೆಯಲ್ಲಿದ್ದಾರೆ.

ಆದ್ದರಿಂದ ದೋಷಗಳನ್ನು ದೋಷಿಗಳನ್ನು ಗಮನಿಸಿಯೂ, ನಾವೀಗ ಹೊರಟ ಗುರಿಯೇನು ಎಂಬಲ್ಲಿ ಮನಸ್ಸನ್ನು ಕೇಂದ್ರೀಕರಿಸಬೇಕಾಗಿದೆ.

ನಮಗೆ ಅರ್ಥವಾಗದ ಸಬೂಬುಗಳನ್ನು ಹೇಳುತ್ತ ಲಂಚವೆಂದೇ ತಿಳಿಯದ ರೂಪದಲ್ಲಿ ವಸೂಲಿ ಮಾಡುತ್ತ ಕೆಲಸ ಮಾಡಿಕೊಡುವ ಕೊಡದಿರುವ ಸಂಗತಿಗಳಿಗೆ ಇನ್ನು ಪೂರ್ಣವಿರಾಮ ಬೀಳಬೇಕು. ನಮ್ಮ ನೌಕರರಾದ ಅವರು ನಮ್ಮನ್ನು ಆಳುವವರಂತೆ ಅಥವಾ ಸರಕಾರ ನೇಮಿಸಿದ ಸುಲಿಗೆಗಾರರಂತೆ ವರ್ತಿಸದೆ ಸಾಭೀತಿಯಿಂದ, ಪ್ರಾಮಾಣಿಕವಾಗಿ, ಅವರವರ ಕೆಲಸ ಮಾಡಿಕೊಂಡು ಹೋಗಬೇಕು. ಸಂಚುವಂಚನೆಗೆ ಒಳಗಾಗುವ, ಟೊಪ್ಪಿ ಹಾಕಿಸಿಕೊಳ್ಳುವ ನಿರಂತರ ಭಯದಿಂದ ಆತಂಕದಿಂದ ಮುಕ್ತಿಸಿಗಬೇಕು. ಗಂಡಸರೂ ಮಾತ್ರವಲ್ಲ ಹೆಂಗಸರೂ, ವ್ಯವಹಾರ ಗೊತ್ತಿಲ್ಲದವರೂ ಯಾವ ಸರಕಾರೀ ಅಥವಾ ಖಾಸಗೀ ಆಫೀಸಿಗೆ ಹೋದರೂ ಹೆದ್ದುಬೀಳದೆ ಅವರ ಕೆಲಸ, ಕಾರ್ಯ ಆಗುವಂತೆ ಅಲ್ಲಿರುವ 'ನಮ್ಮ ಆಳುಮಕ್ಕಳು' ನೋಡಿಕೊಳ್ಳಬೇಕು. ಗೋಪುರ ಕೆಡಹುವುದು, ಮೂರ್ತಿ ಒಡೆಯುವುದು, ಮಸೀದಿ ಚರ್ಚು ದೇವಾಲಯ ಕಟ್ಟುವುದು ಅಂತೆಲ್ಲ ಎಷ್ಟು ಕನಸುಗಳಿವೆಯಂತೆ.

ಅಣ್ಣಾ ಅಜೆಂಡಾದಲ್ಲಿ ಇನ್ನೂ ಅನೇಕವು ಸೇರಿಯೇ ಇಲ್ಲ. ಕೃಷಿಭೂಮಿ, ಕಾಡು, ಆದಿವಾಸಿಗಳ ಬುಡಕಟ್ಟು ಸಮುದಾಯಗಳ ಜಿಕ್ಕಟ್ಟುಗಳು, ಅತ್ಯಾಚಾರ ಅನಾಚಾರ ಹೆಣ್ಣುಮಕ್ಕಳ ದಾರುಣ ದುರಂತಗಳು... ಹೇಳಹೋದರೆ ಅದೊಂದು ದೀರ್ಘಪಟ್ಟಿ. ನಮ್ಮ ಇರೋಮ್ ಶರ್ಮಿಳಾ ಉಪವಾಸದ ಕುರಿತು, ಅದರ ಹಿಂದಿನ ಕಾರಣ ಕುರಿತು ಮಾಧ್ಯಮಗಳು, ಅಣ್ಣಾ ಕೂಡ, ಯಾಕೆ ಒತ್ತು ಕೊಡುತ್ತಿಲ್ಲ? ಭ್ರಷ್ಟಾಚಾರದಷ್ಟು ವ್ಯಾಪಕತೆ ದೌರ್ಜನ್ಯಕ್ಕೆ, ಅದರಲ್ಲಿಯೂ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಕ್ಕೆ, ಇಲ್ಲವೆಂದೆ? ಸಮಾಜ ಯಾವುದಕ್ಕೆ ಸಾರಾಸಗಟಾಗಿ ಎದ್ದುನಿಲ್ಲುತ್ತದೆ, ಯಾವುದನ್ನು ಸುಮ್ಮನೆ ಕೈಕಟ್ಟಿ ನಿಂತು ನೋಡುತ್ತಿರುತ್ತದೆ? ಅಂದಾಜು ಹೇಗೆ? ನಮ್ಮ ಧೀಮಂತ ನಾಯಕಿ ಮೇಧಾಪಾಟ್ಕರ್ ಅವರ ಆಂದೋಲನಕ್ಕೆ ಯಾಕೆ ಈ ಮಾದರಿ ಪ್ರತಿಕ್ರಿಯೆ ಸಿಕ್ಕಿಲ್ಲ? ಎಂಬ ತಕರಾರನ್ನು ವ್ಯಕ್ತಪಡಿಸಿದ್ದಾರೆ.

ಅಡಿ ಟಿಪ್ಪಣಿ

೧. ವೈದೇಹಿ, ***ಹರಿವ ನೀರು,*** ಪು.ಸಂ. ೧೨೮

೨. ಎಚ್. ನಾಗವೇಣಿ, ***ವಸುಂಧರೆಯ ಗ್ಯಾನ,*** ಪು.ಸಂ. ೩೫

೩. ಅದೇ, ಪು.ಸಂ. ೧೬

೪ ಅದೇ, ಪು.ಸಂ. ೩೯–೪೦

೫. ವೈದೇಹಿ, **ಮಲ್ಲಿನಾಥನ ಧ್ಯಾನ,** ಪು.ಸಂ. ೭೧

೬. ಅದೇ, ಪು.ಸಂ. ೮೩

೭. ವೈದೇಹಿ, **ಮೇಜು ಮತ್ತು ಬಡಗಿ,** ಪು.ಸಂ. ೬೬–೬೭

೮. ಅದೇ, ಪು.ಸಂ. ೮೨

೯. ಎಚ್. ನಾಗವೇಣಿ, **ವಸುಂಧರೆಯ ಗ್ಯಾನ,** ಪು.ಸಂ. ೩

೧೦. ವೈದೇಹಿ, **ಮೇಜು ಮತ್ತು ಬಡಗಿ,** ಪು.ಸಂ. ೨೩–೨೪

೧೧. ಎಚ್. ನಾಗವೇಣಿ, **ವಸುಂಧರೆಯ ಗ್ಯಾನ,** ಪು.ಸಂ. ೮

೧೨. ವೈದೇಹಿ, **ಮೇಜು ಮತ್ತು ಬಡಗಿ,** ಪು.ಸಂ. ೧೨೦

೧೩. ಅದೇ, ಪು.ಸಂ. ೧೨೨

೧೪. ಅದೇ, ಪು.ಸಂ. ೧೨೬

೧೫. ವೈದೇಹಿ, **ಮೇಜು ಮತ್ತು ಬಡಗಿ,** ಲೇಖಕಿಯ ಪುಟಗಳು, ಪು.ಸಂ. ೧೩೦–೩೧

೧೬. ಎಚ್. ನಾಗವೇಣಿ, ಸೂರ್ಯನಿಗೊಂದು ವೀಳ್ಯಾ, ಪು.ಸಂ. ೭೧

೧೭. ಅದೇ, ಪು.ಸಂ. ೧೪

೧೮. ಅದೇ, ಪು.ಸಂ. ೧೫

೧೯. ಅದೇ, ಪು.ಸಂ. ೧೦೧

೨೦. ಅದೇ, ಪು.ಸಂ. ೧೦೩

೨೧. ವೈದೇಹಿ, **ಮೇಜು ಮತ್ತು ಬಡಗಿ,** ಪು.ಸಂ. ೧೭೩

೨೨. ಸಂ. ಡಾ. ಕಿಶೋರಿ ನಾಯಕ್ ಕೆ., **ನಾನು ಮತ್ತು ನನ್ನ ಬರಹ,** ಪು.ಸಂ. ೫೦

೨೩. ವೈದೇಹಿ, ***ಮೇಜು ಮತ್ತು ಬಡಗಿ,*** ಪು.ಸಂ. ೪೪

೨೪. ಅದೇ, ಪು.ಸಂ. ೫೯

೨೫. ಎಚ್. ನಾಗವೇಣಿ, ***ಸೂರ್ಯನಿಗೊಂದು ವೀಳ್ಯಾ,*** ಪು.ಸಂ. ೫೩

೨೬. ವೈದೇಹಿ, ***ಮಲ್ಲಿನಾಥನ ಧ್ಯಾನ,*** ಪು.ಸಂ. ೨೫೫-೨೫೬

೨೭. ಅದೇ, ೨೫೭-೨೫೮

೨೮. ಎಚ್. ನಾಗವೇಣಿ, ***ಸೂರ್ಯನಿಗೊಂದು ವೀಳ್ಯಾ,*** ಪು.ಸಂ. ೯

೨೯. ಅದೇ, ಪು.ಸಂ. ೧೧-೧೨

೩೦. ಅದೇ, ಪು.ಸಂ. ೧೦೭

೩೧. ವೈದೇಹಿ, ***ಹರಿವ ನೀರು,*** ಪು.ಸಂ. ೪೦

೩೨. ಎಚ್. ನಾಗವೇಣಿ, ***ಸೂರ್ಯನಿಗೊಂದು ವೀಳ್ಯಾ,*** ಪು.ಸಂ. ೧೧೯

ಅಧ್ಯಾಯ – ೬

ಈ ಇಬ್ಬರು ಲೇಖಕಿಯರ ಬರವಣಿಗೆಯಲ್ಲಿನ ವೈಶಿಷ್ಟ್ಯತೆಗಳು

೬.೧ ಪ್ರಾದೇಶಿಕತೆ

ದಕ್ಷಿಣ ಕನ್ನಡ ಕರಾವಳಿ ಕರ್ನಾಟಕದ ಒಂದು ಅವಿಭಾಜ್ಯ ಭೂಭಾಗ. ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಹಾಗೂ ಪೂರ್ವದಲ್ಲಿ ಪಶ್ಚಿಮ ಘಟ್ಟಗಳ ನಡುವೆ ಹರಡಿಕೊಂಡಿರುವ ಈ ಪ್ರದೇಶ ಭೌಗೋಳಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವೈವಿಧ್ಯಪೂರ್ಣವಾಗಿರುವಂಥದ್ದು. ಅಂತೆಯೇ, ಪಶ್ಚಿಮಘಟ್ಟಗಳ ಸಸ್ಯ ಹಾಗೂ ಖನಿಜ ವೈವಿಧ್ಯತೆಯಿಂದ ಕೂಡಿದ್ದಾಗಿದೆ. ದಕ್ಷಿಣ ಕನ್ನಡದ ಸಣ್ಣ ದೊಡ್ಡ ಹೊಳೆತೊರೆಗಳಲ್ಲಿ ಮತ್ತು ಅರಬ್ಬೀ ಸಮುದ್ರದಲ್ಲಿ ಕಂಡುಬರುವ ಮತ್ಸ್ಯವೈವಿಧ್ಯತೆ ಹಾಗೂ ಈ ಪ್ರದೇಶದ ಜೀವ ವೈವಿಧ್ಯಗಳು ಅನೇಕ ತರಹದ ಕುತೂಹಲಕಾರಿ ಅಧ್ಯಯನಶೀಲತೆಗೆ ಪ್ರಚೋದನೆ ನೀಡುತ್ತದೆ.

ಪೌರಾಣಿಕ ಪರಿಭಾಷೆಯಲ್ಲಿ ಪರಶುರಾಮ ಕ್ಷೇತ್ರ ಎಂದು ಕರೆಯಲ್ಪಡುವ ದಕ್ಷಿಣ ಕನ್ನಡ ಉತ್ತರದಲ್ಲಿ ಬೈಂದೂರು ಹಾಗೂ ದಕ್ಷಿಣದಲ್ಲಿ ಸುಳ್ಯಾದ ತನಕ ವ್ಯಾಪಿಸಿದೆ. ಹಿಂದೊಮ್ಮೆ ಇನ್ನೂ ವಿಶಾಲವಾಗಿತ್ತು ಎಂದು ಪರಿಗಣಿಸಲ್ಪಡುವ ಈ ಪ್ರದೇಶವನ್ನು ತುಳುನಾಡು ಎಂದು ಕರೆಯಲಾಗುತ್ತದೆ. ವಾಸ್ತವದಲ್ಲಿ ದಕ್ಷಿಣ ಕನ್ನಡ ಅನೇಕ ಭಾಷೆಗಳ, ಧಾರ್ಮಿಕ ಪಂಥಗಳ, ಸಂಪ್ರದಾಯಗಳ ಮತ್ತು ಜಾತಿ ಸಮುದಾಯಗಳ ಕೂಡಲಸಂಗಮ ಎಂದರೆ ತಪ್ಪಾಗಲಾರದು ಅಥವಾ ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ದಕ್ಷಿಣ ಕನ್ನಡ ಬಹು ಸಂಸ್ಕೃತೀಯತೆಯ ಒಂದು ಅದ್ಭುತ ದೃಶ್ಯ.

ಇಂದಿನ ದಕ್ಷಿಣ ಕನ್ನಡ ಬಹುಶಃ ಇಡೀ ದೇಶದಲ್ಲೇ ಆಧುನಿಕತೆ ಹಾಗೂ ಅಭಿವೃದ್ಧಿಯ ವಿಕಸನಕ್ಕೆ ತೆರೆದುಕೊಂಡ ಪ್ರಮುಖ ಪ್ರದೇಶಗಳಲ್ಲಿ ಒಂದು. ದಕ್ಷಿಣ ಕನ್ನಡದ ಪ್ರಮುಖ ನಗರವಾದ ಮಂಗಳೂರು ಕಳೆದ ಮೂವತ್ತು ವರ್ಷಗಳಲ್ಲಿ ಬೆಳೆದು ಬಂದ ರೀತಿ ಅಸಾದೃಶ್ಯವಾದದು. ಮೊದಲಿಗೆ ಕಿರಿದಾದ ರಸ್ತೆಗಳು, ಹಳೆಮಾದರಿಯ ಸಣ್ಣ ದೊಡ್ಡ ಕಟ್ಟಡಗಳು ಮತ್ತು ನಡುನಡುವೆ ಏರಿಗಳು, ಗುಡ್ಡಗಳು ಹಾಗೂ ತೋಟಗಳಿಂದ ಸೊಂಪಾಗಿ ಕಾಣಿಸುತ್ತಿದ್ದ ಮಂಗಳೂರು ಇಂದು ಬೃಹದಾಕಾರದಲ್ಲಿ ಬೆಳೆಯುತ್ತಿದೆ. ವಿಶಾಲವಾದ ರಸ್ತೆಗಳು, ಬೃಹತ್ ಕಟ್ಟಡಗಳು, ಸುಸಜ್ಜಿತ ಮಹಲುಗಳು, ಕಣ್ಣು ಕೊರೈಸುವ ಥಳುಕು ಬಳುಕಿನ ವಾಹನಗಳು ಮಂಗಳೂರಿನಲ್ಲಿ ಎಲ್ಲೆಂದರಲ್ಲಿ ಕಾಣಸಿಗುತ್ತವೆ. ಹಳೆಯ ಮಂಗಳೂರಿನ ಗುರುತು – ಗೆರೆಗಳು

ನಿಧಾನವಾಗಿ ಆದರೆ ನಿಸ್ಸಂಶಯವಾಗಿ ಮಾಯವಾಗುತ್ತಿವೆ. ಅಂತೆಯೇ ಕರಾವಳಿಯ ಉದ್ದಗಳಗಳಲ್ಲಿಯೂ ಆಧುನಿಕತೆ ಹಾಗೂ ಅಭಿವೃದ್ಧಿಯ ಪರಿದೃಶ್ಯಗಳು ಹೇರಳವಾಗಿ ಕಾಣಸಿಗುತ್ತವೆ.

"ದಕ್ಷಿಣ ಕನ್ನಡ ಸಾಕ್ಷರತೆಯ ದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಬಹುಶಃ ಇಲ್ಲಿನ ಸಾಕ್ಷರತೆಯ ಸ್ತರ ನೆರೆಯ ಕೇಳರ ರಾಜ್ಯದ ಸಾಕ್ಷರತೆಯ ಮಟ್ಟಕ್ಕೆ ಸರಿಸಮವಾಗಿ ನಿಲ್ಲುವಂಥದ್ದು. ಮೂಲತಃ ಕೃಷಿ ಪ್ರಧಾನ ನಾಡಾಗಿದ್ದ ದಕ್ಷಿಣ ಕನ್ನಡ ಕಳೆದ ಕೆಲವು ದಶಕಗಳಿಂದ ಒಂದು ವಿಶಿಷ್ಟ ಬಗೆಯ ತಂತ್ರಜ್ಞಾನೀಯ ಆಧುನಿಕತೆಗೆ ವ್ಯಾಪಕವಾಗಿ ತೆರೆದುಕೊಂಡಿದೆ.

- **ದಕ್ಷಿಣ ಕನ್ನಡದ ಆಧುನಿಕತೆಯ ರೂಪುರೇಷೆಗಳು.**
- **ಸ್ವಾತಂತ್ರ್ಯ ನಂತರದ ದಕ್ಷಿಣ ಕನ್ನಡದ ಸಮಾಜ ಹಾಗೂ ರಾಜಕಾರಣ.**
- **ದಕ್ಷಿಣ ಕನ್ನಡದಲ್ಲಿ ಹಿಂದುತ್ವ ರಾಜಕಾರಣದ ಸ್ವರೂಪ.**
- **ದಕ್ಷಿಣ ಕನ್ನಡ ಜಾಗತೀಕರಣಕ್ಕೆ ತನ್ನನ್ನು ಒಡ್ಡಿಕೊಂಡಿರುವ ರೀತಿ.**

ಈ ಮೇಲಿನ ಎಲ್ಲಾ ಸಂಗತಿಗಳು ಪ್ರತ್ಯೇಕವಾದ ವಿದ್ಯಮಾನಗಳಾಗಿರದೆ ಒಂದಕ್ಕೊಂದು ಪೋಷಿಸಿಕೊಂಡು ದಕ್ಷಿಣ ಕನ್ನಡದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ರೂಪುರೇಷೆಗಳನ್ನು ನಿರ್ಣಾಯಕವಾಗಿ ನಿರ್ಧರಿಸಿವೆ ಎನ್ನುವುದು ನಮ್ಮ ತಿಳುವಳಿಕೆ".[೧]

ಉಲ್ಲೇಖ : ದಕ್ಷಿಣ ಕನ್ನಡ ಚರಿತ್ರೆ, ಸಂಸ್ಕೃತಿ ರಾಜಕಾರಣ, ಡಾ. ರಾಜಾರಾಮ್ ತೋಳ್ಪಾಡಿ, ಅರುಹು – ಕುರುಹು, ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ ಸಂಪುಟ ೫, ಸಂಚಿಕೆ ೨೦

ಮೇಲ್ನೋಟಕ್ಕೆ ಕಾಣುವ ಪ್ರಾದೇಶಿಕ ವೈಶಿಷ್ಟ್ಯಗಳು ಇವಾದರು ವೈದೇಹಿ ಮತ್ತು ಎಚ್. ನಾಗವೇಣಿ ಈ ಇಬ್ಬರೂ ಲೇಖಕಿಯರು ಕರಾವಳಿಯ ಪರಿಸರವನ್ನು ತಮ್ಮ ಬರವಣಿಗೆಯಲ್ಲಿ ಅಭಿವ್ಯಕ್ತಿಸಿಕೊಂಡ ಬಗೆಯನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ. ಇಲ್ಲಿನ ಭಾಷೆ, ಕಡಲು, ಅಡುಗೆ, ಉಡುಗೆ, ಹಬ್ಬ, ಆಚರಣೆಗಳು ವಿಶಿಷ್ಟವಾಗಿದ್ದು ಪ್ರಾದೇಶಿಕವಾಗಿ ಒಂದೇ ಆಗಿದ್ದರೂ ಈ ಇಬ್ಬರಲ್ಲೂ ಭಿನ್ನವಾದ ಅನುಭವವಾಗಿ ಕೃತಿಗಳಲ್ಲಿ ವ್ಯಕ್ತವಾಗುವಲ್ಲಿ ವಿಶಿಷ್ಟವಾಗಿ ರಚನೆಯಾಗಿವೆ.

೬.೧.೧. ಭಾಷೆ

ಈ ಪರಿಸರದ ವಿಶಿಷ್ಟ ಲಕ್ಷಣಗಳಲ್ಲಿ ಭಾಷೆಯು ಒಂದು. ಇಲ್ಲಿನ ಕನ್ನಡಕ್ಕೆ ಕರಾವಳಿ ಕನ್ನಡ ಎಂಬ ಪ್ರತ್ಯೇಕತೆ ಇಲ್ಲದಿದ್ದರು ಆ ಭಾಷೆಗೊಂದು ವಿಶಿಷ್ಟವಾದ ಸೊಗಡಿದೆ, ಎಂಥವರನ್ನು ಆಕರ್ಷಿಸಬಹುದಾದ ಆ ಕನ್ನಡದೊಳಗೆ ಮತ್ತಷ್ಟು ಪ್ರಭೇದಗಳಿವೆ. ಭಿನ್ನ ದಿಕ್ಕುಗಳಲ್ಲಿ, ಭಿನ್ನ ಜಾತಿಯ ಜನ, ಭಿನ್ನ ರೀತಿಯಲ್ಲಿ ತಮ್ಮ ಭಾಷೆಯನ್ನು ಬಳಸುತ್ತಾರೆ. ಇಲ್ಲಿನ ಮೀನು ಪೇಟೆಯ ಬೆಸ್ತರದು ಒಂದು ಕನ್ನಡವಾದರೆ, ಇಲ್ಲಿನ ಬ್ರಾಹ್ಮಣ ಜಾತಿಯವರದ್ದು ಒಂದು ಕನ್ನಡ. ವೈದೇಹಿ ಮತ್ತು ನಾಗವೇಣಿ ಅವರು ಇಂಥ ವಿಶಿಷ್ಟ ಭಾಷಾ ಭಿನ್ನತೆಯನ್ನು ಸಂದರ್ಭೋಚಿತವಾಗಿ ಸಲೀಸಾಗಿ ತಮ್ಮ ಸಾಹಿತ್ಯ ಕೃತಿಗಳಲ್ಲಿ ಬಳಸಿಕೊಂಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ಜಟಾಪಟಿಯ ನಡುವೆ ಹೊಸ ಭಾಷೆ, ಹೊಸ ಗಾದೆ ಥಟಥಟನೆ ಹುಟ್ಟುತ್ತಿದ್ದ ಕಾಲದಲ್ಲಿ ಜನಿಸಿದವರು ವೈದೇಹಿ. ಆಯಾಯ ಪ್ರಾದೇಶಿಕತೆಗೆ ತಕ್ಕ ಹಾಗೆ ಭಾಷೆ ಸೃಷ್ಟಿಯಾಗುತ್ತಾ ಹೋಗುತ್ತದೆ. ಇದು ಭಾಷಾ ವೈವಿಧ್ಯದ ಹಿಂದಿನ ಗುಟ್ಟು ಕೂಡಾ ಹೌದು. ಕುಂದಾಪುರ ತಾಲ್ಲೂಕು ತನ್ನದೇ ಆದ ವಿಶಿಷ್ಟ ಕನ್ನಡವೊಂದನ್ನು ಬೆಳೆಸಿಕೊಂಡಿದೆ. ಪ್ರಾಯಶಃ ತನ್ನ ಸಂವೇದನಾ ಕ್ರಮಕ್ಕೆತಕ್ಕಂತೆ ರೂಪುಗೊಳಿಸಿಕೊಂಡ ಉಪಭಾಷೆ ಇರಬೇಕು ಎಂಬುದು ಲೇಖಕಿಯ ಅಭಿಪ್ರಾಯ. ಮಾತಿನಲ್ಲೆ ಅಭಿನಯದ ಛಾಪು, ಸಂಕ್ಷಿಪ್ತತೆ, ವ್ಯಂಗ್ಯ, ವಿಡಂಬನೆ, ನವಿರುಹಾಸ್ಯ ವ್ಯಕ್ತಿತ್ವಕ್ಕೆ ಸರಿಯಾಗಿ ಬಿಸುಪು ಪಡೆಯುವ ಭಾಷೆ ಅದು. 'ಅಕ್ಕು' ಕಥೆಯಲ್ಲಿ ಇದೆ ಭಾಷೆಯನ್ನು ಬಳಸಲಾಗಿದೆ. ಆ ಧಾಟಿಯನ್ನು ಅಕ್ಕು ಕಥೆಯ ಸಿರಿಅತ್ತೆಯ ಬಾಯಿಂದಲೇ ಕೇಳಬೇಕು.

"ದಿಬ್ಣ ಬಂದಾಯಿತ್, ನನ್ಹತ್ರ ಯಾರೂ ಇರ್ಲಿಲ್ಲೆ. ಎಲ್ರೂ ಚಪ್ರಕ್ಕೋಡಿದ್ರ್, ನಂಗೊನ್ನಮೂನೆ ಹೆದ್ರಿಕೆ ಆದ್ಹಂಗಿದ್ದಿತ್, ಅಷ್ಟೊತ್ತಿಗೆ ಅಕ್ಕು ಬಂದ್ಲ್. 'ಓ ಅಕ್ಕು' ಎಂದೆ ಅಯ್ಯಬ್ಬ ಅನ್ಸಿ. 'ಹೂಂ ಹೂಂ, ಅಕ್ಕುವಾ ಅವ್ಳ್ ನರ್ಳ!'– ಹರಪಿದ ಹಾಂಗೆ ಉತ್ರಕೊಟ್ಲ್ ಅಕ್ಕು. ಸ್ವಲ್ಪ ದೂರ ನಿಂತಿದ್ಲ್. ನನ್ನನ್ನ ದುರುದುರು ಕಂಡ್ಕ್. ಅಷ್ಟ್ ಚಂದ ಯಾಕ್ ಮಾಡ್ಕಂಕ್?' ಅಂತ್ಹೇಳಿ ಕೇಂಡ್ಲ್. ನಾ ಮಾತಾಡ್ಲಿಲ್ಲೆ. ಅವ್ಳ್‌ಸ್ವರ ಸೀಳ್ ಬಿಟ್ಹಾಂಗಿದ್ದಿತ್. ಅವಳನ್ನೇ ಕಾಽಂತ ಕೂತೆ. 'ಇಲ್ಬಾ' ಅಂದ್ಲ್. 'ಯಾಕೆ?' – ಎಂದೆ. 'ಬಾ ಅಂದ್ರ್ ಬರ್ಕ್' ಅಂದ್ಲ್. ನಂಗೆ ಯಾರನ್ನಾದ್ರೂ ಕರೀಕಂತ ಕಂಡ್ತ್, ಬೇಡ ಅಂತೆಳಿಯೂ ಕಂಡ್ತ್. 'ಅಕ್ಕೂ, ಹುಶಾರಿಲ್ಯ?'– ಎಂದೆ".[೨]

ಅಧಿಕೃತ ಸಾಂಸ್ಕೃತಿಕ ಚಹರೆ, ಭಾಷಾ ಪ್ರಯೋಗಗಳಲ್ಲಿನ ವೈವಿಧ್ಯತೆ ಮತ್ತು ಆಯಾ ಕಥೆಗೆ ಅನುಗುಣವಾದ ನಿರೂಪಣಾ ತಂತ್ರಗಳಿಂದಾಗಿ ಇವರ ಕಥೆಗಳು ವಿಶಿಷ್ಟವಾದವುಗಳಾಗಿವೆ. ಲೇಖಕಿ ತಮ್ಮ ತಾಯಿಯಿಂದ ಬಂದ ಅವರ ತವರುಮನೆ ಪಾಣೆ ಮಂಗಳೂರು ಹಾಗೂ

ಬಂಟ್ವಾಳ ಕಡೆಯ (ತೆಂಕಲಾಯಿನ) ಕೋಟ ಬ್ರಾಹ್ಮಣರು ರೂಢಿಸಿಕೊಂಡಿರುವ ಮಲೆಯಾಳ ತುಳು ಮಿಶ್ರಸೊಗಡಿನ ಕನ್ನಡವೊಂದಿದೆ. ಅದನ್ನ 'ಅಮ್ಮಚ್ಚಿ ಎಂಬ ನೆನಪು', 'ವಾಣಿಮಾಯಿ', 'ಹಕ್ಕಿಲ್ಲದವರು', 'ಭೂತ', 'ಯಾತ್ರೆ' ಮುಂತಾದ ಕಥೆಗಳಲ್ಲಿ ಬಳಸಿಕೊಂಡಿದ್ದಾರೆ- ಇವರ ಹೆಚ್ಚಿನ ಬರವಣಿಗೆಯು ಒಂದುಸಮುದಾಯದಲ್ಲಿ, ಸಂಸ್ಕೃತಿಯಲ್ಲಿ ಆಳವಾಗಿ ಬೇರು ಬಿಟ್ಟಿರುವಂಥದ್ದು. ಸಹಜವಾಗಿಯೇ ಅವುಗಳಿಂದ ಎದ್ದುಬಂದಂಥ ಪಾತ್ರಗಳು ಅವುಗಳ ಭಾಷೆ ನುಡಿಗಟ್ಟುಗಳಲ್ಲೇ ಮಾತನಾಡುತ್ತವೆ. ಈ ಮೇಲೆ ಗುರುತಿಸಿದ ಕಥೆಗಳಲ್ಲಿ ಆಯಾ ಭಾಷೆ ಇಲ್ಲದೆ ಆಯಾ ಪಾತ್ರಗಳೇ ಇಲ್ಲ. ಆಯಾ ಪಾತ್ರಗಳಿಲ್ಲದಿದ್ದರೆ ಆಯಾ ಕಥೆಗಳೇ ಇಲ್ಲ ಎಂಬಷ್ಟು ಭಾವ, ಭಾಷೆ, ವ್ಯಕ್ತಿತ್ವಗಳು ಬೆರೆತು ಹೋಗಿರುವಂತೆ ಇಲ್ಲಿ ಕಥೆ ಹೆಣೆಯಲಾಗಿದೆ.

ಹಕ್ಕಿಲ್ಲದವರು ಕಥೆಯ ಸಿರಿಯ ಸಂಬಂಧಿಕರ ಮಕ್ಕಳೆಲ್ಲ ಮಗ ರಮಾನಾಥನ ಅಳಿಲು ಪಂಜರದ ಸುತ್ತ ನೆರೆದಿದ್ದ ಸಂದರ್ಭದಲ್ಲಿ ಸಿರಿ ಹೇಳವುದು ಹೀಗೆ – **"ಎಷ್ಟಾಯಿತು ನನ್ನ ಮಗ ಹಿಂಗೆ ತಂದು ಸಾಂಕಿದ್, ಪಂಜರ ಇಲ್ದೆ ಒಂದೂ ಬರ್ಕತ್ತಾದ್ದಿಲ್ಲೆ. ಕಡೆಗೆ 'ಅವರು' ಡಬ್ಬಿಲೆ ಹಿಂಗೆ ಮಾಡಿಕೊಟ್ಟರು. ಈಗ ಇದ ಈ ಚಣಿಲು! ಎಲ್ಲೋ ಬಿದ್ದಂಡಿತ್ತ್ ಪಾಪ. ಸಾಯ್‌ತ ಹಂಗಿತ್ತ್. ಎಷ್ಟು ಚುರುಕು ಓಡಾಡ್ತ್ ಕಾಣಿ ಮಾಯೇ!"**[3]

ಮೇಲೆ ಗುರುತಿಸಿದ ಎಲ್ಲಾ ಕಥೆಗಳಲ್ಲಿಯೂ ಅಷ್ಟೇ ಕಥಾ ವಸ್ತು, ನಿರೂಪಣಾ ತಂತ್ರದ ಜೊತೆಗೆ ಭಾಷಾ ಬಳಕೆಯೂ ಕೂಡ ಕಥೆಯ ಯಶಸ್ಸಿಗೆ ಕಾರಣವಾಗಿದೆ. ಇಂಥ ಕಥೆಗಳಲ್ಲಿ ಪ್ರಾದೇಶಿಕ ಸಂಸ್ಕೃತಿಗಳು ತನ್ನ ವಿಶ್ವಾತ್ಮಕವಾದ ಮೌಲ್ಯಗಳನ್ನು ಅಧಿಕೃತ ಮೌಲ್ಯಗಳನ್ನು ತಾನೂ ಇದ್ದೇನೆ ಎಂಬಂತೆ ಬಿಂಬಿಸಿಕೊಳ್ಳುವಾಗ ತಮ್ಮನ್ನು ತಾವೇ ರಾಷ್ಟ್ರದ ಜೊತೆಗೆ ಪ್ರತಿನಿಧಿಸಿಕೊಳ್ಳುತ್ತವೆ. ಕಾರಣ ಇಲ್ಲಿ ಕೇವಲ ಪ್ರಾದೇಶಿಕ ಸಂಸ್ಕೃತಿಗಳಷ್ಟೇ ಅಧಿಕೃತವಾಗಿರದೆ, ಅಲ್ಲಿನ ಜೀವನ ಕ್ರಮಗಳೂ ಅಧಿಕೃತವಾಗುತ್ತವೆ.

ಪ್ರಾದೇಶಿಕ ಕನ್ನಡದ ಸೊಗಡನ್ನು, ಆ ಸಂಭ್ರಮದ ಜಗತ್ತನ್ನು ಜಾತ್ರೆಯ ಮೂಸೆಯಲ್ಲಿಟ್ಟು ನೋಡಲು 'ಜಾತ್ರೆ' ಸ್ಮೃತಿ ಕಥನ ಸಾಕ್ಷಿಯಾಗಿದೆ. ಈ ಸಂಕಲನವು ಭಾಷಾ ಬಳಕೆಯ ಕಾರಣಕ್ಕೂ ವಿಶಿಷ್ಟವಾದ ಕೃತಿಯಾಗಿದೆ.

ರಾಧ ಚಿಕ್ಕಿ ಜೊತೆ ಜಾತ್ರೆಗೆಹೋದ ಮಕ್ಕಳು ಜಾತ್ರೆಯ ಸಂಭ್ರಮವನ್ನು ಸಂಭ್ರಮಿಸುವ ಸಂಭಾಷಣೆಯಲ್ಲಿ ಪ್ರಾದೇಶಿಕ ಕನ್ನಡದ ಸೊಗಡನ್ನು ಗಮನಿಸಬಹುದಾಗಿದೆ. **"ಏ...... ಸುಮನಕ್ಕ, ಐಸ್‌ಕ್ಯಾಂಡಿ ಗಾಡಿ! ತಕಂಬನ?' ಹಾಂಗೆಲ್ಲ ತಿಂಬುಕಾಗ, ಶಜ್ಜನ್ ಮಾಸ್ತ್ರು ಹೇಳಿದ್ದಲ್ದ? ರಸ್ತೆ ಬದೀದ್**

ಜಾತ್ರೀತ್ರೇದ್‌ಯಂತದೂ ತಿಂಬುಕಾಗ ಅಂತೆಳಿ? ಕ್ರಿಮಿಗಿಮಿಯಲ್ಲ ಅದ್ರ್ ಮೇಲ್ ಕೂತಿರ್ತೋ ಅಂಬ್ರ್... ತಿಂದ್ರ್ ಹೇಳಿ ಕೊಡ್ತೆ ಕಾಣ್!'"

ಇನ್ನು ಅಸ್ಪೃಶ್ಯರು ಕಾದಂಬರಿಯ ನಿರೂಪಣೆಯಲ್ಲಿ ಪ್ರಾದೇಶಿಕವಾಗಿರುವುದು ಸಹಜವೆಂಬಂತೆ ಅಲ್ಲಲ್ಲಿ ಬಳಕೆಯಾಗಿದೆ. ಅದಕ್ಕೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. 'ಅಮಾಸಿ ಅಲ್ದ ವಡ್ತ್ರ' (ಪು. ಸ. ೯), 'ಚಂಯ್ಯಾಲಜ್ಜಿಯಂತೆ ಮರುಕುವುದು ಸಾಕು ಮಾರಾಯ್ತಿ' (ಪು. ಸ. ೨೫), ಹೌದು ಚಣ್ಣೊಡೆಯರೇ, ಅಡಿಗೆ ಭಾರಿ ರುಚಿಯುಂಟು. (ಪು.ಸ. ೫೭).

ಇಲ್ಲೆಲ್ಲ ಕುಂದಾಪುರ ಕನ್ನಡದೊಳಗಿನ ಪ್ರಭೇದಗಳಾದ ಶೂದ್ರ ಕನ್ನಡಕ್ಕೂ, ಬ್ರಾಹ್ಮಣರ ಕನ್ನಡಕ್ಕೂ ಇರುವ ವ್ಯತ್ಯಾಸಗಳನ್ನು ಗಮನಿಸಬಹುದು. "ಇಡೀ ಕರ್ನಾಟಕದಲ್ಲಿ ಕರಾವಳಿ ಜಿಲ್ಲೆಗಳು ಕನ್ನಡ ಜಿಲ್ಲೆಗಳೆಂದು ಹೆಸರು ಪಡೆದಿವೆ. ಈ ನಾಡು ಕನ್ನಡಜಿಲ್ಲೆ ಎಂದು ಹೆಸರು ಪಡೆದಿದ್ದರೂ ಊರಿನ ಆಡುಭಾಷೆ ಮತ್ತು ಮಾರುಕಟ್ಟೆ ಭಾಷೆ ತುಳುವಾಗಿದೆ. ಹಾಗೆಯೇ ಕೊಂಕಣಿ ಭಾಷೆಯನ್ನಾಡುವವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಶೇಕಡಾ ೧೫ರಷ್ಟು ಜನರು ಮುಸ್ಲಿಮರಾಗಿದ್ದು ಇವರಲ್ಲಿ ಹೆಚ್ಚಿನವರು ಬ್ಯಾರಿ ಭಾಷೆಯನ್ನಾಡುತ್ತಾರೆ, ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಶೇಕಡಾ ೨೦ರಷ್ಟು ಕ್ರೈಸ್ತರಿದ್ದಾರೆ. ಹೀಗೆ ಈ ಜಿಲ್ಲೆಯಲ್ಲೂ, ತುಳು, ಕೊಂಕಣಿ, ಬ್ಯಾರಿ, ಉರ್ದು ಭಾಷಿಕರಲ್ಲದೆ ಉತ್ತರ ಭಾರತದಿಂದ ಬಂದು ಇಲ್ಲೆ ನೆಲೆಗೊಂಡ ಗುಜುರಾತಿಗಳೂ, ಮರಾಠಿಗರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಮಲಯಾಳ, ತುಳು, ಬ್ಯಾರಿ, ಕೊಂಕಣಿ, ಉರ್ದು ಭಾಷಿಕರು ತಮ್ಮ ಮಾತೃಭಾಷೆಯನ್ನುಳಿಸಿಕೊಂಡಿದ್ದರೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕನ್ನಡವನ್ನೇ ನೆಚ್ಚಿಕೊಂಡವರು. ಇಲ್ಲಿನವರು ಎಂದೂ ಭಾಷೆಗಾಗಿ ಸಂಬಂಧ ಕೆಡಿಸಿಕೊಂಡವರಲ್ಲ. ಭಾಷಾ ಬಾಂಧವ್ಯ ನಮ್ಮ ಜಿಲ್ಲೆಯ ವೈಶಿಷ್ಟ್ಯತೆಗೆ ನಮ್ಮ ಜನರ ಹೃದಯ ವೈಶಾಲ್ಯತೆಗೆ ಹಿಡಿದ ಕನ್ನಡಿಯಾಗಿದೆ. ತುಳುವರಿಗೆ ಕೊಂಕಣಿ, ಬ್ಯಾರಿ, ಕನ್ನಡಿಗ ಮುಂತಾದ ಎಲ್ಲರಲ್ಲೂ ಸಮಾನವಾದ ಪ್ರೀತಿ ವಿಶ್ವಾಸವಿದೆ. ತುಳು ನಾಟಕ, ಯಕ್ಷಗಾನಗಳಲ್ಲಿ ಕನ್ನಡಿಗನಿಗೂ ಕೊಂಕಣಿಯವನಿಗೂ ಸಮಾನವಾದ ಆಸಕ್ತಿ ಇದೆ. ಇಲ್ಲಿ ಭಾಷೆ ಕಲೆಯಾಗಿ ಅರಳಲು ಯಾವ ತೊಡಕೂ ತಲೆದೋರಿದ್ದಿಲ್ಲ. ಎಲ್ಲಾ ಭಾಷೆಗಳನ್ನೂ ಎಲ್ಲರೂ ಪ್ರೀತಿಸುವವರೇ ಆಗಿದ್ದಾರೆ. ದಕ್ಷಿಣ ಕನ್ನಡಿಗರ ಈ ಹೃದಯ ವೈಶಾಲ್ಯತೆಗೆ ನೂರು ನಮನಗಳು".[31]

ತಾವು ಹುಟ್ಟಿ ಬೆಳೆದ ಪರಿಸರವನ್ನು ಅದರ ವೈಶಿಷ್ಟ್ಯವನ್ನು ವಿಶಿಷ್ಟವಾಗಿ ಗುರುತಿಸಿದವರಲ್ಲಿ ನಾಗವೇಣಿ ಕೂಡ ಒಬ್ಬರು. ತಮ್ಮ ಕೃತಿಗಳಲ್ಲಿ ತುಳು ಮಿಶ್ರ ಕನ್ನಡವನ್ನು ಬಳಸುವ ಇವರು ತುಳುನಾಡಿನ ಬಂಟರ ಸಂಸ್ಕೃತಿಯನ್ನು ಚಿತ್ರಿಸುವ ಜೊತೆಗೆ ಕರಾವಳಿಯ ಪ್ರಾದೇಶಿಕ ಚಿತ್ರವೊಂದನ್ನು ವಿಶಿಷ್ಟವಾಗಿ ಕಟ್ಟಿಕೊಡುತ್ತಾರೆ. ಲೇಖಕಿಯ ಬರವಣಿಗೆಯ ಕ್ರಮವು ಪ್ರಾದೇಶಿಕವಾಗಿರುವುದು ಅವರ ಮಟ್ಟಿಗೆ ಸಹಜವಾದದ್ದೆ ಆಗಿದೆ. ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿ ಪ್ರಾದೇಶಿಕ ಕಾದಂಬರಿಯಾಗುವ ಎಲ್ಲಾ ಲಕ್ಷಣವನ್ನು ಹೊಂದಿದೆ.

ಕಾದಂಬರಿಯುದ್ದಕ್ಕೂ ಬಳಸಲಾಗಿರುವ ದಕ್ಷಿಣ ಕನ್ನಡದ ಜನರ ಆಡುಭಾಷೆ ಸೊಗಸಾಗಿದೆ. ಅಲ್ಲಲ್ಲಿ ಹಲವಾರು ಶುದ್ಧ ತುಳು ಶಬ್ದಗಳು ಕಾಣಸಿಗುತ್ತವೆ. ಉದಾ. : ಪೋಕಾಲ; ಹೋಗುವ ಕಾಲ, ಪದ್ರಾಡ್; ಓಡಿಹೋಗು, ತಲ್ಲೇಪು; ಗೊಂದಲ, ಗೆರಸೆ ; ದಾನ್ಯ ಕೇರುವ ಮೊರ, ಪನಿ ಕುಳ್ಳುವ, 'ಪುಣೆಪ್ಪು ಹಗ್ಗ ; ಬೊಂತೆಲ್.

ಅವರ 'ಗಾಂಧಿಬಂದ' ಕಾದಂಬರಿಯಲ್ಲಾಗಲಿ, 'ಮೀಯುವ ಆಟ' ಸಂಕಲನದಲ್ಲೆ ಆಗಲಿ ಕೃತಕವಲ್ಲದೆಯೂ ತುಳು ಕನ್ನಡ ಆ ಪರಿಸರಕ್ಕೆ ಸಹಜವೆಂಬಂತೆ ಬಳಕೆಯಾಗುತ್ತಾ ಹೋಗಿದೆ. ಈ ರೀತಿಯ ಆಡು ಮಾತಿನ ಭಾಷಾ ಪ್ರಯೋಗ ಈ ಕೃತಿಗಳ ವಿಶಿಷ್ಟತೆಯೂ ಆಗಿದೆ.

'ಎಲ್ಲಾ ನನ್ ಕರ್ಮವೇ... ಅಲ್ಲಾ ಸ್ಯಾಬೆರೆ, ನಿಮ್ಗ ಎಷ್ಟೊಂತ ಹೇಳುದು ಮಾರಾಯ್ರೇ!', (ಪು. ಸ. ೨ ಮೀಯುವ ಆಟ) 'ಒಮ್ಮೆ ನೀವು ಅಡಿಸರಿಸಿ ನೋಡುವಾ...' (ಪು.ಸ. ೨ ಮೀಯುವ ಆಟ) 'ಈ ಬೆಳ್ಳಿಲೋಟ ಜಾಗ್ರತೆ ಮಾರಾಯ, ನನ್ನ ಮದುವೆಯಲ್ಲಿ ನನ್ನಪ್ಪ ಕೊಟ್ಟಿದು' (ಪು.ಸ. ೨೦ ಮೀಯುವ ಆಟ) ಇಂಥ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ನಾಗವೇಣಿ 'ಕಾಲ'ದ ಬಗ್ಗೆ ಬರೆಯುವಾಗಲಂತೂ ತುಳುನಾಡಿನ ಕಾಲದ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಬರೆಯುತ್ತಾರೆ. 'ಮಳೆಯ ಜಿಟಿ ಜಿಟಿ ರಾಗ ಶುರುವಾಗಿ ಆಗಲೇ ಮೂರು ದಿನ ಕಳೆದಿದೆ. ಕಾರ್ತೆಲ್ ತಿಂಗಳ ನಡುವದು'. (ಪು. ಸ. ೧ ಮೀಯುವ ಆಟ) 'ಪಗ್ಗು–ಭೇಷ ತಿಂಗಳು ಬಂತೆಂದರೆ ಸಾಕು – ದಲ್ಲಾಳಿ ಕೆಲಸದ ಜತೆಗೆ ಮುಂದೆ ದಿಗಿಣ ತೆಗೆದು ಬರಲಿರುವ ಕಾರ್ತೆಲ್ ತಿಂಗಳ ಮಳೆರಾಯ... (ಪು.ಸ. ೯ ಮೀಯುವ ಆಟ)

'ಗ್ರೀಷ್ಮ ಕಾಲದ ನಂತರದ ವರ್ಷಾ ಋತುವಿನಲ್ಲಿ ಖಾದ್ರಿಬ್ಯಾರಿಯವರಿಗೆ ಸ್ವಲ್ಪ ಪುರುಸೊತ್ತು ಸಿಗುವುದಿದೆ' (ಪು.ಸ. ೯ ಮೀಯುವ ಆಟ) ನಾಗವೇಣಿಯವರ ಕಥನದ ಈ ಮಾದರಿಯನ್ನು ಸ್ಥಳೀಯ ಮಾದರಿ ಎನ್ನಲು ಬಹುದೇನೋ. ಏಕೆಂದರೆ ಲೇಖಕಿ ಇಲ್ಲಿ ಕೊಡುವ ಸ್ಥಳೀಯ ಮಾದರಿಗಳೇ ಒಟ್ಟೈಸಿಕೊಂಡು ಪ್ರಾದೇಶಿಕ ಮಾದರಿಯ ಎಲ್ಲಾ ಲಕ್ಷಣಗಳನ್ನು ಪಡೆದುಕೊಂಡಿದೆ. ಪ್ರಾದೇಶಿಕತೆ ಎಂದ ಕೂಡಲೆ ಅದು ಕೇವಲ ಆಡುಭಾಷೆ ಮಾತ್ರವಲ್ಲ. ಅಲ್ಲಿನ ಕಡಲು, ವಿಶಿಷ್ಟವಾದ ಅಡುಗೆ, ಹಬ್ಬ, ಆಚರಣೆಗಳು ಎಲ್ಲವು ಮುಖ್ಯವಾಗುತ್ತವೆ. ಈ ಸಂಕಲನದ ಬಹು ಮುಖ್ಯವಾದ ಕಥೆ 'ದಾನ'. ಈ ಕಥೆಯಲ್ಲಿ ಪ್ರಾದೇಶಿಕ ಆಚರಣೆಯಾದ 'ಅಜಲು' ಪದ್ಧತಿಯನ್ನು ಕುರಿತು ಪ್ರಸ್ತಾಪಿಸುತ್ತಾರೆ. 'ಅಜಲು' ಪದ್ಧತಿ ದಕ್ಷಿಣ ಕನ್ನಡದ ತುಳುಭಾಷಿಕ ಪ್ರದೇಶದಲ್ಲಿ ಪ್ರಚಲಿತವಿರುವ ಸಂಪ್ರದಾಯ.

"ಊರ ಅಜಲಿನ ಕೊರಗರಿಗೆ ಮಗುದಾನ ಮಾಡುವ ಶಾಸ್ತ್ರವೆಂದರೆ, ಮಗುವನ್ನು ಕೊರತಿಯ ಕೈಗೊಪ್ಪಿಸುವ ಮೂಲಕ ಮಗುವನ್ನು ಕಾಡುವ ಶನಿಯನ್ನು ಕೊರತಿಯ ಸಂತಾನಕ್ಕೆ ದಾಟಿಸಿ ಬಿಡುವುದು ಎಂದರ್ಥ. ಅನಾದಿಕಾಲದಿಂದಲೂ ಉಳ್ಳವರು ಉಚ್ಚಕುಲದವರು ನಡೆಸಿಕೊಂಡು ಬಂದಿರುವ ಸಂಪ್ರದಾಯ, ಆಚಾರವಿದು".[೬]

ಇಂಥ ಅಮಾನುಷ ಸಂಪ್ರದಾಯವನ್ನು ಆಚರಿಸಿಕೊಂಡು ಬರುತ್ತಿದ್ದ ಕೊರಗರೆ ಇಂದು ಎಚ್ಚೆತ್ತು ಈ ಆಚರಣೆಯ ವಿರುದ್ಧ ಸಿಡಿದೆದ್ದು ನಿರಾಕರಿಸುವುದನ್ನು ಹಾಗೂ ಅದೇ ಸಂಪ್ರದಾಯಕ್ಕೆ ಕಟ್ಟು ಬಿದ್ದ ಜನ ಇಂದಿಗೂ ಈ ಆಚರಣೆ ನಡೆಸಲು ಪ್ರಯತ್ನಿಸುವ ಸಂದರ್ಭದಲ್ಲಿ ಉಂಟಾಗುವ ಸಂಘರ್ಷ ಭಾವೋದ್ವೇಗದ ಮಾನವೀಯ ಮುಖಗಳನ್ನು ಕಲಾತ್ಮಕವಾಗಿ ಈ ಕಥೆಯಲ್ಲಿ ಕಟ್ಟಿಕೊಡಲಾಗಿದೆ. ಭಾಷೆ ತನ್ನೆಲ್ಲ ಪರಿಭಾಷಿಕತೆಯನ್ನು ಮೀರಿಯೂ ಸಂವಹನಶೀಲವಾಗಿರುವುದನ್ನು ಗಮನಿಸಬಹುದಾಗಿದೆ.

೬.೧.೨. ಪ್ರಾದೇಶಿಕ ಆಚರಣೆಗಳು ಮತ್ತು ಅಡುಗೆಗಳು

ತುಳುನಾಡಿನ ಪ್ರಾದೇಶಿಕ ಆಚರಣೆಗಳಲ್ಲಿ ಭೂತದಕೋಲವು ಒಂದು. ನಾಗವೇಣಿಯವರ 'ನಾಕನೇ ನೀರು' ಕಥಾಸಂಕಲನದ ಮಾಯಿಲನ ಭೂತ, ಪಂಜುರ್ಲಿ ಮತ್ತು ಗರ್ಭಪಾತ, ನಾಕನೇ ನೀರು, ಬೆಲ್ಲ ಕಥೆಗಳಲ್ಲಿ ಹಾಗೂ ಬಹುಪಾಲು ಅವರ ಎಲ್ಲಾ ಕೃತಿಗಳಲ್ಲೂ ಸಂದರ್ಭೋಚಿತವಾಗಿ ಭೂತಕೋಲ ಆಚರಣೆಯನ್ನು ಕುರಿತು ಪ್ರಸ್ತಾಪಿಸುತ್ತಾರೆ. 'ಮಾಯಿಲನ ಭೂತ' ಕಥೆಯಲ್ಲಿ ಬರುವ ಭೂತಕೋಲದ ಆಚರಣೆಗೆ ಸಂಬಂಧಿಸಿದ ವಿವರಗಳು ಹೀಗಿವೆ. ನಾಲ್ಕು ದಿನದಿಂದಲೆ ಸಿದ್ಧತೆಗಳು ಶುರುವಾಗುತ್ತವೆ. ಕೋಲದ ಮುಂಜಾವದ ಕಾರ್ಯಕ್ರಮ 'ಭೂತ ಶುದ್ಧಿ' ಮಾಡುವುದು ಅದಕ್ಕೆ ತಂತ್ರಿಗಳ ಮಂತ್ರವೇ ಬೇಕು. ತಂತ್ರಿಗಳು ಬರುವವರೆಗೂ ನೆಂಟರಿಷ್ಟರು ತಂದ ಹರಕೆಯ ಕೋಳಿಗಳನ್ನು ಕೆಳ ಅಂಗಳದಲ್ಲಿ ಸೂಕ್ತ ಸ್ಥಳದಲ್ಲಿ ಬಿಗಿದಿಡಲಾಗುತ್ತದೆ. ತಂತ್ರಿಗಳುಬಂದು ಭೂತದಮನೆ ಶುದ್ಧಗೊಳಿಸಿದ ತಕ್ಷಣ ಅಡುಗೆಕೆಲಸ ಆರಂಭವಾಗುತ್ತೆ. ಶುದ್ಧತರಕಾರಿ ಊಟ, ಸಂಜೆ ಐದುಗಂಟೆಯೊಳಗಡೆ ಊಟ ಮುಗಿಸಬೇಕು. ಊಟಕ್ಕೆ ಅನ್ನದ ಜೊತೆ ಸೌತೆಕೊದ್ದೆಲು, ಗುಜ್ಜೆಗಸಿ, ಮಿಡಿ ಉಪ್ಪಿನಕಾಯಿ, ತೊಂಡೆಪಲ್ಯ, ತಿಮಿರೆ ಚಟ್ನಿ ಹೀಗೆ ವಿಶೇಷ ಅಡುಗೆಗಳನ್ನು ಮಾಡಲಾಗುತ್ತದೆ. ಭೂತಕಟ್ಟುವ ದುಗ್ಗನ ಊಟ ಮುಗಿದೊಡನೆ ದುಗ್ಗ ಮೊದಲೆ ಕೀಳಿಸಿಟ್ಟಿದ್ದ ತೆಂಗಿನ ಎಳೆಯ ಗರಿಗಳಿಂದ 'ಅಣಿ' ಹಾಗೂ 'ತಿರಿ' ಹೆಣೆದುಕೊಳ್ಳುತ್ತಾನೆ. ಅಣಿ ಕಟ್ಟಿ ಮುಗಿದ ತಕ್ಷಣ ಜಾತಿ ಗುರಿಕಾರನಲ್ಲಿ ಒಂದು ಮಾತು ಕೇಳಿ ಮಾಯಿಲ ತೆಂಗಿನೆಣ್ಣೆಯನ್ನು ದುಗ್ಗ ನೀಡಿದ ಬಟ್ಟಲಿಗೆ ಸುರಿದೊಡನೆ ದುಗ್ಗನೊಳಗೆ ಕಲ್ಲುರ್ಟಿಯ

ಆವಾಹನೆಯಾಗುತ್ತದೆ. ದುಗ್ಗ ಬಟ್ಟಲಿನಲ್ಲಿದ್ದ ಎಣ್ಣೆಯನ್ನೆಲ್ಲಾ ತಲೆ ಮೈಗೆಲ್ಲಾ ಸುರಿದುಕೊಂಡು ಆವೇಶದಿಂದ ಆರ್ಭಟಿಸುತ್ತಾ ಮೈ ಶುದ್ಧಕ್ಕಾಗಿ ಬಾವಿಬಳಿ ಓಡುತ್ತಾನೆ. ಅಷ್ಟರಲ್ಲಿ ಬಾವಿಯ ಅಕ್ಕಪಕ್ಕದಲ್ಲಿ ನಾಲ್ಕೈದು ಕಟ್ಟುಮಸ್ತಾದ ಆಳುಗಳು ಮಾಯಿಲನ ಸೂಚನೆಯಂತೆ ದುಗ್ಗನನ್ನು ಹಿಡಿದುಕೊಳ್ಳಲೆಂದೇ ನಿಂತಿರುತ್ತಾರೆ. ಬಾವಿ ಬಳಿ ದುಗ್ಗ ಆವೇಶದಿಂದ ನಡುಗುತ್ತಿರಬೇಕಾದರೆ ಭಯಗ್ರಸ್ತರಾದ ಆಳುಗಳು ದುಗ್ಗನನ್ನು ಬಲವಾಗಿ ತಬ್ಬಿ ಹಿಡಿದು ಬಾವಿಯಿಂದ ಏಳೆಂಟು ಕೊಡ ನೀರು ಸೇದಿ ಸೇದಿ ದುಗ್ಗನ ಮೇಲೆ ಸುರಿದು ಮೈ ಶುದ್ಧಗೊಳಿಸುತ್ತಾರೆ.

ದುಗ್ಗನ ಆವೇಶ ಸಂಪೂರ್ಣ ಇಳಿದು ಬಾವಿ ಬಳಿಯಿಂದ ಬಣ್ಣ ಹಚ್ಚುವಲ್ಲಿಗೆ ದುಗ್ಗ ಗಂಭೀರ ಹೆಜ್ಜೆಗಳನ್ನಿಡುತ್ತಾ ಬಂದಾಗ ಭೂತದ ಪಾಡ್ದನಗಳನ್ನು ಹೇಳಲಾಗುತ್ತದೆ. ಕೈಯಲ್ಲಿ ಕನ್ನಡಿ ಹಿಡಿದು ಮುಖಕ್ಕೆ ಅರೆದಾಳ ಬಣ್ಣ ಹಚ್ಚಿದ ನಂತರ ಕಲ್ಲುರ್ಟಿಗೆ ಕೋಲ ನೆಡೆಸುತ್ತಿರುವ ಮನೆಯ ಆಭರಣವನ್ನೆ ತೊಡಿಸಲಾಗುತ್ತದೆ. ಮುಖದ ಅರೆದಾಳು ಕೆಲಸ ಮುಗಿದೊಡನೆ ಭೂತದ ಕೆಂಪು ಸೀರೆ, ಕೆಂಪು ರವಕೆ ತೊಟ್ಟು ತಲೆಗೆ ತಲೆಬೊಟ್ಟು ಇಟ್ಟು ಕಿವಿಯಾಭರಣ ಹಾಕಿಕೊಂಡು ಮುಡಿಗೆ ಹೂ-ಸಿಂಗಾರದ ಅಲಂಕಾರ ಕೈಗಳಿಗೆ, ಕುತ್ತಿಗೆಗೆ ಕನಕಾಂಬರ ಮಾಲೆ ಹಾಕಿಕೊಂಡ ಮೇಲೆ ಬಾಕಿ ಉಳಿದದ್ದು ಗಗ್ಗರ ಮತ್ತು ಅಣಿ ಕಟ್ಟುವುದು. ಕುಡಿಬಾಳೆ ಎಲೆಯಲ್ಲಿ ಅಕ್ಕಿ ಹೂಗಳನ್ನಿರಿಸಿ ಬೆಳ್ಳಿಯ ಗಗ್ಗರವನ್ನಿಡಲಾಗುತ್ತದೆ. ಆಗ ದುಗ್ಗ 'ಗಗ್ಗರ ತೆಗೆದುಕೊಳ್ಳಲೇ ಸರ್ವರ ಒಪ್ಪಿಗೆಯೇ? ಎಂದು ತನ್ನದೇ ಆದ ವಿಶಿಷ್ಟ ಗಂಭೀರ ಸ್ವರದಲ್ಲಿ ವಿನಂತಿಸಿದಾಗ ಗುರಿಕಾರ ಹಾಗೂ ಮಾಯಿಲ ಇಬ್ಬರೂ ಬಗ್ಗಿ ತಲೆಬಾಗಿ ಕೈಮುಗಿದು 'ತೆಗೆದುಕೊಳ್ಳಬಹುದು'- ಎಂದು ಗಗ್ಗರವನ್ನಿಟ್ಟ ಬಾಳೆ ಎಲೆಯತ್ತ ಕೈ ತೋರಿಸಿದಾಗ ದುಗ್ಗ ಬಗ್ಗಿ ಗಗ್ಗರವನ್ನು ಕೈಗೆ ತೆಗೆದುಕೊಳ್ಳಬೇಕಾದರೆ ವಾದ್ಯ ಬ್ಯಾಂಡಿನ ಸದ್ದು ತಾರಕಕ್ಕೆರುತ್ತದೆ. ದುಗ್ಗ ಗಗ್ಗರ ಕಟ್ಟಿಕೊಂಡಾಕ್ಷಣ ಚಾವಡಿ ಏರುತ್ತಾನೆ. ಅಷ್ಟರಲ್ಲಿ ಭೂತದ ಸ್ಥಾನದೊಳಗೆ ಪೂಜಾರಿ ಭೂತದ ಮನೆ, ಮಂಚ, ಕಟ್ಸಲೆಗಳನ್ನು ಶುದ್ಧಗೊಳಿಸಿ ಓರಣಗೊಳಿಸುತ್ತಾರೆ. ಕೊರಗ ಮೂಲ್ಯ ಭೂತದ ಪೂಜಾರಿ, ಭೂತದ ಪನಿಯಾರ ಸಿದ್ಧವಾದೊಡನೆ, ಭೂತದ ಮಂಚದಲ್ಲಿ ಪನಿಯಾರ ಬಡಿಸುವ ಮುನ್ನ ಭೂತಸ್ಥಾನದ ಹೊರ ಬದಿಯಲ್ಲಿ ಗಣಪತಿಯನ್ನು ಅಕ್ಕಿ, ತೆಂಗಿನಕಾಯಿ ಇಷ್ಟು ಸ್ತುತಿಸಿಕೊಂಡ. ಅಲ್ಲಿಂದ ನೇರ ಅಂಗಳಕ್ಕೆ ಇಳಿದು ಸಾಂಕೇತಿಕವಾಗಿ ಭೂತವನ್ನು ಆವಾಹಿಸಲು ಬಾಳೆ ಎಲೆಯಲ್ಲಿ ಅಕ್ಕಿ, ತೆಂಗಿನ ಕಾಯಿಗಳ ಮೇಲೆ ಹೂಗಳನ್ನು ಅಲಂಕರಿಸಿ ಗದ್ದಿಗೆಯನ್ನೇರಿಸುತ್ತಾನೆ. ನಂತರ ಪೂಜಾರಿ ತನ್ನ ಕೈಲಿದ್ದ ಮಣಿ, ಕಟ್ಸಲೆಗಳನ್ನು ಅಂಗಳದಲ್ಲಿ ಕಲ್ಲುರ್ಟಿಯ ರೂಪದಲ್ಲಿ ನಿಂತಿದ್ದ ದುಗ್ಗನ ಕೈಗೆ ಹಸ್ತಾಂತರಿಸುತ್ತಾನೆ.

ಕಲ್ಲುರ್ಟಿ ಆವಾಹನೆಯಾದ ಕೂಡಲೇ ವಾದ್ಯದ ನಾದದ ಜೊತೆ ಕಾಳಮ್ಮ, ಅಣ್ಣ ಶಂಭು ಕಲ್ಕುಡನನ್ನು ಹುಡುಕ ಹೊರಟು ಕಲ್ಲುರ್ಟಿಯಾದದನ್ನು ಪಾಡ್ದನದಲ್ಲಿ ವಿವರಿಸಲಾಗುತ್ತದೆ. ಭೂತದ ಆರ್ಭಟ ಕ್ಷಣದಿಂದ ಕ್ಷಣಕ್ಕೆ ಹೆಚ್ಚಿ ನಡು ಅಂಗಳಕ್ಕೆ ಬಂದು ಜಾತಿ ಗುರಿಕಾರರನ್ನು ಕರೆದು 'ನೂಲು ಹಾಕಿದವರು ಬಂದಿದ್ದಾರೆಯೇ? ಅವರಿಗೆ ಸರಿಯಾದ ಮರ್ಯಾದೆ ಸಲ್ಲಿಸಿದ್ದೀರಾ'? 'ಊರ ಗುತ್ತಿನಮನೆಯ ಶೆಟ್ಟರನ್ನು ಆಹ್ವಾನಿಸಿದ್ದೀರಾ? ಹೀಗೆ ಮೇಲ್ಜಾತಿಯವರಿಂದ ಹಿಡಿದು ಕೆಳಜಾತಿಯವರೆಗೂ ಜಾತಿಯ ಹೆಸರ್ಹಿಡಿದು 'ಅವರಿಗೆಲ್ಲಾ' ಮರ್ಯಾದೆ ನೀಡದ್ದೀರಾ ಎಂದು ಭೂತ ಕೆದಕಿ ಕೆದಕಿ ಪ್ರಶ್ನಿಸುತ್ತದೆ. ಒಂದು ವೇಳೆ ಯಾರಿಗಾದರೂ ಹೇಳಿಕೆಯಾಗದಿದ್ದರೆ ಭೂತದಲ್ಲಿ ತಪ್ಪು ಒಪ್ಪಿಸಿಕೊಳ್ಳಲಾಗುತ್ತದೆ. ಎಲ್ಲರೂ ತಮ್ಮ ತಮ್ಮ ಅಂತಸ್ತಿಗೆ ತಕ್ಕಂತೆ ಎದ್ದುನಿಂತು ಭೂತಕ್ಕೆ ಮರ್ಯಾದೆ ಸಲ್ಲಿಸುತ್ತಾರೆ. ಭೂತದ ಮನಸ್ಸಿಗೆ ಸಮಾಧಾನವಾದೊಡನೆ, ಮದುಹೇಳುವ ಸೋಮಯ್ಯನೆಂಬುವವನು ಭೂತದೆದುರಿಗೆ ನಿಂತು ಭೂತವನ್ನ ಕೆಣಕಿ ನುಡಿಕಟ್ಟುಗಳನ್ನು ಹೇಳುತ್ತಾನೆ. ನಂತರ ಸೋಮಯ್ಯನ ಕೆಣಕಾಟ ತಡೆಯಲಾರದೆ ಭೂತ ಮಾಯಿಲಿನ ಕುಟುಂಬದವರ ಬಗ್ಗೆ ಮತ್ತು ಇನ್ನೇನೋ ಹೇಳುತ್ತದೆ. ಇದನ್ನೆಲ್ಲ ಕೇಳಿದ ಊರವರಿಗೆಲ್ಲಾ ಭಯ ಭಕ್ತಿ ಹೆಚ್ಚಾಗುತ್ತದೆ. ಭೂತದ ಆರ್ಭಟವೂ ಹೆಚ್ಚಿ ಮಾಯಿಲಿನ ಜೊತೆ ವಾದಮಾಡುತ್ತ ಆತನನ್ನು ಮಾತಿಗೆಸಿಲುಕಿಸುತ್ತ ಕೆರಳಿಸಿಟ್ಟಿನಿಂದ ದಬಕ್ಕನೆ ಹಾರಾಡಿ ಅಂಗಳವನ್ನಿಡಿ ಹಾಳು ಮಾಡಿ ಇದ್ದಕ್ಕಿದ್ದಂತೆ ಮಾಯಿಲನಲ್ಲಿ ಭೂತ ಕೋಳಿಯನ್ನು ಕೇಳುತ್ತದೆ. ಕೋಳಿಯನ್ನು ಬಿಚ್ಚಿ ತರುವುದರೊಳಗೆ ಭೂತ ಅಸಹನೆ ಕೋಪದಿಂದ ಬಾವಿಗೆ ಹಾರಲು ಓಡಿ ಹೋಗುತ್ತೆ, ಆಯತಪ್ಪಿ ಬಾವಿಗೆ ಬಿದ್ದೇಬಿಡುತ್ತದೆ. ತೋಪನ ಸಹಾಯದಿಂದ ಕಲ್ಲುರ್ಟಿಯನ್ನು ರಕ್ಷಿಸಲಾಗುತ್ತೆ.

ಭೂತಕೋಲ ಕೂಡ ತುಳುನಾಡಿನ ಜಾನಪದ ಆಚರಣೆಗಳಲ್ಲಿ ಒಂದು. ಈ ಕಥೆಯಲ್ಲಿ ಲೇಖಕಿ ಭೂತಕೋಲದ ನಂಬಿಕೆ, ಅಪನಂಬಿಕೆಗಳ ಕುರಿತಾಗಿ ಚರ್ಚಿಸುತ್ತಾರೆ. ಮುಖ್ಯವಾಗಿ ಗಮನಿಸಬೇಕಾಗಿದ್ದು ಪ್ರಾದೇಶಿಕವಾಗಿರುವ ರೂಢಿ, ಸಂಪ್ರದಾಯ ಆಚರಣೆಗಳನ್ನು ಹೇಳುವುದಕ್ಕಾಗಿಯೇ ಕಥೆ ಹೆಣೆದಿಲ್ಲ ಬದಲಾಗಿ ಕಥೆಗೆ ಪೂರಕವಾಗಿ ಸಂದರ್ಭೋಚಿತವಾಗಿ ಕಂಬಳ, ಕೋಳಿಅಂಕ, ಭೂತಕೋಲ, ಕೆಡ್ಡಸ ಹಬ್ಬ, ಕಂಗಿಲ ಹಬ್ಬ, ಮಾಯಿದ ಪುರುಷ ಕುಣಿತ ಎಲ್ಲವೂ ಬರುತ್ತವೆ.

'ಗಾಂಧಿ ಬಂದ' ಕಾದಂಬರಿಯಂತು ತುಳುನಾಡಿನ ಸಾಂಸ್ಕೃತಿಕ, ಜಾನಪದ ಆಚರಣೆಗಳ ಸಮಗ್ರ ಅಧಿಕೃತ ದಾಖಲೆಯೇ ಸರಿ. ಕಾದಂಬರಿ ಆರಂಭವಾಗುವುದೇ ಚಂದ್ರಕರೆ ಕಂಬಳದ ಸಂಭ್ರಮದಿಂದ. ಕಂಬಳದ ಹಿಂದಿನ ದಿನವೇ ಊರವರಿಗೆ ಸಾಂಪ್ರದಾಯಿಕ ಹಾಗೂ

ಮರ್ಯಾದೆಯ ಹೇಳಿಕೆಯಾಗಿ ಅಜಲಿನ ಕೊರಗರು ಡೋಲು ಬಾರಿಸಿ ಕರೆಯುತ್ತಾರೆ. ಕೋಲ, ಕಂಬಳ, ಆಟ, ನೇಮ, ಜಾತ್ರೆಗಳೆಂದರೆ ಕೇಳಬೇಕೆ ಸಲ್ಲುವ ನೆಂಟರೂ, ಸಲ್ಲದವರೂ ಇಲ್ಲದ ನೆಪ ಮಾಡಿಕೊಂಡು ಕಂಬಳದ ಮುನ್ನದಿನವೆ ಬಂದು ಠಿಕಾಣಿ ಹೂಡುತ್ತಾರೆ.

ಕಂಬಳದ ದಿನ ಬೆಳ್ಳಂಬೆಳಗ್ಗೆಯೆ ದೇವರು ಹುಟ್ಟುವ ಮುಂಚೆಯೆ ಕಂಬಳ ಗದ್ದೆಯ ಎಡಭಾಗದಲ್ಲಿ ಉಂಡೆ, ಚಕ್ಕುಲಿ, ಸಕ್ರೆಮಿಠಾಯಿ, ಖಾರದ ಅಂಗಡಿಗಳು, ರೈತಾಪಿ ಸರಕಿನ ಅಂಗಡಿ, ಮರದಸಾಮಾನಿನ ಅಂಗಡಿ, ಹಣ್ಣಿನಅಂಗಡಿ, ಸಿಹಿಗೆಣಸು, ತೊನಗೆಣಸು, ರೋಮದ ಗೆಣಸಿನ ಜೊತೆ ಬೆಲ್ಲ, ವಾಲೆಬೆಲ್ಲದ ಬುಟ್ಟಿಗಳು, ಹುರಿದ ಗೇರುಬೀಜ, ನೋಕಟೆ ಬೀಜದ ಬುಟ್ಟಿಗಳು, ಸಿಹಿ ಗುಳಿಯಪ್ಪ, ಎರಿಯಪ್ಪ, ಗೆಣಸಿನ ಪೋಡಿ, ಚಾಕಾಫಿ ಕ್ಲಬ್ಬು ಹೀಗೆ ನೂರಾರು ಅಂಗಡಿಗಳು. ಊರಮನೆಗಳಲ್ಲಿ ಅವರವರ ತಾಕತ್ತಿಗೆ, ಅಂತಸ್ತಿಗೆ ತಕ್ಕಂತೆ ನೆಂಟರಿಷ್ಟರನ್ನು ಸಂಪ್ರೀತಿ, ಸಾಂತ್ವನಗೊಳಿಸುವುದಕ್ಕಾಗಿ ವಿಶೇಷವಾದ ಊಟ, ತಿಂಡಿಗಳ ತಯಾರಿ ನಡೆಯುತ್ತದೆ.

ಕುಳ್ಯಾ ಗುತ್ತಿನ ಪಾಂಡುಶೆಟ್ಟರ ಮನೆಯಲ್ಲಿ ನೆಂಟರಿಗಾಗಿ ನಾಲ್ಕು ಕಟ್ಟದಕೋಳಿಗಳ ಸಾರಾದರೆ, ಜಾರಿಗೆ ಬೆಟ್ಟಿನ ಸುಬ್ಬಯಶೆಟ್ಟರ ಮನೆಯಲ್ಲಿ ಎರಡುಕೋಳಿಗಳ ಕಂಬಳದೂಟ, ಊರಲ್ಲಿರುವ ಹೆಚ್ಚಿನ ಬಂಟ, ಪೂಜಾರಿ, ಮ್ಯೊಲಿಗಳ ಮನೆಯಲ್ಲಿ ಮೂಡೆ, ಗುಂಡ, ಶ್ಯಾವಿಂಗೆ, ನೀರುದೋಸೆ, ಅಕ್ಕಿಮುಂಡಿ, ಕೋಳಿರೊಟ್ಟಿಗಳ ಜೊತೆ ಕೋಳಿ ಸಾರಿನ ವಿಶೇಷವಿದ್ದರೆ, ಇನ್ನು ಕೆಲವರ ಮನೆಯಲ್ಲಿ ಅಕ್ಕಿಮುಂಡಿ, ಶ್ಯಾವಿಗೆ, ನೀರುದೋಸೆ ಜೊತೆ ಮೀನು ಸಾರಿನ ಗಮ್ಮತ್ತು. ಪಾಂಚಪೂಜರಿಯ ಮನೆಯಲ್ಲಿ ಬಂದ ನೆಂಟರಿಗೂ ಶ್ಯಾವಿಗೆ ಜೊತೆಯಲ್ಲಿ ಪುಂಡದ ಹಕ್ಕಿಯ ಮಾಂಸದೂಟ. ಅಂತೂ ಅಬ್ರಾಹ್ಮಣರ ಮನೆಯಿಂದ ಮುಂಜಾನೆಯಿಂದಲೇ ಮೀನಿನ ಗಸಿ, ಕೋಳಿ ಸಾರುಗಳ ಘಮಘಮ ವಾಸನೆ ಶುರುವಾದರೆ, ಬ್ರಾಹ್ಮಣೋತ್ತಮರ ಮನೆಗಳಲ್ಲೂ ಬೆಳಗಿನ ತಿಂಡಿಗಾಗಿ ಪತ್ರೊಡೆ, ಮೂಡೆ, ಹಲಸಿನೆಲೆಯ ಗುಂಡ, ನೀರುದೋಸೆ ಇತ್ಯಾದಿ... ಪರಮಾನ್, ಪಾಯಸ, ಚಟ್ನಿ, ಕೊದ್ದೆಲು, ಬಾಳೆಹಣ್ಣಿನ ಸೀಕರಣೆಗಳ ಜೊತೆ ಸಿದ್ಧವಾಗುತ್ತೆ. ಮೂಡೆ ತುಳುನಾಡಿನ ಜನಪ್ರಿಯ ಪ್ರತಿಷ್ಠೆಯ ತಿಂಡಿ. ಅದನ್ನು ಮಾಡಲು ಗದ್ದೆಯ ಬದುವಲ್ಲಿರುವ ಮುಂಡೇವ ಪೊದೆಗಳಿಂದ ಅದರ ಎಲೆಗರಿ ಕೊಯ್ದು ತಂದು ಮುಳ್ಳು ಕೆರೆದು, ಆ ಎಲೆಗಳನ್ನು ಬೆಂಕಿಯಲ್ಲಿ ಬಾಡಿಸಿ ಮೆದುಗೊಳಿಸಿ ಅವುಗಳನ್ನು ಮತ್ತೆ ಚಂದ್ರಿಕೆ ಸುತ್ತಿಟ್ಟು ಉದ್ದನೆಯ ಲೋಟೆಯಾಕಾರದ ಕೊಟ್ಟೆಕಟ್ಟಿ ಅಕ್ಕಿ, ಉದ್ದಿನಿಂದ ಮಾಡಿದ ಹಿಟ್ಟನ್ನ ಆ ಕೊಟ್ಟೆಯಲ್ಲಿ ಹಾಕಿ ಹಬೆ ಪಾತ್ರೆಯಲ್ಲಿ ಬೇಯಿಸಬೇಕು.

ಸೂರ್ಯ ನಡುನೆತ್ತಿಗೆ ಬರುವುದರೊಳಗೆ ಕಂಬಳದೂಟ ತಯಾರಿರಬೇಕು. ಮಧ್ಯಾಹ್ನ ನೆಂಟರಿಷ್ಟರ ಜೊತೆ ಬ್ರಾಹ್ಮಣರಿಗೆಲ್ಲ ಹೆಬ್ಬಾರರ ಮನೆಯಲ್ಲೆ ಹೊಟ್ಟೆ ತುಂಬಾ ಊಟ ಇರುತ್ತೆ. ಒಬ್ಬ ಬ್ರಾಹ್ಮಣ ಪುಷ್ಕಳವಾಗಿ ಉಂಡು ತೇಗಿಬಿಟ್ಟರೆ ಸ್ವತಃ ನಾರಾಯಣದೇವರೇ ಬಂದುಕೂತು ಉಂಡಂಥಾ ಪುಣ್ಯವಿದೆ ಎಂದು ಸ್ವತಃ ಪೇಜಾವರ ಮಠದ ಸ್ವಾಮಿಗಳೇ ಹೇಳಿದ್ದರಿಂದ ಬ್ರಾಹ್ಮಣ ಮಂದಿಗೆ ಊಟ ಉಣಿಸುವುದೆಂದರೆ ಹೆಬ್ಬಾರರಿಗೆ ಒಂದು ಕೈ ಮುಂದೆ. ಆದ್ರೆ ಶೂದ್ರರ ಉಣ್ಣುವ ವಿಚಾರದಲ್ಲಿ ಮಾತ್ರ ಸ್ವಲ್ಪ ಪಿಸುಣುತನ ತೋರುವುದಿದೆ.

ಕಂಬಳಕ್ಕೆ ಮೂರು ದಿವಸವಿರುವಾಗಲೆ "ಕುದಿ ಓಡಿಸಲಾಗುತ್ತೆ" ಅಂದರೆ ಕಂಬಳದ ಕಳದಲ್ಲಿ ನಾಕೈದುಜೊತೆ ಕೋಣಗಳನ್ನು ಓಡಿಸಿಬಿಟ್ಟು ಕಂಬಳಕ್ಕೆನಾಂದಿ ಹಾಕುವುದು ಎಂದರ್ಥ. ಕುದಿ ಓಡಿಸಿದ ನಂತರ ಕಂಬಳದ ಮಡಿಮೈಲಿಗೆ ಕಾಪಾಡಿಕೊಳ್ಳಬೇಕು. ಕಂಬಳದ ಗದ್ದೆಗೆ ಕೆಟ್ಟ ಕಣ್ಣುಗಳು, ಕೆಟ್ಟದಿಟ್ಟಿ ತಗಲಬಾರದೆಂದು ಗದ್ದೆಯ ಹುಣಿಗೆ ಸುತ್ತಲೂ ಜೇಡಿಮಣ್ಣಿಗೆ, ಕೆಮ್ಮಣ್ಣು ಸೇರಿಸಿ ಮೂರು ಮೂರು ಗೆರೆಗಳನ್ನು ಎಳೆಸಿ ಶುದ್ಧ ಮಾಡಿಸುತ್ತಾರೆ. ಹಾಗೆಯೇ ಕೋಣ ಓಡಲಿರುವ ಕಂಬಳದ ಕಳವನ್ನು ಚೆನ್ನಾಗಿ ಉತ್ತು, ಹಲಗೆ ಹಾಯಿಸಿ, ನೀರು ಕಟ್ಟಿಸಿ ನಿಲ್ಲಿಸಲಾಗುತ್ತೆ. ಶೆಟ್ಟರಿಬ್ಬರೂ ಮತ್ತೆ ಆ ಕಳಕ್ಕಿಳಿದು ನೀರಿನ ಆಳ, ತಳದ ಉದ್ದ – ಅಗಲಗಳನ್ನು ಮತ್ತೊಮ್ಮೆ ಅಂದಾಜು ಮಾಡಿ ಕೋಣಗಳು ಓಟ ಆರಂಭಿಸುವ ಗಂತ್‌ನಿಂದ ಹಿಡಿದು ಗುರಿ ಮುಟ್ಟಿ ಏರಿ ನಿಲ್ಲಬೇಕಾಗಿರುವ ಮಂಜೊಟ್ಟಿಯವರೆಗೂ ನಡೆದು ಇಳಿಜಾರನ್ನ ಕಣ್ಣಲ್ಲೇ ಅಳೆಯುತ್ತಾರೆ.

ಕಂಬಳದ ಕೋಣಗಳನ್ನು ಸ್ವಂತ ಮಕ್ಕಳಂತೆ ಮಮತೆಯಿಂದ ಆರೈಕೆಮಾಡಿ, ಬುದ್ಧಿಕಲಿಸಿ, ಕಸರತ್ತು ಮಾಡಿಸಲಾಗಿರುತ್ತದೆ. ಕಂಬಳದ ದಿನ ಕೋಣದ ಕೊಂಬುಗಳಿಗೆ ಸುಣ್ಣದ ಅಡ್ಡಗೆರೆ ಎಳೆದು, ಕೊಂಬಿನ ತುದಿಗೆ ಒಂದೊಂದು ನಿಂಬೆಹಣ್ಣು, ಎರಡೆರಡು ಗೊಂಡೆ ಹೂ ಸಿಕ್ಕಿಸಿ, ಕೊರಳಿಗೆ ಹಾರಬಿಗಿದು ಅದರ ಜೊತೆಗೆ ಕಿರುಗಂಟೆಗಳ ಹಾರವನ್ನು ಬಿಗಿದು ಕಾಲುಗಳಿಗೂ ಗೆಜ್ಜೆಕಟ್ಟಿ, ಹಣೆಗೊಂದು ಬಿಳಿಯ ಸುಣ್ಣದ ಬೊಟ್ಟಿಟ್ಟು ಅಲಂಕಾರ ಮಾಡಲಾಗುತ್ತೆ. ಕೆಟ್ಟದಿಟ್ಟಗಳೆಲ್ಲ ಸತ್ತು ಹೋಗಲಿ ಅಂಥ ದೃಷ್ಟಿ ತೆಗೆಯಲಾಗುತ್ತೆ.

ಕಂಬಳದ ದಿನ ಮುಂಜಾನೆಯೇ ಕೊರಗರು ಕಂಬಳ ಗದ್ದೆಯ ಕೇಡು ನಿವಾರಣೆಗಾಗಿ ಕಂಬಳದ ಕಳದಲ್ಲಿ ಕೋಣಗಳಾಗಿ ಓಡಿ, ಕೆಟ್ಟಶಕ್ತಿಗಳನ್ನು ತಮ್ಮೊಳಗೆ ಆವಾಹಿಸಿಕೊಳ್ಳುವುದು ಕಂಬಳದ ಪ್ರಮುಖ ಸಂಪ್ರದಾಯ, ಊರ ಗುರಿಕಾರರ ಸಮ್ಮುಖದಲ್ಲಿ ಹೆಬ್ಬಾರರು ಕಂಬಳವನ್ನು

ನಿರ್ವಿಘ್ನವಾಗಿ ನೆಡೆಸಿಕೊಡುವಂತೆ ಜುಮಾದಿ ದೈವಕ್ಕೆ ಅಡ್ಡ ಬಿದ್ದಾದ ನಂತರ ಲವ-ಕುಶರಾಧಿಯಾಗಿ ಸರ್ವರೂ ಅಡ್ಡಬೀಳುತ್ತಾರೆ.

ದೈವ ಪ್ರಾರ್ಥನೆಯಾದೊಡನೆ ಹೆಬ್ಬಾರರ ಮನೆಯೊಳಗೆ ಕಂಬಳದೂಟ ಶುರುವಾಗುತ್ತೆ. ಮೊದಲೆರಡು ಪಂಕ್ತಿ ಬ್ರಾಹ್ಮಣರದ್ದು ಅದು ಚಾವಡಿಯೊಳಗೆ. ಮೂರನೇ ಪಂಕ್ತಿ ಶೂದ್ರರದ್ದು ಹೊರಗಡೆ ಅಂಗಳದಲ್ಲಿ. ನಾಕನೇ ಪಂಕ್ತಿ ಊರು-ಪರವೂರಿಂದ ಕೋಣ ತಂದ ಆಳುಗಳಿಗೆ ಮತ್ತು ಅವುಗಳ ಒಡೆಯರಿಗೆ ಅದೂ ಅಂಗಳದಲ್ಲೆ. ಐದನೇ ಪಂಕ್ತಿ ಗದ್ದೆಯಲ್ಲಿ, ಅದು ಕೊರಗರಿಗೆ ಮತ್ತು ಹೊಲೆಮಕ್ಕಳಿಗೆ ಅವರಿಗೆಲ್ಲ ಬಡಿಸುವವರು ಶೂದ್ರರೆ. ಕಂಬಳದೂಟ ಮುಗಿದೊಡನೆ ಲವ-ಕುಶರು ಕಳದಲ್ಲಿ ಓಡುವುದರ ಮೂಲಕ ಕಂಬಳ ಶುರುವಾಗುತ್ತೆ. ಕಂಬಳ ನೋಡುವವರು ಕಂಬಳ ನೋಡಿದರೆ, ಕಂಬಳದ ಸಂತೆ ಸುತ್ತುವವರು ಸಂತೆ ಸುತ್ತುತ್ತಾರೆ. ಕಂಬಳ ಮುಗಿಯುವುದರೊಳಗೆ ಸೂರ್ಯ ಕಂತಿಯಾಗಿರುತ್ತೆ. ಬಂದ ಕೋಣಗಳ ಒಡೆಯರೆಲ್ಲ ಹೆಬ್ಬಾರರಿಂದ ತಾಂಬೂಲ, ಎಳನೀರು, ಮರ್ಯಾದೆ ಪಡೆದ ನಂತರ 'ಪೂಕರೆ ಕಂಬ' ನೆಡುವ ಕೆಲಸ ಶುರುವಾಗುತ್ತೆ. ಕಂಬಳ ಗದ್ದೆಯ ನಡುವಿನಲ್ಲಿ ಹಾಲೆರದು ಅದನ್ನು ಭಕ್ತಿಯಿಂದ ನೆಡಲಾಗುತ್ತೆ. ಪೂಕರೆನೆಟ್ಟ ನಂತರ ಕಂಬಳ ಗದ್ದೆಗೆ ಕೋಣಗಳು ಇಳಿಯುವಂತಿಲ್ಲ. ಪೂಕರೆ ಹಾಕಿದ ಮರುದಿನವೇ ಕಂಬಳದ ಗದ್ದೆಗೆ ಭತ್ತದ ಸಸಿ ನಾಟಿಯಾಗಬೇಕು. ಹೆಬ್ಬಾರರು ಪೂಕರೆ ಕಂಬ ನೆಟ್ಟೊಡನೆ ಗುತ್ತಿನ ಶೆಟ್ರುಗಳಿಬ್ಬರೂ ಸಂಪ್ರದಾಯದಂತೆ ಅಂಗಳಕ್ಕೆ ಕರೆತಂದು ತಾಂಬೂಲ ಎಳನೀರು ಮರ್ಯಾದೆ ನೀಡಿ ಬೀಳ್ಕೊಟ್ಟರು.

ಇಲ್ಲಿಯೂ ಅಷ್ಟೆ ಕಾದಂಬರಿಯ ಕಥೆಗೆ ಪೋಷಕವಾಗಿ ಕಂಬಳದ ಬಗ್ಗೆ ದೀರ್ಘವಾದ ವಿವರಣೆಗಳನ್ನೆ ನೀಡಲಾಗಿದೆ. ಕಂಬಳ ಶ್ರೀಮಂತರ ಆಟವಾದರು ಶ್ರಮಿಕ ವರ್ಗದ ಅನನ್ಯತೆಯನ್ನು ಹೇಳುವುದರ ಜೊತೆಗೆ ಜಾತಿಯ ಕುರಿತಾದ ಸಾಮಾಜಿಕ ವ್ಯವಸ್ಥೆಯ ಕ್ರೌರ್ಯ, ಹಿಂಸೆ, ಶೋಷಣೆಯ ವಿವಿಧ ಮುಖಗಳು ಇಲ್ಲಿ ಅನಾವರಣಗೊಂಡಿವೆ.

ತುಳುನಾಡಿನ ಸಾಂಸ್ಕೃತಿಕ ಜಗತ್ತಿನಲ್ಲಿ ತುಳುನಾಡಿನ ಶ್ರೀಮಂತರ ಆಟ ಕಂಬಳವಾದರೆ, ಬಡವರದ್ದು ಕೋಳಿಅಂಕ. ಆದರೆ ಈ ಕೋಳಿಪಡೆಗೆ ಮಾರುಹೋಗದವರಿಲ್ಲ. ಕಂಬಳದ ಕೋಣಗಳಂತೆ ಕಟ್ಟಿದ ಕೋಳಿಗಳು ಕೂಡ ತಾಯಿ ಹೇಂಟೆಯ ಹಿಂದೆ ಬಾಲಂಗೋಚಿಯಂತೆ ಸುತ್ತುತ್ತಿರುವ ಗಂಡುಮರಿಗಳ ಚಲನವಲನ – ಚಟುವಟಿಕೆಗಳ ಮೇಲೆ ಸಂಪೂರ್ಣ ನಿಗಾ ಇರಿಸಿ, ವಿಶೇಷ ಎಚ್ಚರಿಕೆಯಿಂದ ಮರಿಗಳನ್ನು ಆರಿಸಿಕೊಳ್ಳಲಾಗುತ್ತದೆ. ಅವಕ್ಕೆ ತಿಪ್ಪೆಯ ಬದುಕೇನೆಂಬುದನ್ನ ಪರಿಚಯಿಸದೆ, ಹೆಣ್ಣು ಮರಿಗಳ ಸಂಗವಿರಿಸದಂತೆ ಅವುಗಳ ದಿಟ್ಟಿಯಿಂದಲೇ

ದೂರವಿರಿಸಿ ಪ್ರತ್ಯೇಕವಾದ ಗೂಡಲ್ಲಿಟ್ಟೋ ಅಥವಾ ಮರದ ನೆರಳಲ್ಲಿಟ್ಟೋ ಏಕಾಂತದಲ್ಲೆ ಕಾಲಹರಣ ಮಾಡಿಸಿ ಗೂಟಕ್ಕೆ ಬಿಗಿದಿಟ್ಟು ಅಲ್ಲೆ ನೀರು ತಿನಿಸಿಟ್ಟು ಸಾಕಬೇಕು. ರೋಷವುಕ್ಕಿಸುವುದಕ್ಕಾಗಿ ಆಗಾಗ ಮರಿಹುಂಜಗಳ ಜತೆ ಹುಸಿ ಕಾಳಗಕ್ಕೊಡ್ಡಬೇಕು. ಒದೆಯುವ ತಂತ್ರವನ್ನು ಕರಗತ ಮಾಡಿಸಬೇಕು. ಈ ರೀತಿ ಪಳಗಿದ ಹುಂಜಗಳನ್ನು ಅಂಕಕ್ಕೆ ಬಿಡಲಾಗುತ್ತೆ. ಈ ಯುದ್ಧದಲ್ಲಿ ಗೆದ್ದು ಬರುವುದಕ್ಕಾಗಿ ಒಬ್ಬಬ್ಬೊರು ಒಂದೊಂದು ರೀತಿಯ ನಂಬಿಕೆಯನ್ನಿಟ್ಟುಕೊಂಡವರಿದ್ದಾರೆ. ಕಂಕುಳಲ್ಲಿ ಕೋಳಿಯನ್ನಿರಿಸಿಕೊಂಡಂತೆ ತಲೆಗೆ ಸುತ್ತಿಕೊಂಡ ರುಮಾಲಿನಲ್ಲಿ ಹಸಿರು ಹಾವನ್ನು ಸುತ್ತಿಕೊಂಡಿದ್ದರೆ ಗೆಲುವು ಸಾಧ್ಯವಾಗುವುದೆಂಬ ನಂಬಿಕೆ ಕೆಲವರಿಗೆ. ಮತ್ತೆ ಕೆಲವರಿಗೆ ಕುಕ್ಕುಟ ಪಂಚಾಗದಲ್ಲೂ ನಂಬಿಕೆ. ಸುತ್ತಲ ನಾಲ್ಕು ಊರಿಗೆಲ್ಲಾ ಕಿಟ್ಟುಭಟ್ಟರೊಬ್ಬರೆ ಕುಕ್ಕುಟ ಪಂಚಾಂಗ ನೋಡಬಲ್ಲ ಸಮರ್ಥರು. ಹುಂಜ ಹುಟ್ಟಿದ ಜನ್ಮ ಫಲದ ಮೇಲೆ ಜಾತಕ ಬರೆಸುವವರು ಇದ್ದಾರೆ. ಹುಂಜದ ಜಾತಿಯ ಪ್ರಕಾರ, ಜಾತಕದ ಪ್ರಕಾರ ಹುಂಜ ಕೆಂಪು ಉರಿಯನೂ, ಕರಿ ಉರ‍್ರಿಯನೂ, ಬಿಳಿ ಕೆಮ್ಮರನಾದರೆ ಅವನನ್ನು ಹಳದಿ ಉರಿಯನ ಜೊತೆ, ಕರಿ ಕೆಮ್ಮರನಾದರೆ ಅವನನ್ನು ಹೊಗೆ ಉರಿಯನ ಜೊತೆ ಕಟ್ಟಬೇಕು. ಕಟ್ಟದ ದಿನ ಶುದ್ಧ ದಶಮಿ ತಿಥಿಯಾಗಿದ್ದರೆ ಪಂಚವರ್ಣದ ಪಂಚಾನಿ ಹುಂಜನನ್ನು ಕಪ್ಪು ಕರಿಯ 'ಹುಂಜನನ್ನು ಬಿಟ್ಟು ಬೇರೆ ಯಾವಜಾತಿಯ ಜೊತೆಗಾದರೂ ಕಟ್ಟಬಹುದು. ಪಂಚ ಮತ್ತು ಕಪ್ಪು ಸಮಾನವಾಗುತ್ತೆ. ಗೆಲ್ಲುವುದು ಕಷ್ಟವಾಗುತ್ತೆ ಅಂತ. ಕೃಷ್ಣಪಕ್ಷದ ತಿಥಿಯಾದರೆ ಗರುಡ ಬೂಬನ ಜೊತೆ ಕೆಂಪಿನಉರಿಯ ಶುಕ್ಲಪಕ್ಷದ ತಿಥಿಯಾದರೆ ಉರಿಯನಿಗೆ ಕೆಂಜಾಳಿ ಬೂಬ ಹುಂಜ. ಆದಿತ್ಯವಾರ ಪಂಚವರ್ಣಕ್ಕೆ ಜಯ, ಬಿಳಿಗೆ ನಾಶ, ಸೋಮವಾರ ಬಿಳಿಯನಿಗೆ ಜಯ, ಕೆಂಪು ನಾಶ ಎನ್ನುವ ಭವಿಷ್ಯದಲ್ಲಿ ನಂಬಿಕೆ. ಇವೆಲ್ಲದರ ಆಚೆಗೆ ಕೋಳಿಗಳನ್ನು ಪಣಕ್ಕಿಳಿಸುವ ಮೊದಲು 'ಪತಿ' ಮಾಡಲಾಗುತ್ತದೆ. ಅಂದರೆ ಕೋಳಿಗಳ ಶಕುನದಂತೆ ಹುಂಜಗಳ ಬಣ್ಣವನ್ನು ಹೊಂದಿಸಿ, ಜಾತಿ ನಿರ್ಣಯಿಸಿ ಆಕಾರ, ಭಾರ, ವಯಸ್ಸನ್ನು ಅಂದಾಜಲ್ಲೇ ತುಲನೆ ಮಾಡಿ ಯಾವುದನ್ನು ಯಾವುದರ ಜತೆ ಕಟ್ಟಬಹುದು ಎಂದು ನಿರ್ಣಯಿಸುವುದು ಎಂದರ್ಥ. ಕೋಳಿ ಯುದ್ಧ ಸೈನಿಕರಂತೆ ಒಂದಷ್ಟು ಮಂದಿ ನೆಂಟರಿಷ್ಟರು, ಸ್ನೇಹಿತರು ಇರುತ್ತಾರೆ. ಅವರೆಲ್ಲ ಕೋಳಿ ಅಂಕಕ್ಕೆ ವಿವಿಧ ರೀತಿಯಲ್ಲಿ ಬೇಕಾದವರು. ಒಬ್ಬ ಹುಂಜಗಳನ್ನು ಕಾಳಗಕ್ಕೆ ಬಿಡುವವನಾದರೆ, ಪಂದ್ಯಕಟ್ಟಲು ಇನ್ನೊಬ್ಬ. ಹೋರಾಡಿ ಬಸವಳಿಯುವ ಹುಂಜವನ್ನು ತನ್ನ ಅಂಗವಸ್ತ್ರದಿಂದ ಗಾಳಿಬೀಸಿ ಉಪಚರಿಸುವವ ಮತ್ತೊಬ್ಬ. ಗಾಯಗೊಂಡ ಕೋಳಿಗಳಿಗೆ 'ಶಸ್ತ್ರ ಚಿಕಿತ್ಸೆ' ಮಾಡಿ ಹೊಲಿಗೆ ಹಾಕಲು ಮತ್ತೊಬ್ಬ. ಕೋಳಿಗೆ ಅಕ್ಕಿ-ನೀರು ತಿನ್ನಿಸುವ ಒಬ್ಬ, ಕಾಲಿಗೆ ಹರಿತವಾದ ಬಾಳು ಕಟ್ಟಲು ಒಬ್ಬ, ಹೀಗೆ ಒಬ್ಬೊಬ್ಬರು ಒಂದೊಂದು ಕೆಲಸಕ್ಕೆ ಒದಗಿಬರುತ್ತಾರೆ.

ಕೋಳಿಕಟ್ಟ ಶುರುಮಾಡುವುದೇ ಒಂದು ವಿಶೇಷ. ಎರಡು ಹುಂಜಗಳ ಯಜಮಾನರು ತಮ್ಮ ತಮ್ಮ ಹುಂಜಗಳ ಬಾಲ ಹಿಡಿದುಕೊಂಡು ಕಾಲು ಅಗಲಿಸಿ ಬೆನ್ನು ಬಾಗಿಸಿ ನಿಂತು ಎರಡೂ ಹುಂಜಗಳನ್ನು ತೀರ ಹತ್ತಿರದವರೆಗೆ ತಂದು ರೋಷವುಕ್ಕಿಸಿ ಮತ್ತೆ ಸರಕ್ಕನೆ ಹಿಂದಕ್ಕೆಳೆದುಕೊಂಡು ಮತ್ತೆ ತೀರಾ ಹತ್ತಿರ ತಂದು ಒಮ್ಮೆಲೆ ಒಂದೇ ವೇಗದಲ್ಲಿ ಬಿಟ್ಟು ಬಿಡುತ್ತಾರೆ. ಆಗ ಹುಂಜಗಳು ಸುತ್ತಲಿದ್ದವರ ಹಾ...ಹೋ...ಗಳಿಗೆ ಕಿವಿ ಕೊಡದೆ ತಾವು ಬದುಕಿದ್ದೇ ಕಾದಾಡಲು ಎಂಬಂತೆ ಪರಸ್ಪರ ಒದೆಯುತ್ತಾ, ಗುರುಗುಡುತ್ತಾ ರಪರಪನೆ ನೆಗೆದು ಬೀಳುತ್ತವೆ. ಹಾಗೇ ಕಾದಾಡಿದವು ಯಾರದ್ದೋ ಮನಸ್ಸಂತೋಷಕ್ಕಾಗಿ ತಮ್ಮಿಬ್ಬರಲ್ಲಿ ಒಬ್ಬರು ಅಥವಾ ಇಬ್ಬರೂ ಇಹಲೋಕದ ಯಾತ್ರೆ ಮುಗಿಸುತ್ತವೆ ಎಂಬ ಪರಿವೆ ಇಲ್ಲದೆ ಅವು ತಲೆಬಾಗಿಸದೆ ಕಾದಾಡುತ್ತವೆ. ಒಂದು ಹುಂಜ ಇನ್ನೊಂದು ಹುಂಜವನ್ನು ತಿವಿದು ಗಾಯ ಮಾಡಿದರೆ ಗಾಯಗೊಂಡ ಹುಂಜವನ್ನು ಕಾಳಗದ ಕಣದಿಂದ ತೀರ ಜಾಗರೂಕತೆಯಿಂದ ಎತ್ತಿಕೊಂಡು ಹೊಟ್ಟೆ, ಕಂಕುಳ, ರೆಕ್ಕೆಪುಕ್ಕ ಎದೆಯನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಿ ಗಾಯದ ಸುತ್ತಲಿನ ಪುಕ್ಕಗಳನ್ನೆಲ್ಲ ತುಸು ಕತ್ತರಿಸಿ ತೆಗೆದು, ಹೆಪ್ಪುಗಟ್ಟಿದ ರಕ್ತವನ್ನು ಒರಸಿ ಮತ್ತೆ ಹೊಲಿಗೆ ಹಾಕಿ ಅಕ್ಕಿ ನೆನಸಿದ ನೀರು ಕುಡಿಸಿ ಗಾಳಿ ಬೀಸಿ ಚೇತರಿಸಿಕೊಂಡ ನಂತರ ಮತ್ತೆ ಎರಡನೇ ಸುತ್ತಿನ ಹೋರಾಟಕ್ಕೆ ಇಳಿಸಲಾಗುತ್ತದೆ. ಒಂದು ವೇಳೆ ಹುಂಜ ನೆಲಕ್ಕುರುಳಿ, ನರಳಿ, ಒದ್ದಾಡಿ, ಹೊರಳಿ, ಕತ್ತುವಾಲಿಸಿದರೆ ತಕ್ಷಣ ಯುದ್ಧ ನೀತಿಯಂತೆ 'ಒಟ್ಟೆ-ಬಂಟೆ' ತೀರ್ಮಾನವಾಗುತ್ತದೆ. ಸೋತು ಸತ್ತ ಹುಂಜ 'ಒಟ್ಟೆ'. ಗೆದ್ದ ಹುಂಜ 'ಬಂಟೆ'. ಕೋಳಿಕಟ್ಟದ ನಿಯಮಾನುಸಾರ ಹುಂಜದ ಕಾಲಿಂದ ಕಳಚಿ ತೆಗೆದ ಹಗ್ಗವನ್ನು ಸೋತ ಹುಂಜದ ಯಜಮಾನ ತನ್ನ ಎಡಗೈಯ ಕಿರುಬೆರಳಿಗೆ ಸಿಕ್ಕಿಸಿಕೊಳ್ಳಬೇಕು.

ಕೋಳಿಪಡೆ ಎಷ್ಟು ಮೋಜಿನ ಆಟವೊ ಅಷ್ಟೆ ಪಜೀತಿಯ ಆಟವೂ ಹೌದು. ಕೋಳಿಕಟ್ಟದಲ್ಲಿ ಪತಿ ಮಾಡುವಾಗ ಹೊಂದಾಣಿಕೆ ಸರಿಯಾಗಿಲ್ಲ ಎಂದು ಕಿರಿಕಿರಿ ವಾದ, ಜಗಳ ಶುರುವಾದರೆ ಕೋಳಿ ಕಾಲಿಗೆ ಕಟ್ಟುವ ಕಿರುಗತ್ತಿಯಲ್ಲೆ ಕೊಲೆಯಾಗುವುದು ಇದೆ. ಆಗಿದ್ದೂ ಇದೆ. ಒಟ್ಟಾರೆ ಇದೊಂದು ಪ್ರಾದೇಶಿಕವಾಗಿ ವಿಶಿಷ್ಟವಾದ ಜನಪದ ಆಚರಣೆ.

ತುಳುನಾಡಿನಲ್ಲಿ ಅದರಲ್ಲೂ ಶೆಟ್ಟರಗುತ್ತಿನಲ್ಲಿ ಆಚರಿಸುವ ವಿಶಿಷ್ಟ ಆಚರಣೆಗಳಲ್ಲಿ ಕೆಡ್ಡಸದ ಹಬ್ಬವು ಒಂದು. ಸೌರಮಾನದ ಮಕರಮಾಸದಲ್ಲಿ ಇಪ್ಪತ್ತೇಳನೇ ದಿನದಿಂದ ಕುಂಭ ಸಂಕ್ರಮಣದವರೆಗೆ ಕೊಡಿಕೆಡ್ಡಸ, ನಡುಕೆಡ್ಡಸ, ಕಡೆಕೆಡ್ಡಸ ಎಂದು ಮೂರು ದಿನ ಆಚರಿಸುವ ಹಬ್ಬ ಕೆಡ್ಡಸ ಹಬ್ಬ. ಇಲ್ಲಿನ ಜನಪದಿಯರಲ್ಲಿ ಭೂತಾಯಿ ಮುಟ್ಟಾಗಿದ್ದಾಳೆ ಎಂಬ ಪ್ರಕೃತಿಯ ಕಲ್ಪನೆ ಇದೆಯಲ್ಲಾ ಅದುನಿಜಕ್ಕೂ ದಂಗು ಬಡಿಸುವಂತದ್ದು. ಮಕರ ಮಾಸದ ಇಪ್ಪತ್ತೇಳನೇ ದಿನ

ಮೊದಲ ನೀರು, ಅಂದು ಕೊಡಿಕೆಡ್ಡಸ, ಇಪ್ಪತ್ತೆಂಟನೇ ದಿನ ಎರಡನೇ ನೀರು, ಅಂದು ನಡುಕೆಡ್ಡಸ, ಇಪ್ಪತ್ತೊಂಬತ್ತನೇ ದಿನ ಮೂರನೇ ನೀರು ಅಂದು ಕಡೆ ಕೆಡ್ಡಸ. ಭೂತಾಯಿ ಋತುಮತಿಯಾಗಿದ್ದಾಳೆ ಎನ್ನುವ ಕಲ್ಪನೆಯೆ ತುಂಬಾ ಚೆನ್ನಾಗಿದೆ. ಮಕರ ಮಾಸದ ಕೊನೆಗೆ ಈ ದಿನಗಳಲ್ಲಿ ಪ್ರಕೃತಿಯಲ್ಲಿ ಅದ್ಭುತ ಬದಲಾವಣೆಯಾಗುತ್ತವೆ. ಶಿಶಿರನ ಆಗಮನಕ್ಕೆ ಚಳಿಗಾಲದಲ್ಲಿ ಎಲೆ ಉದುರಿಸಿಕೊಂಡ ಗಿಡಮರಗಳು ಕೆಂಬಣ್ಣದ, ಹೊಂಬಣ್ಣದ, ಹಸಿರು ಚಿಗುರೆಲೆಗಳಿಂದ ಕಂಗೊಳಿಸುವಾಗ ಭೂತಾಯಿ ರಜಸ್ವಲೆಯಾಗಿರುವಂತೆಯೆ ಅನಿಸುತ್ತದೆ. ಭೂತಾಯಿ ಮಿಂದು ಬಂದು ಅಂದೇ ಗರ್ಭವತಿಯಾಗುತ್ತಾಳೆ ಎಂದು ಭೂಮಿಯನ್ನು ಯಾರು ಅದುರಿಸುವುದಿಲ್ಲ. ಆ ಮೂರು ದಿನ ಊಳುವುದಿಲ್ಲ, ಅಗೆಯುವುದಿಲ್ಲ, ಮರಗಳಿಗೆ ಕೊಡಲಿ, ಕುಡುಗೋಲಿನ ಏಟು ತಗಲಿಸುವುದಿಲ್ಲ. ಮುಟ್ಟಿನ ನಾಕನೇ ದಿನ ಹೆಂಗಸರು ಮನೆಯಂಗಳದ ಮೂಲೆಮೂಲೆಗಳನ್ನು ಸೆಗಣಿಯಿಂದ ಸಾರಿಸಿ ತಾವು ಮಿಂದು ಬಂದು, ಭೂತಾಯಿಯ ಮೈ ಸ್ನಾನಕ್ಕಾಗಿ ತುಳಸೀ ಕಟ್ಟೆಯೆದುರಲ್ಲಿ ಕುಡಿಬಾಳೆ ಎಲೆಹಾಕಿ ಕಡಲೆ, ಹೆಸರಿನಹಿಟ್ಟು, ಅರಿಶಿಣ, ತೆಂಗಿನೆಣ್ಣೆ, ಮಾವು, ಬೇವಿನ ಚಿಗುರು, ಹಲಸಿನ ಚಿಗುರು, ಬೇವಿನ ಚಿಗುರುಗಳನ್ನಿಟ್ಟು ದೀಪಹಚ್ಚಿ ಭೂತಾಯಿಗೆ ನಮಸ್ಕರಿಸಿ ಅಡ್ಡ ಬೀಳುತ್ತಾರೆ. ತಾಂಬೂಲ, ಊದುಬತ್ತಿ, ಬಾಚಣಿಕೆ, ಅರಿಶಿನ ಕುಂಕುಮಗಳನ್ನಿಟ್ಟು ಮುತ್ತೈದೆಯರು ಭೂಮಿಗೆ ಎಣ್ಣೆಹೊಯ್ಯುತ್ತಾರೆ. ಇದು ಭೂತಾಯಿಯ ಸ್ನಾನಕ್ಕಾಗಿ ಹಾಗೂ ಸ್ನಾನದ ನಂತರದ ಅಲಂಕಾರಕ್ಕಾಗಿ ಹೆಂಗಳೆಯರ ಸಿದ್ಧತೆ. ಮಿಂದುಬಂದ ತಾಯಿಗೆ ಹುರಿದ ಧಾನ್ಯ (ಕುಡು-ಅರಿ)ಗಳನ್ನು ಭಕ್ತಿಯಿಂದ ತಾವೂ ತಿಂದು ಆಕೆಯ ಮುಟ್ಟು ಸ್ನಾನದ ದಿನಗಳನ್ನು ತಮ್ಮದೆಂದು ಆಚರಿಸಿಕೊಳ್ಳುತ್ತಾರೆ. ಇಂಥ ಆಚರಣೆಗಳಲ್ಲಿ ನಂಬಿಕೆ ವಿಶ್ವಾಸವನ್ನಿಟ್ಟುಕೊಂಡು ಸಂಪ್ರದಾಯ ಬದ್ಧವಾಗಿ ಆಚರಿಸಿಕೊಳ್ಳುವುದನ್ನು ಕಂಡರೆ ಎಂತಹ ಭೂತಾಯಿಯೂ ಆ ಶ್ರಮಿಕ ಮಕ್ಕಳಿಗೆ ಒಲಿಯುತ್ತಾಳೆ.

ಕುಡು-ಅರಿ, ಅಕ್ಕಿ ಹುರುಳಿ, ಕಡಲೆ, ಹೆಸರು ಕಾಳುಗಳನ್ನು ಉಪ್ಪುನೀರು ಹನಿಸಿ ಅರೆತಾಸು ನೆನೆಸಿಟ್ಟು, ಹುರಿದು, ಕೊಬ್ಬರಿ ತುಣಕನ್ನು ಬೆರಸಿ ತಯಾರಿಸಿದ್ದೇ ಕುಡು ಅರಿ. ಭೂತಾಯಿಯ ಪ್ರಸಾದವೆಂದು ದೈವದ ಬೀಡಾದ ತವರಿಗೆ ಸಂಪ್ರದಾಯದಂತೆ ಕೊಟ್ಟು ಕಳುಹಿಸುವ ರೂಢಿ ಇದೆ.

ಕುಂದಾಪುರದ ಕುಂದಗನ್ನಡದ ಕಂಪನ್ನು ಬೀರುವ ವೈದೇಹಿಯವರ ಅಸ್ಪೃಶ್ಯರು ಕಾದಂಬರಿ ಸಾಂಸ್ಕೃತಿಕ ಪಠ್ಯವು ಆಗಿದೆ. ಲೇಖಕಿ ಕಾದಂಬರಿಯಲ್ಲಿ ಕೆಲವು ಸಾಂಪ್ರದಾಯಿಕ ಆಚರಣೆಗಳನ್ನು ಕುರಿತು ಪ್ರಸ್ತಾಪಿಸುತ್ತಾರೆ. ಗೌರಮ್ಮನವರಿಗೆ ಸೋಣೆತಿಂಗಳೆಂದರೆ ಸಂಭ್ರಮ. ಈ ಒಂದು ತಿಂಗಳಿಡೀ ಹೊಸಿಲಿಗೆ ಹೂವು ತಪ್ಪುವುದಿಲ್ಲ. ಪ್ರತಿ ದಿನ ಸ್ನಾನ ಮಾಡಿ ಹೊಸಲು

ಬರೆದು ಕಾಫಿ ಕುಡಿಯುವುದು ರೂಢಿಯಾದರೂ ಈ ತಿಂಗಳು ಹೊಸಲು ಬರೆಯುವ ಕೆಲಸವೆಂದರೆ ವಿಶೇಷ ಆಸಕ್ತಿ. ಸೋಣೆತಿಂಗಳು ಬರುವುದಕ್ಕೆ ಐದಾರು ದಿನಗಳ ಮುಂಚೆಯೇ ಹುರುಳಿ, ರಾಗಿ ಇತ್ಯಾದಿಗಳನ್ನು ನೆನಸಿ ಹಿತ್ತಿಲಲ್ಲಿ ಪಾಗಾರದ ಬದಿಯಲ್ಲಿ ಸ್ವಲ್ಪ ಮಣ್ಣು ಹರಡಿ ಅದರಲ್ಲಿ ಬಿತ್ತಿ ಮೇಲೆ ಮೂರು ನಾಲ್ಕು ಬೇಡದ ಖಾಲಿ ಬಿಸ್ಕಿಟು ಡಬ್ಬಗಳನ್ನೋ ಮಡಕೆಗಳನ್ನೋ ಕವುಚಿ ಇಡುತ್ತಾರೆ. ಸೋಣೆ ಸಂಕ್ರಾಂತಿಯ ದಿನ ಡಬ್ಬಿ ನಿಧಾನವಾಗಿ ತೆಗೆದಾಗ ಆಗುವ ಆನಂದ ವರ್ಣನೆಗೆ ಸಿಕ್ಕುವಂತದ್ದಲ್ಲ. ಚಂದದ ರೇಶಿಮೆಯಂತಹ ನಯವಾದ ಕೋಮಲ ದಂಟಿನ ತಲೆಯ ಮೇಲೆ ಹಳದಿ ಜುಟ್ಟಿನ ಹೂವು. 'ಕೊಳ್ಳು ಹೂವು' ಎಂದು ಅದಕ್ಕೆ ಊರು ಮನೆ ಹೆಸರು. ಅದು ಹೊಸಲಿಗೆ ಶ್ರೇಷ್ಠವೆಂದು ಆದಿಕಾಲದಿಂದಲೂ ಬಂದದ್ದು. ಆ ದಿನ ಶಾವಿಗೆ ಮಾಡಲೇ ಬೇಕು. ಶಾವಿಗೆ ನೂಲಿನಿಂದ ಹೊಸಿಲಜ್ಜಿಯನ್ನು ಕಟ್ಟಿ ಹಾಕುವುದರ ಸಂಕೇತವಾಗಿ ಸಿಂಹ ಸಂಕ್ರಾಂತಿಯಂದು ಹೀಗೆ ಕಟ್ಟಿ ಹಾಕಿ ಕೂರಿಸಿದ ಅಜ್ಜಿಯನ್ನು ಮುಂದಿನ ಸಂಕ್ರಾಂತಿಯ ದಿನ ದೋಸೆ ಮಾಡಿ ಎಬ್ಬಿಸಿ ಕಳಿಸುವ ರಿವಾಜಿದೆ. ಇದಕ್ಕೆ ಗೋಧಿ ಹಿಟ್ಟಿನ ಮೋದಕವೂ ನೈವೇದ್ಯಕ್ಕೆ ಆಗಬೇಕು. ಗೌರಮ್ಮ ಹೊಸಲು ಬರೆದು ಹೂವು ಏರಿಸಿ ಅರಿಸಿಣ ಕುಂಕುಮ ಹಚ್ಚಿ, ಕಾಯಿ ಒಡೆದು, ಬಾಳೆಹಣ್ಣು, ಶಾವಿಗೆ, ಮೋದಕ ನೈವೇದ್ಯ ಮಾಡಬೇಕು. ಅದೊಂದು ತಿಂಗಳು ಮನೆಯಲ್ಲಿ ಏನ್ ತಿಂಡಿ ಮಾಡಿದರೂ ಮೊದಲು ಹೊಸಲಜ್ಜಿ ತಿನ್ನಬೇಕು. ಆಮೇಲೆ ಮನೆಯವರು ಶುಕ್ರವಾರ ಮಂಗಳವಾರದಂದು ದೋಸೆ, ಕಡುಬು, ಪತ್ರೊಡೆ ಇತ್ಯಾದಿ ಅರೆದು ಮಾಡುವ ತಿಂಡಿಗಳು ಸಂಜೆ ದೀಪ ಹಚ್ಚಿದ ಮೇಲೆ ಹೊಸಲು ನಮಸ್ಕಾರವಾಗಬೇಕು. ಹೊಸಲಿಗೆ ದೀಪವಿಟ್ಟು ನಾಲ್ಕು ಮಧ್ಯಾಹ್ನ ಮಲ್ಲಿಗೆ ಹೂವಾದರೂ ಏರಿಗೆ ಹಾಲು ಸಕ್ಕರೆ ನೈವೇದ್ಯ ಮಾಡಿ ನಮಸ್ಕರಿಸಬೇಕು.

ಸೋಣೆತಿಂಗಳ ಸಂಭ್ರಮವನ್ನು ದಾಖಲಿಸುವ ಲೇಖಕಿ ಈಗೆಲ್ಲ ಮನೆಗಳಿಗೆ ಹೊಸಿಲುಗಳೇ ಇರುವುದಿಲ್ಲ. ಹೊಸಿಲುಗಳಿಲ್ಲದೆ ಬೋಳು ಬೊಪ್ಪಾದ ಮನೆಗಳಲ್ಲಿ ಹೊಸಿಲಜ್ಜಿಯ ಪೂಜೆಯು ಇಲ್ಲ, ನೈವೇದ್ಯವೂ ಇಲ್ಲ ಎಂಬ ವಿಷಾದವನ್ನು ವ್ಯಕ್ತಪಡಿಸುತ್ತಾರೆ.

ಕುಂದಾಪುರ ಪ್ರದೇಶದ ಜಾನಪದ ಆಚರಣೆಗಳಲ್ಲಿ ಕೋಡಿಗೆಂಡ ಒಂದು ಆಚರಣೆ. ಕೋಡಿಗೆಂಡ ಅಂದರೆ ಅಂತಿಂತಹುದಲ್ಲ. ಅದನ್ನು ಹೇಳಿದರೆ ಕಣ್ಣಲ್ಲಿ ಕಂಡವರಿಗೇ ಸೈ ಅರ್ಥವಾಗುವುದು. ಯಾವ ಗಂಟಿಗೆ ಎಂತಹ ಘಟಾನುಘಟಿ ಭೂತ ಮೆಟ್ಟಿಕೊಂಡರೂ ಕೋಡಿ ಅಮ್ಮನವರಿಗೆ ಹೇಳಿಕೊಂಡರೆ ಸಾಕು ಅದು ಓಡಿಹೋಗುತ್ತದೆ. ಹೆಂಡತಿಯನ್ನು ಬಿಟ್ಟು ಘಟ್ಟಕ್ಕೆ ಹೋದ ಗಂಡ ವಾಪಾಸು ಬರಬೇಕಾದರೂ ಕೋಡಿಅಮ್ಮನವರಿಗೆ ಹರಕೆಯಾಗಬೇಕು, ಕೋಡಿ ಗೆಂಡ ನಡೆಯುವುದು ಬಾರಾತ್‌ತಿಂಗಳಲ್ಲಿ. ಗೆಂಡ, ಸುತ್ತಮುತ್ತಲ ಕೈಪಾದಿ, ಬಡಾಕೋಡಿ,

ಆಸೋಡಿ, ಕಲ್ಲಗರ ಅಮ್ಮನವರೂ ಎಷ್ಟು ಜನ ಬೇಕು ಅಷ್ಟು ಇದೆ. ಗೆಂಡದ ಕಾರ್ಯಕ್ರಮವೆಲ್ಲ ನಡೆಯುವುದು ರಾತ್ರಿ.

ಗೆಂಡದ ಹೊಂಡಕ್ಕೆ ಬೆಂಕಿ ಹಾಕಿ ಒಳಗೆ ಅಮ್ಮನವರಿಗೆ ಪೂಜೆ ನಡೆಯುತ್ತದೆ. ಪೂಜೆ ಮುಗಿಯುತ್ತಿದ್ದಂತೆಯೇ ಅಮ್ಮನವರ ಆವಾಹನೆಯಾದ ಪಾತ್ರಿ ಅತ್ತಿತ್ತ ವಾಲುತ್ತ ತೊನೆಯುತ್ತಾ ಹೆಜ್ಜೆಯಿಡುತ್ತ ಹೊರಗೆ ಬಂದಾಗ ಪಾತ್ರೆಯ ಕೈಯಲ್ಲಿ ಸಿಂಗಾರದ ಹೂವಿರುತ್ತದೆ. ಆಚೆ ಈಚೆ ಎರಡು ಜನ. ಪಾತ್ರಿ ಕತಕತ ಕುದಿಯುವಂತೆ ನಡುಗುತ್ತಾ ಅತ್ತ ಇತ್ತ ಸುತ್ತ ತಿರುಗಿ ಕುಣಿಯುತ್ತಾ ಸಿಂಗಾರವನ್ನು ಮುಖಕ್ಕೆ ಹೊಡೆದುಕೊಳ್ಳುತ್ತಾ ನಿಗಿನಿಗಿ ಉರಿಯುವ ಕೆಂಡದ ರಾಶಿಗೆ ಹಾರಿ ನಡೆದು ಹೋಗುತ್ತಾನೆ. ಅವನು ಹಾರಿದ ರಭಸಕ್ಕೆ ಸುತ್ತಲು ಅಷ್ಟು ದೂರಕ್ಕೆ ಕೆಂಡದ ಚೂರು ಹಾರಿ ಜನ ದೂರ ಸರಿಯುತ್ತಾರೆ. ಭಯಮಿಶ್ರಿತ ನಿಶ್ಯಬ್ಧತೆ ಸುತ್ತ ಆವರಿಸುತ್ತದೆ. ಪಾತ್ರೆ ಕೆಂಡದ ಹೊಂಡಕ್ಕೆ ತೀರ್ಥ ಪ್ರೋಕ್ಷಣೆ ಮಾಡಿದ ಮೇಲೆ ಅವನ ಆಚೆ ಈಚೆ ನಿಂತ ತೈನಾತಿಗಳು ಹರಕೆ ಹೊತ್ತವರ ಹೆಸರುಗಳನ್ನು ಕರೆಯುತ್ತಾರೆ.

ಮೇಲುಜಾತಿಯವರನ್ನು ಮೊದಲು ಕರೆಯುತ್ತಾರೆ. ಕಡೆಕಡೆಗೆ ಕೀಳುಜಾತಿಯವರನ್ನು ಕರೆಯಲಾಗುತ್ತದೆ. ಆದರೆ ಗೆಂಡದ ಕಾರ್ಯಕ್ರಮದಲ್ಲಿ ಕೊರಗ – ಕೂಸಾಳುಗಳಿಗೆ ಪ್ರವೇಶವಿರುವುದಿಲ್ಲ. ಗೆಂಡತುಳಿದು ಬಂದವರಿಗೆ ಪಾತ್ರಿ ತೀರ್ಥ–ಪ್ರಸಾದ ಕೊಡುತ್ತಾರೆ. ಹಬ್ಬಗಳ ಆಚರಣೆಗಳಲ್ಲಿಯೂ ಮೇಲ್ಜಾತಿಯವರು ಕೆಳಜಾತಿಯವರು ಕೊರಗ, ಕೂಸಾಳುಗಳನ್ನು ಅಸ್ಪೃಶ್ಯರಂತೆ ಕಾಣುವುದನ್ನು ಗಮನಿಸಬಹುದಾಗಿದೆ.

ವೈದೇಹಿ ತಮ್ಮ ಹರಿವ ನೀರು ಪ್ರಬಂಧ ಸಂಕಲನದಲ್ಲಿ ನಭದ ಕಣ್ಣಧಾರೆ ಲೇಖನದಲ್ಲಿ ಪ್ರಾದೇಶಿಕವಾಗಿರುವ ಮಳೆಗಾಲದ ವಿಶೇಷ ಅಡುಗೆಗಳನ್ನ ಕುರಿತು ಪ್ರಸ್ತಾಪಿಸುತ್ತಾರೆ. ಚಗಟೆಸೊಪ್ಪಿನ ಪಲ್ಯ, ಹುರುಳಿಸಾರು, ಕಳಲೆ ಹುಳಿ, ಅರಸಿನೆಲೆಯ ಕಡುಬು, ಕೆಸುವಿನೆಲೆ ಪತ್ರೊಡೆ ಈ ವಿಶೇಷವಾದ ಅಡುಗೆ ತಿಂಡಿಗಳೆಲ್ಲ ಮಳೆಗಾಲಕ್ಕೆ ತಕ್ಕಂತೆ ಹುಟ್ಟಿಕೊಂಡಿವೆ. ಕೆಸುವಿನೆಲೆ ಪತ್ರೊಡೆಯನ್ನು ಮಾತ್ರ ನಾಗರಪಂಚಮಿ ಹಬ್ಬಕ್ಕೊಂದು ಮಾಡುವುದಿಲ್ಲ. ಯಾಕೆಂದರೆ ಕೆಸುವಿನೆಲೆಯನ್ನು ಸುತ್ತಿ ಪತ್ರೊಡೆ ಮಾಡಬೇಕು. ನಾಗನಿಗೆ ನಾವು ತಿನ್ನುವ ತಿಂಡಿ ತನ್ನಂತೆ ಸುತ್ತಿರುವುದು ನೋಡಿ ಬೇಸರವಾಗುತ್ತದೆಂಬ ನಂಬಿಕೆ. ನಾಗರಪಂಚಮಿಯಂದು ಹಬ್ಬಗಳ ಬಾಗಿಲು ತೆರೆದಂತೆ ಒಂದಾದ ಮೇಲೊಂದು ಹಬ್ಬಗಳು ಕಣ್ಣುಜ್ಜಿ ಬರುತ್ತದೆ. ಶ್ರಾವಣ ಮಾಸವಿಡೀ ಪೂಜೆಗೊಳ್ಳುವ ಹೊಸಿಲಜ್ಜಿ, ಶರನ್ನವರಾತ್ರಿಯಲ್ಲಿ 'ಹೂವಿನಕೋಲಿ'ನ ತಂಡಗಳು ಹೀಗೆ ಒಂದೊಂದೆ ಹಬ್ಬಗಳು. ಆ ಹಬ್ಬಗಳಿಗೆ ವಿಶೇಷ ತಿಂಡಿ ಅಡುಗೆಗಳು.

ದೀಪೋತ್ಸವವು ಸಂಪ್ರದಾಯಿಕ ವಿಶೇಷ ಆಚರಣೆಗಳಲ್ಲಿ ಒಂದು. ವೈದೇಹಿ ತಮ್ಮ ಸ್ಮೃತಿಕಥನ 'ಜಾತ್ರೆ'ಯ 'ದೀಪದ ಕಡಲಲ್ಲಿ' ಲೇಖನದಲ್ಲಿ ದೀಪೋತ್ಸವದ ಚಿತ್ರಣಗಳನ್ನು ತುಂಬಾ ಚೆನ್ನಾಗಿ ದಾಖಲಿಸಿದ್ದಾರೆ.

ದೂರದಲ್ಲೆಲ್ಲೋ ಬೆಳಕಿನ ಛಾಯೆಯೊಂದು ಭೂಮಿಯಿಂದ ಆಕಾಶದೆಡೆಗೆ ಹೊರಟಿದ್ದರೆ ಅಲ್ಲಿ ದೀಪೋತ್ಸವ ನಡೆಯುತ್ತಿದೆ ಎಂದರ್ಥ. ದೀಪೋತ್ಸವವೆಂದರೆ ದೇವಸ್ಥಾನದ ಒಳಗೂ ದೀಪ, ಹೊರಗೂ ದೀಪ. ಅಂಗಡಿ ಮನೆ ಪೇಟೆ ಸಾಲು ಸಾಲು ದೀಪ, ಸಾವಿರ ದೀಪ, ಲಕ್ಷ ದೀಪ.

ದೇವಸ್ಥಾನದ ಉದ್ದ ದಾರಿಯ ಉದ್ದಕ್ಕೂ ರೀಪು ತೆಮೆ ಕಟ್ಟಿ ಕಟಾಂಜನ ಮಾಡಿ ಅದರ ಮೇಲೆ ಸೆಗಣಿಮುದ್ದೆಯಿರಿಸಿ ಮೇಲೆ ಹಣತೆಇಟ್ಟು ಸಜ್ಜುಗೊಳಿಸುತ್ತಾರೆ. ಸಂಜೆ ದೇವರುಬರುವ ಹೊತ್ತಿಗೆ ದೀಪಹಚ್ಚಿದಾಗ ಅದುಸ್ವರ್ಗದ ದಾರಿಯಂತೆ ಕಾಣುತ್ತದೆ. ಆಕಾಶಲೋಕವೇ ಭೂಮಿಗಿಳಿದಂತೆ ಅಥವಾ ದೀಪದ ಕಡಲಂತೆ! ಬೆಳಗೆಲ್ಲ ಹಣ್ಣು ಕಾಯಿ ಪ್ರದಕ್ಷಿಣೆ ನಮಸ್ಕಾರ ಮಾಡುವವರದೇ ಒಡ್ಡೋಲಗವಾದರೂ ಸಂಜೆಯಾಯಿತೆಂದರೆ ಸಣ್ಣಸಣ್ಣ ದೀಪಗಳೆಲ್ಲ ಒಟ್ಟಿಗೇ ಬೆಳಗಿ ಎಲ್ಲವನ್ನು ಎಲ್ಲರನ್ನು ಸುಂದರಗೊಳಿಸಿ ಬಿಡುತ್ತವೆ.

ಒಟ್ಟಾರೆಯಾಗಿ ಹೇಳುವುದಾದರೆ ವೈದೇಹಿಯವರಾಗಲಿ ನಾಗವೇಣಿಯವರಾಗಲಿ ಪ್ರಾದೇಶಿಕ ಸಂಸ್ಕೃತಿಗಳ ವಿವರಗಳನ್ನು ಬೇಕೆಂದೇ ಪ್ರಜ್ಞಾಪೂರ್ವಕವಾಗಿ ದಾಖಲಿಸುತ್ತಾರೆಂದು ಹೇಳಲಾಗುವುದಿಲ್ಲ. ಬದಲಾಗಿ ಅವರು ಹೇಳುವುದು ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲೂ ಹಬ್ಬಿ ಹರಡಿಕೊಂಡಿರುವ, ತಮ್ಮ ಪರಿಸರದಲ್ಲಿಯೂ ಇರುವ ದೈನಂದಿನ ಬದುಕುಗಳನ್ನೆ ಹಬ್ಬ, ಆಚರಣೆ, ಅಡುಗೆ-ಉಡುಗೆ, ಜಾತಿ, ರೂಢಿ, ಸಂಪ್ರದಾಯಗಳು ಹೀಗೆ ಅನೇಕ ವಿವರಗಳು ಅಲ್ಲಲ್ಲಿ ಕಥೆಗೆ ಪೂರಕವಾಗಿ ಪೋಷಕವಾಗಿ ಬಂದಿರುತ್ತವೆ. ಅಲ್ಲಿಬರುವ ಪಾತ್ರಗಳ ವಿಶಿಷ್ಟ ವ್ಯಕ್ತಿತ್ವ, ಭಾಷಾಬಳಕೆ, ಸ್ತ್ರೀವಿಶಿಷ್ಟನೋಟ, ಸಾಮಾಜಿಕಕಾಳಜಿ ಎಲ್ಲಾಇರುತ್ತದೆ. ಅದರಲ್ಲಿ ಪ್ರಾದೇಶಿಕತೆಗೆ ಬೇಕಾದ ವಿವರಗಳನ್ನು ಅಗತ್ಯಕ್ಕಾಗಿ ಸಂಶೋಧಕ ಅಥವಾ ವಿಮರ್ಶಕ ಹುಡುಕಿ ತೆಗೆದು ತೋರಬೇಕಾದ ಸಂಗತಿಯಾಗಿದೆ.

೬.೨. ಸ್ತ್ರೀ ಪರವಾದ ಅಭಿವ್ಯಕ್ತಿಯ ಸ್ವರೂಪ

'ಸ್ತ್ರೀವಾದ'ವಲ್ಲ ಬದಲಾಗಿ ಸ್ತ್ರೀ ಪರವಾದ ನಿಲುವು. ವೈದೇಹಿ ಮತ್ತು ನಾಗವೇಣಿ ಈ ಇಬ್ಬರು ಲೇಖಕಿಯರ ಬರಹಗಳ ಕೇಂದ್ರ ಹೆಣ್ಣೆ ಆಗಿದ್ದಾಳೆ. ಟಿ.ಪಿ. ಅಶೋಕ ಅವರು ತಮ್ಮ ಕೃತಿ

"ವೈದೇಹಿ ವಾಚಿಕ" ಪ್ರಸ್ತಾವನೆಯಲ್ಲಿ ಹೇಳುವುದು ಹೀಗೆ– "ವೈದೇಹಿ ಬರಹಗಳ ಕೇಂದ್ರ ಹೆಣ್ಣು. ಈ ಹೆಣ್ಣು ವಿವಿಧ ಜಾತಿ, ವಯಸ್ಸು, ಅಂತಸ್ತು, ಸಂವೇದನೆಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ತೀರಾ ಸಂಪ್ರದಾಯಸ್ತರಿಂದ ತೀರಾ ಆಧುನಿಕರವರೆಗೆ, ಅವಿವಾಹಿತೆಯರಿಂದ ವಿಧವೆಯರವರೆಗೆ, ಗೃಹಿಣಿಯರಿಂದ ವೇಶ್ಯೆಯರವರೆಗೆ ಈ ಪ್ರಪಂಚ ಹರಡಿಕೊಳ್ಳುತ್ತದೆ. ಇಲ್ಲಿ ವಿದ್ಯಾವಂತರು, ಅವಿದ್ಯಾವಂತರು, ಕಳ್ಳರು, ಹುಚ್ಚರು ಇದ್ದಾರೆ; ಶೋಷಿಸುವವರು, ಶೋಷಣೆಗೆ ಒಳಗಾದವರು ಇದ್ದಾರೆ. ಅಂದರೆ ವೈದೇಹಿ ಕಥೆಗಳಲ್ಲಿ ಹೆಣ್ಣು ಒಂದು ಸಿದ್ದ ಮಾದರಿಯಲ್ಲಿ ಕಾಣಿಸಿಕೊಳ್ಳದೆ ವಿವಿಧ ಆಕೃತಿಗಳಲ್ಲಿ, ಭಾವಸ್ಥಿತಿಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಈ ವೈವಿಧ್ಯವೇ ಬಹುರೂಪತೆ – ಬಹುಧ್ವನಿಗಳೇ ವೈದೇಹಿಯವರನ್ನು ನಮ್ಮ ಕಾಲದ ಬಹುಮುಖ್ಯ ಬರಹಗಾರ್ತಿಯರಲ್ಲಿ ಒಬ್ಬರನ್ನಾಗಿ ಮಾಡಿರುವುದು. ಜೀವನವೆನ್ನುವುದು ಅಸಂಖ್ಯಾ ಬಣ್ಣ, ಚಹರೆ, ವಾಸನೆಗಳಿಂದ ಕೂಡಿರುವಂಥದ್ದು ಎಂಬ ಸಂಕೀರ್ಣಗ್ರಹಿಕೆಯೂ ಒಂದು ಮಾನವೀಯ ಸನ್ನಿವೇಶದ ಹಿಂದೆ ಹಲವು ಬಗೆಯ ಒತ್ತಡಗಳಿರುತ್ತವೆ ಎಂಬ ಗಾಢ ತಿಳಿವಳಿಕೆಯೂ ಇಲ್ಲಿ ಕೆಲಸ ಮಾಡಿದೆ. ಅವರು ಬದುಕನ್ನು ಹೆಣ್ಣಿನ ದೃಷ್ಟಿಕೋನದಿಂದ ಗಮನಿಸುತ್ತಾರೆ. ಆದರೆ ಅದು ಸರಳವಾದ 'ಸ್ತ್ರೀಪರ', 'ಪುರುಷ ವಿರೋಧಿ' ತೀರ್ಮಾನಗಳಲ್ಲಿ ಪರ್ಯವಸಾನಗೊಳ್ಳುವುದಿಲ್ಲ. ಲಿಂಗ ಅಸಮಾನತೆಯ ಪ್ರಶ್ನೆಗಳನ್ನು ಅವರು ತುಂಬ ಪ್ರಬುದ್ಧರಾಗಿ ನಿರ್ವಹಿಸಿದ್ದಾರೆ. ಯಾವುದೇ ಮನುಷ್ಯನ ಅಥವಾ ವರ್ಗಗಳ ಜೀವನ ಸಾಫಲ್ಯಗಳ ಪ್ರಶ್ನೆಯು ಎಲ್ಲ ಮನುಷ್ಯನ ಮತ್ತು ವರ್ಗಗಳೊಂದಿಗಿನ ಒಟ್ಟಾರೆ ಸಂಬಂಧದ ಪ್ರಶ್ನೆಯೇ ಆಗಿರುತ್ತದೆ ಎಂಬ ಎಚ್ಚರದಲ್ಲಿ ಅವರ ಜೀವನ ಸಂದರ್ಭಗಳನ್ನು ಪರಿಶೀಲಿಸುತ್ತಾರೆ. ಹಾಗೆಂದು ಅವರ ಕಥನಗಳು ತೆಳು ಭಾವುಕ ಅನುಕಂಪದಲ್ಲಿ ಇಲ್ಲವೇ ಸರಳ ಉದಾರಿ ನಿಲುವುಗಳಲ್ಲಿ ಅಳ್ಳಕಗೊಳ್ಳುವುದಿಲ್ಲ. ಹೆಣ್ಣನ್ನು ಹಲವು ಮನುಷ್ಯ ಸಂದರ್ಭಗಳಲ್ಲಿ ಇಟ್ಟು ನೋಡುವಾಗಲೂ ಒಂದು ಲಿಂಗವಾಗಿ ಹೆಣ್ಣಿನ ಅನನ್ಯ, ವಿಶಿಷ್ಟ ಸ್ಥಿತಿ ಅವರ ಅವಲೋಕನವನ್ನು ತಪ್ಪಿಸಿಕೊಳ್ಳುವುದಿಲ್ಲ. ಈ ದೃಷ್ಟಿಯಿಂದ "ನಮ್ಮ ಲೋಕ ಗೀತೆ" ಎಂಬ ಪ್ರಬಂಧವನ್ನು ಒಂದು ಟಿಪಿಕಲ್ ವೈದೇಹಿ ಬರಹವೆಂದು ಭಾವಿಸಬಹುದು".

ಅಂತೆಯೇ ಕೇಶವಶರ್ಮ ಕೆ. ಅವರು ತಮ್ಮ "ಸ್ತ್ರೀವಾದಿ ಆಖ್ಯಾನ" ಕೃತಿಯಲ್ಲಿ ನಾಗವೇಣಿಯವರ ಕಥನದ ಮಾದರಿಯನ್ನು ಕುರಿತು ಹೇಳುವುದು ಹೀಗೆ – "ಭಾರತೀಯ ನಾಗರಿಕ ಸಮಾಜವು ಅವರ ರಾಜಕೀಯ ಉದ್ದೇಶಕ್ಕೆ ತಕ್ಕಂತೆ ಸ್ತ್ರೀತ್ವವನ್ನು ವ್ಯಾಖ್ಯಾನಿಸಿದೆ. ಹಾಗೆಯೇ ಬಂಡವಾಳವಾದಿ ವ್ಯಾಪಾರಿ ಧೋರಣೆಯು ಕೂಡಾ ಹೆಣ್ತನವನ್ನು ತನಗೆ ಬೇಕಾದಂತೆ ನಿರ್ವಚಿಸಿದೆ. ಎರಡೂ ನಿರ್ವಚನಗಳಿಗೂ ಮಿತಿಗಳಿವೆ. ಎರಡನೆಯದು ಹೆಣ್ತನವನ್ನು ಮಾರುಕಟ್ಟೆಗೆ ಬೇಕಾದಂತೆ ವ್ಯಾಖ್ಯಾನಿಸುತ್ತದೆ. ಮೊದಲನೆಯದಕ್ಕೆ ರಾಜಕೀಯ ಉದ್ದೇಶವು

ಪ್ರಧಾನವಾಗಿದೆ. ಹೆಚ್ಚಿನ ಲೇಖಕಿಯರು ಈ ಎರಡೂ ನಿಯಂತ್ರಣಗಳನ್ನು ತಮ್ಮ ಬರೆಹಗಳಲ್ಲಿ ಪ್ರಶ್ನಿಸಿದ್ದಾರೆ. ನಾಗವೇಣಿಯವರು ಕೂಡಾ 'ಮೀಯುವ ಆಟ'ದ ಕಥೆಗಳ ಮುಖೇನ ಈ ಇರಾದೆಗಳನ್ನು ಪ್ರಶ್ನಿಸಿದ್ದಾರೆ. ದೊಡ್ಡ ಮಟ್ಟದ ರಾಜಕೀಯ ವ್ಯಾಖ್ಯೆಗಳಲ್ಲಿ ಹೆಣ್ಣು ರಾಜಕೀಯದ ಬಲಿಪಶು. ಮಾರುಕಟ್ಟೆಯಲ್ಲಿ ಹೆಣ್ಣೆಂದರೆ ಉಪಭೋಗದ ಸಾಮಗ್ರಿ. ಹೆಣ್ಣುತನವೆನ್ನುವುದಕ್ಕೆ ಬೇರೆ ಆಯಾಮಗಳೂ ಇವೆ. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ನಾಗವೇಣಿಯವರ ಕಥೆಗಳಲ್ಲಿ ಬೇರೆ ಬೇರೆ ರೀತಿಯ ಹೆಣ್ತನದ ನಿರ್ವಚನಗಳಿವೆ. ತಾಯಿಯಾಗಿರುವುದು ಬೇರೆ ; ಹೆಂಡತಿಯಾಗಿರುವುದು ಬೇರೆ ; ಒಕ್ಕಲಗಿತ್ತಿಯಾಗಿರುವುದು ಬೇರೆ ಎಂಬ ಅರಿವು ನಾಗವೇಣಿಯವರಿಗಿದೆ. ಇದು ತುಂಬಾ ಪ್ರಮುಖವಾದ ಅರಿವು ಕೂಡಾ ಹೌದು. ಅಂದರೆ ಮಹಿಳೆಯ ಕುರಿತು ರಾಜಕೀಯ ಮತ್ತು ಮಾರುಕಟ್ಟೆಯ ವ್ಯಾಖ್ಯೆಗಿಂತ ಭಿನ್ನವಾದ ಬೇರೆ ಬೇರೆ ವ್ಯಾಖ್ಯೆಗಳು ಸಾಧ್ಯ. ನಾಗವೇಣಿಯವರು ಕಥೆಗಳಲ್ಲಿ ಮಾಡುವುದು ಕೂಡಾ ಅದುವೇ. ಆದುದರಿಂದ ಅವರ ಕಥೆಗಳಲ್ಲಿ ಅನೇಕ ಮುಖಗಳುಳ್ಳ ಮಹಿಳೆಯರ ಮತ್ತು ಹೆಣ್ತನದ ಪರಿಚಯವಾಗುತ್ತದೆ".

ಈ ಮೇಲೆ ಗುರುತಿಸಿದ ಎರಡು ಹೇಳಿಕೆಯನ್ನು ಅನ್ವಯಿಸಿ ವೈದೇಹಿ ಮತ್ತು ನಾಗವೇಣಿ ಈ ಇಬ್ಬರು ಲೇಖಕಿಯರ ಸಾಹಿತ್ಯವನ್ನೂ ಎರಡು ನೆಲೆಗಳಲ್ಲಿ ಗುರುತಿಸಬಹುದಾಗಿದೆ. ಒಂದು ಸ್ತ್ರೀಶೋಷಣೆಯ ಅನಾವರಣ ಮತ್ತೊಂದು ಸ್ತ್ರೀ ವಿಶೇಷಗಳ ಅನಾವರಣ. ಸ್ತ್ರೀಶೋಷಣೆ ಎಂದಕೂಡಲೆ ಅದನ್ನು ಪುರುಷ ದೌರ್ಜನ್ಯ, ಅತ್ಯಾಚಾರ ಎಂದು ನೇರವಾಗಿ ಪ್ರತಿಕ್ರಯಿಸದೆ ಅದರ ವಿವಿಧ ಮೂಲಗಳನ್ನು ಸೂಕ್ಷ್ಮಾತಿಸೂಕ್ಷ್ಮ ರೂಪಗಳನ್ನ, ಆಳ ವಿಸ್ತಾರವನ್ನು ಗುರುತಿಸುವ ಪ್ರಯತ್ನವಾಗಬೇಕು ಏಕೆಂದರೆ ಬದಲಾದ ಕಾಲದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ ನಾನಾ ಮುಖಗಳನ್ನು ಪಡೆದುಕೊಂಡಿದೆ ಎಂಬುದು ಕಟುವಾಸ್ತವ ಸತ್ಯ.

ಎರಡನೆ ನೆಲೆಯಲ್ಲಿ ಹೆಣ್ಣನ್ನು ಗಮನಿಸುವುದಾದರೆ ಹೆಣ್ಣು ಸಕಲ ಜೀವ ಚೈತನ್ಯದ ಮೂಲ. ಆ ಮೂಲದಲ್ಲಿಯೇ ಹೆಣ್ಣಿನ ಶಕ್ತಿ, ಸೌಂದರ್ಯಗಳು ಅಡಗಿರುವುದು. ಗಂಡಲ್ಲಿ ಇಲ್ಲವಾದ ಲೈಂಗಿಕ ವ್ಯತ್ಯಾಸವು ಹೆಣ್ಣಿನಲ್ಲಿದೆಯೆಂದು ಅವಳನ್ನ ದುರ್ಬಲವೆಂದು ಕೀಳಗಿಕಾಣಬಾರದು. ಗಂಡು–ಹೆಣ್ಣಿನ ಸಂಬಂಧಲ್ಲಿ ಶ್ರೇಷ್ಠ–ಕನಿಷ್ಠವೆಂಬ ವರ್ಗೀಕರಣ ಸಲ್ಲದು. ಮಕ್ಕಳನ್ನು ಪಡೆಯುವಶಕ್ತಿಯೆ ಹೆಣ್ಣಿನಬದುಕಿಗೆ ಒಂದುಅರ್ಥವನ್ನು, ಗುರಿಯನ್ನು, ಸಾರ್ಥಕತೆಯನ್ನು ತಂದುಕೊಟ್ಟಿದೆ. ಒಟ್ಟಿನಲ್ಲಿ ಸ್ತ್ರೀ ಶೋಷಣೆ ಮತ್ತು ಸ್ತ್ರೀ ವಿಶೇಷ ಈ ಎರಡರ ಉದ್ದೇಶವೂ ಒಂದೇ ಅದು ಸ್ತ್ರೀ ಲೋಕದ ಅನಾವರಣ ಆದರೆ ನೋಡುವ ದೃಷ್ಟಿಯಲ್ಲಿ ಭಿನ್ನತೆಗಳಿರುವುದರಿಂದ ಫಲಿತಾಂಶವೂ ಬೇರೆಯೇ ಆಗಿರುತ್ತದೆ. ವೈದೇಹಿ ಎರಡನೆಯ ನೆಲೆಗೆ

ಸೇರುವ ಲೇಖಕಿ. ಈ ಮಾದರಿಗೆ 'ಮಲ್ಲಿನಾಥನ ಧ್ಯಾನ' ಪ್ರಬಂಧ ಸಂಕಲನದ 'ನಮ್ಮ ಲೋಕ ಗೀತೆ' ಲೇಖನ ಅತ್ಯುತ್ತಮ ಉದಾಹರಣೆಯಾಗಬಲ್ಲದು. ಸ್ತ್ರೀ ಶಕ್ತಿಯ ವಿವಿಧ ಮುಖಗಳ ಹುಡುಕಾಟದಲ್ಲಿ ತಾಯ್ತನವು ಒಂದು.

ತಾಯಿಯ ಗರ್ಭದಲ್ಲಿ ಮೃದುತ್ವ ಮೈದುಂಬಿ ಸಂಚಾರ ಮಾಡುತ್ತ, ಹೊರಬರಲು ಒದ್ದಾಡುವ ಮಗು ತಾಯಿಯ ಇಡೀ ದೇಹವನ್ನೆ ಜಗ್ಗಾಡಿ ನೋಯಿಸುತ್ತದೆ. ಆ ನೋವಿನಲ್ಲಿ ಮೈ ಪೂರ್ತಿ ಬೆವತು ಮುದ್ದೆಯಾಗುವಂತ ವೇದನೆ. ಎಂತದ್ದಾದರು ಬೇಕು ಈ ಹೆಣ್ಣು ಜನ್ಮ ಬೇಡವಪ್ಪ ಎನ್ನಿಸುವಂಥದ್ದು. ಆದರೆ ಲೇಖಕಿ ತನಗೆ ಇನ್ನೊಂದು ಜನ್ಮ ಎನ್ನುವುದು ಇರುವುದು ಹೌದಾದರೆ ಆ ಎಲ್ಲ ಜನ್ಮಗಳಲ್ಲಿಯೂ ತಾವು ಹೆಣ್ಣೆ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾರೆ.

ಪುರುಷರ ಬಗ್ಗೆ ಯೋಚಿಸುವಾಗ ಎಷ್ಟೋ ಸಲ ಮರುಕವುಂಟಾಗುತ್ತದೆ. ಬದುಕಿನ ಎಷ್ಟೋ ದಿವ್ಯ ಅನುಭವಗಳ ಮೃದುಸ್ಪರ್ಶದಿಂದ ಇವರೆಲ್ಲ ವಂಚಿತರಾಗಿದ್ದಾರೆಂದು ಅಂತಹ ಅನುಭವಗಳನ್ನು ತಮ್ಮ ಯಾವ ಪೌರುಷದಿಂದಲೂ ಕೂಡ ಎಂದಿಗೂ ಗಳಿಸಿಕೊಳ್ಳಲಾರರಲ್ಲ ಎನ್ನುತ್ತಾರೆ.

"ಪುರುಷರಿಗೆ ನಾವು ಎಂದಿಗೂ ಸಮರಲ್ಲ. ಅದಕ್ಕಿಂತ ಮುಖ್ಯವಾಗಿ ನಮ್ಮ ಸಮಕ್ಕೆ ಪುರುಷರು ಎಂದೂ ಬಂದುನಿಲ್ಲಲಾರರು. ಎಲ್ಲಿಸಮಾನ ಅವಕಾಶಗಳನ್ನು ಪಡೆಯಲಾರೆವೋ ಅಲ್ಲಿ ಹೋರಾಡಿಯಾದರೂ ಒಂದಲ್ಲ ಒಂದು ದಿನ ಸಮಾನ ಅವಕಾಶಗಳಿಸಿಕೊಂಡೇವು. ಆದರೆ ತಂತಾನೇ ಲಭ್ಯವಾಗುವ ನಮ್ಮದೇ ಆದ ಅನುಭವಗಳನ್ನು ಗುರುತಿಸುತ್ತ ಗೌರವಿಸುವುದನ್ನು ಬಿಟ್ಟು ಧಿಕ್ಕರಿಸುವುದರಲ್ಲಿ, ಹೀಯಾಳಿಸುವುದರಲ್ಲಿ ಏನು ಬಂತು? ನಾವೇಕೆ ಪುರುಷ ದನಿಯಲ್ಲಿ ಮಾತಾಡಬೇಕು? ನಾವು ನಮ್ಮ ಕಂಠದಲ್ಲಿ ಹಾಡೋಣ ಅದು ಜೋರಾಗವಿರಲಿ, ಪ್ರೇಮರಾಗವಿರಲಿ, ಇನ್ನಾವ ಬಗೆಯ ರಾಗ-ವಿರಾಗಗಳೇ ಇರಲಿ, ನಮ್ಮದೇ ದನಿ ಅಲ್ಲಿರಲಿ".[2]

ಹೆಣ್ತನವನ್ನು ಕೀಳಾಗಿ ಕಂಡವರ ಜೊತೆಗೆ ಸಮಾನತೆಗಾಗಿ ಹೋರಾಟಕ್ಕಿಳಿಯುವುದಕ್ಕಿಂತ ಗಂಡಿಗಿಂತ ಹೆಣ್ಣು ಹೇಗೆ ವಿಭಿನ್ನವಾಗಿದ್ದಾಳೆ ಎಂದು ಪ್ರತಿಕ್ರಿಯಿಸುವುದರಲ್ಲೆ ಲೇಖನದ ಮಹತ್ವವು ವೈಶಿಷ್ಟ್ಯವು ಇದೆ. ಗಂಡು ಮತ್ತು ಹೆಣ್ಣು ಈ ಇಬ್ಬರಿಗೂ ಪ್ರಕೃತಿದತ್ತವಾಗಿಯೇ ಅವರಿಬ್ಬರಿಗೆ ಮಾತ್ರ ಸಾಧ್ಯವಾಗುವ ಕೆಲವು ವಿಶಿಷ್ಟವಾದ ಅನುಭವ ವಿಶೇಷಗಳಿವೆ. ಅವು ಇಬ್ಬರಲ್ಲೂ ಸಾರ್ಥಕ್ಯವನ್ನು ತರಬೇಕುಅಷ್ಟೇ. ಈ ಅನುಭವ ವಿಶೇಷಗಳ ದೃಷ್ಟಿಯಿಂದ ಹೆಣ್ಣು ಹೆಚ್ಚು ಅದೃಷ್ಟವಂತಳು ಎನ್ನುವುದು ಇಲ್ಲಿನ ನಿಲುವು.

ವೈದೇಹಿಯವರ ಬಹುಮುಖ್ಯ ಕಥೆಗಳಲ್ಲಿ ಒಂದಾದ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕಥೆಯ ಶಕುಂತಲೆಯು ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡವಳಾಗಿದ್ದಾಳೆ. ಕಾಳಿದಾಸನ

ಸಂಪ್ರದಾಯಿಕ ಶಕುಂತಲೆಗೆ ಆಯ್ಕೆಯ ಬದುಕಿಲ್ಲ, ಸಮಾಜದಲ್ಲಿ ಮನ್ನಣೆಯಿಲ್ಲ. ಆದರೂ ಅವೆಲ್ಲವನ್ನು ಇವಳು ಸ್ವೀಕರಿಸಬೇಕಾಗಿದೆ. ವೈದೇಹಿ ಅವರ ಶಕುಂತಲೆಗೂ ಇವೆಲ್ಲವೂ ಇದೆ. ಆದರೆ "ಹೊಟ್ಟೆಯಲ್ಲಿ ಜಗತ್ತನ್ನೇ ಧಿಕ್ಕರಿಸುವಂಥ ಸುಖ ಬೆಳೆಯುತ್ತಿತ್ತು. ಬಿರುಕೊಡೆದ ಮನದ ಗೋಡೆಗೆ ರೋಮಾಂಚ ಲೇಪಿಸುತ್ತಿತ್ತು" ಎನ್ನುವಲ್ಲಿ ಮಗುವಿಗಾಗಿ ಬದುಕನ್ನು ಆಯ್ದುಕೊಂಡಿದ್ದಕ್ಕೆ ಸೂಚನೆ ಸಿಗುತ್ತದೆ. ವಿಮುಖತೆಯನ್ನು ಆಯ್ದುಕೊಂಡು ಮಗುವನ್ನು ದಟ್ಟಕಾಡಿನಲ್ಲಿ ತ್ಯಜಿಸಿ ಬಿಟ್ಟು ಓಡುವುದರಲ್ಲಿ, ಭೂಮಿಯೇ ಬಾಯಿತೆರೆ ಎಂದು ಚೀರಾಡುವುದರಲ್ಲಿ ಯಾವ ಅರ್ಥವು ಇಲ್ಲ ಬದಲಾಗಿ ಬದುಕಲು ಕಲಿಯಬೇಕಾಗಿದೆ.

ದುಷ್ಯಂತ ಶಕುಂತಲೆಯನ್ನು ನಿರಾಕರಿಸಿದಾಗ ಉಂಗುರವನ್ನು ತೋರಿಸಿ ತಮ್ಮಿಬ್ಬರ ಸಂಬಂಧವನ್ನು ಸಾಬೀತುಪಡಿಸುವುದು ಅವಳಿಗೆ ಹೇಸಿಗೆ ಎನಿಸುತ್ತದೆ.

ಗೌತಮಿ 'ಉಂಗುರ ತೋರಿಸಬಾರದೇ?' ಎಂದರೆ ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇನು ನಾನು? ತೋರಿಸುವುದಿಲ್ಲ ಎಂದರೆ ಉದ್ಧಟತವನವಾಗುತ್ತದೆ. ಅದು ಕಳೆದೇ ಹೋಯಿತೆಂದು ದುಃಖ ನಟಿಸಿದೆ ಎನ್ನುತ್ತಾಳೆ. ಮರೆವಿನ ನಟನೆಗೆ ಉಂಗುರ ಎಂದಾದರೂ ಔಷಧಿಯಾಗುವುದಿದೆಯೆ?

ನನಗಾತ ಅನಿವಾರ್ಯನೆಂದ ಮಾತ್ರಕ್ಕೆ ನಾನು ಆತನಿಗೆ ಅನಿವಾರ್ಯವಾಗಬೇಕಿಲ್ಲವೆಂಬ ಸತ್ಯದಂಚಿನಲಿ ನಿಂತು ಚಿಂತಿಸಿದೆ. ಪರಸ್ಪರ ಅನಿವಾರ್ಯವಾಗುವವರೆಗೆ, ಯಾರೂ ಯಾರಿಗೂ ಎಂದಿಗೂ ಅನಿವಾರ್ಯವಲ್ಲ. ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಸುಖದೆದುರಿಗೆ ದುಷ್ಯಂತನ ನಿರಾಕರಣೆ, ಲೋಕಾಪವಾದ ಎಲ್ಲವು ಅವಳಿಗೆ ಎರಡನೆಯದಾಗಿ ಕಾಣಿಸುತ್ತದೆ. ಮಗುವೇ ತನ್ನ ಬದುಕಿನಲ್ಲಿ ಬದುಕುವ ಆಸೆಯನ್ನು, ಉತ್ಸಾಹವನ್ನು, ಬೆಳಕನ್ನು ತರುವ ಸಾಧನವಾದಾಗ ತಾಯ್ತನವೇ ಅವಳಿಗೆ ಸರ್ವಸ್ವವಾಗುತ್ತದೆ. ತನ್ನ ಬದುಕಿನ ಪುನರಾವಲೋಕನಕ್ಕೆ ತೊಡಗಿಕೊಂಡರೆ ದುಷ್ಯಂತನ ಮೇಲೆ ಆರೋಪ ಹೊರಿಸುವುದಕ್ಕೆ ಕಾರಣಗಳೇ ಇಲ್ಲ ಎನಿಸುತ್ತದೆ. ಪ್ರೀತಿಯ ದಿವ್ಯವಾದ ಅನುಭವವನ್ನು ಒದಗಿಸಿಕೊಟ್ಟು ಅವನಿಗೆ ತಾನು ಕೃತಜ್ಞಳಾಗಿರಬೇಕೆಂದೆ ಅವಳಿಗೆ ಅನ್ನಿಸುತ್ತದೆ. ತನ್ನ ಪ್ರೇಮ ದಾಂಪತ್ಯವಾಗಿ ಮುಂದುವರಿಯಲಾಗದ್ದರ ಬಗ್ಗೆ ಶಕುಂತಲೆಗೆ ನೋವಿದೆ. ಆದರೆ ತಾನು ಎಡವಿದ್ದರ ಬಗ್ಗೆ ದುಃಖವಿಲ್ಲ, ಬದುಕಿನಲ್ಲಿ ಹೆಣ್ಣಿಗೆ ಸಾಮಾನ್ಯವಾಗಿ ಎದುರಾಗುವ ತೇಪೆಹಾಕುವ ಸಾಧ್ಯತೆಯನ್ನು ಸರಿಪಡಿಸಿಕೊಂಡು ಹೋಗುವುದನ್ನು ಅವಳು ದೃಢವಾಗಿ ನಿರಾಕರಿಸುತ್ತಾಳೆ. ಒಂದುವೇಳೆ ದುಷ್ಯಂತನೇನಾದರೂ ಕರೆಯಲು ಬಂದರೆ ಎಲ್ಲವನ್ನು ಮರೆತು 'ಸುಖ'ವಾಗಿ ಬದುಕು ನಡೆಸಲು ಶಕುಂತಲೆ ಸಿದ್ಧಳಿಲ್ಲ. ಸುಖವೇನಿದ್ದರು ತನ್ನ

ಮಗುವಿನಲ್ಲಿ ಎಂದು ತಾಯಿಯಾಗಿ ತನ್ನ ಜವಾಬ್ದಾರಿಯನ್ನು ಮರೆಯುತ್ತಾಳೆ. ಮಗನೆ ತನ್ನ ಸರ್ವಸ್ವವೆಂದು ಆ ಮಗುವಿಗೆ ತಂದೆಯ ರಾಜ್ಯದ ಮೇಲಿರುವ ಅಧಿಕಾರವನ್ನು ಕಿತ್ತುಕೊಳ್ಳುವುದಿಲ್ಲ. ಬದುಕಿನಲ್ಲಿ ಕಟ್ಟಿಕೊಡಬೇಕಾಗಿದ್ದ ದುಷ್ಯಂತನನ್ನು ಬಿಟ್ಟುಕೊಟ್ಟಿದ್ದಲ್ಲದೆ ಸರ್ವಸ್ವವಾಗಿದ್ದ ಮಗನನ್ನು ಅವನ ಹಕ್ಕಿಗೆ ಬದುಕಿಗಾಗಿ ಬಿಟ್ಟು ಕೊಟ್ಟ ಶಕುಂತಲೆ ತಾನು ಏಕಾಂತದ ಬದುಕಿನಲ್ಲಿ ಉಳಿಯುತ್ತಾಳಲ್ಲ ಅಲ್ಲಿ ಹೆಣ್ಣಿನ ಶಕ್ತಿ ಇದೆ.

ಕನ್ನಡದ ಅತ್ಯುತ್ತಮ ಕಥೆಗಳಲ್ಲಿ ಒಂದಾದ 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ವೈದೇಹಿಯವರ ಬಹುಮುಖ್ಯ ಕಥೆಗಳಲ್ಲಿ ಒಂದು. ಇಲ್ಲಿ ಬರುವ ಅಜ್ಜಿ-ಮೊಮ್ಮಗಳಲ್ಲಿ ತಲೆಮಾರಿನ ಅಂತರವಿದ್ದರೂ ಅನೇಕ ಸಾಮ್ಯ ಅಂಶಗಳನ್ನು ಗಮನಿಸಬಹುದು. ಅಂತೆಯೇ ಕೆಲವು ಭಿನ್ನತೆಗಳು ಇವೆ. ಬದುಕಿನ ವಾಸ್ತವ ಸತ್ಯಗಳು ಪುಟ್ಟಮ್ಮತ್ತೆಯನ್ನು ಹಣ್ಣಾಗಿ ಮಾಡಿದೆ ಹಾಗಾಗಿ ಬದುಕನ್ನು ಹೇಗಿದೆಯೋ ಹಾಗೆ ಸ್ವೀಕರಿಸುವುದನ್ನು ಕಲಿತಿದ್ದಾಳೆ. ಆದರೆ ಕಲಾವತಿ ಅದನ್ನ ನಿರಾಕರಿಸುತ್ತಾಳೆ. ಕಾರಣ ಅವಳಿಗೆ ತಾನು ಹೆಣ್ಣಾಗಿರುವುದು ಮತ್ತು ಬಡತನ ಇವೆರಡು ಸಮಸ್ಯೆಯಾಗಿ ಕಾಡುತ್ತಿವೆ. ಎಲ್ಲವನ್ನು ಒಪ್ಪಿಕೊಂಡು ತಗ್ಗಿಬಗ್ಗಿ ನಡೆಯುವುದನ್ನು ಒಪ್ಪಿಕೊಳ್ಳದ ಕಮಲಾವತಿ ತಾನು ಹೆಣ್ಣಾಗಿರುವ ಕಾರಣದಿಂದಲೇ ಎದುರಾಗುವ ಸಮಸ್ಯೆಗಳನ್ನು ಹೆಣ್ಣು ಎನ್ನುವ ಕಾರಣದಿಂದಲೇ ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ.

ಶೇಷಮ್ಮನ ಮಗಳು ಸೌದಾಮಿನಿಯನ್ನು ನೋಡಲಿಕ್ಕೆ ಬಂದದಿನ ಕಮಲಾವತಿ ನಡೆದುಕೊಂಡ ರೀತಿ ಇದಕ್ಕೆ ಒಳ್ಳೆಯ ಉದಾಹರಣೆಯಾಗುತ್ತದೆ. ತನ್ನ ಸೌಂದರ್ಯದ ಆಕರ್ಷಕ ವ್ಯಕ್ತಿತ್ವದ ಸಂಪೂರ್ಣ ಅರಿವಿರುವ ಅವಳು ತನ್ನ ಕಾರಣಕ್ಕೆ ಬಂದ ಗಂಡು ನೋಡಲು ಬಂದಿರುವ ಹುಡುಗಿಯನ್ನು ತಿರಸ್ಕರಿಸಬಹುದು ಎನ್ನುವ ಸಾಧ್ಯತೆಗೊತ್ತಿದ್ದೂ ಅಲ್ಲೇ ಉಳಿಯಲು ಹಟ ಮಾಡುತ್ತಾಳೆ. ಸಾಲದಕ್ಕೆ ಹೆಣ್ಣು ನೋಡಲು ಬಂದವರ ಎದುರಿಗೆ ಓಡಾಡುತ್ತಾಳೆ. ಚಾವಡಿಗೆ ಕಾಣುವಂತೆ ಪಡಸಾಲೆಯ ಕಂಬದ ಸುತ್ತಲೂ ಕೈ ಹೊಸೆದುಕೊಂಡು ಓಲಾಡುತ್ತ ಸೌದಾಮಿನಿಯೊಂದಿಗೆ ಪಟ್ಟಾಂಗ ಬಿಚ್ಚಿ ಕುಳಿತುಕೊಳ್ಳುತ್ತಾಳೆ. ಅಜ್ಜಿಯ ಬಲವಂತಕ್ಕೆ ಅಲ್ಲಿಂದ ಹೊರ ಹೋಗುವ ಸಾಹಸಕ್ಕೆ ತೊಡಗುತ್ತಾಳೆ. ಕಮಲಾವತಿಯಲ್ಲಿರುವ ಬಂಡಾಯ ವಯಸ್ಸಿನ ಮೂಲದ್ದು ಹೌದು, ಸ್ವಪ್ರಜ್ಞೆಯದು ಹೌದು. ಬದುಕು ಕೊಡದಿದ್ದರೂ ಅದನ್ನ ಕಿತ್ತಾದರೂ ತಿನ್ನಬೇಕೆಂಬ ತವಕ ಅವಳಲ್ಲಿ ಕಾಣುತ್ತದೆ. ಪುಟ್ಟಮ್ಮತ್ತೆ ಸಮಾಜದ ನಿರ್ಬಂಧಗಳನ್ನು ಮೀರಲು ಹೆದರುತ್ತಾಳೆ ಆದರೆ ಮೊಮ್ಮಗಳಿಗೆ ಸಾಮಾಜಿಕ ನಿರ್ಬಂಧಗಳು, ನೈತಿಕ ನಿಯಮಗಳು ಮೂರು ಕಾಸಿಗೂ ಬೇಡದವು. ಕಮಲಾವತಿ ತನ್ನ ಸುತ್ತಮುತ್ತ ಏನಾಗುತ್ತಿದೆಯೆಂದು ಸೂಕ್ಷ್ಮವಾಗಿ ಗಮನಿಸಬಲ್ಲವಳಾಗಿದ್ದಾಳೆ. ಅಷ್ಟೇ ಅಲ್ಲ ಅದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸುತ್ತಲೂ ಇದ್ದಾಳೆ. ತನ್ನ

ಅಜ್ಜಿಯನ್ನು ಎಲ್ಲರೂ ಬೇಕಾಬಿಟ್ಟಿ ದುಡಿಸಿಕೊಳ್ಳುತ್ತಿರುವುದೂ ಅವಳಿಗೆ ಗೊತ್ತು. ಯಾರಿಗೂ ಕೇರು ಮಾಡದ ದಿಟ್ಟೆ ಅವಳು. ಅಜ್ಜಿಯದು ಬಾಗಿ ತಾಳಿಕೊಳ್ಳುವ ಗುಣವಾದರೆ ಮೊಮ್ಮಗಳದು ಸೆಟೆದು ಸ್ಥಾಪಿಸಿಕೊಳ್ಳಬಯಸುವ ಗುಣ. ಆಕೆಗೆ ಸಿನಿಮಾ ನೋಡುವುದು ಬೇಕು, ಸ್ವಂತ ಕಾಲ ಮೇಲೆ ನಿಂತುಕೊಳ್ಳುವುದು ಬೇಕು. 'ಒಂದು ಕೆಲಸ ತನಗಿದ್ದಿದ್ದರೆ ಅಜ್ಜಿಯನ್ನು ಸಾಕಿಕೊಳುತ್ತಿದ್ದ ಅಜ್ಜಿಯ ಮೇಲೆ ತನಗೂ ಪ್ರೀತಿಯಿದೆ ಎಂದು ತೋರಿಸುತ್ತಿದ್ದೆ' ಎಂದು ಕೊಳ್ಳುತ್ತಾಳೆ. ಇಲ್ಲಿ ಕಮಲಾವತಿಗೆ ಸ್ತ್ರೀವಾದ ಗೊತ್ತಿಲ್ಲ. ಆದರೆ ಅವಳ ನಡವಳಿಕೆಯಲ್ಲಿ ಹೊಸ ಕನಸುಗಳು, ಹೊಸತನದ ಹೆಣ್ಣೊಬ್ಬಳ ಉಗಮವಾಗಿರುವುದು ಕಾಣಿಸುತ್ತದೆ. ಸಹಜವೆಂಬಂತೆ ಅರಳುತ್ತಾ ಹೋಗುವ ಅವಳ ವ್ಯಕ್ತಿತ್ವ ಸ್ವಮೂಲವಾದ ಅರಿವನ್ನು ರೂಪಿಸುತ್ತದೆ. ತನ್ನಿಂದ ತಾನೇ ರೂಪಗೊಳ್ಳುವ ಇಂಥ ಅರಿವಿನ ಬಗ್ಗೆ ಲೇಖಕಿಗೂ ತುಂಬಾ ಆಸಕ್ತಿ ಇದೆ. ಓರ್ವ ಹೆಣ್ಣಾಗಿ ಪುಟ್ಟಮ್ಮತ್ತೆ ಪಟ್ಟ ಕಷ್ಟ ಅಷ್ಟಿಷ್ಟಲ್ಲ 'ಹಾಗಾದರೆ ಕಷ್ಟಪಡುವವರು ಕಷ್ಟಪಡುತ್ತಲೇ ಇರಬೇಕೆ ಇತ್ಯಾದಿ ಪ್ರಶ್ನೆಗಳು' ಕಾಡುವಷ್ಟು ಅವಳು ಕಷ್ಟಪಟ್ಟಿದ್ದಾಳೆ. ತಾಯಿಯನ್ನು ಕಳೆದುಕೊಂಡ, ಮಗಳನ್ನು ಕಳೆದುಕೊಂಡ ಪುಟ್ಟಮ್ಮತ್ತೆಗೆ ಮೊಮ್ಮಗಳು ಕಮಲಾವತಿಯೇ ಸರ್ವಸ್ವ

ಸುಖ, ಪುಳಕ, ರೋಮಾಂಚನ, ಹೋಲಿಕೆ ಇಲ್ಲದ, ಪರ್ಯಾಯವಿಲ್ಲದ ಅಪೂರ್ವ ಅನುಭವ ತಾಯ್ತನ. ಜಗತ್ತಿನ ಅಪೂರ್ವ ಸೃಷ್ಟಿಯಾದ ಜೀವ ಚೈತನ್ಯಕ್ಕೆ ಬದುಕಿನ ಏಕತಾನತೆ, ಬೇಸರ, ಜಿಗುಪ್ಸೆ, ಸಿಟ್ಟು ಎಲ್ಲವನ್ನು ಪರಿಹರಿಸಬಲ್ಲ ಶಕ್ತಿ ಇದೆ. ಹೆಣ್ಣಿನ ಬದುಕಿಗೆ ಸಾರ್ಥಕತೆಯನ್ನು ತಂದುಕೊಡುವ ಮಗುವನ್ನು ಕುರಿತಾದದ್ದು ವೈದೇಹಿಯವರ 'ಗುಲಾಬಿಯ ಮೃದು ಪಾದಗಳು' ಕಥೆ. ಬದುಕಿನ ಯಾವುದೇ ಘಟ್ಟದಲ್ಲಿಯೂ, ಯಾವುದೇ ವಯಸ್ಸಿನಲ್ಲಿಯೂ, ಮದುವೆಯಾಗದ, ತಾಯಿಯಾಗದ ಹೆಣ್ಣು ಕೂಡ ತಾಯ್ತನಕ್ಕೆ ಹಂಬಲಿಸುವುದನ್ನು ಕಥೆ ನಿರೂಪಿಸುತ್ತದೆ. ಈ ಕಥೆಯ ನಾಯಕಿಗೂ ಮದುವೆಯಾಗಿಲ್ಲ. ಆದರೂ ಆ ನೆರೆಮನೆಯ ಆ ಮಗುವಿನ ಗುಲಾಬಿ ಮೃದು ಪಾದ, ಬೆಳ್ಳಿಗೆಜ್ಜೆ ಝಣಿ ಝಣಿ ನಾದ ಎಲ್ಲವು ಅವಳನ್ನ ಮಗುವಿಗಾಗಿ ಹಂಬಲಿಸುವಂತೆ ಮಾಡುತ್ತವೆ.

ಕೌಟುಂಬಿಕ ಹಿನ್ನೆಲೆ ಇಲ್ಲದೆಯೂ ನಾಯಕಿಯ ಆತಂಕ, ನಿರಾಸೆ ಯಾವುದನ್ನು ಕಥೆಯಲ್ಲಿ ದಾಖಲಿಸದೆಯೂ ಮಗುವನ್ನು ಕಾಣುವ ಹವಣಿಕೆಯಲ್ಲಿ ಎಲ್ಲವೂ ವ್ಯಕ್ತವಾಗುವಂತೆ ಇಲ್ಲಿ ಕಥೆ ಹೆಣೆಯಲಾಗಿದೆ. ಅದು ಈ ಕಥೆಯ ವಿಶೇಷವೂ ಹೌದು.

ವಿಲಕ್ಷಣ ವ್ಯಕ್ತಿತ್ವದ ಸುತ್ತ ಹೆಣೆದ ಕುತೂಹಲಕಾರಿ ಕಥೆ 'ಅಕ್ಕು'. ಅಕ್ಕುವಿಗೆ ದೊಡ್ಡ ಕುಂಕುಮವಿದೆ ಆದರೆ ಗಂಡನಿಲ್ಲ. ಕತ್ತಿನಲ್ಲಿ ಕರಿಮಣಿಯಿದೆ, ಕರಿಮಣಿಯನ್ನು ನಾಗಂದಿಗೆಯ

ಮೂಲೆಯಲ್ಲಿಟ್ಟು ಸವಾರಿ ಹೊರಡುವ ರಿವಾಜೂ ಅಕ್ಕುವಿಗುಂಟು. 'ಅಕ್ಕ ನಿನ್ ಗಂಡ ಎಲ್ಲಿ? ಎಂದು ಕೇಳಿದರೆ ಕೇಳಿದವರ ಗ್ರಹಚಾರವನ್ನೇ ಆಕೆ ಮುಗಿಸಿ ಕೊಡುವುದಿದೆ. ಎಲ್ಲ ಸಲವೂ ಅಲ್ಲಿ ಒಮ್ಮೊಮ್ಮೆ ಗುಮ್ಮಕ್ಕಿಯಂತೆ, ಅರೆಹುಚ್ಚಿಯಂತೆ ಇದ್ದರೂ ಇದ್ದಳೆ. ಕೆಲವೊಮ್ಮೆ ಏನೇ ಹೇಗೇ ಕೆಣಕಿದರು ಕಣ್ಣು, ಮೂಗು, ಬಾಯಿ ಕೊಡಿಯಲ್ಲೆಲ್ಲ ಡೊಂಕು ಡೊಂಕಾಗಿ ನಗೆ ಬಿಕ್ಕುತ್ತ ತಲೆ ಕೊಡಕಿ ಬಿಡುವ ಗುಣವು ಅಕ್ಕುವಿಗಿದೆ. ಅವಳ ಕೈಯಲ್ಲಿ ಯಾವಾಗಲು ಒಂದು 'ಟುವಾಲು' ಇರುತ್ತೆ ಅವಳರ್ಥದಲ್ಲಿ ಟುವಾಲು ಎಂದರೆ ಕರವಸ್ತ್ರ. ಒಟ್ಟಿನಲ್ಲಿ ಅಕ್ಕುವೆಂದರೆ ಆ ಟುವಾಲು ಸಮೇತವೇ. ವಿರಸ ಸಂಬಂಧಗಳ ಪರಿಣಾಮದಿಂದ ಅರೆಹುಚ್ಚಿಯಂತಾದ ಅಕ್ಕುವಿನದು ಅರಳು ಮರಳು ವ್ಯಕ್ತಿತ್ವ ಅದಕ್ಕೆ ಸುತ್ತಲವರ ಪ್ರತಿಕ್ರಿಯೆ ಹೀಗೆ ಕಥೆ ಬೆಳೆಯುತ್ತದೆ.

ಅಜ್ಜಯ್ಯನ ಮನೆಯಲ್ಲಿ ಯಾರೂ ಸ್ವತಂತ್ರರಲ್ಲ. ಸ್ವಲ್ಪ ಸ್ವರ ಇರುವುದಾದರೆ ಅದು ವಾಸು ಚಿಕ್ಕಪ್ಪಯ್ಯನಿಗೆ, ಯಾವ ನಿರ್ಬಂಧವೂ ಇಲ್ಲದಿರುವವಳೆಂದರೆ ಅದು ಅಕ್ಕು. ಹೇಗೆ ಬೇಕಾದರೂ ತಿರುಗಿಕೊಂಡಿರಲಿ ಹೊತ್ತು ಕಳೆಯಬೇಕಲ್ಲ ಎಂಬ ಮಾಫಿ ಪಡೆದವಳು. ಹೀಗೆ ಅನಿರ್ಬಂದದಲ್ಲಿರುವ ಅಕ್ಕು ಯಾರ ಮನೆ ಊಟವನ್ನೂ ಬಿಟ್ಟವಳಲ್ಲ. ಅಕ್ಕು ಬಿಡದೆ ಹೋಗುವ ಊಟಗಳೆಂದರೆ ಬಸುರಿ ಬಯಕೆಯ ಊಟ ಮತ್ತು ನಾಮಕರಣದ್ದು.

ಅಕ್ಕು ಗಂಡು ಪಾತ್ರಕ್ಕಿಂತ ಹೆಚ್ಚು ಶಕ್ತಿವಂತಳಾಗಿ ಕಾಣುತ್ತಾಳೆ. ಪುರುಷರನ್ನು ಕುರಿತ ವ್ಯಂಗ್ಯದ ಅಸೀಮ ತಿರಸ್ಕಾರದ ಎಳೆಯೊಂದು ಈ ಕಥೆಯುದ್ದಕ್ಕೂ ಸಂಚರಿಸಿರುವುದನ್ನು ಗಮನಿಸಬಹುದು. ಈ ತಿರಸ್ಕಾರ ಗಂಡ, ಅಪ್ಪ, ಅಣ್ಣ, ಮಾವ ಯಾರ ಮೇಲೆ ಆಗಿರಲಿ ಅದು ಎಲ್ಲೂ ಪುರುಷ ದ್ವೇಷದ ರೂಪದಲ್ಲಿ ಕಾಣಿಸುವುದಿಲ್ಲ.

ವಿಷಮ ದಾಂಪತ್ಯದ ಕಾರಣಕ್ಕೆ ಅಕ್ಕು ಗಂಡನೊಂದಿಗೆ ಬದುಕು ಸಾಗಿಸುವುದಿಲ್ಲ ಮತ್ತು ತಾಯ್ತನದ ಅನುಭವವನ್ನು ಪಡೆಯುವುದಿಲ್ಲ. ಆದರೂ ಆ ಮಗುವಿಗಾಗಿ ತಾಯಿ ಅನುಭವಿಸುವಷ್ಟೇ ತೀವ್ರವಾಗಿ ಆಪ್ತವಾಗಿ ಮಗುವಿನೊಂದಿಗಿನ ಬದುಕಿಗಾಗಿ ಸ್ಪಂದಿಸಲು ಹಂಬಲಿಸುತ್ತಾಳೆ.

'ಅಮ್ಮಚ್ಚಿ' ವೈದೇಹಿ ಸೃಷ್ಟಿಸಿರುವ ಅತ್ಯಂತ ಚೈತನ್ಯಶಾಲಿ ಪಾತ್ರಗಳಲ್ಲಿ ಒಂದು. ಅವಳ ಚುರುಕುತನ, ಲವಲವಿಕೆ, ಸಂಭ್ರಮ ಕಣ್ಣು ತುಂಬುವಂಥದ್ದು. 'ಎಲ್ಲ ಇದ್ಯೆ ಬರಗು, ಯಾವ್ದೂ ಬರ್ತಿಲ್ಲೆ ಅಂತೆಳಿ ಇಪ್ಪುಗಾಗ' ಎಂದು ತನ್ನ ಪುಟ್ಟ ಗೆಳತಿಗೆ ತನಗೆ ಗೊತ್ತಿದ್ದನ್ನೆಲ್ಲ ಕಲಿಸುವ ಅಮ್ಮಚ್ಚಿಯ ಪ್ರತಿಭೆಯನ್ನು ಅವಳ ಪರಿಸರದಲ್ಲಿ ಗುರುತಿಸುವವರಿಲ್ಲ ಅಷ್ಟೆ. ಅಮ್ಮಚ್ಚಿ ತಂದೆ ಇಲ್ಲದ ಹುಡುಗಿ ಆಕೆ ಬಂಡಾಯದ ಅರಿವನ್ನು ಒಳಗಿಟ್ಟುಕೊಂಡಿರುವವಳು : ಗಟ್ಟಿಯಾದ ವೈಯಕ್ತಿಕತೆ

ಇರುವವಳು. ಯಾರಿಲ್ಲದ ಮನೆಯಲ್ಲಿ ಬೆಳೆಯುತ್ತ ವೆಂಕಪಯ್ಯನೆ ಹಕ್ಕುದಾರನಾದ ತನಗಿಂತ ಹನ್ನೆರಡು ವರ್ಷ ಚಿಕ್ಕವಳಾದ ಅಮ್ಮಚ್ಚಿಯನ್ನು ಬಲತ್ಕಾರದಿಂದಲೇ ಮದುವೆಯೂ ಆದ. ದಿನದಿಂದ ದಿನಕ್ಕೆ ಅಮ್ಮಚ್ಚಿಯ ಕಣ್ಣಲ್ಲಿ ಅಸಹ್ಯವಾಗುತ್ತಲೂ ಇದ್ದ. ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನೂ ಹರಣ ಮಾಡುತ್ತಿದ್ದ. ಕುಟುಂಬದ ಯಜಮಾನಿಕೆಯನ್ನು ತಾನೇ ವಹಿಸಿಕೊಂಡು ತನಗೂ ತನ್ನ ತಾಯಿಗೂ ತಮ್ಮದೇ ಆದ ಅಸ್ತಿತ್ವ ಇಲ್ಲದಂತೆ ಮಾಡುತ್ತಿದ್ದ ವೆಂಕಪ್ಪಯ್ಯನನ್ನು ಕಂಡರೆ ಅಮ್ಮಚ್ಚಿಗೆ ಸಿಟ್ಟು ಮತ್ತು ತಿರಸ್ಕಾರ. ತನ್ನ ಬಟ್ಟೆ, ಅಲಂಕಾರ, ತಿರುಗಾಟ ಎಲ್ಲದರಲ್ಲಿಯೂ ಮೂಗುತೂರಿಸುತ್ತಿದ್ದ ವೆಂಕಪ್ಪನನ್ನು ಕಂಡರೆ ಅಮ್ಮಚ್ಚಿಗೆ ಆಗುತ್ತಿರಲಿಲ್ಲ. ತನ್ನ ತಾಯಿಯ ಅಸಹಾಯಕತೆ ಅವಳಿಗೆ ಅರ್ಥವಾಗದಿದ್ದರೂ ವೆಂಕಪ್ಪಯ್ಯ ಹೀಗೆ ಬೆಳೆಯಲು ಅವಳೇ ಕಾರಣ ಎಂದು ಅಮ್ಮಚ್ಚಿಗೆ ಅಮ್ಮನ ಮೇಲು ಸಿಟ್ಟು. ತನ್ನ ಸಣ್ಣಪುಟ್ಟ ಆಸೆಗಳಿಗೆ ಎರವಾಗುವ ವೆಂಕಪ್ಪನನ್ನ ನಾನಾ ರೀತಿಯಲ್ಲಿ ಪ್ರತಿಭಟಿಸುತ್ತಾಳೆ.

ಗಂಡ ಸತ್ತು, ಅಮ್ಮಚ್ಚಿ ತವರಿಗೆ ವಾಪಾಸಾಗುತ್ತಾಳೆ. ಆಗ ವಾಚಾಮಗೋಚರವಾಗಿ ಬೈಗುಳ ಶುರುಮಾಡಿದ್ದ ಸೀತತ್ತೆಯ ಕಣ್ಣುಗಳಲ್ಲಿ ಆ ಬೈಗುಳದ ಗಾವು ಇರಲೇ ಇಲ್ಲ. ವೆಂಕಪ್ಪನ ಸಾವು ಸೀತತ್ತೆಗೂ ಬಿಡುಗಡೆ ತಂದಿದೆ? ಮಗಳು ವಿಧವೆಯಾದಳೆಂಬ ದುಃಖವೋ? ಅಥವಾ ಅವಳು 'ಸ್ವತಂತ್ರಳಾದಳೆಂಬ ಸಂತೋಷವೋ? ವೆಂಕಪ್ಪ ಆತ್ಮಹತ್ಯೆ ಮಾಡಿಕೊಂಡದ್ದು ನಿಜವೇ? ತಿರುಪತಿಯಲ್ಲಿ ಈ ಇಬ್ಬರ ದಾಂಪತ್ಯ ಹೇಗಿತ್ತು? ಮುಂತಾದ ಅನೇಕ ಪ್ರಶ್ನೆಗಳನ್ನೆತ್ತುವ ಕಥೆ ಹಲವು ಸಾಧ್ಯತೆಗಳನ್ನು ಒಮ್ಮೆಗೆ ತೆರೆದಿಡುತ್ತದೆ. ಹೆಣ್ಣು ಅನುಭವಿಸುವ ಶೋಷಣೆಯ ನಾನಾ ಮುಖಗಳಲ್ಲಿ ಅಮ್ಮಚ್ಚಿಯ ವ್ಯಥೆಯು ಒಂದು. **"ಸ್ತ್ರೀವಾದಿಗಳು ಎದುರಿಸುವ ಅಪಾಯ ಹಾಗೂ ಆರೋಪಗಳಿಂದ ವೈದೇಹಿ ಪಾರಾಗಿರುವುದು ಪುರುಷ ದ್ವೇಷದ ಧ್ವನಿ ಅವರ ಸಾಹಿತ್ಯದಲ್ಲಿ ಇಲ್ಲದೇ ಇರುವುದರಿಂದಲೇ ಸ್ತ್ರೀವಾದಿಗಳೆಲ್ಲರೂ ಕಡ್ಡಾಯವಾಗಿ ಪುರುಷ ದ್ವೇಷಿಗಳೇ ಆಗಿರುತ್ತಾರೆ ಎನ್ನುವುದು ಇದರ ಅರ್ಥವಲ್ಲ. ಸ್ತ್ರೀಯ ನೆಲೆಯನ್ನು ಪ್ರತಿಪಾದಿಸುವ ಶೈಲಿ ಅದಕ್ಕೆ ಬಳಸುವ ತಂತ್ರಗಳಿಂದಾಗಿಯೇ ಎಷ್ಟೋ ಬಾರಿ ಅಕಾರಣವಾಗಿ ಇಂತಹ ಆರೋಪಗಳಿಗೆ ಅವರು ಗುರಿಯಾಗಬೇಕಾಗುತ್ತದೆ".**

ವೈದೇಹಿ ಸ್ತ್ರೀವಾದದ ನೇರ ಪ್ರತಿಸ್ಪರ್ಧಿ. ಮೂಲವಾದ ದಾರಿಯನ್ನು ಅವರು ಸಾಹಿತ್ಯದಲ್ಲಿ ಬಳಸುವುದೇ ಇಲ್ಲ. ಹೆಣ್ಣನ್ನು ಅವಳ ಎಲ್ಲಾ ಸಾಧ್ಯತೆಗಳಲ್ಲಿ ಪರೀಕ್ಷಿಸುತ್ತಲೇ ಬದುಕು ಒಡ್ಡುವ ಎಲ್ಲಾ ಸವಾಲುಗಳನ್ನು ಅವಳು ಎದುರಿಸುವ ವಿವರಗಳನ್ನು ಮಂಡಿಸುತ್ತಲೇ ಪರೋಕ್ಷವಾಗಿ ವ್ಯವಸ್ಥೆಯನ್ನು ಪ್ರಶ್ನಿಸುತ್ತಾ ಹೋಗುತ್ತಾರೆ. ಪುರುಷನಿಗಿಂತ ವ್ಯವಸ್ಥೆ ಮುಖ್ಯವಾಗಿ ಕಾಣಿಸುತ್ತದೆ".[೮]

"ಜೀತದ ಅನುಭವವನ್ನು ಮೊತ್ತ ಮೊದಲು ಅನುಭವಿಸಿದ ಮಾನವ ಜೀವಿ ಎಂದರೆ ಮಹಿಳೆಯೇ. ಪುರುಷ ಜೀತದಾಳು ಹುಟ್ಟುವ ಮೊದಲೆ ಮಹಿಳೆ ಜೀತದಾಳಾಗಿದ್ದಳು".

ಅಗಸ್ಟ್‌ಬೆಜಿಲ್ ಸ್ತ್ರೀವಾದಿ ಚಿಂತಕ. ಸ್ತ್ರೀಯರ ಲೈಂಗಿಕತೆ, ಸಂತಾನೋತ್ಪತ್ತಿ ಶಕ್ತಿ, ಮನೆಚಾಕರಿ, ಮಕ್ಕಳನ್ನು ಹೆರುವುದು, ಲಾಲನೆ ಪಾಲನೆ ಇವೆಲ್ಲವು ಕುಟುಂಬದೊಂದಿಗಿನ ಹೆಣ್ಣಿನ ಸಂಬಂಧ ಕುಟುಂಬದ ಅಭಿವೃದ್ಧಿಯನ್ನು ನಿರ್ದೇಶಿಸುತ್ತವೆ. ಹೆಣ್ಣಿನ ಈ ನಿಸ್ವಾರ್ಥ ಸೇವೆಯನ್ನು ವಸ್ತುಗಳೆಂದುಕೊಂಡರೆ ಅವಳ ಪಾತಿವ್ರತ್ಯವಾಗಲಿ, ಮಾತೃತ್ವವಾಗಲಿ ಕಾಣುವುದಿಲ್ಲ.

ಸ್ತ್ರೀ ಶೋಷಣೆಯ ವಿವಿಧ ಮೂಲಗಳನ್ನು ಅದರ ಸೂಕ್ಷ್ಮಾತಿ ಸೂಕ್ಷ್ಮ ರೂಪಗಳನ್ನು, ಅದರ ಆಳ ವಿಸ್ತಾರವನ್ನು ಗುರುತಿಸುವ ಪ್ರಯತ್ನ ನಾಗವೇಣಿಯವರ ಸಾಹಿತ್ಯದಲ್ಲಿ ಸಾಧ್ಯವಾಗಿದೆ. ಹೆಣ್ಣನ್ನು ಕುರಿತು ಬದಲಾಗಬೇಕಾದ ಸ್ವಗ್ರಹಿಕೆ ಮತ್ತು ಲೋಕ ಗ್ರಹಿಕೆಗಳೆರಡನ್ನು ಇವರ ಕೆಲವು ಕಥೆ, ಲೇಖನಗಳಲ್ಲಿ ಗಮನಿಸಬಹುದಾಗಿದೆ.

"ಸೂರ್ಯನಿಗೊಂದು ವೀಳ್ಯ" ಪ್ರಬಂಧ ಸಂಕಲನ ಇದಕ್ಕೊಂದು ಒಳ್ಳೆಯ ಉದಾಹರಣೆಯಾಗಬಹುದು. ಎಣ್ಣೆ ಬಂದಾಗ ಗಾಣ ಮುರಿದರೆ? ಲೇಖನದ ಋತುಪರ್ಣ ಕಲ್ಕತ್ತಾದ ಬಾಟಾನಗರದಲ್ಲಿರುವ ವಿಧವೆ ತಾಯಿ, ತಂಗಿ, ತಮ್ಮಂದಿರನ್ನು ಸಾಕುವ ಹೊಣೆ ಹೊತ್ತ ಈಕೆ ದೂರದ ಚಿಕ್ಕಮ್ಮನ ಪರಿಚಯದಲ್ಲಿ ಆಸ್ಪತ್ರೆಯ ಆಯಾ ಕೆಲಸಕ್ಕೆ ಬರುತ್ತಾಳೆ. ಮೂರು ತಿಂಗಳ ನಂತರ ಕೆಲಸವಿಲ್ಲದೆ ಬೀದಿ ಪಾಲಾಗುವ ಸಂದರ್ಭ ಬಂದಾಗ ಆಶ್ರಯಕ್ಕಾಗಿ ಚಿಕ್ಕಮ್ಮನಿರುವ ಕಾಳಿಘಾಟ್ ಸೂಳೆಗೇರಿಗೆ ಹೋಗುತ್ತಾಳೆ. "ಸೇವನೆಗೆ ಅರ್ಹವಾದ ಹಕ್ಕಿಯೊಂದು... ತಾನಾಗಿಯೇ ಹಾರಿಬಂದು ಮನೆ ಚಾವಡಿಯ ಅಟ್ಟದಲ್ಲಿ ಗೂಡು ಕಟ್ಟುತ್ತೇನೆಂದರೆ ಬೇಟೆಗಾರ ಬೇಡವೆಂದು ಹೇಳಿಯಾನೆ"! ಆದರೆ ನಿರಾಸೆಯ ಕತ್ತಲು ಕವಿದಿದ್ದ ಋತುಪರ್ಣಳಿಗೆ ಸೂಳೆಗೇರಿಯ ಬದುಕು ಬೇಡವೆನಿಸುತ್ತಿತ್ತು. ಚಿಕ್ಕಮ್ಮ ಎಲ್ಲಿ ತನ್ನನ್ನು ವೇಶ್ಯಾ ಜೀವನಕ್ಕೆ ಇಳಿಸಿ ಬಿಡುತ್ತಾಳೋ ಎಂಬ ಚಿಂತೆಯಲ್ಲಿದ್ದ ಋತುಪರ್ಣಳಿಗೆ ಚಿಕ್ಕಮ್ಮನ ಪ್ರಭಾವದಿಂದ ಹೊಸ ಕೆಲಸವು ಹುಡುಕಿಕೊಂಡು ಬಂದಾಗ ಗೂಡಿನಿಂದ ತಪ್ಪಿಸಿಕೊಳ್ಳಲು ಹೊಸ ದಾರಿ, ಹೊಸ ಬೆಳಕು ಎಂದೇ ಹಿಂದು ಮುಂದು ಯೋಚಿಸದೆ ಒಪ್ಪಿಕೊಳ್ಳುತ್ತಾಳೆ.

ಆದರೆ ಅಸಹಾಯಕ ಹೆಣ್ಣಿಗೆ ಸಿಕ್ಕ ಕೆಲಸವಾದರು ಯಾವುದು ದಕ್ಷಿಣ ಕಲ್ಕತ್ತೆಯ ಬಂಗಲೆಯಲ್ಲಿ ಒಂಟಿಯಾಗಿರುವ ಶ್ರೀಮಂತ ಮುದಿ ವಿಧುರನಿಗೆ ಖಾಸಗಿ ಪರಿಚಾಲಿಕೆಯಾಗುವ ಕೆಲಸ! ವಿದೇಶದಲ್ಲಿ ಬದುಕುತ್ತಿರುವ ಈ ಆಗರ್ಭ ಶ್ರೀಮಂತನ ಮಕ್ಕಳು ತಮ್ಮ ಇಳಿವಯಸ್ಸಿನ ತಂದೆಯ ಎಲ್ಲಾ ರೀತಿಯ "ಯೋಗಕ್ಷೇಮ" ವಿಚಾರಣೆಗಾಗಿ ಒಬ್ಬ ಯೋಗ್ಯ ಮತ್ತು 'ಅರ್ಹ' ಪರಿಚಾರಿಕೆಯನ್ನು ತಲಾಶ್ ಮಾಡುವ ಕೆಲಸವನ್ನು ದಲ್ಲಾಳಿಯೊಬ್ಬನಿಗೆ ವಹಿಸಿದ್ದರು. ಅವನಿಂದ 'ಸಂಭಾವನೆ' ಪಡೆದ ಚಿಕ್ಕಮ್ಮ 'ಜೂಜುಗಾರ ತನ್ನ ಅಂಕದ ಕೋಳಿಯಲ್ಲಿ ತೋರುವಷ್ಟೆ'

ಕಾಳಜಿಯಿಂದ ಆಕೆಯ ಕೇರಿಯಲ್ಲಿ ಅಡ್ಡಾಡುವ ಭಾವತಾರಣನ ರಿಕ್ಷಾವನ್ನು ತಿಂಗಳ ಲೆಕ್ಕದಲ್ಲಿ ಗೊತ್ತು ಮಾಡುತ್ತಾಳೆ.

ಭಾವತಾರಣ ಋತುಪರ್ಣಳ ಪರಿಚಯ ತಿಂಗಳೊಂದರಲ್ಲಿ ಪ್ರೇಮಕ್ಕೆ ತಿರುಗುವಷ್ಟರಲ್ಲಿ ಋತುಪರ್ಣ ಮಾನಸಿಕವಾಗಿ ಕುಗ್ಗಿ ಹೋಗಿರುತ್ತಾಳೆ. ಬೆಂಗಾಲಿ ಬಾಬುವಿನ ಬಂಗಲೆಯಲ್ಲಿ ಅವಳು ನಿರ್ವಹಿಸಬೇಕಾಗಿದ್ದ 'ಕರ್ತ್ಯವ್ಯ', ಆತನ 'ಯೋಗಕ್ಷೇಮ'ವನ್ನು ನೋಡಿಕೊಳ್ಳಬೇಕಾದ ಪರಿ ಆಕೆಯನ್ನು ಸಂಪೂರ್ಣ ಮಾನಸಿಕವಾಗಿ ಘಾಸಿಗೊಳಿಸುವಂತಹದ್ದು!

ಹೆಣ್ಣು ಯಾವೆಲ್ಲ ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಾಳೆ ಎಂಬುದಕ್ಕೆ ಈ ಲೇಖನ ಒಂದು ಒಳ್ಳೆಯ ಉದಾಹರಣೆಯಾಗುತ್ತದೆ. ಕಾಮದ ಬಾಯಾರಿಕೆಗೂ ಒಂದು ವಯಸ್ಸಿನ ಮಿತಿ ಇದೆ. ಆದರೆ ಮೈತುಂಬ ಲೈಂಗಿಕ ಚಪಲಗಳ ಶ್ರೀಮಂತಿಕೆಯಿರುವ ಈ ಸಿರಿವಂತ ಮುದುಕನಿಗೆ, ಎಳೆವಯಸ್ಸಿನ ಹೆಣ್ಣುಗಳ ಜೊತೆ ಅಸಹಜ ರತಿ ವಿಲಾಸವನ್ನು ಆಡುವ ಬಾಯಾರಿಕೆ ವಿಪರೀತವಿದೆ. ಅದು ತಿಳಿದಾಗ ಋತುಪರ್ಣಳ ಸ್ಥಿತಿ ಬಿಸಿಲಲ್ಲಿ ಬಿದ್ದ ಹಸುಗೂಸಿನಂತಾಗಿತ್ತು. ಎಳೆಯದ್ದೆಂದಾದರೂ ಹಳೆಯದಕ್ಕೆ ಒಲಿಯುವುದುಂಟೆ? ಒಲಿದರೂ ಆತ್ಮಸಂತೋಷವನ್ನು ಪಡೆಯುವುದುಂಟೇ?

ಹೊಟ್ಟೆಯ ಪಾಡಿಗೆ ಸಂಬಳದ ಅಗತ್ಯವಿದ್ದರೂ ಶ್ರೀಮಂತನ ಚಪಲಗಳನ್ನು ಅರಗಿಸಿಕೊಳ್ಳಲಾಗದೆ, ಅದಕ್ಕೆ ಒಗ್ಗಿಕೊಳ್ಳಲು ಆಗದೆ, ಗೆದ್ದಲು ಹತ್ತಿದ ಮರದಂತೆ ಜೀವಚೈತನ್ಯವಿಲ್ಲದೆ ಒಣಗಿ ಹೋಗುತ್ತಾಳೆ. ವಿಷಯ ತಿಳಿದ ಭಾವತಾರಣ ಅವಳಿಗೆ ಕ್ರಿಶ್ಚಿಯನ್ ಸಂಸ್ಥೆಯಲ್ಲಿ ಕೆಲಸ ಕೊಡಿಸುತ್ತಾನೆ ಸರಿ. ಆದರೆ, ಅವಳ ಮನಸಿಗಾದ ಗಾಯ ಮಾಸುವುದಾದರು ಹೇಗೆ. ಇದ್ದಕ್ಕಿದ್ದಂತೆ ಒಂದು ದಿನ ಸಂಸಾರ ಜೀವನದ ಬಗ್ಗೆ ವೈರಾಗ್ಯ ಕವಿದಂತ ಮಾತುಗಳಾಡುತ್ತಾಳೆ. ಮನಸ್ಸಿನ ಆಘಾತಕ್ಕೆ ಪ್ರೀತಿಯನ್ನೆ ಬಲಿಕೊಡುತ್ತಾಳೆ. ಹೆಣ್ಣಿನ ಮೇಲೆ ನೆಡೆಯುವ ನೆಡೆಯುತ್ತಿರುವ ದೌರ್ಜನ್ಯ ಹಿಂಸೆಯ ಪ್ರತೀಕ ಇದಾಗಿದೆ.

'ತಾಯಿ ಅವಳೊಂದು ಅದ್ಭುತ ಶಕ್ತಿ' ತನ್ನ ಒಡಲಲ್ಲಿ ಅದೆಷ್ಟು ನೋವು ದುಃಖವನ್ನು ಬಚ್ಚಿಟ್ಟುಕೊಂಡಿರುತ್ತಾಳೆ. ತನ್ನಂತೆ ತನ್ನ ಮಕ್ಕಳು ವೇದನೆಪಟ್ಟಾಗ ಅದೆಷ್ಟು ನಾಜೂಕಾಗಿ ಸಮಾಧಾನಿಸುತ್ತಾಳೆ. 'ಹೊಕ್ಕ ಮನೆಯ ದುಃಖವನ್ನು ಕಡಲಿನ ಹಾಗೆ ಒಡಲಲ್ಲಿಟ್ಟುಕೊಂಡು ಕಾಲ ಬಂದಾಗಷ್ಟೆ ಅದನ್ನ ದಡಕ್ಕೆ ಎಸಿಬೇಕು ಮಗಾ. ತಗ್ಗಿದ ಗದ್ದೆಗೆ ಯಾವತ್ತೂ ಮೂರು ಬೆಳೆ, ಏರು ಗದ್ದೆಗೆ ಒಂದೇ ಬೆಳೆ ಎಂಬ ಸತ್ಯ ನಿಮ್ಗೆ ಗೊತ್ತಿರ್ಬೇಕು ಮಗಾ' ಅಂತ ಸಮಾಧಾನ ಮಾಡುತ್ತಾಳೆ. ಅಜ್ಜಿ, ಅಮ್ಮ, ಅಕ್ಕ, ತಂಗಿ, ಮಗಳು ಹೀಗೆ ಎಲ್ಲರೂ ಅಪಾರ ನೋವು, ದುಃಖ, ಭಾವನೆಗಳನ್ನು

ತುಂಬಿಕೊಂಡಿರುವ ಒಂದೊಂದು ಪುಟ್ಟ 'ಕಡಲು'ಗಳಿದ್ದಂತೆ ಎಲ್ಲರ ಒಡಲ ಗರ್ಭದಲ್ಲಿ ನೋವು ಹತಾಶೆಯ ಬೆಟ್ಟ ಹೊರಗೆ ನಗುವಿನ ಅಲೆಗಳು ಮಾತ್ರ ಎಂದು ಲೇಖಕಿಗೆ ಅನಿಸಿದ್ದಿದೆ.

ಬಂಡಾಯದ 'ಅಕ್ಕ', ಪರಂಪರೆಯ 'ಭಾವ' ಲೇಖನದಲ್ಲಿ ಹೆಣ್ಣಿನ ಮೇಲಾಗುವ ಶೋಷಣೆಯ ಇನ್ನೊಂದು ಮುಖವನ್ನು ಅನಾವರಣಗೊಳಿಸುತ್ತಾರೆ. ಹೆಗ್ಗೋಡಿನ 'ಚರಕ ಗ್ರಾಮೀಣ ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘ'ದ ವತಿಯಿಂದ ಹಮ್ಮಿಕೊಂಡಿದ್ದ ಚರಕೋತ್ಸವದಲ್ಲಿ 'ಗ್ರಾಮೀಣ ಮಹಿಳೆಯರೊಂದಿಗೆ ಲೇಖಕಿಯರ ಸಂವಾದ' ಎಂಬ ಒಂದು ಸಾಹಿತ್ಯ ಗೋಷ್ಠಿಯಲ್ಲಿ ಭಾಗವಹಿಸಿದ್ದವರಲ್ಲಿ ಲೇಖಕಿಯ ಬರಹಗಾರ್ತಿ 'ಅಕ್ಕ'ನೂ ಒಬ್ಬರು. ವಿದ್ಯಾವಂತ, ಪ್ರಗತಿಪರ ಚಿಂತಕ ಹಾಗೂ ಎಡಪಂಥೀಯ ವಿಚಾರಧಾರೆಗೆ ಅಂಟಿರುವ ಭಾವ, ಕೀಳರಿಮೆಯಿಂದಾಗಿ ಅಕ್ಕನಿಗೆ ನಿರಂತರವಾಗಿ ಶೋಷಣೆಗೆ ಒಳಪಡಿಸಿದ್ದ ಮನೆಯೊಡತಿಯ ಮೇಲಿನ ದೌರ್ಜನ್ಯವನ್ನು ಸುಮಾರು **'ಎರಡು ದಶಕ'**ಗಳಿಂದ ಗಮನಿಸುತ್ತಾ ಬಂದು, ಮನದೊಳಗೇ ಒಡೆಯನ ಮೇಲೆ ಸಿಡಿಯುತ್ತಾ ಒಡತಿಗಾಗಿ ಮಿಡಿಯುತ್ತಿದ್ದ ಅಕ್ಕನ ಕೆಲಸದಾಕೆ ಒಡತಿಗೆ 'ಪ್ರತಿಭಟನಾ ಶಕ್ತಿ' ತುಂಬುತ್ತಿದ್ದಳು.

ಇಲ್ಲಿ ಗಂಡ ಹೆಂಡತಿಗೆ ನೀಡುತ್ತಿರುವ ಹಿಂಸೆ ಒಂದು ಎರಡು ದಿನದ್ದಲ್ಲ, ವರ್ಷದ್ದಲ್ಲ ಎರಡು ದಶಕದ್ದು. ಮದುವೆಗಿಂತ ಮೊದಲೇ ಪಾರಂಪರಿಕ ಸಮಾಜ ವ್ಯವಸ್ಥೆಯನ್ನು ಪ್ರತಿಭಟಿಸುವಂತಹ ಕವನಗಳನ್ನು ಬರೆಯುತ್ತಿದ್ದ ಈಕೆಯನ್ನು ಇಷ್ಟಪಟ್ಟೇ ಮದುವೆ ಆದವನು ಮದುವೆಯಾದ ನಂತರ ಯಾಕೋ ಈ ಕನಸುಗಾರ್ತಿ 'ಅಕ್ಕ'ನ ಪ್ರತಿಭಟನೆಯ ಕಾವ್ಯಗಳು ಇಷ್ಟವಾಗುತ್ತಿರಲಿಲ್ಲವೋ ಅಥವಾ ಆಕೆಯ ಬಂಡಾಯದ ಹೋರಾಟಗಳು ಹಿಡಿಸುತ್ತಿರಲಿಲ್ಲವೋ ಏನೋ? ಮನೆಯಲ್ಲಿ ಆತನಿಂದ ಶೋಷಣೆಯ ವಿವಿಧ 'ಮಾದರಿ ಪ್ರಯೋಗ'ಗಳು ಆರಂಭವಾದವು. ಸಾಹಿತ್ಯದ ಮೂಲಕ ಬಂಡಾಯ ಸುಲಭವಿರಬಹುದು ಆದರೆ ಬದುಕಿನಲ್ಲಿ ಬಂಡಾಯ ಸುಲಭವಲ್ಲ ಎಂಬುದನ್ನು ಅರ್ಥೈಸಿಕೊಂಡ 'ಅಕ್ಕ' ಮೂರು ಮಕ್ಕಳ ಜೊತೆ ಗಂಡನ ಶೋಷಣೆಯನ್ನು ಸಂಭಾಳಿಸಿಕೊಂಡು ಆತನ ಹೊಡೆತ, ಬೈಗುಳ, ಹೀಗಳೆಯುವಿಕೆಯ ಜತೆಗೆ ಸಾಹಿತ್ಯದಲ್ಲೂ ಬಂಡಾಯವನ್ನು ಸಂಭಾಳಿಸಿಕೊಂಡು ಸುಮಾರು ಎರಡು ದಶಕಗಳ ದಾಂಪತ್ಯ ಜೀವನವನ್ನು ಆತನೊಂದಿಗೆ ಕಳೆಯುತ್ತಾಳೆ.

ಇದು ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆಗೆ ಇನ್ನೊಂದು ಮುಖ. ಆದರೆ ಈ ಲೇಖನದ ಕೊನೆ ಅದ್ಭುತವಾಗಿ ಮೂಡಿಬಂದಿದೆ. ಅಕ್ಕ ಮತ್ತು ಮಕ್ಕಳ ತೀವ್ರ ಪ್ರತಿರೋಧದ ನಂತರ 'ಭಾವ' ಶೋಷಣೆ ಮತ್ತು ಹಿಂಸೆ ಎಂಬ ಎರಡು ಪದಗಳನ್ನು ಸಂಪೂರ್ಣ ಮರೆತು

ಕಳೆದ ಹತ್ತು ವರ್ಷಗಳಿಂದ ಎಲ್ಲ ಮರೆತು ತುಂಬಾ ಮೆದುವಾಗಿ, ಮಾನವೀಯವಾಗಿ ಅಕ್ಕನ ಜೊತೆ ನಡೆದುಕೊಳ್ಳುತ್ತಿದ್ದಾನೆ.

ಶೋಷಣೆಯನ್ನು ಪ್ರತಿಭಟಿಸಿ ಪ್ರತಿರೋಧ ವ್ಯಕ್ತಪಡಿಸಿದಾಗ ಮಾತ್ರ ಹಿಂಸೆಯಿಂದ ಪಾರಾಗಲು ಸಾಧ್ಯ ಎಂಬುದು ಇಲ್ಲಿ ಮನವರಿಕೆಯಾಗುತ್ತದೆ. ಅದಕ್ಕೂ ಮೊದಲು ಶೋಷಣೆಯ ಅನಾವರಣವಾಗಬೇಕು ಅದು ಈ ಲೇಖನದಲ್ಲಿ ಸಾಧ್ಯವಾಗಿದೆ.

ಸ್ತ್ರೀ ವಿಶಿಷ್ಟ ಶಕ್ತಿಯ ಅನಾವರಣಕ್ಕೆ ಇದೇ ಸಂಕಲನದ 'ಕಲ್ಲು ಬಂಡೆಯ ಮೇಲೆ ಹಸಿರು ಕ್ರಾಂತಿ' ಲೇಖನ ಒಂದು ಮಹತ್ವದ ದಾಖಲೆಯಾಗಬಹುದೇನೋ. ಶೇಖವ್ವ ಎಂಬುವವಳು ಈ ಕಥಾನಕದ ಸಾಧಕಿ. ಇವಳು ಕೊಪ್ಪಳ ಜಿಲ್ಲೆಯ ಕಲ್ಲುತಾವರೆಗೇರಿಯಲ್ಲಿ ಹುಟ್ಟಿದವಳು. ತನ್ನ ಹದಿನಾಲ್ಕರ ಹರೆಯದಲ್ಲೆ ಅದೇ ಗ್ರಾಮದ ಹುಚ್ಚಪ್ಪನನ್ನು ಮದುವೆಯಾಗಿ ಹೊಸ ಬದುಕಿಗೆ ಕಾಲಿಟ್ಟವಳು. ಆಕೆಯ ಗಂಡನದ್ದು ಶಾಂತ ಸ್ವಭಾವ. ಸ್ವಲ್ಪ ಮಬ್ಬು, ಚುರುಕುತನ ಎಂಬುದಿಲ್ಲದವನು. ಮೌನಿಯಾಗಿಯೇ ಉಳಿದವನಿಗೆ ಪಿತ್ರಾರ್ಜಿತವಾಗಿ ಪಾಲಿಗೆ ಬಂದಿದ್ದು ಹದಿನಾರು ಎಕ್ರೆ ಹಾಸು ಬಂಡೆಗಳುಳ್ಳ ಒಣಭೂಮಿ. ಶೇಖವ್ವ ಮದುವೆಯಾದ ಮೊದಲಲ್ಲಿ ಅದೇ ಕಲ್ಲು ಬಂಡೆಗಳ ಆಚೀಚೆಗೆ ಸಂದುಗೊಂದಿನಲ್ಲಿದ್ದ ಒಂದಷ್ಟು ಖಾಲಿ ಭೂಮಿಯನ್ನು ಉತ್ತು ಬಿತ್ತಿ ಹಸಿರು ಬೆಳಸಿ ಬದುಕು ನಡೆಸುತ್ತಾಳೆ. ಆದರೆ ಆಕೆ ಸಂಸಾರ ಬೆಳೆದಾಗ ಆ ಜಮೀನು ಆಕೆಗೆ ಸಾಕಗಲಿಲ್ಲ. ಆದರೆ ಭೂಮಿಯನ್ನು ನಂಬಿದವರಿಗೆ ಅದು ಮೋಸ ಮಾಡಲ್ಲ ಎಂಬುದು ಆಕೆಗೆ ತಿಳಿದಿತ್ತು.

ಹಾಗಾಗಿ ಮೊದಲು ಕಲ್ಲುಬಂಡೆಗಳ ಜೊತೆ ಗೆಳೆತನ ಮಾಡಿಕೊಂಡ ಶೇಖವ್ವ ಕುಂಬಾರನ ಮನೆಯಿಂದ ಮಡಿಕೆಗಳನ್ನು ತಂದು ನೀರು ಹನಿಸಿದ ಮಣ್ಣು, ಗೊಬ್ಬರ, ಹಸಿಸೊಪ್ಪು ತುಂಬಿಸಿ ಅವುಗಳನ್ನು ಹಾಸುಗಲ್ಲುಗಳ ತಗ್ಗು, ಪೊಟರೆ, ಸಂದುಗೊಂದುಗಳಲ್ಲಿ ಕವುಚಿ ಹಾಕಿ ಅದರ ನಡು ನೆತ್ತಿಗೊಂದು ದೊಡ್ಡ ತೂತು ಕೊರೆದು ಕುಂಬಳಕಾಯಿ, ತುಪ್ರೆಕಾಯಿ, ಹಾಲುಸೋರೆ ಬೀಜಗಳನ್ನು ತೂತಿನೊಳಗೆ ಸೇರಿಸಿ ಎರಡು ಮೂರು ಅಮವಾಸ್ಯೆ ಕಳೆಯುವುದರೊಳಗೆ ಆ ಬಳ್ಳಿಗಳೊಳಗೆ ಇನ್ನೂರು ಕಾಯಿಗಳಿಗಿಂತಲೂ ಹೆಚ್ಚು ಕಾಯಿಗಳನ್ನು ಬೆಳೆಯುತ್ತಾಳೆ.

ಸುಮಾರು ಅರ್ಧಎಕರೆ ಜಾಗಕ್ಕೆ. ಕೆರೆಯಹೂಳನ್ನುಎಬ್ಬಿಸಿ ಮನೆಯ ಎತ್ತಿನ ಗಾಡಿಗಳನ್ನೇ ಹೂಡಿ ಹಾಸು ಬಂಡೆಗಳ ಮೇಲೆ ಎರಡೆರಡು ಮೊಳ ದಪ್ಪಕ್ಕೆ ಫಲವತ್ತಾದ ಮಣ್ಣು ಸುರಿದು ತನ್ನಸುಪರ್ದಿಗೆ ಬಂದಿದ್ದ ತೆರೆದಬಾವಿಯ ನೀರನ್ನು ಬಳಸಿ ಆಳಬೇಕು ಬಿಡದ ಮೆಣಸಿನಕಾಯಿ, ಚವಳಿ, ಬೆಂಡೆ, ಕನಕಾಂಬರ, ಹೀರೆಕಾಯಿ ಬೆಳೆ ಬೆಳೆಯುತ್ತಾಳೆ. ಈ ಬೆಳೆಗಳು ಆರ್ಥಿಕ

ಸಂತೃಪ್ತಿಯನ್ನು ತಂದುಕೊಟ್ಟ ಮೇಲೆ ಮೂರ್‍ನಾಲ್ಕು ಟ್ರಾಕ್ಟರ್‌ಗಳನ್ನು ಬಳಸಿ ಇನ್ನುಳಿದ ಹಾಸುಬಂಡೆಗಳ ಮೇಲೆ ಮಣ್ಣುಸರಿಸಿ, ಜೋಳ, ಶೇಂಗಾ, ಹತ್ತಿ ಬೆಳಸಿ ಚಿನ್ನದ ಬೆಳೆ ತೆಗೆಯುತ್ತಾಳೆ. ಮಣ್ಣು ಫಲವತ್ತಾಗಿರುವಂತೆ ಕೊಟ್ಟಿಗೆ ಸೆಗಣಿ, ಗಂಜಲ, ಎರೆಹುಳು ಗೊಬ್ಬರವನ್ನು ಕಡ್ಡಾಯವಾಗಿ ತನ್ನ ಮಣ್ಣಿಗೆ ಉಣಿಸುತ್ತಾಳೆ.

ಇಷ್ಟಕ್ಕೆ ಶೇಖವ್ವನ ಸಾಹಸಯಾತ್ರೆ ಮುಗಿಯುವುದಿಲ್ಲ. ತನ್ನ ಹೊಲದಲ್ಲಿ ದೆವ್ವದಂತೆ ನಿಂತಿದ್ದ ಬಂಡೆಗಳ ಸಂದುಗಳಲ್ಲಿ ತೆಂಗು, ಮಾವು, ನಿಂಬೆ, ಚಿಕ್ಕು, ಪೇರಲೆ, ಸೀತಾಫಲ ಗಿಡಗಳನ್ನು ನಾಟಿ ಮಾಡಿಸಿ ಇಡಿ ನಾಡಿಗೆ ಮಾದರಿಯಾದ ಹಳ್ಳಿಯ ಅನಕ್ಷರಸ್ಥ ಈ ಶೇಖವ್ವನಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯ 'ಶ್ರೇಷ್ಠ ಕೃಷಿ ಮಹಿಳೆ' ಪ್ರಶಸ್ತಿ ನೀಡಿ ಗೌರವಿಸಿದೆ.

ನಿಜವಾಗಿಯೂ ಸ್ತ್ರೀ ಶಕ್ತಿ ಎಷ್ಟು ವಿಶಿಷ್ಟವಾದದ್ದು ಅವಳಿಂದ ಸಾಧ್ಯವಾಗದೆ ಇರುವುದು ಯಾವುದು ಇಲ್ಲ ಎಂಬುದು ಇಲ್ಲಿ ಸಾಬೀತಾಗಿದೆ. ಸ್ತ್ರೀ ವಿಶೇಷಗಳಲ್ಲಿ ತಾಯ್ತನವು ಒಂದು. ನಾನು ಈ ಮೊದಲೆ ಚರ್ಚಿಸಿದಂತೆ ತಾಯ್ತತನ ಎಂಬುದು ತಾಯಿಯಾದಾಗ ಮಾತ್ರ ಹೆಣ್ಣಿಗೆ ಬರುವ ಶಕ್ತಿ ಅದಲ್ಲ, ಅದು ಪ್ರತಿ ಹೆಣ್ಣಿನ ಜನನದಲ್ಲೆ ಗರ್ಭಿಸಿ ಕೊಂಡಿರುವಂತದ್ದು ಎಂದು. 'ಇವಳ ತಾಯೆಂದರೆ ಸಾಕೆ?!' ಲೇಖಿನ ತಾಯ್ತನವನ್ನು ಕುರಿತ ವಿಭಿನ್ನವಾದ ಲೇಖನವಾಗಿದೆ. ತಾಯಮ್ಮನ ಗುಡಿಸಲಿಗೆ ರಾತ್ರೋರಾತ್ರಿ ಬಾಗಿಲು ತಟ್ಟಿ ಒಳಗೆ ಬಂದ ಲಂಗ ದಾವಣಿತೊಟ್ಟ ಹದಿಹರೆಯದ ಹದಿನಾರರ ಹುಡುಗಿ ಅವಳ ಮುಖದಲ್ಲಿದ್ದ ಗಾಬರಿ ಕಣ್ಣಲಿದ್ದ ಭಯ ಕಂಡು ತಾಯಮ್ಮ ಅಪರಾತ್ರಿಯಲ್ಲಿ ಹೀಗೆ ಬಂದ ಕಾರಣವೇನೆಂದು ಹುಡುಗಿಯಲ್ಲಿ ವಿಚಾರಿಸಿದಾಗ ಅವಳ ಕಣ್ಣಿಂದ ನೀರ ಮಾಲೆಯೇ ವಿನಃ ಮಾತಿನ ಸುಳಿವಿಲ್ಲ. ಬೆಳಗ್ಗೆ ವಿಚಾರಿಸಿದರಾಯಿತು ಅಂತ ಮಗಳ ಪಕ್ಕ ಚಾಪೆ ಹಾಸಿ ಮಲಗಿಸುತ್ತಾಳೆ. ಆದರೆ ಆ ಹುಡುಗಿ ಬಾಗಿಲು ತೆಗೆದು ಹೊರಗೆ ಹೋಗಿ ಬರುತ್ತಿದ್ದದ್ದನ್ನು ಕಂಡು ತಾಯವ್ವನಿಗೆ ಗಾಬರಿ ಆಗುತ್ತೆ. ಮಲಗಿದಲ್ಲೆ ಸಣ್ಣಕೆ ನರಳ ತೊಡಗಿದಾಗ ತಾಯಮ್ಮನ ತಾಯ್ತನ ಜಾಗೃತಗೊಳ್ಳುತ್ತೆ. ತಡಮಾಡದೆ ಬಸುರಿ ಹೊಕ್ಕಳಿಗೆ ಹರಳೆಣ್ಣೆ ಸವರಿ ಆ ಸ್ಥಿತಿಯಲ್ಲೆ ಬಸುರಿಯನ್ನು ರಮಿಸಿ ಆಕೆಯ ಕಥೆ ಕೇಳಿಕೊಳ್ಳುತ್ತಾಳೆ. ಯುವಕನೊಬ್ಬನಲ್ಲಿ ಸಲುಗೆ ಬೆಳೆದು ಮನಸ್ಸಿನ ವ್ಯಾಪಾರಕ್ಕೆ ಹುಡುಗಿ ಬಲಿಯಾದಾಗ ಸಮುದಾಯದ ಭಯ ಹಾಗೂ ಮರ್ಯಾದೆಗೆ ಅಂಜಿದ ಹೆತ್ತವರು ನಿಷ್ಕರುಣೆಯಿಂದ ಬಸುರಿಯನ್ನು ಬೀದಿಗೆ ಅಟ್ಟಿದಾಗ ದಿಕ್ಕೆಟ್ಟ ಹುಡುಗಿ ಆಸರೆಗಾಗಿ ಬಂದದ್ದು ತಾಯಮ್ಮನ ಊರಿನ ಪಕ್ಕದಲ್ಲಿರುವ ದೊಡ್ಡಮ್ಮನ ಮನೆಗೆ. ಕತ್ತಲಾದ್ದರಿಂದ ಭಯದಿಂದ ಕಂಗೆಟ್ಟ ಹುಡುಗಿ ತಾಯಮ್ಮನ ಗುಡಿಸಲ ಬಾಗಿಲು ತಟ್ಟುತ್ತಾಳೆ.

ಇತ್ತರ ಬಸಿರು ಬೇನೆ ಹೆಚ್ಚಾಗಿ ಮಗುವು ಹುಟ್ಟುತ್ತದೆ. ಆದರೆ ಮಗುವಿನ ಮುಖ ನೋಡಲು ಒಪ್ಪದ ಬಾಣಂತಿ ನಾನ್ಯಾವ ಮಗೂನ ಹಡ್ದಿಲ್ಲ ಅಂದ್ಕೊತೀನಿ ನನಗದರ ಮುಖ ನೋಡಕ್ಕೂ ಇಷ್ಟ ಇಲ್ಲ ಅಂತ ನಿಂತಕಾಲಲ್ಲೆ ಹೊರಟು ನಿಂತಾಗ ತಾಯಮ್ಮನ ಗಂಡ, ಮಕ್ಕಳು ಎಲ್ಲಾ ಬೈಗುಳಕ್ಕೆ ಇಳಿದು ಬಿಟ್ಟಿದ್ದರು. ಆದರೆ ತಾಯಮ್ಮನ ಕಿರಿ ಮಗಳಿಗೆ ಮದುವೆಯಾಗಿ ಅದೆಷ್ಟೋವರ್ಷವಾಗಿದ್ದರು ಮಕ್ಕಳಾಗಿರಲಿಲ್ಲ. ಈ ಮಗು ಅವಳ ತಾಯ್ತನವನ್ನು ತುಂಬಿಕೊಟ್ಟಿತೆಂದು ಮಗುವನ್ನು ತಾನೆ ಸಾಕಿಕೊಳ್ಳಲು ಮುಂದಾಗುತ್ತಾಳೆ.

ತಾಯಮ್ಮನ ಹೆಣ್ಮಕ್ಕಳು ಅಕ್ಕಪಕ್ಕದ ಗುಡಿಸಲವರು ಒಂದ್ಹತ್ತು ದಿನಕ್ಕಾದ್ರೂ ಮಗುವಿನ ಜೊತೆ ಇದ್ದು ಹೋಗವ್ವ ಎಂದರು ಒಪ್ಪದಿದ್ದಾಗ ಆ ಹುಡುಗಿಯ ಹಠ ಕಂಡು ಬೇಸತ್ತ ತಾಯವ್ವ "ಇರ್ಲಿ ಬಿಡು ನನ್ನ ಆರು ಮಕ್ಳ ಜೊತೆಗೆ ಇದೊಂದು ನಂಗೆ ಏಳನೇ ಮಗು" ಎಂದು ತನ್ನನ್ನು ತಾನೇ ಸಂತೈಸಿಕೊಳ್ಳುತ್ತಾ ಆ ಬಾಣಂತಿಗೆ ಒಂದಷ್ಟು ರವೆಗಂಜಿ ಮಾಡಿಕೊಟ್ಟು 'ಆಕೆಯ ಕಷ್ಟಕಾಲಕ್ಕಿರಲಿ' ಎಂದು ತಾನು ಕೂಡಿಟ್ಟಿದ್ದ ಹಣದಿಂದ ನೂರರ ಐದು ನೋಟುಗಳನ್ನು ತೆಗೆದು ಬಾಣಂತಿಯ ಕೈಗಿಟ್ಟಳು. ಒಪ್ಪಿಗೆ ಸಿಕ್ಕೊಡನೆ ಮುಖಕ್ಕೆ ಪೌಡರು ಹಚ್ಚಿ ತಾಯಮ್ಮನದ್ದೇ ಸೀರೆಯುಟ್ಟು ಹೋದ ಮಹಾತಾಯಿ ತಾಯಮ್ಮನ ಗುಡಿಸಲ ಕಡೆ ಮತ್ತೆ ತಲೆಹಾಕಿಲ್ಲ. ಆದ್ರೆ ಈ ತಾಯಮ್ಮ ಆಕೆ ಮತ್ತೇನಾದರೂ ಮರಳಿ ಬಂದರೆ... ಈ ಮಗುವನ್ನು ಕಳೆದುಕೊಂಡ ನಾನ್ಹೇಗೆ ಬದುಕಲಿ ಎಂದು ಕಣ್ಣಾಲಿಗಳಲ್ಲಿ ನೀರು ತುಂಬಿಸಿಕೊಳ್ಳುವಷ್ಟು ಮಗುವನ್ನು ಹಚ್ಚಿಕೊಂಡಿದ್ದಾಳೆ.

'ತಾಯಮ್ಮ' ಎಂಬ ಅನ್ವರ್ಥನಾಮವನ್ನು ಹೊಂದಿರುವ ಈ ಮಹಾತಾಯಿ ವಾತ್ಸಲ್ಯದ ಕರುಣಾಮಯಿ. ಇಂತಹ ಸನ್ನಿವೇಶಗಳನ್ನು ತಾಯಿಯಾದವಳು ಮಾತ್ರ ಎದುರಿಸಲು ಸಾಧ್ಯ ಕಾರಣ ಅವಳಿಗೆ ಆ ವಿಶಿಷ್ಟ ಶಕ್ತಿ ಇದೆ.

ತಾಯ್ತನದ ಹೆಚ್ಚುಗಾರಿಕೆಯನ್ನ ಪ್ರತಿಬಿಂಬಿಸುವ ಇದೇ ಮಾದರಿಯ ಮತ್ತೊಂದು ಲೇಖನ 'ಹೆಣ್ಣು ಮಾಯೆಯಲ್ಲ'. ಇಲ್ಲಿಯೂ ಅಷ್ಟೆ ತೆಂಗಿನ ಮರವೊಂದರ ಬುಡದಲ್ಲಿ ಯಾರೂ ಆಗತಾನೆ ಹುಟ್ಟಿದ ಮಗುವನ್ನು ರಕ್ತ ಮಾಸು ಕಸದ ಜೊತೆ ಹಸಿರುಗೀರು ಟವೆಲ್ಲಿನ ಮೇಲೆ ಮಲಗಿಸಿ ಹೋಗಿದ್ದರು. ಆ ಮಗುವನ್ನ ಕಂಡ ಎಷ್ಟೊ ಮಂದಿ ದೂರಕ್ಕೆ ನಿಂತು ನೋಡುತ್ತಿದ್ದರು. ವಾಸಂತಿ ಎಂಬಾಕೆ ನಾವೀ ಸಾಕೋಣ್ವಾ ಅಂತ ಅಪ್ಪನ ಕೇಳಿ ಬೈಸಿಕೊಂಡ್ಲು, ಲೇಖಕಿಯನ್ನು ಅಮ್ಮ ನೀವೇ ಸಾಕ್ಬಹುದಲ್ಲಮ್ಮ ಅಂದ್ಲು ಆದರೆ ಆಕೆಯ ಚಡಪಡಿಕೆ ಹೆಚ್ಚಾಯಿತೆ ಹೊರತು ಯಾರು ಒಂದು ತೀರ್ಮಾನಕ್ಕೆ ಬರಲಿಲ್ಲ.

ಪಳನಿಯಪ್ಪನ ಓಣಿಯ ಬೇಡರ ಓಬಮ್ಮ ತನ್ನ ಮೂವರು ಮಕ್ಕಳ ಜೊತೆ ಕಬ್ಬು ಕಡಿಯಲು ಹೊರಟವಳ ದಿಟ್ಟಿಗೆ ಆ ಅನಾಥ ಮಗುವಿನ ಸುದ್ದಿ ಬಿದ್ದಿದ್ದೇ ತಡ! ಗಾಡಿ ಇಳಿದು ಬಂದು ಮಾಸು ಸಮೇತ ಎತ್ತಿಕೊಂಡು ಎದೆಗೆ ಆನಿಸಿಕೊಳ್ಳುತ್ತಾಳೆ.

ಕಮಲಾಪುರದ ಕೆರೆ ಪಕ್ಕದಲ್ಲಿರುವ ಗುಡಿಸಲ ಒಡತಿ ಓಬಮ್ಮನಿಗೆ ನಾಲ್ಕು ಗಂಡುಮಕ್ಕಳು. ಇಬ್ಬರು ಮೊಮ್ಮಕ್ಕಳಿದ್ದರೂ ಮನೆಯಲ್ಲಿ ತನ್ನದಾದ ಹೆಣ್ಣು ಮಗಳ ಗೆಜ್ಜೆ ಸದ್ದಿಲ್ಲ ಎಂಬ ಕೊರಗಿತ್ತು. ಇದೀಗ ಈ ಮಗು ತನ್ನ ಕೊರತೆಯನ್ನು ನೀಗಿಸಿದ ಲಕ್ಷ್ಮಿ ಎಂದು ಮುದ್ದಿಸುತ್ತಾಳೆ. ಸದ್ಯಕ್ಕೆ ಓಬಮ್ಮನ ಹಿರಿಸೊಸೆ ಮಗುವಿಗೆ ಎದೆಹಾಲು ಕುಡಿಸುತ್ತಿದ್ದಾಳೆ. ಮಗುವಿಗೆ ಮುಂದಿನ ಎರಡು ವರ್ಷಕ್ಕಾಗುವಷ್ಟು ಹಾಲುಣಿಸುವ ತಾಯಂದಿರನ್ನು ತಲಾಶ್ ಮಾಡಿಟ್ಟಿರುವ ಈ ಮಹಾತಾಯಿ ಮಾತೃ ವಾತ್ಸಲ್ಯವನ್ನು ತನ್ನ ದೇಹವಿಡೀ ತುಳುಕಿಸಿಕೊಂಡ ಮಹಾನ್ ಶಕ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ.

ಈ ಎರಡು ಲೇಖನಗಳಲ್ಲಿ ಬರುವ ತಾಯಮ್ಮನಾಗಲಿ, ಓಬಮ್ಮನಾಗಲಿ ಆರ್ಥಿಕವಾಗಿ ಸಬಲರೇನಲ್ಲ, ಪುಟ್ಟ ಗುಡಿಸಲಿನಲ್ಲಿ ದೊಡ್ಡ ಸಂಸಾರವನ್ನು ಹೂಡಿಕೊಂಡಿರುವವರು ಆದ್ರೆ ಇಬ್ಬರಲ್ಲಿ ಬಡತನ ಒಂದು ಸಮಸ್ಯೆಯಾಗಿ ಕಾಣದೆ ತಾಯ್ತನವೆ ಮೈವೆತ್ತ ಮಾತೃ ಸ್ವರೂಪಿ ದೇವತೆಯಾಗಿ ಕಾಣಿಸುತ್ತಿದ್ದಾರೆ. ತಾಯಮ್ಮ ಓಬಮ್ಮ ಹೆಣ್ಣಾದ್ದರಿಂದಲೇ ಇವೆಲ್ಲ ಸಾಧ್ಯವಾಗಿರುವುದು ತಾಯಿ ಎಂದೆಂದಿಗೂ ಚೈತನ್ಯದ ಚಿಲುಮೆಯೆ ಅಳಿವು, ಉಳಿವು ಎರಡು ಅವಳಿಂದಲೇ ಸಾಧ್ಯ ಎಂಬುದು ಇಲ್ಲಿ ಸಾಬೀತಾಗಿದೆ.

ಸ್ತ್ರೀ ವಿಶಿಷ್ಟ ಶಕ್ತಿಯ ಅನಾವರಣಕ್ಕೆ 'ನೀರ ಮೇಲಿನ ಕನಸು' ಲೇಖನ ನಾಗವೇಣಿಯವರ ವಿಶಿಷ್ಟ ರಚನೆಗಳಲ್ಲಿ ಒಂದಾಗಿದೆ. ಕೆರೆದಂಡೆಯ ಕೂಗಳತೆಯ ದೂರದಲ್ಲಿ ಬದುಕುತ್ತಿರುವ ತಮಿಳು ಬೆಸ್ತರ ಜೋಡಿಗಳಲ್ಲಿ ಪೈನಿ ಮತ್ತು ಆತನ ಹೆಂಡತಿ ಲಚುಮಿ ಕೂಡ ಒಂದು. ಪೈನಿ ಕುಡುಕ ಲಚುಮಿ ತನ್ನ ಸಂಸಾರದ ಬಡತನ, ಗಂಡನ ನಿರ್ಲಕ್ಷ್ಯತನ ಹಾಗೂ ಆತನ ಕುಡಿತದ ಬಗ್ಗೆಯೇ ಹೇಳಿ ಕಣ್ಣೀರು ಸುರಿಸುವುದಿದೆ. ಇತ್ತೀಚೆಗಂತೂ ತೀರಾ ಅಂತರ್ಮುಖಿಯಾಗುತ್ತಿದ್ದಾಳೆ. ಪೈನಿಯ ಜೊತೆ ಲಚುಮಿ ಯಾವಾಗಲು ಹರಿಗೋಲು ಏರ್ಬೇಕು. ಯಾಕೋ ಪೈನಿ ನಿಂಗೊಬ್ಬಿಗೆ ಮೀನು ಹಿಡಿಯೋಕೆ ಆಗಲ್ಲೊನೊ ಅಂದ್ರೆ ಮಕ್ಳು ಇನ್ನೂ ಚಿಕ್ಕವರಮ್ಮ ಈ ಹರಿಗೋಲು 'ಬೇಲೆನ್ಸ್'ಗೆ ಇಬ್ರು ಆ ಕಡೆ ಈ ಕಡೆ ಭಾರದವರು ಬೇಕಮ್ಮ ಅಂತ ಹೇಳ್ತಿದ್ದ. ಅದಕ್ಕೆ ತಟ್ಟನೆ ಲಚುಮಿ ತಣ್ಣನೆ 'ಹೌದಮ್ಮ, ನಾನು ಇವನ್ಜೊತೆ ಬರೂದು... ನಮ್ಮ ಹರಿಗೋಲು ಬುಟ್ಟಿ ಬೇಲೆನ್ಸ್‌ಗೆ ಮತ್ತು ಇವನ ಜೀವದ ಬೇಲೆನ್ಸ್‌ಗೂ ಕೂಡಾ' ಅಂತ ಅಂದಿದ್ಲು. ಎಷ್ಟೋ ಹೆಂಗಸರು

ತಮ್ಮ ಸಂಸಾರದ ಬ್ಯಾಲೆನ್ಸ್‌ಗಾಗಿ ಹೀಗೆಯೇ... ಪೈನಿಯ ಹೆಂಡತಿಯಂತೆಯೇ ದಿನಾ ತಮ್ಮ ಗಂಡಂದಿರ ಜೊತೆ ಹರಿಗೋಲ ಬ್ಯಾಲೆನ್ಸ್‌ಗಾಗಿ ಕೆರೆದಂಡೆ ಏರುವುದು ಒಂದು ಮಾಮೂಲು ದೃಶ್ಯವಾಗಿದೆ.

ಪೈನಿ ಹರಿಗೋಲಲ್ಲಿ ನಿಂತು ಬಲೆ ಎಳೆಯುವಾಗ ತಲೆ ಸುತ್ತು ಬಿದ್ದು ಬಲೆಯೊಳಗೆ ಸಿಲುಕಿ ಒದ್ದಾಡಿ ಪ್ರಾಣತ್ಯಾಗ ಮಾಡಿದ್ದಾನೆ. ನೀರು ಪಾಲಾದ ಲಚುಮಿ ಈಜಿ ಬದುಕಿದ್ದಾಳೆ. ಈಗ ಅಂತರ್ಮುಖಿಯಾದ ಲಚುಮಿ ಸಂಸಾರವೆಂಬ ಸಾಗರವನ್ನು ಈಜ ಬೇಕಿದೆ. ತಾನು ತೊಟ್ಟಿದ ಸೀರೆಯನ್ನು ಕಚ್ಚೆ ಬಿಗಿದು ಏಕಾಂಗಿ ಲಚುಮಿ, ಹುಷಾರಾಗಿ ಕೆರೆದಂಡಗೆ ಇಳಿದವಳೇ, ದಂಡೆಯ ಕಲ್ಲುಗಳಿಗೆ ಆನಿಸಿ ಇಟ್ಟಿದ್ದ ಹರಿಗೋಲನ್ನು ನಿಧಾನಕ್ಕೆ ದಡದ ನೀರಿಗಿಳಿಸಿಕೊಂಡು, ಪಕ್ಕದಲ್ಲೇ ಇರಿಸಿದ್ದ ಬಂಡೆಕಲ್ಲೊಂದನ್ನು ಕಷ್ಟಪಟ್ಟು ಎತ್ತಿ, ಹರಿಗೋಲು ಬುಟ್ಟಿಯ ಒಂದು ಪಕ್ಕದಲ್ಲಿರಿಸಿ, ಆ ಕಲ್ಲುಗಳ ವಿರುದ್ಧ ದಿಕ್ಕಿಗೆ ತಾನು ಹರಿಗೋಲು ಏರಿ ಹುಟ್ಟು ಹಿಡಿದು ಕುಳಿತು ಸಂಜೆ ತಾನೇ ಬೀಸಿದ್ದ ಬಲೆಯನ್ನು ಎಳೆಯಲು ಲಚುಮಿ ಸಜ್ಜಾಗುತ್ತಾಳೆ.

ಸಂಸಾರದಲ್ಲಿ ಯಾವತ್ತು ಲಚುಮಿಯ ಸಂಕಟಕ್ಕೆ, ನೋವು ನಲಿವಿಗೆ ಎಳ್ಳಷ್ಟು ಸ್ಪಂದಿಸದೆ ಸದಾ ಕುಡಿತದ ಅಮಲಲ್ಲೇ ಇದ್ದ ಪೈನಿ ಆಕೆಯ ಪಾಲಿಗೆ ಬಂಡೆಕಲ್ಲಿನಷ್ಟೇ ಸಂವೇದನಾ ಶೂನ್ಯವಾಗಿ ಇದ್ದಾತ. ಇದೀಗ ಹರಿಗೋಲ ಸಮತೋಲನಕ್ಕೆ ಪೈನಿಯ ಜಾಗದಲ್ಲಿ ಬಂಡೆಕಲ್ಲೊಂದು ಬಂದು 'ಕೂತು' – ಸಂಸಾರದಲ್ಲಿ ಆತ ನಿರ್ವಹಿಸಬೇಕಾದ 'ಜವಾಬ್ದಾರಿ'ಯನ್ನು ಅದು ಯಶಸ್ವಿಯಾಗಿ ನಿರ್ವಹಿಸುತ್ತಿದೆ! ತನ್ನ ಪರಿಸರ ನೌಕೆಯ ಸುಗಮ ಚಾಲನೆಗೆ ಹಾಗೂ ಗಂಡನ ಅಗತ್ಯ – ಅನಿವಾರ್ಯತೆಯನ್ನು ನೀಗಿಸಲು ಲಚುಮಿ ಕಂಡುಕೊಂಡ ಪರ್ಯಾಯ ದಾರಿ ನಿಜಕ್ಕೂ ಅಚ್ಚರಿಯೆ ಸರಿ. ಇಂಥ ಎಷ್ಟೋ ಸಂದರ್ಭಗಳಲ್ಲಿ ಎಷ್ಟೋ ಹೆಣ್ಣು ಮಕ್ಕಳ ಸ್ಥಿತಿ ಊಹೆಗೂ ನಿಲುಕದ್ದು. ಆದರೆ ಲಚುಮಿಯ ಸಾಧನೆ ಇಂಥ ಎಷ್ಟೋ ಅಸಹಾಯಕ ಹೆಣ್ಣು ಮಕ್ಕಳಿಗೆ ಮಾದರಿಯಾಗುವಂಥದ್ದು. ಹೆಣ್ಣಿನ ಹುಟ್ಟೆ ಒಂದು ಶಕ್ತಿ ಅದು ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗ ಬೇಕಷ್ಟೆ. ಪೈನಿಗಿಂತ ಲಚುಮಿ ಇಲ್ಲಿ ಗಟ್ಟಿಗಿತ್ತಿಯಾಗಿ ಕಾಣುತ್ತಾಳೆ. ಹೆಣ್ಣನ್ನು ದುರ್ಬಲಳೆಂದು ಕಂಡವರಿಗೆ ಈ ಲೇಖನ ಉತ್ತರವೂ ಆಗಬಹುದು.

ಹೆಣ್ಣು ಮಕ್ಕಳ ಹಕ್ಕನ್ನು, ಅವರ ಸಂತೋಷವನ್ನು ಅದಕ್ಕೆ ಕಾರಣವಾದ ಅವರ ಸ್ವತಂತ್ರವನ್ನು ಹೇಗೆಲ್ಲ ಕಿತ್ತುಕೊಳ್ಳುತ್ತಾರೆ ಎನ್ನುವುದಕ್ಕೆ 'ಗೋಡೆ' ಲೇಖನ ಅದ್ಭುತ ಉದಾಹರಣೆಯಾಗುತ್ತದೆ. ಈ ಸ್ವಾರ್ಥ ಸಮಾಜದ ಪುರುಷ ದೌರ್ಜನ್ಯ ಸ್ವಹಿತಾ ಶಕ್ತಿ ಎಷ್ಟೆಂಬುದು ಇಲ್ಲಿ ಮನವರಿಕೆಯಾಗುತ್ತದೆ.

ಲೇಖಕಿಯು ಕಾಲ್ನಡಿಗೆಯ ದಾರಿಯಲ್ಲಿ ಮೊದಲು ಸಿಗುವ ಕೆರೆ ಏರಿ, ಗದ್ದೆತೋಟ, ಮರಗಿಡ, ಪಶುಪಕ್ಷಿ ಹೀಗೆ ಅಲ್ಲಿಂದ ಸ್ವಲ್ಪ ಮುಂದೆ ಸಾಗಿದರೆ ಸಿಗುವುದೇ ಹೆಣ್ಮಕ್ಕಳ ವಸತಿ ನಿಲಯ, ಕೆರೆಏರಿ, ಗದ್ದೆ ತೋಟದಲ್ಲಿ ಕಾಣಸಿಗುವ ಪುಟಾಣಿ ಹಕ್ಕಿಗಳ ಕಲರವವೇ ಈ ವಸತಿ ನಿಲಯದ ಆವರಣದ ಗೋಡೆಯಿಂದ ಸದಾ ಪ್ರತಿಧ್ವನಿಸುತ್ತಿತ್ತು.

ನಮ್ಮ ಸಮಾಜ ಕಲ್ಯಾಣ ಇಲಾಖೆ ರಾಜ್ಯದೆಲ್ಲೆಡೆ ನಡೆಸುತ್ತಿರುವ ಇಂತಹ 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿನಿ ವಸತಿನಿಲಯ'ಗಳ ಬಗ್ಗೆ ಸದಾ ಕುಂದು ಕೊರತೆಗಳ ಸರಮಾಲೆಯೇ ನಿಲಯಗಳ 'ತೋರಣ'ಗಳಂತೆ ಕಾಣಿಸಿಕೊಳ್ಳುತ್ತಿರುವಾಗ ಈ ವಸತಿ ನಿಲಯದ ಆವರಣದಲ್ಲಿ ಐದಡಿ ಎತ್ತರದ ಭದ್ರವಾದ ಆವರಣ ಗೋಡೆಯುಳ್ಳ ಈ ವಸತಿ ನಿಲಯದ ವಿಸ್ತಾರವಾದ ಆವರಣದಲ್ಲಿ ಬಾಲಕಿಯರಿಗೆ ಆಟವಾಡಲು, ಹೂಗಿಡ, ಸೊಪ್ಪು, ತರಕಾರಿಗಳನ್ನು ಬೆಳೆಸಲು ಸಾಕಷ್ಟು ಸ್ಥಳಾವಕಾಶವಿರುವುದರಿಂದ ಸಂಜೆಯ ಹೊತ್ತಲ್ಲಿ ಆ ಆವರಣ ಬಾಲಕಿಯರನ್ನು ಕ್ರಿಯಾಶೀಲರನ್ನಾಗಿಸುತ್ತಿತ್ತು. ಆರ್ಥಿಕ ಬಲವಿಲ್ಲದೆ, ಓದಿನ ಸಲುವಾಗಿಯೇ ದೂರದ ಹಳ್ಳಿಗಳಿಂದ ಬಂದಿರುವ ಆ ಪ್ರೌಢ ಹೆಣ್ಣುಮಕ್ಕಳ ಅನಾಥ ಪ್ರಜ್ಞೆ ಏಕಾಂಗಿತನವೆಲ್ಲ ಈ ಆವರಣವೇ ಹೊಸಕಿ ಹಾಕುತ್ತಿತ್ತು. ಅದನ್ನು ನೋಡುವುದೇ ಖುಷಿಯ ಸಂಗತಿಯಾಗಿತ್ತು.

ಆದರೆ ಈಗ ಆ ವಸತಿನಿಲಯದ ಮುಖಕ್ಕೆ ಮುಖವಿಟ್ಟಂತೆ ರಸ್ತೆಯ ಎದುರು ಬದಿಯಲ್ಲಿ ಅಂದರೆ ಆವರಣದ ಗೇಟಿಗೆ ನೇರವಾಗಿ ಪೇಟೆಯ ಹಣವಂತನೊಬ್ಬ ಗೆಸ್ಟ್ ಹೌಸ್ ನಿರ್ಮಿಸಿದ್ದಾನೆ. ಪ್ರವಾಸಿ ತಾಣ ಹಂಪಿಯಲ್ಲಿ ಅನಧಿಕೃತವಾಗಿ ಇಂತಹ 'ಗೆಸ್ಟ್‌ಹೌಸ್'ಗಳನ್ನು ನಿರ್ಮಿಸಿ ಅಲ್ಲಿ ಎಲ್ಲ ರೀತಿಯ ಅವ್ಯವಹಾರ ನಡೆಸಿ ಹಣದ ರುಚಿ ಹಿಡಿದ ವ್ಯಕ್ತಿಗಳು 'ಹಂಪಿಯನ್ನು ಇನ್ನೇನು ಖಾಲಿ ಮಾಡಿಸುತ್ತಾರೆ' ಎಂಬ ಭಯ ಹಾಗೂ ಹಣ ಸಂಪಾದಿಸುವ ದೂರದೃಷ್ಟಿಯಿಂದ ಹಂಪಿಗೆ ಹತ್ತಿರವಿರುವ ಬಯಲು ಪ್ರದೇಶದಲ್ಲಿ ಜಾಗ ಖರೀದಿಸಿ ಇಂತಹ ಕಟ್ಟಡಗಳ ನಿರ್ಮಾಣಕ್ಕೆ ಮುಂದಾಗಿದ್ದಾರೆ! ವಸತಿ ನಿಲಯದ ಎದುರಿಗಿರುವ ಈ ಗೆಸ್ಟ್ ಹೌಸ್‌ಗೆ ಪೇಟೆಯಿಂದ ಮೋಜಿಗಾಗಿಯೇ ಬರುವ ಯುವಕರ ದಂಡು ಇಲ್ಲಿ ಮದ್ಯಪಾನ ಮಾಡಿ ಇಲ್ಲಿನ ವಿದ್ಯಾರ್ಥಿನಿಯರನ್ನು ಚುಡಾಯಿಸುತ್ತಿದ್ದವಂತೆ! ಹಣವಂತ ಮಾಲೀಕನನ್ನು ಈ ಬಗ್ಗೆ ಪ್ರಶ್ನಿಸಿ ಎದುರು ಹಾಕಿಕೊಳ್ಳಲಾಗದಂತಹ ಭಯ ಹಾಗೂ ದಾಕ್ಷಿಣ್ಯದ ಇಕ್ಕಟ್ಟಿನಲ್ಲಿರುವ ಇಲಾಖಾ ಸಿಬ್ಬಂದಿ ನೇರ ಹೊರಟಿದ್ದು ಈ ಮಕ್ಕಳನ್ನು 'ಬಂದೋಬಸ್ತು' ಮಾಡುವ ಕಾರ್ಯಕ್ಕೆ ತಮ್ಮ ಪ್ರೌಢ ಬಾಲಕಿಯರಿಗೆ ಹೊರ ಜಗತ್ತನ್ನು ಕಾಣಿಸಬಾರದು; ಹಾಗೆಯೇ ಹೊರ ಜಗತ್ತು (ಅಂದರೆ ಪುರುಷಲೋಕ) ಕೂಡ ತಮ್ಮ ಬಾಲಕಿಯರನ್ನು ಗಮನಿಸಬಾರದು ಎಂಬ ದೂರದೃಷ್ಟಿ ಅಥವಾ ಭದ್ರತಾ ದೃಷ್ಟಿಯಿಂದ ಕೇಂದ್ರ ಕಾರಾಗೃಹಗಳಲ್ಲಿ ಇರುವಂತೆಯೇ ಬಲು ಎತ್ತರದ ಆವರಣ

ಗೋಡೆಯನ್ನು ನಿರ್ಮಿಸಿ ಅದರೊಳಗೆ ಬಾಲಕಿಯರನ್ನಿಟ್ಟಿರುವುದು ಇಲಾಖೆ ಅಧಿಕಾರಿಗಳ ಜೀವವಿರೋಧಿ ನಿಲುವನ್ನು ಸ್ಪಷ್ಟಪಡಿಸುತ್ತದೆ.

ಸುತ್ತಲ ಸಮಾಜವನ್ನು ನೋಡುತ್ತ... ಗ್ರಹಿಸುತ್ತ... ಆಲೋಚಿಸುತ್ತ ಬೆಳೆಯುವ ಮಕ್ಕಳ ಕಣ್ಣುಗಳಿಗೆ ಪಟ್ಟಿಕಟ್ಟಿದಂತೆ ಅವರ ನೋಟಗಳನ್ನು ಕಸಿಯ ಹೊರಟ ಈ ಇಲಾಖೆ ಹೆಣ್ಣು ಮಕ್ಕಳ ಸಂತೋಷವನ್ನು ಕಸಿಯುತ್ತಿದೆ ಮಾತ್ರವಲ್ಲ, ಅವರ ಆಲೋಚನೆಯ ದಾರಿಯನ್ನು ಬದಲಿಸುತ್ತಿದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಹೆಣ್ಣು ಮಕ್ಕಳ ಬಾಲ್ಯ, ಅವರ ಆಟ-ಪಾಠ ಎಲ್ಲವನ್ನು ಕಿತ್ತುಕೊಂಡ ಈ ಪುರುಷ ಲೋಕ ಈಗ ಅವರ ವಸತಿಯನ್ನು ಕಸಿದುಕೊಳ್ಳುತ್ತಿದೆ. ಇತ್ತೀಚಿನ ದಿನಗಳಲ್ಲಿ ಹೆಣ್ಣಿನ ಅಸ್ತಿತ್ವವು ವ್ಯಕ್ತಿ ಕೇಂದ್ರಿತ, ಸಮಾಜ ವ್ಯಕ್ತಿ ಕೇಂದ್ರಿತವಾಗುತ್ತಿರುವ ದುರಂತವನ್ನು ಈ ಲೇಖನ ಸೂಚಿಸುತ್ತದೆ. ಕೂಡಿ ಆಡಬೇಕಿದ್ದ, ನೋಡಿ ಕಲಿಯಬೇಕಿದ್ದ ಪ್ರೌಢ ಹೆಣ್ಣುಮಕ್ಕಳನ್ನ ಬಂದೋಬಸ್ತ್ ಮಾಡಲಾಗುತ್ತಿದೆ. ನಿಜವಾಗಿಯೂ ಇದು ಹೆಣ್ಣಿನ ಮೇಲಾಗುತ್ತಿರುವ ಶೋಷಣೆಯ ಕರಾಳ ಮುಖ. ಈ ಮಕ್ಕಳೆಲ್ಲ ಒಂದು ರೀತಿಯಲ್ಲಿ ಬಂದಿಖಾನೆಯ ಕೈದಿಗಳು.

ಬಂದಿಖಾನೆಯ ಕೈದಿಗಳ ಎಂದಾಕ್ಷಣಕ್ಕೆ ನೆನಪಾಗುವ ಇನ್ನೊಂದು ಲೇಖನ 'ನಮಗೂ ಬೆಳಕಿರಲಿ'. ಇದು ಬಂದಿಖಾನೆಯಲ್ಲಿ ಕೈದಿಗಳಾಗಿರುವ ಮಹಿಳೆಯರನ್ನು ಕುರಿತದ್ದಾಗಿದೆ. ಮಹಾ ಕೋಟೆಯಂತಿರುವ ಬಂದಿಖಾನೆಗಳಲ್ಲಿ ಮಹಿಳಾ ಕೈದಿಗಳಿಗಾಗಿ ಮತ್ತೆ ಮೂರಾಳ ಎತ್ತರದ ಪುಟ್ಟ ಕೋಟೆಯೊಂದನ್ನು ಯಾಕೆ ಎಬ್ಬಿಸಬೇಕು? ಎನ್ನುವುದು ಲೇಖಕಿಯ ಪ್ರಶ್ನೆ.

ಯಾವುದೇ ಕೈದಿಗಳು ಬಂದಿಖಾನೆಯೊಳಗೆ 'ಧ್ವನಿ' ಕಳೆದುಕೊಳ್ಳುವುದು ಸಹಜ. ಆದರೆ ಹೊರಸಮಾಜದಲ್ಲೇ ಧ್ವನಿ ಕಳೆದುಕೊಂಡಿರುವ ಮಹಿಳೆಯರು ಆರೋಪಿ ಅಥವಾ ಅಪರಾಧಿಗಳಾಗಿ ಬಂಧಿಖಾನೆಗಳೊಳಗೆ ಬಂದೊಡನೆ ಸಂಪೂರ್ಣವಾಗಿ ಅಲ್ಪಸಂಖ್ಯಾತರಾಗಿ ಎಲ್ಲ ರೀತಿಯಿಂದಲೂ 'ಧ್ವನಿ' ಕಳೆದುಕೊಂಡು ಬಾಯಿ ಇಲ್ಲದ ಮೂಕ ಹಸುಗಳಾಗಿ ಪರಿವರ್ತನೆಗೊಳ್ಳುವುದು ಮಾಮೂಲಿ. ಇಂತಹ ಪ್ರತಿಭಟನಾ ಶಕ್ತಿ ಇಂಗಿಸಿಕೊಂಡಿರುವ ಮಹಿಳಾ ಖೈದಿಗಳನ್ನು ಹೀಗೆ ಹಸುಗಳಂತೆ ಕೂಡಿಹಾಕಿ ಪುರುಷ ಖೈದಿಗಳಿಗಿಂತ ಭಿನ್ನವಾಗಿ ನಡೆಸಿಕೊಳ್ಳುವುದು ಅದು ತೀರ ಜೀವವಿರೋಧಿಕ್ರಮ. ಬಂದಿಖಾನೆಗಳ ವಾಚನಾಲಯ, ಪ್ರಾರ್ಥನಾಸ್ಥಳ, ಹೊರಾಂಗಣ ಆಟಗಳಂತಹ ಸೌಲಭ್ಯಗಳಿಂದ ಹಿಡಿದು ತೋಟಗಾರಿಕೆ ಕೃಷಿ ಇತ್ಯಾದಿ ಪ್ರಕೃತಿ ಸಂಬಂಧಿ ಉದ್ಯಮಗಳಿಂದಲೂ ಮಹಿಳಾ ಕೈದಿಗಳನ್ನು ದೂರವಿರಸಲಾಗುತ್ತದೆ. ಕೇಳಿದರೆ ಯಾವಾಗಲೂ ಮಹಿಳಾ ಕೈದಿಗಳ ಸಂಖ್ಯೆ ಕಡಿಮೆಯಾಗಿರುವುದರಿಂದ ಅವರ

ಸಂಖ್ಯೆಗನುಗುಣವಾಗಿ ಬ್ಯಾರಕ್‌ನ ವಿಸ್ತೀರ್ಣವೂ ಕಿರಿದಾಗುವುದು ಸಹಜ ಎನ್ನುವ ಉತ್ತರ ಕೊಡುತ್ತಾರೆ. ಆದರೆ ಅವರಿಂದ ಮಹಿಳಾ ಕೈದಿಗಳಿಗಿರುವ ಕೋಟೆ ಯಾಕೆ ಅಷ್ಟೊಂದು ಎತ್ತರವಿರಬೇಕು ಎಂಬುದಕ್ಕೆ ಉತ್ತರವಿರುವುದಿಲ್ಲ.

ಮಹಿಳಾ ಕೈದಿಗಳನ್ನು ಕೇಳಿದರೆ 'ಈ ಕೋಟೆಯೊಳಗೆ ನಮ್ಮದು ಸಾದ ಬೋನಿನಲ್ಲಿಟ್ಟ ಪ್ರಾಣಿಗಳ ಸ್ಥಿತಿ ಎಂಬ ಅರ್ಥದಲ್ಲಿ ಮಾತನಾಡುವವರು ಕೆಲವರಷ್ಟೆ. ಉಳಿದವರ್ಯಾರೂ ಆವರಣ ಗೋಡೆಯ ಎತ್ತರದ ಬಗ್ಗೆಯಾಗಲಿ, ಆವರಣದ ವಿಸ್ತಾರದ ಬಗ್ಗೆಯಾಗಲಿ ಕಿಂಚಿತ್ತೂ ತಲೆ ಕೆಡಿಸಿಕೊಂಡಿರುವುದಿಲ್ಲ. ಅವರು ತಲೆಕೆಡಿಸಿಕೊಳ್ಳುವುದೇನಿದ್ದರು ದಿನವು ಕಿತ್ತುತಿನ್ನುವ ಕೆಲವು ವಿಚಾರಗಳ ಬಗ್ಗೆ.

ಶಿಕ್ಷೆಯಿಂದ ಬಿಡುಗಡೆಯ ಬಗ್ಗೆ, ಬೆಳೆದುನಿಂತಿರುವ ಹೆಣ್ಮಕ್ಕಳ ಮದುವೆಯ ಬಗ್ಗೆ, ಬಸುರಿ, ಮಕ್ಕಳ ಬಾಣಂತನದ ಬಗ್ಗೆ ಮಕ್ಕಳ ಓದು ಆರೋಗ್ಯದ ಬಗ್ಗೆ, ತಮ್ಮ ಗಂಡಂದಿರು ಇಟ್ಟುಕೊಂಡಿರಬಹುದಾದ ಅನ್ಯ ಸಂಬಂಧಗಳ ಬಗ್ಗೆ, ತಮ್ಮ ಎಳೆಯ ಮಕ್ಕಳು ನಿರಾಶ್ರಿತರಾಗಿ ಪಡಬಾರದ ಪಾಡುಪಡುತ್ತಿರುವ ಬಗ್ಗೆ, ಗಂಡ ಮತ್ತು ಮಕ್ಕಳ ವಿಶ್ವಾಸ, ಪ್ರೀತಿ ಉಳಿಸಿಕೊಳ್ಳುವ ಬಗ್ಗೆ, ಬಿಡುಗಡೆಯಾದ ನಂತರ ಸಮಾಜಕ್ಕೆ – ಬಂಧು ವರ್ಗಕ್ಕೆ ಮುಖ ತೋರಿಸುವ ಬಗ್ಗೆ.

ಇಲ್ಲಿ ಗಮನಿಸಬಹುದಾಗಿದ್ದು ಬಂದಿಖಾನೆಯೊಳಗೆ ತಾನು ಹಿಂಸೆಯನ್ನು ಅನುಭವಿಸುತ್ತಿದ್ದಾಳೆ ಆದರೆ ಆ ತಾಯಿ ಹೃದಯ ಹೊರಗಿರುವ ತನ್ನ ಮಕ್ಕಳು, ಗಂಡ, ಕುಟುಂಬಕ್ಕಾಗಿ, ಸಮಾಜಕ್ಕಾಗಿ ಸಂಬಂಧಿಗಳ ಉಳಿಯುವಿಕೆಗಾಗಿ ಹಂಬಲಿಸುತ್ತಿರುವುದು.

ನಾಗವೇಣಿಯವರ ಸೂರ್ಯನಿಗೊಂದು ವೀಳ್ಯ ಅಂಕಣ ಬರಹಗಳ ಸಂಗ್ರಹದ ಬಹುಪಾಲು ಎಲ್ಲಾ ಲೇಖನಗಳು ಸ್ತ್ರೀಯನ್ನು ದೃಷ್ಟಿಯಲ್ಲಿಟ್ಟುಕೊಂಡೆ ರಚನೆಯಾಗಿರುವಂಥವು. ಸ್ತ್ರೀ ಶೋಷಣೆಯ ಅನಾವರಣ, ಸ್ತ್ರೀ ವಿಶೇಷತೆಗಳ ಅನಾವರಣದ ಜೊತೆಗೆ ಅವುಗಳ ವಿವಿಧ ಮೂಲಗಳನ್ನು, ಅದರ ಸೂಕ್ಷ್ಮಾತಿ ಸೂಕ್ಷ್ಮ ರೂಪಗಳನ್ನು, ಅದರ ಆಳ ವಿಸ್ತಾರವನ್ನು ಇಲ್ಲಿ ಗುರುತಿಸುವ ಪ್ರಯತ್ನವಾಗಿದೆ.

ಹೆಣ್ಣು ಜನ್ಮವನ್ನು ಕುರಿತ, ಬದುಕನ್ನು ಕುರಿತ ಈ ಇಬ್ಬರೂ ಲೇಖಕಿಯರ ಅಪಾರವಾದ ಕಾಳಜಿ, ಪ್ರೀತಿ ಮತ್ತು ಆತ್ಮವಿಶ್ವಾಸಗಳು ಈ ಪೀಳಿಗೆಯ ಲೇಖಕರಿಗೆ ಸ್ಫೂರ್ತಿಯಾಗಬೇಕಿದೆ.

೬.೩ ಕೃತಿಗಳಲ್ಲಿ ವ್ಯಕ್ತಪಡಿಸಿರುವ ಜೀವನ ದರ್ಶನ

ವೈದೇಹಿಯವರ ಅಸ್ಪೃಶ್ಯರು ಕಾದಂಬರಿಯಲ್ಲಿ ವ್ಯಕ್ತವಾದ ದರ್ಶನದ ನೆಲೆ. 'ಅಸ್ಪೃಶ್ಯ' ಅಂದರೆ 'ಮುಟ್ಟಬಾರದು' ಎಂಬುದಕ್ಕೆ ರೂಢಿಗತ ಅರ್ಥ 'ಮುಟ್ಟಲಾಗದು' ಎಂದೂ ಅರ್ಥೈಸಬಹುದಾದ ಈ ಕಾದಂಬರಿ ಈ ಎರಡೂ ಅರ್ಥದ ಅಸ್ಪೃಶ್ಯತೆಗಳನ್ನು ಕುರಿತದ್ದು.

ಕುಂದಾಪುರ ಪ್ರಾಂತ್ಯದ ಕಾಲ್ಪನಿಕ ಕಿರುಕುಟುಂಬವೊಂದರ ಈ ಕಥೆಯಲ್ಲಿ ಅನೇಕ ಸಂದರ್ಭಗಳಲ್ಲಿ ವೈದೇಹಿ ಅವರ ಜೀವನ ದರ್ಶನಗಳನ್ನು ಗುರುತಿಸಬಹುದು.

ವಾಸುದೇವರಾಯರ ಮನೆಗೆ ಹಸಿಹುಲ್ಲು ತರುವ ಕೂಸನ ತಮ್ಮ ಬರುತ್ತಾನೆ. ಅವರ ಜಾತಿಯಲ್ಲಿ ಅವನೊಬ್ಬನೇ ಓದಿದವನು. ಹಾಗೆ ಬಂದ ಕೂಸನಿಗೆ ಗೌರಮ್ಮ ಕಾಫಿ ಕೊಡಲು ಆಲೋಚಿಸುತ್ತಾಳೆ. ಮತ್ತೆ ವಾಸುದೇವರಾಯನ ಆಜ್ಞೆ ಆದ ಮೇಲೆ ಗೌರಮ್ಮ ಕಾಫಿ ಮಾಡಿದರು. ಕೂಸ ಕುಡಿದ ಕಾಫಿ ಲೋಟವನ್ನು ಜಗಲಿಯ ತುದಿಗಿಟ್ಟ ಶಿವ, ರುಕ್ಕುವಿಗೆ ತೊಳೆದಿಡಬೇಕೆಂತೆ ಎಂದ ಅದಕ್ಕೆ ರುಕ್ಕು ಯಾರು? ಆ ಕೂಸ ಕುಡಿದದ್ದ? ಅವ ಬಂದದ್ದು ನನಗೂ ಗೊತ್ತು ಮಾಡದೆ ಅವನ ಎಂಜಲವನ್ನ ನನ್ನ ಕೈಯಿಂದ ತೊಳೆಸಬೇಕಂತ ಮಾಡಿದಿರ? ನಾ ತೊಳೆಯುವುದಿಲ್ಲ ಎಂದಳು. ಗೌರಮ್ಮ ಹೊರಗೆ ಬಂದು 'ಅಬ್ಬ ನಾವು ನಿನ್ನನ್ನೇ ಸೇರಿಸದಿದ್ದರೆ ನೀನು ಕೂಸನನ್ನೇ ಸೇರಿಸುವುದಿಲ್ಲವಲ್ಲ?' ಎಂದಾಗ 'ಮತೆ? ನಾವು ಅದಕ್ಕಿಂತ ಊಂಚಲ್ಲವ? ಬೇಡಿ ತಿಂದರೂ ಅವ ಕುಡಿದ ಲೋಟೆ ನಾನು ತೊಳೆಯಲಿಕ್ಕಿಲ್ಲ' ಎಂದು ಮಾತು ಮುಂದುವರೆಯುತ್ತದೆ. ಸ್ವಲ್ಪ ಹೊತ್ತಿನ ಮೇಲೆ ವಾಸುದೇವರಾಯರು ಒಳಗೆ ಬಂದು **"ಯಾರೆ ಆಗಲಿ ಒಂದು ಸ್ಥಾನ ಪಡೆದುಕೊಂಡು ಬಂದರೆ ಗೌರವವುಂಟೇ ಉಂಟು ಹೇಳಿಕೆ ಇಲ್ಲದೆ ಊಟಕ್ಕೆ ಬಂದು ಕುಳಿತು ಕೊಳ್ಳುವ ನಾರಟೆ ಬ್ರಾಹ್ಮಣನಿಗಿಂತ ಕುರ್ಚಿ ಮೇಲೆ ಕೂಡುವ ಸ್ಥಾನವಂತ ಕೂಸನಿಗೆ ಹೆಚ್ಚು ಮರ್ಯಾದೆ ತನ್ನಷ್ಟಕ್ಕೆ ಹುಟ್ಟಿಕೊಳ್ಳುತ್ತದೆ. ಬ್ರಾಹ್ಮಣ ಎಂದರೆ ಎಂತದೆಂತ ನೀವು ಹೇಳುವುದು? ಮನುಷ್ಯ ಮನುಷ್ಯನನ್ನು ಗುರುತಿಸುವುದೇ ನೀತಿ ನಡತೆಯಿಂದ ಸ್ಥಾನಮಾನದಿಂದ ಹುಟ್ಟಿನಿಂದ ಅಲ್ಲ"**[9] ಎಂಬ ದರ್ಶನವ ಲೇಖಕಿ ಕಂಡುಕೊಂಡಿದ್ದಾರೆ.

ವಾಸುದೇವರಾಯರು ಭಾಸ್ಕರನ ಹೆಂಡತಿಯನ್ನು ತಮ್ಮ ಮನೆಗೆ ಕರೆದುಕೊಂಡು ಬರುವುದು ಎಂದು ನಿರ್ಧರಿಸಿ ಭಾಸ್ಕರನ ಮನೆಗೆ ಬರುತ್ತಾರೆ ಆಗ ಆಡುವ ಮಾತುಗಳಿವು 'ಮಗೂ, ನೀ ಹೆದುರುವುದು ತಪ್ಪಲ್ಲ. ಆದರೆ ಆ ಹೆದರಿಕೆ ಬಿಟ್ಟು ಬಿಡು ಈಗ, ನಾನು ಭಾಸ್ಕರನ ಮಾವಯ್ಯ ಮಾತ್ರ ಅಲ್ಲ ನಿನ್ನ ತಂದೆ ಅಂತ ತಿಳಿದುಕೋ ಬಾ'.

ಕುಮುದಿನಿ ಕತ್ತು ಎತ್ತಿದಳು. 'ಮೇಲು ಜಾತಿಯವರು ಎಂದು ಹೇಳಿಕೊಂಡ ಜನ ಹಲವು ರೂಪದಿಂದ ಹಲವು ರೀತಿಯಿಂದ ಕೆಳಗಿನವರೆಂದು ಹೇಳಲ್ಪಟ್ಟವರನ್ನು ತುಳಿದರು. ಜಾತಿಯ ಪೊರೆ ಕಳಚಿ ಮನುಷ್ಯತ್ವ ಕಾಣಬೇಕಾದರೆ ಇನ್ನೂ ಎಷ್ಟುವರ್ಷ ಕಳೆಯಬೇಕೋ' – ಎಂದು ಹೇಳುತ್ತಿದ್ದ ಭಾಸ್ಕರನ ಮಾತು ತಲೆಯಲ್ಲಿ ತಿರುಗಿತು. ಯಾವ ತಂದೆ? ಎಲ್ಲಿಯ ತಂದೆ? ತಂದೆ ಎಂದ ಕೂಡಲೆ ತನ್ನಲ್ಲಿ ಆ ಭಾವ ಉಕ್ಕಿ ತಾನು ಒಪ್ಪಿಕೊಂಡು ಬಿಡುತ್ತೇನೆ ಎಂತವ? ನನ್ನ ತಂದೆಯೇ ನನ್ನ ತಂದೆ. ಬೇರೊಬ್ಬರು ತಂದೆಯ ಸಮಾನರಾದಾರು ಅಷ್ಟೆ. ಹಾಗೆ ಸಮಾನ ಆಗಲಿಕ್ಕೆ ಇಷ್ಟು ಕ್ಷಿಪ್ರ ಅವಧಿಗಾಗಿ? '....**ಇಲ್ಲ, ನಿನಗೆ ನಂಬಿಕೆ ಬರುವುದಿಲ್ಲ. ಅದಕ್ಕೆ ನಾನು ನಿನ್ನನ್ನು ಬೈಯ್ದು ಪ್ರಯೋಜನವಿಲ್ಲ ಮಗು. ಇದ್ದಕ್ಕಿದ್ದ ಹಾಗೆ ನಾ ಹೇಗೆ ಮನೆಗೆ ಕರೆದುಕೊಂಡು ಹೋಗಲಿಕ್ಕೆ ಬಂದೆ ಅಂತ ನಿನಗೂ ಏನೆಲ್ಲ ಸಂಶಯಗಳು ಬರುವುದು ಸಹಜವೇ ಆದರೆ ಒಂದು ನೆನಪಿಟ್ಟುಕೋ, ಭಾಸ್ಕರ ಏನು ಮಾಡುತ್ತಿದ್ದಾನೆ ಅದು ನನ್ನ ಕನಸು. ಅರ್ವತ್ತು ಸಮೀಪಿಸಿದರೂ ನಾ ಬರೀ ಕನಸಿನಲ್ಲೇ ನನ್ನನ್ನು ಅದ್ದಿಕೊಂಡೆನೆ ಹೊರತು ಎದ್ದೇಳುವ ಪ್ರಯತ್ನ ಮಾಡಲಿಲ್ಲ. ಭಾಸ್ಕರ ಅದನ್ನು ಮಾಡಿದ ಅವನಿಗೆ ನಾ ತೋರಿಸುವ ಗೌರವವಿದು**'[೧೦] ಎನ್ನುವ ವಾಸುದೇವರಾಯರ ಮಾತುಗಳಲ್ಲಿ ವೈದೇಹಿ ಅವರ ಜೀವನ ದರ್ಶನವನ್ನು ಕಾಣಬಹುದಾಗಿದೆ.

'ಮಲ್ಲಿನಾಥನ ಧ್ಯಾನ' ವೈದೇಹಿಯವರ ಪ್ರಮುಖ ಕೃತಿಗಳಲ್ಲೊಂದು ಆ ಸಂಕಲನದ ಒಂದು ಲೇಖನ 'ನಮ್ಮ ಲೋಕ ಗೀತೆ'ಯಲ್ಲಿ ಅವರು ಹೇಳುತ್ತಾರೆ.

ಪುರುಷನಿಗೆ ನಾವು ಸಮರಲ್ಲ. ಅದಕ್ಕಿಂತ ಮುಖ್ಯವಾಗಿ ನಮ್ಮ ಸಮಕ್ಕೆ ಪುರುಷರು ಎಂದೂ ಬಂದು ನಿಲ್ಲಲಾರರು. ಎಲ್ಲಿ ಸಮಾನ ಅವಕಾಶಗಳನ್ನು ಪಡೆಯಲಾರೆವೋ ಅಲ್ಲಿ ಹೋರಾಡಿಯಾದರೂ ಒಂದಲ್ಲ ಒಂದು ದಿನ ಸಮಾನ ಅವಕಾಶ ಗಳಿಸಿಕೊಂಡೆವು. ಆದರೆ ತಂತಾನೆ ಲಭ್ಯವಾಗುವ ನಮ್ಮದೇ ಅನುಭವಗಳನ್ನು ಗುರುತಿಸುತ್ತಾ ಗೌರವಿಸುವುದನ್ನು ಬಿಟ್ಟು ಧಿಕ್ಕರಿಸುವುದರಲ್ಲಿ ಏನು ಬಂತು? ನಾವೇಕೆ ಪುರಷ ದನಿಯಲ್ಲಿ ಮಾತಾಡಬೇಕು? ನಾವು ನಮ್ಮ ಕಂಠದಲ್ಲಿ ಹಾಡೋಣ. ಅದು ಜೋರಾಗವಿರಲಿ, ಪ್ರೇಮರಾಗವಿರಲಿ, ಇನ್ನಾವ ಬಗೆಯ ರಾಗ ವಿರಾಗಗಳೇ ಇರಲಿ, ನಮ್ಮದೇ ದನಿ ಅಲ್ಲಿರಲಿ.

ಲೇಖನದ ಮುಂದುವರಿದ ಭಾಗದಲ್ಲಿ ಅವರು ಹೇಳುತ್ತಾರೆ. 'ಪುರುಷರ ಬಗ್ಗೆ ಯೋಚಿಸುವಾಗ ಎಷ್ಟೋ ಸಲ ಮರುಕ ಉಂಟಾಗುತ್ತದೆ. ಬದುಕಿನ ಎಷ್ಟೋ ದಿವ್ಯ ಅನುಭವಗಳ ಮೃದು ಸ್ಪರ್ಶದಿಂದ ಇವರೆಲ್ಲ ವಂಚಿತರಾಗಿದ್ದಾರೆಂದು.

ವೈದೇಹಿಯವರು ಗುರುತಿಸುವ ಮುಖ್ಯವಾದ ಒಂದು ಚೈತನ್ಯದ ಮೂಲ 'ತಾಯ್ತನ'. ಈ ತಾಯ್ತನದ ಸುಖ, ಪುಳಕ, ರೋಮಾಂಚ, ಹೋಲಿಕೆಯಾಗದ, ಅಪೂರ್ವ ಅನುಭವವನ್ನು

ಬಹುಪಾಲು ಅವರ ಎಲ್ಲಾ ಕೃತಿಗಳಲ್ಲಿ ಅಲ್ಲಲ್ಲಿ ಗುರುತಿಸಬಹುದಾಗಿದೆ. ಅಷ್ಟಕ್ಕೂ ಅವರ ಅಸ್ಪೃಶ್ಯರು ಕಾದಂಬರಿ ಶುರುವಾಗುವುದೆ ವಾಸುದೇವರಾಯ ಮತ್ತು ಗೌರಮ್ಮನ ಹಿರಿ ಮಗಳು ರತ್ನಳ ಹೆರಿಗೆ ನೋವಿನಿಂದ. ಅಂತೆಯೇ ಕಾದಂಬರಿ ಕೊನೆಗೊಳ್ಳವುದು ಕೂಡ ಭಾಸ್ಕರನ ಹೆಂಡತಿ ಕುಮುದಿನಿಯನ್ನು ಹೆರಿಗೆ ಮತ್ತು ಬಾಣಂತನಕ್ಕೆಂದೆ ಕರೆತರುವ ಮೂಲಕ.

ಬಸುರಿ ಬಾಣಂತಿತನದ ಎಲ್ಲಾ ನೋವು ನಲಿವುಗಳನ್ನು ಎಳೆಎಳೆಯಾಗಿ ಬಿಡಿಸಿಡುವ ತಾಯ್ತನವು ಒಂದು ಜೀವನದರ್ಶನವೆ ಸರಿ.

'ಮಲ್ಲಿನಾಥನ ಧ್ಯಾನ' ಲೇಖನದಲ್ಲಿ ವೈದೇಹಿ ಅವರು ತಮಗೆ ಮೊದಲ ಮಗು ಹುಟ್ಟಿದ ಘಳಿಗೆಯ ವಿವರಗಳನ್ನು ನೀಡುತ್ತಾರೆ. ಆಗ ಹೆರಿಗೆ ಮಾಡಿಸಿದ ಸೂಲಗಿತ್ತಿ ಹೇಳುತ್ತಾಳೆ: ಅದು ಎಂತಾದರೂ ಬೇಕು, ಈ ಹೆಣ್ಣು ಜನ್ಮ ಬೇಡ ಎಂದು ಉದ್ಗಾರ ತೆಗೆಯುತ್ತಾಳೆ. ಹೆರಿಗೆ ನೋವಿನ ಪರಾಕಾಷ್ಠೆಯ ಘಳಿಗೆಯಲ್ಲಿ ಹುಟ್ಟುವ ಮಾತಾದರೂ, ಉದ್ದಕ್ಕೂ ಹೆಣ್ಣಿನ ಅನಾದರದ ಬದುಕನ್ನು ಕುರಿತ ತೀರ್ಮಾನವೂ ಹೌದು.

ಆದರೆ ಇದಕ್ಕೆ ಪ್ರತಿಕ್ರಿಯೆಯಾಗಿ ವೈದೇಹಿಯರು 'ಜನ್ಮಗಳು ಇರುವುದು ಹೌದಾದರೆ, ಎಲ್ಲ ಜನ್ಮಗಳಲ್ಲಿಯೂ ಹೆಣ್ಣೆ ಆಗಬೇಕು ಎಂದು ಪ್ರಾರ್ಥಿಸುತ್ತಿದ್ದರೂ ಆಕೆಗೆ ಕೇಳುವಂತಿರಲಿಲ್ಲ.'

ಕ್ರೌಂಚ ಪಕ್ಷಿಗಳು ಕಥೆ ಲಕ್ಷ್ಮೀನಾರಾಯಣಭಟ್ಟರು ಲಕ್ಷ್ಮಮ್ಮರ ನೋವಿನ ಕಥೆ ಮಾತ್ರವಾಗಿರದೆ ಲೇಖಕಿಯ ಅಂತರಂಗದ ಜೀವನ ದರ್ಶನದ ಕಥೆಯೂ ಆಗಿದೆ.

ಈ ದಂಪತಿಗಳು ದಿಲ್ಲಿಯಲ್ಲಿ ವಿಭಜನೆಯ ದೊಂಬಿ – ಹಿಂಸೆ ಗಲಭೆಗಳಿಗೆ ತುತ್ತಾಗಿ ಅನುಭವಿಸಿದ ಯಾತನೆ ಇಲ್ಲಿ ಕಥೆಯಾಗಿದೆ. ಆದರೆ ಇಲ್ಲಿ ಭಟ್ಟರು ಹೇಳುವುದು ಸತ್ಯವೋ, ಲಕ್ಷ್ಮಮ್ಮ ಹೇಳುವುದು ಸತ್ಯವೊ ಎನ್ನುವುದಕ್ಕಿಂತ 'ನೋವು' ಮುಖ್ಯವಾಗುತ್ತದೆ.

ಏಕೆಂದರೆ ಸತ್ಯದ ಶೋಧದಿಂದ ಭಟ್ಟರ ಇಲ್ಲವೇ ಲಕ್ಷ್ಮಮ್ಮನವರ ಬದುಕಿನಲ್ಲಾದ ದುರಂತ ಸರಿಹೋಗಲಾರದು. ಈ ದಂಪತಿ ತಮ್ಮ ತಪ್ಪಿಲ್ಲದೆ ಪರಸ್ಪರ ಅಗಲಿದ್ದು, ಅಗಲಿಕೆಯ ನೋವನ್ನು ಅನುಭವಿಸಿದ್ದು ಎಲ್ಲವು ಸತ್ಯವೇ ಅಂದ ಮೇಲೆ ಉಳಿದದ್ದೆಲ್ಲ ಪ್ರಾಸಂಗಿಕವಷ್ಟೆ.

ಕಥೆ ಸತ್ಯದ ಬಹುಮುಖತೆಯನ್ನು ಸೂಚಿಸಿಯೂ 'ಸತ್ಯ'ಕ್ಕಿಂತ 'ಮಾನವೀಯ ಅನುಕಂಪ' ದೊಡ್ಡದು ಎಂಬ ದರ್ಶನವನ್ನು ನೀಡುತ್ತದೆ.

ವೈದೇಹಿ ಅವರ 'ಮರೆವು' ಕಥೆಯಲ್ಲಿ ವೃದ್ಧ ದಂಪತಿಗಳಿಬ್ಬರು ತಮ್ಮ ಹಿಂದಿನ ದಿನಗಳನ್ನು ನೆನೆಯುತ್ತಾ "ಒಟ್ಟಿಗೆ ಬದುಕಿ ಬದುಕಿ ಕಡೆಗೆ ಹೆಣ್ಣು ಗಂಡು ಎಂಬ ಮಾಯೆಯೇ ಪರಸ್ಪರರಲಿ ಮಾಯವಾಗಿ ಕೇವಲ ಜೀವಿಗಳಾಗಿ ಬಿಡುತ್ತೇವೆಯೇ?" ಅಂದುಕೊಳ್ಳುವುದು.

ಈ ಹೆಣ್ಣು ಗಂಡು ಮಾಯೆಯಲ್ಲಿ ನಡುವೆ ಇಣುಕಿ, ಆಡಿಸಿ, ವೃದ್ಧಾಪ್ಯದಲ್ಲಿ ಒಂದು ದರ್ಶನದ ಚೌಕಟ್ಟಿನಲ್ಲಿ ಕೂಡಿಸಲು ಮಾತ್ರ ಇರಬಹುದೇ? ತುದಿಯಲಿಲ್ಲ ಕೊನೆಯಲಿಲ್ಲ ನಡುವಿನಲ್ಲೊಂದು ಬಣ್ಣದ ಪ್ರಪಂಚ, ಮೋಹಕ, ಮೋಹಪ್ರಪಂಚ ಮಗು ಮುಗ್ಧತೆಯಿಂದ ಒಳಬಂದು ಕಣ್ಣು ತೆರೆದು ಆಘಾತಗೊಂಡು, ಅನುಭವಿಸಿ ಕೊನೆಗೆ ಮತ್ತೆ ಮಗುವಿನಂತಾಗಿಯೂ ಮಗುವಾದರೆ ನಿರ್ಗಮಿಸಲು?

ಕಥೆಯ ಕೊನೆಯಲ್ಲಿ ಲೇಖಕಿ ಸೂಚಿಸುವಂತೆ ಅಜ್ಜ ಸೀರೆ ಉಟ್ಟುಕೊಂಡು ಅಡುಗೆ ಮನೆಯಲ್ಲಿ ಮೊಮ್ಮಕ್ಕಳಿಗೆ ಊಟ ತಿಂಡಿ ಮಾಡಿಸುವ 'ಅಜ್ಜಿಯಾದರೆ' ಅಜ್ಜಿ ಪಂಚೆಯುಟ್ಟು ಪೇಟೆಗೆ ಹೋಗಿ ಬರುವ 'ಅಜ್ಜ'ನಂತಾಗಿ ರೂಪಾಂತರವಾಗುವ ಸನ್ನಿವೇಶ ಅಸಂಭವನೀಯ ಎನಿಸಿದರು ಸ್ತ್ರೀ – ಪುರುಷರಿಬ್ಬರೂ ಒಟ್ಟಿಗೆ ಪ್ರಬುದ್ಧರಾದಾಗ ದಾಟಬಹುದಾದ ಗಂಡು – ಹೆಣ್ಣೆಂಬ ಭೇದವನ್ನು ಕಥೆ ನಿರೂಪಿಸುತ್ತದೆ. ಹಲವು ವರ್ಷಗಳ ದಾಂಪತ್ಯದ ಪಕ್ವ ಜೀವಿಗಳಿಬ್ಬರು ತಮ್ಮ ಜೀವನದ ಇಳಿಗಾಲದಲ್ಲಿ ಸೂಚಿಸುವಂತೆ ದರ್ಶನ ಮೌಲಿಕವಾದದ್ದು.

'ಹರಿವ ನೀರು' ಸಂಕಲನದ 'ಜೀವಮೌನದ ಯಾನ' ಲೇಖನ ವೈದೇಹಿಯವರು ಕಂಡುಕೊಂಡ ಜೀವನ ದರ್ಶನವನ್ನು ಸೂಚಿಸುವ ಅನನ್ಯ ಬರಹವಾಗಿದೆ. ಕಾಲವನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕಾಲ ನಮ್ಮ ತಾಳಕ್ಕೆ ತಕ್ಕಂತೆ ಕುಣಿಯದು. ಬೇಗ ಹೋಗಲಿ ಎಂದರೆ ಬೇಗದ ಹೋಗದು ಅದು, ನೂಕಲಾರದ್ದು ಗಡಿಯಾರವನ್ನು ತೆರೆದು ಮುಳ್ಳನ್ನು ಬೇಗ ಓಡುವಂತೆಯೋ ಆಗಲೇ ಹೊತ್ತು ದಾಟಿ ಹೋದಂತೆಯೋ ಮಾಡಬಹುದು. ಆದರೆ ನಿಜವಾದ ಕಾಲವನ್ನು? ಮಗು ಬೇಗ ಬೆಳೆದು ದೊಡ್ಡದಾಗಲಿ ಎಂದರೆ ಹೇಗೆ? ಹುಟ್ಟಿದೊಡನೆ ಎಲ್ಲ ಕುಲಿತು ನೆಲೆಗೊಳ್ಳಬೇಕು ಹೇಗೆ? ನಿಲ್ಲಲು ನಡೆಯಲು ಕಲಿಯಿತೆ? ಹಾಗಾದರೆ ಇನ್ನು ನೃತ್ಯ ಕಲಿತು ಮುಗಿಸಲಿ ಎಂದರೆ ಹೇಗೆ? ಮಾತಾಡಲು ಕಲಿತೊಡನೆ ಹಾಡುಗಾರಿಕೆ ಕಲಿಯಲಿ ಎಂದರೆ ಹೇಗೆ? ಎಲ್ಲವೂ ನಿಧಾನ ನಿಧಾನ. ತಾಳ್ಮೆ, ಸಹನೆ, ಒಂದೊಂದೇ ಹೆಜ್ಜೆ ಒಂದಾದ ಮೇಲೆಯೇ ಇನ್ನೊಂದು ಹೆಜ್ಜೆ. ಗುರು ಸಿಗುವುದು ಒಂದು ನಿಲ್ದಾಣ. ಗುರಿಸಿಗುವುದು ಒಂದು ನಿಲ್ದಾಣ. ಒಂದರಿಂದ ಒಂದು ಸವೆಸಬೇಕಾದ ಗುರಿ ಎಷ್ಟು ದೀರ್ಘ. ಎಲ್ಲಿಯೂ ನಿಲ್ಲುವಂತಿಲ್ಲ, ನಿಕೇತನರಾಗುವಂತಿಲ್ಲ. ನಿಕೇತನರಾದರೂ ಅದನ್ನು ತ್ಯಜಿಸಿ ಮತ್ತೆ ಮುಂದುವರಿಯಲೇಬೇಕಾದ ನಿಯಮದ ಸೃಷ್ಟಿಗೂಢದಲ್ಲಿ ನಮ್ಮ ಪ್ರಯಾಣ ಸಾಗಿದೆಯೆ? ನಮ್ಮ ಹಿಂದೆ ಮತ್ತೆ ಅನೇಕರು ಬರುತಿದ್ದಾರೆ. ಈ ದಾರಿಯಾಗಿಯೇ ಮುಂದೆಯೂ ಹಿಂದೆಯೂ ಬಿಡಿಯಾಗಿಯೋ

ಗುಂಪಾಗಿಯೇ ಹೊಡೆದಾಡುತ್ತ ಪ್ರೀತಿಸುತ್ತ ಸಾಯುತ್ತ ಹುಟ್ಟುತ್ತ ಸಾಗುತ್ತಲೇ ಇರುವ ದಾರಿ ಅದು.

"ಈ ವಿಶ್ವ ಹೀಗಾಗಲು ಮಿಲಿಯಾಂತರ ವರ್ಷ ಬೇಕಾಯಿತೇಕೆ? ಈ ಭೂಮಿ ಮತ್ತು ಈ ಭೂಮಿ ಮೇಲಿನ ನಾವು ಇವತ್ತಿನ ಈ ಸ್ಥಿತಿ ತಲುಪಲು ತಗಲಿದ ಸಮಯವೆಷ್ಟು? ಚಲಿಸುವ ಈ ಭೂಮಿಯ ಚಲನೆಯಾದರೂ ನಮಗೆ ತಿಳಿಯುತ್ತಿದೆಯೇ? ನಿಂತಂತೆ ಕಾಣುತ್ತದೆ. ಚಲಿಸುತ್ತದೆ. ವೇಗವನ್ನು ಒಂದು ಗೆರೆ ಜಾಸ್ತಿ ವರ್ಧಿಸಿದರೂ ತನ್ನ ಮಕ್ಕಳು ಎಲ್ಲಿ ಬಿದ್ದು ಹೋಗುತ್ತವೆಯೋ ಎಂಬ ಆತಂಕದಲ್ಲಿ ನಿಧಾನವಾಗಿ ಚಲಿಸುವ ಭೂಮಿ ಅದರಲ್ಲಿ ವೇಗವಾಗಿ ಚಲಿಸುವ ಬಯಕೆಯ ನಾವು ಜೋರಾಗಿ ಹೆಜ್ಜೆ ಹಾಕುತಿದ್ದೇವೆ ಅಂತ ನಮಗನಿಸಿದರೆ ಹಾಗೆ ಅನಿಸುವುದು ಮಾತ್ರ ಬದುಕನ್ನು ಆರಂಭದಿಂದ ಪುನಃ ಒಮ್ಮೆ ಅವಲೋಕಿಸಿದರೇನೇ ಸಾಕು, ಅದು ಬರೀ ಭ್ರಮೆ ಎಂಬುದು ಮನವರಿಕೆಯಾಗುತ್ತದೆ. ದೂಡಲಾಗದಂಥದು ಕಾಲವೊಂದೇ ಕಾಲವೆಂಬುದರ ನೀರಿನ ನಿಲುದಾಣವೇ ಪ್ರಲಯವೇ? ಅಲ್ಲಿಂದ ಮುಂದೆ ಮತ್ತೆ ಮೊದಲಿಂದ ತೊಡಗುವ ಕಾಲಚಕ್ರ"[೧೧]

ಮನುಷ್ಯನ ನೈತಿಕತೆಗಿಂತ ಮಾನವೀಯತೆಯೇ ಮುಖ್ಯ. ಮಾನವೀಯ ಗುಣಗಳೇ ಮುಖ್ಯ ಎಂಬುದನ್ನು ನಾಗವೇಣಿ ತಮ್ಮ ಸಾಹಿತ್ಯ ಕೃತಿಗಳ ಮೂಲಕ ಮತ್ತೆಮತ್ತೆ ದಾಖಲಿಸುತ್ತಾರೆ. ಆ ಮೂಲಕವೇ ಅವರು ಕಂಡುಕೊಂಡ ಜೀವನ ದರ್ಶನವನ್ನು ಗುರುತಿಸಬಹುದಾಗಿದೆ.

ಬಗ್ಗುಂಡಿ ಪ್ರಸಂಗ ಕಥೆಯಲ್ಲಿ ಕರಿಯ ಹದಿನೇಳು ವರ್ಷದಿಂದ ವೆಂಕಪ್ಪಾಳ್ವರ ಮನೆಯಲ್ಲಿ ಊಳಿಗಕ್ಕಿದಾನೆ. ಗುತ್ತಿನ ಮನೆಗೆ ಕರಿಯಾ ಬಂದಾಗಿನಿಂದ ಸುಗ್ಗಿ, ಎಣೆಲ್, ಕೊಳಕೆ ಅಂತ ಮೂರು ಬೆಳೆಗಳನ್ನು ತೆಗೆಯಲಾರಂಭಿಸಿದ್ದ ಮನೆಯ ಧಣಿಯೊಬ್ಬನನ್ನು ಬಿಟ್ಟು ಮನೆಯ ಇತರರೆಲ್ಲರನ್ನು ಪ್ರೀತಿಸುತ್ತಿದ್ದ ಗೌರವಿಸುತ್ತಿದ್ದ.

ಬರ್ತಬರ್ತ ವೆಂಕಪ್ಪಾಳ್ವರು ಕರಿಯನ ಮೇಲೆ ನಡೆಸುವ ದಬ್ಬಾಳಿಕೆ ಹೆಚ್ಚಾಗುತ್ತಾ ಬಂದಿತ್ತು. ಕರಿಯನ ಮೇಲಿನ ಸಿಟ್ಟು ಉಮ್ಮಕ್ಕೆಯಲ್ಲಿ ಕೊನೆಗೊಳ್ಳುತ್ತಿತ್ತು. ಕರಿಯ ಮತ್ತು ಉಮ್ಮಕ್ಕೆ ಹೆಚ್ಚು ಕಡಿಮೆ ಒಂದೇ ವಯಸ್ಸಿನವರಾದರೂ ಉಮ್ಮಕ್ಕೆಯನ್ನು ಕರಿಯ ತಾಯಿ ಸ್ಥಾನದಲ್ಲಿಟ್ಟು ನೋಡಿದ್ದ. ಆದರೆ ವೆಂಕಪ್ಪಾಳ್ವರು ಅವರಿಬ್ಬರ ನಡುವೆ ಇಲ್ಲಸಲ್ಲದ ಸಂಬಂಧ ಕಲ್ಪಿಸಿಕೊಂಡು ಹೆಂಡತಿ ಮೇಲೆ ಪ್ರಹಾರ ಆರಂಭಿಸುತ್ತಿದ್ದರು. ಧಣಿಗಳ ಅವಾಚ್ಯ ಬೈಗುಳ ಭಾಷೆ ಕೇಳಿದಾಗಲೆಲ್ಲ ಕರಿಯ ಮುಖವೆತ್ತಲಾರದಷ್ಟು ಮುದುಡಿ ಹೋಗುತ್ತಿದ್ದ. ಅವಮಾನಗಳಿಂದ ಕುಗ್ಗುತ್ತಿದ್ದ.

ಬಗ್ಗುಂಡಿಗೆ ಹೋಗುವ ರಾತ್ರಿ ವೆಂಕಪ್ಪಾಳ್ವರ ಗಲಾಟೆ ಹೆಚ್ಚಾಯಿತು. ಉಮ್ಮಕ್ಕೆಯ ಮೇಲೆ ಬೈಗುಳದ ಜೊತೆಗೆ ಜುಟ್ಟುಹಿಡುದು ಹೊಡೆಯುವುದಕ್ಕೆ ಪ್ರಾರಂಭಿಸಿದಾಗ ಕರಿಯ ಜಗುಲಿಯಿಂದ ಚಾವಡಿಗೇರಿ ಆಳ್ವರನ್ನು ಜಾಡಿಸಿ ದೂರದೂಡಿದ್ದ. **"ನನ್ನ ಎಂಜಲು ನೆಕ್ಕಿ ನನ್ನ ಎದುರು ನಿಲ್ತಿಯೇನೋ**

ಬೇವರ್ಸಿ ಎಂದೆನ್ನುತ್ತಾ ಕರಿಯನ ಮೇಲೆ ಕೈ ಮಾಡಬೇಕು ಎನ್ನುವಷ್ಟರಲ್ಲಿ ಕರಿಯ ವೆಂಕಪ್ಪಾಳ್ವರೇ ಎಂದು ಆರ್ಭಟಿಸಿದ್ದು, ಆಳ್ವರಿಗೆ ಒಂದು ಕ್ಷಣ ಉಸಿರು ಸಿಲುಕಿಕೊಂಡ ಅನುಭವ".[೧೨] ಧಣಿಯರು ಎಂದೆನ್ನದೆ ಹೆಸರಿಡಿದು ಕೂಗಿದ ಕರಿಯನನ್ನು ಇಲಿಪಾಷಾಣ ಸವರಿದ ಸೌತೆಹೋಳನ್ನು ತಿನ್ನಿಸಿ ಸಾಯಿಸಬೇಕೆಂದು ಕೊಳ್ಳುತ್ತಾನೆ. ವೆಂಕಪ್ಪಾಳ್ವರು ತಾಯಿ ಮಗನಂತಿರುವ ಉಮ್ಮಕ್ಕೆ ಕರಿಯನಲ್ಲಿ ಇಲ್ಲದ ಸಂಬಂಧ ಕಟ್ಟಿ ಇಲ್ಲಸಲ್ಲದ ಅಪವಾದ ಹೊರಿಸಿ ಅನುಮಾನಿಸಿ ಉಮ್ಮಕ್ಕೆಯನ್ನು ಬೈದು ಜರಿದು ಜುಟ್ಟು ಹಿಡಿದು ಹೊಡೆಯುತ್ತಾನೆ.

ಆದರೆ ಇದೆ ಸಂಕಲನದ 'ಗಾಳ' ಕಥೆಯ ಮುಡೂರನ ಎದುರಿಗೆ ವೆಂಕಪ್ಪಾಳ್ವರು ಮಾನವೀಯ ಗುಣಗಳೇ ಇಲ್ಲದವನಾಗಿ ಕಾಣಿಸುತ್ತಾನೆ. ಶೆಟ್ಟರ ಗಟ್ಟದಲ್ಲಿರುವ ಆಸ್ತಿಯ ಉಸ್ತುವಾರಿ ನೋಡಿಕೊಂಡು ಹಣ ಸಂಪಾದನೆ ಮಾಡಬೇಕೆಂದು ಹೊರಟ ಮೂಡೂರ ತಾನು ತುಂಬಾ ಪ್ರೀತಿಸುವ ಚಿನ್ನಮ್ಮನನ್ನು ತನ್ನೊಂದಿಗೆ ಕರೆದುಕೊಂಡು ಹೋದರೆ ತನ್ನ ತಮ್ಮ ಬೇಚನಿಗೆ ಬೇಯಿಸಿ ಹಾಕೋರು ಯಾರು ಇಲ್ಲ ಎಂದು ಬೇಚನ ಉಸ್ತುವಾರಿಯಲ್ಲಿ ಚಿನ್ನಮ್ಮನನ್ನು ಬಿಟ್ಟು ಗಟ್ಟ ಹತ್ತುತ್ತಾನೆ.

ಗಟ್ಟ ಇಳಿದು ಬಂದಾಗ ಒಂದು ವರ್ಷ ಕಳೆದಿದೆ. ಅವನ ಪ್ರಕಾರ ಚಿನ್ನಮ್ಮನ ಹೊಟ್ಟೆಗೆ ಹತ್ತು ತಿಂಗಳು ದಾಟಿ ಹೋಗಿದೆ. **"ತಾನು ಗಟ್ಟ ಹತ್ತುವಾಗ ಚಿನ್ನಮ್ಮನನ್ನು ಬಿಟ್ಟು ಹೋಗಲೇ ಬಾರದಿತ್ತು. ತಮ್ಮ ಬೇಚ ಚಿನ್ನಮ್ಮನ ಮೇಲೆ ತೋರಿದ ಕಾಳಜಿಯಾದರೂ ಎಂಥದ್ದು? ಆ ಜುಮಾದಿಯ ದಯೆಯಿಂದ ಈ ಬಾರಿ ಆಕೆ ಬದುಕುಳಿದರೆ ಸಾಕು; ಮತ್ತೆಂದೂ ಆಕೆಗೆ ಹೊಟ್ಟೆಯೇ ಬೇಡ ಎಂದು ದುಃಖಿಸುತ್ತಿದ್ದ ಮುಡೂರ – ಪಶ್ಚಾತ್ತಾಪದ ಬೇಗುದಿಯಲ್ಲಿ ನರಳುತ್ತಾನೆ".**[೧೩]

ಇಂಥದೊಂದು ಸ್ಥಿತಿಯಲ್ಲಿಯೂ ತನ್ನ ಚಿನ್ನಮ್ಮನನ್ನು ಯಾವ ಧರ್ಮಾಸ್ಪತ್ರೆಗೆ ಕೊಂಡೊಯ್ಯಲಿ ಎಂಬ ಚಿಂತೆ ಆತಂಕದಲ್ಲಿದ್ದ. ಚಿನ್ನಮ್ಮ ಹೆರುವವರೆಗೂ ಯಾರಿಗೂ ಮುಖ ತೋರಿಸದೆ ಅವಮಾನದ ಬೇಗುದಿಯಲ್ಲಿ ಬೆಯ್ಯುತ್ತಿದ್ದ ಮುಡೂರ, ಚಿನ್ನಮ್ಮ ಹೆತ್ತ ಗಂಡು ಮಗುವನ್ನು ಕಂಡು ತನ್ನೆಲ್ಲ ನೋವನ್ನು ಮರೆತವನಂತೆ ಸಂತೋಷಗೊಳ್ಳುತ್ತಾನೆ. ಶೆಟ್ರಲ್ಲಿ ಈ ವಿಚಾರವನ್ನು ತುಂಬ ಸಂತಸದಿಂದಲೇ ಹೇಳಿಕೊಳ್ಳುವಾಗ ಮುಡೂರನ ಮಾನವೀಯತೆಯೇ ಎದ್ದು ಕಾಣುತ್ತದೆ.

ವೆಂಕಪ್ಪಾಳ್ವರಲ್ಲಿ ಹುಟ್ಟಿಕೊಂಡ ಸಂಶಯದಿಂದ ಕುಟುಂಬದ ಸಂತೋಷ ನೆಮ್ಮದಿ ಸಂಬಂಧಗಳೆಲ್ಲ ಹಾಳಾಗುತ್ತೆ. ಮೂಡೂರನ ಮುಗ್ಧತೆಯಿಂದ ಹಾಳಾಗಿರುವ ಕೌಟುಂಬಿಕ ನೆಮ್ಮದಿ ಹಾಗೂ ಸಂಬಂಧಗಳು ಸರಿಯಾಗುತ್ತೆ. ಮನುಷ್ಯನ ನೈತಿಕತೆಗಿಂತ ಮಾನವೀಯತೆ ಮುಖ್ಯ. ಮಾನವೀಯ ಗುಣಗಳೇ ಮುಖ್ಯ ಎಂಬುದು ನಾಗವೇಣಿಯವರು ಕಂಡುಕೊಂಡ ಜೀವನ

ದರ್ಶನವಾಗಿದೆ. ಮನುಷ್ಯತ್ವವೇ ಮುಖ್ಯವಾಗಿರುವುದನ್ನು 'ಮೀಯುವ ಆಟ' ಸಂಕಲನದ 'ತಾಯ್ತನ' ಕಥೆಯಲ್ಲಿಯೂ ಗುರುತಿಸಬಹುದಾಗಿದೆ.

ಲೇಖಕಿ ತಾಯ್ತನದಲ್ಲಿ ಜೀವನ ದರ್ಶನವನ್ನು ಕಂಡುಕೊಂಡವರಾಗಿದ್ದಾರೆ. ಅದೆಷ್ಟೋ ವರ್ಷಗಳಿಂದ ಮುಸ್ಲಿಂ ಕುಟುಂಬದೊಂದಿಗೆ ಯಾವೊಂದು ಭೇದವಿಲ್ಲದೆ ಅಣ್ಣ ತಮ್ಮಂದಿರಂತೆ ಸಾಮರಸ್ಯದಿಂದ ಬದುಕು ಸಾಗಿಸುತ್ತಿದ್ದ ಆ ಕೇರಿಯ ಶೂದ್ರಮಂದಿಯ ಎದೆಯೊಳಗೆ ಯಾರೋ ಕಿಡಿಗೇಡಿಗಳು ಮನೆಮುರುಕರು ಜಾತಿ–ಮತದ ಭೂತವನ್ನು ಹೊಕ್ಕಿಸಿದ್ದಾರೆ.

ಮಸೀದಿಯ ಪಕ್ಕ ಒಂದು ಸುಬ್ರಹ್ಮಣ್ಯ ದೇವಸ್ಥಾನ ಕಟ್ಟುವ ಸುದ್ದಿ ಆ ಕಡೆಯಿಂದ ಅಪಸ್ವರವಾಗಿ ರಣಕಹಳೆ ಊದಿದಂತೆ ಈ ಕಡೆಯಿಂದ ರಣಭೇರಿಯೇ ಮೊಳಗುತ್ತದೆ. ಕ್ರೋಧತಪ್ತ ಮನಸ್ಸುಗಳು ಹಿಂದೊಮ್ಮೆ ತಾವು ಪರಸ್ಪರ ಸಾಮರಸ್ಯ ಪ್ರೀತಿಯಿಂದ ಬದುಕಿದ್ದೆವು ಎಂಬುದನ್ನು ಮರೆತು ದ್ವೇಷ, ಹಠ, ಸಾಧಿಸುತ್ತಿದ್ದವು.

ಒಂದು ಕಡೆ ಮೈದಿನ್‌ಬ್ಯಾರಿಯವರ ಶವದ ಯಾತ್ರೆಗೆ ಸಿದ್ಧವಾಗಿದೆ. ಇನ್ನೊಂದು ಕಡೆ ತುಕ್ರಮ್ಮೊಲಿಯ ಗುಡಿಸಲಲ್ಲಿ ಸುಂದರಿಗೆ ಹೆರಿಗೆ ನೋವು ಶುರುವಾಗಿದೆ. ಆ ಕೇರಿಯಲ್ಲಿರುವ ಪ್ರಸೂತಿ ಪ್ರವೀಣೆ ಐಸಂಬ್ಯಾರ್ದಿ ಒಬ್ಬರೆ. ಐಸಂಬ್ಯಾರ್ದಿ ಇದ್ದತ್ ವಿಧಿಯಲ್ಲಿರುವಾಗಲೆ ಹೆರಿಗೆ ಮನೆಗೆ ಹೋಗುತ್ತಾಳೆ. ತಾನು ಇಲ್ಲಿ ಗೋಳಾಡಿದರೆ ಅಲ್ಲಿ ಸಾಯುತ್ತಿರುವ ತಾಯಿ ಮಗುವನ್ನು ಬದುಕಿಸಲಾಗಲ್ಲ ಎಂಬ ಸತ್ಯಗೊತ್ತಿದೆ.

"ಎಲ್ಲರಿಗೂ ನ್ಯಾಯ ಕಟ್ಟು ಅಂತಾ ಒಂದಿರುತ್ತದೆ. ಅದು ಸಾಂಪ್ರದಾಯಿಕ ಹಾಗೂ ಶಿಸ್ತಿನ ಬದುಕಿನ ಒಡವೆಗಳು ಹೌದು! ಇದೀಗ ತಾನು ಕಟ್ಟುಪಾಡು ಎಂದು ಕುಳಿತರೆ ತನ್ನಿಂದ ಎಂದೆಂದೂ ಸೃಷ್ಟಿಸಲಾಗದ ಜೀವಗಳೆರಡನ್ನು ನಿರ್ಜೀವಗೊಳಿಸಿದಂತಾಗುತ್ತದೆ. ಸಂಪ್ರದಾಯದ ಕಟ್ಟನ್ನು ಎದುರಿಗಿಟ್ಟುಕೊಂಡು ಮತ್ತೊಂದು ಜೀವವನ್ನು ಮುರುಟಿಸುವುದು ಅಮಾನವೀಯವೂ ಹೌದು. ಮನಸ್ಸಿನ ವಿಕಾರವೂ ಹೌದು ಎಂದು ಆ ದುಃಖಿತ ಮನಸ್ಸಿಗೆ ತೋಚಿದೊಡನೆ ಆಕೆ ಹೆರಿಗೆ ಮನೆಗೆ ಹೊರಡಲು ಅನುವಾದರು".[14]

ಮನುಷ್ಯ ತಾನು ನಿರ್ಮಿಸಿಕೊಂಡ ಸಮಾಜದಲ್ಲಿ, ತಾನೇ ಕಟ್ಟುಪಾಡುಗಳನ್ನು ಮತ, ಧರ್ಮದ ಹೆಸರಿನಲ್ಲಿ ರೂಪಿಸಿಕೊಂಡಿದ್ದಾನೆ. ಯಾವುದೇ ನಿಲುವುಗಳು ಜೀವಪರವಾಗಿರಬೇಕು ಎಂದುಕೊಂಡಾಗ ಆ ಬಗೆಯ ಚೌಕಟ್ಟಿನಿಂದ ಹೊರಬರುವುದು ಅನಿವಾರ್ಯ. ಒಳಿತಿನಹಾದಿಯಲ್ಲಿ ಯೋಚನೆ ಮಾಡುವಾಗ ಸಮಾಜಮುಖಿ ಆಲೋಚನೆಗೆ ಯಾವುದೇ ಮಿತಿಯನ್ನು ಮೀರಿದರೂ ತಪ್ಪಲ್ಲ ಎಂಬ ಆಶಯ ಇಲ್ಲಿಯದು.

ವಾರದ ಹಿಂದೆ ಕೇರಿಯವರು ನಡೆದುಕೊಂಡತೆ ಐಸಂಬ್ಯಾರ್ರಿ ನಡೆದುಕೊಂಡಿದ್ದರೆ ತಾಯಿ ಮಗುವಿನ ಕಥೆ ಏನಾಗುತ್ತಿತ್ತು. ಆದರೆ ಆಕೆಗೆ ಮನುಷ್ಯತ್ವ ಮುಖ್ಯವಾಗಿದೆ. "ಜೀವ ದೊಡ್ಡದು.. ಬದುಕು ಅದಕ್ಕಿಂತ ಬಲು ದೊಡ್ಡದು.. ಸಂಪ್ರದಾಯ ಅದಕ್ಕಿಂತಲೂ ದೊಡ್ಡದೇನಲ್ಲ" ಎನ್ನುವ ಇಲ್ಲಿನ ನಿಲುವಿನಲ್ಲಿ ಲೇಖಕಿಯ ಜೀವನ ದರ್ಶನವನ್ನು ಗುರುತಿಸಬಹುದಾಗಿದೆ.

ತಾಯ್ತನದ ಅನನ್ಯ ಹಂಬಲಿಕೆಯನ್ನು "ಸೂರ್ಯನಿಗೊಂದು ವೀಳ್ಯ" ಪ್ರಬಂಧ ಸಂಕಲನದ 'ಅಳು ನುಂಗಿತ್ತಾ.. ಕಂದ' ಲೇಖನದಲ್ಲಿ ಗುರುತಿಸಬಹುದಾಗಿದೆ. ಇದು ನಾಗವೇಣಿಯವರು ಕಂಡುಕೊಂಡ ಮಾತೃತ್ವದ ಇನ್ನೊಂದು ಭಾವುಕತೆ.

ರಾತ್ರೋರಾತ್ರಿ ಬೆಸ್ತರ ಓಣಿಯ ಮೂಕಿ ಮಂಗಮ್ಮ ತನ್ನ ಕುಲಬಾಂಧವರೊಂದಿಗೆ ಬಂದು ಬಾಗಿಲು ಕಿಟಕಿ ಬಾರಿಸಿ ಸದ್ದು ಮಾಡುತ್ತಾಳೆ. ಡಾಕ್ಟ್ರು ಬಾಗಿಲು ತೆರೆದದ್ದೇ ತಡ, ಮೂಕಿ ತನ್ನ ಕಣ್ಣು ಕೈಗಳ ಹಾವ-ಭಾವ ಕೀರಲು ಧ್ವನಿಯಿಂದಲೇ ಮಾತಿನ ವರಸೆ ಆರಂಭಿಸಿದ್ದಳು. ಅಳುತ್ತಿದ್ದ ತಾಯಿಯನ್ನು ಎದೆಗಪ್ಪಿಕೊಂಡ ಮೂಕಿ ತನ್ನ ಭಾಷೆಯಲ್ಲೆ ಸಮಾಧಾನಿಸುತ್ತಿದ್ದರೆ, ಕಣ್ಣಾಲಿಗಳಲ್ಲಿ ನೀರು ತುಂಬಿಸಿಕೊಂಡಿದ್ದ ಮಗುವಿನ ಅಪ್ಪ, ತನ್ನ ಜೇಬಿನಿಂದ ದೊಡ್ಡಾಕ್ಟ್ರು ಕೊಟ್ಟ ಚೀಟಿಯನ್ನು ಡಾಕ್ಟ್ರಿಗೆ ಕೊಟ್ಟು ಅಪ್ಪನೂ ದುಃಖದಿಂದ ಬಿಕ್ಕಳಿಸತೊಡಗಿದ್ದ.

ಆ ಪುಟ್ಟ ಮಗುವಿಗೆ ಲಿವರ್ ಕ್ಯಾನ್ಸರ್ ತೀರಾ ಉಲ್ಬಣಿಸಿದೆ. ಹುಬ್ಬಳಿಯ ದೊಡ್ಡಾಸ್ಪತ್ರೆ ವೈದ್ಯರು ಮಗುವಿನ ಸಾವಿಗೆ ಎರಡು ದಿನದ ಗಡುವು ಕೊಟ್ಟು ಹೆತ್ತರವರನ್ನು ಹಳ್ಳಿಗೆ ವಾಪಾಸ್ಸು ಕಳಿಸಿದ್ದಾರೆ. ಬದುಕಿರುವಷ್ಟು ಕ್ಷಣ ಮಗು ಅಸಾಧ್ಯ ನೋವಿನಿಂದ ಚೀರಾಡಬಹುದು ಎಂಬ ಮುಂದಾಲೋಚನೆಯಿಂದ ಔಷಧದ ಚೀಟಿಯನ್ನು ಡಾಕ್ಟ್ರಿಗಾಗಿ ಬರೆದು ಕಳಿಸಿದ್ದಾರೆ. ಅದುವರೆಗೂ ನಿದ್ದೆ ಔಷಧದ ಮತ್ತಲ್ಲಿದ್ದ ಮಗು ರಾತ್ರಿ ಎಚ್ಚೆತ್ತುಕೊಂಡು ಒಳಜೀವವನ್ನು ಹೊರಗಿಡುವ ಹಾಗೆ ಅಳತೊಡಗಿತ್ತಂತೆ.

ಮಗುವಿನ ಅಪ್ಪ ಡಾಕ್ಟ್ರು ಕಾಲಿಗಡ್ಡಬಿದ್ದು ಈ ಮಗುವಿನ ಸಂಕ್ಟ ನೋವುನ ನೋಡ್ಲಾರೆ ಸ್ವಾಮಿ ಅತ್ಲಾಗೆ ಒಂದು ಚೂಜಿ (ಇಂಜೆಕ್ಷನ್) ಮಾಡಿ ಒಮ್ಮಗೆ ಸಾಯ್ಸಿ ಬಿಡಿ ಅಂತ ಹೇಳ್ತಾನೆ. ಸಾಯಿಸೋದು ಡಾಕ್ಟ್ರು ಕೆಲ್ಸ ಅಲ್ಲಪ್ಪ.. ಅಂದ್ರೆ, ಹೋಗ್ಲಿ.. ಸಾಯುವರ್ಗು ಎಲ್ಡು ದಿನ ಮಗು ಎದ್ದೇಳದಂತೆ ನಿದ್ದೆ ಬೀಳುವ ಚೂಜಿ ಮಾಡಿ ಅಂತ ದೀನನಾಗಿ ಕೇಳಿ ಕೊಳ್ಳುತ್ತಾನೆ. ಡಾಕ್ಟ್ರು ನಿರ್ಧಾರಕ್ಕೆ ಬರುವುದರೊಳಗೆ ಮೂಲೆಯಲ್ಲಿ ನಿಶಬ್ಧಳಾಗಿ ಅಳುತ್ತ ನಿಂತಿದ್ದ ತಾಯಿಗೆ ಇದ್ದಕಿದ್ದಂತೆ ಏನನಿಸಿತೋ ತಾಯಿ ಥಟ್ಟನೆ ಡಾಕ್ಟ್ರ ಕಾಲ್ಗಳಿಗೆ ಕುಸಿದು.

"ಸ್ವಾಮಿ ನನ್ಮಗ ಇನ್ನ ಬದುಕೂದೆ ಒಂದೀಟು ತಾಸು.. ಅದನ್ನ ನಿದ್ದಿಗಿಳಿಸ್ ಬ್ಯಾಡ್ರೀ.. ಅದು ನನ್ ನೋಡ್ಬೇಕ್ರೀ.. ನಾನು ಹಾಲುಣಿಸ್ಬೇಕ್ರೀ.. ಅದ್ರ ಆಟ – ನಗುಕಾಣ್ಬೇಕ್ರ.! ನಿಮ್ಮ ಅಣ್ಣಂತೀನ್ರೀ.. ನನ್ನ ಮಗೂಗೆ ಸಾಯ್‌ವರ್‍ಗು ನೋವ್ ಹೋಗಂಗೆ ಚೂಜಿ ಮಾಡ್ರೀ.. ಸ್ವಾಮ್ಯಾರೇ..!"[79] ಒಟ್ಟಿನಲ್ಲಿ ದ್ವಂದ್ವದಲ್ಲಿ ಸಿಲುಕಿದ ಡಾಕ್ಟ್ರು ತಿರುಗಿ ಲೇಖಕಿಯನ್ನು ನೋಡುತ್ತಾರೆ. ಆ ಕ್ಷಣ ಡಾಕ್ಟ್ರಿಗೆ ಬೇಕಾದದ್ದು ಒಬ್ಬ ತಾಯಿಯಾಗಿ ಅವರ ಅಭಿಪ್ರಾಯ. ಕ್ಷಣ ಮಾತ್ರದಲ್ಲಿ ಅವರು ವೈದ್ಯರಿಗೆ ಕೊಟ್ಟ ಸಲಹೆ ಆ ತಾಯಿ ಕೊಟ್ಟ ಸಲಹೆಯನ್ನೇ.

ತಾ ಹೆತ್ತ ಮಗು ತನ್ನೆದುರಿಗೆ ಅದು ಅಷ್ಟೊಂದು ನೋವಿನಲ್ಲಿ ಯಾತನೆಪಡುವುದನ್ನ ಯಾವ ತಾಯಿಯೂ ಸಹಿಸಲಾರಳು ಎಂಬುದನ್ನ ಮನ ನೋಯುವಂತೆ ಕಣ್ಣು ಹನಿಗೂಡುವಂತೆ ಚಿತ್ರಿಸಿರುವಲ್ಲಿ ಒಬ್ಬ ತಾಯಾಗಿ ಕಂಡುಕೊಂಡ ಜೀವನ ದರ್ಶನವನ್ನು ಅರಿಯಬಹುದಾಗಿದೆ.

ಆಚಾರ–ವಿಚಾರ, ನಂಬಿಕೆ–ಅಪನಂಬಿಕೆಗಳ ಸುತ್ತ ಹೆಣೆದುಕೊಂಡ ನಾಗವೇಣಿಯವರ ಕೆಲವು ಕಥೆಗಳಲ್ಲಿ ಅವರು ಕಂಡುಕೊಂಡ ದರ್ಶನವನ್ನು ಗಮನಿಸಬಹುದಾಗಿದೆ. 'ನಾಕನೇ ನೀರು' ಸಂಕಲನದ ಮಾಯಿಲನ ಭೂತ ಕಥೆಯಲ್ಲಿ ಮಾಯಿಲ ತಲೆಮಾರುಗಳಿಂದ ನಡೆದುಕೊಂಡು ಬಂದ ಕಲ್ಲುರ್ಟಿಯ ಕೋಲವನ್ನು ಆಚರಿಸುತ್ತಾನೆ.

ದುಗ್ಗನ ಅಪ್ಪ ಬಾಡ ಮಾಯಿಲನ ಅಪ್ಪನ ಕಾಲದಿಂದಲೂ ಕಲ್ಲುರ್ಟಿಗೆ ಕೋಲ ಕಟ್ಟಿದವ; ಮಾಯಿಲನ ಕಾಲದಲ್ಲಿ ದುಗ್ಗನ ಕಲ್ಲುರ್ಟಿಗೆ ಭೂತ ಕಟ್ಟಬೇಕು ಎನ್ನುವುದು ಮಾಯಿಲನ ವಾದ.

ಹೆಚ್ಚು ಕಲಿಯದ ಮಾಯಿಲನ ಮಗ ಕೃಷ್ಣಪ್ಪನಿಗೆ ದುಗ್ಗನಲ್ಲಿ ಏನೋ ಅಸಮಧಾನ ಕಾರಣ ಕೃಷ್ಣಪ್ಪ ದುಗ್ಗನಿಗೆ ಪ್ರತಿವರ್ಷ ಹಣಕೇಳಲು ಬಂದಾಗ ದುಗ್ಗ, ಮಾಯಿಲನ ಮನೆಯ ಸಂಗತಿ ಮಾತ್ರವಲ್ಲ ದನಕರು, ಗದ್ದೆ ತೋಟ, ಮನೆಯವರ ಆರೋಗ್ಯ, ಹೆಣ್ಣುಮಕ್ಕಳ ಗಂಡನಮನೆ, ಮುಂಬೈನಲ್ಲಿರುವ ಗಂಡು ಮಕ್ಕಳ ಬಗ್ಗೆ ಕೂಲಂಕಷವಾಗಿ ವಿಚಾರಿಸಿಕೊಳ್ಳುತ್ತಾನೆ. ಒಂದು ವೇಳೆ ಕೃಷ್ಣಪ್ಪ ಹೇಳದಿದ್ದರೂ ಕಲ್ಲುರ್ಟಿಯ ದಿನ ಬಿದಿರಿನ ಅಟ್ಟೆಗೆ ಅಣಿ ಹೆಣೆಯುವಾಗ ಮಾಯಿಲನ ದುಗ್ಗನಿಗೆ ಎಲ್ಲ ಸುಖಕಷ್ಟವನ್ನು ಹೇಳಿಕೊಳ್ಳುತ್ತಿದ್ದ. ಅದನ್ನೆ ದುಗ್ಗ ಭೂತ ಮೈಮೇಲೆ ಬಂದಂತೆ ಆವೇಶ ಭರಿತನಾದಾಗ ಹೇಳುತ್ತಿದ್ದ ಆ ಮಾತನ್ನ ಕೇಳಿ ನೆರೆದವರ ಮೈ ರೋಮಾಂಚನಗೊಂಡು ಭಯ ಭಕ್ತಿ ಹೆಚ್ಚಾದರೆ, ಕೊಟ್ಟಿಗೆಯ ಬಾಗಿಲಲ್ಲಿ ನಿಂತ ಕೃಷ್ಣಪ್ಪನಿಗೆ ಮಾತ್ರ ದುಗ್ಗನ ಮೇಲೆ ರೋಷ ಹೆಚ್ಚುತ್ತಿತ್ತು.

ಕಲ್ಲುರ್ಟಿ ವಿಪರೀತ ಸಿಟ್ಟಿನಿಂದ ಬಾವಿಗೆ ಹಾರ ಹೋಗುವ 'ಬುದ್ದಿ' ತೋರಿಸುತ್ತಿತ್ತು. ಭಯಪಟ್ಟ ಮಾಯಿಲ ಮೊದಲೆ ಆ ಬಗ್ಗೆ ಜಾಗೃತನಾಗಿ ಗಟ್ಟುಮುಟ್ಟು ಹುಡುಗರನ್ನು ಬಾವಿ ಬಳಿ ನಿಲ್ಲಿಸುತ್ತಿದ್ದ. ಈ ಬಾರಿ ಕೃಷ್ಣಪ್ಪ ಆ ಹುಡುಗರನ್ನ ಹಟ್ಟಿಯೊಳಗೆ ಶರಾಬಿನಲ್ಲಿ ಮುಳುಗಿಸಿದ್ದ. ಆವೇಶದಿಂದ ಬಾವಿಯ ಕಡೆಗೆ ಓಡಿದ ಕಲ್ಲುರ್ಟಿಯು ಆಯತಪ್ಪಿ ಬಾವಿಗೆ ಬಿದ್ದಿತ್ತು.

ಇಲ್ಲಿ ಲೇಖಕಿ ಭೂತಕೋಲವನ್ನು ನಿರಾಕರಿಸುತ್ತಿಲ್ಲ ಆದರೆ ಮೂಢನಂಬಿಕೆಯನ್ನು ವಿರೋಧಿಸುತ್ತಾರೆ. ಕೃಷ್ಣಪ್ಪನ ಸ್ಥಳೀಯ ಜ್ಞಾನವನ್ನು ಮೆಚ್ಚುವ, ಪೋಷಿಸುವ ದೃಷ್ಟಿ ಇಲ್ಲಿದೆ.

ಇಂಥದ್ದೆ ಆಶಯವನ್ನು ವ್ಯಕ್ತಪಡಿಸುವ ನಾಗವೇಣಿಯವರ ಮತ್ತೊಂದು ಕಥೆ 'ಬೆಲ್ಲ'. ಇದು ಪ್ರಾದೇಶಿಕ ಆಚರಣೆಯಾಗಿರುವ ಭೂತಾರಾಧನೆ, ಮಡಿ, ಶಾಸ್ತ್ರ ವಿಧಾನವನ್ನು ಕುರಿತದ್ದಾಗಿದೆ.

ಜೋಯಿಸರ ಮಗಳು ವಸಂತಿ ಮತ್ತು ಹೊಲೆ ಮಾದಿಗನಾದ ಘಟ್ಟದ ಮಾಕಾಳಿ ಮಾಸ್ತ್ರು ಇಬ್ಬರು ಓಡಿಹೋಗಿ ಮದುವೆಯಾಗುತ್ತಾರೆ. ಹಾಗೆ ಅವರು ಊರುಬಿಟ್ಟು ಹೋಗುವ ಮೊದಲು ಅಪ್ಪಣ್ಣನ ಮನೆಯಲ್ಲಿ ಬೆಲ್ಲದ ಗಂಟನ್ನು ವಾಂಟೆ ರಾಮನ ಮನೆಯಲ್ಲಿ ಉಪ್ಪಿನಕಾಯಿ ಜಾಡಿಯನ್ನು ಇಟ್ಟು ಹೋಗಿರುತ್ತಾನೆ. ಸಾಕಷ್ಟು ದಿನ ಕಳೆದರು ಮಾಸ್ತ್ರು ಬರದೆ ಇದ್ದಾಗ ಸಿಟ್ಟಿನಿಂದ ಅಪ್ಪಣ್ಣನ ಹೆಂಡತಿ ಚಿನ್ನಮ್ಮ, ವಾಂಟೆ ರಾಮನ ಹೆಂಡತಿ ರುಕುಮಿ ಕ್ರಮವಾಗಿ ಬೆಲ್ಲ ಮತ್ತು ಉಪ್ಪಿನ ಕಾಯಿಯನ್ನ ಅಡುಗೆ ಮನೆಯಲ್ಲಿ ಬಳಸಿದ್ದರು. ಅದನ್ನು ತಿಂದು ಭೂತದ ಕೋಣೆ ಹೊಕ್ಕಿದ್ದರಿಂದ ಮೈಲಿಗೆಯಾಗಿದೆ. ಹಾಗಾಗಿಯೇ ತಮ್ಮ ಹೆಂಡತಿಯರು ದೆವ್ವ ಹಿಡಿದವರ ಹಾಗೆ ನಡೆದುಕೊಳ್ಳುತ್ತಿದ್ದಾರೆ ಇದು ಭೂತದ ಏತಲ್ಲದೆ ಮತ್ತೇನಲ್ಲ ಎಂದು ಕೊಳ್ಳುತ್ತಾರೆ.

ಹಾಗಾಗಿ ಜೋಯಿಸ್ರಲ್ಲಿ ಒಳ್ಳೆಯ ದಿನ ಕೇಳಿ ಅವರ ಭಾವಮೈದುನ ನಾರ್ಣತಂತ್ರಿಗಳನ್ನು ಮನೆಗೆ ಕರೆಯಿಸಿ ಭೂತ ಶುದ್ದ ಮಾಡಿಸುವುದಕ್ಕೆ ಹೋಗುತ್ತಾರೆ. ಆಗಲೇ ವಸಂತಿ ಮತ್ತು ಮಾಕಾಳಿ ಮಾಸ್ತ್ರು ಓಡಿ ಹೋಗಿದ್ದು ತಿಳಿಯುತ್ತದೆ. ಭೂತ ಶುದ್ಧಿಗೆ ದಿನ ಕೇಳಲು ಹೋದ ಅಪ್ಪಣ್ಣ ಹಾಗೂ ವಾಂಟೆ ರಾಮ ಇದೀಗ ಜೋಯಿಸರ ಇಡಿಯ ಕುಲವೇ ಅಶುದ್ಧದಲ್ಲಿ ಮುಳುಗಿರುವಾಗ ತನ್ನ ಭೂತ ಶುದ್ಧದ ಬಗ್ಗೆ ಜೋಯಿಸರು ತಾನೇ ಏನು ಮಾಡಿಯಾರು? ಎಂದು ಆಲೋಚಿಸಿಯೇ ಅಪ್ಪಣ್ಣ ಮರಳಿ ಮನೆಯತ್ತಾ ನಡೆದಿದ್ದ.

ಸಂಪ್ರದಾಯ, ರೂಢಿ, ಆಚರಣೆಗಳು ಎಲ್ಲವುಬೇಕು. ಮೂಢನಂಬಿಕೆಗಳೇ ಎಲ್ಲವೂ ಆಗ ಬಾರದಲ್ಲ. ಹಾಗಾಗಿ ಕಟ್ಟುಪಾಡುಗಳನ್ನು ಮೀರಬೇಕು ಎನ್ನುವುದು ಇಲ್ಲಿಯ ಆಶಯದಲ್ಲಿ ಲೇಖಕಿಯ ಜೀವನ ದರ್ಶನವನ್ನು ಗುರುತಿಸಬಹುದಾಗಿದೆ.

'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕಥೆ ವೈದೇಹಿಯವರ ಜೀವನ ದರ್ಶನವನ್ನು ಸೂಚಿಸಬಹುದಾದ ಮಹತ್ವದ ಕಥೆಯಾಗಿದೆ. ಕಾಳಿದಾಸನ ಶಕುಂತಲೆಯ ಕಥೆಯನ್ನು ಹಲವು ಕವಿಗಳು ತಮ್ಮ ಕೃತಿಗಳಿಗೆ ವಸ್ತುವಾಗಿಸಿಕೊಂಡಿದ್ದಾರೆ. ಆಯಾಯ ಲೇಖಕರ ದೃಷ್ಟಿಗೆ ಲೋಕದೃಷ್ಟಿಗೆ ಪೂರಕವಾಗಿ ಕಥೆಯೂ ಬದಲಾಗುತ್ತಾ ಬಂದಿದೆ. ಇದು ಸಹಜವಾದುದ್ದೇನಲ್ಲ. ಒಂದೇ ವಸ್ತುವನ್ನಿಟ್ಟುಕೊಂಡು, ಒಂದೇ ಪಾತ್ರವನ್ನಿಟ್ಟುಕೊಂಡು ಮೂಲಕಥೆಗೆ ಧಕ್ಕೆಯಾಗದಂತೆ ಪ್ರತಿಯೊಬ್ಬ ಲೇಖಕನು ತನ್ನದೇ ಆದ ರೀತಿಯಲ್ಲಿ ಪಠ್ಯಾಂತರ ಮಾಡಿಕೊಳ್ಳುತ್ತಾನೆ. ಈ ಕಥೆಯನ್ನು ಗಮನಿಸಿದಾಗ ವೈದೇಹಿ ತಮಗೆ ಆಪ್ತವಾದ ವಸ್ತುವನ್ನೇ ಆಯ್ದುಕೊಂಡಿದ್ದಾರೆ ಅನ್ನಿಸುತ್ತದೆ.

ವೈದೇಹಿಯವರ ಶಕುಂತಲೆ ಹೇಳುತ್ತಾಳೆ **"ತಂದೆ ಕಣ್ವರನ್ನು ಭೇಟಿ ಮಾಡಲು ಬರುತ್ತಿದ್ದ ರಾಜರು, ಸಾಮಂತರು ಹಲವಾರು. ವಯೋಗುಣಕ್ಕೆ ಅನುಸಾರವಾಗಿ ಚಲಿಸುತ್ತಿದ್ದವು ಕಣ್ಣುಗಳು. ಈ ಶಕುಂತಲೆ ಮುಗ್ದೆ, ಯಾರಿಗೆ? ಹೊರಗಿನಿಂದ ನೋಡುವವರಿಗೆ. ಆಕೆಗಲ್ಲ. ಆಕೆಯ ಗಮನ ಯಾರ ಮೇಲೆಯೂ ಸ್ಥಿರವಾಗಲಿಲ್ಲ. ನಾನೆಂಬುದು ಇಲ್ಲವೇ ಆಗಿಬಿಡುವಂತಹ ತಾದ್ಮಾತೆ ಉಂಟಾಗಲಿಲ್ಲ, ಕಣ್ವರೊಡನೆ ನನ್ನನ್ನು ಕೇಳಿದ ರಾಜರಿಗೆ ಅವರೂ ಕೊಡಲಿಲ್ಲ. ಮಾತಿಗೊಮ್ಮೆ ಕಣ್ವರು ಹೇಳಿದ್ದರು. 'ನನ್ನ ಶಕುಂತಲೆಯ ಪತಿ ಅಂತಿಂಥವನಲ್ಲ; ಕಣ್ವರನ್ನು ಬಿಟ್ಟು ಹೋಗುವ ಗಳಿಗೆ ಸಹಿಸಲಾರದ್ದು ಎನಿಸಿತು. 'ನಿಮ್ಮನ್ನು ಬಿಟ್ಟು ಎಲ್ಲಿಗೂ ಹೋಗುವವಳಲ್ಲ ಈ ಶಕುಂತಲೆ' ಎಂದೆ. ಕಿರುನಗುತ್ತಿದ್ದ ಕಣ್ವರು ತಕ್ಷಣವೇ ಗಂಭೀರರಾದರು. 'ಮಗೂ, ಹಾಗೆ ಹೇಳಲೇ ಬಾರದು ನೀನು'- ಬಲು ಮೆಲುವಾಗಿತ್ತು ನುಡಿ ಅಂತರ್ವಾಣಿಯಂತೆ".**[೧೬]

ಕಣ್ವರಿಗೆ ಭವಿಷ್ಯದ ಎಲ್ಲಾ ಸೂಚನೆಗಳು ಇದ್ದೆ ಇಂಥ ಮಾತುಗಳನ್ನಾಡಿರಬೇಕು ಎನ್ನುವ ಶಕುಂತಲೆಯ ಭಾವ ಇಲ್ಲಿ ವ್ಯಕ್ತವಾಗಿದೆ. ದುರ್ವಾಸರು ಶಾಪಕೊಟ್ಟಿದ್ದನ್ನು ನಿರೂಪಿಸುವಾಗಲೇ ತನ್ನನ್ನು ತಾನು ದುಷ್ಯಂತನಿಗೆ ಹೇಗೆಲ್ಲಾ ಅರ್ಪಿಸಿಕೊಂಡಿದ್ದಳು ಎಂಬುದು ಅರ್ಥವಾಗುತ್ತದೆ. ದೂರ್ವಾಸರು ಯಾಕಾದರೂ ನನಗೆ ಶಾಪ ಕೊಟ್ಟರು? ಅವರೊಬ್ಬ ತಪೋಧನರು. ಅನ್ಯಾಯ ಕಂಡರೆ ಕೆಂಡವಾಗುವ ಋಷಿ ಎಂದು ಕಣ್ವರಿಗೆ ಮೆಚ್ಚು. ನನ್ನ ಚಿಕ್ಕಂದಿನಿಂದಲೇ ಅವರು ಆಶ್ರಮಕ್ಕೆ ಬಂದು ಹೋಗುತ್ತಿದ್ದರು. ಅವರು ಬಂದಾಗೆಲ್ಲ ನಾ ಚಿಗರೆಮರಿಯೊಂದಿಗೆ ಅವರ ತೊಡೆಯೇರುತ್ತಿದ್ದೆ. 'ನಿನಗಲ್ಲದೆ ಇದಕ್ಕೂ ಜಾಗ ಕೊಡಬೇಕೇ ನಾನು?' ಇತ್ಯಾದಿ ನುಡಿಯುತ್ತ ಮುದ್ಧಿಸುತ್ತಿದ್ದರು. ನನ್ನ ಎಳಸು ಭಾವನೆಗಳಿಗೆ ಅವರೊಬ್ಬ ದೊಡ್ಡ ಕೇಳುಗರಾಗಿದ್ದರು. 'ಮಗೂ, ನೋವಿಲ್ಲದ ಬದುಕು ಅಪರೂಪ. ನಿನಗೆ ಅಪರೂಪದ ಬದುಕು ಸಿಗಲಿ'- ಎಂದು ಪಿತ ಕಣ್ವರೆದುರಿಗೇ ಒಮ್ಮೆ ಹರಸಿದ್ದರು.

ಹಾಗಾದರೆ ತಂದೆ ಕಣ್ವರಿಗೆ, ದುರ್ವಾಸರಿಗೆ, ಮುಂದೆ ತಾನು ಹೀಗೆಲ್ಲ ಹೆಜ್ಜೆಯಿಡುತ್ತೇನೆಂದು ತಪ್ತತೆಯಲ್ಲಿ ಅದ್ದಿಕೊಳ್ಳುತ್ತೇನೆಂದು ತಿಳಿದಿತ್ತೇ ಹೇಗೆ?

'ಆತ ಬಂದವರೇ ಏನಿದೇನಿದು! ನಮ್ಮ ಶಕುಂತ ಪಕ್ಷಿ ಆತಂಕಳೇ ಎಂದು ನಕ್ಕರೂ ನಗೆಯಲ್ಲಿ ಬಲವಂತವಿತ್ತು. ನಾ ನಗಲಿಲ್ಲ ಕಣ್ಣು ಮುಚ್ಚಿದೇನಿಸಿದ ಆತ ಉಗ್ರರೂಪ ತಾಳಿದರು ಅವರು ತುಟಿ ತೆರೆಯುವ ಮೊದಲೆ 'ಆಗದಾಗದು! ತಾತ, ಆತ ಧರ್ಮಪಾಲಕನಾಗಿ ಬಹುಕಾಲ ಬದುಕಿರಬೇಕು', – ನುಡಿ ಆಲಿಸಿ ದುರ್ವಾಸರು ಮೌನವಾದರು. ಶಕುಂತಲೆಯಲ್ಲಿ ಹೆಪ್ಪುಗಟ್ಟಿದ ಶೋಕ ಅವರಿಗೆ ಸ್ಪಷ್ಟವಾಗಿರಬೇಕು 'ಛೆ! ಆತ ಜಾಣ ಮರೆವಿನ ಮಲ್ಲ' ಎಂದರು ಸ್ವಗತವೆಂಬಂತೆ. 'ಮಗೂ ರಾಜಮುದ್ರೆಯ ಉಂಗುರವಿದೆಯಷ್ಟೆ? ಅಂಥಕಾಲ ಬಂದರೆ ಅದನ್ನು ಆತನೆದುರು ಹಿಡಿ' ಎಂದರು.

ಮುಂದಿನ ಕಥೆ ಗೊತ್ತೇಯಿದೆಯಲ್ಲಾ ಆದರೆ 'ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇನು ನಾನು? ತೋರಿಸುವುದಿಲ್ಲವೆಂದರೂ ಉದ್ದಟತನವಾಗುತ್ತದೆ. ಅದು ಕಳೆದು ಹೋಯಿತೆಂದೇ ದುಃಖ ನಟಿಸಿದೆ'.

ವೈದೇಹಿಯವರ ಶಕುಂತಲೆ ಸಿನಿಕತನದಲ್ಲಿ ಮುಳುಗಿರುವುದಿಲ್ಲ. ಆವೇಶದ ಏರುದನಿಯಿಲ್ಲ. ಸಿಟ್ಟಿನಿಂದ ಹೂಂಕರಿಸುವುದಿಲ್ಲ. ಕಣ್ಣೀರು ಹರಿಸುವುದಿಲ್ಲ. ಈಗ ಅವಳು ಪ್ರಬುದ್ಧಳಾಗಿದ್ದಾಳೆ. ಭಾವನೆಗಳನ್ನು ಕಳೆದುಕೊಳ್ಳದೆಯೂ ಬೌದ್ಧಿಕ ಎಚ್ಚರವನ್ನು ಕಾಯ್ದು ಕೊಳ್ಳಬಲ್ಲಳು. ವೈದೇಹಿ ಶಕುಂತಲೆಯನ್ನು ಆದರ್ಶೀಕರಿಸುವುದಿಲ್ಲ. 'ಸಹಜವನ್ನು ಸಹಜವಾಗಿ ಸ್ವೀಕರಿಸುವ ಅಭ್ಯಾಸವೇ ಇಲ್ಲದ ಲೋಕದ ಮಾತು ಲೋಕಕ್ಕಿರಲಿ, ನನಗೆ ಬೇಡ' ಎಂದು ಶಕುಂತಲೆ ಒಂದು ಘಟ್ಟದಲ್ಲಿ ನುಡಿಯುತ್ತಾಳೆ. ಅವಳು ನೋಯದೆ ಬೇಯದೆ ಪ್ರಬುದ್ಧಳಾದದ್ದಲ್ಲ; ಪ್ರಬುದ್ಧತೆ ಎನ್ನುವುದು ಎಲ್ಲವನ್ನೂ ಕಳಚಿಕೊಂಡ ಸ್ಥಿತಿಯೂ ಅಲ್ಲ. ಶಕುಂತಲೆ ಇಲ್ಲಿ ತನಗೆ ತಾನೆ ಗುರುವಾಗಿದ್ದಾಳೆ, ಶಿಷ್ಯೆಯಾಗಿದ್ದಾಳೆ. ವಾಸ್ತವವನ್ನು ಗ್ರಹಿಸುವ ಶಕ್ತಿ ಅವಳಿಗಿದೆ. ಅಸಹಜತೆಯಿಂದ ದೂರನಿಂತು ಸಹಜತೆಯನ್ನು ನೋಡುತ್ತಿದ್ದಾಳೆ. ಮಗು ಸರ್ವದಮನ ಜನಿಸಿದ ಜಗತ್ತನ್ನೇ ಧಿಕ್ಕರಿಸುವ ಸುಖವನ್ನು ಆ ಮಗುವಲ್ಲಿ ಕಾಣುತ್ತಿದ್ದಾಳೆ. ಬದುಕಲು ಕಲಿತಿದ್ದಾಳೆ. ಶಕುಂತಲೆಯನ್ನು ಹೀಗೆ ರೂಪಿಸಿರುವ ಈ ಕಥೆ ನಿಸ್ಸಂದೇಹವಾಗಿ ವೈದೇಹಿಯವರ ಜೀವನ ದರ್ಶನವನ್ನು ಸೂಚಿಸಿದ ಕಥೆಯಾಗಿದೆ.

ಅಡಿ ಟಿಪ್ಪಣಿ

೧. ಅರುಹು-ಕುರುಹು, ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ, ಸಂ. ೫, ಸಂಚಿಕೆ ೨೦, ದಕ್ಷಿಣ ಕನ್ನಡ ಚರಿತ್ರೆ, ಸಂಸ್ಕೃತಿ ರಾಜಕಾರಣ, ಡಾ. ರಾಜರಾಮ್ ತೋಳ್ಪಾಡಿ.

೨. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಅಕ್ಕು ಕಥೆ, ಪು.ಸಂ. ೧೫೨

೩. ವೈದೇಹಿ, ***ಅಲೆಗಳಲ್ಲಿ ಅಂತರಂಗ,*** ಹಕ್ಕಿಲ್ಲದವರು ಕಥೆ, ಪು.ಸಂ. ೩೯

೪. ವೈದೇಹಿ, ***ಜಾತ್ರೆ,*** ಸ್ಮೃತಿ ಕಥನ ಕಥೆ, ಪು.ಸಂ. ೧೧

೫. ಸಾರಾ ಅಬೂಬಕ್ಕರ್, ***ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ,*** ಪು.ಸಂ. ೫೧

೬. ಎಚ್. ನಾಗವೇಣಿ, ***ಮೀಯುವ ಆಟ,*** ದಾನ ಕಥೆ, ಪು.ಸಂ. ೩೯

೭. ವೈದೇಹಿ, ***ಮಲ್ಲಿನಾಥನ ಧ್ಯಾನ,*** ಪು.ಸಂ. ೯೪

೮. ಎಂ.ಎಸ್. ಆಶಾ ದೇವಿ, ***ಸ್ತ್ರೀಮತವನುತ್ತರಿಸಲಾಗದೆ?*** ಪು.ಸಂ. ೭೪

೯. ವೈದೇಹಿ, ***ಅಸ್ಪೃಶ್ಯರು,*** ಪು.ಸಂ. ೨೮

೧೦. ಅದೇ, ಪು.ಸಂ. ೯೮

೧೧. ವೈದೇಹಿ, ***ಹರಿವ ನೀರು,*** ಜೀವ ಮೌನದ ಯಾನ, ಪು.ಸಂ. ೧೧೭

೧೨. ಎಚ್. ನಾಗವೇಣಿ, ***ನಾಕನೇ ನೀರು,*** ಬಗ್ಗುಂಡಿ ಪ್ರಸಂಗ, ಪು.ಸಂ. ೧೧೨

೧೩. ಎಚ್. ನಾಗವೇಣಿ, ***ನಾಕನೇ ನೀರು,*** ಗಾಳ ಕಥೆ, ಪು.ಸಂ. ೧೯೩

೧೪. ಎಚ್. ನಾಗವೇಣಿ, ***ಮೀಯುವ ಆಟ,*** ತಾಯ್ತನ ಕಥೆ, ಪು.ಸಂ. ೭೦

೧೫. ಎಚ್. ನಾಗವೇಣಿ, ***ಸೂರ್ಯನಿಗೊಂದು ವೀಳ್ಯ,*** ಪು.ಸಂ.

೧೬. ವೈದೇಹಿ, ಅಲೆಗಳಲ್ಲಿ ಅಂತರಂಗ, ***ಶಕುಂತಲೆಯೊಂದಿಗೆ ಕಳೆದ ಅಪರಾಹ್ನ,*** ಪು.ಸಂ. ೨೭೫

ಅಧ್ಯಾಯ - 7

ಕಂಡದ್ದು ಕಂಡಷ್ಟು

ಭಾರತೀಯ ಸಾಹಿತ್ಯಾಧ್ಯಯನದಲ್ಲಿ ವಿಭಿನ್ನ ಮತ್ತು ವಿಶಿಷ್ಟ ಬಗೆಯ ಚಿಂತನೆಯ ಕ್ರಮದಲ್ಲಿ ತೌಲನಿಕ ಅಧ್ಯಯನವು ಒಂದು. ಈ ನೆಲೆಯಲ್ಲಿ ವಿಶ್ಲೇಷಣಾತ್ಮಕ ಹಾಗೂ ಚಾರಿತ್ರಿಕ ಅಧ್ಯಯನಗಳು ಸಾಕಷ್ಟು ನಡೆದಿವೆ. ಆದರೆ ಕೃತಿ ಮತ್ತು ಕೃತಿಕಾರರ ಪರಸ್ಪರ ಚಿಂತನೆಯ ಸಾಮರಸ್ಯ ಮತ್ತು ಕೊಡುಕೊಳ್ಳುವಿಕೆಗಳ ಬಗೆಗೆ ವ್ಯಾಪಕವಾದ ಅಧ್ಯಯನಗಳಾಗಬೇಕಾದುದು ಸಮಕಾಲೀನ ತುರ್ತು. ಈ ದೃಷ್ಟಿಯಿಂದ ವೈದೇಹಿ ಮತ್ತು ನಾಗವೇಣಿ ಈ ಇಬ್ಬರು ಸಮಕಾಲೀನ ಲೇಖಕಿಯರ ಕೃತಿಗಳನ್ನು ಹೋಲಿಸಿ ಅಧ್ಯಯನಕ್ಕೆ ಒಳಗುಮಾಡಿ ಅವುಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆಗಳನ್ನು ಗುರುತಿಸಿ ಸಾಹಿತ್ಯದ ಜೊತೆಗಿನ ಇತರೆ ಅನಂತ ಸಾಧ್ಯತೆಗಳನ್ನು ಇಲ್ಲಿ ಗುರುತಿಸಲಾಗಿದೆ.

ವೈದೇಹಿಯವರ 'ಅಲೆಗಳಲ್ಲಿ ಅಂತರಂಗ' ಕಥಾ ಸಂಕಲನ ಮತ್ತು ನಾಗವೇಣಿಯವರ 'ನಾಕನೇ ನೀರು', 'ಮೀಯುವ ಆಟ' ಕಥಾ ಸಂಕಲನದ ಕಥೆಗಳಲ್ಲಿ ಲಿಂಗತಾರತಮ್ಯ, ಸಾಮಾಜಿಕ ಕಾಳಜಿ, ಪ್ರತಿಭಟನೆ, ಮಾನವೀಯ ಸಂಬಂಧಗಳು ಮತ್ತು ಕೌಟುಂಬಿಕ ಚಿತ್ರಣಗಳು ವ್ಯಕ್ತಗೊಂಡ ಬಗೆಯುನ್ನು ಗಮನದಲ್ಲಿರಿಸಿಕೊಂಡು ಇಲ್ಲಿನ ಕಥೆಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಸಾಮ್ಯತೆ ಮತ್ತು ಭಿನ್ನತೆಗಳನ್ನು ಗುರುತಿಸಲಾಗಿದೆ.

ಲಿಂಗತಾರತಮ್ಯದ ಬಗೆಗೆ ಸಮಾಜ ಈಗಾಗಲೇ ನಿರ್ಮಿಸಿಕೊಂಡ ಮೌಲ್ಯ ವ್ಯವಸ್ಥೆ ಎಂಥದ್ದು ಲಿಂಗತಾರತಮ್ಯ ಎನ್ನವುದನ್ನು ನಾಗವೇಣಿ ದೇಹಾಕೃತಿಯ ನೆಲೆಯಲ್ಲಿ ನೋಡುತ್ತಾರೆ. ಅದಕ್ಕೆ ನಾಕನೆ ನೀರು, ಒಡವೆ ಮುಂತಾದ ಕಥೆಗಳನ್ನು ಉದಾರಿಸಬಹುದಾಗಿದೆ. ವೈದೇಹಿಯವರಲ್ಲಿ ಲಿಂಗತಾರತಮ್ಯ ಎನ್ನುವುದು ಬೇರೆ ಬೇರೆ ಕಾರಣಗಳಲ್ಲಿ ವ್ಯಕ್ತವಾಗುತ್ತದೆ. ಒಂದು ಅಪರಾಧ ತನಿಖೆ ಕಥೆಯ ಕುಸುಮಿ ಗಂಡನ ಮನೆಯನ್ನು ಗಂಡನನ್ನು ಬಿಟ್ಟು ಬಂದದನ್ನು ಘೋರ ಅಪರಾಧವಾಗಿ ನೋಡುತ್ತಾರೆ. ವಿಲಕ್ಷಣ ವ್ಯಕ್ತಿತ್ವದ ಅಕ್ಕುವನ್ನು ಮುಖಮೂತಿ ನೋಡದೆ ಬಾಸುಂಡೆ ಬರುವ ರೀತಿ ಹೊಡೆಯುತ್ತಾರೆ. ಈ ಕಥೆಗಳಲೆಲ್ಲ ಹೆಣ್ಣು ಮತ್ತೆ ಮತ್ತೆ ಶೋಷಣೆಗೆ ಒಳಗಾಗುತ್ತಾಳೆ.

ಈ ಇಬ್ಬರು ಲೇಖಕಿಯರು ಸಮಕಾಲೀನ ಸಮಾಜವನ್ನು ತಮ್ಮ ಕಥೆಗಳಲ್ಲಿ ಚಿತ್ರಿಸುವಾಗ ಅವರ ನಿಲುವುಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹೇಗೆ ವ್ಯಕ್ತವಾಗಿವೆ, ಯಾವ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾರೆ, ಯಾವ ಮೌಲ್ಯಗಳನ್ನು ಟೀಕೆ ಮಾಡುತ್ತಾರೆ ಎಂಬುದನ್ನು ಗಮನಿಸಲಾಗಿದೆ. ಅಂತೆಯೇ ಇಲ್ಲಿನ ಕಥೆಗಳಲ್ಲಿ ವ್ಯಕ್ತವಾದ ಪ್ರತಿಭಟನೆ, ಮಾನವೀಯ ಸಂಬಂಧ

ಮತ್ತು ಕೌಟುಂಬಿಕ ಚಿತ್ರಣಗಳು ವ್ಯಕ್ತಗೊಂಡ ಬಗೆಯನ್ನು ಗಮನದಲ್ಲಿರಿಸಿಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಈ ಇಬ್ಬರು ಲೇಖಕಿಯರ ಕಾದಂಬರಿಗಳನ್ನು ವಸ್ತು ಆಶಯ, ಅಭಿವ್ಯಕ್ತಿ, ಭಾಷಾ ಶೈಲಿ ಮತ್ತು ವೈಶಿಷ್ಟ್ಯತೆಗಳನ್ನು ಗಮನದಲ್ಲಿರಿಸಿಕೊಂಡು ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ವೈದೇಹಿಯವರ 'ಅಸ್ಪೃಶ್ಯರು', ನಾಗವೇಣಿಯವರ 'ಗಾಂಧಿ ಬಂದ' ಎರಡೂ ಕಾದಂಬರಿಗಳಲ್ಲೂ ಸಾಕಷ್ಟು ಸಾಮ್ಯತೆ ಮತ್ತು ವೈರುಧ್ಯಗಳಿರುವುದನ್ನು ಗಮನಿಸಲಾಗಿದೆ. ಅಸ್ಪೃಶ್ಯತೆ ಎನ್ನುವುದು ಕಾದಂಬರಿಗಳಲ್ಲಿ ವ್ಯಕ್ತವಾದ ಬಗೆಯನ್ನು ಚರ್ಚಿಸಲಾಗಿದೆ. ವೈದೇಹಿ ಜಾತಿಯ ನೆಲೆ, ದೇಹಾಕೃತಿಯ ನೆಲೆ, ಮನಸ್ಸಿನ ನೆಲೆಯಲ್ಲಿ ನೋಡಿದರೆ, ನಾಗವೇಣಿ ಜಾತಿಯ ನೆಲೆಯಲ್ಲಿ ಅಸ್ಪೃಶ್ಯತೆಯನ್ನು ನೋಡುತ್ತಾರೆ.

ವೈಧವ್ಯದ ಕುರಿತು ವೈದೇಹಿ ಮತ್ತು ನಾಗವೇಣಿಯವರು ತೋರುವ ನಿಲುವು ಹೇಗಿದೆ, ಅಂತರ್ಜಾತಿಯ ವಿವಾಹದ ಬಗೆಗೆ ಅವರು ತೋರುವ ಒಲವು ಯಾವ ಬಗೆಯದ್ದು, ದಕ್ಷಿಣ ಕನ್ನಡ ಜಿಲ್ಲೆಯನ್ನ ಗಾಂಧಿ ಪ್ರಭಾವಿಸಿದ ಬಗೆ ಎಲ್ಲವನ್ನು ಇಲ್ಲಿ ಚರ್ಚಿಸಲಾಗಿದೆ.

ವೈದೇಹಿಯವರ 'ಮಲ್ಲಿನಾಥನ ಧ್ಯಾನ,' 'ಮೇಜು ಮತ್ತು ಬಡಗಿ' 'ಜಾತ್ರೆ', 'ಹರಿವ ನೀರು' ನಾಗವೇಣಿಯವರ 'ವಸುಂಧರೆಯ ಗ್ಯಾನ,' 'ಸೂರ್ಯನಿಗೊಂದು ವೀಳ್ಯ' ಪ್ರಬಂಧ ಸಂಕಲನಗಳಲ್ಲಿನ ಬರೆಹಗಳಲ್ಲಿ ಕರಾವಳಿ ಪ್ರದೇಶದ ಪ್ರಾಕೃತಿಕ ಪರಿಸರನವನ್ನು ಈ ಇಬ್ಬರೂ ಲೇಖಕಿಯರ ಆಧುನಿಕ ಮನಸ್ಸು ವಿಶ್ಲೇಷಿಸಿದ ಬಗೆ, ಅಲ್ಲಿನ ಜೀವವೈವಿದ್ಯ, ಸಸ್ಯ ಸಂಪತ್ತು, ಕಡಲು ಹೀಗೆ ಎಲ್ಲವನ್ನು ಒಳಗೊಂಡಂತೆ ವಿಶ್ಲೇಷಿಸಲಾಗಿದೆ. ಇಲ್ಲಿನ ಬರೆಹಗಳಲ್ಲಿ ಕೌಟುಂಬಿಕ ಚಿತ್ರಣಗಳು ಕಥಾಂತರ್ಗತ ರೀತಿಯಲ್ಲಿ ಬಳಕೆಯಾದ ಬಗೆ ಮತ್ತು ಲಿಂಗತಾರತಮ್ಯ ಅನೇಕ ಸಮಾಜಗಳಲ್ಲಿ ಕ್ರಿಯಾನಿರತವಾಗಿದ್ದು ಹಲವು ಬಗೆಯ ಅಸಮಾನತೆ, ದಮನ ಮತ್ತು ಶೋಷಣೆಗೆ ಕಾರಣವಾಗಿರುವ ಬಗೆಯನ್ನು ಗುರುತಿಸಲಾಗಿದೆ. ಜೊತೆಗೆ ಇಲ್ಲಿನ ಬರೆಹಗಳಲ್ಲಿ ರಾಜಕೀಯ ಮತ್ತು ಸಾಮಾಜಿಕ ಕಾಳಜಿ ವ್ಯಕ್ತವಾದ ಬಗೆಯನ್ನು ಗಮನಿಸಿದ್ದೇನೆ.

ಕೊನೆಯ ಅಧ್ಯಾಯದಲ್ಲಿ ವೈದೇಹಿ ಮತ್ತು ನಾಗವೇಣಿ ಈ ಇಬ್ಬರೂ ಲೇಖಕಿಯರ ಕಥೆ, ಕಾದಂಬರಿ, ಪ್ರಬಂಧ ಸಂಕಲನಗಳಲ್ಲಿನ ವೈಶಿಷ್ಟ್ಯತೆಗಳನ್ನು ಪ್ರಾದೇಶಿಕತೆ, ಭಾಷೆ, ಸ್ತ್ರೀ ಪರವಾದ ಅಭಿವ್ಯಕ್ತಿ, ಮತ್ತು ಕಂಡುಕೊಂಡ ಜೀವನದರ್ಶನದ ನೆಲೆಯಲ್ಲಿ ಚರ್ಚಿಸಿದ್ದೇನೆ ಹಾಗೂ ಮಹಾಪ್ರಬಂಧದ ಸಲ್ಲಿಕೆಪೂರ್ವದ ಪರಾಮರ್ಶೆಯಲ್ಲಿ ಸೂಚಿಸಿದ ಸಲಹೆ, ಬದಲಾವಣೆಗಳನ್ನು ಅಳವಡಿಸಿಕೊಂಡಿದ್ದೇನೆ.

ಇದುವರೆಗಿನ ಈ ಇಬ್ಬರೂ ಲೇಖಕಿಯರ ಕೃತಿಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಿ ನಾನು ಕಂಡುಕೊಂಡ ಕೆಲವು ಅಂಶಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.

೧. ವೈದೇಹಿ ಮತ್ತು ನಾಗವೇಣಿ ಈ ಇಬ್ಬರೂ ಲೇಖಕಿಯರ ಕೃತಿಗಳಲ್ಲಿ ವ್ಯಕ್ತವಾದ ಬರವಣಿಗೆಯ ಸೊಬಗು, ಕಥಾನಕದ ಚೆಲುವಾದ ಹಬ್ಬುಗೆ, ಆಕರ್ಷಕ ಶೈಲಿ, ವಸ್ತುವಿನ ಆಯ್ಕೆ, ನಿರೂಪಣೆ, ವ್ಯಕ್ತಿಸಂಬಂಧವನ್ನು ಅಂತಃಕರಣದಿಂದ ನೋಡುವ ಬಗೆ, ಪಾತ್ರಗಳ ನಡುವಣ ಸಾವಯವ ಸಂಬಂಧ, ಸಮಸ್ಯೆಯ ಧಾರುಣತೆ, ಶೋಷಿತ ಹೆಣ್ಣು ಅವಳ ದಿಟ್ಟತನ ಇವೆಲ್ಲವುಗಳ ತಾತ್ವಿಕ ನಿಲುವುಗಳಲ್ಲಿ ಸಾಕಷ್ಟು ಸಾಮ್ಯತೆ ಮತ್ತು ಭಿನ್ನತೆಗಳಿವೆ.

೨. ಈ ಇಬ್ಬರೂ ಲೇಖಕಿಯರ ಕೃತಿಗಳನ್ನು ಒಟ್ಟಿಗೆ ಇಟ್ಟು ನೋಡುವಾಗಲು ಮೌಲ್ಯಗಳ ಪ್ರಶ್ನೆ ಬಂದಾಗ ಒಬ್ಬೊಬ್ಬರ ಕೃತಿಗಳನ್ನು ಒಂದೊಂದು ಕಾರಣಕ್ಕೆ ಮೇಲಿಡುವ ಅಡಿಗಿಡುವ ಸಂದರ್ಭಗಳು ಸಾಕಷ್ಟು ಎದುರಾಗಿದೆ.

೩. ಮಾತೃತ್ವ ಮತ್ತು ಸ್ತ್ರೀತ್ವದ ಪರಿಕಲ್ಪನೆಗಳನ್ನು ಸಶಕ್ತಗೊಳಿಸುವುದರ ಮೂಲಕ ಸ್ತ್ರೀ ಸಂಸ್ಕೃತಿಯ ಕಟ್ಟುವಿಕೆ ಈ ಇಬ್ಬರೂ ಲೇಖಕಿಯರಲ್ಲಿ ಸಾಧ್ಯವಾಗಿದೆ.

೪. ಪ್ರಾಕೃತಿಕ ಪರಿಸರ ಮತ್ತು ಮನುಷ್ಯ ಪ್ರಕೃತಿ, ಕಡಲಿನ ದಟ್ಟವರ್ಣನೆ ನಾಗವೇಣಿಯವರ ಸಾಹಿತ್ಯದಲ್ಲಿ ಸಮೃದ್ಧವಾಗಿ ಬಳಕೆಯಾಗಿದೆ. ಬ್ರಾಹ್ಮಣ ಕುಟುಂಬದೊಳಗಿನ ಚಿತ್ರಣಗಳನ್ನು ಯಥೇಚ್ಚವಾಗಿ ದಾಖಲಿಸಿರುವ ವೈದೇಹಿಯವರಲ್ಲಿ ಕುವೆಂಪು, ಕಾರಂತ, ಗೀತಾನಾಗಭೂಷಣ, ನಾಗವೇಣಿಯವರ ಕೃತಿಗಳಲ್ಲಿ ಬಳಕೆಯಾದಂತೆ ಪರಿಸರದ ಚಿತ್ರಣಗಳಾಗಲಿ, ಭೌಗೋಳಿಕ ಸನ್ನಿವೇಶಗಳಾಗಲಿ ಅಷ್ಟಾಗಿ ಬಳಕೆಯಾದಂತೆ ಕಾಣುವುದಿಲ್ಲ.

೫. ಅಸ್ಪೃಶ್ಯರು ಕಾದಂಬರಿಯಲ್ಲಿ ಲೇಖಕಿ ಜಾತಿ ಎಂಬುದು ಮನಸ್ಸಿಗೆ ಬಾರದ ಸ್ತರಕ್ಕೆ ಹೋಗಿ ನಿಲ್ಲುತ್ತಾರೆ. ನಾನೊಂದು ಜಾತಿ, ನೀನೊಂದು ಜಾತಿ, ಅವಳೊಂದು ಜಾತಿ ಎನ್ನುವ ಬದಲು ನಾನೊಬ್ಬ ಮನುಷ್ಯ ಎಂಬ ಅರಿವನ್ನು ಪ್ರತಿಪಾದಿಸುತ್ತಾರೆ. ನಾವು ಮನುಷ್ಯತ್ವದ ಮೇಲೆ ಪುನಃ ನಂಬಿಕೆ ಇಡಬೇಕು. ಎಲ್ಲ ಶರೀರಗಳಲ್ಲಿಯೂ ಜಾತಿಯೇ ವಾಸವಾಗಿರಲಿಕ್ಕಿಲ್ಲ. ಅಲ್ಲಲ್ಲಿ ಮನುಷ್ಯನು ಇರಬಹುದು ಎನ್ನುವ ನಿಲುವನ್ನು ಕಥನ ನಿರೂಪಿಸುತ್ತದೆ.

೬. ಹೆಣ್ಣಿನ ಮೂಕ ಆಂತರಿಕ, ದ್ವಂದ್ವಗಳಿಗೆ ಅಭಿವ್ಯಕ್ತಿ ಎಂಬಂತೆ ವೈದೇಹಿ ಅವರ ಕಥೆಗಳಿವೆ. ಇದು ಅವರ ಕಥೆಗಳಿಗೆ ತಾನಾಗಿ ಒಂದು ಸಾಹಿತ್ಯೇತರ ಆಯಾಮವನ್ನು ಧಾರಣ ಮಾಡಿ ಬಿಡುತ್ತದೆ. ಸಮಾಜದ ಎಲ್ಲ ಸ್ತರಗಳಿಂದ ಅನುಭವಗಳು ಒದಗಿ ಬಂದಾಗ ಮಾತ್ರ ಸಾಹಿತ್ಯವಾಗಲೀ, ಬದುಕಾಗಲೀ, ನಿಜವಾಗಿ ಸಮೃದ್ಧಗೊಳ್ಳುವುದು ಎಂಬ ಸತ್ಯ ಅರಿವಿಗೆ ಬರುತ್ತದೆ. ವೈದೇಹಿ ಕಥೆಗಳಲ್ಲಿ ಹೆಣ್ಣು ತನ್ನ ವಿಶಿಷ್ಟ ಅವಸ್ಥೆಯ ದರ್ಶನವನ್ನು ಮಾಡಿಸುತ್ತಾಳೆ. ಇದುವರೆಗೆ ನಾವು ಕನ್ನಡ ಕಥಾ ಸಾಹಿತ್ಯದಲ್ಲಿ ಅಷ್ಟಾಗಿ ಕಾಣದಿದ್ದ

ಅನುಭವ ಪ್ರಪಂಚವೊಂದು ವೈದೇಹಿ ಕಥೆಗಳಲ್ಲಿ ಗೋಚರವಾಗುತ್ತವೆ. ಹೆಣ್ಣಿನ ಅಂತರಂಗದ ಅನೇಕ ಆಸೆಗಳು, ನೋವುಗಳು ಭರವಸೆಗಳು, ಕನಸುಗಳು ತಮ್ಮ ಪಿಸುದನಿಯಲ್ಲಿ ನಮ್ಮೊಡನೆ ಮಾತಾಡುತ್ತವೆ.

೭. 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕಥೆಯಲ್ಲಿ ಪ್ರಾಚೀನ ಸಾಹಿತ್ಯದ ವಸ್ತುವನ್ನು ತಗೆದುಕೊಂಡು ಕಥೆ ಹೆಣೆಯುತ್ತಾರೆ. ಕ್ರೌಂಚ ಪಕ್ಷಿಗಳು ಕಥೆಯಲ್ಲಿ ಅಖಿಲ ಭಾರತದ ವ್ಯಾಪ್ತಿ ಇದೆ. ಈ ಕಥೆ ಒಂದು ದೃಷ್ಟಿಯಲ್ಲಿ ಬೇರೆ ವಿವರಗಳಲ್ಲಿ ರಾಮಾಯಣದ ಪುನರ್ ಸೃಷ್ಟಿ ಎಂದೇ ಹೇಳಬಹುದು. ಹಾಗೆಯೇ ತಮ್ಮ ಕಾವ್ಯಗಳ ಮೂಲಕ ಶಿವ–ಗೌರಿಯನ್ನು ಏಕಕಾಲದಲ್ಲಿ ಸತಿಪತಿಗಳೆಂದೂ ನೋಡಬಲ್ಲ ಪ್ರತಿಭೆ ವೈದೇಹಿಯವರದು. ವಸ್ತು ಯಾವುದೇ ಆಗಿರಲಿ, ಸನ್ನಿವೇಶ ಯಾವುದೇ ಆಗಿರಲಿ ಅವುಗಳನ್ನು ನಿರ್ವಹಿಸುವ ಪ್ರಜ್ಞೆ ಮಾತ್ರ ಲೇಖಕಿಯ ಪ್ರಖರವಾದ ಸ್ತ್ರೀ ಪ್ರಜ್ಞೆಯಾಗಿದೆ.

೮. ಜನಪದೀಯ ಮೌಲ್ಯಗಳನ್ನು ಅವುಗಳ ಸತ್ವವನ್ನು, ದೇಸಿಯ ಸೊಗಡನ್ನು ಹಾಗೆಯೇ ಕಾಯ್ದಿರಿಸುವ ಮನಸ್ಸು ಈ ಇಬ್ಬರೂ ಲೇಖಕಿಯರಿಗಿದೆ. ನಾಗವೇಣಿಯವರ ಸಿರಿತೋರಿದ ದಾರಿಕಥೆ, ವೈದೇಹಿಯವರ ಕಣಕ್ಕೊಂದು ಲೇಖನವನ್ನು ಉದಾರಿಸಬಹುದಾಗಿದೆ.

೯. ವೈದೇಹಿ ಮತ್ತು ನಾಗವೇಣಿಯವರ ಕೃತಿಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಗಮನಿಸಬಹುದಾದ ಅಂಶವೆಂದರೆ ವಸಾಹತೋತ್ತರ ಸಂದರ್ಭದ ಅನುಭವಗಳು ಎಲ್ಲರಿಗೂ ಒಂದೇ ಅಲ್ಲ ಮತ್ತು ವಸಾಹತೋತ್ತರ ಅನುಭವವೂ ಪ್ರಾದೇಶಿಕವಾಗಿಯೂ ಭಿನ್ನ ಭಿನ್ನವಾಗಿರುತ್ತವೆ ಎಂಬುದು ಅರಿವಾಗುತ್ತದೆ.

೧೦. ವೈದೇಹಿಯವರ ಪ್ರಬಂಧಗಳಲ್ಲಿ ನೆನಪುಗಳು, ಸ್ಮೃತಿ ಚಿತ್ರಗಳು ಭಾವುಕವಾದವನ್ನು ಕಾಣಬಹುದಾಗಿದೆ. ನಾಗವೇಣಿಯವರಲ್ಲಿ ವಿಚಾರ, ವೈಚಾರಿಕತೆ, ಜೀವನಾನುಭವಗಳು ಕಂಡು ಬರುತ್ತವೆ.

೧೧. ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದು ತಮ್ಮ ಸುತ್ತಲ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗ್ರಹಿಸುತ್ತ ತಮ್ಮ ಬರವಣಿಗೆಗೆ ಬೇಕಾದ ಮೂಲ ಜೀವದ್ರವ್ಯಗಳನ್ನು ವೈದೇಹಿ ಪಡೆದ ಬಗೆಯೇ ಒಂದು ರೋಚಕ ಕಥನವಾಗಿದೆ. ಅವರ ಸಂದರ್ಶನಗಳಲ್ಲಿ ಹಲವಾರು ಪ್ರಬಂಧಗಳಲ್ಲಿ ಮತ್ತು ಲೇಖಕಿಯ ಪುಟಗಳು ಎಂಬ ದೀರ್ಘವಾದ ಆತ್ಮಕಥನ ಬರಹದಲ್ಲಿ ಇದನ್ನು ಗಮನಿಸಬಹುದು. ಈ ಅನುಭವಗಳು ಸಾಹಿತ್ಯ ಕೃತಿಗಳಲ್ಲಿ ಪಡೆದುಕೊಂಡಿರುವ ಸೃಜನಶೀಲ ಪರಿವರ್ತನೆಗಳ ಪರಿಶೀಲನೆಯೇ ಒಂದು ಅರ್ಥಪೂರ್ಣ ಸ್ವಾರಸ್ಯಕರ ಅಧ್ಯಯನವಾಗಬಹುದು.

೧೨. ಗಾಂಧಿ ಬಂದ ಎಂದು ಕಾದಂಬರಿಯ ಶೀರ್ಷಿಕೆಯು ಘೋಷಿಸಿದರೂ ಅವರ ಬರುವಿಕೆಯು ಸಾಂಪ್ರದಾಯಿಕ ಸಮಾಜವೊಂದರ ಪರವಿರೋಧಗಳನ್ನು ಹೇಗೆ ಎದುರಿಸಬೇಕಾಯಿತು ಎಂಬುದನ್ನು ನಾಗವೇಣಿ ಅವರ ಕೃತಿ ಹಲವು ನೆಲೆಗಳಲ್ಲಿ ಯೋಚಿಸುವಂತೆ ಮಾಡುತ್ತದೆ.

೧೩. ನಾಗವೇಣಿಯವರ ಗಾಂಧಿ ಬಂದ ಕಾದಂಬರಿಯು ಕೇವಲ ಒಂದು ಸಮುದಾಯದ ಕಥೆಯನ್ನು ನಿರೂಪಿಸುತ್ತಿಲ್ಲ. ಒಂದು ಕಾಲಾವಧಿಯ ಒಂದು ಮನಸ್ಥಿತಿಯ ನಿರೂಪಣೆಯನ್ನು ಮಾಡುತ್ತದೆ. ಗಾಂಧಿ ವಿಚಾರಗಳು ಸಂಪ್ರದಾಯಸ್ಥ ಜೀವನ ಕ್ರಮದ ಮೂಲ ಧಾತುವನ್ನೇ ಸ್ಪರ್ಶಿಸತೊಡಗಿದಾಗ ಪರಿಣಾಮಗಳು ಸರಳವಾಗಿರಲಿಲ್ಲ ಎಂಬುದು ಮನವರಿಕೆಯಾಗುತ್ತದೆ.

೧೪. ಮಾನವರು ಎಷ್ಟು ದಿನ ಖಾಲಿ ಹಿಂದುಗಳಾಗಿ, ಖಾಲಿ ಮುಸ್ಲಿಮರಾಗಿ, ಖಾಲಿ ಕ್ರೈಸ್ತರಾಗಿ, ಖಾಲಿ ಕೊಂಕಣಿ, ಶೂದ್ರ, ಲಿಂಗಾಯಿತ ಮತ್ತಿತರ ಜಾತಿ ವಿಜಾತಿಗಳಾಗಿ, ಕಡೆಗೆ ಖಾಲಿ ಗಂಡು ಹೆಣ್ಣುಗಳಾಗಿ ಮಾತ್ರ ಉಳಿಯಲು ಸಾಧ್ಯ? ಪರಸ್ಪರ ಕೊಡುಕೊಳ್ಳುವಿಕೆ ಇಲ್ಲದೆ? ನಾವು ಮನುಷ್ಯರು ಮಾತ್ರ ಈ ಪ್ರಪಂಚದಲ್ಲಿ ಇರಲು ಅರ್ಹರಾದವರು ಎಂದು ಪ್ರಕೃತಿಯೊಡನೆ ವರ್ತಿಸತೊಡಗಿದ ಮನುಷ್ಯನ ನಡವಳಿಕೆಯ ಇನ್ನೊಂದು ಮಗ್ಗುಲು. ಹೀಗೆ ನನ್ನ ಧರ್ಮ, ನನ್ನ ದೇಶ, ನನ್ನ ಜಾತಿ, ನನ್ನ ಜನ ಕೊನೆಗೆ ನಾನು– ನಾನು ಮಾತ್ರ ಉಳಿಯತಕ್ಕವನು ಎಂದು ಹೂಂಕರಿಸುತ್ತದೆ. ನಾನೆಂಬುದು ಬದುಕಿರಬೇಕಾದರೆ ಈ ಎಲ್ಲವೂ ಬದುಕಿರಬೇಕು ಎಂಬುದರ ಅಲಕ್ಷ್ಯವೇ ತಾನೆ ಇವತ್ತು ಭೂಗೋಲವನ್ನು ಸೂರ್ಯನ ಕಿರಣಗಳಾಗಿ ನೇರ ಒಡ್ಡಲು ಹೊರಟಿರುವುದು? ಸೂರ್ಯ ಕಿರಣಗಳಿಗೆ ನೇರವಾಗಿ ತನ್ನನ್ನು ಒಡ್ಡಿಕೊಂಡಿರುವುದಕ್ಕೆ ಓಜೋನ್ ಪದರದ ಗತಿ ಏನಾಗಿದೆ. ಅದರಿಂದ ಪ್ರಕೃತಿಯ ಮೇಲುಂಟಾಗಿರುವ ಪರಿಣಾಮಗಳ ಬಗ್ಗೆ ವೈದೇಹಿ ಕಾಳಜಿ ವ್ಯಕ್ತಪಡಿಸುತ್ತಾರೆ.

೧೫. ವಿಶಿಷ್ಟ ಪ್ರದೇಶದಲ್ಲಿ, ವಿಶಿಷ್ಟ ಕಾಲಘಟ್ಟದಲ್ಲಿ ಧರ್ಮ ರಕ್ಷಣೆ, ಸಂಸ್ಕೃತಿಯ ಪುನರುತ್ಥಾನದ ಚಳುವಳಿಗಳು ಏಕೆ ನೆಲೆಕಂಡುಕೊಂಡವು ಮತ್ತು ಇದರ ಬಹುಮುಖ್ಯ ಮುಖವಾದ ಕೋಮುವಾದ ಮತ್ತು ಕೋಮುದಾಳಿಗಳು ಯಾಕೆ ವ್ಯಾಪಕವಾದವು ಎನ್ನುವುದು ಅರ್ಥವಾಗದಷ್ಟು ಸಂಕೀರ್ಣ ಸಂಗತಿಯೇನಲ್ಲ; ಮತ್ತು ಇದು ಆಳ ಅಧ್ಯಯನ ಯೋಗ್ಯವಾದ ಒಂದು ಸಂಗತಿ.

೧೬. ಕಥೆಗಾರರು ಕೇವಲ ಕಥೆಗಳನ್ನು ಬರೆಯುವುದಿಲ್ಲ. ಕಥೆಯ ಸ್ವರೂಪ ಮತ್ತು ಪರಿಣಾಮಗಳನ್ನು ಕುರಿತು ಯಾವತ್ತೂ ಚಿಂತಿಸುತ್ತಿರುತ್ತಾರೆ. ಕೆಲವರು ನೇರವಾಗಿ ಕಥನ

ಮೀಮಾಂಸೆಯನ್ನೇ ಕೈಗೊಂಡರೆ ಮತ್ತೆ ಕೆಲವರು ತಮ್ಮ ಕಥೆಯೊಳಗೇ ಇಂಥದೊಂದು ಜಿಜ್ಞಾಸೆಯನ್ನು ಕಥೆಯ ಒಂದು ಭಾಗವಾಗಿ ತರುತ್ತಾರೆ. ಈ ಎರಡನೆಯ ಗುಂಪಿಗೆ ಸೇರುವ ಒಂದು ಮುಖ್ಯ ಹೆಸರು ವೈದೇಹಿ. ಉಳಿದ ಹಲವು ಸಂಗತಿಗಳಂತೆ ಕಥಾ ಮೀಮಾಂಸೆಯೂ ಇವರ ಕಥಾ ಸಾಹಿತ್ಯದ ಒಂದು ಪ್ರಮುಖ ಆಶಯ. ಅವರ ಇತ್ತೀಚಿನ ಕಥೆ 'ಸ್ಥಳ ಪುರಾಣ' ಈ ಮಾದರಿಯ ಒಂದು ಮುಖ್ಯ ವಿಶಿಷ್ಟ ರಚನೆಯಾಗಿದೆ.

೧೭. ವೈದೇಹಿಯವರ 'ಚಿಪ್ಪು', 'ಬೀಳು-ಬೇರು' ಕಥೆಗಳ ಮೂಕ ನಾಯಕಿಯರಿಗಿಂತ 'ಅಂತರಂಗದ ಪುಟಗಳು' ಕಥೆಯ ಅಚಲ ಮುಂದಿದ್ದಾಳೆ ಅನ್ನಿಸುತ್ತದೆ. ಸೌಗಂಧಿ ಸ್ವಗತಗಳು ಕಥೆಯ ಸೌಗಂಧಿ ಶಕುಂತಲೆಯೊಂದಿಗೆ ಕಳೆದ ಅಪರಾಹ್ನ ಕಥೆಯ ಶಂಕುತಲೆ ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು ಕಥೆಯ ಕಲಾವತಿ ಇವರೆಲ್ಲರ ಅರ್ಥಪೂರ್ಣ ಮುಂದುವರಿಕೆ ಮತ್ತು ಮುಂದಿನ ಘಟ್ಟ ಎನ್ನಿಸುವುದು ವೈದೇಹಿಯವರು ಬೆಳೆಯುತ್ತಿರುವ ಜೀವನ ದೃಷ್ಟಿಯನ್ನು ಗುರುತಿಸಿಕೊಳ್ಳುವ ಸೂಚನೆಯು ಹೌದು.

೧೮. ನಾಗವೇಣಿಯವರಲ್ಲಿ ಇಂಥದೊಂದು ಅರ್ಥಪೂರ್ಣ ಮುಂದುವರರಿಕೆಯನ್ನ ಅವರ ನಾಕನೇ ನೀರು, ಮೀಯುವ ಆಟ, ಎರಡು ಕಥಾಸಂಕಲನಗಳಲ್ಲಿಯೂ ಗುರುತಿಸಬಹುದಾಗಿದೆ. ಉದಾಹರಣೆಗೆ ದಾನ ಕಥೆ ಈ ಕಥೆಯ ಕೊರಗ ಜಾತಿಯ ಕೇತು ಅಜಲು ಪದ್ಧತಿಯಂತ ಅನಿಷ್ಟ ಆಚರಣೆಯ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುವುದು, ಧಣಿಗಳ ಬೆಳ್ಳಿಲೋಟ ಕಥೆಯಲ್ಲಿ ಚಿನ್ನಮ್ಮ ಯಜಮಾನ ಪರಂಪರೆಯ ವಿರುದ್ಧ ಸಂಘರ್ಷದ ರೂಪಕವಾಗಿ ಕಾಣಿಸಿಕೊಳ್ಳುವುದು ನಾಗವೇಣಿಯವರ ಬರೆವಣಿಗೆಯ ಮುಂದಿನ ಘಟ್ಟವನ್ನ ಸೂಚಿಸುತ್ತದೆ. ಜಾತೀಯತೆ, ಯಜಮಾನಿಕೆಯ ವಿರುದ್ಧ ಪ್ರತಿಭಟನೆ, ವಿಧವಾ ವಿವಾಹ ಕುರಿತಾಗಿ ಪ್ರಸ್ತಾಪಿಸುವುದರ ಮೂಲಕ ಗಾಂಧಿಬಂದ ಕಾದಂಬರಿಯಲ್ಲಿಯೂ ಅರ್ಥಪೂರ್ಣತೆಯ ಹೊಸ ಸಂಚಲನವನ್ನೆ ಗುರುತಿಸಬಹುದಾಗಿದೆ.

೧೯. ವೈದೇಹಿ ಮತ್ತು ಎಚ್. ನಾಗವೇಣಿ ಈ ಇಬ್ಬರ ಬರವಣಿಗೆಯಲ್ಲಿ ವಿಭಿನ್ನ ಮಾದರಿಗಳಿವೆ. ವೈದೇಹಿ ತಮ್ಮ ಕಥೆಗೆ ಆಯ್ದುಕೊಳ್ಳುವ ವಸ್ತು, ನೋಡುವ ದೃಷ್ಟಿ, ಆಲೋಚನಾ ಕ್ರಮ, ಸಾಮಾಜಿಕ ರಚನೆಗಳಲ್ಲಿ ಮನುಷ್ಯ ಸಂಬಂಧಿ ಸೂಕ್ಷ್ಮತೆಗಳಿವೆ. ಸಂರಕ್ಷಿತ ಬ್ರಾಹ್ಮಣ ಕುಟುಂಬದಲ್ಲಿ ಬೆಳೆದ ಇವರಿಗೆ ಜಾತಿಯನ್ನುವಂತದ್ದು ಬೌದ್ಧಿಕ ಜಗತ್ತಿನಲ್ಲಿಯಾಗಲೀ, ಕುಟುಂಬದಲ್ಲಿಯಾಗಲೀ ಒಂದು ಸಮಸ್ಯೆಯಾಗಿ ಕಾಡಿಲ್ಲ.

೨೦. ವೈದೇಹಿ ಮತ್ತು ನಾಗವೇಣಿ ನಡುವೆ ಒಂದು ಪೀಳಿಗೆಯ ಅಂತರವಿದೆ. ಅಲ್ಲದೆ ಬಂಡಾಯ ಕಾಲಘಟ್ಟದಲ್ಲಿ ಬಂದವರು. ಜಾತಿ ತಾರತಮ್ಯಗಳನ್ನು ಸ್ವತಃ ಅನುಭವಿಸಿದವರು. ಹಾಗಾಗಿಯೇ ಇರಬೇಕು ನಾಗವೇಣಿ ಜಾತಿಯತೆ, ಲಿಂಗ ಅಸಮಾನತೆ, ಮೂಢನಂಬಿಕೆಗಳ ಬಗ್ಗೆ ಬರೆಯುವಾಗ ತೀವ್ರವಾಗಿ ಹೇಳುತ್ತಾರೆ. ಹೀಗೆ ನೇರಾನೇರವಾಗಿ ಹೇಳುವುದು ಇವರ ಬರೆವಣಿಗೆಗೆ ಗುಣಾತ್ಮಕ ಅಂಶಗಳನ್ನು ಸೇರಿಸುವ ಸಂದರ್ಭದಲ್ಲೇ ವಾಚ್ಯತೆಯ ಕಡೆಗೆ ವಾಲುವ ಅಪಾಯವು ಇರುತ್ತದೆ.

೨೧. ಮುಟ್ಟಿನದಿನ, ಬಾಣಂತಿತನ ಹೀಗೆ ಜೀವನದ ಕೆಲವು ಸಮಯ ಮಾತ್ರ ಅಸ್ಪೃಶ್ಯರಾಗಿರುವುದಕ್ಕೂ ಜೀವನ ಪೂರ್ತಿ ಅಸ್ಪೃಶ್ಯರಾಗಿರುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಅಂಥ ವ್ಯತ್ಯಾಸವನ್ನು ಇವರಿಬ್ಬರ ಬರೆವಣಿಗೆಯ ಸಾಕಷ್ಟು ಸಂದರ್ಭಗಳಲ್ಲಿ ಗುರುತಿಸಲು ಸಾಧ್ಯವಾಯಿತು. ವೈದೇಹಿ ದೇಹದ ನೆಲೆಯ ಅಸ್ಪೃಶ್ಯತೆಯನ್ನು, ನಾಗವೇಣಿ ಜಾತಿಯ ನೆಲೆಯ ಅಸ್ಪೃಶ್ಯತೆಯನ್ನು ಸ್ವತಃ ಅನುಭವಿಸಿದವರು. ಲೇಖಕರಿಗೆ ಇಂಥ ಅನುಭವಗಳು ಆಗಿಲ್ಲದಾಗೂ ಅದನ್ನು ಪರಿಭವಿಸಿ ಬರೆದರೆ ಅದು ಲೇಖಕರ ದೊಡ್ಡತನವಾಗುತ್ತದೆ.

೨೨. ಈ ಇಬ್ಬರು ಲೇಖಕಿಯರ ಸಾಹಿತ್ಯವನ್ನ ಗಮನಿಸಿದಾಗ ಇದುವರೆಗೂ ಸಮಾಜದ ಮುಖ್ಯ ವಾಹಿನಿಗೆ ಬರುವ ನಿಟ್ಟಿನಲ್ಲಿ ನಿರಂತರವಾಗಿ ತುಡಿಯುತ್ತಿದ್ದ ಹಲವು ಮನಸ್ಸುಗಳಿಗೆ ಅವಕಾಶದ ಬಾಗಿಲುಗಳು ತೆರೆಯುತ್ತಿರುವುದರ ಸೂಕ್ಷ್ಮತೆಯನ್ನು ಗ್ರಹಿಸಬಹುದು.

೨೩. 'ಹೆತ್ತವಳು ಮಾತ್ರ ಹೆರಿಗೆ ಬೇನೆಯನ್ನು ಬಲ್ಲಳು' ಎಂಬ ಮಾತಿನಂತೆ ಪುರುಷ ತಾನೆಷ್ಟೇ ಸ್ತ್ರೀಪರವಾಗಿ ಬರೆಯಬಲ್ಲವನಾದರು ಸ್ತ್ರೀ ತನ್ನ ಅಂತರಂಗವನ್ನು ತೆರೆದಿಡುವಷ್ಟು ಅವರಿಂದ ಸಾಧ್ಯವಿಲ್ಲ ಎಂಬುದರ ಸ್ಪಷ್ಟ ಚಿತ್ರಣ ಇಲ್ಲಿರುವುದನ್ನು ಕಾಣಬಹುದು.

೨೪. ಬದುಕು ಎಂದೂ ಸಾವಿನೆಡೆಗೆ ಮುಖ ಮಾಡಬಾರದು; ಸವಾಲಿನೆಡೆಗೆ ಮುಖ ಮಾಡಬೇಕು ಎಂಬ ತಾತ್ತ್ವಿಕತೆಯ ನೆಲೆಯಲ್ಲಿ ಈ ಇಬ್ಬರೂ ಲೇಖಕಿಯರು ತಮ್ಮ ಲೇಖನಿಯಿಂದ ಸೃಷ್ಟಿಸಿದ ಸ್ತ್ರೀ ಪಾತ್ರಗಳು ಹಲವು ಮಿತಿಗಳ ನಡುವೆಯೂ ತಮ್ಮದೇ ಆದೊಂದು ಸ್ವತಂತ್ರ ಬದುಕನ್ನು, ಜೀವಪರವಾದಂತಹ ಧೋರಣೆಯನ್ನು ತಮ್ಮದಾಗಿಸಿಕೊಳ್ಳುವ ಬಗೆಯಲ್ಲಿ ಪ್ರಯತ್ನಿಸುವುದನ್ನು ಕಾಣಬಹುದು.

ಈ ಸಂಶೋಧನೆಯಲ್ಲಿ ಇಬ್ಬರು ಲೇಖಕಿಯರ ಸಾಹಿತ್ಯವನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಗು ಮಾಡಿದರು ನನ್ನ ಗ್ರಹಿಕೆಯ ಮಿತಿಯ ಕಾರಣಕ್ಕೆ ಇಲ್ಲವೇ ನನ್ನ ಸೀಮಿತ ಆಲೋಚನಾ ಕ್ರಮದ ಕಾರಣದಿಂದ ಒತ್ತು ನೀಡಬೇಕಿದ್ದ ಕೆಲವು ಮುಖ್ಯ ಸಂಗತಿಗಳೇ ಅಧ್ಯಯನದಿಂದ

ಹೊರಗುಳಿದಿರಬಹುದು. ಆದರೆ ನನ್ನ ಅಧ್ಯಯನದ ಮಿತಿಯಲ್ಲಿ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡಿರುವೆನೆಂಬುದಷ್ಟನ್ನು ಹೇಳಬಲ್ಲೆ. ಮುಂದೆ ಇದೇ ಹಾದಿಯನ್ನೇ ಹಿಡಿದು ಮತ್ತ್ಯಾರಾದರೂ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವವರಿದ್ದರೆ ಮತ್ತಷ್ಟು ಹೊಸ ವಿಚಾರಗಳನ್ನು ಕಲೆ ಹಾಕುವ ಹುಡುಕುಗಣ್ಣುಗಳಿಗೆ ಇದು ತಕ್ಕಮಟ್ಟಿನ ಸಹಾಯವನ್ನು ಮಾಡಬಲ್ಲದೆಂಬ ನಂಬುಗೆ ಈ ಸಂಶೋಧನೆಯಿಂದ ದೊರೆತಿದೆ. ಕೆಲವು ಸಮಯದಲ್ಲಿ ಉದಾಹರಿತ ಸಂಗತಿಗಳು ಪುನರಾವರ್ತನೆಯಾದಂತೆ ಕಂಡುಬಂದರು; ವಿವರಣೆಗಳು ಹಿಂದಿನದಕ್ಕಿಂತ ಭಿನ್ನವಾಗಿರುವುದನ್ನು ಗಮನಿಸಬಹುದು.

ಕಾಣ್ಕೆ, ದರ್ಶನ (vision) ಇಲ್ಲದೇ ಹೋದರೆ ಯಾರಿಂದಲೂ ಯಾವುದೇ ಸೃಷ್ಟಿಯೂ ಸಾಧ್ಯವಿಲ್ಲ. ಅಂತೆಯೇ ಈ ಇಬ್ಬರು ಸಮಕಾಲೀನ ಲೇಖಕಿಯರು ಒಂದೇ ಅವಧಿಯಲ್ಲಿ ಸಮಕಾಲೀನ ನೆಲೆಯಲ್ಲಿ ಅದರಲ್ಲೂ ಒಂದೇ ಪರಿಸರದಲ್ಲಿಯ ಸಂಗತಿಗಳನ್ನು ಹೇಗೆ ಭಿನ್ನ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ ಎಂಬುದರ ಹಿಂದೆ ಇವರಿಬ್ಬರ ಸಾಹಿತ್ಯ ಕೃಷಿಯ ಕುಸುರಿ ಕೆಲಸವು ಅಡಗಿದೆ. ಇಬ್ಬರಲ್ಲಿಯೂ ಸಮಾಜಮುಖಿಯಾದ, ಜೀವಪರವಾದಂತಹ ಬದ್ಧತೆಗಳಿವೆ. ಈ ಕಾರಣದಿಂದಲೇ ಇವರಿಂದ ಸೃಷ್ಟಿಯಾದಂತಹ ಸಾಹಿತ್ಯ, ಕಾಲ, ದೇಶ, ಭಾಷೆಯ ಮಿತಿಯನ್ನು ದಾಟ ಮಾನವೀಯತೆಯನ್ನು ಪ್ರತಿಪಾದಿಸುತ್ತದೆ ಎಂಬುದು ನನ್ನ ಗ್ರಹಿಕೆ.

*****

ಅನುಬಂಧ

ಅಧ್ಯಯನ ಮಾಡಲಾಗಿರುವ ವೈದೇಹಿಯವರ ಕೃತಿಗಳು

ಸಣ್ಣಕಥೆಗಳು :

೧. **ಮರ ಗಿಡ ಬಳ್ಳಿ** (೧೯೭೯) – ಅಕ್ಷರ ಪ್ರಕಾಶನ, ಹೆಗ್ಗೋಡು

೨. **ಅಂತರಂಗದ ಪುಟಗಳು** (೧೯೮೪) – ಅಕ್ಷರ ಪ್ರಕಾಶನ, ಹೆಗ್ಗೋಡು

೩. **ಗೋಲ** (೧೯೮೬) – ಅಕ್ಷರ ಪ್ರಕಾಶನ, ಹೆಗ್ಗೋಡು

೪. **ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ** (೧೯೯೧) – ಅಕ್ಷರ ಪ್ರಕಾಶನ, ಹೆಗ್ಗೋಡು

೫. **ಅಮ್ಮಚ್ಚಿ ಎಂಬ ನೆನಪು** (೨೦೦೦) – ಅಕ್ಷರ ಪ್ರಕಾಶನ, ಹೆಗ್ಗೋಡು

೬. **ಕ್ರೌಂಚ ಪಕ್ಷಿಗಳು** (೨೦೦೫) – ಅಕ್ಷರ ಪ್ರಕಾಶನ, ಹೆಗ್ಗೋಡು

೭. **ಅಲೆಗಳಲ್ಲಿ ಅಂತರಂಗ** – *ವೈದೇಹಿ ಅವರ ಕಥೆಗಳು ೧೯೭೯–೨೦೦೪* – ಅಕ್ಷರ ಪ್ರಕಾಶನ ಹೆಗ್ಗೋಡು – ೨೦೦೬

ಕವನ ಸಂಗ್ರಹ :

೧. **ಬಿಂದು ಬಿಂದಿಗೆ** (೧೯೯೦) – ಅಕ್ಷರ ಪ್ರಕಾಶನ, ಹೆಗ್ಗೋಡು

೨. **ಪಾರಿಜಾತ** (೧೯೯೯) – ಕ್ರೈಸ್ಟ್ ಕಾಲೇಜು

೩. **ಹೂವಕಟ್ಟುವ ಕಾಯಕ** (೨೦೧೧) – ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ

ಕಾದಂಬರಿ :

೧. **ಅಸ್ಪೃಶ್ಯರು** (೧೯೯೨) – ನವಕರ್ನಾಟಕ ಪ್ರಕಾಶನ

ಮಕ್ಕಳ ಸಾಹಿತ್ಯ :

೧. **ಧಾಂ ಧೂಂ ಸುಂಟರಗಾಳಿ** (೧೯೯೨) – ಅಕ್ಷರ ಪ್ರಕಾಶನ, ಹೆಗ್ಗೋಡು

೨. **ಮೂಕನ ಮಕ್ಕಳು** (೧೯೯೨) – ಅಕ್ಷರ ಪ್ರಕಾಶನ, ಹೆಗ್ಗೋಡು

೩. **ಗೊಂಬೆ ಮ್ಯಾಕ್‌ಬೆಥ್** (೧೯೯೨) – ಅಕ್ಷರ ಪ್ರಕಾಶನ, ಹೆಗ್ಗೋಡು

೪. **ಢಣಾಡಂಗೂರ** (೧೯೯೨) – ಅಕ್ಷರ ಪ್ರಕಾಶನ, ಹೆಗ್ಗೋಡು

೫. **ನಾಯಿಮರಿ ನಾಟಕ** (೧೯೯೨) – ಅಕ್ಷರ ಪ್ರಕಾಶನ, ಹೆಗ್ಗೋಡು

೬. **ಕೋಟು ಗುಮ್ಮ** (೧೯೯೭) – ಅಕ್ಷರ ಪ್ರಕಾಶನ, ಹೆಗ್ಗೋಡು

೭. **ಝುಂ ಝಾಂ ಆನೆ ಮತ್ತು ಪುಟ್ಟ** (೧೯೯೭) – ಅಕ್ಷರ ಪ್ರಕಾಶನ, ಹೆಗ್ಗೋಡು

೮. **ಸೂರ್ಯ ಬಂದ** (೧೯೯೭) – ಅಕ್ಷರ ಪ್ರಕಾಶನ, ಹೆಗ್ಗೋಡು

೯. **ಅರ್ಧಚಂದ್ರ ಮಿಠಾಯಿ** (೨೦೦೨) – ಸಾಹಿತ್ಯ ಪರಿಷತ್ತು

೧೦. **ಹಕ್ಕಿ ಹಾಡು** (೨೦೦೨) – ಸಾಹಿತ್ಯ ಪರಿಷತ್ತು

೧೧. **ಸೋಮಾರಿ ಓಲ್ಯಾ** (೨೦೦೪) – ಮನೋಹರ ಗ್ರಂಥಮಾಲೆ

೧೨. **ಅಣಿಲು ರಾಮಾಯಣ** (೨೦೦೯) – ಕಿನ್ನರ ಮೇಳ

೧೩. **ಸತ್ರೂ ಅಂದ್ರೆ ಸಾಯ್ತಾರ?** (೨೦೦೯) – ಕಿನ್ನರ ಮೇಳ

೧೪. **ಆನೆ ಬಂತು ಆನೆ** (೨೦೧೫) ಕಣ್ವ ಪ್ರಕಾಶನ

೧೫. **ರಾಜ ಲಿಯರ್** (೨೦೧೫) ಕಣ್ವ ಪ್ರಕಾಶನ

೧೬. **ಅಬ್ಬಾಲಕ್ಕ ಅಜ್ಜೀ ಮನೆಗೆ ಹೋಗಿದ್ದು** (೨೦೧೪) ಮನೋಹರ ಗ್ರಂಥಮಾಲ

ಪ್ರಬಂಧಗಳು :

೧. **ಮಲ್ಲಿನಾಥನ ಧ್ಯಾನ** (೧೯೯೬) – ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೨. **ಮೇಜು ಮತ್ತು ಬಡಗಿ** (೨೦೦೭) – ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೩. **ಜಾತ್ರೆ** (೨೦೧೦) ಸ್ಮೃತಿ ಕಥನ – ಅಕ್ಷರ ಪ್ರಕಾಶನ, ಹೆಗ್ಗೋಡು

೪. **ಹರಿವ ನೀರು** (೨೦೧೨) – *ವೈದೇಹಿ ಅವರ ಪ್ರಬಂಧಗಳು* – ಅಕ್ಷರ ಪ್ರಕಾಶನ ಹೆಗ್ಗೋಡು

ಅನುವಾದ ಸಾಹಿತ್ಯ :

೧. **ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ** (೧೯೮೪) – ಅಕ್ಷರ ಪ್ರಕಾಶನ, ಹೆಗ್ಗೋಡು

೨. **ಬೆಳ್ಳಿಯ ಸಂಕೋಲೆಗಳು** (ಮೈತ್ರೇಯಿ ಮುಖ್ಯೋಪಾಧ್ಯಾಯ ಅವರ 'Silver Shackles' ನಿಂದ ಅನುವಾದಿಸಿದ್ದು) (೧೯೮೫) – ಅಕ್ಷರ ಪ್ರಕಾಶನ, ಹೆಗ್ಗೋಡು

೩. **ಸೂರ್ಯಕಿನ್ನರಿಯರು** (ಸ್ವಪ್ನಾ ದತ್ತ ಅವರ 'The Sun Faries' ನಿಂದ ಅನುವಾದಿಸಿದ್ದು) (೧೯೯೬) ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನವದೆಹಲಿ

೪. **ಸಂಗೀತ ಸಂವಾದ** (ಭಾಸ್ಕರ್ ಚಂದಾವರ್ಕರ್ ಅವರ ಟಿಪ್ಪಣಿಗಳಿಂದ) (೧೯೯೯), ಅಕ್ಷರ ಪ್ರಕಾಶನ, ಹೆಗ್ಗೋಡು

ಆತ್ಮಕಥೆ ನಿರೂಪಣೆ

೧. ಕೋಟ ಲಕ್ಷ್ಮೀನಾರಾಯಣ ಕಾರಂತ (ಕೋಲ ಕಾರಂತ)ರ ಆತ್ಮಕಥೆ **"ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು"** (೧೯೮೪) – ಅಕ್ಷರ ಪ್ರಕಾಶನ, ಹೆಗ್ಗೋಡು

೨. ಸೇಡಿಯಾಪು ಕೃಷ್ಣಭಟ್ಟರ **"ಸೇಡಿಯಾಪು ನೆನಪುಗಳು"** (೧೯೯೬) – ಅಕ್ಷರ ಪ್ರಕಾಶನ, ಹೆಗ್ಗೋಡು

೩. ಬಿ.ವಿ. ಕಾರಂತರ **"ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ"** (೨೦೦೩) - ಪ್ರಿಜಂ ಬುಕ್ಸ್, ಬೆಂಗಳೂರು

೪. **ಮುಂತಾದ ಕೆಲ ಪುಟಗಳು** ಲೇಖಕಿ ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರ ಬದುಕಿನ ಕಥನ (೨೦೦೮) – ಅಕ್ಷರ ಪ್ರಕಾಶನ, ಹೆಗ್ಗೋಡು

೧. **ವೈದೇಹಿ ಧ್ವನಿ,** ಆಯ್ದ ಕಥೆ ಕವನಗಳ ಕೇಳು (೨೦೧೫) – ಪುಸ್ತಕ, ಮಣಿಪಾಲ್ ಯುನಿವರ್ಸಿಟಿ ಪ್ರೆಸ್, ಮಣಿಪಾಲ್

ಅಧ್ಯಯನ ಮಾಡಲಾಗಿರುವ ಎಚ್. ನಾಗವೇಣಿ ಅವರ ಕೃತಿಗಳು

ಕಾದಂಬರಿ :

೧. **ಗಾಂಧಿ ಬಂದ** (೨೦೦೮) – ಲೋಹಿಯಾ ಪ್ರಕಾಶನ

ಕಥಾ ಸಂಕಲನ :

೧. **ಕಡಲು** (೧೯೯೩) – ಕನ್ನಡ ವಿಶ್ವವಿದ್ಯಾನಿಲಯ, ಪ್ರಸಾರಂಗ, ಹಂಪಿ

೨. **ನಾಕನೇ ನೀರು** (೧೯೯೭) – ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು

೩. **ಮೀಯುವ ಆಟ** (೨೦೦೫) – ಲೋಹಿಯಾ ಪ್ರಕಾಶನ

ಪ್ರಬಂಧ ಸಂಕಲನ :

೧. **ವಸುಂಧರೆಯ ಗ್ಯಾನ** – ಲೋಹಿಯಾ ಪ್ರಕಾಶನ – ೨೦೧೦

೨. **ಸೂರ್ಯನಿಗೊಂದು ವೀಳ್ಯ** – ಪ್ರೇಜನ ಪ್ರಕಾಶನ – ೨೦೧೧

ಪರಾಮರ್ಶನ ಕೃತಿಗಳು

ಅಶೋಕ ಟಿ.ಪಿ. : **ಶಿವರಾಮ ಕಾರಂತ ಎರಡು ಅಧ್ಯಯನಗಳು** – ಅಕ್ಷರ ಪ್ರಕಾಶನ ಹೆಗ್ಗೋಡು – ೨೦೦೮

ಅಶೋಕ ಟಿ.ಪಿ. : **ವೈದೇಹಿ ಕಥನ** – ಅಕ್ಷರ ಪ್ರಕಾಶನ ಹೆಗ್ಗೋಡು ಮೊದಲ ಆವೃತಿ – ೨೦೧೩

ಅಶೋಕ ಟಿ.ಪಿ. : **ಪುಸ್ತಕ ಸಮಯ** – ವಿಮರ್ಶೆಯ ಬರಹಗಳು ಅಕ್ಷರ ಪ್ರಕಾಶನ ಹೆಗ್ಗೋಡು – ೨೦೧೧

ಅಶೋಕ ಟಿ.ಪಿ. : **ಕಥನ ಪ್ರೀತಿ** – ಒಂದು ನೂರು ಕನ್ನಡ ಸಣ್ಣಕತೆಗಳ ವಿಶ್ಲೇಷಣೆ, ಅಕ್ಷರ ಪ್ರಕಾಶನ ಹೆಗ್ಗೋಡು – ೨೦೧೩

ಅಶೋಕ ಟಿ.ಪಿ. : **ಪುಸ್ತಕ ಸನ್ನಿದಿ** – ಇಪ್ಪತ್ತೈದು ವಿಮರ್ಶಾತ್ಮಕ ಲೇಖನಗಳ ಸಂಕಲನ, ವಸಂತ ಪ್ರಕಾಶನ – ೨೦೧೩

ಅಶೋಕ ಟಿ.ಪಿ. : **ವೈದೇಹಿ ವಾಚಿಕೆ** – ಪ್ರಕಾಶಕರು ನುಡಿ ಪುಸ್ತಕ – ೨೦೧೩

ಅಶೋಕ ಟಿ.ಪಿ. : **ಸಾಹಿತ್ಯ ಸಂಬಂಧ** – ವಿಮರ್ಶಾತ್ಮಕ ಲೇಖನಗಳ ಸಂಕಲನ, ಅಕ್ಷರ ಪ್ರಕಾಶನ ಹೆಗ್ಗೋಡು – ೨೦೦೮

ಅಬೂಬಕ್ಕರ್ ಸಾ.ರಾ. : **ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ** – ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ – ೨೦೦೭

ಆಶಾದೇವಿ ಎಂ.ಎಸ್. : **ಸ್ತ್ರೀಮತವನುತ್ತರಿಸಲಾಗದೆ** – ಸಾಹಿತ್ಯ ಸಂಸ್ಕೃತಿ ಕುರಿತ ಲೇಖನಗಳು, ಅಕ್ಷರ ಪ್ರಕಾಶನ ಹೆಗ್ಗೋಡು – ೨೦೦೬

ಕೇಶವಶರ್ಮ ಕೆ. : **ಸ್ತ್ರೀವಾದಿ ಆಖ್ಯಾನ** – ಸಾರಾ ಎಂಟರ್ ಪ್ರೈಸಸ್ – ಮೈಸೂರು – ೨೦೦೫

ಕಿಶೋರಿ ನಾಯಕ್ ಕೆ. (ಸಂ) : **ನಾನು ಮತ್ತು ನನ್ನ ಬರಹ** – ಮಂಗಳೂರು ವಿಶ್ವವಿದ್ಯಾನಿಲಯ – ಮಹಿಳಾ ಅಧ್ಯಯನ ಕೇಂದ್ರ – ೨೦೧೧

ನಾಗರಾಜ್ ಡಿ.ಆರ್. : **ಅಮೃತ ಮತ್ತು ಗರುಡ** – ವಿಮರ್ಶಾ ಲೇಖನಗಳ . ಸಂಕಲನ – ಅಕ್ಷರ ಪ್ರಕಾಶನ ಹೆಗ್ಗೋಡು – ೨೦೦೯

ಬರಗೂರು ರಾಮಚಂದ್ರಪ್ಪ (ಪ್ರ.ಸಂ.) : **ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ** – ಕರ್ನಾಟಕ ಸಾಹಿತ್ಯ ಅಕಾಡೆಮಿ – ೨೦೦೬

ರಘುನಾಥ ಎಚ್.ಎಸ್. : **ಹೊಸಗನ್ನಡ ಕಾದಂಬರಿಗಳಲ್ಲಿ ಅಂರ್ಜಾತೀಯ ಮತ್ತು ಮತೀಯ ವಿವಾಹ** – ಸಂಶೋಧನ ಮಹಾಪ್ರಬಂಧ –ಪೂರ್ಣ ಪ್ರಕಾಶನ ೨೦೧೦

ಶಂಕರನಾರಾಯಣ ತೀ.ನಂ. (ಪ್ರ.ಸಂ.)
ಶ್ರೀಕಂಠಕೂಡಿಗೆ (ಸಂ.)
ಶಿವಕುಮಾರ ಸ್ವಾಮಿ ಸಿ.ಎಸ್. (ಸಂ.) : **ಆಧುನಿಕತೆ ಮತ್ತು ಕನ್ನಡ ಕಾದಂಬರಿ,** ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ

ಶಿವರುದ್ರಪ್ಪ ಜಿ.ಎಸ್. : **ಕಾವ್ಯಾರ್ಥ ಚಿಂತನ** –ಪ್ರಿಯದರ್ಶಿನಿ ಪ್ರಕಾಶನ – ಬೆಂಗಳೂರು – ೨೦೦೫

ಸುಮಿತ್ರಾ ಎಲ್.ಸಿ. : **ಕಾಡು...ಕಡಲು....** – (ಕುವೆಂಪು ಮತ್ತು ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪ್ರಕೃತಿ) – ಶಿವರಾಮ ಕಾರಂತ ಅಧ್ಯಯನ ಕೇಂದ್ರ – ವಿವೇಕಾನಂದ ಕಾಲೇಜು ಪುತ್ತೂರು – ಮುದ್ರಣ ರಾಜೇಶ್ ಪವರ್ ಪ್ರೆಸ್ – ೨೦೦೨

ಸುಮಿತ್ರಾ ಎಲ್.ಸಿ. : **ಓದಿನ ಸುಖ** – ಅಕ್ಷರ ಪ್ರಕಾಶನ, ಹೆಗ್ಗೋಡು

ಸುಮಿತ್ರಾ ಎಲ್.ಸಿ. : **ವಿಭಾವ**– ವಿಮರ್ಶಾ ಕೃತಿ – ಅಕ್ಷರ ಪ್ರಕಾಶನ, ಹೆಗ್ಗೋಡು – ೧೯೯೭

ಸುಮಿತ್ರಾ ಎಲ್.ಸಿ. : **ನಿರುಕ್ತ** – ವಿಮರ್ಶಾ ಕೃತಿ – ಸಿವಿಜಿ ಪಬ್ಲಿಕೇಷನ್ಸ್ – ೨೦೦೪

ಹಾಲತಿ ಸೋಮಶೇಖರ್ : **ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ,** ವಿಸ್ಮಯ ಪ್ರಕಾಶನ

ಮಹಿಳಾ ಅಧ್ಯಯನ – ಸಂಪುಟ ೧೨, ಸಂಚಿಕೆ ೧ – ಜನವರಿ–ಜೂನ್ ೨೦೧೦ – ಕನ್ನಡ ವಿಶ್ವವಿದ್ಯಾಲಯ – ಹಂಪಿ

ತೌಲನಿಕ ಸಾಹಿತ್ಯ – ಸುಸಾನ್ ಬಾಸ್ನೆಟ್ ಅವರ Comparative Literature A Critical Introduction ಕೃತಿಯ ಕನ್ನಡ ರೂಪ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ನೆನಪಿನ ಚಿಂತನಮಾಲೆ–೨, ಅಧ್ಯಯನ ಮಂಡಲ, ಬೆಂಗಳೂರು.

ನಿರ್ದಿಗಂತ – ಸಂಪಟು ೧, ವೀಣಾಶಾಂತೇಶ್ವರ ಅಭಿನಂದನಾಗ್ರಂಥ, ಪ್ರಧಾನ ಸಂಪಾದಕರು, ಶಾಂತಾ ಇಮ್ರಾಪುರ, ಸುಂದರ ಪುಸ್ತಕ ಪ್ರಕಾಶನ, ಧಾರವಾಡ.

ನಿರ್ದಿಗಂತ – ಸಂಪುಟ ೨, ವೀಣಾಶಾಂತೇಶ್ವರ ಅಭಿನಂದನಾಗ್ರಂಥ, ಪ್ರಧಾನ ಸಂಪಾದಕರು, ಶಾಂತಾ ಇಮ್ರಾಪುರ, ಸುಂದರ ಪುಸ್ತಕ ಪ್ರಕಾಶನ, ಧಾರವಾಡ.